೭೫ನೇ ಅಖಿಲ ಭಾರತ
ಅಮೃತ ಮಹೋತ್ಸವ
ಕನ್ನಡ ಸಾಹಿತ್ಯ ಸಮ್ಮೇಳನ
ಚಿತ್ರದುರ್ಗ

ಹರಿಹರ ಕವಿಯ

ಗಿರಿಜಾಕಲ್ಯಾಣಂ

ಮಹಾಪ್ರಬಂಧಂ

ಗದ್ಯಾನುವಾದ:

ವಿದ್ವಾನ್ ಎಂ. ಜೆ. ನಂಜುಂಡಾರಾಧ್ಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.

೭೫ನೇ ಅಖಿಲ ಭಾರತ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನ – ಚಿತ್ರದುರ್ಗ

ಹರಿಹರ ಕವಿಯ

ಗಿರಿಜಾಕಲ್ಯಾಣ ಮಹಾಪ್ರಬಂಧಂ

ಗದ್ಯಾನುವಾದ

ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

Harihara Kaviya GIRIJA KALYANA MAHAPRABANDHAM
Original with prose rendering by : **Sri M.G. Nanjundaradhya**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 352 + v Price : Rs. **145=00** ; **2009**

ಮೊದಲನೆಯ ಮುದ್ರಣ : ೧೯೭೬
ಎರಡನೆಯ ಮುದ್ರಣ : ೧೯೯೯
ಮೂರನೆಯ ಮುದ್ರಣ : ೨೦೦೯
ಪ್ರತಿಗಳು : ೧೦೦೦
ಬೆಲೆ : ಒಂದು ನೂರ ನಲವತ್ತೈದು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಸಂಚಾಲಕರು – ಶ್ರೀ ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಟಿ.ಎಸ್.ದಕ್ಷಿಣಾಮೂರ್ತಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ಪ್ರೊ. ಎಲ್. ಎಸ್. ಶೇಷಗಿರಿರಾವ್
೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಶ್ರೀ ಪ.ಸ. ಕುಮಾರ್

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಬಿ.ಎಂ.ಶ್ರೀ. ಅಚ್ಚುಕೂಟ ಪ್ರಾರಂಭವಾದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರಿಗೆ ಬೇಕಾಗುವ ಸಾಹಿತ್ಯವನ್ನು ಕಾಲಕಾಲಕ್ಕೆ ಕೊಡುತ್ತಾ ಬಂದಿದೆ. ಪರಿಷತ್ತು ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದ ಈ ದೀರ್ಘ ಅವಧಿಯಲ್ಲಿ ಅಧ್ಯಕ್ಷರು ಮತ್ತು ಪ್ರಕಟಣಾ ಸಮಿತಿ ಸಹೃದಯ ಓದುಗರ ಅಭಿರುಚಿಗೆ ಸ್ಪಂದಿಸಿರುವುದಲ್ಲದೆ ಸದಭಿರುಚಿಯನ್ನು ನಿರ್ಮಾಣ ಮಾಡುವ ಕೆಲಸವನ್ನು ಎಚ್ಚರದಿಂದ ಮಾಡುತ್ತಾ ಬಂದಿದ್ದಾರೆ. ಎಲ್ಲ ಕ್ಷೇತ್ರಗಳಿಂದ ಹರಿದುಬರುವ ಜ್ಞಾನಧಾರೆಗಳನ್ನು ಹಿಡಿದುಕೊಟ್ಟು ಲೋಕಜ್ಞಾನವನ್ನು ಓದುಗರಲ್ಲಿ ತುಂಬುವ, ಅವರ ಅರಿವಿನ ದಿಗಂತಗಳನ್ನು ವಿಸ್ತರಿಸುವ, ಆತ್ಮವಿಶ್ವಾಸವನ್ನು ಹುಟ್ಟಿಸುವ ಕೆಲಸಕ್ಕೆ ಪರಿಷತ್ತು ವೇದಿಕೆಯಾಗಿದೆ. ವಿವಿಧ ಜ್ಞಾನ ಶಿಸ್ತುಗಳಲ್ಲಿ ಪರಿಣಿತರಾದವರನ್ನು ಗುರುತಿಸಿ ಅವರಿಂದ ಪುಸ್ತಕ ಬರೆಸಿದೆ. ಸ್ವಯಂಪ್ರೇರಿತರಾಗಿ ಪ್ರಕಟಣೆಗೆ ಹಸ್ತಪ್ರತಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಅವುಗಳಲ್ಲಿ ಉತ್ತಮವಾದವುಗಳನ್ನು ಆಯ್ದು ಪ್ರಕಟಿಸಿದೆ. ವಿಚಾರ ಸಂಕಿರಣಗಳನ್ನು ನಡೆಸಿ, ಅಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಾತಿನಿಧಿಕವೆನಿಸುವ ಕೃತಿಗಳನ್ನು ಹೊರತಂದಿದೆ. ಪುಸ್ತಕ ದತ್ತಿಯಿಂದ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಕರ್ನಾಟಕ ಸರ್ಕಾರದ ಧನಸಹಾಯದ ನೆರವಿನಿಂದಲೂ ಎಲ್ಲರಿಗೆ ಎಲ್ಲ ಕಾಲಗಳಲ್ಲೂ ಉಪಯುಕ್ತವಾಗುವ ನಿಘಂಟು, ಕೋಶಗಳನ್ನು ಪ್ರಕಟಿಸಿದೆ.

ವಿವಿಧ ಸಂದರ್ಭಗಳಲ್ಲಿ ಹೊರಬಂದ ಕೃತಿಗಳಲ್ಲಿ ಕೆಲವು ಮತ್ತೆ ಮತ್ತೆ ಪ್ರಕಟವಾಗುವ ಭಾಗ್ಯವನ್ನು ಪಡೆದುಕೊಂಡಿವೆ. ಹಳಗನ್ನಡ ಕಾವ್ಯಗಳ ಗದ್ಯಾನುವಾದ, ಜೀವನ ಚರಿತ್ರೆ, ಸಾಹಿತ್ಯ ಪರೀಕ್ಷೆಗಳ ಪಠ್ಯಪುಸ್ತಕಗಳು, ನಾಟಕ ಸಂಪುಟ, ವಿಮರ್ಶೆ, ಸಂಶೋಧನೆ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಹೆಚ್ಚು ಬೇಡಿಕೆ ಇರುವ ಪುಸ್ತಕಗಳನ್ನು ಮರುಮುದ್ರಣದ ಮೂಲಕ ಸಹೃದಯರಿಗೆ ತಲುಪಿಸುವುದು ಪರಿಷತ್ತಿನ ಕರ್ತವ್ಯವಾಗಿದೆ. ಅಯ್ಯೋ, ಇಂಥ ಪುಸ್ತಕ ಸಿಗಲಿಲ್ಲವಲ್ಲ ಎಂದು ಕನ್ನಡಿಗರು ಕೊರಗದಂತೆ ನೋಡಿಕೊಳ್ಳಬೇಕಾಗಿದೆ.

ನಾಡು ನುಡಿಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು ಕನ್ನಡಿಗರ ಮನಸ್ಸಿನಲ್ಲಿ ಚಿರಸ್ಮರಣೀಯರಾಗಿರುವ ಮಹನೀಯರ ಜೀವನ–ಕಾರ್ಯಗಳನ್ನು ಪರಿಚಯಿಸುವ ಪುಸ್ತಕಗಳು, ಕುವೆಂಪು, ಡಿ.ವಿ.ಜಿ., ಕೆ.ಎಸ್.ನ., ಎ.ಎನ್.ಮೂರ್ತಿರಾವ್, ಗೊರೂರು,

ಶಂ.ಬಾ.ಜೋಶಿ, ಆಲೂರು ವೆಂಕಟರಾಯರು ಮುಂತಾದ ಸಾಹಿತ್ಯ ದಿಗ್ಗಜಗಳ ಪುಸ್ತಕಗಳು, ಕನ್ನಡ ನಾಡಿನ ಚರಿತ್ರೆಯನ್ನು ಸಾದ್ಯಂತವಾಗಿ ಕಟ್ಟಿಕೊಡುವ ಹಿರಿಯ ಸಂಶೋಧಕರ ಪುಸ್ತಕಗಳು, ಹಳಗನ್ನಡದ ಮಹಾಕವಿಗಳ ಮಹತ್ವವನ್ನು ಸಾದರಪಡಿಸುವ ಪುಸ್ತಕಗಳು, ಹಳಗನ್ನಡ, ನಡುಗನ್ನಡದ ಶ್ರೇಷ್ಠ ಕಾವ್ಯಗಳು ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿದ್ದು, ಇವು ಕನ್ನಡಿಗರ ಮನೆಗಳಲ್ಲಿ ಅತ್ಯವಶ್ಯಕವಾಗಿ ಸೇರ್ಪಡೆಗೊಳ್ಳುವಂಥವಾಗಿವೆ ; ಆಗಾಗ ತಿರುವಿಹಾಕಲು, ಮನನ ಮಾಡಲು ಯೋಗ್ಯವಾದವುಗಳಾಗಿವೆ.

ಇವತ್ತಿನ ಸಂದರ್ಭದಲ್ಲೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳು ಹೊರತರುತ್ತಿರುವ ಕೃತಿಗಳ ಜೊತೆಯಲ್ಲಿ ಹೋಲಿಸಿದರೆ ಪರಿಷತ್ತಿನ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ಈ ನೀತಿಗೆ ಬೆನ್ನೆಲುಬಾಗಿದೆ. ತಮಿಳು, ತೆಲುಗು, ಮಲೆಯಾಳಂ ಮಾತೃಭಾಷೆಯವರೂ ಕರ್ನಾಟಕದಲ್ಲಿ ಕನ್ನಡಿಗರಾಗಿರಬೇಕೆಂದು ಬಯಸುವ ಪರಿಷತ್ತು ಅಂಥವರಿಗೆ ಸಹಾಯಕವಾಗುವಂತೆ ಸ್ವಯಂಬೋಧಿನಿಗಳನ್ನು ರೂಪಿಸಿರುವುದು ಅಕ್ಕಪಕ್ಕದ ರಾಜ್ಯಗಳವರ ಜೊತೆ ಪರಿಷತ್ತು ತೋರುತ್ತಾ ಬಂದಿರುವ ಭ್ರಾತೃ ವಾತ್ಸಲ್ಯದ ಸಂಕೇತವಾಗಿದೆ.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಪುಸ್ತಕಗಳನ್ನು ಮತ್ತು ಹೊಸ ಪುಸ್ತಕಗಳನ್ನು ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೫ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ. "ಮಾತಿಗೆ ನಾಶಪಡಿಸುವ ಹಾಗೂ ಶಮನಗೊಳಿಸುವ ಶಕ್ತಿಯಿದೆ. ಸತ್ಯ ಮತ್ತು ದಯೆಯನ್ನು ಸಮ್ಮಿಲನಗೊಳಿಸುವ ಶಕ್ತಿಯೂ ಉಂಟು. ಅಷ್ಟೇ ಅಲ್ಲ ಮಾತಿಗೆ ವಿಶ್ವವನ್ನು ಬದಲಾಯಿಸುವ ಶಕ್ತಿ ಇದೆ" ಎಂದಿದೆ ಬುದ್ಧವಾಣಿ. ಇದು ಮಾತಿಗಿರುವ ಶಕ್ತಿ ಮತ್ತು ಮಾತನ್ನೇ ಕೃತಿಯಾಗಿಸುವ ಬರಹಕ್ಕಿರುವ ಶಕ್ತಿ. ಇಂಥ ಶಕ್ತಿಸ್ಫೋಟ ಪರಿಷತ್ತಿನ ಪುಸ್ತಕಗಳ ಮೂಲಕ ಆಗುತ್ತದೆನ್ನುವ ವಿಶ್ವಾಸ ನಮ್ಮದಾಗಿದೆ.

ದಿನಾಂಕ : ೧೬-೧-೨೦೦೯

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ವಿಷಯಸೂಚಿ

ಉಪೋದ್ಘಾತ	೧
ಕಥಾಗರ್ಭಂ	೧೬
ಪ್ರಥಮಾಶ್ವಾಸಂ : *ಹೈಮಾಚಲವರ್ಣನಂ*	೧೯
ದ್ವಿತೀಯಾಶ್ವಾಸಂ : *ಗಿರಿರಾಜ ದೇಶಪುರಾಸ್ಥಾನ ವರ್ಣನಂ*	೫೫
ತೃತೀಯಾಶ್ವಾಸಂ : *ಹೈಮವತೀ ಶೈಶವ ವರ್ಣನಂ*	೯೧
ಚತುರ್ಥಾಶ್ವಾಸಂ : *ಪಾರ್ವತೀ ಯೌವನ ರಾತ್ರಿ ವಿಹಾರ ವರ್ಣನಂ*	೧೨೨
ಪಂಚಮಾಶ್ವಾಸಂ: *ವಿರೂಪಾಕ್ಷ ದರ್ಶನ ಪುಷ್ಪಾಪಚಯ ಪೂಜಾ ವರ್ಣನಂ*	೧೬೭
ಷಷ್ಠಾಶ್ವಾಸಂ : *ತಾರಕಾಸುರ ಯುದ್ಧವರ್ಣನಂ*	೧೯೩
ಸಪ್ತಮಾಶ್ವಾಸಂ: *ವಸಂತೋದ್ಯಾನ ಮದನ ಪ್ರಯಾಣ ಪ್ರಾರಂಭ ವರ್ಣನಂ*	೨೨೦
ಅಷ್ಟಮಾಶ್ವಾಸಂ : *ಕಾಮದಹನ ವರ್ಣನಂ*	೨೪೩
ನವಮಾಶ್ವಾಸಂ : *ಪಾರ್ವತೀ ತಪೋವರ್ಣನಂ ವಿರೂಪಾಕ್ಷ ಪ್ರತ್ಯಕ್ಷೀಕರಣ ವರ್ಣನಂ*	೨೬೮
ದಶಮಾಶ್ವಾಸಂ : *ಪಾರ್ವತೀಪರಮೇಶ್ವರ ವಿವಾಹ ವರ್ಣನಂ*	೩೦೦
ಅರ್ಥಕೋಶ	೩೩೫

ಉಪೋದ್ಘಾತ

೧. ಕವಿ-ಕಾಲ ವಿಚಾರ

ಕನ್ನಡ ಸಾಹಿತ್ಯಾಕಾಶದಲ್ಲಿ ಬೆಳಗುವ ಶ್ರೇಷ್ಠ ಕವಿತಾರೆಗಳಲ್ಲಿ ಹರಿಹರನಿಗೆ ವಿಶಿಷ್ಟ ಸ್ಥಾನವಿದೆ. ಹರಿಹರನ ಜೀವನವನ್ನು ಕುರಿತು ಪದ್ಮರಾಜಪುರಾಣ, ಚನ್ನಬಸವಪುರಾಣ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ, ರಾಘವಾಂಕಚರಿತೆ ಮುಂತಾದ ಗ್ರಂಥಗಳಲ್ಲಿ ಕೆಲ ಕೆಲವು ಅಂಶಗಳು ಉಕ್ತವಾಗಿವೆ.

ಹರಿಹರನ ಜನ್ಮಸ್ಥಳ ತುಂಗಭದ್ರಾತೀರದ ಹಂಪೆ. ಶೈವಾಗಮ ಸಂಪ್ರದಾಯದ ಕುಟುಂಬದಲ್ಲಿ ಆತನ ಜನನ. ತಾಯಿ ಶರ್ವಾಣಿ, ತಂದೆ ಮಹಾದೇವ ಎಂದು "ರಾಘವಾಂಕಚರಿತ"ದಲ್ಲಿ ಹೇಳಿದೆ. ರಾಘವಾಂಕ ಈತನ ಸೋದರಳಿಯ. ಆತನ ತಾಯಿ ರುದ್ರಾಣಿ ಎಂದಿರುವುದರಿಂದ ಹರಿಹರನಿಗೆ ರುದ್ರಾಣಿ ಸಹೋದರಿ ಇರಬಹುದೆಂದು ಊಹಿಸಲಾಗಿದೆ.

ಗಿರಿಜಾ ಕಲ್ಯಾಣದಲ್ಲಿ ಹರಿಹರನು ಹೇಳಿಕೊಂಡಿರುವುದು ಆತನ ಗುರುಪರಂಪರೆ. ಹಂಪೆಯ ಶಂಕರದೇವ ಈತನ ಕುಲಗುರು. ಆತ ಅತಿ ವಿಖ್ಯಾತ, ಪರಿಪೂತ, ಇಂದುಧರ ಸಂಭೂತ, ಪುಣ್ಯವ್ರಾತ, ಮೇಲಾಗಿ ಮುಕ್ತಿ (ಭೂತಳಾತಿಶಯಸುಖ) ಪ್ರದಾತ, ಶೈವಾಗಮ ಸಿದ್ಧ. ಶ್ರೀ ಶಂಕರಾಚಾರ್ಯರಿಂದ ಶಿವದೀಕ್ಷೆ ಪಡೆದು ಯಶಃಕಾಯನಾದವನು ಶ್ರೀ ಮಾದಿರಾಜ. ಈತನ ಮನೋದುಗ್ಧಾಬ್ಧಿಚಂದ್ರನೂ ಶೈವಸುಭಗನೂ ಸಾಕಾರ ಸರ್ವೇಶ್ವರನೂ ಆದವನು ಹಂಪೆಯ ಮಾಯಿದೇವ. ಈತ ಹರಿಹರನ ಶ್ರೀಗುರು. ಈತನನ್ನು ಕವಿ ಶ್ರೀಗುರು, ಪರಮಗುರು, ಘನಮಹಿಮಾಗುರು, ವಿದ್ಯಾಗುರು ಮುಂತಾಗಿ ಸ್ತುತಿಸಿದ್ದಾನೆ. ಆತನನ್ನು ಕುರಿತು ಹರಿಹರನು ಮಾತ್ರವೇ ಅಲ್ಲ; ಜಗತ್ತು ಕೂಡ-

> **ಸದಮಳನೆಂಬುದುತ್ತಮ ಗುಣಾಶ್ರಯನೆಂಬುದು ಶೈವಸಿದ್ಧನೆಂ**
> **ಬುದು ರವಿತೇಜನೆಂಬುದು ಕೃಪಾಂಬುಧಿಯೆಂಬುದು ಶಾಂತಮೂರ್ತಿಯೆಂ**
> **ಬುದು ಪರಮಾಗಮಪ್ರಕರನೆಂಬುದು ಹಂಪೆಯ ಮಾಯಿದೇವನೆಂ**
> **ಬುದು ಶಿವನೆಂಬುದಪ್ರತಿಮನೆಂಬುದು ಸದ್ಗುರುವೆಂಬುದೀ ಜಗಂ**

ಮುಂತಾಗಿ ಕೊಂಡಾಡುತ್ತಿತ್ತು. ಆತನ ಕೃಪೆಗೆ ಪಾತ್ರನಾಗಿದ್ದವನು ಹರಿಹರ. ಇಲ್ಲಿ ಉಕ್ತವಾಗಿರುವ ಮಾಯಿದೇವ ಮತ್ತು ಸೋಮನಾಥಚರಿತ (ರಾಘವಾಂಕಕೃತ)ದಲ್ಲಿ ಉಕ್ತವಾಗಿರುವ ಮಹಾದೇವರು ಒಬ್ಬರೇ ಇರಬೇಕೆಂದು ಊಹಿಸಲಾಗಿದೆ.

ಹರಿಹರನ ಸಮಕಾಲೀನರಲ್ಲಿ ಅವನ ಸೋದರಳಿಯ ರಾಘವಾಂಕ ಮತ್ತು ದೋರಸಮುದ್ರ (ಹಳೆಬೀಡು)ದ ನರಸಿಂಹಬಲ್ಲಾಳನ ಮಂತ್ರಿ ಕೆರೆಯ ಪದ್ಮರಸರು ಮುಖ್ಯರು; ಏಕೆಂದರೆ ಹರಿಹರ ಅದೇ ರಾಜನ ಆಸ್ಥಾನದಲ್ಲಿ ಕರಣಿಕನಾಗಿ ಇದ್ದದ್ದು. ಆತ ತನ್ನ ಜೀವನದ ಬಹುಭಾಗವನ್ನು ಅಲ್ಲಿಯೇ ಕಳೆದ. ಆತನಿಗೆ ಹಂಪೆಯ ವಿರೂಪಾಕ್ಷಸ್ವಾಮಿಯಲ್ಲಿದ್ದ ಭಕ್ತಿಪರವಶತೆಯನ್ನು ಗಮನಿಸಿದ ರಾಜ, ಆತನಿಗೆ ಹಂಪೆಯ ವಿರೂಪಾಕ್ಷಸ್ವಾಮಿಯ ಸನ್ನಿಧಿಯಲ್ಲಿದ್ದು ಸೇವೆಮಾಡಲು ಅನುಜ್ಞೆ ನೀಡಿ ಕಳುಹಿಸಿದ. ಅನಂತರ ಹರಿಹರ ತನ್ನ ಉಳಿದ ಜೀವನವನ್ನು ಹಂಪೆಯಲ್ಲಿಯೇ ಕಳೆದ.

ಹರಿಹರನು ದೋರಸಮುದ್ರದಿಂದ ಹಂಪೆಗೆ ಬಂದ ಕಾರಣವನ್ನು ಕುರಿತ ಐತಿಹ್ಯವೊಂದು ಹೀಗಿದೆ-

"ಹರಿಹರ ದೋರಸಮುದ್ರದ ಹೊಯ್ಸಳ ದೊರೆ ವೀರಬಲ್ಲಾಳನ ಆಸ್ಥಾನದಲ್ಲಿ ಕರಣಿಕನಾಗಿದ್ದ. ಒಂದು ದಿನ ಆತ ಇದ್ದಕ್ಕಿದ್ದಂತೆ ಗಾಬರಿಗೊಂಡು ತನ್ನ ಎರಡೂ ಕೈಗಳನ್ನು ಮೇಲೆತ್ತಿ ಉಜ್ಜತೊಡಗಿದ. ಎಲ್ಲರಿಗೂ ಸೋಜಿಗವಾಯಿತು. ವಿಚಾರಿಸಿದಾಗ 'ಹಂಪೆಯ ವಿರೂಪಾಕ್ಷಸ್ವಾಮಿಯ ದೇವಾಲಯದಲ್ಲಿ ಮಧ್ಯಾಹ್ನದ ನೈವೇದ್ಯ ಕಾಲದಲ್ಲಿ ಆರತಿ ಜ್ವಾಲೆಯಿಂದ ಮೇಲ್ಕಟ್ಟು ಹೊತ್ತಿಕೊಂಡಿತು. ತಾನು ಅದನ್ನು ಉಜ್ಜಿ ಆರಿಸಿ'ದುದಾಗಿ ಹರಿಹರ ಉತ್ತರಿಸಿದ. ಆದರೆ ರಾಜ ಇದರ ನಿಜವನ್ನು ಶೋಧಿಸಲು ಹಂಪೆಗೆ ಆಳುಗಳನ್ನು ಕಳುಹಿಸಿ ಸುದ್ದಿ ತರಿಸಿದ. ವಿಷಯ ನಿಜವಾಗಿತ್ತು. ಹರಿಹರ ಮಹಾ ಶರಣನೆಂದು ಭಾವಿಸಿದ ರಾಜ ಅವನನ್ನು ಹಂಪೆಯಲ್ಲಿ ಸ್ವಾಮಿಯ ಸೇವೆಯಲ್ಲಿರುವಂತೆ ಪ್ರಾರ್ಥಿಸಿ ಬೀಳ್ಕೊಟ್ಟ."

ಹರಿಹರ ಕರಣಿಕನಾಗಿದ್ದ ವೀರಬಲ್ಲಾಳನ ವಿಷಯದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಏಕೆಂದರೆ ಹೊಯ್ಸಳ ದೊರೆಗಳಿಗೆಲ್ಲ "ಬಲ್ಲಾಳ"ರೆಂಬ ಹೆಸರಿದೆ. ಆವರಲ್ಲಿ ವೀರಬಲ್ಲಾಳರೆಂಬುವರು ನಾಲ್ವರು, ನರಸಿಂಹಬಲ್ಲಾಳರು ಮೂವರಿರುವುದಾಗಿ ಇತಿಹಾಸದಿಂದ ವೇದ್ಯವಾಗುತ್ತದೆ. ಹರಿಹರನು ಕರಣಿಕನಾಗಿದ್ದ ಹೊಯ್ಸಳ ದೊರೆ ಯಾರೆಂಬುದರಲ್ಲಿ ವಿವಿಧಾಭಿಪ್ರಾಯಗಳಿವೆ.

ಒಟ್ಟಿನಲ್ಲಿ ಹರಿಹರ, ಕೆರೆಯ ಪದ್ಮರಸ ಮೊದಲಾದವರು ನರಸಿಂಹಬಲ್ಲಾಳನ ಕಾಲದಲ್ಲಿದ್ದರೆಂದೂ ಆಗ ಬಿಟ್ಟಿದೇವನು ಯುವರಾಜ (ಪಟ್ಟಾನ್ವಿತ)ನಾಗಿದ್ದನೆಂದೂ ಪದ್ಮಣಾಂಕನು ತನ್ನ ಪದ್ಮರಾಜಪುರಾಣದಲ್ಲಿ ತಿಳಿಸಿದ್ದಾನೆ. ಈ ನರಸಿಂಹಬಲ್ಲಾಳನು ನರಸಿಂಹನ ಮಗ ಬಲ್ಲಾಳನೆಂದೂ, ಅವನಿಗೆ ಒಬ್ಬ ದೇವ ಅಥವಾ ವಿಷ್ಣುವರ್ಧನನೆಂಬ ಮಗನಿದ್ದನೆಂದೂ, ಆತ ಯುವರಾಜನಾಗಿದ್ದನೆಂದೂ ಊಹಿಸಲಾಗಿದೆ. ಮೊದಲನೆಯ ನರಸಿಂಹನ ಮಗ ವೀರಬಲ್ಲಾಳನಿಗೆ ಬಿಟ್ಟಿದೇವನೆಂಬ ಮಗನಿದ್ದನೆಂದೂ, ಅವನ ತರುವಾಯ ರಾಜನಾದ ಎರಡನೆಯ ನರಸಿಂಹನಿಗೆ ವಿಷ್ಣುವರ್ಧನ ಅಥವಾ ಬಿಟ್ಟಿದೇವನೆಂಬ ಮತ್ತೊಂದು ಹೆಸರಿತ್ತೆಂದೂ ಶಾಸನಗಳಲ್ಲಿ ಬಂದಿದೆ.[1] ಈ ಯುವರಾಜ ನರಸಿಂಗದೇವನು ತಂದೆಯ ರಾಜ್ಯಾಡಳಿತದಲ್ಲಿ ಕ್ರಿ. ಶ. ೧೨೦೫ರಿಂದ ಭಾಗವಹಿಸುತ್ತಿದ್ದನು.[2] ಪದ್ಮಣಾಂಕನು ಹೇಳುವ ನರಸಿಂಹಬಲ್ಲಾಳನು ೨ನೆಯ ವೀರಬಲ್ಲಾಳ (ಕ್ರಿ.ಶ. ೧೧೭೩-೧೨೨೦) ನಿರಬೇಕು. ಹೊಯ್ಸಳರಲ್ಲಿ ವಿಷ್ಣುವರ್ಧನ (ಕ್ರಿ.ಶ. ೧೧೦೮-೧೧೪೨)ನ ತರುವಾಯ ಅತಿ ಬಲಾಢ್ಯ ಮತ್ತು ಪ್ರಭಾವಿ ರಾಜ ಈ ವೀರಬಲ್ಲಾಳ. ಇವನ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ಅಭ್ಯುದಯಶಿಖರಕ್ಕೆ ಮುಟ್ಟಿತ್ತು. ಈತ ಶೈವ-ವೈಷ್ಣವ ಧರ್ಮಗಳೆರಡನ್ನೂ ಪೋಷಿಸುತ್ತಿದ್ದನು.

---

1. E. C. Vol. V, Arasikere 40 and 85, Annual V Report of Indian Epigraphy, 1920, Inscription No. 408.

2. E. C. Vol. XI CI 23. Introduction, p. 22.

ಈ ಕಾರಣಗಳಿಂದ ಹರಿಹರ ಹೊಯ್ಸಳ ಎರಡನೆಯ ವೀರಬಲ್ಲಾಳ (ಕ್ರಿ.ಶ. ೧೧೭೩-೧೨೨೦)ನು ರಾಜ್ಯವಾಳುವಾಗ ಆರಂಭಿಸಿ ಎರಡನೆಯ ನರಸಿಂಹ (ಕ್ರಿ.ಶ. ೧೨೨೦-೧೨೩೪)ನ ಆಳ್ವಿಕೆಯ ಕಡೆಯವರೆಗೆ ಮುಂದುವರಿದಿರಬೇಕು. ಎಂದರೆ ಕ್ರಿ.ಶ. ೧೨ನೆಯ ಶತಕದ ಕಡೆಯ ಭಾಗ ಮತ್ತು ಹದಿಮೂರನೆಯ ಶತಕದ ಮೊದಲಭಾಗದ ಅವಧಿಯು ಹರಿಹರಾದಿಗಳ ಜೀವಿತಕಾಲವೆಂದು ಸ್ಥೂಲವಾಗಿ ಊಹಿಸಬಹುದು.

೨. ಕಥಾಸಾರ

ಸುಖದ ನೆಲೆಯಾದ ಹಿಮಾಚಲಪ್ರದೇಶದ ರಾಜಧಾನಿ ಓಷಧಿಪ್ರಸ್ಥಪುರ. ಮಹಾ ಶಿವಭಕ್ತನೂ ತೇಜಸ್ವಿಯೂ ಧೀರನೂ ಆದ ಹಿಮವಂತ ಅಲ್ಲಿಯ ಅರಸ. ಆತನ ಪುಣ್ಯವಲ್ಲಭೆ ಮೇನಾದೇವಿ. ಶ್ರೇಷ್ಠಳಾದ ಒಬ್ಬಳು ಮಗಳನ್ನು ಬಯಸಿ ಮೇನಾದೇವಿ ತಪಸ್ಸು ಮಾಡಿದಳು. ದಾಕ್ಷಾಯಣಿಯಿಂದ ತಾನೇ ಮಗಳಾಗಿ ಬರುವೆನೆಂದು ವರಪಡೆದು ಸಂತುಷ್ಟಳಾದಳು. ಕಾಲಕ್ರಮದಲ್ಲಿ ಮೇನಾದೇವಿಗೆ ಶುಭಮುಹೂರ್ತದಲ್ಲಿ ಹೆಣ್ಣು ಮಗು ಹುಟ್ಟಿತು. ಶಿವಲಿಂಗ ದರ್ಶನ ಮಾಡಿಯೇ ಕಣ್ಣು ತೆರೆದ ಮಗು 'ಗಿರಿಜಾತೆ'ಯು ಅಪ್ರತಿಮ ಶಿವಭಕ್ತೆಯಾಗಿ ಬೆಳೆದಳು. ಒಂದು ದಿನ ಮಹರ್ಷಿ ನಾರದರು ಬಂದು ಹಿಮವಂತ ಮೇನಾದೇವಿಯರಿಗೆ ಅವರ ಮಗಳ ಮಹಿಮೆಯನ್ನು ಬಣ್ಣಿಸಿದರು. ಅವಳು ಸಾಕ್ಷಾತ್ ಜಗನ್ಮಾತೆಯೇ ಎಂದೂ, ಕೂಡಲೆ ಹೇಮಕೂಟದಲ್ಲಿ ತಪೋಯೋಗದಲ್ಲಿರುವ ಶಿವನ ಬಳಿಗೆ ಅವಳನ್ನು ಕಳುಹಿಸಬೇಕೆಂದೂ ಉಪದೇಶಿಸಿದರು. ಜಯೆವಿಜಯೆ ಎಂಬ ಸಖಿಯರೊಂದಿಗೆ ಹೇಮಕೂಟಕ್ಕೆ ಬಂದು ಗಿರಿಜೆ ದಿನವೂ ಶಿವನ ಅರ್ಚನೆ ಮಾಡತೊಡಗಿದಳು.

ಇತ್ತ ತಾರಕಾಸುರನ ಉಪದ್ರವಕ್ಕೆ ತಲ್ಲಣಿಸಿ, ಬ್ರಹ್ಮನ ಸೂಚನೆಯಂತೆ ದೇವತೆಗಳು ಬೃಹಸ್ಪತಿಯ ಮೂಲಕ ಒಪ್ಪಿಸಿ ಮನ್ಮಥನನ್ನು ಶಿವನ ತಪೋಭಂಗಕ್ಕೆ ನಿಯೋಜಿಸಿ ಕಳುಹಿಸಿದರು. ಪಾರ್ವತಿಯ ಅಪ್ರತಿಮ ಸೌಂದರ್ಯದ ಮರೆಯಲ್ಲಿ ನಂದಿಕೇಶ್ವರನ ಕಣ್ಣು ತಪ್ಪಿಸಿ ಆಶ್ರಮದ ಒಳನುಗ್ಗಿದ ಮನ್ಮಥ ಶಿವನ ಮೇಲೆ ತನ್ನ ಪುಷ್ಪಾಸ್ತ್ರಗಳನ್ನು ಪ್ರಯೋಗಿಸಿದ. ಕುಪಿತನಾದ ಶಿವನು ಹಣೆಗಣ್ಣು ತೆರೆದು, ಕೆಂಗೆಂಡಗಳು ಹಾರಿ ಕಾಮನು ದಹಿಸಿ ಬೂದಿಯಾದ. ಶಿವನು ಅಂತರ್ಧಾನನಾಗಿಬಿಟ್ಟ. ಗಿರಿಜೆಯಾದರೋ ಉಗ್ರ ತಪಸ್ಸು ಕೈಕೊಂಡು ತಾನಿದ್ದಲ್ಲಿಗೇ ಶಿವನನ್ನು ಬರಿಸುತ್ತೇನೆ ಎಂದು ಹಟ ತೊಟ್ಟಳು.

ಗಿರಿಜೆಯ ತಪಸ್ಸಿಗೆ ಲೋಕ ತಲ್ಲಣಿಸಿತು. ಸುಡುವ ಬಿಸಿಲಲ್ಲಿ, ಸುರಿಯುವ ಮಳೆಯಲ್ಲಿ, ಕೊರೆಯುವ ಶೀತದಲ್ಲಿ ಅವಳು ಉಗ್ರವಾದ ತಪಸ್ಸು ನಡೆಸಿದಳು. ಶಿವ ಮರುಗಿದ. ಅವಳನ್ನು ಪರೀಕ್ಷಿಸಲೆಂದು ವಟುವೇಷ ಧರಿಸಿ ಆಶ್ರಮಕ್ಕೆ ಬಂದ. ಸತ್ಕೃತನಾದ ಮೇಲೆ ಮಾತು ಬೆಳೆಸಿ ಗಿರಿಜೆಯ ಆರಾಧ್ಯ ದೈವವನ್ನು ತೆಗಳಿದ. ಶಿವನಿಂದೆ ಕೇಳಲಾರದೆ ಭವಾನಿಯು ಭಸ್ಮದಿಂದ ಹೊಡೆಯಲು ವಟುವೇಷ ಜಾರಿ, ನಿಜವು ವ್ಯಕ್ತವಾಯಿತು. ಎದುರಿಗೆ ಶಿವನು ಪ್ರತ್ಯಕ್ಷನಾದುದನ್ನು ಕಂಡು ಗಿರಿಜೆ ಪುಳಕಿತಳಾದಳು. ಕಾಮನನ್ನು ಬದುಕಿಸು ಎಂದು ಬೇಡಿ ವರ ಪಡೆದಳು.

ಸಪ್ತರ್ಷಿಗಳು ಬಂದು ಹಿಮವಂತನನ್ನು ಶಿವನಿಗೆ ಮಗಳನ್ನು ಕೊಡು ಎಂದು

ಕೇಳಿದರು. ವಿಶ್ವಕರ್ಮನೇ ವಿವಾಹಮಂಟಪವನ್ನು ರಚಿಸಿದ. ಮೂರು ಲೋಕದ ಅಚ್ಚರಿಯಾಗಿ ಪರಶಿವ-ಪಾರ್ವತಿಯರ ವಿವಾಹಮಂಗಳ ನಡೆಯಿತು.

೩. ಕಾವ್ಯಸಮೀಕ್ಷೆ

ಹರಿಹರನು ರಚಿಸಿರುವ ಗ್ರಂಥಗಳಲ್ಲಿ ರಗಳೆಗಳು ಮುಖ್ಯವಾದುವು. 'ರಘಟಾ' ಎಂಬ ಛಂದಸ್ಸಿನಿಂದ ರಚಿತವಾಗಿರುವ ಇವು ಒಂದು ನೂರಕ್ಕೂ ಮಿಕ್ಕಿವೆ. ಅವುಗಳಲ್ಲಿ ೧೨೦ ರಗಳೆಗಳು ಉಪಲಬ್ಧವಾಗಿವೆ. ಪ್ರಾಯಶಃ ಅವೆಲ್ಲವೂ ಮುದ್ರಿತವಾಗಿವೆ. ಇವುಗಳಲ್ಲಿ ಬಸವರಾಜದೇವರ ರಗಳೆ, ಅಕ್ಕಮಹಾದೇವಿಯ ರಗಳೆ, ನಂಬಿಯಣ್ಣನ ರಗಳೆ ಮುಂತಾದುವು ತುಂಬಾ ಜನಪ್ರಿಯವಾಗಿವೆ.

ಗಿರಿಜಾಕಲ್ಯಾಣದ ರಚನೆಯಿಂದ ಈತನಿಗಿರುವ 'ಮಹಾಕವಿ' ಎಂಬ ಪದವಿ ಅನ್ವರ್ಥಕವೆಂದು ವಿದ್ವಾಂಸರ ಅಭಿಪ್ರಾಯ. ಈತ ರಚಿಸಿರುವ 'ಪಂಪಾಶತಕ' ಪಂಪಾ ವಿರೂಪಾಕ್ಷನ ಸ್ತುತಿರೂಪ. ರಕ್ಷಾಶತಕ, ಶಿವಾಕ್ಷರಮಾಲೆ, ಮುಡಿಗೆಯಷ್ಟಕಗಳೂ ಶಿವಸ್ತುತಿಪರವಾದವುಗಳೇ.

ಗಿರಿಜಾಕಲ್ಯಾಣದ ಕಥೆ ರಾಮಾಯಣ, ಮಹಾಭಾರತ, ಶಿವ-ಸೌರ-ಮತ್ಸ್ಯ-ಬ್ರಹ್ಮ ಮತ್ತು ಸೌಂದರ ಪುರಾಣಗಳಲ್ಲಿ ಬಂದಿದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ಕಥೆ ಪಾರ್ವತಿಯ ವಿವಾಹದವರೆಗಿದೆ. ತಾರಕನ ಉಪಟಳವನ್ನು ತಾಳಲಾರದೆ, ಅವನನ್ನು ಸಂಹರಿಸಲು ಸಮರ್ಥನಾದ ಶಿವಕುಮಾರನನ್ನು ಪಡೆಯಲು ಪಾರ್ವತೀ-ಪರಮೇಶ್ವರರ ವಿವಾಹಕ್ಕಾಗಿ ದೇವತೆಗಳು ಆತುರರಾಗಿದ್ದರು. ಪಾರ್ವತಿಯ ತಪಸ್ಸು ಅವರಿಗೆ ಅನುಕೂಲವಾಯಿತು. ಅವರ ಕಲ್ಯಾಣದ ತರುವಾಯ ಕವಿ ಉಳಿದ ಕಥೆಯನ್ನು ಕೈಬಿಟ್ಟ. ಕುಮಾರ ಜನನ, ತಾರಕ ವಧೆಗಳು ತಾನಾಗಿಯೇ ಆಗುವುದೆಂಬ ಭರವಸೆ ಅವನದು. ಪುರಾಣಗಳಲ್ಲಿ ಉಕ್ತವಾದ ಕಥೆಗೂ ಗಿರಿಜಾಕಲ್ಯಾಣದ ಕಥೆಗೂ ಅನೇಕ ವಿಷಯಗಳಲ್ಲಿ ಹೋಲಿಕೆಯುಂಟು. ಪರಮೇಶ್ವರನ ಇಪ್ಪತ್ತೈದು ಲೀಲೆಗಳಲ್ಲಿ "ವೈವಾಹಿಕ ಲೀಲೆ"ಯೂ ಒಂದು.

ಕುಮಾರಸಂಭವ-ಗಿರಿಜಾಕಲ್ಯಾಣ

ಕವಿ ಕಾವ್ಯವಸ್ತುವನ್ನು ಇಂಥದೇ ಗ್ರಂಥದಿಂದ ತೆಗೆದುಕೊಂಡಿರುವನೆಂದು ಹೇಳಬರುವುದಿಲ್ಲ. ಆತ ಪಾತ್ರಗಳ ಸೃಷ್ಟಿಯಲ್ಲಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ಅದು ಆಕರ್ಷಕವಾಗುವಂತೆ ಮಾಡಿದ್ದಾನೆ. ಕಾಳಿದಾಸನ ಕುಮಾರಸಂಭವದ ಹೋಲಿಕೆ ಅಲ್ಲಲ್ಲಿ ಕಂಡುಬಂದರೂ ಗಿರಿಜಾಕಲ್ಯಾಣದ ಕಥೆ ಅದಕ್ಕೂ ಭಿನ್ನವಾಗಿದೆ. ಪುತ್ರಿಯನ್ನು ಪಡೆಯಲು ಮೇನೆಯ ತಪಸ್ಸು, ಪಾರ್ವತಿಯ ಜನನ, ಶಿವಲಿಂಗದರ್ಶನ, ಬಾಲಲೀಲೆಗಳು, ನಾರದ ಕುವರಿಯಾದ ಅಗಜೆಗೆ ಪೊಡಮಟ್ಟುದು, ಸತೀದೇವಿಯೇ ಪಾರ್ವತಿಯಾಗಿ ಹುಟ್ಟಿ ಬಂದಿರುವಳೆಂದು ಎಚ್ಚರಿಸಿ ಅವಳನ್ನು ಹೇಮಕೂಟಕ್ಕೆ ಕಳುಹಿಸಲು ಸಲಹೆ ನೀಡುವುದು, ಪರಶಿವ ರಜತಾದ್ರಿ ಬಿಟ್ಟು ಕನ್ನಡನಾಡಿನ ಹೇಮಕೂಟಕ್ಕೆ ಆಗಮಿಸುವುದು. ಹಿಮವಂತ ಸಖಿಯರೊಂದಿಗೆ ಮಗಳನ್ನು ವಿಮಾನದಲ್ಲಿ ಕರೆತರುವುದು ಮುಂತಾದ ಘಟನೆಗಳು ಹರಿಹರನ ನವ್ಯಸೃಷ್ಟಿ. ಇವು ಕುಮಾರಸಂಭವದಲ್ಲಿಲ್ಲ. ಮನ್ಮಥ ದಹನ, ಪಾರ್ವತಿಯ ಉಗ್ರ ತಪಸ್ಸು, ಶಿವ ವಟುವೇಷದಿಂದ ಬಂದು ಅವಳನ್ನು ರೇಗಿಸುವುದು, ಶಿವನಿಂದೆ

ತಾಳಲಾರದೆ ಪಾರ್ವತಿ ವಿಭೂತಿ ಉಂಡೆ ಎಸೆದಾಗ ಅವನ ಕಪಟವೇಷ ತೊಲಗಿ ನಿಜರೂಪು ಬಯಲಾಗುವುದು ಮುಂತಾದುವು ಹಂಪೆಯಲ್ಲಿ ನಡೆದ ನೂತನ ವಿಷಯಗಳು. ಕುಮಾರಸಂಭವದ ಏಳು ಸರ್ಗಗಳಲ್ಲಿ ಕಾಳಿದಾಸ ವರ್ಣಿಸಿರುವ ಕಥಾಭಾಗ ಗಿರಿಜಾಕಲ್ಯಾಣದ ಹತ್ತು ಆಶ್ವಾಸಗಳಲ್ಲಿ ವರ್ಣಿತವಾಗಿದೆ. ಹರಿಹರನಿಗೆ ಮುಂದಿನ ಕಥೆಯ ಅಗತ್ಯ ಕಾಣಲಿಲ್ಲ. ಕಾಳಿದಾಸನಿಗೆ ತಾರಕನ ವಧೆಗಾಗಿ ಕುಮಾರ ಸಂಭವ ಆಗಬೇಕಾಗಿತ್ತು. ಹರಿಹರನ ದೃಷ್ಟಿಯಲ್ಲಿ ಅದು ತಾನಾಗಿಯೇ ಆಗುವುದೆಂಬ ಭರವಸೆ. ಮೇಲಾಗಿ ಹರಿಹರ ಕಾಳಿದಾಸನ ಕುಮಾರಸಂಭವದ ಎಂಟನೆಯ ಸರ್ಗದಲ್ಲಿ ವರ್ಣಿಸಿರುವ "ಜಗತ್ತಿನ ತಾಯಿತಂದೆಗಳೆನಿಸಿದ ಶಿವ-ಪಾರ್ವತಿಯರ ಕಾಮಕೇಳಿಯನ್ನು ವರ್ಣಿಸಿ ಲಾಕ್ಷಣಿಕರ ಆಕ್ಷೇಪಕ್ಕೆ ಒಳಗಾಗುವ ಅನೌಚಿತ್ಯವನ್ನು ಕೈಬಿಟ್ಟಿದ್ದೂ ಆತನ ಪ್ರತ್ಯುತ್ಪನ್ನಮತಿಗೆ ನಿದರ್ಶನ, ಮೇಲಾಗಿ ಜಗದಂಬೆ ಪಾರ್ವತಿಯ ಅಂಗಾಂಗಗಳನ್ನು ವರ್ಣಿಸುವ ಕಾಳಿದಾಸನ ಔಚಿತ್ಯಪ್ರಜ್ಞೆ ಹರಿಹರನಿಗೆ ಹಿಡಿಸಿದಂತಿಲ್ಲ. ಅದಕ್ಕಾಗಿಯೇ ಆತ ಅದನ್ನು ವಾತ್ಸಲ್ಯವುಳ್ಳ ತಂದೆ ಹಿಮವಂತನಿಂದ ಮಾಡಿಸಿ ಪಾರಾಗಿದ್ದಾನೆ.

ಕಾಳಿದಾಸ ತನ್ನ ಕಾವ್ಯದ ಮೊದಲನೆಯ ಸರ್ಗದಲ್ಲಿ ಸಂಗ್ರಹಿಸಿದ ಹಿಮಾಲಯ ವರ್ಣನೆ, ಹಿಮವಂತ ಮೇನೆಯರ ಮದುವೆ, ಮೈನಾಕನ ಜನನ, ಆತ ನಾಗಕನ್ಯೆಯನ್ನು ವರಿಸಿ ಸಮುದ್ರದಲ್ಲಿ ಅಡಗುವುದು, ಪಾರ್ವತಿಯ ಜನನ, ಶಿವನ ಉಗ್ರ ತಪಸ್ಸು, ಪಾರ್ವತಿಯು ಪ್ರತಿದಿನ ಮಾಡುವ ಶಿವಪೂಜೆ, ಇವೆಲ್ಲವುಗಳನ್ನೂ ಹರಿಹರ ನಾಲ್ಕು ಆಶ್ವಾಸಗಳಲ್ಲಿ ಸಂಗ್ರಹಿಸಿದ್ದಾನೆ.

ಕುಮಾರಸಂಭವದಲ್ಲಿ ಇಂದ್ರನೇ ಮೊದಲಾದ ದೇವತೆಗಳ ಪರವಾಗಿ ಬೃಹಸ್ಪತಿಯು ತಾರಕನ ಪೀಡೆಯಿಂದ ದೇವತೆಗಳಿಗೆ ಆದ ಕಷ್ಟನಷ್ಟಗಳನ್ನು ಬ್ರಹ್ಮನಲ್ಲಿ ವಿವರಿಸಿ ಅದನ್ನು ತಪ್ಪಿಸಬೇಕೆಂದು ಪ್ರಾರ್ಥಿಸುವನು. "ತನ್ನ ವರಪ್ರಭಾವದಿಂದ ತಾರಕ ಇಷ್ಟು ಬಲಿಷ್ಠನಾಗಿದ್ದಾನೆ, ಅವನ ಸಂಹಾರ ಶಿವಕುಮಾರನಿಂದಲೇ ಸಾಧ್ಯ, ಆದ್ದರಿಂದ ಶಿವ-ಪಾರ್ವತಿಯರ ವಿವಾಹವಾಗುವಂತೆ ಪ್ರಯತ್ನಿಸಿರಿ" ಎಂದು ಬ್ರಹ್ಮ ದೇವತೆಗಳಿಗೆ ಉಪದೇಶಿಸುತ್ತಾನೆ. ಈ ವಿಷಯ ಗಿರಿಜಾಕಲ್ಯಾಣದಲ್ಲಿ ಬಂದಿಲ್ಲ. ಗಿರಿಜಾಕಲ್ಯಾಣದ ಆರನೆಯ ಆಶ್ವಾಸದಲ್ಲಿ ದೇವತೆಗಳು ತಾರಕನೊಡನೆ ಯುದ್ಧ ಮಾಡಿ ಸೋತು, ಬ್ರಹ್ಮ-ವಿಷ್ಣು-ಇಂದ್ರ ಮೊದಲಾದವರು ಸೇರಿ ಉಪಾಯವನ್ನು ಹುಡುಕಿ, ಶಿವನೆಡೆಗೆ ಮನ್ಮಥನನ್ನು ಕಳುಹಿಸುವರು. ದೇವತೆಗಳ ಪರವಾಗಿ ಬೃಹಸ್ಪತಿ ರಾಯಭಾರ ವಹಿಸಿ ತಾರಕನೆಡೆಗೆ ಹೋಗಿ ನಿಷ್ಫಲನಾಗಿ ಬರುವನು. ಹೀಗೆ ಅನೇಕ ವಿಷಯಗಳಲ್ಲಿ ವ್ಯತ್ಯಾಸ ಗಳಿದ್ದರೂ ಹರಿಹರನ ಮೇಲೆ ಕಾಳಿದಾಸನ ಪ್ರಭಾವ ಬೀಳದೆ ಇಲ್ಲ. ಈ ಕೆಳಗೆ ಕಂಡ ಕೆಲವು ಪದ್ಯಗಳನ್ನು ನೋಡಿ-

> ಅಸ್ತ್ಯುತ್ತರಸ್ಯಾಂ ದಿಶಿ ದೇವಾತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ ।
> ಪೂರ್ವಾಪರೌ ತೋಯನಿಧೀವಗಾಹ್ಯ ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥
>
> (ಕುಂ. ಸಂ. ೧-೦)

೧. "ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ"

(ಗಿ. ಕ. ೧-೫೦)

೨. "ಆ ವಿಸ್ತಾರ ಗಭೀರವಾರಿನಿಧಿಯಿಂದಂ ಪಶ್ಚಿಮಾಂಭೋಧಿಗಂ
ತೀವಿರ್ದೊಪ್ಪುವುದಾತ್ತಗಹ್ವರ ಗುಹಾಸಂತಾನಪರ್ಯಂತ ಗೋ
ತ್ರಾವಾಸೋಜ್ಜ್ವಲಗಂಡಶೈಲಶಿಖರ ಪ್ರೋದ್ಭೂತಭೂಜಾತಪ-
ತ್ರಾವೇಶೋನ್ನತ ಭೀಮರೂಪಧರ ದೇವಾಗಮ್ಯ ಹೈಮಾಚಳಂ"

(ಗಿ. ಕ. ೧-೪೮)

ಇತ್ಯಾದಿ.

ಗಿರಿಜಾಕಲ್ಯಾಣದ ಕಥೆ ಹಳೆಯದು. ಆದರೂ ಕವಿ ಅದನ್ನು ತನ್ನ ಪ್ರತಿಭಾಕೌಶಲದಿಂದ ಕಥೆಯ ಮಾರ್ಪಾಟಿನಲ್ಲಿ, ಪಾತ್ರಸೃಷ್ಟಿಯಲ್ಲಿ, ಸನ್ನಿವೇಶ ಕಲ್ಪನೆಗಳಲ್ಲಿ, ಭಾವಬಂಧುರತೆಯಲ್ಲಿ, ರಸನಿರೂಪಣೆಯಲ್ಲಿ ಹೊಸ ಹೊಸ ಕಲ್ಪನೆಗಳನ್ನು ತಂದು ಕಾವ್ಯವು ನವ್ಯವಾಗುವಂತೆ ಚಿತ್ರಿಸಿದ್ದಾನೆ. ಅವನ ದೃಷ್ಟಿಯಲ್ಲಿ ತನ್ನ ಕೃತಿ

ಕಾವ್ಯಂ ತಾನಿದು ನವರಸ । ಸೇವ್ಯಂ ಗಿರಿಜಾಧಿನಾಥನುರುತರಕರ್ಣ ।
ಶ್ಯಾವ್ಯಂ ವಸುಧಾತಳದೊಳ್ । ನವ್ಯಂ ಭೂತೇಶಭಕ್ತ ಜನತಾಭಾವ್ಯಂ ॥

(ಗಿ. ಕ. ೧-೧೪)

ಹರಿಹರನಿಗೆ ತನ್ನ ಕೃತಿ ಮಹಾಕಾವ್ಯವಾಗಬೇಕೆಂಬ ತವಕ. ಅದಕ್ಕಾಗಿ ಆತ ಮಹಾಕಾವ್ಯಲಕ್ಷಣಗಳನ್ನು ತನ್ನ ಕಾವ್ಯದಲ್ಲಿ ಸೇರ್ಪಡೆ ಮಾಡಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಸಾಹಿತ್ಯದರ್ಪಣ, ಕಾವ್ಯಾದರ್ಶ, ಸೂಕ್ತಿಸುಧಾರ್ಣವ ಮುಂತಾದ ಲಕ್ಷಣ ಗ್ರಂಥಗಳಲ್ಲಿ ಮಹಾಕಾವ್ಯಲಕ್ಷಣಗಳು ಉಕ್ತವಾಗಿವೆ.

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹವೈರಿಮಿತ್ರರುದಯಂ ಋತುನಂದನಮಂಬುಸೀಧುಕಾಂ
ತಾರತಿ ಚಿಂತೆ ಮಂತ್ರ ಚರ ಯಾನ ವಿರೋಧಿಜಯಂಗಳೆಂಬವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ॥

(ಸೂಕ್ತಿಸುಧಾರ್ಣವ, ಆಶ್ವಾಸ, ೧. ಪ. ೭೬)

ಗಿರಿಜಾಕಲ್ಯಾಣದಲ್ಲಿ ಮೇಲೆ ಹೇಳಿದ ಲಕ್ಷಣಗಳೆಲ್ಲವೂ ಕಂಡುಬರುತ್ತವೆ. ಇಲ್ಲಿ ಸರ್ಗ (ಆಶ್ವಾಸ) ಬಂಧವುಂಟು, ಕಥೆ ಐತಿಹಾಸಿಕ*.

ಕಥಾನಾಯಕ ದೇವತಾಪುರುಷ. ಕಾವ್ಯದ ಅಂಗವಾಗಿ ಶೃಂಗಾರ, ವೀರ, ಶಾಂತರಸಗಳು ಅಭಿವ್ಯಕ್ತವಾಗಿವೆ. ಹರಿಹರ ಮಹಾಶಿವಭಕ್ತ. ಆದ್ದರಿಂದಲೇ ಆತನ ಕಾವ್ಯದಲ್ಲಿ ಭಕ್ತಿರಸ ತುಂಬಿಬಂದಿದೆ. ಮೊದಲನೆಯ ಆಶ್ವಾಸದಲ್ಲಿ ವಸ್ತುನಿರ್ದೇಶ, ಕುಕವಿ ನಿಂದೆ, ಗುರುಪ್ರಶಂಸೆ, ಹಿಮಾಚಲದ ವರ್ಣನೆಗಳು ಇವೆ. ಪ್ರತಿ ಆಶ್ವಾಸದಲ್ಲಿಯೂ ವೃತ್ತಗಳ ವೈವಿಧ್ಯವುಂಟು. ಶೈಲಿ, ವನ, ಋತು, ಪ್ರಯಾಣ, ಮೃಗಯಾ ಮೊದಲಾದ ವರ್ಣನೆಗಳು ಹೃದಯಂಗಮವಾಗಿ ಚಿತ್ರಿತವಾಗಿವೆ. ಈ ಕಾರಣಗಳಿಂದ ಇದು ಶ್ರೇಷ್ಠವರ್ಗದ "ಮಹಾಕಾವ್ಯ" ಎಂಬ ವಿದ್ವಾಂಸರ ಮನ್ನಣೆಗೆ ಪಾತ್ರವಾಗಿದೆ.

---

* ಪುರಾಣ, ಮಹಾಭಾರತ ಮತ್ತು ರಾಮಾಯಣಗಳು ಇತಿಹಾಸವೆನಿಸಿವೆ.

ಗಿರಿಜಾಕಲ್ಯಾಣದ ನಾಲ್ಕನೆಯ ಆಶ್ವಾಸದಲ್ಲಿ ಹಿಮವಂತ ನಾರದನೊಡನೆ ಚಂದ್ರಿಕಾವಿಹಾರ ಹೊರಟು ವೇಶ್ಯಾವಾಟಿಗೆ ಬರುವ ಸನ್ನಿವೇಶ ಕವಿಕಲ್ಪಿತ. ಇದನ್ನು ಕವಿ ತನ್ನ ಕೃತಿ ಮಹಾಕಾವ್ಯಲಕ್ಷಣಗಳಿಲ್ಲವನ್ನೂ ಒಳಗೊಂಡಿರಬೇಕು ಎಂಬ ಉದ್ದೇಶವನ್ನು ಪೂರ್ಣಗೊಳಿಸಲು ಸೇರ್ಪಡೆ ಮಾಡಿದಂತೆ ತೋರುತ್ತದೆ. ಇಲ್ಲದಿದ್ದರೆ ಮಹಾವಿರಕ್ತನಾದ ಹರಿಹರ ಶೈವನಿಧಿ ನಾರದ ಮಹರ್ಷಿಯನ್ನು ವಿಷಯಾಸಕ್ತರಿಗೆ ಆಕರ್ಷಣೀಯವಾದ ಕಾಮಕೇಳಿಯ ದೃಶ್ಯಗಳನ್ನು ನೋಡಲು ಒಯ್ಯುತ್ತಿರಲಿಲ್ಲ.

ಗಿರಿಜಾಕಲ್ಯಾಣ ಚಂಪೂಕಾವ್ಯ, ಇದು ಗದ್ಯಪದ್ಯಾತ್ಮಕ. ಸಂಸ್ಕೃತ ಶಬ್ದಗಳ ಪ್ರಾಚುರ್ಯ, ದೀರ್ಘ ಸಮಾಸಗಳ ಬಳಕೆ, ನಿಬಿಡವಾದ ವಾಕ್ಯರಚನೆ, ಹಳಗನ್ನಡ ಶಬ್ದಗಳ ಶುದ್ಧ ರೂಪಪ್ರಯೋಗ, ಶಾರ್ದೂಲ, ಮತ್ತೇಭ, ಸ್ರಗ್ಧರಾ ಮೊದಲಾದ ಗಂಭೀರ ವೃತ್ತಗಳ ವಿಪುಲ ಪ್ರಯೋಗ ಮುಂತಾದುವು ಚಂಪೂಕಾವ್ಯಗಳ ಸಾಮಾನ್ಯ ಲಕ್ಷಣ. ಆಗಿನ ಕಾಲದ ಜನಾಭಿರುಚಿಯನ್ನು ಅನುಸರಿಸಿ ಕವಿಗಳು ಚಂಪೂಕಾವ್ಯಗಳನ್ನು ಬರೆಯುತ್ತಿದ್ದರು. ಕವಿಗಳ ಯೋಗ್ಯತೆಯನ್ನು ಅವರು ಬರೆದ ಕಾವ್ಯಗಳ ಕ್ಲಿಷ್ಟತೆಯಿಂದಲೇ ಅಳೆಯುತ್ತಿದ್ದ ಪಂಡಿತಲೋಕವನ್ನು ತೃಪ್ತಿಪಡಿಸುವುದೇ ಆಗಿನ ಮಹಾಕಾವ್ಯಗಳ ದೃಷ್ಟಿಯಾಗಿತ್ತು. ಅವರಿಗೆ ಜನಸಾಮಾನ್ಯರ ಕಡೆ ದೃಷ್ಟಿ ಇರಲಿಲ್ಲವೆಂದು ಒಪ್ಪಿಕೊಳ್ಳಲೇಬೇಕು. ಗಿರಿಜಾಕಲ್ಯಾಣ ಮಹಾಕಾವ್ಯ ಹಿಂದಿನ ಕಾವ್ಯಗಳಷ್ಟು ಕಠಿನವಾದುದಲ್ಲ. ಸಂಸ್ಕೃತ ಪದಗಳನ್ನು ಹೆಚ್ಚಾಗಿ ಬಳಸಿದ್ದರೂ ಅವು ಸುಲಭವಾಗಿ ಕನ್ನಡ ಶಬ್ದಗಳೊಡನೆ ಬೆರೆತುಕೊಂಡಿವೆ. ಅವುಗಳ ಉಪಯೋಗ ಸಮುಚಿತವಾಗಿದೆ. ಸಂಸ್ಕೃತ ಗಂಭೀರ ವೃತ್ತಗಳಿದ್ದರೂ ಕಂದಪದ್ಯಗಳು ಹೆಚ್ಚಾಗಿವೆ*. ದೀರ್ಘ ಸಮಾಸಗಳನ್ನು ಹೆಚ್ಚಾಗಿ ಬಳಸಿಲ್ಲ. ವಾಕ್ಯಗಳು ಬಿಡಿಬಿಡಿಯಾಗಿವೆ. ಅವು ಮಾತನಾಡುವ ಸರಣಿಯಲ್ಲಿವೆ. ವರ್ಣನೆಗಳು ಹೆಚ್ಚಾಗಿದ್ದರೂ ಅವು ಕಾವ್ಯದ ಆಕರ್ಷಕತೆಯನ್ನು ಕುಗ್ಗಿಸಿಲ್ಲ. ಈ ದೃಷ್ಟಿಯಲ್ಲಿ ಗಿರಿಜಾಕಲ್ಯಾಣ ಸಾಮಾನ್ಯ ಜನರಿಗೂ ಪ್ರಿಯವಾದ ಕಾವ್ಯ.

೪. ಪಾತ್ರಸೃಷ್ಟಿ

ಗಿರಿಜಾಕಲ್ಯಾಣ ಮಹಾಕಾವ್ಯದಲ್ಲಿ ಹರಿಹರನ ಪಾತ್ರಸೃಷ್ಟಿ ಸ್ವಾಭಾವಿಕವೂ ಆಕರ್ಷಕವೂ ಆಗಿದೆ. ಅದು ಆತನ ಕಲ್ಪನಾವಿಲಾಸಕ್ಕೆ ಪ್ರತಿಭಾವೈಭವಕ್ಕೆ ಸಾಕ್ಷಿಯಾಗಿದೆ. ಪಾತ್ರಗಳಲ್ಲಿ ಜೀವಕಳೆ ತುಂಬಿದೆ.

ಇಲ್ಲಿ ಬಂದಿರುವ ಪಾತ್ರಗಳಲ್ಲಿ ಪಾರ್ವತಿ, ಪರಮೇಶ್ವರ, ಹಿಮವಂತ, ಮೇನಾದೇವಿ, ಮದನ, ನಾರದ, ಬೃಹಸ್ಪತಿ, ತಾರಕ ಮತ್ತು ಜಯವಿಜಯರು ಮುಖ್ಯ. ಇವುಗಳಲ್ಲಿ ಪಾರ್ವತಿಯ ಪಾತ್ರ ಪ್ರಧಾನ.

ಪಾರ್ವತಿ ಕಥಾನಾಯಿಕೆ. ಮೇನೆಯ ಉಗ್ರತಪಸ್ಸಿನ ಫಲವಾಗಿ ಅಭವಂಗೆ ವಧುವೆನಿಪ ಆಕೆ ಅವತರಿಸಿದಳು. ಜನನವಾದ ಕಾಲದಿಂದಲೇ ಆಕೆ 'ಶಿವಲಿಂಗೇಕ್ಷಣ ಲೋಲುಪೆ', 'ಶಿವಭಕ್ತಿ ಸಂಪನ್ನೆ', ಪುಣ್ಯದ ಜೀವದಂತೆ, ಶಿವಜ್ಞಾನದ ದೇಹದಂತೆ,

---

* ಈ ಮಹಾಕಾವ್ಯದಲ್ಲಿರುವ ಒಟ್ಟು ೧೦೯೪ ಪದ್ಯಗಳಲ್ಲಿ ಕಂದ ೬೯೧, ಚಂಪಕ ೧೨೫, ಮತ್ತೇಭ ೫೬, ಮ. ಸ್ರ. ೫೩. ಉತ್ಪಲ ೪೩ ಸ್ರಗ್ಧರೆ ೧೬, ಶಾರ್ದೂಲ ೧೧ ಎಂದು ಪರಿಗಣಿತವಾಗಿವೆ.

ನಿರುಪಾದಿಕ ಜ್ಯೋತಿಯಂತೆ, ಜಗನ್ಮಾತೆ ಶೈಶವ ಲೀಲೆಗಳಿಂದ ಬೆಳಗುವಳು. ಹಗಲಿರುಳು ಅವಳು ಹಸಿವು ತೃಷೆಗಳನ್ನು ಮರೆತು ಶಿವಧ್ಯಾನದಲ್ಲಿ ತನ್ಮಯಳಾಗುವಳು. ಯೌವನೋದಯವಾದ ಮೇಲೆ ನಾರದಮುನಿಯಿಂದ ಪಾರ್ವತಿಯ ಪೂರ್ವೋತ್ತರಗಳನ್ನು ಅರಿತ ಹಿಮವಂತ, ಪಾರ್ವತಿಯು ಶಿವನ ಅರ್ಧಾಂಗಿಯೆಂದೂ ಅವಳು ದಕ್ಷಯಾಗದಲ್ಲಿ ದೇಹ ತೊರೆದು ತಮ್ಮ ಪುಣ್ಯದ ಫಲವಾಗಿ ಪುತ್ರಿಯಾಗಿ ಅವತರಿಸಿದಳೆಂದೂ ತಿಳಿದು, ಆತನ ಸೂಚನೆಯಂತೆ ಹೇಮಕೂಟದಲ್ಲಿ ಸಮಾಧಿಮಗ್ನನಾಗಿದ್ದ ಶಿವನಲ್ಲಿಗೆ ಕರೆತರುವನು.

ಜಯೆವಿಜಯೆಯರೊಂದಿಗೆ ಗಿರಿಜೆ ಪ್ರತಿದಿನವೂ ಭಕ್ತಿಯಿಂದ ಶಿವನ ಆರಾಧನೆಯಲ್ಲಿರುವಾಗ ಲೋಕಹಿತಕ್ಕಾಗಿ ಸಮಾಧಿಭಂಗ ಮಾಡಲು ಬಂದವನು ಮನ್ಮಥ. ಶಿವನ ಕ್ರೋಧಾಗ್ನಿಯಿಂದ ಆತ ಭಸ್ಮವಾದ ಮೇಲೆ ಪಾರ್ವತಿ ಗೋಳಾಡುತ್ತಿದ್ದ ರತಿಗೆ ಅಭಯವಿತ್ತು ಶಿವನನ್ನು ಭಕ್ತಿಭಾವದಿಂದ ಒಲಿಸಲು ಪಣತೊಟ್ಟಳು. ಅವಳ ತಪೋಜ್ವಾಲೆಯಿಂದ ಎಚ್ಚೆತ್ತ ಶಿವ ಅವಳನ್ನು ಮತ್ತೆ ಪರೀಕ್ಷಿಸಲು ವಟುವಾಗಿ ಬಂದು, ಶಿವನಿಂದೆ ಮಾಡಿ, ಅವಳಿಟ್ಟ ವಿಭೂತಿ ಪೆಟ್ಟಿಗೆ ಕಪಟ ರೂಪು ತೊರೆದು ನಿಜತೇಜ ಬೆಳಗಿದ.

ಪಾರ್ವತಿಯ ವ್ಯಕ್ತಿತ್ವವನ್ನು ರೂಪಿಸಲು ಕವಿ ತನ್ನ ಅಪ್ರತಿಮ ಪ್ರತಿಭೆ ತೋರಿದ್ದಾನೆ. ಆಕೆ ಜಗನ್ಮಾತೆ, ಶಿವನ ಅರ್ಧಾಂಗಿ ಎಂಬುದನ್ನು ಮತ್ತೆ ಮತ್ತೆ ದೃಢಪಡಿಸುತ್ತಾನೆ. ಆಕೆಯ ತಪಸ್ಸು ವಿವಾಹಗಳೆಲ್ಲವೂ ಲೋಕಹಿತಕ್ಕಾಗಿಯೇ ಏರ್ಪಟ್ಟವು. ಕವಿ ತನ್ನ ಶ್ರದ್ಧೆ ಭಕ್ತಿ ಹಾಗೂ ಕವಿತಾ ಸಾಮರ್ಥ್ಯಗಳನ್ನೆಲ್ಲ ಅವಳ ಚಿತ್ರಣಕ್ಕಾಗಿ ಧಾರೆ ಎರೆದಿದ್ದಾನೆ. ಶಿವಪೂಜೆ, ಶಿವಧ್ಯಾನ, ಶಿವಸ್ತೋತ್ರಗಳೇ ಅವಳ ಜೀವನದ ಗುರಿ ಎಂಬುದು ಇಲ್ಲಿ ಸುಸ್ಪಷ್ಟವಾಗಿದೆ, ಗಿರಿಜೆಯ ಸ್ವಭಾವ ಕುಸುಮ ಕೋಮಲ; ಆದರೂ ಧೀರೋದಾತ್ತತೆಯಲ್ಲಿ ಅದು ವಜ್ರಕಠಿನ. ಮದನನ ವಿಯೋಗದಿಂದ ಹತಾಶಳಾದ ರತಿಯನ್ನು ಕಂಡ ಅವಳ ಹೃದಯ ದ್ರವಿಸಿತು. ರತಿಗೆ ಅಭಯಪ್ರದಾನ ಮಾಡಿದ ಆಕೆ, ತಾನು ಪ್ರೀತಿಯ ತಾಯಿ-ತಂದೆಗಳನ್ನು ತೊರೆದು ಬಂದು ಗಾಢಭಕ್ತಿಯಿಂದ ಆರಾಧಿಸಿದರೂ ತನ್ನ ಕಡೆ ತಿರುಗಿಯೂ ನೋಡದೆ, ಮಾತನಾಡಿಸದೆ ಪರಶಿವ ಮಾಯವಾದ. ಅಂಥ ಉಗ್ರನನ್ನು ಉಗ್ರತಪಸ್ಸಿನಿಂದಲೇ ತಾನಿದ್ದಲ್ಲಿಗೆ ಬರಮಾಡಿಕೊಳ್ಳುವೆನೆಂದು ದೃಢನಿರ್ಧಾರವನ್ನು ಕೈಕೊಂಡುದು ಅವಳ ಚಿತ್ತಸ್ಥೈರ್ಯಕ್ಕೆ ತೋರುಬೆರಳು.

ಪಾರ್ವತಿ ಸ್ವಭಾವತಃ ಶಾಂತಳು, ಆದರೂ ಆಕೆ ವಟುವಿನ ಶಿವನಿಂದೆ ಕೇಳಿ ಕಿಡಿಕಿಡಿಯಾದಳು. ಅಷ್ಟು ಮಾತ್ರವಲ್ಲ, ಅವನ ಮೇಲೆ ಸಿಕ್ಕಿದ ವಸ್ತುವನ್ನು ತೆಗೆದು ಎಸೆಯುವಷ್ಟು ಅದು ಮುಂದುವರಿದಿತ್ತು, ಘನೀಭೂತವಾಗಿತ್ತು ಅವಳ ಆಗ್ರಹ. ಪುಣ್ಯವಶದಿಂದ ಸಿಕ್ಕಿದ ಆ ವಸ್ತು ವಿಭೂತಿ ಗಟ್ಟಿಯಾಗಿತ್ತು. ಕವಿ ಈ ನೆಪದಲ್ಲಿ "ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್" ಎಂಬ ನಿತ್ಯಸತ್ಯವನ್ನು ಎತ್ತಿ ಹಿಡಿದಿದ್ದಾನೆ.

ಅವಳ ದೃಢಭಕ್ತಿಗೆ ಒಲಿದ ಶಿವ ಅವಳಿಗೆ ಹಸ್ತಾವಲಂಬನವಿತ್ತು 'ಕೈಲಾಸಕ್ಕೆ ನಡೆ' ಎಂದಾಗ, ಪಾರ್ವತಿ "ದೇವ, ಗಿರೀಶ್ವರನಲ್ಲಿ ಎನ್ನನಾದರದೊಳೆ ಬೇಡಿಯೂರ್ಜಿತ ವಿವಾಹಮದಚ್ಚರಿಯಪ್ಪ ಮಾಳ್ಕೆಯಂ ಕರುಣಿಪುದು" ಎಂದು ಪ್ರಾರ್ಥಿಸಿದಳು. ಇಲ್ಲಿ

ಕವಿ ಭಾರತೀಯ ಸಂಸ್ಕೃತಿಯ ಗಾರ್ಹಸ್ಥ್ಯ ಧರ್ಮದ ಶಾಲೀನತೆಯ ಆದರ್ಶವನ್ನು ಎತ್ತಿ ಹಿಡಿದಿದ್ದಾನೆ. ಗಿರಿಜೆ ಪರಶಿವನನ್ನು ಒಲಿಸಿಕೊಂಡದ್ದು ಕಾಮಿನಿಯಾಗಿ ಅಲ್ಲ, ಕಾಮಾರಿ ಪರಶಿವನನ್ನು ಅವಳು ಪರಿಶುದ್ಧ ಭಕ್ತಿಯ ಶಿವಕಾಮಿಯಾಗಿ ಒಲಿಸಿಕೊಂಡಳು.

ಕಾವ್ಯದ ಕಥಾನಾಯಕ ಹಂಪೆಯ ವಿರೂಪಾಕ್ಷ. ಆತ ಜಗಕ್ಕೊಡೆಯ; ಮಾತ್ರವಲ್ಲದೆ ಕಾವ್ಯಕ್ಕೆ ಆತನೇ ಅಧಿಪತಿ. ರಜತಗಿರಿವಾಸನಾದ ಪರಶಿವ ಕನ್ನಡನಾಡಿನ ಹೇಮಕೂಟಕ್ಕೆ ಚಿತ್ತೈಸಿ ತಪೋಮಗ್ನನಾದದ್ದು ಕವಿಯ ನಾಡಪ್ರೇಮದ ಕುರುಹು. ಆತ "ಚಂದ್ರಾಂಶುಪದವೋ, ಸೂರ್ಯಕೋಟಿರುಚಿರಪ್ರದ್ಯೋತವೋ" ಎಂಬಂತೆ ಪದ್ಮಾಸನಾಸೀನನಾಗಿದ್ದಾನೆ. ತನ್ನ ತೇಜದಲ್ಲಿ ಮನವನ್ನು ಮುಳುಗಿಸಿ ಅಚಲನಾಗಿದ್ದಾನೆ. ಅಭವ, ಅದ್ವಯ, ಸದಮಳ, ಪರತತ್ತ್ವನಿಧಾನ, ಆನಂದಮಯ, ಎಷ್ಟೋ ವರ್ಷಗಳು ತಪೋಮಗ್ನರಾದ ಮನುಮುನಿಗಳಿಗೆ ನಿಲುಕದವ. ವೇದಗಳಿಗೂ ಅವೇದ್ಯ. ಕವಿದೃಷ್ಟಿಯಲ್ಲಿ ಆತ ಸಕಳನಿಷ್ಕಳನಾದರೂ ಗಿರಿಜೆಗೆ ಕಾಣಿಸಿಕೊಂಡುದು ಸಕಳನಾಗಿ.

ವೈರಾಗ್ಯನಿಧಿ, ಭಸಿತಕಾಯ, ತಪೋಮಯ, ಸೌಂದರ್ಯರೂಪ, ಜ್ಞಾನಪ್ರದೀಪ, ಸ್ವಯಂಪ್ರಕಾಶ, ಭಕ್ತಾಮರ ಕಲ್ಪತರು, ಅಕ್ಷಮಾಲೆಯನ್ನು ಅಂಗುಲಿಯಲ್ಲಿ ಧರಿಸಿದವ, ಸಿದ್ಧರ ಗಂಡ, ಮುಕುಳಿತ ನಯನ, ಪಿಂಗಲ ಜಟಾಜೂಟ-ಎಷ್ಟು ವರ್ಣಿಸಿದರೂ ಕವಿಗೆ ತೃಪ್ತಿಯಿಲ್ಲ. ಅಂಥವನನ್ನು ಸಾತ್ವಿಕ ಭಕ್ತಿಯಿಂದ ಒಲಿಸಿಕೊಳ್ಳಬೇಕೆಂಬ ಹಿರಿಯಾಸೆ ಗಿರಿಜೆಗೆ. ಆದರೆ ಅವಳ ಇಷ್ಟ ಅಷ್ಟು ಸುಲಭವಾಗಿ ಈಡೇರತಕ್ಕುದಲ್ಲ. ಆತ ತಪೋಭಂಗಕ್ಕೆ ಕಾರಣನಾದ ಮನ್ಮಥನನ್ನು ದಹಿಸಿ, ಮುಳಿದು, ತುಳಿದು, ಸ್ಮರಭಸ್ಮಾವಯವನಾಗಿ ಉಗ್ರನಾಗಿ ಮೈಗರೆದ. ಪಾರ್ವತಿಯನ್ನು ಕಡೆಗಾಣಿಸಿದ. ಅವಳ ಕಡೆ ತಿರುಗಿಯೂ ನೋಡದೆ, ನುಡಿಸದೆ ಮಾಯವಾದ. ಆದರೆ ಮುಂದೆ ಪಾರ್ವತಿ ಛಲದಿಂದ ಕೈಗೊಂಡ ಸಾತ್ವಿಕ ತಪಸ್ಸಿಗೆ ಸೋತು ವಟುವೇಷದಿಂದ ಕಾಣಿಸಿದ; ಒರೆ ಹಚ್ಚಿ ನೋಡಿದ. ಶಿವನಿಂದೆ ಮಾಡಿ ಏಟು ತಿಂದು ನಿಜರೂಪು ತೋರಿದ.

ಪರಶಿವನ ಪಾತ್ರಸೃಷ್ಟಿಯಲ್ಲಿ ಕವಿಯ ಅಮಿತ ಶ್ರದ್ಧೆ ಎದ್ದು ಕಾಣುತ್ತದೆ. ವಟುವಿನ ವಾದಸರಣಿಯಲ್ಲಿ ಕಾಣುವ ಶಿವನಿಂದೆ ಸ್ತುತಿಪರ. ಅದು ದಿಟವೂ ಮಾರ್ಮಿಕವೂ ಆಕರ್ಷಕವೂ ಆಗಿದೆ. ವಟುವನ್ನು ಕಂಡ ಪಾರ್ವತಿಗೆ ಸಂದೇಹವಾದದ್ದು ಸಹಜ. "ಕಣ್ಣರಿಯದುದಂ ಕರುಳರಿದುದು" ಎಂಬ ಕನ್ನಡ ಜಾಣ್ನುಡಿ ಇದಕ್ಕಾಗಿ ಹುಟ್ಟಿದ್ದು, ಮಹಾಕವಿ ಕಾಳಿದಾಸನ "ಸತಾಂ ಹಿ ಸಂದೇಹ ಪದೇಷು ವಸ್ತುಷು ಪ್ರಮಾಣಮಂತಃ ಕರಣ ಪ್ರವೃತ್ತಯಃ" ಎಂಬ ಉಕ್ತಿ ಇಲ್ಲಿ ಕವಿಗೆ ಸ್ಫುರಿಸದೆ ಇರದು. ಆಗ ಅವಳ ಮೈ ಬೆವೆತು ರೋಮಾಂಚಿತವೂ ಆಯಿತು. ಚಿತ್ತ ಪ್ರಸನ್ನವಾಯಿತು. ಚಂದ್ರನಿಗೆ ಮೇಘ ಮರೆಯಾದರೂ ಅದು ಲೋಕಕ್ಕೆ ತಂಪನ್ನು ಕೊಡದಿರುವುದೆ? ಶಿವನಿಗೂ ಗಿರಿಜೆಯ ಮಧುರದೃಷ್ಟಿ ತಾಗಿ ಆತ ತಬ್ಬಿಬ್ಬಾದ! ಪುಳಕಿತನಾದ! ಇಲ್ಲಿ ರಸಿಕಚಕ್ರಿ ಕವಿಯ ಸಾತ್ವಿಕ ಶೃಂಗಾರರಸ ತಾನೇತಾನಾಗಿ ಹರಿದಿದೆ. ಈ ದಿಸೆಯಲ್ಲಿ ಪರಶಿವನ ವ್ಯಕ್ತಿಚಿತ್ರಣವು ಸಹಜವೂ ಆಕರ್ಷಕವೂ ಆಗಿದೆ.

ಹರಿಹರನ ಹಿಮವಂತ "ಪರಮೇಶ್ವರಾಂಘ್ರಿಸರಸಿಜಮಧುವ್ರತ ದಿಗಂತ ಕೀರ್ತಿಯುತ, ಜಗದ್ದೀಪಕ, ಅತ್ಯುದಾರಿ, ಮಹಿಮಾಂಬುರಾಶಿ, ಪ್ರಚಂಡಭುಜ" ಅವನ

ಸಭೆಯಲ್ಲಿದ್ದ ಸಾಮಂತ ರಾಜರು ಕವಿಯ ಕಾಲದಲ್ಲಿ ಪ್ರಸಿದ್ಧರಾಗಿದ್ದ ಆಂಧ್ರ, ಕಳಿಂಗ, ವಂಗ, ಕೇರಳ, ಚೋಳ, ಲಾಳ, ಮಗಧ, ಪಾಂಡ್ಯ, ಮಾಳವ, ಗೌಡ ಮುಂತಾದ ದೇಶಗಳವರೆ!

ಸ್ನಾನಮಾಡಿ, ಭಸ್ಮರುದ್ರಾಕ್ಷಿಗಳನ್ನು ಧರಿಸಿ, ಸ್ಥಿರಚಿತ್ತದಿಂದ ಲಿಂಗಾರ್ಚನೆ ಮಾಡಿ ಶಿವಪ್ರಸಾದ ಸೇವಿಸುವುದು ಹಿಮವಂತನ ದಿನಚರಿ. ಆತನ ಚಿತ್ತವಲ್ಲಭೆ ಮೇನಾದೇವಿ. ಪುತ್ರಿಯನ್ನು ಪಡೆವ ತನ್ನ ಬಯಕೆಯನ್ನು ಆಕೆ ನಿವೇದಿಸಿದಾಗ ಹಿಮವಂತನು ಅವಳನ್ನು ಸಂತೈಸಿ, ಅವಳ ತಪಸ್ಸಿಗೆ ತಕ್ಕ ಅನುಕೂಲಗಳನ್ನು ಏರ್ಪಡಿಸಿದ. ಅವಳ ಪುಣ್ಯಗರ್ಭದಲ್ಲಿ ಜನಿಸಿದ ಅಗಜೆ ಕಣ್ಣು ಮುಚ್ಚಿಕೊಂಡಿದ್ದಾಗ ಕುಲಗುರು ಶೈವಾಚಾರ್ಯರ ಸೂಚನೆಯಂತೆ ಶಿಶುವಿಗೆ ಶಿವಲಿಂಗದರ್ಶನ ಮಾಡಿಸಿ ಅವಳನ್ನು ಅಕ್ಕರೆಯಿಂದ ಸಲಹಿದ. ಮುಂದೆ ಆತ ನಾರದನ ಮುಖದಿಂದ ಗಿರಿಜೆ ಶಿವನ ಅರ್ಧಾಂಗಿನಿ ಎಂಬುದನ್ನು ಅರಿತು, ಅವರ ಸಲಹೆಯಂತೆ ಅವಳನ್ನು ಸಖಿಯರೊಂದಿಗೆ ಹೇಮಕೂಟಕ್ಕೆ ಬಿಟ್ಟು ಬಂದ. ಮಗಳನ್ನು ಅಗಲಿ ಬರುವಾಗ ಆದ ಕಳವಳ ಆತನಿಗಿದ್ದ ಪುತ್ರೀವ್ಯಾಮೋಹದ ಕುರುಹು. ಮುಂದೆ ಋಷಿಗಳು ಬಂದು ಶಿವನಿಗಾಗಿ ಮಗಳನ್ನು ಕೇಳಿದಾಗ ಹರ್ಷದ ಕಡಲಲ್ಲಿ ಮುಳುಗಿದ ಹಿಮವಂತ "ಸುರುಚಿಯಂ ಸಾಂಗೀಕಾರದಿಂ ಕಾಮದಿಂ ಪ್ರೇಮದಿಂ ನಿಷ್ಠೆಯಿಂ ನೆಟ್ಟನೆ ಕೊಟ್ಟೆಂ ಕೊಟ್ಟೆನೆರಡಿಲ್ಲ!" ಎಂದು ಮಹೋತ್ಸಾಹದಿಂದ ಸಮ್ಮತಿಸಿ ವೈಭವದಿಂದ ಕನ್ಯಾದಾನ ಮಾಡಿದ ಆದರ್ಶ ಗೃಹಸ್ಥ.

ಹುಟ್ಟಿದ ಮಕ್ಕಳಲ್ಲಿ ಒಬ್ಬಳಾದರೂ ಮಗಳಿರಬೇಕೆಂಬ ತಾಯ್ತನದ ಹಂಬಲಕ್ಕೆ ಮೇನಾದೇವಿ ನಿದರ್ಶನ. ಅವಳಿಗೆ ಮೈನಾಕನೆಂಬ ಮಗನಿದ್ದನಾದರೂ ಮಗಳಿಗಾಗಿ ಹಂಬಲಿಸಿತು ಅವಳ ಹೆಂಗರುಳು. ಅವಳು ಜಗದಂಬೆಯನ್ನು ಕುರಿತು ತಪಸ್ಸು ಮಾಡಿದಳು; ಆಕೆ ಪಿತೃಮನೋಭವೆ, ಸಕಲಗುಣಗಣಾಲಂಕೃತೆ. ಸಾಕ್ಷಾತ್ ದಾಕ್ಷಾಯಿಣಿಯೇ ತನ್ನ ತಪಸ್ಸಿನ ಫಲವಾಗಿ ಲಭಿಸಿದ್ದರಿಂದ ಅವಳಿಗೆ ಅವಳಲ್ಲಿ ಅಮಿತ ವಾತ್ಸಲ್ಯ. ಶಿವನ ಅರ್ಧಾಂಗಿನಿಯೇ ಮಗಳಾಗಿರುವಳೆಂಬುದನ್ನು ಮರೆತು, ಅವಳು ಯೌವನ ತಳೆದಾಗ ತಾಯಿ-ತಂದೆಗಳು ವರನ ಚಿಂತೆಗೊಳಗಾದರು. ಮಗಳು ಹೇಮಕೂಟಕ್ಕೆ ತೆರಳಿದಾಗ ಕಾಡಿನಲ್ಲಿ ಅವಳು ಹೇಗಿರುವಳೋ ಎಂಬ ಮರುಕ ಮೇನೆಗೆ. ಅವಳು ಆದರ್ಶ ಪತ್ನಿ, ಸಾತ್ವಿಕ ಸತಿ, ತಪಸ್ವಿನಿ, ಮಮತೆಯ ಮಡು; ಪರ್ವತರಾಜನ ಸಂಸಾರ ಅವಳಿಂದ ಹಗುರವೆನಿಸಿತ್ತು.

ಹರಿಹರನ ನಾರದ ಸ್ವಯಂ ಕವಿಯ ಗುರು ಶಂಕರಮೂರ್ತಿಯೇ! ಶೈವನಿಧಿ. ಹಿಮವಂತನ ಸಮ್ಮುಖದಲ್ಲಿ ಕುವರಿ ಗಿರಿಜೆಯನ್ನು ಕಂಡೊಡನೆಯೇ ಆತ 'ಜಗದಂಬೆ' ಎಂದು ಸಿಂಹವಿಷ್ಟರದಿಂದ ಎದ್ದು ಪೊಡಮಡುತ್ತಾನೆ. 'ನವರತ್ನಕ್ಕೆ ಅಬ್ಧಿ, ಚಿಂತಾಮಣಿಗೆ ಮರಡಿ, ಮುತ್ತಿಂಗಿ ಸಿಂಪಿ ಕಾರಣವಾದಂತೆ ನೀವು ಮಹಾದೇವಿಯ ಜನನಕ್ಕೆ ಕಾರಣರೆಂದು ಎಚ್ಚರಿಸುತ್ತಾನೆ. ಲೋಕಹಿತಕ್ಕಾಗಿ ಪಾರ್ವತಿ-ಪರಮೇಶ್ವರರ ವಿವಾಹ ಮಾಡಿಸುವ ಉದ್ದೇಶ ಅವನದು. ಅದಕ್ಕಾಗಿಯೇ ಅವನು ಗಿರಿಜೆಯನ್ನು ಶಿವನಿದ್ದಲ್ಲಿಗೆ ಕಳುಹಿಸುವ ಸಲಹೆ ಮಾಡಿದ್ದು. ಗಿರಿಜಾಕಲ್ಯಾಣದ ನಾರದ ಸಾಹಿತ್ಯದಲ್ಲಿ ಇತರತ್ರ ಬರುವ ನಾರದನಂತೆ 'ಕಲಹಪ್ರಿಯನಲ್ಲ.' ಆತ ಶಿವೋಪಾಸಕ, ಲೋಕಹಿತಸಾಧಕ.

ಗಿರಿಜಾಕಲ್ಯಾಣದಲ್ಲಿ ಚಿತ್ರಿತನಾಗಿರುವ ಮನ್ಮಥಸಾಹಿತ್ಯದಲ್ಲಿ ಸಾಮಾನ್ಯವಾಗಿ ಚಿತ್ರಿತನಾಗಿರುವ ವಿಲಾಸದ ಅಧಿದೇವತೆ ಕಾಮದೇವನಲ್ಲ, ಆತ ಲೋಕಹಿತಕ್ಕಾಗಿ ಆತ್ಮಬಲಿದಾನವೆಸಗಿದ ಮಹಾತ್ಯಾಗಿ. ತಾರಕನ ಉಪಟಳದಿಂದ ಬಸವಳಿದು, ಅವನೊಡನೆ ಏರ್ಪಟ್ಟ ಯುದ್ಧದಲ್ಲಿ ಪರಾಭವವನ್ನು ಹೊಂದಿ, ಗಿರಿ ಗುಹೆಗಳಲ್ಲಿ ತಲೆಮರಸಿಕೊಂಡಿದ್ದ ಹರಿ-ವಿರಿಂಚಿ-ಪುರಂದರ ಮುಂತಾದ ದೇವತೆಗಳು ಒಂದೆಡೆ ಕಲೆತು ತಾರಕನ ಅಳಿವಿಗಾಗಿ ಯೋಚಿಸಿದರು. ಶಿವಸುತನ ಹೊರತು ತಾರಕನು ನಾಶವಾಗುವುದಿಲ್ಲ ಎಂದು ತಿಳಿದ ದೇವತೆಗಳು ಶಿವ-ಪಾರ್ವತಿಯರ ವಿವಾಹವನ್ನು ಅಚಿರದಲ್ಲಿ ಏರ್ಪಡಿಸಲು ನಿರ್ಧರಿಸಿದರು. ಪರಮೇಶ್ವರನ ಸಮಾಧಿಭಂಗ ಮಾಡುವ ದಾರುಣಕಾರ್ಯ ಮದನನಿಂದಲ್ಲದೆ ಸಿದ್ಧಿಸುವಂತಿರಲಿಲ್ಲ. ಬೃಹಸ್ಪತಿಯ ಮೂಲಕ ದೇವಸಂದೇಶವನ್ನು ಅರಿತು ಮದನ ದೇವಸಭೆಗೆ ಆಗಮಿಸಿದ. ಕುಶಲಪ್ರಶ್ನೆಯ ಬಳಿಕ ಗೋವಿಂದನು "ಅತ್ಯಧಿಕ ತಪಸ್ಸಿನಲ್ಲಿರುವ ಹರನ ಸಮಾಧಿಯನ್ನು ಚಲಿಸಿ ಗಿರಿಸುತೆಯಲ್ಲಿ ನೆರಪುವ ಈ ಕಾರ್ಯ ಸಾಧಿಸಲು ನೀನೇ ಸಮರ್ಥ!" ಎಂದಾಗ ಮದನ "ಅದು ನನ್ನಿಂದಾಗದು, ಹರನು ಸಾಮಾನ್ಯನೇ? ಶೂಲಿಯ ತಪಸ್ಸನ್ನು ಕೆಡಿಸುವುದರಿಂದ ನನಗೆ ಗಂಡಾಂತರ ತಪ್ಪಿದ್ದಲ್ಲ; ಸೂರ್ಯನ ಮುಂದೆ ಕತ್ತಲೆಯನ್ನು, ಸಿಂಹದ ಮುಂದೆ ಆನೆಯನ್ನು, ಸಿಡಿಲಿನ ಮುಂದೆ ಸರ್ಪವನ್ನು ಅಟ್ಟುವಂತೆ ನೀವು ನನ್ನನ್ನು ಹರನಲ್ಲಿಗೆ ಕಳಿಸುವಿರಿ" ಎಂದು ಆತ ದೈನ್ಯದಿಂದ ಬೇಡಿಕೊಂಡ. ಆದರೆ ಮುಂದುವರಿದ ಮುಕಂದ "ಬಹಳ ಮಾತುಗಳಿಂದೇನು ಪ್ರಯೋಜನ? ನಿನ್ನಿಂದ ಸಕಲ ಜಗವು ಸುಖದಿಂದಿರುವುದಾದರೆ ನಿನ್ನೊಬ್ಬನ ಜೀವವನ್ನು ಲೆಕ್ಕಿಸುವುದೆ?" ಎಂದು ಭುಜ ತಟ್ಟಿದ. ಅದರಿಂದ ಉತ್ಸಾಹಗೊಂಡ ಮನ್ಮಥ "ಸಕಲ ಭುವನವೂ ನನ್ನಿಂದಾಗಿ ಪರಮ ಸುಖದಿಂದ ಇರುವುದಾದರೆ ನನ್ನ ಜೀವವನ್ನು ಅರ್ಪಿಸಲು ನಾನು ಸಿದ್ಧ. ನಾನೆಷ್ಟರವನು? ನನಗೆ ಇಂದೇ ನೂರು ವರ್ಷ ತುಂಬಿತೆಂದು ಭಾವಿಸುವೆನು!" ಎಂದು ಮನ್ಮಥ ಸಂತೋಷದಿಂದ ಒಪ್ಪಿಗೆಯಿತ್ತು ಕಾರ್ಯೋನ್ಮುಖನಾದ. ಆತ ಪಾರ್ವತಿಯ ನೆರವು ಪಡೆದು ಶಿವಸಮಾಧಿಯನ್ನು ಭಂಗಮಾಡಿ, ಹರನ ಹಣೆಗಣ್ಣುರಿಗೆ ತುತ್ತಾದ. ಪ್ರಾಣವನ್ನು ತೆತ್ತಾದರೂ ಲೋಕಹಿತ ಸಾಧಿಸುವ ಅವನ ಉದಾತ್ತ ಆದರ್ಶ ಇಲ್ಲಿ ಗಮನಿಸತಕ್ಕದು. ಹರಿಹರನ ಮದನ ಆತ್ಮವಿಶ್ವಾಸಿ, ಸುಖಲೋಲುಪನಾದರೂ ಹಿರಿಯರ ಆಜ್ಞೆಯನ್ನು ಗೌರವಿಸುವವನು. ವಿಧಿಯಿಲ್ಲದೆ ಇಂಥ ಮಹಾತ್ಮನಿಗಾದ ದುರಂತವನ್ನು ಕಂಡ ಮೂರು ಲೋಕಗಳೂ ಮರುಗಿದವು.

ಮನ್ಮಥನ ಆದರ್ಶಪತ್ನಿ ರತೀದೇವಿ. ಆಕೆ ಪತಿಭಕ್ತಿಪರಾಯಣೆ. ಪತಿಯ ವಿಯೋಗದಿಂದ ಅವಳಿಗಾದ ದುಃಖ ಅಪಾರ. ಅಲ್ಲಿ ಕರುಣಾರಸ ಮಡುಗಟ್ಟಿ ನಿಂತಿದೆ. ಇಲ್ಲಿ ಕವಿಯ ಶಕ್ತಿ ಕಾಳಿದಾಸನ ರತಿಪ್ರಲಾಪಕ್ಕೆ ಹೊಯ್ಕಯ್ಯಾಗಿದೆ. ಲೋಕಹಿತ ಕಾರ್ಯದಲ್ಲಿ ಪತಿ ತನ್ನನ್ನು ಒಪ್ಪಿಸಿಕೊಳ್ಳಲು ನಿರ್ಧರಿಸಿದಾಗ ಅವಳ ಎದೆ ಅಳುಕಲಿಲ್ಲ. ಪತಿಯನ್ನು ತಡೆಯಲಿಲ್ಲ. ಆಕೆಯ ಲೋಕಹಿತ ಕಾರುಣ್ಯ, ತ್ಯಾಗ, ಅಜೇಯ. ಗಿರಿಜೆಯ ಕರುಣೆಯಿಂದ ರತಿ ಮತ್ತೆ ಪತಿಯನ್ನು ಅನಂಗನಾಗಿ ಪಡೆದ ಆದರ್ಶ ಪತ್ನಿ, ಮಹಿಳಾರತ್ನ ಅವಳು.

ಈ ಕಾವ್ಯದಲ್ಲಿ ಬಂದಿರುವ ಬೃಹಸ್ಪತಿ ಮೇಧಾವಿ; ನೀತಿಶಾಸ್ತ್ರವಿಶಾರದ.

ದೇವಹಿತಕ್ಕಾಗಿ ತಾರಕನಲ್ಲಿ ರಾಯಭಾರಕ್ಕಾಗಿ ಹೋಗಿ ವಿಫಲನಾಗಿ ಹಿಂದಿರುಗಿದ. ಮನ್ಮಥನಲ್ಲಿಗೂ ಹೋಗಿ ಬಂದ. ಮದನನ ಆಸ್ಥಾನದಲ್ಲಿದ್ದ ಲಲನೆಯರ ಸೌಂದರ್ಯ ಸೌಕುಮಾರ್ಯಗಳಿಗೆ ಆತ ಅಳುಕಿದ. "ಮನದೊಳ್ ಅಳಿಪುತ್ತಾ, ಬುದ್ಧಿಯೊಳ್ ಬೆವರುತ್ತಾ, ಚಿತ್ತದೊಳ್ ಕಾತರಂಬಡುತ್ತಾ ಇದ್ದ"ನೆಂದು ವರ್ಣಿಸಹೊರಟ ಕವಿಗೆ "ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ" (ಮಹಾಭಾರತ) ಎಂಬ ನುಡಿ ನೆನಪಾಗಿರಲಿಲ್ಲವೆಂದು ಹೇಳಲು ಸಾಧ್ಯವೆ?

ತಪೋಬಲದಿಂದ ಬ್ರಹ್ಮನನ್ನು ಮೆಚ್ಚಿಸಿ ಅತುಲ ಸಾಮರ್ಥ್ಯವನ್ನು ಪಡೆದ ತಾರಕ ಲೋಕಕಂಟಕನಾದದ್ದು "ವಿನಾಶಕಾಲೇ ವಿಪರೀತ ಬುದ್ಧಿಃ" ಎಂಬ ನಾಣ್ಣುಡಿಗೆ ಅನುಗುಣವಾಗಿತ್ತು. ಆದ್ದರಿಂದಲೇ ಅವನು ಬೃಹಸ್ಪತಿಯ ಬುದ್ಧಿವಾದವನ್ನು ಮುರಿದದ್ದು. ಆತ ಆತ್ಮವಿಶ್ವಾಸಿ; ಶಿವಕುಮಾರನಿಂದಲ್ಲದೆ ಅವನ ಅಳಿವಿಲ್ಲವೆಂದು ದೇವತೆಗಳು ನಿರ್ಧರಿಸಿ ಗಿರಿಜೆಯ ಕಲ್ಯಾಣಕ್ಕಾಗಿ ಪ್ರಯತ್ನಿಸಬೇಕಾಯಿತು. ಹರಿಹರನ ತಾರಕ ಧೀರ, ವೀರ, ಜೊತೆಗೆ ಹಠಮಾರಿ.

ಜಯೆವಿಜಯೆಯರು ಪಾರ್ವತಿಯ ಗೆಳತಿಯರು. ನೆರಳಿನಂತೆ ಅವರು ಅಗಜೆಯನ್ನು ಅನುಸರಿಸಿದರು. ಪಾರ್ವತಿಯ ಪೂಜೆಗೆ ಹೂವು ಹಣ್ಣು ಬಿಡಿಸಿ ತರುವುದು, ಮಾಲೆ ಕಟ್ಟುವುದು ಮುಂತಾಗಿ ಅವಳಿಗೆ ಎಲ್ಲ ಹಂತಗಳಲ್ಲಿಯೂ ನೆರವಾಗುತ್ತಿದ್ದರು. ಅವಳು ಕಠೋರ ತಪಸ್ಸಿಗೆ ತೊಡಗಿದಾಗ, ವಟು ಆಗಮನಿಸಿದಾಗ ಅವನನ್ನು ಸತ್ಕರಿಸಿ, ಸಂಭಾಷಿಸಿದರು. ಇವರು ಗಿರಿಜೆಯ ಸೇವಕಿಯರೂ, ಆಪ್ತರೂ ಆಗಿದ್ದರು.

೫. ಶೈಲಿ

ಕಾವ್ಯವಸ್ತುವನ್ನು ಹೃದಯಂಗಮವಾಗಿ ಹೇಳುವ ರೀತಿಗೆ ಶೈಲಿ ಎಂದು ಹೆಸರು. ರೀತಿ ಎಂಬುದು ಇದಕ್ಕೆ ಬೇರೆ ಹೆಸರು. ಲಾಕ್ಷಣಿಕರಲ್ಲಿ ಒಬ್ಬನಾದ ವಾಮನ "ರೀತಿಯು ಕಾವ್ಯದ ಆತ್ಮ" ಎಂದಿದ್ದಾನೆ. ಕಾವ್ಯ ಬರೆಯುವಾಗ ಕವಿಯಲ್ಲಿ ಯಾವ ಬಗೆಯ ಭಾವ ಮೂಡುವುದೋ ಅದನ್ನು ಓದುವವರೂ ಕೇಳುವವರೂ ಅನುಭವಿಸಿ ತನ್ಮಯತೆಯನ್ನು ಹೊಂದಿದರೆ ಅದೇ ಉತ್ತಮ ಕಾವ್ಯ. ಅಂಥ ಕಾವ್ಯದ ಪ್ರತಿ ಶಬ್ದವೂ ಜೀವಕಳೆಯಿಂದ ತುಂಬಿರುತ್ತದೆ; ಇಂಥ ಶಬ್ದಗಳ ಸಮುಚಿತ ಪ್ರಯೋಗವೇ ಶೈಲಿ, ರಸಪುಷ್ಟಿ ಮಾತ್ರವೆ ಅಲ್ಲ, ಅದೊಂದು ನವ್ಯಸೃಷ್ಟಿ!

ಉತ್ತಮ ಶೈಲಿಯ ಎಲ್ಲ ಗುಣಗಳೂ ಹರಿಹರನಲ್ಲಿವೆ. ಪ್ರತಿಯೊಬ್ಬ ಕವಿಗೂ ತನ್ನದೇ ಆದ ವಿಶಿಷ್ಟ ಶೈಲಿಯುಂಟು. ಈ ದಿಶೆಯಲ್ಲಿ ಹರಹರನದೂ ಒಂದು ವಿಶಿಷ್ಟ ನವ್ಯ ಶೈಲಿ. ಆತ ಘನವಿದ್ವಾಂಸ. ಸಂಸ್ಕೃತ ಕನ್ನಡ ಭಾಷೆಗಳ ಮೇಲೆ ಅವನ ಪ್ರಭುತ್ವವುಂಟು. ತಮಿಳು ತೆಲುಗು ಭಾಷೆಗಳ ಪರಿಚಯವೂ ಆತನಿಗಿತ್ತು, ಸರಿಯಾದ ಅರ್ಥಭಾವಗಳನ್ನು ಅನುಸರಿಸಿ, ಶಬ್ದಗಳು ಉತ್ತಮ ಶಯ್ಯೆಯಲ್ಲಿ ಹೊಂದಿಕೊಂಡು ಗಂಭೀರ ಪ್ರವಾಹದಂತೆ ಅಡೆತಡೆಯಿಲ್ಲದೆ ಸಾಗುವುದು ಅವನ ವೈಶಿಷ್ಟ್ಯ. ಅವು ಪ್ರೌಢವೂ, ಗಂಭೀರವೂ ಆಗಿ ಅರ್ಥಭಾವಗಳನ್ನು ಪೋಷಿಸುವುವಲ್ಲದೆ ನಿರರ್ಗಳವಾಗಿ ಓಡುವುವು. ಅಲ್ಲಲ್ಲಿ ಶಬ್ದ-ಅರ್ಥಾಲಂಕಾರಗಳನ್ನು ಹಿತಮಿತವಾಗಿ ಬಳಸಲಾಗಿದೆ. ಯಮಕ, ಪ್ರಾಸ, ಶ್ಲೇಷ, ಉಪಮಾ, ರೂಪಕ, ಸ್ವಭಾವೋಕ್ತಿ, ವಕ್ರೋಕ್ತಿ, ಅರ್ಥಾಂತರನ್ಯಾಸ ಮೊದಲಾದುವು ಸಹಜಸುಂದರವಾಗಿ ಪ್ರಯುಕ್ತವಾಗಿವೆ. ಅವನೇ ಹೇಳುವಂತೆ-

ಅತುಳಪದಾರ್ಥಮರ್ಥದನುವೃತ್ತಿ ಪದಂ ಪದದಿಚ್ಛೆಬಂಧಮೂ
ರ್ಜಿತಪದಬಂಧಸಂಧಿನವರೀತಿ ಸುರೀತಿ ಗುಣಂ ಸದ್ಯಕ್ಕಲಂ
ಕೃತಿ ಸದಲಂಕೃತಿಪ್ರತಿಮಮೊಪ್ಪುವ ಭಾವಮನೂನಭಾವದು
ನ್ನತರಸಮೆಂದು ಸತ್ಕವಿಗಳಾಲಿಸೆ ಪೇಳ್ದಪೆನೀ ಪ್ರಬಂಧಮಂ ॥(ಗಿ. ಕ. ೧-೧೧)

ಇಲ್ಲಿ ಹೇಳಿರುವ ಎಲ್ಲ ಗುಣಗಳೂ ಗಿರಿಜಾಕಲ್ಯಾಣದಲ್ಲಿವೆ, ಎಂದು ಆತನ ಆಶಯ.

ತನ್ನ ಕಾವ್ಯ ಅಖಿಳಜನಸೇವ್ಯವಾಗಿದೆ ಎಂಬುದು ಆತನ ವಿಶ್ವಾಸ. ಹಿಮವತ್ಪರ್ವತದ ತಪ್ಪಲಿನಲ್ಲಿರುವ ತಪೋವನ, ತಪಸ್ವಿಗಳ ಜೀವನ, ಬೇಟೆ, ಶಬರ-ಶಬರಿಯರು, ಹಂಪೆ, ಹೇಮಕೂಟ, ವಿರೂಪಾಕ್ಷನ ಪೂಜೆ, ಚಳಿ, ಮಳೆ, ಬೇಸಗೆ, ಪಾರ್ವತಿಯ ಕಠೋರ ತಪಸ್ಸು ಮುಂತಾದ ವರ್ಣನೆಗಳಲ್ಲಿ ಕವಿಪ್ರತಿಭೆ ಬೆಳಗಿದೆ. ರಸೋತ್ಕರ್ಷವನ್ನು ಸೂಚಿಸುವ ಪದ ಛಂದಸ್ಸುಗಳಿಗೆ ಈ ಕೆಳಗಿನ ಪದ್ಯಗಳನ್ನು ಉದಾಹರಿಸಬಹುದು.

ಕಾಡುಹಂದಿ

ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನ
ಕ್ರೂರಂ ವಜ್ರಸಮಾನರೋಮನಿಚಯಂ ಸಂಪೂರ್ಣಕಾಯಂ ಸ್ಥಿರಂ
ಶೂರಂ ರೌದ್ರಗಭೀರಚಿತ್ತನತಿಮಾನಿ ಸ್ವಲ್ಪಪ್ರಚ್ಛಾನ್ನಿತಂ
ಘೋರಾರಣ್ಯಚರಂ ವಿರಾಜಿಸಿದುದುದ್ಯದ್ಭೀಕರಂ ಸೂಕರಂ (೧-೧೦೦)

ಮಾವಿನ ಹಣ್ಣು ಸವಿಯುವ ಗಿಳಿ

ಬಿಗಿಯಪ್ಪಿ ಮೊಗಮನಿಟ್ಟಾ
ಲಿಗಳವು ನಸುಮುಚ್ಚೆ ಪಕ್ಷಯುಗಮೆಳಲೆ ರಸಂ
ದೆಗೆವ ದನಿ ನಿಮಿರೆ ನಾಲಗೆ
ಚಗುರುತ್ತಿರೆ ಸವಿದುದೊಂದು ಗಿಣಿ ತನಿವಣ್ಣಂ ॥ (೨-೩೯)

ಮಲ್ಲಿಗೆಯ ಮಕರಂದ ಹೀರುವ ದುಂಬಿ

ಬಿಗಿಯಪ್ಪಿ ಪುಷ್ಪರಸಮಂ
ತೆಗೆದೀಂಟ ತುಳುಂಕಿ ತೂಳೆ ತೇಂಕಾಡಿ ಮನಂ ।
ಮಿಗೆ ಸೊರ್ಕ ಜಿನುಗಿ ಜೀವಿಸಿ
ಮಗಮಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ॥ (೨-೬೩)

ಶುನಕನಟ್ಟಿದ ಶಶಕ

ನಡೆನಡೆದು ನಸುಬಳುಂಕು
ತ್ತೆಡಬಲನಂ ನೋಡಿ ಕೂಡೆಯಾಘ್ರಾಣಿಸುತಂ ।
ಗಿಡುವಿನ ಸರುವಿನ ದಡುವಿನ
ಮಡುವಿನ ಬಳಿಗೊಂಡು ಶುನಕನಟ್ಟಿತು ಮೊಲನಂ ॥ (೧-೮೫)

ಅಟ್ಟದೊಡೆ ತಿರುಗಿ ಮುರಿಮುರಿ
ದೊಟ್ಟಿಸುತೆ ಕೊಂಕಿ ಪರಿಯುತೆಡನಂ ಬಲನಂ
ತುಟ್ಟಿಸುತೆ ನಿಂದು ನಿಲ್ಲದೆ
ನಿಟ್ಟೋಟದೊಳೋಡಿತೆಸೆವ ಮಸಕದ ಶಶಕಂ ॥ (೧-೮೬)

ಮುಂತಾದುವು.

ಕಾವ್ಯದಲ್ಲಿ ಶೃಂಗಾರ, ವೀರ, ರೌದ್ರ, ಹಾಸ್ಯ ಮುಂತಾದ ರಸಗಳು ಅಭಿವ್ಯಕ್ತವಾಗಿವೆ. ಕವಿಯ ಶಿವಭಕ್ತಿ ಪರಾಕಾಷ್ಠತೆಯನ್ನು ಹೊಂದಿದೆ. ಭಕ್ತಿಯ ಆವೇಶದಲ್ಲಿ ಕವಿ ತನ್ಮಯನಾಗುತ್ತಾನೆ. ಅಲ್ಲಿ ಪ್ರಸನ್ನತೆ, ಮಾಧುರ್ಯ, ಓಜಸ್ಸುಗಳು ಮೆರೆದಿವೆ. ಶೃಂಗಾರವು ಕಾವ್ಯದ ಬಹು ಭಾಗವನ್ನು ಆಕ್ರಮಿಸಿದೆ. ವರ್ಣನೆಗಳಲ್ಲಿ ಹರಿಹರ ಬಾಣನನ್ನು ನೆನಪಿಸುವನು.

೬. ಹರಿಹರನ ವೈಶಿಷ್ಟ್ಯ

ಕಾವ್ಯರಚನೆಯಲ್ಲಿ ಪೂರ್ವದ ಮಹಾಕಾವ್ಯಗಳ ಧಾಟಿಯನ್ನು ಮೀರಿ ನವ್ಯ ಮಾರ್ಗವನ್ನು ನಿರ್ಮಿಸಿದ ಕೀರ್ತಿ ಹರಿಹರನಿಗೆ ಮೀಸಲು. ಕವಿಗಳು ಸಾಮಾನ್ಯವಾಗಿ ತಮಗೆ ಆಶ್ರಯ ನೀಡಿದ ರಾಜರನ್ನು ಕುರಿತು ಅವರನ್ನು ತಮ್ಮ ಕೃತಿಯ ಮಹಾನಾಯಕರಿಗೆ ಹೋಲಿಸಿ ಅವರನ್ನು ಹೊಗಳುತ್ತಿದ್ದುದಕ್ಕೆ ಪಂಪ, ರನ್ನರ ಕೃತಿಗಳೇ ನಿದರ್ಶನ, ಆದರೆ ಶಿವಶರಣರು ಅದಕ್ಕೆ ಅಪವಾದ. ನರಸ್ತುತಿಮಾಡದೆ ಇವರು ತಮ್ಮ ಇಷ್ಟದೈವವಾದ ಶಿವನನ್ನೂ ಅವನ ಭಕ್ತರನ್ನೂ ಕುರಿತು ಕಾವ್ಯಗಳನ್ನು ರಚಿಸಬೇಕು ಎಂಬ ಹೆದ್ದಾರಿ ಹಾಕಿಕೊಟ್ಟವರಲ್ಲಿ ಮೊದಲಿಗ ಹರಿಹರ. ಈ ದೃಷ್ಟಿಯಿಂದಲೇ ಅವನು ದೋರಸಮುದ್ರದ ರಾಜಾಸ್ಥಾನವನ್ನು ತೊರೆದು ಹಂಪೆಗೆ ಬಂದದ್ದು, ಶಿವನ ಮತ್ತು ಶಿವಭಕ್ತರ ಸ್ತುತಿರೂಪ ಚರಿತ್ರೆಗಳನ್ನು ಹಾಡತೊಡಗಿದ್ದು. 'ಹರಿಹರನ ಪುತ್ರ'ನೆಂಬ ಬಿರುದಾಂತ ರಾಘವಾಂಕ ಕವಿ 'ಹರಿಶ್ಚಂದ್ರಕಾವ್ಯ' ರಚಿಸಿದ್ದೂ ಸಹ ಅವನಿಗೆ ಸೇರಲಿಲ್ಲ.

ಹರಿಹರ ಶಿವಾನುಭಾವಿ. ಆತ ವಿರೂಪಾಕ್ಷನ ಸಾನ್ನಿಧ್ಯದಲ್ಲಿ ಹಲವು ಕಾಲ ತಪಸ್ಸು ಮಾಡಿ ಶಿವಸಾಕ್ಷಾತ್ಕಾರ ಪಡೆದವನು. ಆತನ ತಪಸ್ಸಾಧನೆಯ ಫಲ ಅವನ ಕೃತಿಗಳು. ಕವಿಯ ದೃಷ್ಟಿಯಲ್ಲಿ ಈ ಸೃಷ್ಟಿಯೆಲ್ಲವೂ ಶಿವಮಯ. ಅವನ ಕೃತಿಗಳಲ್ಲಿ ಈ ಭಾವ ವ್ಯಕ್ತವಾಗಿದೆ. ಪಂಪಾಶತಕದ ಪದ್ಯಗಳಲ್ಲಿ, ಗಿರಿಜಾಕಲ್ಯಾಣದ ವಿರೂಪಾಕ್ಷ ಪೂಜೆಯಲ್ಲಿ, ರಗಳೆಗಳ ಕಥಾನಾಯಕರ ಚರಿತ್ರೆಗಳಲ್ಲಿ ಅದು ಪ್ರತಿಬಿಂಬಿತವಾಗಿದೆ. ಹಂಪೆಯ ವಿರೂಪಾಕ್ಷನ ಸಾನ್ನಿಧ್ಯದಲ್ಲಿ ಕವಿ ತನ್ನ ದೈನಂದಿನ ಕ್ರಮವನ್ನು ಹೇಗೆ ನಡೆಸುತ್ತಿದ್ದನೆಂಬುದು ಬಸವರಾಜದೇವರ ರಗಳೆಯಲ್ಲಿ ಬರುವ ಬಸವಣ್ಣನವರ ದಿನಚರಿಯಲ್ಲಿ ಕಂಡಿದೆ. 'ನಸುಕು ಹರಿಯುವುದಕ್ಕೆ ಮುನ್ನವೇ ಎದ್ದು, ಇಷ್ಟದೈವ ವಿರೂಪಾಕ್ಷನನ್ನು ಸ್ಮರಿಸಿ, ಶಿವಾರ್ಚನೆಗಾಗಿ ಪತ್ರಪುಷ್ಪಗಳನ್ನು ತಂದು ಮಾಲೆ ಮಾಡಿ, ಹೊಳೆಯಲ್ಲಿ ಮಿಂದು, ವಿರೂಪಾಕ್ಷನ ಸನ್ನಿಧಿಗೆ ಬಂದು ಭಕ್ತಿಭರದಿಂದ ಪೂಜಿಸಿ, ಪತ್ರಪುಷ್ಪಗಳಿಂದ ಅಲಂಕರಿಸಿ ಶಿವನ ಹಾಗೂ ಶಿವಶರಣರ ಮಹಿಮೆಗಳನ್ನು ಹಾಡುವುದರಲ್ಲಿಯೇ ತನ್ಮಯನಾಗುತ್ತಿದ್ದುದು ಲಿಂಗಾರ್ಚನೆಯ ರಗಳೆಯಲ್ಲಿ ಸ್ಪಷ್ಟವಾಗಿದೆ. ಆತನ ಜೀವನ ಶುದ್ಧ, ಪುನೀತ, ಲೌಕಿಕವ್ಯವಹಾರನಿವೃತ್ತ. ತಿರುನೀಲಕಂಠ, ನಂಬಿಯಣ್ಣ ಮೊದಲಾದವರ ರಗಳೆಗಳಲ್ಲಿ ಲೌಕಿಕರಿಂದ ಶಿವಶರಣರಿಗಾಗುತ್ತಿದ್ದ ತೊಂದರೆಗಳನ್ನು ಉಲ್ಲೇಖಿಸಲಾಗಿದೆ.

ಹರಿಹರ ಆಶಾವಾದಿ, ಆತ ಕಾಳಿದಾಸನಂತೆ 'ತಾನು ವಿದ್ವಾಂಸರು ಒಪ್ಪುವಂತೆ ಕೃತಿ ರಚಿಸಲು ಅಸಮರ್ಥ' (ಆ ಪರಿತೋಷಾದ್ವಿದುಷಾಂ ನ ಸಾಧು ಮನ್ಯೇ ಪ್ರಯೋಗ ವಿಜ್ಞಾನಂ) "ಅಲ್ಪಮತಿಯುಳ್ಳ ನಾನೆತ್ತ; ಸೂರ್ಯನಿಂದ ಹುಟ್ಟಿದ ರಘುವಂಶವೆತ್ತ!"

(ಕ್ವಸೂರ್ಯ ಪ್ರಭುವೋ ವಂಶಃ, ಕ್ವ ಚಾಲ್ಪವಿಷಯಾ ಮತಿಃ) ಮುಂತಾಗಿ ದೈನ್ಯವನ್ನು ಹೇಳಿಕೊಳ್ಳುವುದು ಅವನಿಗೆ ಹಿಡಿಸುವುದಿಲ್ಲ; ಬದಲಾಗಿ "ತನ್ನ ಕಾವ್ಯವನ್ನು ಪರೀಕ್ಷಿಸುವವನಿಗೆ ಎಂಟೆದೆ ಬೇಕು" ಎಂಬ ತನ್ನ ಮತ್ತು "ವಾಗ್ದೇವಿ ತನಗೆ ಮರುಳಾಗಿ ಬೆನ್ನು ಹತ್ತಿರುವಳು (ಯಂ ಬ್ರಹ್ಮಾಣಮಿಯಂ ದೇವೀ ವಾಗ್ವಶ್ಯೇವಾನುವರ್ತತೇ" ಎಂಬ ಭವಭೂತಿಗಳಂತೆ "ತನ್ನಲ್ಲಿ ಕಾವ್ಯ ರಚಿಸುವ ಶಕ್ತಿಯಿದೆ; ತನ್ನ ಕಾವ್ಯ ಜಗನ್ಮಾನ್ಯ" ಎಂಬ ಆತ್ಮವಿಶ್ವಾಸವುಳ್ಳವನು. ರಸಾವೇಶ ಮತ್ತು ಪದಬಂಧಗಳಲ್ಲಿ ಸಂಸ್ಕೃತದಲ್ಲಿ 'ಭವಭೂತಿಗೆ' ಇರುವ 'ವಶ್ಯವಾಕ್' ಎಂಬ ಪ್ರಶಸ್ತಿ ಕನ್ನಡದಲ್ಲಿ ಹರಿಹರನಿಗೆ ಒಪ್ಪುತ್ತದೆ. ಹರಿಹರನ ಕಾವ್ಯ -

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ ।
ಕರಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಳಜನಸೇವ್ಯಂ ॥ (ಗಿ. ಕ. ೧-೧೭)

ಅಷ್ಟೇ ಅಲ್ಲ; ಅವನ ಕಾವ್ಯ -

ಪ್ರಿಯವಚನದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತಮು
ಗ್ಧೆಯ ಕಡುನೇಹದಂತಮೃತದಂತೆ ವಸಂತಕನಂತೆ ಪುಷ್ಪಮಾ-
ಲೆಯ ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ-
ಪೆಯ ಹರಿದೇವನುನ್ನತ ಕೃತಿಪ್ರಸರಂ ಭುವನೈಕಭಾಸುರಂ ॥

ಆದ್ದರಿಂದಲೇ ಅದು-

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸಭರಿತಂ ಪುಣ್ಯಪುಂಜಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರವಿಶ್ರಾಮದೇಶಂ
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತುಪೇಳ್ವಲ್ಲಿಯಿಂದಂ
ಕಾವ್ಯಂ ಕಲ್ಪಾಂತಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ॥

ಇಂಥ ಮಹಾಕಾವ್ಯದ ಸವಿಯನ್ನು ಸಹೃದಯರು ಅನುಭವಿಸಿ ಆನಂದಿಸಲಿ.

ಕಥಾಗರ್ಭಂ

ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತ ಧರಣೀಕಾಂತಾ ನಾಭೀಕಮಲ ಮಧ್ಯಸ್ಥಿತ ಕರ್ಣಿಕೆಯಂತಿರ್ಪ ಮೇರುವಿನ ದಕ್ಷಿಣ ದಿಕ್ಕಿನಲ್ಲಿ ಮೂಡಣ ಜಲಧಿಯಿಂ ಪಶ್ಚಿಮವಾರ್ಧಿಪರ್ಯಂತಂ ಪರ್ವಿದ ಪರ್ವತಾಧೀಶಂ ಗಿರಿರಾಜನೆಂಬ ನಾಮದಿಂದೋಷಧಿಪ್ರಸ್ಥಮೆಂಬ ಪುರದೊಳಿರ್ದು ಪಿತೃಗಳ ಮನದೊಳ್ ಪುಟ್ಟಿದ ಮೇನಾದೇವಿಯಂ ವಿವಾಹಮಾಗಿ ಮೈನಾಕನೆಂಬ ಪುತ್ರನಂ ಪಡೆದು, ಪಲವು ದಿನಂ ಸುಖದೊಳಿರುತ್ತುಂ; ದಾಕ್ಷಾಯಿಣಿ ತನ್ನ ಬಸಿಱೊಳ್ ಬರ್ಪ ವರಮಂ ಬಯಸಿ ಮೇನೆ ತಪದೊಳಿರಲ್ ಇತ್ತಲ್ ದಾಕ್ಷಾಯಿಣಿ ದಕ್ಷಯಾಗಕ್ಕೆ ಬಜಯಂಗೆಯ್ದು ನಿಜೇಶನ ನಿಂದೆಯಂ ಕೇಳಲಾಱದೆ ನಿಜಯೋಗದೊಳ್ ಸಂದು ಮೇನೆಯ ಪುಣ್ಯೋದರದೊಳ್ ಪೊಕ್ಕು ಕರುಣದಿಂ ಬಂದಪೆನೆಂದು ಬೆಸಸೆ, ಮೇನೆಯಱೆದು ಪರಮಹರ್ಷದಿಂ ತಿರುಗಿ ಪುರಮಂ ಪೊಕ್ಕು ಗಿರಿರಾಜನ ಸಂಗಸುಖಮಂ ಸಾರ್ದು ಮಂಗಳಾಕರೆಯಾಗಿರೆ; ಕೆಲವು ದಿನಕ್ಕೆ ಗರ್ಭಮುದಯಿಸಿ ನವಮಾಸಂ ತೀವಿ ಕನ್ಯಾರತ್ನಮಂ ಪಡೆದು, ಜಾತಕರ್ಮಮನುನುಕರಿಸಿ, ಪಾರ್ವತಿಯೆಂದು ನಾಮಕರಣಮಂ ಮಾಡಿ, ಪರಮಕಾರಣಿಕೆಯೆಂದಱೆಯದೆ ಪುತ್ರಿಯೆಂಬ ಪ್ರೇಮದಿಂ ಮಂದಿವಾಳತನದಿಂ ಸಲಪುತ್ತಿರೆ, ಬಾಲಲೀಲೆಯಂ ಕಳೆದು ದಿವ್ಯಕನ್ನಿಕೆಯಾಗಿರ್ಪಲ್ಲಿ ಗಿರಿರಾಜಂ ಹರನರಸಿಯೆಂಬುದಂ ಮಱೆದು ಪುತ್ರೀವಿವಾಹಸದೃಶವರಾಪೇಕ್ಷಚಿತ್ತನಾಗಿರ್ಪ ಸಮಯದೊಳ್ ದೇವಲೋಕದಿಂ ನಾರದ ಮಹಾಮುನಿಯಿಟೆತಂದು ಗಿರಿಜಾತೆಯಂ ಕಂಡು ಚರಣಕ್ಕೆಱಗಿ-ಈ ಮಹಾಮಹಿಮನಿಧಿಯಪ್ಪ ಪಾರ್ವತಿಯಂ ನಿಮ್ಮ ಮಗಳೆಂಬುದಾಸೀನಂ ಬಡಬೇಡ; ವಿರೂಪಾಕ್ಷನರ್ಧಾಂಗಿ ಸರ್ವಕಾರಣದಿಂ ಮೇನೆಯ ತಪಸ್ಸಿಗೆ ಕರುಣಿಸಿ ನಿಮ್ಮುದರದೊಳ್ ಬಂದಳ್. ಈ ಹೈಮವತಿಯಂ ಹೇಮಕೂಟದೊಳ್ ನಿಜಾವಲೋಕನಸಮಾಧಿಸ್ಥನಾಗಿರುತಿರ್ಪ ಸರ್ಪಾಭರಣನಲ್ಲಿಗೆ ಕಳಿಪುವುದೆಂದು ನಾರದಮುನಿ ಪೇೞ್ದು

ಮಂಗಳಕರವಾದ ಮಹೋನ್ನತ ಮೇರುಪರ್ವತ. ಅದು ಭೂರಮೆಯ ನಾಭೀಕಮಲದ ಮಧ್ಯಕರ್ಣಿಕೆಯಂತೆ ಕಂಗೊಳಿಸುತ್ತಿದೆ. ಮೇರುವಿನ ದಕ್ಷಿಣಕ್ಕೆ ಮೂಡಣ-ಪಡುವಣ ಕಡಲುಗಳವರೆಗೆ ಹಬ್ಬಿದ ನಗಾಧಿರಾಜನು ಗಿರಿರಾಜನೆಂದು ಹೆಸರಾಂತಿದ್ದಾನೆ. ರಾಜಧಾನಿ ಓಷಧಿಪ್ರಸ್ಥಪುರ. ಆತನ ಮಡದಿ ಪಿತೃಮಾನಸಪುತ್ರಿ ಮೇನೆ ಎಂಬುವಳು. ಮಗ ಒಬ್ಬನೇ ಮೈನಾಕ. ಕೆಲದಿನಗಳ ಮೇಲೆ ಆಕೆಗೆ ದಾಕ್ಷಾಯಿಣಿ ಗೌರಿಯನ್ನೇ ಮಗಳಾಗಿ ಪಡೆವ ಬಯಕೆಯಾಯಿತು. ಅದಕ್ಕಾಗಿ ಆಕೆ ಜಗನ್ಮಾತೆಯನ್ನು ಕುರಿತು ಉಗ್ರತಪಸ್ಸನ್ನು ಕೈಗೊಂಡಳು.

ಮೇನೆಯ ಮನೋರಥಕ್ಕೆ ಜಗದಂಬೆ ಮಣಿದಳು. ದಕ್ಷನು ನಡೆಸಿದ ಯಾಗಕ್ಕೆ ಹೋದ ದಾಕ್ಷಾಯಿಣಿಯು ಅಲ್ಲಿ ತನ್ನ ಪತಿನಿಂದೆಯನ್ನು ಕೇಳಲಾರದೆ ಯೋಗಾಗ್ನಿಗೆ ದೇಹವಿತ್ತಳು. ಈಗ ತಪೋಜ್ವಲೆಯಾದ ಮೇನೆಗೆ ಕಾಣಿಸಿಕೊಂಡು ಅವಳ ಮನೋರಥದಂತೆ ಅವಳ ಪುಣ್ಯೋದರದಲ್ಲಿ ಮೂಡುವ ವರ ಕರುಣಿಸಿದಳು. ತಪಸ್ಸಿದ್ಧಿಯಿಂದ ಹರ್ಷಪುಳಕಿತೆಯಾಗಿ ಮೇನೆ ಹಿಂದಿರುಗಿದಳು. ಅರಸ ಆನಂದಿಸಿದ. ಕುಲಕೋಟಿ ನಲಿಯಿತು. ಕೆಲದಿನಕ್ಕೆ ಮೇನೆಗೆ ಬಸುರುನಿಂದು ನವಮಾಸ ತುಂಬಿ ಸುದಿನದಲ್ಲಿ ಅವಳು ಕನ್ಯಾರತ್ನಕ್ಕೆ ತಾಯಿಯಾದಳು. ಜಾತಕರ್ಮಾದಿ ಸಂಸ್ಕಾರಗಳನ್ನು ಪಡೆದ ಶಿಶು ಉಮೆ, ಪಾರ್ವತಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಅವಳ ಬಾಲಲೀಲೆಗಳಲ್ಲಿ

ಪೋಗೆ; ನಗಾಧೀಶಂ ಮಿಗೆ ವಿಸ್ಮಿತನಾಗಿ ಪಾರ್ವತಿಯಂ ಪುಷ್ಪಕಮನೇಱಿಸಿ ಜಯೆ ವಿಜಯೆಯೆಂಬ ವಿಳಾಸಿನಿಯರ್ ಸಹಿತಂ ಗಗನಮಾರ್ಗದೊಳ್ಕೈತಂದು ಹೇಮಕೂಟದೊಳಿಟ್ಟೆದು ಹರನಂ ತೋಱೆ ಗಿರಿರಾಜಂ ಮರಳ್ದು ಪೋಗೆ; ನಿತ್ಯಪೂಜಾಸಕ್ತೆಯಾಗಿ ಗಿರಿಜೆ ಶಿವಪ್ರಸಾದಮಂ ಬಯಸಿ ಭಕ್ತಿಯಿಂದರ್ಚಿಸುತ್ತುಮಿರಲಿತ್ತಲ್ ತಾರಕಾಸುರನ ಬಾಧೆಗಾಱದೆ ಹರಿಬ್ರಹ್ಮೇಂದ್ರಾದಿ ದೇವರ್ಕಳ್ ಕಾದಿ ಸೋಲ್ತು ಮಂತ್ರಾಲೋಚನೆಯೊಳಿರ್ದು ಸುರಗುರುವಂ ಕಳಿಪಿ ಕಾಮನಂ ಕರೆಯಿಸಿ ಹರನ ಚಿತ್ತಮಂ ಚಲಿಯಿಸಿ ಕಡುತಪಮಂ ಕೆಡಿಸೆಂದು ಪೇೞ್, ಹಸಾದಮೆಂದು ತನ್ನ ಚತುರಂಗಬಲಂ ಬೆರಸು ಬಂದು ಹೇಮಕೂಟಮಂ ಸುತ್ತಿ ಮತ್ತೆ ನಂದೀಶ್ವರನ ನಸುಗೋಪದಿಂ ಬಲಮೆಲ್ಲಂ ಮಾಯಮಾಮಾಗೆ, ನಿತ್ಯಪೂಜೆಗೆ ಬರ್ಪ ಪಾರ್ವತೀದೇವಿಯರನುಮತಿಯಿಂ ಪುಷ್ಪಕದ ನೆಲಲೊಳಡಂಗುತ್ತೊಳಗಂ ಪೊಕ್ಕು ಮತಂಗಪರ್ವತಮನೇಱಿಪಂಚಮುಖನಂ ಪಂಚಬಾಣದಿಂದಿ ಸಲೊಡಂ ವಿಷಧರನೆಚ್ಚತ್ತು ಕಣ್ದೆರೆದು ಮುಂದಿರ್ದ ಪಾರ್ವತಿಯಂ ಕಂಡು ಕೌತುಕಂಗೊಂಡು ತಿರುಗಿ ನೋಡಿ ಕಾಮಂಗೆ ಕೋಪಿಸುವಲ್ಲಿಂ ಮುನ್ನ ಭಾಳಲೋಚನಾಗ್ನಿಯಿಂ ಪಂಚಶಕ್ತನುರಿದು ನಿಲೆ ಪರಿತಂದು ಪದತಳದಿಂ ತುಟಿದು ಸ್ಮರಭಸ್ಮಾವಯವನಾಗಿ ದೇವಿಯರಿರವಂ ನೋಡದೆ ಕಂತು ಹರಂ ಅಂತರ್ಧಾನಕ್ಕೆ ಸಂದುದಂ ಗಿರಿಜೆಯಱಿದು ಶೋಕಿಸುವ ರತಿಗಭಯಮನಿತ್ತು ಭರ್ಗನರಸಿ ಯುಗ್ರತಪದೊಳ್ ದಿವ್ಯ ಸಹಸ್ರಾಬ್ದಮಿರೆ ತಪಸ್ತೇಜಂ ಕಪರ್ದಿಯಂ ಮುಟ್ಟಿ ಶಂಕರನಱಿದು ಭೋಂಕನೆ ಬಂದು ಗಿರಿಜೆಯ ಚಿತ್ತಮಂ ಪರೀಕ್ಷಿಸಿ ನಿಜರೂಪಮಂ ತೋಱೆ ರತಿದೇವಿಗೆ ಕಾಮನನನಂಗನಂ ಮಾಡಿಕೊಟ್ಟು ಪಾರ್ವತಿಯಂ ಗಿರಿರಾಜನಲ್ಲಿಗೆ ಕಳಿಪಿ ಕೈಲಾಸಕ್ಕೆ ಬಂದು ಹರಿ ಬ್ರಹ್ಮೇಂದ್ರಾದಿ ದೇವಗಣಂಗಳಂ ಸಕಲಋಷಿಯರಂ ಕೂಡಿಕೊಂಡು ಶೂಲಧರಂ ಶೈಲರಾಜನಲ್ಲಿಗೆ

ತನ್ಮಯರಾದ ಅವರಿಗೆ ಅವಳು ಪರಮಕಾರುಣಿಕೆ ಜಗದಂಬೆ ಎಂಬುದು ಮರೆಯಿತು. ಯುಕ್ತವಯಸ್ಕಳಾದ ಮಗಳನ್ನು ಕಂಡ ತಂದೆಗೆ ಅನುರೂಪ ವರನನ್ನು ಅರಸುವ ತವಕ. ಅದನ್ನರಿತ ದೇವರ್ಷಿ ಅಲ್ಲಿಗೆ ಬಂದು ಗಿರಿರಾಜನಿಂದ ಸತ್ಕೃತನಾದ ನಾರದ ಅರಸನನ್ನು ಎಚ್ಚರಿಸಿ, ಹೇಮಕೂಟದಲ್ಲಿ ಸಮಾಧಿಸ್ಥನಾಗಿ ನಿಜಾವಲೋಕನಮಗ್ನನಾಗಿರುವ ಪರಶಿವನ ಸೇವೆಗೆ ಮಗಳನ್ನು ಕಳುಹಲು ಹೇಳಿಹೋದ. ಅದರಂತೆ ಗಿರಿರಾಜ ಮಗಳನ್ನು ಪುಷ್ಪಕವಿಮಾನದಲ್ಲಿ ಹೇಮಕೂಟಕ್ಕೆ ಕರೆತಂದು ಜಯೆ ಮತ್ತು ವಿಜಯೆ ಎಂಬ ಸಖಿಯರೊಂದಿಗೆ ಅವಳನ್ನು ಹರಸೇವೆಗೆ ಬೆಸಸಿ ಹಿಂದಿರುಗಿದ. ಶಿವಾನುಗ್ರಹವನ್ನು ಬಯಸಿ ಗಿರಿಜೆ ಶಿವಾರಾಧನೆಯಲ್ಲಿ ನಿರತೆಯಾದಳು.

ಈ ಕಡೆ ತಾರಕಾಸುರನ ಹಾವಳಿಯಿಂದ ಜಗತ್ತು ತಲ್ಲಣಗೊಂಡಿತ್ತು. ಅವನನ್ನು ಎದುರಿಸಿದ ಹರಿಬ್ರಹ್ಮಮಹೇಂದ್ರಾದಿಗಳು ಸೋತರು. ಎಲ್ಲ ಲೋಕದ ಜನ ಒಂದೆಡೆ ಸೇರಿ ಯೋಚಿಸಿದರು. ದೇವಗುರುವನ್ನು ಕಳಿಸಿ, ಕಾಮನನ್ನು ಕರೆಸಿ ಹರನ ದೃಢಚಿತ್ತವನ್ನು ಚಲಿಯಿಸಿ ಗಿರಿಜೆಯನ್ನು ಒಲಿಸುವಂತೆ ಮಾಡುವ ಹೊಣೆಯನ್ನು ಹೊರಿಸಿದರು.

ಹರಚಿತ್ತವನ್ನು ಕೆಣಕುವ ಮಣಿಹ ಹಗುರವಾದುದೇನಲ್ಲ. ಆದರೂ ಮದನ ಲೋಕಹಿತಕ್ಕಾಗಿ ತನ್ನನ್ನು ಒಪ್ಪಿಸಿಕೊಳ್ಳಲು ಸಿದ್ಧನಾದ. ಆತ ತನ್ನ ಬಳಗದೊಂದಿಗೆ ಹೇಮಕೂಟಕ್ಕೆ ಆಗಮಿಸಿದ. ಆದರೇನು! ತಪೋಮಗ್ನನಾದ ಪರಶಿವನ ಅಂಗರಕ್ಷಕ ನಂದಿಕೇಶ್ವರ, ಅವನ ನಸುಮುನಿಸಿಗೇ ಮನ್ಮಥನ ಸೇನೆ ದಿಕ್ಕುಪಾಲಾಯಿತು. ಶಿವನನ್ನು

ವಂದು ಪಾರ್ವತಿಯಂ ಮಹೋತ್ಸಾಹದಿಂ ವಿವಾಹಮಾಗಿ ಕೈಲಾಸಕ್ಕೆ ನಡೆತಂದು ಸುಖದೊಳಿರ್ದು ಪುಟ್ಟಿದ ಷಡಾನನನಿಂ ತಾರಕಾಸುರನಂ ತೀರ್ಚಿಸಿ ಸಕಲಲೋಕಕ್ಕೆ ಸಂತಸಮನೊಡರ್ಚಿಸಿ ಕಂತು ಮರ್ದನಂ ಪಂಪಾವಿರೂಪಾಕ್ಷಂ ಸುಖಸಂಕಥಾವಿನೋದದಿಂ ಸಕಲಭಕ್ತರ್ಗೆ ವರಮಂ ಕರುಣಿಸುತಿರ್ದನೆಂಬ ಗಿರಿಜಾಕಲ್ಯಾಣ ಕಥಾಕಾವ್ಯಮಂ ಹಂಪೆಯ ಮಾದರಸರ ಕಾರುಣ್ಯದ ಶಿಶುವಪ್ಪ ಹಂಪೆಯ ಹರಿಹರಂ ಬಿನ್ನಪಂಗೈದಂ.

ಈ ಪ್ರಬಂಧಮಂ ಸಕಲಭಕ್ತರ್ ಸುಚಿತ್ತದಿಂದವಧರಿಪುದದೆಂತೆಂದೊಡೆ-

ಎದುರಿಸುವ ಸಮಯನಿರೀಕ್ಷೆಯಲ್ಲಿದ್ದ ಮದನನಿಗೆ ಗಿರಿಜೆಯ ಮೇನೆ ಬರುತ್ತಿದ್ದುದು ಕಾಣಿಸಿತು. ತುಸು ಧೈರ್ಯ ತಳೆದ ಮನ್ಮಥ ಅಗಜೆಯ ಅನುಮತಿ ಪಡೆದು, ಮೇನೆಯ ಮರೆಯಲ್ಲಿ ತಪೋವನವನ್ನು ಹೊಕ್ಕು ಮತಂಗಪರ್ವತವನ್ನೇರಿದ. ಅಲ್ಲಿ ತನ್ನ ಸುಮಶರವನ್ನು ಶಿವನಿಗೆ ಗುರಿಯಿಟ್ಟ. ಶಿವನ ಪರಿಚರ್ಯೆಯಲ್ಲಿ ಗಿರಿಜೆ ಮರುಳಾಗಿದ್ದಳು. ಕಾಮಶರಕ್ಕೆ ಅಳುಕಿದ ಹರನ ಮನ ಕಣ್ದೆರೆಯಿಸಿತು. ಎದುರಿಗೆ ಗಿರಿಸುತೆಯ ಅಸೀಮ ಸೌಂದರ್ಯರಾಶಿ! ಕೌತುಕಗೊಂಡ ಶಿವನ ಕಣ್ಣು ತಪೋಭಂಗಕಾರಣವನ್ನು ಅರಸುತ್ತಿತ್ತು. ಎದುರಿಗೆ ಮನ್ಮಥ ಶರಸಂಧಾನದಲ್ಲಿ ತೊಡಗಿದ್ದ. ಶಿವನ ಮುನಿಸು ಮುಂಗುಡಿಯಿಡುವ ಮೊದಲೇ ಮದನ ಕಾಡ್ಗಿಚ್ಚಿಗೆ ಸಿಕ್ಕ ಹುಲ್ಲುಮೆದೆಯಂತೆ ಹರನ ಹಣೆಗಣ್ಣ ಬೆಂಕಿಗೆ ಬಲಿಯಾಗಿದ್ದ. ಹರ ಸ್ಮರಭಸ್ಮವನ್ನು ಮೈಗೆ ಲೇಪಿಸಿಕೊಂಡು ಮರೆಯಾದ. ಅರೆಕ್ಷಣದಲ್ಲಿ ಆಗಿಹೋದ ಆಕಸ್ಮಿಕಕ್ಕೆ ಗಿರಿಜೆ ಮರುಗಿದಳು. ರತಿಯನ್ನು ಸಂತೈಸಿ ಅವಳಿಗೆ ಅಭಯವನ್ನಿತ್ತಳು. ತನ್ನ ಭೌತಿಕ ಸೌಂದರ್ಯಕ್ಕೆ ಹೇಸಿದಳು. ಶಿವಕೃಪೆಗೆ ಯೋಗ್ಯವಾದ ನಿಯಮ ತಳೆದಳು. ಉಗ್ರ ತಪೋಮಗ್ನೆಯಾದಳು.

ಗಿರಿಜೆಯ ತಪೋಜ್ವಾಲೆಗೆ ಶಿವ ಮಣಿದ. ಅವಳನ್ನು ಪರೀಕ್ಷಿಸಿ ಹರಸಲು ನಿರ್ಧರಿಸಿದ. ವಟುವಾಗಿ ಬಂದು ಅವಳನ್ನು ಬಗೆಬಗೆಯಾಗಿ ಪರೀಕ್ಷಿಸಿದ. ಅವಳ ಅಚಲಭಕ್ತಿಗೆ ಒಲಿದು ಶಿವ ಅವಳನ್ನು ತಕ್ಕೈಸಿ ಹರಸಿದ. ಕಾಮನನ್ನು ಅನಂಗನಾಗಿ ಜೀವಿಸುವಂತೆ ವರವಿತ್ತು ರತಿಯನ್ನು ಸಂತೈಸಿದ, ಪಾರ್ವತಿಯನ್ನು ಗಿರಿರಾಜನ ಬಳಿಗೆ ಕಳಿಸಿಕೊಟ್ಟ.

ಸುದ್ದಿ ತಿಳಿದ ಪರ್ವತರಾಜದಂಪತಿಗಳು ಹರ್ಷಿಸಿದರು. ಪರಮಶಿವ ಋಷಿಗಣ, ಪ್ರಮಥತಿಂತಿಣಿ, ದೇವಗಣದೊಂದಿಗೆ ಶೈಲರಾಜನಲ್ಲಿಗೆ ಬಂದು ಗಿರಿಜೆಯ ಕೈಹಿಡಿದ. ಗಿರಿಜಾಕಲ್ಯಾಣ ಲೋಕಕಲ್ಯಾಣಕ್ಕೆ ಹಿನ್ನೆಲೆಯಾಯಿತು. ಶಿವಕುಮಾರ ಕಾರ್ತಿಕೇಯನಿಂದ ತಾರಕವಧೆಯಾಗಿ ಲೋಕ ನೆಮ್ಮದಿಯಿಂದ ನಲಿಯಿತು.

ಈ ಗಿರಿಜಾಕಲ್ಯಾಣ ಕಥಾಕಾವ್ಯವನ್ನು ಬರೆದ ಕವಿ ಹಂಪೆಯ ಮಾದರಸರ ಕಾರುಣ್ಯದ ಶಿಶುವಾದ ಹರಿಹರ. ಭಕ್ತ ಜನ ಇದನ್ನು ಸುಚಿತ್ತದಿಂದ ಓದಿ ಆನಂದಿಸಲಿ.

ಪ್ರಥಮಾಶ್ವಾಸಂ

ಹೈಮಾಚಲವರ್ಣನಂ

ಶ್ರೀಮಚ್ಛೈಲೇಂದ್ರಪುತ್ರೀ ಗುರುತರಹೃದಯಕ್ಷೀರವಾರಾಶಿಚಂದ್ರಂ
ವ್ಯೋಮಾರ್ಕೇಂದುಕ್ಷಮಾತ್ಮಾನಲಜಲತಪಮಾನಾಷ್ಟಮೂರ್ತಿಪ್ರಸಿದ್ಧಂ ।
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕಮಾಣಿಕ್ಯಮೌಳಿ
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥ ೧

ಗೌರೀ ಪಾದಾಂಗುಲೀಕೋರಕಮೆಸೆವ ಕರಂ ಪಲ್ಲವಂ ಪುಷ್ಪವೃಂತಾ
ಕಾರಂ ಮಂದಸ್ಮಿತಂ, ಶಾಖೆಗಳಮರ್ದ ಭುಜಾನೀಕಮಾಸ್ಯಂ ಫಲಂ ಶ್ರೀ ।
ಸಾರಂ ತಾನಾದ ಪಂಪಾಪುರದರಸ ವಿರೂಪಾಕ್ಷ ಕಲ್ಪಾಘ್ರಿಪಂ ವಿ
ಸ್ತಾರಂಬೆತ್ತೀಗೆ ಸದ್ಭಕ್ತಿಯನೆಮಗಮೃತಪ್ರಾಯೆಯಂ ಪ್ರೀತಿಯಿಂದಂ ॥ ೨

ಶ್ರೀ ಹೇಮಾದ್ರೀಂದ್ರಚೂಡಸ್ಥಿರಕರಣಸಮಾರೂಢ ಪದ್ಮಾಸನಸ್ಥಂ
ಕೋಹಂ ಸೋಹಂಗಳೆಂಬಾ ಗಜಿಬಜಿ ಪುಗದಾನಂದಸಂವಿತ್ತು ಕಂದ ।
ರ್ಪಾಹಂಕಾರಪ್ರವಿಧ್ವಂಸನಕರನಿಟಿಲಾಕ್ಷಂ ಶಿವಂ ಪಾರ್ವತೀಶಂ
ನೇಹಂ ಕೈಮಿಕ್ಕು ಪಂಪಾಪುರಪತಿ ದಯೆಯಿಂ ನೋಡಿ ರಕ್ಷಿಕ್ಕೆ ನಮ್ಮಂ ॥ ೩

೧. ಹೈಮವತಿಯ ಪ್ರೇಮಲಹೃದಯವೆಂಬ ಪಾಲ್ಗಡಲಿಗೆ ಚಂದ್ರನೂ, ನೆಲ-ನೀರು-ಬೆಂಕಿ-ಗಾಳಿ-ಬಯಲು-ರವಿ-ಶಶಿ ಮತ್ತು ಒಡೆಯರೆಂಬ ಎಂಟು ತನು ಮೂರ್ತಿಗಳಿಂದ ಪ್ರಸಿದ್ಧ ಸ್ವರೂಪನೂ, ಸಕಲ ದೇವತೆಗಳ ಮಣಿಮಯಕಿರೀಟಗಳ ಕಾಂತಿಗಳಿಂದ ಬೆಳಗುವ ಪಾದಕಮಲವುಳ್ಳವನೂ ಆದ ಪಂಪಾಪುರದರಸ ಶ್ರೀ ವಿರೂಪಾಕ್ಷಸ್ವಾಮಿಯು ಎಲ್ಲರಿಗೂ ಒಲಿದು ಸದ್ಭಕ್ತಿಯನ್ನು ಕರುಣಿಸಲಿ. ೨. ಈ ವಿರೂಪಾಕ್ಷಕಲ್ಪಕುಜಕ್ಕೆ ಗೌರೀದೇವಿಯ ಪಾದಾಂಗುಲಿಗಳೇ ಮೊಗ್ಗು, ಹೊಳೆವ ಕರಗಳೇ ಚಿಗುರು, ಮಂದಸ್ಮಿತ ಹೂ-ಗೊಂಚಲು, ದಶಭುಜ ಶಾಖೆಗಳು, ಮುಖ ಕಮಲವೇ ಶ್ರೀಫಲ, ಆದ್ದರಿಂದ ಅಂತಹ ಸಂಪತ್ಕರವಾದ ಸೌಭಾಗ್ಯವೇ ತಾನಾಗಿರುವ, ಹಂಪೆಯ ವಿರೂಪಾಕ್ಷ ಸ್ವಾಮಿಯೆಂಬ ಕಲ್ಪಕುಜವು ಅಮೃತಕ್ಕೆ ಸಮವಾದ ವಿಪುಲ ಸದ್ಭಕ್ತಿಯನ್ನು ಕರುಣಿಸಲಿ. ೩. ಹಿಮವತ್ಪರ್ವತದ ಗೌರೀಶಂಕರ ಶಿಖರ ಶ್ರೀಮತ್ಕೈಲಾಸದಲ್ಲಿ ಪದ್ಮಾಸೀನನೂ, 'ನಾನು ಯಾರು' 'ಅವನೇ ನಾನು' ಎಂಬ ವಾದ ಗಳಿಗೆ ದೂರ ನಾಗಿ ಕೇವಲಾನಂದಸ್ವರೂಪನೂ, ಮನ್ಮಥನನ್ನು ದಹಿಸಿದ ಹಣೆಗಣ್ಣುಳ್ಳವನೂ ಆದ ಪಾರ್ವತೀಪತಿಯಾದ ಪಂಪಾಪತಿಯು ಕೃಪೆಯಿಟ್ಟು ನಮ್ಮನ್ನು ರಕ್ಷಿಸಲಿ.

ಮಂಗಳಮೂರ್ತಿ ಮಾನಿನಿ ಮಹೋಜ್ವಳೆ ಮಾನ್ಯೆ ಮಹಾಮಹೇಶನ
ರ್ಧಾಂಗಿ ಮಹಾವಿರಾಜಿತೆ ಮಹಾಶಿವಭಕ್ತೆ ಮಹಾಪತಿವ್ರತೋ ।
ತ್ತುಂಗೆ ಮಹಾತ್ರಿಲೋಚನೆ ಮಹಾನಿಧಿ ತನ್ನ ವಿವಾಹವರ್ಣನಾ
ಸಂಗತಿಯೆಂದು ಮತ್ಕೃತಿಗೆ ಪಾರ್ವತಿ ಮಾಬಿಕ್ಕಿ ಮಹೋತ್ಸವಂಗಳಂ ॥ ೪

ಎನ್ನೀ ಕಾವ್ಯಕ್ಕೆ ನಿರ್ವಿಘ್ನದಿನತುಳನವೀನಾರ್ಥವಾಕ್ಯಪ್ರಸನ್ನೋ
ತ್ಪನ್ನಾಲಂಕಾರಮಂ ಕೂಡುಗೆ ವಿಪುಳಕಪೋಳಸ್ಥಳಾಂತಸ್ಥಳೀ ಸಂ ।
ಭಿನ್ನೋದ್ಯದ್ದಾನಧಾರಾಪ್ರಬಳಪರಿಮಳಾಸಕ್ತಭೃಂಗಾವಳೀ ಸಂ
ಪನ್ನ ಪ್ರೋದ್ಭೂತರುಂಕಾರಿತರವಮುದಿತಾನಂದವೇಶಂ ಗಣೇಶಂ ॥ ೫

ಪುಳಕಮನೆಚ್ಚಿಸುತ್ತೆ ಹರನಂ ಪರಿದಪ್ಪುತೆ ಸಂತಸಂಗಳಂ
ಬಳೆಯಿಸುತುಂ ಭವಾನಿಯ ಪಯೋಧರಮಂ ನಲಿದುಂಡು ವಕ್ತ್ರಮಂ ।
ದಲಮನಲರ್ಚುತುಂ ನಗುವ ಹೊಂಗುವ ಹಿಗ್ಗುವ ಪೊಣ್ಮುವುಣ್ಮುವ
ಗ್ಗಳಿಸುವ ಕಾಡುವಾಡುವ ಷಡಾನನನೀಕೃತಿಗೀಗೆ ರಾಗಮಂ ॥ ೬

ಶಿವನ ಮನೋಹರಂ ಶಿವನ ಪುಣ್ಯಫಲಂ ಶಿವನಾಪ್ತಸಂಕುಳಂ
ಶಿವನ ವಿಲೋಚನಂ ಶಿವನ ಗೋತ್ರಬಲಂ ಶಿವನೂರ್ಜಿತೋಜ್ವಲಂ ।
ಶಿವನ ಸುಖಂ ಸದಾಶಿವನ ಸರ್ವಮುಖಂ ಶಿವಭಕ್ತರೆನ್ನ ಕಾ
ವ್ಯವನತಿಸಮ್ಮದಂ ಬೆರಸಿ ಪೊರ್ದುಗೆ ತಿರ್ದುಗೆ ತಾಟ್ಪೆದಲ್ಕುಜೆಂ ॥ ೭

೪. ಮಂಗಳಕರ ಸ್ವರೂಪವುಳ್ಳವಳು, ಮಾನಶೀಲೆ, ಮಹಾತೇಜಸ್ವಿನಿ, ಸರ್ವಮಾನ್ಯೆ, ಮಹಾದೇವನ ಅರ್ಧಾಂಗಿ, ಮಹಾ ಶಿವಭಕ್ತೆ, ಮಹಾ ಪತಿವ್ರತಾಶಿರೋಮಣಿ, ತ್ರಿಲೋಚನೆ, ಮಂಗಳಗಳಿಗೆ ಮಹಾನಿಧಿಯಾದ ಪಾರ್ವತೀದೇವಿಯು ತನ್ನ ವಿವಾಹ ವರ್ಣನೆಯ ಪ್ರಸಂಗವೆಂದು ನನ್ನ ಕೃತಿಗೆ ಉತ್ಕರ್ಷವನ್ನು ದಯೆಗೆಯ್ಯಲಿ. ೫. ತನ್ನ ವಿಶಾಲವಾದ ಕಪೋಲಗಳು, ಅಲ್ಲಿ ಉಕ್ಕಿ ಬರುತ್ತಿರುವ ಮದೋದಕ ಧಾರೆಗಳು, ಅವುಗಳ ಸುಗಂಧಕ್ಕೆ ಅರಸಿ ಬಂದ ದುಂಬಿಗಳು, ಅವುಗಳ ಝೇಂಕಾರಕ್ಕೆ ಒಲಿದು ಆನಂದತುಂದಿಲನಾಗಿರುವ ಗಣಪತಿಯು ಈ ಕಾವ್ಯಕ್ಕೆ ನಿರ್ವಿಘ್ನತೆ, ನವೀನಾರ್ಥ ವಾಕ್ಯ ಪ್ರಸನ್ನತೆಯಿಂದ ಕೂಡಿದ ಕಾವ್ಯಾಲಂಕಾರ ಸೌಭಾಗ್ಯವನ್ನು ಕರುಣಿಸಲಿ. ೬. ತನ್ನ ಆಲಿಂಗನದಿಂದ ಪರಮೇಶ್ವರನಿಗೆ ರೋಮಾಂಚವನ್ನು ಉಂಟುಮಾಡಿ ಸಂತೋಷ ಗೊಳಿಸುತ್ತ, ಗಿರಿಜೆಯ ಮೊಲೆಯುಂಡು ಪ್ರಸನ್ನ ಮುಖಿಮಂಡಲವನ್ನು ಅರಳಿಸಿ ಹಸನ್ಮುಖನಾಗಿ ಉಬ್ಬಿ ಹಿಗ್ಗಿ ನಲಿದು ನರ್ತಿಸಿ ಹಾಡಿ ಆನಂದಮೂರ್ತಿಯಾಗಿರುವ ಷಣ್ಮುಖಸ್ವಾಮಿಯು ಈ ಕೃತಿಗೆ ಶ್ರೇಯಸ್ಸನ್ನುಂಟುಮಾಡಲಿ. ೭. ತಮ್ಮ ನಿರ್ಮಲವಾದ ಭಕ್ತಿಯಿಂದ ಶಿವನ ಮನಸ್ಸನ್ನು ಸೂರೆಗೊಂಡವರೂ, ತಮ್ಮ ಸತ್ಕರ್ಮಗಳಿಂದ ಶಿವನ ಪುಣ್ಯಫಲದಂತೆ ಪ್ರಕಾಶಿಸುವವರೂ, ಶಿವನಿಗೆ ಆಪ್ತರೂ, ಶಿವನಿಗೆ ಕಣ್ಣಾಗಿರುವವರೂ, ಶಿವಕುಲಕ್ಕೆ ಸೇರಿದವರೂ, ಶಿವಾವೇಶದಿಂದ ಉಜ್ವಲರೂ, ಶಿವಸುಖಸ್ವರೂಪರಾಗಿ,

ಘನಕವಿತಾವಿಳಾಸದೊಳೆ ಸಂದ ಮಯೂರನ ರೇಖೆ ಕಾಳಿದಾ
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧನಾಶು ಕೇಶಿರಾ ।
ಜನ ಬಗೆಯುದ್ಭಟಯ್ಯನ ಗಭೀರತೆ ಮಲ್ಹಣನೇಳ್ಗೆ ಭೋಜರಾ
ಜನ ಜಸಮೆನ್ನ ಕಾವ್ಯರಸದೊಳ್ ನಲಿವಿಂ ನೆಲಸಿರ್ಕೆ ಸಂತತಂ ॥ ೮

ಚತುರ ಚತುರ್ಮುಖನೆಲ್ಲಾ
ಶ್ರುತಿಗಳನೊಲವಿಂದೆ ಕಲ್ತ ಶಿವನ ವಿವಾಹೋ ।
ನ್ನತಿಯಾ ಕೃತಿಯೆಂದೆನೆ ಭಾ
ರತಿಯೆನಗನುಕೂಲೆಯಾಗದಿರಲಣ್ಮವಳೇ ॥ ೯

ಕೊಂಡಾಡುಗೆ ಕಲ್ತೋದುಗೆ
ಮುಂಡಾಡುಗೆ ಮುದ್ದಿಸುಗೆ ಮರಲ್ದಪ್ಪುಗೆ ಕೈ ।
ಕೊಂಡೀ ಕಾವ್ಯಮನಗಜೆಯ
ಗಂಡನಲಂಪಿಂದೆ ಹಂಪೆಯ ವಿರೂಪಾಕ್ಷಂ ॥ ೧೦

ವ॥ ಎಂದಿಂತು ಬೇಡಿಕೊಳ್ವಲ್ಲಿ

ಅತುಳತರಾರ್ಥಮರ್ಥದನುವೃತ್ತಿ ಪದಂ ಪದದಿಚ್ಛೆ ಬಂಧಮೂ
ರ್ಜಿತಪದಬಂಧ ಸಂಧಿ ನವರೀತಿ ಸುರೀತಿ ಗುಣಂ ಸದ್ಯಕ್ಕಲಂ ।
ಕೃತಿ ಸದಲಂಕೃತಿಪ್ರತಿಮಮೊಪ್ಪುವ ಭಾವಮನೂನಭಾವದು
ನ್ನತರಸಮೆಂದು ಸತ್ಕವಿಗಳಾಲಿಸೆ ಪೇೞ್ದಪೆನೀ ಪ್ರಬಂಧಮಂ ॥ ೧೧

ಸದಾಶಿವನ ಸರ್ವಸ್ವವೂ ಆಗಿರುವ ಶಿವಭಕ್ತರು ನನ್ನ ಕಾವ್ಯವನ್ನು ಆದರದಿಂದ ಓದಿ, ತಿದ್ದಿ, ಆತ್ಮೀಯತೆಯಿಂದ ತಮ್ಮದನ್ನಾಗಿಸಿಕೊಳ್ಳಲಿ. ೮. ಶ್ರೇಷ್ಠವಾದ ಕವಿತಾವಿಲಾಸವನ್ನು ಮೈಗೂಡಿಸಿಕೊಂಡಿರುವ ಮಯೂರ ಕವಿಯ ಕಾವ್ಯಪದ್ಧತಿ, ಕಾಳಿದಾಸನ ರಸೋತ್ಕರ್ಷ ಅಥವಾ ರಸಾಭಿವ್ಯಕ್ತಿ, ಬಾಣಕವಿಯ ಮೃದುನುಡಿಗಳು, ಹಲಾಯುಧ ಕವಿಯ ಪ್ರತ್ಯುತ್ಪನ್ನಮತಿ, ಕೇಶಿರಾಜನ ರೀತಿ, ಉದ್ಭಟ ಕವಿಯ ಗಾಂಭೀರ್ಯ, ಮಲ್ಹಣ ಕವಿಯ ವೈಶಿಷ್ಟ್ಯ, ಭೋಜರಾಜನ ಯಶಸ್ಸುಗಳೆಲ್ಲವೂ ನನ್ನ ರಸಕಾವ್ಯವಾಹಿನಿಯಲ್ಲಿ ಯಾವಾಗಲೂ ನೆಲೆಸಿರಲಿ. ೯. ಚತುರಮತಿ ಚತುರ್ಮುಖಬ್ರಹ್ಮನು ಪರಶಿವನಿಂದ ಎಲ್ಲ ಶ್ರುತಿಗಳನ್ನೂ ಭಕ್ತಿಯಿಂದ ಕಲಿತ. ಅಂಥ ಶಿವನ ವಿವಾಹ ಮಹೋತ್ಸವವನ್ನು ಕುರಿತ ಕೃತಿ ಇದು, ಅಂದಮೇಲೆ ಆ ಬ್ರಹ್ಮನ ಸತಿ ವಾಗ್ದೇವಿಯು ನನಗೆ ಅನುಕೂಲವಾಗದಿರುವಳೆ? ೧೦. ಅಗಜೆಯ ಗಂಡನಾದ ಹಂಪೆಯ ವಿರೂಪಾಕ್ಷನು ಈ ಕಾವ್ಯವನ್ನು ಪ್ರೀತಿಯಿಂದ ಕೈಗೆತ್ತಿಕೊಂಡು ಕೊಂಡಾಡಲಿ, ಕಲಿತೋದಲಿ, ಮುಂಡಾಡಲಿ, ಮುದ್ದಿಸಲಿ, ಮತ್ತೆ ಮತ್ತೆ ಅಪ್ಪಿಕೊಳ್ಳಲಿ. ೧೧. ಈ ಕಾವ್ಯದಲ್ಲಿ ಅನುಪಮವಾದ ಅರ್ಥ, ಆ ಅರ್ಥಕ್ಕೆ ಹೊಂದಿಕೆಯಾದ ಪದ, ಪದದ ಇಚ್ಛೆಗೆ ಅನುಗುಣವಾದ ಬಂಧ, ಆ ಶ್ರೇಷ್ಠ ಪದಬಂಧಕ್ಕೆ ಸಂಬಂಧಿಸಿದ ನೂತನ ರೀತಿ, ಒಳ್ಳೆಯ ರೀತಿಗೆ ಅನುಗುಣವಾದ ಅಲಂಕಾರಗಳು, ಆ ಅಲಂಕಾರಗಳಿಗೆ ಒಪ್ಪುವ ಭಾವ, ಆ ಭಾವದ ಉನ್ನತ ರಸ ಹೀಗೆ ಹೊಂದಿಕೊಂಡಿವೆ. ಸತ್ಕವಿಗಳು ಇಂಥ ಈ

ಕಂದಂಗಳಮೃತ ಲತಿಕಾ
ಕಂದಂಗಳನೂನವಾಕ್ಯಫಲ ವಿಲಸನ್ಮಾ ।
ಕಂದಂಗಳ್ ತನಿರಸದು
ಕ್ಕುದಂಗಳ್ ಸೊಗಯಿಸಿರ್ಪುವೀ ನುತಕೃತಿಯೊಳ್ ॥ ೧೨

ಪದ್ಯಂಗಳ್ ನವರಸ ನಿರ
ವದ್ಯಂಗಳ್ ಸುಜನಸಂಕುಳಕ್ಕೆ ನಿತಾಂತಂ ।
ಹೃದ್ಯಂಗಳ್ ಧಾರಿಣಿಗತಿ
ಚೋದ್ಯಂಗಳ್ ಮೆಱೆಯುತಿರ್ಪುವೀ ಸತ್ಕೃತಿಯೊಳ್ ॥ ೧೩

ಕಾವ್ಯಂ ತಾನಿದು ನವರಸ
ಸೇವ್ಯಂ ಗಿರಿಜಾಧಿನಾಥನುರುತರಕರ್ಣ ।
ಶ್ಯಾವ್ಯಂ ವಸುಧಾತರದೊಳ್
ನವ್ಯಂ ಭೂತೇಶ ಭಕ್ತಜನತಾ ಭಾವ್ಯಂ ॥ ೧೪

ಪೊಸತಿದು ಪಾವನಮಿದು ರಂ
ಜಿಸುವ ಮಹಾನರ್ಘ್ಯಮಿಂತಿದೆಂಬೀ ಜಸದಿಂ ।
ರಸವತ್ಕಾವ್ಯಂ ತಾಂ ರಾ
ಜಸಭೆ ಬ್ರಹ್ಮಸಭೆ ದೇವಸಭೆಗೆಸೆದಿರ್ಕುಂ ॥ ೧೫

ವ॥ ಅದು ಕಾರಣದಿಂ

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರ ವಿಶ್ರಾಮದೇಶಂ ।
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತುಪೇೞ್ವೆಟ್ಟಿಯಿಂದಂ
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ॥ ೧೬

ಕಾವ್ಯವನ್ನು ಅಕ್ಕರೆಯಿಂದ ಕೇಳುವಂತೆ ಹೇಳುತ್ತೇನೆ. ೧೨. ಇಲ್ಲಿರುವ ಕಂದ ಪದ್ಯಗಳು ಅಮೃತಲತೆಯ ಮೂಲ ಕಂದಗಳು, ಶ್ರೇಷ್ಠ ವಾಕ್ಯಫಲ ವಿಲಾಸದ ಮಾವಿನ ಫಲಗಳು, ಅವು ಹೊಸ ಹೊಸ ರಸದ ಉತ್ಕರ್ಷವನ್ನು ಉಕ್ಕಿಸಿ ಬೆಳಗುತ್ತಿವೆ. ೧೩. ಈ ಸತ್ಕೃತಿಯಲ್ಲಿರುವ ಪದ್ಯಗಳು ನವರಸಗಳನ್ನು ಉಕ್ಕಿಸುವಲ್ಲಿ ಸಮರ್ಥವಾದವುಗಳು. ಸಹೃದಯರಿಗೆ ಅತ್ಯಂತ ಪ್ರಿಯವಾದವುಗಳು. ಲೋಕವೃತ್ತವನ್ನು ಚಮತ್ಕಾರವಾಗಿ ವ್ಯಕ್ತಗೊಳಿಸತಕ್ಕವುಗಳು. ೧೪. ನವರಸ ರುಚಿರವಾದ ಈ ಕಾವ್ಯವು ಸಹೃದಯರು ತಪ್ಪದೇ ಓದಿ ಅನುಸರಿಸತಕ್ಕದ್ದು, ಗಿರಿಜಾಧವನಾದ ಪರಶಿವನ ಲೀಲಾವಿಲಾಸದಿಂದ ಕೂಡಿರುವ ಈ ನೂತನ ಕೃತಿ ವಿಶ್ವದಲ್ಲಿನ ಸಮಸ್ತ ಶಿವಭಕ್ತರೂ ಪಠಿಸಿ ನಲಿಯತಕ್ಕದ್ದು. ೧೫. ಇದು ಹೊಸತು, ಪರಶಿವನ ಲೀಲಾವರ್ಣನವಾದ್ದರಿಂದ ಪವಿತ್ರ, ಆದ್ದರಿಂದಲೇ ಅಮೂಲ್ಯವಾದದ್ದು. ಈ ಎಲ್ಲ ಕಾರಣಗಳಿಂದ ರಸೋಜ್ವಲವಾದ ಈ ಕಾವ್ಯವು ರಾಜಸಭೆ, ಬ್ರಹ್ಮಸಭೆ ಹಾಗೂ ದೇವಸಭೆಗಳಲ್ಲಿಯೂ ಕೂಡ ಗೌರವಾರ್ಹವಾಗಿದೆ. ೧೬. ಪ್ರಸಾದಗುಣದಿಂದ ಲಲಿತಮಧುರವೂ ನವರಸವೈಭವಯುತವೂ ಪುಣ್ಯಕರವೂ ಆದ ಈ ಶುಭಕಾವ್ಯವು ಶಾರದೆಯ ನಿವಾಸಸ್ಥಾನ; ವಿವೇಕ-ಔಚಿತ್ಯಗಳ ಕಡಲು,

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ ।
ಕರ ಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಳ ಸೇವ್ಯಂ ನವ್ಯಂ ॥ ೧೭

ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತ ಮು
ಗ್ಧೆಯ ಕಡುನೇಹದಂತಮೃತದಂತೆ ವಸಂತಕನಂತೆ ಪುಷ್ಪಮಾ ।
ಲೆಯ ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ
ಪೆಯ ಹರಿದೇವನೊಪ್ಪಿರೆ ನಿರ್ಮಿರ್ಚಿದ ಕಾವ್ಯಮಿಳಾಜನೋತ್ಸವಂ ॥ ೧೮

ನೆರೆಯೆ ಕುತರ್ಕದಿಂದರೆದು ಸಣ್ಣಿಸಿ ನುಣ್ಣಿಸಿಯಂತದಿಂದು ಪೋ
ದರ ಕೃತಿಯೊಳ್ಳಿತನ್ಯಕೃತಿ ಪೊಲ್ಲದಿದೆಣ್ಣಿಗೆ ಬೆಣ್ಣೆ ಸಣ್ಣನೆಂ ।
ಬರ ನುಡಿಬೇಡ ಪೇಳ್ವಿನತಿ ಭಾವರಸಾರ್ಥದೊಳಾತ್ತಛಂದಮಂ
ಪರಸುಖವ್ಯಂದಮಂ ಸೊಗಯಿಪಂದಮನೀ ಸುಕರಪ್ರಬಂಧಮಂ ॥ ೧೯

ನವರಸಮತಿಭಾವಾರ್ಥಂ
ನವೀನಪದಭರಿತಮಿಂತಿದೆನೆ ಸತ್ಕೃತಿಯಂ ।
ತವೆ ಪೇಟ್ಟುದು ಪೇಬದೊಡೇಂ
ಕವರ್ವರೆ ಕೋಪಿಪರೆ ನಿಂದಿಪರೆ ದಂಡಿಪರೇ ॥ ೨೦

ಸಂಸಾರಕ್ಕೆ ವಿಶ್ರಾಂತಿಸ್ಥಾನ, ದಿವ್ಯಜ್ಞಾನದ ಉಪದೇಶಪಥ; ಆದ್ದರಿಂದಲೇ ನಿರತಿಶಯವಾದ ಕವಿಕರ್ಮವೆನಿಸಿರುವ ಈ ಕಾವ್ಯವನ್ನು ಪ್ರೀತಿಯಿಂದ ಪಠಿಸುವುದರಿಂದ "ಕಾವ್ಯಂ ಕಲ್ಪಾಂತರಸ್ಥಾಯಿ" ಎಂಬ ನುಡಿ ದಿಟವಾಗಿದೆ. ೧೭. ಕಲ್ಪವೃಕ್ಷದಂತೆ ಇಷ್ಟಾರ್ಥವನ್ನು ಕೊಡುವ, ಸತ್ಪುರುಷರ ಸಂಪತ್ತಿನಂತೆ ಎಲ್ಲರಿಗೂ ಆನಂದಕರವಾದ, ಕಮಲದಂತೆ ಆಹ್ಲಾದಕರವಾದ, ಅಮೃತದಂತೆ ಮಧುರವಾದ, ಚಂದ್ರನ ಚಂದ್ರಿಕೆಯಂತೆ ಹೃದಯಂಗಮವಾದ ಹಂಪೆಯ ಹರಿಹರನ ಈ ನೂತನ ಕಾವ್ಯವು ಎಲ್ಲ ಸಹೃದಯರೂ ಸೇವಿಸಲು ಯೋಗ್ಯವಾದದ್ದು. ೧೮. ಹಂಪೆಯ ಹರೀಶ್ವರ ರಚಿಸಿರುವ ಪವಿತ್ರ ಕಾವ್ಯವು ಹಿತವಚನದಂತೆ, ಪುಣ್ಯಪುಂಜದಂತೆ, ಚಂದ್ರಮನಂತೆ, ಒಲಿದುಬಂದ ಮುಗ್ಧೆಯ ನಲ್ಮೆಯಂತೆ, ವಸಂತ ಋತುವಿನಂತೆ, ಸುಮಮಾಲೆಯ ನವಸೌರಭದಂತೆ, ಮಂದ ಮಾರುತದಂತೆ, ಅರಸಂಚೆಯಂತೆ ಮನೋಹರವಾದದ್ದು. ಆದ್ದರಿಂದಲೇ ಇದು ಇಳೆಯ ಜನೋತ್ಸವಕ್ಕೆ ಪಾತ್ರವಾಗಿದೆ. ೧೯. ಏನೋ ಕುತರ್ಕಮಾಡಿ ಸಂಗ್ರಹಿಸಿ, ಹೋದವರ ಕೃತಿ ಒಳ್ಳೆಯದು, ಇಂದಿನವರ ಕೃತಿ ಸಲ್ಲದು! ಎಣ್ಣೆಗಿಂತ ಬೆಣ್ಣೆ ಸಣ್ಣದೆಂಬಂತೆ ಉತ್ತಮ ಕೃತಿಯನ್ನು ಹೀಗಳೆದು ಕನಿಷ್ಠ ಕೃತಿಯನ್ನು ಎತ್ತಿ ಹಿಡಿವವರ ಮಾತು ಬೇಡ! ಪ್ರಕೃತ ಸುಕರಪ್ರಬಂಧವು ಶ್ರೇಷ್ಠ ರಸಭಾವ, ಛಂದಸ್ಸುಳ್ಳದ್ದು, ಅಲೌಕಿಕಾನಂದವನ್ನು ಉಂಟು ಮಾಡುವ ಈ ಪ್ರಬಂಧವನ್ನು ಆದರದಿಂದ ಆಲಿಸಬೇಕು. ೨೦. ಈ ಕಾವ್ಯವು ನವರಸಭರಿತವಾದದ್ದು, ಅತಿ ಭಾವಾರ್ಥಗರ್ಭಿತವಾದದ್ದು, ನೂತನ ಪದಗುಂಫಿತವಾದದ್ದು ಎಂದ ಮೇಲೆ ಇಂಥ ಸತ್ಕೃತಿಯನ್ನು

ಕೇಳಲೊಡಂ ಕವಿ ಸವಿಯೊಳ
ಗಾಡಿದೊಡಂ ತನ್ಮನಂ ಮುಟುಂಗದೊಡಂ ಸೌ ।
ಖ್ಯಾಲಂಬಿಯೆನಿಪ ಚಿತ್ತಂ
ಲೀಲೆಯೊಳವಗಾಹಮಿರದೊಡದು ಸತ್ಕೃತಿಯೇ ॥ ೨೧

ವ॥ ಅಂತುಮಲ್ಲದೆಯುಂ

ಓದಿದೊಡೆ ಕಲ್ಲಮಾಲೆಯ
ನಾದಂ ಕರ್ಬೊನ್ನ ಕಡಲೆ ವಾದಿಸೆ ರಸಮಂ ।
ಸೋನಸೆಯುರ್ಕಿನ ಪುಡಿಯೆನಿ
ಪಾ ದುಷ್ಕವಿತೆಗಳನೆಣಿಸಲೇಕೀ ಕೃತಿಯೊಳ್ ॥ ೨೨

ಹಜೆಗವಿಗಳ ಕಬ್ಬಂಗಳ
ಹೊಜಗಟೆಯಕ್ಕರದ ಹೊಲಿಗೆ ಬರ್ಚದೊಡೆಲ್ಲಂ ।
ಬಜೆತಾಜೆಗಬೀಜೆಗ ತಿ
ತ್ತಲಿ ತತ್ತಲಿ ತಿಕ್ಕಸಕ್ಕಮಸ್ತವ್ಯಸ್ತಂ ॥ ೨೩

ಪೆಬಿವನ ಕಣ್ಗಳಂಧಕನ ಕಾಲ್ಗಳಿವಿಂತೊಡಗೂಡಿ ಗಾವುದಂ
ದಳರ್ದೊಡೆ ಬಲ್ದಿದಂ ನಡೆದ ಮಾಟ್ಕಿಯೆನಿಪ್ಪುದೆ ಬೇಡ ಮಾತಿನಲೇ ।
ಅಟಿಗವಿ ನಿನ್ನ ತನ್ನೆರವಿನೋದಿನ ಕಬ್ಬಮನೋದಿದರ್ ಸುಧಾ
ನಿಳಯದ ಮುಂದೆ ಸತ್ಕೃತಿಯ ಮುಂದೆ ಸುಖಾಬ್ಧಿಯ ಮುಂದದೊರ್ಮೆಯುಂ ॥ ೨೪

ಹೇಳಬೇಕು. ಹಾಗೆ ಹೇಳಿದ ಪಕ್ಷದಲ್ಲಿ ಕೊಂಕು ನುಡಿಯುವರೆ, ಕೋಪಗೊಳ್ಳುವರೆ, ನಿಂದಿಸುವರೆ ಅಥವಾ ದಂಡಿಸುವರೇ! ೨೧. ಕೇಳಿದೊಡನೆಯೇ ಕವಿ ಸವಿಯೊಳಗೆ ಓಲಾಡಬೇಕು. ಮನಸ್ಸು ಆನಂದದ ಮಡುವಿನಲ್ಲಿ ಮುಳುಗಬೇಕು. ಸುಖವನ್ನು ಅವಲಂಬಿಸಿರುವ ಚಿತ್ತವು ಲೀಲಾವಿಲಾಸದಲ್ಲಿ ತೇಲಾಡಬೇಕು. ಹಾಗಿಲ್ಲದ ಕಾವ್ಯವು ಸತ್ಕೃತಿಯಾಗಬಲ್ಲುದೆ? ೨೨. ಓದತೊಡಗಿದರೆ ಕಲ್ಲಮಾಲೆಯ ನಾದದಂತೆ ಕರ್ಕಶ, ಅರ್ಥಮಾಡಹೊರಟರೆ ಕಬ್ಬಿಣದ ಕಡಲೆ, ರಸವನ್ನು ಶೋಧಿಸಿ ತೆಗೆಯೋಣವೆಂದರೆ ಉಕ್ಕಿನ ಪುಡಿ. ಹೀಗಿರುವ ಕೆಳದರ್ಜೆಯ ಕವಿತೆಯನ್ನು ಇಲ್ಲಿ ಪ್ರಸ್ತಾಪಿಸುವುದೇ ಬೇಡ. ೨೩. ಅಳಿಗವಿಗಳ ಕಾವ್ಯಗಳ ಹೊರಮೈ ಮಾತ್ರ ನೋಡಿ ಸಮಾಧಾನಪಟ್ಟುಕೊಳ್ಳಬೇಕು. ಹಾಗಿಲ್ಲದೆ ಆ ಕಾವ್ಯದ ಅರ್ಥಪರಿಶೀಲನೆಗೆ ಹೊರಟರೆ ಅಲ್ಲಿ ಏನಿದೆ? ಬರಿ ಟೊಳ್ಳು, ಶುಷ್ಕ, ಒಂದಕ್ಕೊಂದು ಸಂಬಂಧವಿಲ್ಲ. ಎಲ್ಲ ಅಸ್ತವ್ಯಸ್ತ. ೨೪. ಹೆಳವನಿಗೆ ಕಾಲು ಇಲ್ಲ, ಕಣ್ಣುಗಳಿವೆ; ಅದರಂತೆ ಕುರುಡನಿಗೆ ಕಣ್ಣಿಲ್ಲ, ಕಾಲು ಉಂಟು. ಈ ಇಬ್ಬರೂ ಸೇರಿ ಎಂದರೆ ಕುರುಡನ ಹೆಗಲಮೇಲೆ ಹೆಳವ ಕುಳಿತು ಒಂದು ಗಾವುದ ದೂರ ನಡೆದ ಮಾತ್ರಕ್ಕೆ ಅದು ಒಬ್ಬ ಬಲಿಷ್ಠನು ದಾರಿ ನಡೆದಂತೆ ಆದೀತೆ? ಹಾಗೆ ಎಲೆ ಅಳಿಗವಿ, ನಿನ್ನ ಕಲಾಕೃತಿಯ ಆ ಓದು! ಆ ಕವಿತ್ವಗಳನ್ನು ಅಮೃತನಿಲಯದ ಮುಂದೆ, ಒಳ್ಳೆಯ ಕಾವ್ಯದ ಮುಂದೆ, ಸುಖಸಾಗರದ ಮುಂದೆ ಒಮ್ಮೆಯಾದರೂ ಓದಲು

ಅದು ಘೂಕಂ ದಿವದೊಳ್ ಕಾ
ಣದು ನಿಶ್ಚಯಮಂತೆ ದುರ್ಜನಂ ಕಾಣಂ ಕಾ ।
ವ್ಯದೊಳತಿ ರಸಮನಸೂಯಾ
ಸದನಂ ಸುಖದೂರನವನ ಮಾತೇಕಿದಱೊಳ್ ॥ ೨೫

ಕ್ಷುದ್ರಂಗೆ ಸಕಲಸುಜನೋ
ಪದ್ರವರೂಪಂಗೆ ಪರರ ಕಾವ್ಯಾರ್ಥಮಂ ।
ಛಿದ್ರಿಸುವಂಗತಿಶಬ್ದದ
ರಿದ್ರಂಗಕ್ಕುಮೆ ನವೀನಕಾವ್ಯಾರಂಭಂ ॥ ೨೬

ಒಳಗಱೆಯದೆ ಸತ್ಕಾವ್ಯದ
ಕಳೆಯಱೆಯದೆ ಲಘುತರತ್ವದಿಂ ನಾಲ್ಕೆರಡಾ ।
ಯ್ದುಳಿ ಮಾತಾಡಿಯುಱಿ ಹೆ
ಕ್ಕಳಮಿಕ್ಕಿದೊಡೊಲ್ವರೇ ಕವೀಂದ್ರಾಭರಣರ್ ॥ ೨೭

ಬರೆದಾಹ ! ಬರೆದೆ ಭಾಪುರೆ !
ಬರೆದಕ್ಕಟ ! ಬರೆದೆ ಲೇಸು ! ಬರೆದೆಯೆನುತ್ತುಂ ।
ಬಱೆದೆ ತಲೆದೂಗುವುದಱೆಂ
ಬಱೆದಪ್ಪುದು ಕಾವ್ಯಮಱೆಯದರ ಜಾಣಿಂದಂ ॥ ೨೮

ತನಗೆ ಕವಿತ್ವಮಿಲ್ಲ ಪೆಱರಂ ಪಟೆದಲ್ಲದೆ ನಿಲ್ಲನಾತನೊಳ್
ಮುನಿವುದನೀತಿ ಪಂದಿ ಡುಱುಕೆಂದೊಡೆ ತಾಂ ಡುಱುಕೆಂಬುದೇ ಮಹಾ ।
ವನಕರಿಯಂ ವಿದಾರಿಸುವ ಸಿಂಹಮದಂತತಿದೋಷಿಯಪ್ಪ ದು
ರ್ಜನರ ಕಟೂಕ್ತಿಗಂಜದೆ ಲಸತ್ಕೃತಿಯಂ ಸಲೆ ಮಾಟ್ಕಿ ಸಜ್ಜನರ್ ॥ ೨೯

ಸಾಧ್ಯವೆ? ೨೫. ಗೂಬೆ ಹಗಲಿನಲ್ಲಿ ಕಾಣದಿರುವುದು ದಿಟ. ಅದರಂತೆ ಅಸೂಯೆಗೆ ತವರ್ಮನೆಯಾದವನೂ, ಸುಖದೂರನೂ ಆದ ಅರಸಿಕನು ಕಾವ್ಯದಲ್ಲಿ ರಸೋತ್ಕರ್ಷವನ್ನು ಕಾಣಲಾರ; ಎಂದ ಮೇಲೆ ಸಹೃದಯರು ಮೆಚ್ಚಿ ಆನಂದಿಸುವ ಈ ಕಾವ್ಯದಲ್ಲಿ ಅವನ ಮಾತು ಏಕೆ? ೨೬. ಸುಜನರಿಗೆ ತೊಂದರೆ ಕೊಡುವ ಅಲ್ಪನಿಗೆ, ಇತರರ ಕಾವ್ಯಾರ್ಥವನ್ನು ಕದಿಯುವ ಶಬ್ದದರಿದ್ರನಿಗೆ, ನವ್ಯಾರ್ಥಶೋಭಿತವಾದ ಈ ಕಾವ್ಯವು ರುಚಿಸುವುದೆ? ೨೭. ಸತ್ಕಾವ್ಯದ ತಿರುಳನ್ನು ಅರಿಯದೆ, ಅದರ ರಸ-ಭಾವ-ಅಲಂಕಾರಾದಿಗಳ ಉಜ್ವಲತೆಯನ್ನು ಪರಿಶೀಲಿಸದೆ, ಹಗುರವಾಗಿ ನಾಲ್ಕು ಮಾತುಗಳನ್ನಾಡಿದರೆ ಸಹೃದಯರಾದ ಕವಿಗಳು ಮೆಚ್ಚುವರೆ? ೨೮. ಪ್ರತಿಭೆಯಿಲ್ಲದೆ ತಾವೂ ಕವಿಯಾಗಬೇಕೆಂದು ಬಯಸುವ ಅಳಿಗವಿಗಳು "ಓಹೊ, ಬರೆದೆವು! ಬರೆದೆವು, ಭೇಷ್! ಆಹಾ, ಬರೆದೆನು! ಭೇಷ್ ಭೇಷ್ ಬರೆದೇಬಿಟ್ಟೆ!" ಎಂದು ಸುಮ್ಮನೆ ತಮಗೆ ತಾವೇ ತಲೆದೂಗುವುದರಿಂದ, ಕಾವ್ಯಹೃದಯವನ್ನು ಅರಿಯದವರ ಇಂತಹ ಜಾಣ್ಮೆಯಿಂದ, ಅಂಥ ಕಾವ್ಯವು ಕೇವಲ ಅಳಿಕಬ್ಬವೇ ಆಗುತ್ತದೆ. ೨೯: "ತನಗೆ ಕವಿತ್ವ ಭಾಗ್ಯವಿಲ್ಲ; ಹೆರರನ್ನು ನಿಂದಿಸಿದಲ್ಲದೆ ತನಗೆ ಉಳಿಗಾಲವಿಲ್ಲ" ಎಂದು

ಗೌರೀವರಕರ್ಣಾಲಂ
ಕಾರಂ ರಸಪೂರಮತಿಗಭೀರಂ ಕಾವ್ಯಂ ।
ನೀರಸರಜೀವಂತೇನಿದು
ತಾರೆಲೆಯೇ ಬೀದಿವಾಡೆ ನೆರವಿಯ ತುಮುಕೇ ॥ ೩೦

ರಸಮಿದು ಭಾವಾಮಿದರ್ಥಮಿ
ದು ಸಮಾಸವಿದುಚಿತಪದಮಿದುತ್ಪ್ರೇಕ್ಷೆಯಿದೆಂ ।
ದು ಸವಿದು ಸವಿದು ಕರಂ ನವ
ರಸದೊಳಗಾಬುತ್ತುಮಿರ್ಪ ರಸಿಕರ್ ಬಲ್ಲರ್ ॥ ೩೧

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂಱುಂ ತೞನಂ
ಕೂಡೆ ಕವಿತತಿ ವಿಚಾರಿಸ
ಬೇಡದಱೆಂ ಱಬಕುಳಕ್ಷಳಂಗಳನಿದಱೊಳ್ ॥ ೩೨

ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸರ್ ಭಾಪುರೇ ! ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹಮೀ ಕಾವ್ಯಮಂ ಬ ।
ತ್ತರದಿಂ ತಾನೊಲ್ದು ಪೇೞ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥ ೩೩

ಭಾವಿಸುವವನನ್ನು ನಾವು ಏಕೆ ನಿಂದಿಸಬೇಕು? ಹಂದಿಯು ಗುರುಗುಟ್ಟಿದ ಮಾತ್ರಕ್ಕೆ ಮಹಾಗಜವನ್ನು ಸೀಳುವ ಬಲಿಷ್ಠವಾದ ಸಿಂಹವು ಪ್ರತಿಯಾಗಿ ಗುರುಗುಟ್ಟುವುದೆ? ಅದರಂತೆ ದುರ್ಜನರು ನಿಂದಿಸಿದ ಮಾತ್ರಕ್ಕೆ ಸಜ್ಜನರು ಅದಕ್ಕೆ ಹೆದರಿ ತಮ್ಮ ಕಾವ್ಯರಚನೆಯನ್ನು ಕೈಬಿಡುತ್ತಾರೆಯೆ? ೩೦. ಕಾವ್ಯವು ಗೌರೀಪತಿ ಪರಶಿವನು ಕೇಳಿ ಆನಂದಿಸುವ ರಸಭರಿತವೂ ಅತಿ ಗಂಭೀರವೂ ಆದದ್ದು. ಹಾಗಲ್ಲದೆ ಈ ಕಾವ್ಯವು ಗ್ರಾಮೀಣರು ತಿಳಿದುಕೊಂಡಿರುವಂತೆ ತರಗೆಲೆಯೇ, ಬೀದಿಯ ಮಾತೆ, ಗುಂಪಿನ ತಂತೀವಾದ್ಯವೆ? ೩೧. ಇದು ರಸ, ಇದು ಭಾವ. ಇದು ಸಮಾಸ. ಇದು ಉಚಿತವಾದ ಪದ, ಇದು ಉತ್ಪ್ರೇಕ್ಷೆ ಎಂದು ರಸಾನುಗುಣವಾಗಿ ವಿನ್ಯಸ್ತವಾಗಿರುವ ರಸಮಯ ಕಾವ್ಯವನ್ನು ಆಸ್ವಾದಿಸಿ ತನ್ಮಯರಾಗಿರುವ ಸಹೃದಯರು ಮಾತ್ರ ಕಾವ್ಯಹೃದಯವನ್ನು ಅರಿಯಬಲ್ಲರು. ೩೨. ಹಳಗನ್ನಡದಲ್ಲಿ ಬಳಕೆಯಲ್ಲಿರುವ ಱಬ ಕುಳ ಮತ್ತು ಕ್ಷಳ ಎಂಬ ಅಕ್ಷರಗಳು ನೋಡುವುದಕ್ಕೆ ಒಂದೇ ಅಕ್ಷರ, ಆದರೆ ಅದನ್ನು ಉಚ್ಚರಿಸುವುದು ತುಂಬಾ ಕಷ್ಟ. ಆದ್ದರಿಂದ ಕವಿಗಳು ಈ ತೆರನಾದ ಅಕ್ಷರವಿಂಗಡಣೆಗೆ ಇಲ್ಲಿ ಕೈಹಾಕುವುದೇ ಬೇಡ. ೩೩. ಶ್ರೇಷ್ಠವಾದ ಈ ಕೃತಿಯ ಹೆಸರು ಗಿರಿಜಾಕಲ್ಯಾಣ. ಕಾವ್ಯಕರ್ತ ಗಿರಿಜಾಧವ. ಕಾವ್ಯವಸ್ತು ಗಿರಿಜಾವಿವಾಹ! ಇಂತಹ ಈ ಮಹಾ ಕಾವ್ಯವನ್ನು ಪರಮಾನಂದಕ್ಕೆ ಸಮುದ್ರದಂತಿರುವ ಪಂಪಾವಿರೂಪಾಕ್ಷಸ್ವಾಮಿಯ ಕೃಪೆಗೆ ಪಾತ್ರನಾದ ಶಿವಕವಿ ಹರಿಹರನು ಮಹೋತ್ಸಾಹದಿಂದ ರಚಿಸಿದ್ದಾನೆ.

ಆತನ ಗುರುಕುಲಮತಿ ವಿ
ಖ್ಯಾತಂ ಘನಪೂತಮಿಂದುಧರಸಂಭೂತಂ ।
ನೂತನ ಪುಣ್ಯವ್ರಾತಂ
ಪ್ರೀತಿಕರಂ ಭೂತಳಾತಿಶಯ ಸುಖಜಾತಂ ॥ ೩೪

ಸುರುಚಿರಮೂರ್ತಿ ಸತ್ಯತರಮೂರ್ತಿ ಕೃಪಾಕರಮೂರ್ತಿ ಪುಣ್ಯವಿ
ಸ್ತರಗುರುಮೂರ್ತಿ ಶಾಂತಿಮಯಮೂರ್ತಿ ಸುಧಾಕರಮೂರ್ತಿಯುತ್ತರೋ ।
ತ್ತರಪರಮೂರ್ತಿ ಮುಕ್ತಿಸುಖಮೂರ್ತಿ ಮನೋಹರಮೂರ್ತಿ ಚಂದ್ರಶೇ
ಖರ ಗುರುಮೂರ್ತಿ ಕೀರ್ತಿಪತಿ ಹಂಪೆಯ ಶಂಕರದೇವರೊಪ್ಪುವರ್ ॥ ೩೫

ಆಶೈವಾಗಮಸಿದ್ಧರಪ್ಪ ಪರಮ ಶ್ರೀ ಶಂಕರಾಚಾರ್ಯರಿಂ
ಪಾಶಚ್ಛೇದಮನಿಂಬುಗೊಂಡು ಮೆಱೆದಂ ಶ್ರೀ ಶುದ್ಧ ಪಂಚಾಕ್ಷರೀ ।
ವೇಶಾನಂದರಸಾರ್ದ್ರಚಿತ್ತಯುತಹೃದ್ರಾಜೀವ ಸಂಪೂರ್ಣ ಸಂ
ಕಾಶಪ್ರಜ್ವಲಮೂರ್ತಿ ಕೀರ್ತಿಭರಿತಂ ಶ್ರೀ ಮಾದಿರಾಜಾಹ್ವಯಂ ॥ ೩೬

ಇಂತಿಂತೊಪ್ಪುವ ಮಾದಿರಾಜನ ಮನೋದುಗ್ಧಾಬ್ಧಿಚಂದ್ರಂ ಶಿವಂ
ಶಾಂತಂ ಶಾಶ್ವತಮೂರ್ತಿ ಶೈವಸುಭಗಂ ಸಾಕಾರಸರ್ವೇಶ್ವರಂ ।
ಸಂತೋಷಾಭರಣಂ ಪ್ರಸನ್ನಕರಣಂ ಪ್ರತ್ಯಕ್ಷಪಂಚಾನನಂ
ಸಂತಂ ಹಂಪೆಯ ಮಾಯಿದೇವನೆಸೆದಿರ್ಪಂ ಶೈವಸಾರೋದಯಂ ॥ ೩೭

೩೪. ಆ ಕವಿಯ ಗುರುವಂಶವು ಬಹು ಪ್ರಸಿದ್ಧವಾದದ್ದು, ಅತ್ಯಂತ ಪವಿತ್ರವಾದದ್ದು, ಇಂದುಧರನಾದ ಪರಶಿವನಿಂದ ಬಂದುದು; ಪುಣ್ಯಕರವೂ ಪ್ರೀತಿಕರವೂ ಆಗಿ ನಾಡಿನಲ್ಲಿ ಸುಖಸಂತೋಷಗಳಿಂದ ಬಾಳಿ ಏಳ್ಗೆವೆತ್ತುದು. ೩೫. ಕಾವ್ಯಕರ್ತೃ ಹರಿಹರದೇವನ ಗುರು ಹಂಪೆಯ ಶಂಕರದೇವರು. ಅವರ ವ್ಯಕ್ತಿತ್ವವನ್ನು ಕವಿ ಹೀಗೆ ವರ್ಣಿಸಿದ್ದಾನೆ. ರಮ್ಯ ವ್ಯಕ್ತಿತ್ವ, ಸತ್ಯಸಂಧತೆ, ಕಾರುಣ್ಯ, ಪುಣ್ಯನಿಧಿ, ಶಾಂತಸ್ವಭಾವ, ಮನಂಬುಗುವ ನಿಲವು, ನಿತ್ಯಾನಂದ, ಮನಃಪ್ರಸನ್ನತೆ ಮುಂತಾದ ಸದ್ಗುಣಗಳಿಂದ ಅವರು ಮೂರ್ತಿವೆತ್ತ ಚಂದ್ರಶೇಖರನಂತೆ ವಿಖ್ಯಾತರಾದವರು. ೩೬. ವೇದವೇದಾಂತಾಗಮ ಪಾರಂಗತರಾದವರು ಈ ಶಂಕರಾಚಾರ್ಯರು. ಅಂಥ ಆಚಾರ್ಯರಿಂದ ಪಾಶವಿಚ್ಛೇದ ರೂಪವಾದ ಶಿವದೀಕ್ಷೆಯನ್ನು ಪಡೆದು, ಶುದ್ಧ ಪಂಚಾಕ್ಷರೀ ಮಹಾಮಂತ್ರೋಪದೇಶ ವನ್ನು ಪಡೆದು, ಶ್ರೀ ಮಾದಿರಾಜ ಎಂಬುವನು ಆನಂದ ರಸಾರ್ದ್ರಚಿತ್ತನೆನಿಸಿ ಉಜ್ವಲ ಕೀರ್ತಿಶಾಲಿಯಾಗಿದ್ದನು. ೩೭. ಹೀಗೆ ಆ ಮಾದಿರಾಜನ ಮನಸ್ಸಿಗೆ ನೆಮ್ಮದಿಯನ್ನು ಉಂಟುಮಾಡುವ ಮಹಾ ಸಂತನೇ ಹಂಪೆಯ ಮಾಯಿದೇವ ಆಚಾರ್ಯ. ಆತನ ರಮ್ಯ ವ್ಯಕ್ತಿತ್ವ-ಶಿವವೂ ಶಾಂತವೂ ಶಾಶ್ವತ ಶೈವಚಿಹ್ನೆಗಳಿಂದ ಮನೋಹರವೂ ಆದದ್ದು. ಆದ್ದರಿಂದ ಆತ ಸಾಕಾರ ಸರ್ವೇಶ್ವರ. ಸಂತೋಷಕ್ಕೇ ಆಭರಣವೆನಿಸಿದ್ದ. ಪ್ರಸನ್ನಚಿತ್ತನಾಗಿ ಪ್ರತ್ಯಕ್ಷ ಪರಶಿವನಂತಿದ್ದ.

ಶ್ರೀಗುರು ಪರಗುರು ಘನಮಹಿ
ಮಾಗುರು ಮಾಧುರ್ಯಗುರು ಮಹಾಗುರು ವರವಿ ।
ದ್ಯಾಗುರು ಸುಖೈಕಗುರು ವಸು
ಧಾಗುರು ಶೈವಗುರು ಶಾಂತಗುರು ಮಾಯ್ದೇವಂ ॥ ೩೮

ಸದಮಳನೆಂಬುದುತ್ತಮ ಗುಣಾಶ್ರಯನೆಂಬುದು ಶೈವಸಿದ್ಧನೆಂ
ಬುದು ರವಿತೇಜನೆಂಬುದು ಕೃಪಾಂಬುಧಿಯೆಂಬುದು ಶಾಂತಮೂರ್ತಿಯೆಂ ।
ಬುದು ಪರಮಾಗಮಪ್ರಕರನೆಂಬುದು ಹಂಪೆಯ ಮಾಯಿದೇವನೆಂ
ಬುದು ಶಿವನೆಂಬುದಪ್ರತಿಮನೆಂಬುದು ಸದ್ಗುರುವೆಂಬುದೀ ಜಗಂ ॥ ೩೯

ಧರೆಯೊಳಗಾ ಮಾಯ್ದೇವರ
ವರ ಕರುಣಂಬಡೆದು ಮೆಱೆವನುನ್ನತತೇಜಂ ।
ಗುರುಪದಭಕ್ತಂ ಹಂಪೆಯ
ಹರಿದೇವಂ ದೇವಕವಿ ಕಳಾವಿದರರಸಂ ॥ ೪೦

ಜಾಣಂ ರಸಿಕಂ ಸುಜನ
ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ ।
ಕ್ಷೀಣಂ ವರಗಿರಿಜಾ ಕ
ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ ॥ ೪೧

ಎಂದಿಂತೆಲ್ಲಾ ಕವೀಂದ್ರರ್ ಪೊಗೞೆ ಪರಸೆ ಭಕ್ತವ್ರಜಂ ಸಜ್ಜನರ್ ಸಾ
ನಂದಂ ಮಜ್ಜಯ್ಯ ಭಾಪುನ್ನತಕೃತಿ ಭಲರೇ ಚತ್ರಮಹಾ ಎನುತ್ತೊ ।
ಳ್ಪಿಂದಂ ಕೊಂಡಾಡೆ ಲೋಕಂ ಸ್ತುತಿಯಿಸೆ ಪದೆಪಿಂ ಪೇೞ್ದಪೆಂ ರೀತಿಭಾವಂ
ಛಂದೋಲಂಕಾರಸಾರಂ ಪುದಿದಿರೆ ಗಿರಿಜೋದ್ವಾಹಮಂ ಪ್ರೀತಿಯಿಂದಂ ॥ ೪೨

೩೮. ಶೈವಗುರುಪದವಿಯನ್ನು ಅಲಂಕರಿಸಿದ ಮಾಯಿದೇವರು ಪರಮಗುರು ಘನಮಹಿಮಾನ್ವಿತನಾಗಿದ್ದ ಭಕ್ತರಿಗೆ ಧರ್ಮೋಪದೇಶ ಮಾಡಿ ಮಾಧುರ್ಯಗುರು, ಮಹಾಗುರು, ವಿದ್ಯಾಗುರುವೆನಿಸಿದ್ದ ಆತ ನಿತ್ಯಾನಂದ ಜಗದ್ಗುರುವೆನಿಸಿದ್ದ. ೩೯. ಸದ್ಗುರು ಮಾಯಿದೇವ ಆಚಾರ್ಯರಲ್ಲಿದ್ದ ಅನೇಕ ಕಲ್ಯಾಣ ಗುಣಾವಳಿಯನ್ನು ಮನಗಂಡ ಜನ-ನಿರ್ಮಲವಾದ ಮನಸ್ಸು, ಉತ್ತಮ ಗುಣಗಳಿಗೆ ಗಣಿ, ಶೈವಸಿದ್ಧ, ರವಿಯಂತೆ ತೇಜಸ್ವಿ, ಕೃಪಾಸಾಗರ, ಶಾಂತಮೂರ್ತಿ, ಪರಮಾಗಮವಿಶಾರದ, ಅಪ್ರತಿಮ, ಶಿವಸ್ವರೂಪ, ಸದ್ಗುರು ಎಂದು ಮುಂತಾಗಿ ಆತನನ್ನು ಹೊಗಳುತ್ತಿತ್ತು. ೪೦. ಧರೆಯಲ್ಲಿ ಆ ಮಾಯಿದೇವ ಆಚಾರ್ಯರ ಕೃಪೆಗೆ ಪಾತ್ರನಾದವನು ಹರಿಹರಕವಿ. ಗುರುಪದ ಭಕ್ತನೂ ಕಲಾಪ್ರವೀಣನೂ ಆದ ದೇವಕವಿ ಹಂಪೆಯ ಹರಿದೇವನು ಕೀರ್ತಿಶಾಲಿಯಾಗಿದ್ದಾನೆ. ೪೧. ಆತ ಜಾಣ, ರಸಿಕ, ಸುಜನರಿಗೆ ಪ್ರಾಣ, ಕವಿತೆಗೆ ನಿಧಾನ, ಅಧಿಕ ಪುಣ್ಯಶಾಲಿ, ವಿವೇಕಿ. ಇಂತಹ ಹರಿಹರದೇವನು ಗಿರಿಜಾಕಲ್ಯಾಣವನ್ನು ರಚಿಸಿದ. ೪೨. ಎಂದು ಮುಂತಾಗಿ ಎಲ್ಲ ಕವೀಂದ್ರರು ಆತನನ್ನು ಹೊಗಳಿದರು. ಸದ್ಭಕ್ತರು ಹರಸಿದರು. ಸಹೃದಯರು ಹರ್ಷಿಸಿ ಮಜ್ಜಯ್ಯ! ಭಾಪು! ಭೇಷ್ ಇದು

ಗಿರಿಜಾಕಲ್ಯಾಣಮನೊ
ಲ್ದೊರೆವೆಂ ಗುರುಕರುಣದಿಂದೆ ರಸಿಕರ್ ಕವಿಗಳ್ ।
ಪಿರಿಯರ್ ಸುಜನರ್ ಭಕ್ತರ್
ಪರಮಾರ್ಥದೆ ಕೇಳ್ವುದೀ ಪ್ರಬಂಧೋನ್ನತಿಯಂ ॥ ೪೩

ಎಂತೆನೆ ವಿಶಾಲಧಾತ್ರೀ
ಕಾಂತಾನಾಭೀಸರೋಜಸುರುಚಿರವರ ಮ ।
ದ್ಯಾಂತಸ್ಥಿತನುತ ಕರ್ನಿಕೆ
ಯಂತಿರ್ಪುದು ಮೇರುವದಱ ಮೂಡಣದೆಸೆಯೊಳ್ ॥ ೪೪

ಶಿವ ಶಿವ ! ಪಂಚಾಶತ್ಕೋ
ಟಿ ವಿಸ್ತೃತಾವನಿಗೆ ನೀಲಮೇಖಲೆಯಂತೊ ।
ಪ್ಪುವುದಾತ್ತ ಲೋಲಕಲ್ಲೋ
ಲ ವಿವಿಧ ಸಲಿಲಚರಪೂರ ಪಾರಾವಾರಂ ॥ ೪೫

ವ॥ ಅದೆಂತೆಂದೊಡೆ

ವಿಳಸತ್ಕಲ್ಲೋಲಮಾಲಾಪ್ರತಿಹತವಿತತ ಪ್ರೋಚ್ಚಲಚ್ಛೈಲ ಕೋಳಾ
ಹಳಿತೋದ್ಯತ್ಫೇನ ನಾನಾಕರಿಮಕರವಿಪುಚ್ಛಪ್ರಹಾರಪ್ರತಾಪೋ ।
ದ್ಗಳಿತಾನಂತಪರತ್ನಪ್ರಬಲಜಲಚರಾನೀಕ ಗಂಭೀರಭೀಮೋ
ಜ್ಜ್ವಳರಾವಪ್ರಾದ್ಭುತಪ್ರೋನ್ಮಿಳಿತ ಘುಳು ಘುಳುಧ್ವಾನಮಂಭೋನಿಧಾನಂ ॥ ೪೬

ಎಂತಹ ಉನ್ನತಕೃತಿ! ಎಂದು ಕೊಂಡಾಡಿದರು. ಲೋಕವು ಪ್ರೀತಿಯಿಂದ ಹೊಗಳಿತು. ಇದರಿಂದ ಸ್ಫೂರ್ತಿಗೊಂಡವನಾಗಿ ರೀತಿ-ಭಾವ-ಛಂದಸ್ಸು ಮತ್ತು ಅಲಂಕಾರಸಾರ ಪೂರ್ಣವಾದ ಗಿರಿಜಾಕಲ್ಯಾಣ ಮಹಾಕಾವ್ಯವನ್ನು ಪ್ರೀತಿಯಿಂದ ಹೇಳುವೆನು. ೪೩. ಗುರುವಿನ ಕೃಪೆಯಿಂದ ಗಿರಿಜಾಕಲ್ಯಾಣವನ್ನು ಒಲ್ದು ಒರೆವೆನು. ಈ ಉನ್ನತ ಪ್ರಬಂಧವನ್ನು ರಸಿಕರು ಕವಿಗಳು ಹಿರಿಯರು ಸುಜನರು ಭಕ್ತರು ಆದರದಿಂದ ಕೇಳಬೇಕು. ೪೪. ಮುಂದೆ ಕಾಣುವುದೆ ಮೇರುಪರ್ವತ! ಅದು ವಿಶಾಲವಾದ ಭೂಮಿ ಎಂಬ ಕಾಂತೆಯ, ನಾಭಿ ಎಂಬ ಕಮಲದ ಮಧ್ಯದಲ್ಲಿ ಮನೋಹರವಾಗಿರುವ ಕರ್ನಿಕೆ (ಬೀಜಕೋಶ)ಯಂತೆ ಬೆಳಗುತ್ತಿದೆ, ಅದರ ಪೂರ್ವದಿಕ್ಕಿನಲ್ಲಿ ೪೫. ಓಹೊ! ಆ ನೆಲದ ವಿಸ್ತಾರವೊ ಐವತ್ತುಕೋಟಿ! ಆ ನೆಲವೆಂಬ ರಮಣಿಗೆ ನೀಲಮೇಖಲೆ (ಒಡ್ಯಾಣ)ಯೊ ಎಂಬಂತೆ ಒಪ್ಪುವ ಕಡಲು! ಅದು ಉನ್ನತವಾದ ಚಂಚಲವೂ ಆದ ಅಲೆಗಳಿಂದಲೂ ವಿವಿಧ ಜಲಚರ(ನೀರಜೀವಿ)ಗಳಿಂದಲೂ ತುಂಬಿ ದಡವೇ ಕಾಣದಷ್ಟು ದೂರ ಹಬ್ಬಿದೆ! ೪೬. ಬೆಳಗುವ ಅಲೆಗಳ ಮಾಲೆ; ಆ ಅಲೆಗಳು ಮಗ್ಗುಲಲ್ಲಿದ್ದ ಶೈಲಗಳಿಗೆ ಹೊಡೆದು ಮೇಲಕ್ಕೆ ಸಿಡಿವ ಕೋಲಾಹಲ! ಮುದ್ದೆ ಕಟ್ಟುತ್ತಿರುವ ನೊರೆಯ ನೆರೆ, ನಾನಾ ಬಗೆಯ ಕರಿ (ನೀರಾನೆ) ಮೊಸಳೆ ಹಾಗೂ ವಿಪುಚ್ಛಗಳ ಪ್ರಹಾರ (ಹೊಡೆತ), ಅದರಿಂದ ಕಳಚಿದ ಅನಂತ ರತ್ನಗಳುಳ್ಳ ಪ್ರಬಲ ಜಲಚರಗಳು, ಅವುಗಳ ಗಂಭೀರವೂ ಭಯಂಕರವೂ ಉದ್ದಾಮವೂ ಆದ ಶಬ್ದ, ಅದರಿಂದ ಹುಟ್ಟುವ ಘುಳು ಘುಳು ಧ್ವನಿ ಇವುಗಳಿಂದ ಆ

ವ॥ ಮತ್ತಮಲ್ಲದೆ

ನೊರೆಯಿಂ ಬುದ್ಬುದದಿಂ ಕಣಾವಳಿಗಳಿಂದಾವರ್ತದಿಂ ತುಂತುಱಿಂ
ತೆರೆಯಿಂ ಪೆರ್ದೆರೆಯಿಂ ತಿಮಿಂಗಿಲಗಿಲಸ್ತೋಮಂಗಳಿಂ ಕಚ್ಚಪೋ ।
ತ್ಕರದಿಂ ನಕ್ರನಿಕಾಯದಿಂ ಮಕರದಿಂ ನೀರಾನೆಯಿಂ ಕಂಬುವಿಂ
ವರರತ್ನವ್ರಜದಿಂ ಪ್ರವಾಳಲತೆಯಿಂದೊಪ್ಪಿತ್ತು ನೀರಾಕರಂ ॥ ೪೭

ಶಾ॥ ಆ ವಿಸ್ತಾರ ಗಭೀರವಾರಿ ನಿಧಿಯಿಂದಂ ಪಶ್ಚಿಮಾಂಭೋಧಿಗಂ
ತೀವಿರ್ದೊಪ್ಪುವುದಾತ್ತಗಹ್ವರ ಗುಹಾ ಸಂತಾನಪರ್ಯಂತ ಗೋ ।
ತ್ರವಾಸೋಜ್ಜ್ವಲ ಗಂಡಶೈಲಶಿಖರ ಪ್ರೋದ್ಭೂತ ಭೂಜಾತಪ
ತ್ರಾವೇಶೋನ್ನತ ಭೀಮರೂಪಧರದೇವಾಗಮ್ಯ ಹೈಮಾಚಳಂ ॥ ೪೮

ಸ್ರ॥ ಆರಾಜತ್ಕೌಮುದೀ ಸಂಗತಶಿಶಿರಶಿಲಾನೀಕನಿರ್ಯದ್ಧಿಮಂ ಸ
ಸ್ಮೇರಾಬ್ಜಾಕ್ಷೀ ಕರೋತ್ಕಲ್ಲವ ನಖಕುಸುಮವ್ರಾತ ಚಂಚದ್ವಸಂತಂ ।
ಸೂರಾಂಶುಸ್ಪರ್ಶತೀವ್ರಾನಳಕರರವಿಕಾಂತಾತಪೋದ್ಯನ್ನಿದಾಘಂ
ಕ್ರೂರಾಭೀಳದ್ವಿಪಪ್ರೋಚ್ಚಳಿತಮದ ಜಲಾಸಾರಸಾಂದ್ರಂ ನಗೇಂದ್ರಂ ॥ ೪೯

ಅಂಭೋಧಿಯು ರುದ್ರರಮಣೀಯವಾಗಿದೆ. ೪೭. ಆ ನೀರಾಕಾರ (ಕಡಲು)ವು ನೊರೆ, ಬುದ್ಬುದ, ಹನಿಗಳು, ತುಂತುರುಗಳು, ಸುಳಿಗಳು, ಸಣ್ಣ ಅಲೆಗಳು, ದೊಡ್ಡ ತೆರೆಗಳಿಂದಲೂ, ದೊಡ್ಡಮೀನು, (ತಿಮಿಂಗಿಲ) ಅವುಗಳನ್ನು ನುಂಗುವ ದೊಡ್ಡ ತಿಮಿಂಗಿಲ (ತಿಮಿಂಗಿಲಗಿಲ)ಗಳ ಸಮೂಹ, ಆಮೆಗಳ ಗುಂಪು, ಮೊಸಳೆಯ ಮೊತ್ತ, ಮಕರ (ಒಂದು ಬಗೆಯ ಮೀನು) ನೀರಾನೆ, ಶಂಖ, ಶ್ರೇಷ್ಠರತ್ನ ಸಮೂಹ, ಹವಳದಬಳ್ಳಿ ಮುಂತಾದವುಗಳಿಂದ ಕಂಗೊಳಿಸುತ್ತಿತ್ತು. ೪೮. ಮೇಲೆ ಹೇಳಿದ ಪೂರ್ವಸಮುದ್ರ ಮತ್ತು ಪಶ್ಚಿಮ ಸಮುದ್ರಗಳವರೆಗೆ ಹಬ್ಬಿದ (ಪೂರ್ವಾಪರೌ ತೋಯ ನಿಧೀವಗಾಹ್ಯ- "ಕುಮಾರ ಸಂಭವ") ಹಿಮಾಲಯ ಪರ್ವತವು ತಪೋಯೋಗ್ಯವಾದ ಅನೇಕ ಏಕಾಂತ ಗುಹೆಗಳು, ಪಕ್ಕದಲ್ಲಿರುವ ಬೆಟ್ಟಗಳು, ಆವಾಸಯೋಗ್ಯವಾದ ದೊಡ್ಡ ಬಂಡೆಗಳು, ಶಿಖರಗಳು, ಅಲ್ಲಿ ಹುಟ್ಟಿರುವ ಮರೆಗಳೆಂಬ ಕೊಡೆಗಳು ಅವುಗಳಿಂದ ಉನ್ನತವೂ, ಭೀಮವೂ ಆಗಿರುವುದರಿಂದ, ಅದು ದೇವತೆಗಳಿಗೂ ಆಗಮ್ಯ (ಸಂಚಾರಕ್ಕೆ ಕಷ್ಟವಾಗಿ)ವಾಗಿ ಪ್ರಕಾಶಿಸುತ್ತಿದೆ. ೪೯. ಅಲ್ಲಿ ಚಂದ್ರಕಾಂತಶಿಲೆಗಳು ಹೇರಳವಾಗಿವೆ. ಅವುಗಳ ಮೇಲೆ ಬೆಳದಿಂಗಳು ಬಿದ್ದು ಆ ಶಿಲೆಗಳಿಂದ ಹಿಮವು ಒಸರುತ್ತಿದೆ; ಅಲ್ಲಲ್ಲಿ ವಿಹರಿಸುವ ತಾವರೆಗಣ್ಣಿನೀರೆಯರು, ಅವರ ಚಿಗುರ್ಗೈಗಳ ನಖಿಗಳಂತಿರುವ ಕುಸುಮ ಸಮೂಹದಿಂದ ಪ್ರಕಾಶಿಸುವ ವಸಂತ; ರವಿಕಿರಣಗಳು ಸೋಂಕಿ ಉರಿಯುತ್ತಿರುವ ಸೂರ್ಯಕಾಂತ ಶಿಲೆಗಳು, ಅವುಗಳ ತಾಪದಿಂದ ತೀವ್ರವಾದ ಬೇಸಗೆ; ಕ್ರೂರವೂ ಭಯಂಕರವೂ ಆದ ಕಾಡಾನೆಗಳು ಚಿಮ್ಮುತ್ತಿರುವ ಮದಜಲಧಾರೆಗಳ ಜಡಿಮಳೆಯಿಂದ ದಟ್ಟವಾದ ಆ ನಗರಾಜನು ಬೆಳಗುತ್ತಿದ್ದಾನೆ.

ವ॥ ಅಂತುಮಲ್ಲದೆಯುಂ

ಉ॥ ಪಾಱುವ ಸೋಗೆ ಸೀಗುರಿ ಚಲಚ್ಚಮರೀಮೃಗವೀಥಿ ಚಾಮರಂ
ಮೀಱೆ ನಿಮಿರ್ಕೆವೆತ್ತ ಕುಜಮೆತ್ತಿದ ಸತ್ತಿಗೆ ಸಿಂಹವಿಷ್ಟರಂ ।
ತೋಱುವ ಚಂದ್ರಕಾಂತಶಿಲೆಯಾಗೆ ಸಮುನ್ನತರಾಜಲೀಲೆಯಂ
ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ ॥ ೫೦

ಚಂ॥ ಗಿರಿಶಿಖರಂ ಮುಖಂ ಮರದೊಳೊಪ್ಪುವ ಬೀಟಿಲೆ ತಜ್ಜಟಾಳಿ ವಿ
ಸ್ತರವರಗಂಡಶೈಲಮೆ ವಿಕೀರ್ಣಭುಜಾವಳಿ ವಾದ್ಯಸಂಕುಲಂ ।
ಕರಿಕುಳ ಬ್ಯಂಹಿತಂ ನೆಗಟ್ಪ ಸಿಂಹರವಂ ಗಳವಾಗೆ ಸಂತತಂ
ಸ್ಮರರಿಪು ನಾಣ್ಯದೊಳ್ ನೆಲಸಿ ನಿಂದವೊಲೊಪ್ಪಿತು ಭೂರಿಭೂಧರಂ ॥ ೫೧

ನಳನಳಿಸುತ್ತೆ ಸುತ್ತಿಡಿದುತೋರ್ಪ ಕದಂಬ ಕದಂಬದಿಂ ಚಳ
ಜ್ಜಳದಮನೊತ್ತರಿಪ್ಪ ಘನದೀರ್ಘಸುಕೋಮಳ ವಂಶ ವಂಶದಿಂ ।
ಬಳಸಿಗಮೆತ್ತಲುಂ ತುಱುಗಿ ಪರ್ವಿದಗುರ್ವಿನ ಬಿಂಬ ಬಿಂಬದಿಂ
ದಿಳೆಯೊಳಗೊಪ್ಪುತಿರ್ಪುದು ಹಿಮಾಚಲಮಾಶ್ರಿತಗೋತ್ರಗೋತ್ರದಿಂ ॥ ೫೨

ವ॥ ಮತ್ತಮಲ್ಲದೆ

ಕಂ॥ ಉರವಣಿಸಿ ನಡೆತರುತ್ತುಂ
ಗಿರಿಶಿಖರಮನೇಱಲಾಱದೆರಡುಂ ದೆಸೆಯೊಳ್ ।
ಬರಲನುವಂ ಕಂಡು ದಿವಾ
ಕರನಂದಿಂ ದಕ್ಷಿಣೋತ್ತರಾಯಣನಾದಂ ॥ ೫೩

೫೦. ಪೂರ್ವ ಪಶ್ಚಿಮ ಸಮುದ್ರಗಳವರೆಗೆ ಹಬ್ಬಿದ ಆ ಪರ್ವತರಾಜನಿಗೆ ರಾಜೋಪಚಾರ ನಡೆದಿದೆ. ಹಾರುವ ನವಿಲು ಪಿಂಛಗಳೇ ಒಂದು ಬಗೆಯ ಛತ್ರ, ಸಂಚರಿಸುವ ಚಮರೀಮೃಗ ವೀಥಿಯೇ ಚಾಮರಸೇವೆ, ಎತ್ತರಕ್ಕೆ ಬೆಳೆದು ಹರಡಿರುವ ಮರಗಳೇ ಎತ್ತಿದ ಕೊಡೆಗಳು, ತೋರುವ ಚಂದ್ರಕಾಂತ ಶಿಲೆಯೇ ಎತ್ತರವಾದ ಸಿಂಹಾಸನ, ಹೀಗೆ ರಾಜಲೀಲೆಯಿಂದ ಆ ಗಿರಿರಾಜನು ಒಪ್ಪಿದ್ದಾನೆ. ೫೧. ಗಿರಿಶಿಖರವೆ ಮುಖ, ಮರದ ಬಿಳಲುಗಳೆ ಅವನ ಜಡೆಗಳು, ವಿಸ್ತಾರವಾದ ದೊಡ್ಡಗಂಡಶೈಲವೆ ಹರಡಿದ ಭುಜಗಳು, ಆನೆಗಳ ಬೃಂಹಿತ ಮತ್ತು ಸಿಂಹ ಗರ್ಜನೆಗಳೆ ವಾದ್ಯವಿಶೇಷ; ಹೀಗಿರುವ ಆ ಪರ್ವತವು ಪರಶಿವನ ನಟರಾಜಲೀಲೆಯಂತೆ ಒಪ್ಪಿತ್ತು. ೫೨. ನಳನಳಿಸಿ ಬೆಳೆದು ಸುತ್ತುವರಿದಿರುವ ಕಡಹ (ನೀಪ)ದ ಮರಗಳ ಸಮೂಹ, ಚಲಿಸುತ್ತಿರುವ ಕಾರ್ಮುಗಿಲುಗಳನ್ನು ಒತ್ತರಿಸುತ್ತಿರುವ (ಬಹು) ಎತ್ತರಕ್ಕೆ ಬೆಳದಿರುವ ಕೋಮಲ ಬಿದಿರುಮೆಳೆಗಳು, ಎಲ್ಲೆಲ್ಲಿಯೂ ಬಳಸಿ ದಟ್ಟವಾಗಿ ಹಬ್ಬಿರುವ ತೊಂಡೆಹಣ್ಣಿನ ಬಳ್ಳಿಗಳು, ಹೀಗೆ ಹಿಮಾಚಲಪರ್ವತವು ತನ್ನನ್ನು ಆಶ್ರಯಿಸಿರುವ ಅನೇಕ ಬೆಟ್ಟಗಳ ಸಮೂಹದಿಂದ ಕೂಡಿ ಭುವಿಯಲ್ಲಿ ಬೆಳಗುತ್ತಿದೆ. ೫೩.. ಅವಸರದಿಂದ ನಡೆತರುವಾಗ ಈ ಗಿರಿಶಿಖರವನ್ನು ಏರಲಾರದೆ ಸೂರ್ಯನು ಇದರ ಎರಡೂ ಪಕ್ಕಗಳಲ್ಲಿ ಬರಲು

ಹರಹರ ! ಗಿರಿಯುದ್ದಮನಾ
ರೊರೆದಪರಗಚೂಡದಲ್ಲಿ ನಿಂದಿರ್ದು ಸಮಂ ।
ತಿರೆ ತಾರಗೆಯಂ ವಿದ್ಯಾ
ಧರಿಯರ್ ಮುತ್ತೆಂದು ತೆಗೆದು ತುಡಲವ್ವಳಿಪರ್ ॥ ೫೪

ಕಂ॥ ಗಿರಿಯುದ್ದಮನೇನಂ ಬಿ
ತ್ತರಿಪೆನದಂ ಖೇಚರರ್ ಬಿಸಿಲ್ಗಂಜುತ್ತುಂ ।
ಭರದೊಳ್ ಬಬಿಲ್ದು ಬಂದಾ
ಗಿರಿಶಿಖರದ ಮರದ ತುದಿಯ ನೆಬಿಲಂ ಸಾರ್ವರ್ ॥ ೫೫

ಕರಮೆಸೆದುದು ಗಿರಿಶಿಖರಂ
ಪರಮ ಸ್ವಚ್ಛಂದಲೀಲೆ ಪೆರ್ಚಿದ ಗಂಧ ।
ರ್ವರ ಗರುಡರ ಸಿದ್ಧರ ಖೇ -
ಚರರ ಮುನೀಶ್ವರರ ಸುರರ ನೆರವಿಗಳಿಂದಂ ॥ ೫೬

ಧರೆಯಟೆಯೆ ಹೊನ್ನಮೆಯ್ಯಂ
ತಿರುತಿರ್ದುಂ ಲಜ್ಜೆಯಿಲ್ಲ ತನಗೆಂದು ಕರಂ ।
ಸುರುಚಿರಧವಳಿಮದಿಂ ಸುರ
ಗಿರಿಯ ಹಿಮನಗದ ಚೆಲ್ವು ನಗದೇಕಿರ್ಕುಂ ॥ ೫೭

ಇಂತಿಂತು ಮೆಱಿಯುತಿರ್ಪುವ
ನಂತಂ ಘನತೇಜದಿಂದಯೋಗ್ರಾಹ್ಯತೆಯಿಂ ।
ದಂ ತಣ್ಪಿಂದಾಹಾ ! ರವಿ
ಕಾಂತಮಯಸ್ಕಾಂತಮಿಂದುಕಾಂತಂ ನಗದೊಳ್ ॥ ೫೮

ಸಿದ್ಧನಾದನು; ಈ ಕಾರಣದಿಂದ ಅಂದಿನಿಂದ ದಕ್ಷಿಣಾಯನ ಮತ್ತು ಉತ್ತರಾಯಣ ಎರಡು ಅಯನಗಳು ಏರ್ಪಟ್ಟುದು. ೫೪. ಓಹೊ! ಶಿವಶಿವ! ಆ ಗಿರಿಯ ಉದ್ದವನ್ನು ಯಾರು ತಾನೆ ಹೇಳಲು ಸಾಧ್ಯ! ವಿದ್ಯಾಧರಿಯರು ಈ ಗಿರಿಶಿಖರದಲ್ಲಿ ನಿಂತುಕೊಂಡು ತಾರೆಗಳನ್ನು ಮುತ್ತು ಎಂದು ಭ್ರಮಿಸಿ ಅವುಗಳನ್ನು ತೆಗೆದುಕೊಳ್ಳ(ಮುಡಿಯ)ಲು ಆತುರಪಡುತ್ತಿದ್ದಾರೆ. ೫೫. ಆ ಗಿರಿಯ ಎತ್ತರವನ್ನು ಏನೆಂದು ತಾನೆ ವರ್ಣಿಸಲು ಸಾಧ್ಯ! ಏಕೆಂದರೆ ಅಲ್ಲಿ ಸಂಚರಿಸುವ ಖೇಚರರು ಬಿಸಿಲಿಗೆ ಹೆದರಿ ಬಳಲಿ, ಆತುರ ದಿಂದ ಬಂದು ಆ ಗಿರಿಶಿಖರದ ತುದಿಯಲ್ಲಿರುವ ಮರದ ನೆಳಲನ್ನು ಸಾರುತ್ತಿದ್ದಾರೆ! ೫೬. ಅತ್ಯಂತ ಲೀಲಾವಿನೋದಿಗಳಾದ ಗಂಧರ್ವರು, ಗರುಡರು, ಸಿದ್ಧರು, ಗಗನಚರರು, ಮುನೀಶ್ವರರು ಮತ್ತು ವಿವಿಧದೇವತಾ ವಿಶೇಷಗಳಿಂದ ಆ ಗಿರಿಯ ಶಿಖರಗಳು ಬೆಳಗುತ್ತಿವೆ. ೫೭. ಎಲ್ಲರೂ ತಿಳಿದಿರುವಂತೆ ತಾನು ಹೊನ್ನಮೈ ತಳೆದಿದ್ದರೂ ಮೇರುವು ಶುಭ್ರತೆಯಿಲ್ಲದೆ ಲಜ್ಜೆಗೆಟ್ಟಿದೆ. ಇದರಿಂದಾಗಿ ಹಿಮಗಿರಿಯು ಧಾವಳ್ಯದಿಂದ ಕೂಡಿ ತಾನು (ಹಿಮಗಿರಿಯು) ಸುರಗಿರಿಯನ್ನು ಗೇಲಿ ಮಾಡುವಂತಿದೆ. ೫೮. ಹೀಗೆ ಮೆಱಿಯುತ್ತಿರುವ ಅನಂತ ಘನತೇಜಸ್ಸುಗಳು, ಕಬ್ಬಿಣವನ್ನು ಆಕರ್ಷಿಸುವಿಕೆ, ಮತ್ತು ಶೈತ್ಯ ಇವುಗಳಿಗೆ ಕ್ರಮವಾಗಿ ಕಾರಣವಾದ ಸೂರ್ಯಕಾಂತ ಶಿಲೆಗಳು, ಅಯಸ್ಕಾಂತ ಶಿಲೆಗಳು ಮತ್ತು ಚಂದ್ರಕಾಂತ ಶಿಲೆಗಳು ಆ ಪರ್ವತದಲ್ಲಿ

ಉ॥ ಆ ನಗದಲ್ಲಿ ಪುಣ್ಯತತಿಯೊ ಪ್ರಭೆಯೊರ್ಬುಳಿಯೊ ಮಹೇಶ್ವರ
ಶ್ರೀನಿಧಿಯೋ ಸುಧಾಕರನೊ ಸತ್ಯಮೋ ನಿತ್ಯಮೊ ಶೈವಪೂರಿತ ।
ಸ್ಥಾನನೊ ಶಾಂತಿಯೊ ದಯೆಯೊ ಧರ್ಮಮೊ ನಿರ್ಮಳನೀತಿಯೊ ಶಿವ
ಜ್ಞಾನಮೊ ಮುಕ್ತಿಸಂಕುಳಮೊ ಪೇಱಿನೆ ತಾಪಸವೀಥಿಯೊಪ್ಪುಗುಂ ॥ ೪೯

ಕಂ॥ ಗುಹೆ ಗುಹೆಗಳೊಳಗೆ ಬಳಸಿದ
ಬಹುಗಹ್ವರ ಗಹ್ವರಂಗಳೊಳ್ ಪರಸೌಖ್ಯಾ ।
ವಹನಿರ್ಝರ ನಿರ್ಝರದೊಳ
ಗಹರಹಮೊಪ್ಪಿರ್ಪುದಧಿಕ ಮನು ಮುನಿವೃಂದಂ ॥ ೬೦

ಯಮ ನಿಯಮ ನಿತ್ಯಕರ್ಮಂ
ಸಮನಿಸೆ ವನಲತೆಯ ಗುಲ್ಮವೃಕ್ಷಾವಳಿಯಾ ।
ವಿಮಳವ್ರತಿಗಳ್ ಸಲೆ ಕಂ
ದ ಮೂಲಫಲದಿಂದೆ ತಣಿದು ಪರಿಣಮಿಸಿರ್ಪರ್ ॥ ೬೧

ಭಾಸ್ಕರಕರಸಮ ವಿಮಳಮ
ನಸ್ಕರತಿ ವ್ರತಿಗಳಗ್ರಗಣ್ಯರ್ ಶಮೆಯಿಂ ।
ತಸ್ಕರರತಿಮುದದಿಂದೆ ನ
ಮಸ್ಕರಿಸುವ ಮುನಿಗಳನರ್ಘರಿರ್ಪರ್ ನಗದೊಳ್ ॥ ೬೨

ಕಂ॥ ಗಣ್ಯಾತೀತರ್ ಶಿವ ಲಾ
ವಣ್ಯದೆ ಸರ್ವಾಂಗಭಸಿತದಿಂ ನರೆಯಿಂ ಕಾ ।
ರುಣ್ಯದಿನತಿಧವಳತೆಯಿಂ
ಪುಣ್ಯಂ ಪಣ್ಣಾದ ತೆಱದೆ ತಾಪಸರಿರ್ಪರ್ ॥ ೬೩

ತೀರಳವಾಗಿವೆ. ೪೯. ಆ ಪರ್ವತದಲ್ಲಿ ಪುಣ್ಯಪುಂಜವೊ, ಬೆಳಗುಗಳ ಬಳಗವೊ, ಮಾಹೇಶ್ವರ ಸಂಪತ್ತಿನ ಗಣಿಯೊ, ಸುಧೆಯೊ, ಸತ್ಯವೊ, ನಿತ್ಯವೊ, ಶಿವಮಯ ನೆಲೆಯೊ, ಶಾಂತಿಯೊ, ದಯೆಯೊ, ಧರ್ಮವೊ, ನಿರ್ಮಳನೀತಿಯೊ, ಶಿವಜ್ಞಾನವೊ, ಮುಕ್ತಿಯ ಮೊತ್ತವೊ ಎಂಬಂತೆ ತಾಪಸರ ನೆರವಿ ಒಪ್ಪುತ್ತಿದೆ. ೬೦. ಆ ಗಿರಿಯಲ್ಲಿರುವ ಗುಹೆಗಳು, ಅವುಗಳನ್ನು ಬಳಸಿರುವ ಅನೇಕ ದೊಡ್ಡ ದೊಡ್ಡ ಗುಹೆ (ಗಹ್ವರ)ಗಳು, ಅವುಗಳಲ್ಲಿ ಹರಿಯುವ ಪರಮಸುಖಕರವಾದ ನಿರ್ಝರ (ಗಿರಿನದಿ)ಗಳು, ಅವುಗಳಲ್ಲಿ ದಿನ ದಿನ ಒಪ್ಪಿರುವ ಅನೇಕ ಮನು ಮುನಿಸಮೂಹವು ಅಲ್ಲಿ ವಾಸವಾಗಿದೆ. ೬೧. ಯಮ (ಅಂತರಿಂದ್ರಿಯನಿಗ್ರಹ) ನಿಯಮ (ಬಹಿರಿಂದ್ರಿಯ ನಿಗ್ರಹ) ನಿತ್ಯ ಕರ್ಮಾನುಷ್ಠಾನಪರರಾದ ಮುನಿಗಳು ವನಲತೆ, ಗುಲ್ಮ (ಪೊದೆ) ವೃಕ್ಷಾವಳಿಯ ವ್ರತಶೀಲರಾಗಿ ಅಲ್ಲಿಯ ಕಂದಮೂಲಫಲಗಳಿಂದ ತೃಪ್ತರಾಗಿ ಪರಿಣಾಮ ಗೊಂಡಿದ್ದಾರೆ. ೬೨. ರವಿಕಿರಣಗಳಿಗೆ ಸಮವಾದ ನಿರ್ಮಲ ಮನಸ್ಸುಳ್ಳವರೂ, ಅತ್ಯಂತ ವ್ರತಶೀಲರಲ್ಲಿ ಮೊದಲಿಗರೂ, ಶಮೆ (ಕ್ಷಮೆ) ಗುಣರು ಎಂದರೆ ಎಂತಹ ಕಳ್ಳರೂ ಕೂಡ ಶರಣಾಗುವ ಮುನಿಶ್ರೇಷ್ಠರು ಆ ಗಿರಿಯಲ್ಲಿದ್ದಾರೆ. ೬೩. ಅಲ್ಲಿರುವ ತಾಪಸರೂ ಅಸಂಖ್ಯಾತರು; ಅವರು ಶಿವಲಾವಣ್ಯವುಳ್ಳವರು, ಸರ್ವಾಂಗದಲ್ಲಿ

ವ॥ ಅಂತುಮಲ್ಲದೆ –

ಚಂ॥ ಭಸಿತಮನೊಪ್ಪೆ ಪೂಸುವ ಶಿವಾಗಮಮೋದುವ ಶಾಸ್ತ್ರಮಂ ವಿಚಾ
ರಿಸುವ ವಿನೂತನಾಕ್ಷಮಣಿಯಂ ಸರವೇಱಿಪ ನಾರಸೀರೆಯಂ ।
ಪಸರಿಪ ಕಂದಮೂಲಫಲಮಂ ತರೆ ಪೋಪ ಲಸನ್ಮೃಗಾಜಿನ
ಪ್ಪಸರಮನೆಯ್ದೆ ಪೊಲ್ವ ಮುನಿಮುಖ್ಯಕುಮಾರಸಮೂಹಮೊಪ್ಪುಗುಂ ॥ ೩೪

ವ॥ ಅಂತವರ ಶಾಂತಿಮಯ ಶೈವತೇಜಸ್ಸಾಮರ್ಥ್ಯಮೆಂತೆಂದೊಡೆ –

ಕಂ॥ ಮೈಗರೆದು ಮೆಲ್ಲ ಮೆಲ್ಲನೆ
ಕೈಗೊಟ್ಟೊಡನೈದಿ ಮತ್ತೆ ತಂದಿರಿಸಿ ಪಗಲ್ ।
ಬೈಗಿರುಳೆನ್ನದೆ ಸಲೆ ಬಿಸ
ಕೈಗುಂ ಮುನಿಗಳ್ಗೆ ನಗದ ಮರ್ಕಟನಿಕರಂ ॥ ೩೫

ಓಸರಿಸಿ ಬರ್ಚಿ ಪಕ್ಕಮ
ನೋಸರಿಸದೆ ಮುನಿಗಳೊಡನೆ ಹೋಮಸ್ಥಳದೊಳ್ ।
ಭಾಸಿಪವೊಲಂತುಮಿಂತುಂ
ಬೀಸುತ್ತೆಟ್ಟರಿಸಿ ಕುಡುವುದಾ ಶಿಖಿ ಶಿಖಿಯಂ ॥ ೩೬

ವ॥ ಅಂತೆಟ್ಟಜೆಸಿ ಕುಡುತ್ತಿರ್ಪನ್ನೆಗಮಲ್ಲಿ –

ಮ॥ಸ್ರ॥ ಇದು ಭೂಮಿಸ್ಥಾನದಿಂ ಮುತ್ತಿಗೆ ನಡೆಯಿಪ ನೀಲಾಶ್ಮಸೋಪಾನಮಾಹಾ
ಇದು ಸಂಸಾರಾತಪಾಶ್ರಾಂತರೊಳತಿ ಸುಖಮೀವಂಬುದಶ್ರೇಣಿ ಮೇಣಿಂ ।
ತಿದು ದುಷ್ಕರ್ಮಾಬ್ಜ ಪಂಡಂಗಳನುಱಿ ಕೊರಗಿಪ್ಪೊಂದು ನೀಹಾರಮೆಂಬಂ
ದದೆ ಹೋಮಸ್ತೋಮಧೂಮಂ ನೆಗೆದುದು ಮುನಿಗಳ್ ಬೇಳ್ಪ ಮಂತ್ರಾಗ್ನಿಯಿಂದಂ ॥ ೩೭

ಧರಿಸಿರುವ ಭಸ್ಮಭೂಷಿತರು, ಜ್ಞಾನ-ವಯೋವೃದ್ಧರು, ಕಾರುಣ್ಯದಿಂದಲೂ, ಅತಿ ಶುಭ್ರತೆಯಿಂದಲೂ ಪುಣ್ಯವೇ ಹಣ್ಣಾದಂತೆ ಪ್ರಕಾಶಿಸುತ್ತಿದ್ದಾರೆ. ೩೪. ಅಲ್ಲಿ ಋಷ್ಯಾಶ್ರಮಗಳಲ್ಲಿರುವ ಮುನಿಕುಮಾರಕರು ಒಂದೊಂದು ಆಶ್ರಮ ಕೆಲಸಗಳಲ್ಲಿ ತೊಡಗಿದ್ದಾರೆ. ಅವರಲ್ಲಿ ಕೆಲವರು ಭಸ್ಮಧಾರಣದಲ್ಲಿ ತೊಡಗಿದ್ದಾರೆ. ಕೆಲವರು ಹೊಸ ಮಣಿಮಾಲೆಯನ್ನು ಪೋಣಿಸುತ್ತಿದ್ದಾರೆ. ಮತ್ತೆ ಕೆಲವರು ಮಡಿಮಾಡಿದ ನಾರು ಮಡಿಗಳನ್ನು ಹರಡುತ್ತಿದ್ದಾರೆ. ಕೆಲವರು ಕಂದ ಮೂಲಫಲಗಳನ್ನು ತರಲು ಹೋಗುತ್ತಿದ್ದಾರೆ. ಕೆಲವರು ಮೃಗಾಜಿನವನ್ನು ಹೊಲಿಯುತ್ತಿದ್ದಾರೆ. ೩೫. ಆ ಗಿರಿಯಲ್ಲಿರುವ ಕಪಿಗಳು ಮುನಿಗಳ ಸೇವೆಯಲ್ಲಿ ನಿರತವಾಗಿದ್ದವು. ಅವು ರೂಪಾಂತರ ಹೊಂದಿ, (ಮೈಗರೆದು) ಮೆಲ್ಲ ಮೆಲ್ಲನೆ ಅವರ ಕೈ ಹಿಡಿದು ಜೊತೆಗೇ ಬಂದು ಅವರನ್ನು ನೆಲೆಸೇರಿಸಿ, ಹಗಲು-ಸಂಜೆ-ಇರುಳು ಎನ್ನದೆ ಮುನಿಗಳ ಸೇವೆ ಮಾಡುತ್ತಿದ್ದವು. ೩೬. ಅಲ್ಲಿರುವ ನವಿಲುಗಳು ಮುನಿಗಳ ಪಕ್ಕದಲ್ಲಿದ್ದುಕೊಂಡು ತಮ್ಮ ಬರ್ಹ (ಪಿಂಛ) ವನ್ನು ಅರಳಿಸಿ, ಆ ಹೋಮಸ್ಥಳಗಳಲ್ಲಿ ತೂಗಿ ಗಾಳಿ ಬೀಸುತ್ತ ಹೋಮಾಗ್ನಿಯನ್ನು ಪ್ರಜ್ವಲನಗೊಳಿಸುತ್ತಿದ್ದವು. ೩೭. ಅಲ್ಲಿಯ ಋಷ್ಯಾಶ್ರಮಗಳಲ್ಲಿ ಮುನಿಗಳು ವೇದ ಮಂತ್ರಪೂರ್ವಕವಾಗಿ ಅಗ್ನಿಹೋತ್ರವನ್ನು ಎಸಗುತ್ತಿದ್ದಾರೆ. ಹೋಮಧೂಮವು ದಟ್ಟವಾಗಿ ಗಗನಕ್ಕೆ ಏರುತ್ತಿದೆ. ಅದನ್ನು ನೋಡಿದರೆ ಭೂಲೋಕದಿಂದ ಮುಕ್ತಿಗೆ

ವ।। ಮತ್ತಮೊಂದೆಡೆಯೊಳ್

ಮ।। ಸುಲಿಪಲ್ ಕೆಂಜೆಡೆ ನಾರಸೀರೆಯಜಿನಂ ಯಜ್ಞೋಪವೀತಂ ಕಮಂ
ಡಲುವಾಧಾರಕಮಕ್ಷಮಾಲೆ ಭಸಿತಂ ಸ್ಮೇರಾನನಂ ಕರ್ಣಕುಂ !
ಡಲಮೊಪ್ಪುತಿರೆ ಪುಣ್ಯದಂತೆ ಶುಭದಂತಾನಂದದಂತಚ್ಚ ನಿ
ರ್ಮಳದಂತುಜ್ವಳತೇಜದಂತೆ ಸುಟಿವರ್ ತಚ್ಛೈಲದೊಳ್ ತಾಪಸರ್ ।। ೬೮

ವ।। ಅಂತವರ ಶಾಂತ್ಯಾಚರಣ ಶೈವತೇಜಃಪ್ರತಾಪದಿಂದೋರಂತೆ ಕ್ರೂರಮೃಗಂಗಳ್ ನಿಜ ವೈರಮಂ ಬಿಟ್ಟಪ್ಪುವದೆಂತೆಂದೊಡೆ

ಉ।। ಪುಲ್ಲಿಯ ಕೋಡ ಮೇಲೆ ಪುಲಿಗಳ್ ತಲೆಯಿಟ್ಟು ಕುರಂಗಸಂಕುಳಂ
ಭಿಲ್ಲರ ಬಿಲ್ಲ ಮೇಲೆ ಮೊಗವಿಟ್ಟು ನವಿಲ್ಗಳ ಮೇಲೆ ಭೀತಿ ತಾ ।
ನಿಲ್ಲದೆ ಸರ್ಪವೀಧಿ ಪೆಡೆಯಿಟ್ಟು ಗಜಂ ಶರಮಿಟ್ಟು ಸಿಂಗದೊಳ್
ನಿಲ್ಲದೆ ನೋಡುತಿರ್ಪುವು ನಗೇಂದ್ರ ಮುನೀಂದ್ರರ ಶಾಂತಮೂರ್ತಿಯಂ ।। ೬೯

ವ।। ಮತ್ತಮಾ ತಪಸ್ವಿಗಳ್ ರುದ್ರನಂತೆ ಜಟಾಜೂಟರಂಜಿತಾಬ್ಜರುಂ, ದುರ್ಯೋಧನಾ ಸ್ಥಾನದಂತೆ ಕರ್ಣಾಲಂಕಾರಶೋಭಿತರುಂ ಕುಬೇರನಂತೆ ವಿಭೂತಿವಿಲಸಿತಗಾತ್ರರುಂ, ಪುಣ್ಯವೃಕ್ಷದಂತೆ ಶಾಖಾವಲಂಬಿತ ಕರ್ಮನಿಷ್ಠರುಂ ವಲ್ಕಲಾಂತರ್ವಾಸರುಂ, ಕಮಲಕ್ಷೇತ್ರದಂತೆ ಪಂಕಜಗುಣೋಪವೀತರುಂ, ಭೂಮಿಜೆಯಂತೆ ಕುಶಲವಾಧಿಷ್ಠಿತರುಂ, ನವಗ್ರಹದಂತೆ ರವಿ-ರಾಜ-ವಕ್ರ-ಸೌಮ್ಯ-ಜೀವ-ಕಾವ್ಯಶ್ರೇಷ್ಠರುಂ, ನಕ್ಷತ್ರಮಂಡಲದಂತೆ ಪುಣ್ಯ-ಶ್ರವಣ-ಚಿತ್ತಾನಂದ ಹೃದಯರುಂ ಮೂಲಹಸ್ತಸಂಯುಕ್ತರುಂ, ವಾರಾಣಸಿಯಂತೆ ದಿವ್ಯಕ್ಷೇತ್ರವಾಸಿಗಳುಮೆನಿಸಿರ್ದ್ದರ್, ಅಂತುಮಲ್ಲದೆಯುಂ

ನಡೆಯಿಸಲು ಏರ್ಪಟ್ಟ ಕಪ್ಪುಶಿಲೆಯ ಸೋಪಾನವೊ! ಅಥವಾ ಸಂಸಾರತಾಪದಿಂದ ಬಳಲಿದವರನ್ನು ತಣಿಸಿ ಅತಿ ಸುಖವನ್ನು ಕೊಡುವ ಮೇಘಮಂಡಲವೊ! ಇಲ್ಲವೆ ದುಷ್ಕರ್ಮ ಎಂಬ ಕಮಲಗಳ ಗುಂಪನ್ನು ಕೆಡಿಸುವ ಮಂಜೊ! ಎಂಬಂತೆ ಇದೆ. ೬೮. ಹಸನಾದ ಹಲ್ಲು, ಕೆಂಜೆಡೆ, ನಾರಸೀರೆ, ಮೃಗಚರ್ಮ, ಜನಿವಾರ, ಕಮಂಡಲು, ಮುಖ್ಯ ಆಧಾರವೆನಿಸಿರುವ ಅಕ್ಷ (ಜಪ) ಮಾಲೆ, ಭಸ್ಮ, ನಗೆಮೊಗ, ಕರ್ಣ ಕುಂಡಲಗಳು ಒಪ್ಪಿರಲು ಆ ಶೈಲ (ಪರ್ವತ)ದಲ್ಲಿರುವ ತಪಸ್ವಿಗಳು ಶುಭದಂತೆಯೂ, ಆನಂದದಂತೆಯೂ, ನಿರ್ಮಲತೆಯಂತೆಯೂ, ಬ್ರಹ್ಮತೇಜಸ್ಸಿನಂತೆಯೂ ಅಲ್ಲಿ ಸುಳಿದಾಡುತ್ತಿದ್ದರು. ವ।। ಆ ತಪಸ್ವಿಗಳ ಶಾಂತಿ, ಅವರ ನಡೆ ಹಾಗೂ ತೇಜಸ್ಸುಗಳ ಪ್ರಭಾವದಿಂದ ಅಲ್ಲಿಯ ಕ್ರೂರ ಮೃಗಗಳು ತಮ್ಮ ಜಾತಿವೈರವನ್ನು ಸಂಪೂರ್ಣ ತೊರೆದು ಮೈತ್ರಿಯಿಂದ ಇದ್ದುವು. ಅದು ಹೇಗೆಂದರೆ-೬೯. ಚಿಗರಿಯ ಕೊಂಬಿನ ಮೇಲೆ ಹುಲಿಗಳು ತಲೆಯಿಟ್ಟು ಮಲಗಿವೆ, ಜಿಂಕೆಯ ಗುಂಪುಗಳು ಬೇಡರ ಬಿಲ್ಲುಗಳ ಮೇಲೆ ಮುಖವಿಟ್ಟು ನೋಡುತ್ತಿವೆ, ನವಿಲುಗಳ ಮೇಲೆ ಭಯವಿಲ್ಲದೆ ಹಾವುಗಳು ಹೆಡೆಯೆತ್ತಿ ಆಡುತ್ತಿವೆ, ಆನೆಯು ಸಿಂಹದ ಮೇಲೆ ಮಂಡೆಯನ್ನಿಟ್ಟು ಆ ತಾಪಸರ ಶಾಂತಮೂರ್ತಿಯನ್ನು ನೋಡುತ್ತಿದೆ; ವ।। ಅಲ್ಲಿರುವ ಮುನಿಗಳು ರುದ್ರನಂತೆ ಜಡೆಗಳನ್ನು ಬೆಳೆಸಿ ಪ್ರಕಾಶಿಸುತ್ತಿದ್ದರು, ಕರ್ಣ (ಕುಂತಿದೇವಿಯಲ್ಲಿ ರವಿಯ ಕೃಪೆಯಿಂದ ಹುಟ್ಟಿದವ)ನಿಂದ ಅಲಂಕೃತವಾದ ದುರ್ಯೋಧನನ ಆಸ್ಥಾನದಂತೆ ತಪಸ್ವಿಗಳು ಕಿವಿಗೆ ತೊಡವನ್ನಿಟ್ಟಿದ್ದರು, ನವನಿಧಿ (ವಿಭೂತಿ)ಗಳಿಂದ ಶೋಭಿಸುವ ಕುಬೇರನಂತೆ ಅವರು ಅಂಗಾಂಗಗಳಲ್ಲಿ

ಚಂ॥ ತರತರದಿಂದೆ ತೋರ್ಪ ಸರಿಯಿಂ ದರಿಯಿಂ ಪರಿವೊಜ್ಜರಂಗಳಿಂ
ತರುಕುಲದಿಂ ಲತಾವಿಸರದಿಂ ಮಡುವಿಂ ಗಿಡುವಿಂ ಗುಹಾಳಿಯಿಂ ।
ಸರಸಿಗಳಿಂದೆ ಪೆರ್ಮೆಳೆಗಳಿಂ ಕೆರೆಯಿಂ ತೊಱೆಯಿಂ ನದಂಗಳಿಂ
ಪರಿವೊನಲಿಂ ಬಲಂಗಳಿನರಣ್ಯದಿನಲ್ಲಿಯ ತಳ್ವಲೊಪ್ಪುಗುಂ ॥ ೭೦

ವ॥ ಆ ಶೈಲನಿತಂಬಮಂ ಸುತ್ತಿ ಮುತ್ತಿ ಘೋರ ಗಭೀರ ಕಾಂತಾರಮಿರ್ಪುದು ಅದೆಂತೆಂದೊಡೆ

ಕಂ॥ ಎಳಸಿ ಗಿರಿಯುಟ್ಟ ಪಟ್ಟಾ
ವಳಿಯೆನಿಕುಂ ತದ್ವನಂ ಲತಾವಳಿ ಪತ್ಮಾ ।
ವಳಿ ಪುಷ್ಪಾವಳಿ ಹಂಸಾ
ವಳಿ ಸಿಂಹಾವಳಿ ಮೃಗಾವಳಿಯ ಪಜ್ಜೆಗಳಿಂ ॥ ೭೧

ವ॥ ಮತ್ತಮಲ್ಲದೆ-

ಭಸ್ಮಧಾರಣಮಾಡಿದ್ದರು, ಕೊಂಬೆಗಳಿಗೆ ಒಣಗಿಸಲು ಹರವಿರುವ ನಾರಮಡಿಗಳಿರುವ ಪುಣ್ಯತರುಗಳಂತೆ ಆಯಾ ವೇದಶಾಖೆಯನ್ನು ಅನುಸರಿಸಿ ಕರ್ಮಾನುಷ್ಠಾನ ಮಾಡುತ್ತಿದ್ದರಲ್ಲದೆ, ನಾರುಮಡಿಗಳನ್ನು ಉಟ್ಟಿದ್ದರು, ಪಂಕ (ಕೆಸರು)ದಲ್ಲಿ ಹುಟ್ಟಿದ ಗುಣವನ್ನು ತಳೆದ ಕಮಲ (ತಾವರೆ) ಪ್ರದೇಶದಂತೆ ಅವರು ಕಮಲದ ದಂಟಿನಲ್ಲಿನ ಎಳೆಗಳಿಂದ ಮಾಡಿದ ಜನಿವಾರ ಧರಿಸಿದ್ದರು, ಕುಶ-ಲವ ಎಂಬ ಮಕ್ಕಳಿಂದ ಕೂಡಿದ ಸೀತೆಯಂತೆ ಕುಶ (ದರ್ಭೆ) ಲವ-ಚಾಪೆಗಳನ್ನು ಹಾಸಿ ಕುಳಿತಿದ್ದರು. ಸೂರ್ಯ-ಚಂದ್ರ-ವಕ್ರ (ಮಂಗಳ) ಬುಧ, ಬೃಹಸ್ಪತಿ ಮತ್ತು ಶುಕ್ರ ಮುಂತಾದ ನವಗ್ರಹದಂತೆ ಇವರು ಓಜಸ್ಸು, ಆಹ್ಲಾದ, ವಕ್ರೋಕ್ತಿ, ಸರಳತೆ, ರಸ ಮತ್ತು ಕಾವ್ಯ ಜೀವರೂಪಾದ ರೀತಿ ರಸಜ್ಞರು, ಕೈಯಲ್ಲಿ ಬೇರು ಹಿಡಿದವರು ಪುಣ್ಯಕರವಾದ ಶ್ರವಣ-ಚಿತ್ತೆಗಳು ಹಾಗೂ ನಕ್ಷತ್ರಮಂಡಲದಂತೆ ತಾಪಸರು ಪುಣ್ಯಕತೆಗಳನ್ನು ಕೇಳುವುದರಿಂದ ವಿವಿಧ ಆನಂದಹೃದಯರು, ಆಧಾರಾದಿ ಆರು ಚಕ್ರಗಳಲ್ಲಿ ಮನಸ್ಸನ್ನಿಟ್ಟು ಯೋಗಸಾಧನ ಮಾಡುತ್ತಿದ್ದರು. ದಿವ್ಯಕ್ಷೇತ್ರವೆನಿಸಿರುವ ಕಾಶಿಯಂತೆ ಪವಿತ್ರ ಕ್ಷೇತ್ರ ವಾಸಿಗಳು ಆಗಿದ್ದರು. ಮೇಲಾಗಿ- ೭೦. ವಿಧ ವಿಧವಾಗಿ ತೋರುವ ಮಳೆನೀರಿನ ಪ್ರವಾಹ; ಹರಿಯುವ ಗಿರಿನದಿಗಳು, ಮರಗಳು, ಬಳ್ಳಿಗಳು, ಮಡುಗಳು, ಗಿಡಗಳು, ಗವಿಗಳು, ಸರೋವರ ಗಳು, ಬಿದಿರಿನ ದೊಡ್ಡಮೆಳೆಗಳು, ಕೆರೆಗಳು, ತೊಱೆಗಳು, ನದಿ (ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ನದಿ) ಹರಿಯುತ್ತಿರುವ ಪ್ರವಾಹಗಳು ಬಿಲಗಳಿಂದ ಆ ಕಾಡಿನ ತಪ್ಪಲು ಒಪ್ಪಿತ್ತು. ವ॥ ಆ ಪರ್ವತದ ತಪ್ಪಲು ಪ್ರದೇಶವನ್ನು ಭಯಂಕರವಾದ ಕಾಡು ಬಳಸಿದೆ. ಎಂದರೆ- ೭೧. ಆ ಕಾಡು ವಿವಿಧ ಬಳ್ಳಿಗಳು, ಎಲೆಗಳು, ಹೂವುಗಳು, ಹಂಸೆಗಳು, ಸಿಂಹಗಳು ಮತ್ತು ಮೃಗಾವಳಿಯ ಅಂಚಿನ ಸಾಲುಗಳಿಂದ ಶೋಭಿಸುವ ರೇಷ್ಮೆಯ ಸೀರೆಯನ್ನು ಆ ಗಿರಿಯು ಬಯಸಿ ಉಟ್ಟಿದೆಯೋ ಎಂಬಂತೆ ಇತ್ತು.

ಮ॥ಸ್ರ॥ ಅರನೇಱೆಲ್ತಾಱೆ ತುಂಬುರ್ತದುಕಳಿಲೆ ಲವಂ ನೆಲ್ಲಿ ಬಿಲ್ವಾರ್ಜುನಂ ಕ
ಮ್ಮರನಾಲಂ ಜಾಲಬೇಲಂ ಬಳಿಲರಳಿಯೆರಂ ಕಕ್ಕೆ ಹೂರಂಬೆಳಲ್‌ಮಾ ।
ವರುಟಾಳಂ ಹಾರಿವಾಳಂ ತುಡು ತಡಸೊಡವಂ ಲೊಕ್ಕಿಗೊಟ್ಟಕ್ಕಿ ದಿಂಡಂ
ಚರಚಲ್ವಂ ಬ್ರಹ್ಮವೃಕ್ಷಂ ಕಱೆಕೆ ತಱೆಯದಿಂದೊಪ್ಪುತಿರ್ದತ್ತರಣ್ಯಂ ॥ ೭೨

ಚಂ॥ ನರಿಶಶಕಂ ವೃಕಂ ಸರಟನೆಯ್ಮಿಗಂ ಮರೆವಿಂಡು ಬೆಕ್ಕು ಮುಂ
ಗುರಿ ಮುಸಲಿವ್ರಜಂ ಕರಡಿ ಮೆಂಡಲಿ ಪೆರ್ಬುಲಿ ಮರ್ಕಟಾಳಿ ಸೂ ।
ಕರನಿಕರಂ ಕುರಂಗತತಿಯುಷ್ಟ್ರಚಯಂ ಘನಖಡ್ಗಿ ಸೈರಿಭಂ
ಪುರುಷಮೃಗಂ ಗಜಂ ಶರಭ ಸಿಂಹದಿನೊಪ್ಪುವುದಲ್ಲಿ ಕಾನನಂ ॥ ೭೩

ಅರಗಿಳಿ ಪಾರಿವಂ ಕುರರಿ ಲಾವಗೆಯನ್ಯಭೃತಂ ಶರಾರಿ ಹೊಂ
ಗುರು ಚರಣಾಯುಧಂ ಶಕುನಿ ಚಂದನವಕ್ಕಿ ಚಕೋರಿ ಟಿಟ್ಟಿಭಂ ।
ಹರಡೆ ಗವುಂಜು ಚಾದಗೆ ಬಕಂ ಶಿಖಿ ವಾಯಸಮಂಚೆ ಕೊಂಚೆ ತಿ
ತ್ತಿರಿ ಗಿಡುಗಂಗಳೆಂಬ ಖಗವೃಂದದಿನಲ್ಲಿಯರಣ್ಯಮೊಪ್ಪುಗುಂ ॥ ೭೪

ಮ॥ಸ್ರ॥ ಅತಿ ಘೋರಂ ಧ್ವಾಂತಪೂರಂ ಬಹುತರುಂ ಕುಲಸಾರಂ ಸಮುದ್ಯದ್ಗಭೀರಂ
ಪ್ರತಿಶೂನ್ಯಂ ದಾವಮಾನ್ಯಂ ಮೃಗವಿತತಿಗನನ್ಯಂ ನದೀವ್ಯಾಧಧನ್ಯಂ ।
ನುತ ಚೋದ್ಯಂ ವ್ಯಾಧವೇದ್ಯಂ ದಿನಕರ ಕರಣಾಭೇದ್ಯಮೀ ಭೂಮಿಗಾದ್ಯಂ
ನುತಪುಣ್ಯ ತಾನಗಣ್ಯಂ ಕಠಿನವಿಷಯಗುಣ್ಯಂ ವಿರಾಜಿಪ್ಪರಣ್ಯಂ ॥ ೭೫

೭೨. ಆ ಕಾಡು ಜಂಬುನೇರಳೆ, ತಾರೆಮರ, ತೂಬರೆಮರ, ತದುಕು, ಅಳಲೆ, ನೆಲ್ಲಿ, ಬಿಲ್ವ, ಅರ್ಜುನ, ಕಮ್ಮರೆ, ಆಲ, ಜಾಲ, ಬೇಲ, ಬಿಳಿಲು, ಬಿಡುವ, ಬಿಳಿಲು ಅರಳಿ, ಯಲಚಿ, ಕಕ್ಕೆ, ಬೂರುಗ, ಬೆಳವಲ, ಮಾವು, ಅರವಾಳ (ಅಂಟುವಾಳ), ಹಾರಿವಾಳ, ತುಡು, ತಡಸು, ಒಡವ, ಲೊಕ್ಕಿ, ಗೊಟ್ಟಕ್ಕಿ, ದಿಂಡಲು, ಚಿರಚಲ್ವ, ಬ್ರಹ್ಮವೃಕ್ಷ, ಗರಿಕೆ, ತರಿಯದಮರ, ಮುಂತಾದ ಗಿಡಮರಗಳಿಂದ ಶೋಭಿಸುತ್ತಿತ್ತು. ೭೩. ಆ ಕಾಡಿನಲ್ಲಿ ನರಿ, ಮೊಲ, ತೋಳ, ಸರಟ, ಎಯ್ಮಮಿಗ, ಮುಳ್ಳುಹಂದಿ, ಬೆಕ್ಕು, ಮುಂಗುಸಿ ಸೊಂಡಿಲಿ, ಕರಡಿ, ಹೆಬ್ಬುಲಿ, ಕೋತಿಗಳು, ಕಾಡಹಂದಿಗಳು, ಜಿಂಕೆಗಳು, ಒಂಟೆಗಳು, ಖಡ್ಗಮೃಗ, ಸೈರಿಭ, ಪುರುಷಮೃಗ, ಆನೆ, ಶರಭ ಮತ್ತು ಸಿಂಹಗಳಿಂದ ಒಪ್ಪಿತ್ತು. ೭೪. ಆ ಅರಣ್ಯವು ಅರಗಿಳಿ, ಪಾರಿವಾಳ, ಕುರರಿ, ಲಾವಗೆ, ಕೋಗಿಲೆ, ಶರಾರಿ, ಪಕ್ಷಿ ವಿಶೇಷ ಹೊಂಗರು, ಕೋಳಿ, ಶಕುನದಹಕ್ಕಿ, ಚಂದನಹಕ್ಕಿ, ಚಕೋರಿ, ಟಿಟ್ಟಿಭ, ಹರಡೆ, ಗವುಂಜು, ಚಾತಕ, ಕೊಕ್ಕರೆ, ನವಿಲು, ಕಾಗೆ, ಹಂಸ, ಕೊಂಚೆ, ತಿತ್ತಿರಿ ಮತ್ತು ಗಿಡುಗ ಮುಂತಾದ ಪಕ್ಷಿಗಳಿಂದ ಶೋಭಿಸುತ್ತಿತ್ತು. ೭೫. ಆ ಕಾಡು ಭಯಂಕರವಾದ ಕಗ್ಗತ್ತಲು, ವಿವಿಧ ಮರಗಿಡಗಳಿಂದ ನಿಬಿಡವಾಗಿ ಅತ್ಯಂತ ಗಂಭೀರವಾಗಿದೆ; ಆ ಕಾಡಿಗೆ ಸಮವಾದದ್ದು ಇನ್ನೊಂದಿಲ್ಲ, ಎಲ್ಲೆಡೆ ಕಾಡ್ಗಿಚ್ಚು ಖಗ (ಹಕ್ಕಿ) ಮೃಗಗಳಿಗೆ, ಅದು ಅತ್ಯಗತ್ಯ, ಅನೇಕ ನದಿಗಳಿಂದ ಕೂಡಿದ ಧನ್ಯತೆ ಅದಕ್ಕಿದೆ, ಅತ್ಯಾಶ್ಚರ್ಯಕರವಾಗಿರುವುದರಿಂದ ಕಾಡುಬೇಡರಿಗೆ ಮಾತ್ರ ಅಲ್ಲಿಯ ವಿಷಯಗೊತ್ತು, ರವಿಕಿರಣಗಳು ಅಲ್ಲಿ ಪ್ರವೇಶಿಸುವುದು ಕಷ್ಟವೇ! ಹೀಗೆ ಅನಾದಿಕಾಲದಿಂದಲೂ

ಮ॥ ಹರಿಯಂತಿಂದುವಿನಂತೆ ಕೃಷ್ಣಮೃಗಸಂಶ್ಲೇಷಂ ಸುರಾವಾಸದಂ
ತುರಗಾಧೀಶ್ವರನಂತೆ ಕೌಶಿಕವಿಭೋಗಂ ಕಾಮನಂತಬ್ಧಿಯಂ ।
ತಿರೆ ಚಂಚದ್ರತಿಸಂಯುತಾನಿಮಿಷವೃಂದಂ ವ್ಯೋಮದಂತಬ್ಜ ವಿ
ಷ್ಟರನಂತುಜ್ಜ್ವಳ ರಾಜಹಂಸವಿಭವಂ ರೌದ್ರಾನನಂ ಕಾನನಂ ॥ ೭೬

ಅದು ಸರುವು ದರುವಿನಾಗರ
ಮದು ಭೂಜವ್ರಜದ ತಾಣಮದು ಮೃಗಸಂತಾ ।
ನದ ನೆಲೆಯದು ಶಬರಾನೀ
ಕದ ಜನ್ಮಸ್ಥಲಮೆನಿಪ್ಪುದೊಪ್ಪುವರಣ್ಯಂ ॥ ೭೭

ಮ॥ ಅದಱೊಳ್ ಭೀಕರಕಾಲಕಿಂಕರನಿಭಂ ಭೀಷ್ಮಾನನಂ ರೌದ್ರಸಂ
ಮದನೇತ್ರಂ ಘನಕೃಷ್ಣಕಾಯನಿಕರಂ ಕಾಠಿನ್ಯಧರ್ಮಂ ಭಯ ।
ಪ್ರದಬಾಣಾವಳಿ ನಿಷ್ಠುರಧ್ವನಿಚಯಂ ನಾನಾಮೃಗಾಯುಷ್ಯದಾ
ಪದಲಂಕಾರದಿನೊಪ್ಪಿ ಲುಬ್ಧಕಕುಲಂ ತೀವಿರ್ಪುದಂತಾವಗಂ ॥ ೭೮

ಅತಿಪುಣ್ಯಕರವೂ ಅನುಪಮವೂ ಕಠಿನ ವಿಷಯ ಗುಣಗಳುಳ್ಳದೂ ಆದ ಅರಣ್ಯವು ಅಲ್ಲಿ ವಿರಾಜಿಸುತ್ತಿದೆ. ೭೬. ರೌದ್ರಾನನ ಭಯಂಕರವಾದ ಆ ಕಾನನ (ಕಾಡು)ವು ಶ್ರೀಕೃಷ್ಣನ ಲೀಲಾವಿಶೇಷವುಳ್ಳ ವಿಷ್ಣುವಿನಂತೆಯೂ, ಮೃಗ(ಜಿಂಕೆ)ದಂತಿರುವ ಕಪ್ಪು ಕಲೆಯುಳ್ಳ ಚಂದ್ರನಂತೆಯೂ ಕೃಷ್ಣಮೃಗ (ಚಿಗರಿ)ಗಳ ಸಂಬಂಧವುಳ್ಳದ್ದು. ಕೌಶಿಕ (ವಿಶ್ವಾಮಿತ್ರ)ನ ಸಂಬಂಧವುಳ್ಳ(ಸುರಾವಾಸ) ದೇವಲೋಕದಂತೆಯೂ ವಿಭೋಗ-ವಿಶಿಷ್ಟ (ಸರ್ಪ)ಶರೀರವುಳ್ಳ ಸರ್ಪರಾಜನಂತೆಯೂ ಕೌಶಿಕ ವಿಭೋಗಂ (ಗೂಬೆ) ಗಳಿಗೆ ವಿಹಾರಸ್ಥಾನವಾಗಿತ್ತು. ಮನೋಹರಳಾದ ರತಿದೇವಿಯಿಂದ ಕೂಡಿದ ಮನ್ಮಥನಂತೆಯೂ, ಅಂದವಾದ ಪ್ರೇಮವಿಲಾಸಗಳಿಂದ ಕೂಡಿದ ಅನಿಮಿಷ-ಮೀನುಗಳಿರುವಂತೆ ಸಮುದ್ರದ ಪ್ರೇಮವಿಲಾಸಗಳಿಂದ ಕೂಡಿರುವ ಅನಿಮಿಷ-ದೇವತಾವಿಶೇಷಗಳಿಂದ ಕಂಗೊಳಿಸಿತ್ತು. ರಾಜ-ಪೂರ್ಣಚಂದ್ರನಿಂದ ಕೂಡಿದ ಗಗನದಂತೆಯೂ ಹಂಸಾರೂಢನಾದ ಕಮಲಾಸನ-ಚತುರ್ಮುಖ ಬ್ರಹ್ಮನಂತೆಯೂ ರಾಜಹಂಸಗಳಿಂದ ವಿರಾಜಮಾನವಾಗಿತ್ತು. ೭೭. ಆ ಅರಣ್ಯವು ಎಲ್ಲ ದರಿ-ಗುಹೆಗಳಿಗೆ ಆಕರ, ಎಲ್ಲ ಬಗೆಯ ಕುಜ (ಭೂಜ) ಮರಗಳ ನೆಲೆ, ಮೃಗಸಮೂಹದ ನಿಲ್ದಾಣ, ಬೇಡರ ಹುಟ್ಟುನೆಲವೊ ಎಂಬಂತೆ ಇತ್ತು. ೭೮. ಆ ಕಾಡಿನಲ್ಲಿ ಯಾವಾಗಲೂ ಬೇಡರ ಪಡೆ ತುಂಬಿರುತ್ತಿತ್ತು. ಅವರ ಸ್ವರೂಪವನ್ನು ಹೀಗೆ ವರ್ಣಿಸಲಾಗಿದೆ-ಅವರು ಭಯಂಕರವಾದ ಯಮದೂತರಂತೆ ಇದ್ದರು; ಅವರ ಭೀಕರವಾದ ಮುಖ, ರೌದ್ರಸ್ವಭಾವದಿಂದ ಮದಿಸಿರುವ ಕಣ್ಣುಗಳು, ಕಡುಕಪ್ಪು ದೇಹಗಳು, ಕಠಿನಸ್ವಭಾವ ಆಥವಾ ಬಿಲ್ಲುಗಳು, ಭಯಂಕರವಾದ ಅಂಬುಗಳು, ನಿಷ್ಠುರವಾದ ಕೂಗಾಟಗಳು, ನಾನಾ ವಿಧವಾದ ಮೃಗಗಳ ಆಯುಷ್ಯಕ್ಕೆ ಆಪತ್ತನ್ನು ಒಡ್ಡುವುದೇ ಅವರ ಕುಲವೃತ್ತಿ;

ವ।। ಅಂತಿರ್ದ ಪುಳಿಂದಬಲಂ ಬೇಂಟೆಗೆಂದೊರ್ಬುಳಿಗೊಂಡು ಮರ್ಬು ಮಸಗಿದಂತೆ ಸಡಗರಿಸಿ ಸಮಕಟ್ಟಿ ಸನ್ನೆದೋಜೆ

ಮ।।ಸ।। ಬಡಿಕೋಲ್ ಕಿರ್ಗಟ್ಟು ಹಾಸಂ ಶುನಕವಿತತಿ ಹೇರಿಟ್ಟ ಕೂರಂಬುಗಳ್ ಕೈ
ಪೊಡೆ ಬಲ್ ಪುಲ್ದಂಡೆ ಬೆಳ್ಳಾರ್ಪಟಮೆರೆಬಲೆಗಳ್ ಸಾಳುವಂ ಕೂಳಿಗಾಳಂ ।
ಗಿಡುಗಂ ಬಲ್ದಂಡಿಯೊಳ್ ದೀಹದ ಪುಲಿ ನಿಶಿತಾಸ್ತ್ರಂಗಳುಗ್ರತ್ವಮಂ ಸಂ
ಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡೆದುದುದ್ಯತ್ಕಿರಾತಪ್ರಜಾತಂ ।। ೭೯

ಕಂ।। ತಡಿಕೆವಲೆ ಕಣ್ಣಿವಲೆ ನಿ
ಟ್ಟಡಕಿಲ್ಲವಲೆ ಗೂಂಟವಲೆ ಪೊಣರ್ಚುವ ಬಲೆ ಮುಂ ।
ಬಿಡುವಲೆ ನಡುವಲೆ ತಡೆವಲೆ
ಸಿಡಿವಲೆ ನಿಡುವಲೆಗಳೊಪ್ಪಿದುವು ಲುಬ್ಧಕರೊಳ್ ।। ೮೦

ವ।। ಆಗಳ್

ಚಂ।। ಹರಿಣನ ಬೇಂಟೆ ಪೆರ್ಬುಲಿಯ ಬೇಂಟೆ ವರಾಹನ ವೀರ ಬೇಂಟೆ ಪೇ
ರ್ಗರಡಿಯ ಬೇಂಟೆ ಹೆಮ್ಮರಿಯ ಬೇಂಟೆ ವಿಹಂಗದ ಮೊತ್ತವೇಂಟೆ ತ ।
ತ್ಕರಿಗಳ ಬೇಂಟೆ ಸಿಂಹ ಶರಭಂಗಳ ಬೇಂಟೆಗಳಾದಿಯಾದ ಭೀ
ಕರಮೃಗಸಂಘ ಸಂಹನನಮುಣ್ಮಿತು ಪರ್ವಿದರಣ್ಯಮಧ್ಯದೊಳ್ ।। ೮೧

ಮ।। ನಡೆಯೆಂಬಬ್ಬರಿಸೆಂಬ ಪರ್ವಿ ಪರಿಯೆಂಬಾರೆಂಬ ಸಾರೆಂಬ ಸಂ
ಗಡಿಸೆಂಬಡ್ಡಮಿರೆಂಬ ಸಾರ್ದು ಸರುವಂ ಕಟ್ಟೆಂಬ ಮುಟ್ಟೆಂಬ ಪಿಂ ।
ದಡಸೆಂಬೊತ್ತರಿಸೆಂಬ ಸುತ್ತಿನಿಲಿಸೆಂಬೈಯ್ದೆಂಬ ಮೆಯ್ದೋಜುತುಂ
ಪೊಡೆಯೆಂಬೊಂದು ಪುಳಿಂದವ್ಯಂದನಿನದಂ ಪೊಣ್ಮಿತ್ತು ಕಾಂತಾರದೊಳ್ ।। ೮೨

ಇಂತಹ ಬೇಡಪಡೆಗಳು ಅಲ್ಲಿ ನಿರಂತರ ನೆಲೆಸಿದ್ದವು. ವ।। ಹೀಗಿರುವ ಆ ಬೇಡಪಡೆ ಮೃಗಯಾ (ಬೇಟೆ) ವಿಹಾರಕ್ಕಾಗಿ ಒಟ್ಟಿಗೆ ನುಗ್ಗಿದಾಗ ಕತ್ತಲು ಕವಿದಂತೆ ಸಡಗರದಿಂದ ಸಮಕಟ್ಟಿ ಸೈತುಮಾಡಿ- ೭೯. ಆ ಕಿರಾತರ ಗುಂಪು ಬಡಿಕೋಲು, ಕಿರ್ಗಟ್ಟು, ಹಾಸು (ಕಣ್ಣಿ), ನಾಯಿಗಳು, ಸೇರಿಸಿದ ಕ್ರೂರವಾದ ಬಾಣಗಳು, ಕೈಪೊಡೆ, ಬಿಲ್ಲು, ಹುಲ್ಲು ಮೆದೆ, ಬಿಳಿ ಬಟ್ಟೆಯ ಬಲೆಗಳು ಬೇಟೆಯಲ್ಲಿ, ಉಪಯೋಗಿಸುವ ಹದ್ದು, ಗಿಡುಗ, ಸಾಕಿದ ಹುಲಿ-ತೀಕ್ಷ್ಣವಾದ ಅಸ್ತ್ರಗಳು, ಜೊತೆಗೆ ಉಗ್ರತ್ವವೂ ಒಪ್ಪಿರಲು ವಿಂಧ್ಯಾಟವಿಗೆ ನಡೆದುದು. ೮೦. ತಡಿಕೆಯ ಬಲೆ, ಕಣ್ಣಿಯ ಬಲೆ, ಉದ್ದವಾಗಿ ಸೇರಿದ ಬಲೆ, ಅಂಟುಹಚ್ಚಿದ ಗೂಟದಬಲೆ, ಪೊಣರ್ಚುವ ಬಲೆ ಮುಂತಾದ ಬಗೆ ಬಗೆಯ ಬಲೆಗಳು ಅವರದಲ್ಲಿವು. ವ।। ಆಗ-೮೧. ಹಬ್ಬಿರುವ ಅರಣ್ಯದ ಮಧ್ಯದಲ್ಲಿ ಚಿಗರೆಗಳ ಬೇಟೆ, ಹೆಬ್ಬುಲಿಯ ಬೇಟೆ, ಕಾಡುಹಂದಿಗಳ ವೀರಬೇಟೆ, ದೊಡ್ಡ ಕರಡಿಯ ಬೇಟೆ, ಒಂದು ಬಗೆಯ ಜಿಂಕೆ (ದೊಡ್ಡಜಿಂಕೆ)ಗಳ ಬೇಟೆ, ಹಕ್ಕಿಗಳ ಗುಂಪು ಗುಂಪುಗಳ ಬೇಟೆ, ಮದ್ದಾನೆಗಳ ಬೇಟೆ, ಸಿಂಹ, ಶರಭಗಳ ಬೇಟೆ, ಇವೇ ಮೊದಲಾದ ಭಯಂಕರ ಮೃಗಸಂಘಗಳ ಸಂಹಾರವೇ ಏರ್ಪಟ್ಟಿತ್ತು. ೮೨. ನಡೆ ನಡೆ! ಅಬ್ಬರಿಸು! ಬೇಗ ಓಡು! ಬಾ! ಹೋಗು! ಜೊತೆಗೆ ಹೋಗು! ಅಡ್ಡನಿಲ್ಲು, ಸರಿದು ಸರುವ ಕಟ್ಟು! ಅದನ್ನು

ಚಂ॥ ಇಡು ಮೊಲನಂ ತೆರಳ್ಚದಿಸು ಪುಲ್ಲೆಗಳಂ ಬಲೆಯೊಡ್ಡಿ ಖಡ್ಗಿಯಂ
ಪಿಡಿ ಮರೆವಿಂಡನೆಚ್ಚು ಪುಲಿಯಂ ಛಲದಿಂದಿಱಿ ಪಂದಿಯೊತ್ತುಗೊಂ ।
ಡೊಡೆ ಬಿಡು ನಾಯ್ಗಳಂ ಸಮೆದ ಪೆರ್ಗುಳಿಯೊಳ್ ಕರಿಪೋತಕಂಗಳಂ
ಕೆಡೆಪು ಮರಳ್ಚು ಸಿಂಹಮನೆನಿಪ್ಪ ಘನಧ್ವನಿಯಾಯ್ತರಣ್ಯದೊಳ್ ॥ ೪೩

ಕಂ॥ ನಡುಗಿತು ವಿಹಗತತಿಯು
ರ್ಕುಡುಗಿತ್ತು ಮೃಗಾಳಿ ತಮ್ಮ ನಿಜಪೋತಕಮಂ ।
ಮಡಗಿತ್ತು ಗೂಡು ಗುಹೆಯೊಳ್
ತೊಡಗಿತ್ತು ಕಿರಾತಭೀಕರಧ್ವನಿ ವನದೊಳ್ ॥ ೪೪

ವ॥ ಆ ಸಂಭ್ರಮದೊಳೊರ್ವ ಪುಳಿಂದಂ ತನ್ನ ನಚ್ಚಿನ ನಾಯಂ ಮೊಲನಂ ಸರುವಂ ತೋಜೆ ಕೀಜೆ ಬಟ್ಟಾಗಳ್

ಕಂ॥ ನಡೆನಡೆದು ನಸುಬಳುಂಕು
ತ್ತೆಡಬಲನಂ ನೋಡಿ ಕೂಡೆಯಾಘ್ರಾಣಿಸುತಂ ।
ಗಿಡುವಿನ ಸರುವಿನ ದರುವಿನ
ಮಡುವಿನ ಬಟೆಗೊಂಡು ಶುನಕನಟ್ಟಿತು ಮೊಲನಂ ॥ ೪೫

ಅಟ್ಟಿದೊಡೆ ತಿರುಗಿ ಮುರಿ ಮುರಿ
ದೊಟ್ಟೈಸುತೆ ಕೊಂಕಿ ಪರಿಯುತ್ತೆಡನಂ ಬಲನಂ ।
ದಿಟ್ಟಿಸುತೆ ನಿಂದು ನಿಲ್ಲದೆ
ನಿಟ್ಟೋಟದೊಳೋಡಿತೆಸೆವ ಮಸಕದ ಶಶಕಂ ॥ ೪೬

ಮುಟ್ಟು! ಹಿಂದೆ ಸರಿ! ಒತ್ತರಿಸು! ಸುತ್ತಿ ನಿಲ್ಲಿಸು! ಹೋಗು! ಮೈದೋರಿ ಹೊಡೆ! ಹೀಗೆ ಆ ಪುಳಿಂದರ ಕಲಕಲನಿನದ ಆ ಕಾಡಿನಲ್ಲಿ ಹಬ್ಬಿತ್ತು. ೪೩. ಮೊಲವನ್ನು ಹೊಡೆ! ಹುಲ್ಲೆಗಳನ್ನು ಹೋಗಗೊಡದೆ ಬಾಣಬಿಡು! ಬಲೆಯೊಡ್ಡಿ ಖಡ್ಗಮೃಗವನ್ನು ಹಿಡಿ! ಮರೆಯಾಗಿದ್ದು ಹುಲಿಯನ್ನು ಛಲದಿಂದ ಇರಿ! ಹಂದಿಗಳು ಒಟ್ಟಾದರೆ ನಾಯಿಗಳನ್ನು ಬಿಡು! ಸಿದ್ಧಪಡಿಸಿದ ದೊಡ್ಡಗುಳಿಗಳಲ್ಲಿ ಆನೆಮರಿಗಳನ್ನು ಕೆಡಹು! ಸಿಂಹವನ್ನು ಹಿಂದಿರುಗುವಂತೆಮಾಡು! ಎಂಬ ಭೀಕರಧ್ವನಿಗಳು ಅಲ್ಲಿ ಮೊಳಗಿದವು. ೪೪. ಆ ಕಾಡಿನಲ್ಲಿ ಮೊಳಗಿದ ಕಿರಾತರ ಭೀಕರಧ್ವನಿಗೆ ಹಕ್ಕಿ ಬಳಗ ನಡುಗಿತು, ಮೃಗಗಳ ಸೊಕ್ಕು ಅಡಗಿತ್ತು, ಅವು ತಮ್ಮ ಮಕ್ಕಳು ಮರಿಗಳನ್ನು ಗೂಡುಗಳಲ್ಲಿ, ಗುಹೆಗಳಲ್ಲಿ ಬಚ್ಚಿಟ್ಟವು. ವ॥ ಆ ಸಡಗರದಲ್ಲಿ ಒಬ್ಬ ಬೇಡ ತನ್ನ ನೆಚ್ಚಿನ ನಾಯಿಯನ್ನು ಮೊಲದ ಮೇಲೆ ಚೂ ಬಿಟ್ಟು ಕಿರುಚಿಕೊಂಡನು; ಆಗ-೪೫. ಆ ಶುನಕವು ನಡೆನಡೆದು ಕೊಂಚ ಬಳುಕುತ್ತ ಎಡಬಲಗಳನ್ನು ನೋಡಿ ಮೂಸಿ ನೋಡುತ್ತಾ ಗಿಡ, ಸರು, ದರು, ಮಡುಗಳನ್ನು ಬಳಸಿ ಮೊಲನನ್ನು ಬೆನ್ನಟ್ಟಿತು. ೪೬. ಹಾಗೆ ಬೆನ್ನಟ್ಟಿದರೂ ಆ ಮೊಲವು ತಿರುಗಿ ಮುರಿಮುರಿದು ರಾಶಿ ಹಾಕಿ ಕೊಂಡಿ ನುಸುಳಿ ಎಡ ಬಲಗಳನ್ನು ದಿಟ್ಟಿಸಿ ನಿಂತೂನಿಲ್ಲದೆ ನಿಟ್ಟೋಟದಲ್ಲಿ ಓಡಿಹೋಯಿತು.

ಕಂ॥ ಬಿಡದೋಡೆ ಕಂಡು ಶಬರಂ
ಕಡುಮುಳಿದಲಿಯಟ್ಟಿ ತಿರುಗೆ ತಿರುಗುತ್ತುಂ ಸಂ ।
ಗಡಿಸಿ ಪರಿದುಬುಬೆನುತ್ತುಂ
ಬಡಿಗೋಲಿಂದಿಟ್ಟನಧಿಕ ಬಲನಂ ಮೊಲನಂ ॥ ೮೭

ಸ್ರ॥ ಇಡೆ ತಿರುಗುತ್ತೆ ಬರ್ಪ ಬಡಿಕೋಲೊಳೆ ಸಿಲ್ಕುತೆ ಸಿಲ್ಕದಾ ಮೊಲಂ
ಗಿಡುಗಳೊಳೋಡಿ ಪೊಕ್ಕ ಪದದೊಳ್ ಘನರಾಹುವ ಕೋಲ್ಗೆ ಭೀತಿಗೊಂ ।
ಡುದುಪತಿಬಿಂಬದಿಂದೆ ಸರಿದೋಡಿ ಮುಗಿಲ್ಗಳೊಳೆಯ್ದಿ ಪೊಕ್ಕು ಗಂ
ಡುಡುಗಿ ಸುರುಳ್ದು ತಚ್ಛಶಕಂ ನೆರೆ ಪೋಲ್ತುದು ಕಾಡ ಪೆರ್ಮೊಲಂ ॥ ೮೮

ವ॥ ಮತ್ತೊಂದೆಡೆಯಲ್ಲಿ

ಮ॥ ಪಸರಂಬೆತ್ತೆಡೆಯಾದ ನೀಡಡಿ ಪೊದಟ್ಟುತ್ಕರ್ಣವಾಕುಂಚತಾ
ಸ್ತ್ರಸಮೇತೋಚ್ಚಕರಾಗ್ರವಸ್ಖಲಿತಚಿತ್ತಂ ಸಂಸ್ಫುಟಾಲೋಕನಂ ।
ಕುಸಿದಂಗಂ ಮಿಗೆ ದೃಷ್ಟಿ ಮುಷ್ಟಿ ಶರಸಂಧಾನಂಗಳೊಂದಾಗೆ ತಾ
ನಿಸಲೊಂದೊಂದು ಕುರಂಗಮಂ ಶಬರನೊಪ್ಪಿರ್ದಂ ಮಹಾರಣ್ಯದೊಳ್ ॥ ೮೯

ಕಂ॥ ಕಂಡುದು ಮೃಗವಲ್ಲಿ ಭಯಂ
ಗೊಂಡುದು ಪೆಪ್ಪಳಿಸುತದಿರುತೋಡಲ್ಕೆ ಕರಂ ।
ದುಂಡಿಸುತಿರ್ದಪುದೆಂದುರು
ಚಂಡಾಸ್ತ್ರದಿನಚಲ ಶಬರನಿಸೆ ಕಾನನದೊಳ್ ॥ ೯೦

೮೭. ಆ ಮೊಲವು ಬಿಡದೆ ಓಡುತ್ತಿರುವುದನ್ನು ಕಂಡು ಶಬರನು ಕಡುಕೋಪಗೊಂಡು ಬೆನ್ನಟ್ಟಿಹೋಗಿ ಅದು ತಿರುಗಲು ತಾನೂ ತಿರುಗಿ, ಸಂಗಡಹೋಗಿ, ಸರಿದು ಉಬ್ಬು! ಉಬ್ಬು! ಎನ್ನುತ್ತ ಬಡಿಗೋಲಿನಿಂದ ಆ ಬಲಿಷ್ಠವಾದ ಮೊಲವನ್ನು ಹೊಡೆದನು. ೮೮. ಹೀಗೆ ಶಬರನು ಬಡಿಕೋಲಿನಿಂದ ಹೊಡೆಯಲು, ತಿರುಗುತ್ತ ಬರುತ್ತಿರುವ ಆ ಬಡಿ ಕೋಲಿಗೆ ಸಿಕ್ಕಿಯೂ ಸಿಕ್ಕದಂತೆ ಆ ಮೊಲವು ಗಿಡಗಳಲ್ಲಿ ಹೊಕ್ಕು ಓಡುತ್ತಿದ್ದುದು ರಾಹುವಿನ ಹಿಡಿತಕ್ಕೆ ಹೆದರಿ ಚಂದ್ರಬಿಂಬದಿಂದ ಆಗಲಿ ಓಡಿ ಮುಗಿಲುಗಳನ್ನು ಹೊಕ್ಕ ಚಂದ್ರನಲ್ಲಿನ ಎದೆಗುಂದಿದ ಮೊಲದಂತೆ ಇತ್ತು. ವ॥ ಮತ್ತೊಂದು ಕಡೆ ೮೯. ಆ ಮಹಾರಣ್ಯದಲ್ಲಿ ಒಬ್ಬ ಶಬರ; ಅವನು ಶರಸಂಧಾನವನ್ನು ಮಾಡಿ ಒಂದೊಂದೇ ಏಟಿಗೆ ಒಂದೊಂದು ಕುರಂಗವನ್ನು ಹೊಡೆದು ಕೆಡಹುತ್ತಿದ್ದಾನೆ. ಆತನ ಶರಸಂಧಾನಕ್ರಮ ಹೀಗೆ-ಎಡಗಾಲನ್ನು ದೂರಕ್ಕೆ ಚಾಚಿ, ಅಂಬಿಗೆ ಬಾಣವನ್ನು ಏರಿಸಿ, ಶಿಂಜಿನಿಯನ್ನು ಕಿವಿಯವರೆಗೆ ಎಳೆದು, ಅಸ್ಖಲಿತಚಿತ್ತನಾಗಿ, ದೃಷ್ಟಿಯನ್ನು ಗುರಿಯಲ್ಲಿ ನೆಲೆಗೊಳಿಸಿ ಅಂಗವನ್ನು ಕುಗ್ಗಿಸಿ, ದೃಷ್ಟಿ-ಮುಷ್ಟಿ ಮತ್ತು ಶರಸಂಧಾನಗಳನ್ನು ಒಂದುಮಾಡಿ ಬಾಣಪ್ರಯೋಗ ಮಾಡುತ್ತಿದ್ದಾನೆ. ೯೦-೯೧. ತಿರುಗುವ ಶರೀರ, ಬೆಚ್ಚಿದ ಕಣ್ಣು, ಓಡುವ ಮನಸ್ಸು, ನಿಮಿರಿದ ಕಿವಿ, ತಡೆ ತಡೆದು ಅಡಗುವ ನಿಟ್ಟಸಿರುಬಿಡುತ್ತಾ ಒಂದು

ಕಂ।। ತಿರುಗುವ ತನು ಬೆರ್ಚುವ ಕಣ್
ಪರಿವಂ ಮನಂ ನಟ್ಟ ಕಿವಿಯಡಂಗುವ ಸುಯ್ಯಂ ।
ಸರಳಂ ಮಿಱುತೆ ಹರಿಣಂ
ಸರಳಸಿತೈದಾಱನೇಳನೆಂಟೊಂಬತ್ತಂ ।। ೯೧

ಕುನಿಕುನಿದು ವನದ ಗಿಡುಗಿಡು
ವಿನ ಮಱಿ ಮಱಿಯಲ್ಲಿ ಸುಟಿದು ಸುಟಿದೋಡುವ ಟ ।
ಕ್ಕಿನ ಹರಿಣನತಿ ಭರದಿಂ
ತನತನಗೆ ಪುಳಿಂದರಟ್ಟಿ ಮುಟ್ಟುತ್ತೆಚ್ಚರ್ ।। ೯೨

ಸಿಲ್ಕಿ ಶಬರಾಳಿಯೆಚ್ಚ ಸ
ರಲ್ಕಿಱಿಗಿಱಿದು ನಟ್ಟು ಗಱೆದೋಱುತ್ತಂ ।
ನಾಲ್ಕುಂ ಮೆಯ್ಯೊಳ್ ತೀವಿರೆ
ಸಿಲ್ಕಿದ ಮೃಗಮೆಯ್ಯಮಿಗದ ತೆಱನಾಯ್ತಾಗಳ್ ।। ೯೩

ವ।। ಮತ್ತಂ ಪೆಱತೊಂದೆಡೆಯೊರ್ವ ಕಿರಾತನಾಥನಳವಿಯೊಳೋಡುತ್ತಿರ್ಪ ಮೃಗ ಸಮೂಹಮಂ ಕಂಡು

ಕಂ।। ಬಂಡಿಯ ಪುಲಿಯಂ ಮೆಲ್ಲನೆ
ಕೊಂಡಿಳಿಪುತೆ ಸರಿದು ಕೊರಲ ಹಾಸದ ನೇಣಂ ।
ಕಂಡಳವಿಗೆ ಸಿಲ್ಕಿದ ಮೃಗ
ಮಂಡಲಮನದರ್ಕೆ ತೋಱಿ ಶಬರಾಧೀಶಂ ।। ೯೪

ಮ।।ಸ।। ನಿಮಿರ್ದಂಗಂ ನೀಳ್ದ ಮುಂಗಾಲುಡುಗಿ ನಡೆವ ಪಿಂಗಾಲ್ ಚಲದ್ವಾಲದಂಡಂ
ವಿಮಳೋಚ್ಚಂಡಾಕ್ಷಿ ಸೂಕ್ಷ್ಮಶ್ವಸಿತವದನ ನಮತ್ಯೇಕತಚಿತ್ತಂ ನಿರಸ್ತ ।
ಕ್ರಮಗಾಢಂ ಕೂಡೆ ತನ್ನೊಳ್ ಬಗೆದಳವಿಗೆ ಮುಂಕೊಂಡು ಧೀಂಕಿಟ್ಟು ಪಾಯು
ತ್ತಮರುತ್ತೋಡುತ್ತೆ ಪೀಱುತ್ತಡಸಿ ಕೆಡಪಿತೊಂದೇಣನಂ ಚಿತ್ರಕಾಯಂ ।। ೯೫

ಜಿಂಕೆಯು ಶಬರನು ಬಿಟ್ಟ ಸರಳನ್ನು ತಪ್ಪಿಸಿ ತಪ್ಪಿಸಿ ಓಡುತ್ತಾ ಆರು ಏಳು ಎಂಟು ಒಂಬತ್ತು ಬಾಣಗಳಿಗೂ ಕೂಡ ತಪ್ಪಿಸಿಕೊಂಡು ಓಡಿಹೋಯಿತು! ೯೨. ಅವುಗಳಲ್ಲಿ ಒಂದ ಠಕ್ಕಿನ ಹರಿಣ. ಅದು ಕುಣಿಕುಣಿಯುತ್ತಾ ಆ ಕಾಡಿನ ಗಿಡಗಿಡಗಳ ಮರೆಯಲ್ಲಿ ಸುಳಿದು ಓಡುತ್ತಿತ್ತು. ಅದನ್ನು ಕಂಡು ಶಬರರು ಆ ಬೇಟೆ ತನಗೆ ಬೇಕು ನನಗೆ ಬೇಕು ಎಂದು ರಭಸದಿಂದ ಅದನ್ನು ಬೆನ್ನಟ್ಟಿ ಹೊಡೆದರು. ೯೩. ಶಬರರು ಬಿಟ್ಟ ಬಾಣಗಳು ಮೈಯಲ್ಲಿ ಒತ್ತಾಗಿ ಚುಚ್ಚಿಕೊಂಡಿರಲು ಅವುಗಳ ಗರಿಗಳು ತುಂಬಿರುವ ಮೃಗವು ಮುಳ್ಳು ಹಂದಿಯಂತೆ ಕಾಣಿಸುತ್ತಿತ್ತು. ವ।। ಮತ್ತೊಂದು ಕಡೆ ಒಬ್ಬ ಕಿರಾತರ ಒಡೆಯ ಕಾಡಿನಲ್ಲಿ ಓಡುತ್ತಿರುವ ಚಿಗರಿ ಹಿಂಡನ್ನು ನೋಡಿ- ೯೪. ಬಂಡಿಯ ಮೇಲೆ ಬಂದ ದೀಹದ ಬೇಟೆಗಾಗಿ ಪಳಗಿಸಿದ ಹುಲಿಯನ್ನು ಮೆಲ್ಲನೆ ಕೊಂಡೊಯ್ದು ಇಳಿಸಿ ಕೊರಳಿಗೆ ಬಿಗಿದ ಹಗ್ಗದ ಕಣ್ಣಿಯನ್ನು ಬಿಚ್ಚಿದಾಗ ಹುಲಿಯ ಆಟೋಪವನ್ನು ಕಂಡು ಮೃಗ ಸಮೂಹವನ್ನು ಅದಕ್ಕೆ ತೋರಿದನು. ೯೫. ನಿಮಿರಿದ ಅಂಗ ನೀಳವಾಗಿ ಚಾಚಿದ ಮುಂಗಾಲು, ಕುಗ್ಗಿಸಿದ ಹಿಂಗಾಲು, ಚಲಿಸುವ ಬಾಲ, ನಿರ್ಮಲವಾದ ಉಜ್ವಲನೇತ್ರ, ನವಿರಾದ

ಕಂ॥ ಪೊದಱೊಳಗತ್ಯುನ್ನತ ತರ
ಮದಾಂಧತಾನಂತಬಲ ವಿಭೂಷಣನಪ್ಪ
ಗ್ಗದ ಪೆರ್ಬುಲಿಯಿರೆ ಶಬರರ್
ಮುದದಿಂದಂ ನೋಡಿ ಕಂಡು ಮತ್ತೊಂದೆಡೆಯೊಳ್ ॥ ೯೬

ಚಂ॥ ಮೆಳೆಯೊಳಗಿರ್ದ ಪೆರ್ಬುಲಿಯನಾರ್ದು ಪುಳಿಂದನಿಕಾಯಮೆಳ್ಚಿ ಪಿಂ
ಗಳತರಲೋಚನಂ ಬಹಳಸಂಹನನಂ ಪೃಥುಳಾಸ್ಯಗಹ್ವರಂ ।
ಗಳಿತನಿಶಾತದಂಷ್ಟ್ರನತಿತೋಷಮನಂ ಘನಚಿತ್ರಕಾಯನು
ಜ್ವಲಚರಣಂ ವಿಘೂರ್ಣಿತಗಳಂ ಪೊಱಮಟ್ಟುದುದಗ್ರವೃತ್ತಿಯಿಂ ॥ ೯೭

ಪೊಱಮಡೆ ಕಂಡು ಗಂಡುಮಿಗೆ ದಂಡೆಯನಿತ್ತು ಕುಱುತ್ತು ಪತ್ತೆ ಸಾ
ರ್ದುಱದೆ ನಿಲುತ್ತೆ ಸುತ್ತಿದ ಕಿರಾತಕುಲಂ ಮರ್ಮು ಭಾಪೆನುತ್ತೆ ಬೊ
ಬ್ಬಟೆಯೆ ಕುನುಂಗಿ ಕುಕ್ಕುಱಿಸಿ ಸಱ್ಚಿನೆ ಕಿಳ್ತಲಗಿಂ ಕಡಂಗಿ ಕಾ
ಯ್ದುಱಿದನದೊರ್ವ ಲುಬ್ಧಕನಗುರ್ವಿನ ಪೆರ್ಬುಲಿಯಂ ವನಾಂತದೊಳ್ ॥ ೯೮

ವ॥ ಮತ್ತಮೊಂದೆಡೆಯೊಳ್ ಪುಳಿಂದನಾಥರೊಂದಾಗಿ

ಕಂ॥ ತನತನಗೆ ಹಂದಿವೇಂಟೆಗೆ
ವನಚರರೆಯ್ತಂದು ನಿಂದು ನೀರ್ದಾಣದೊಳೊ ।
ಗ್ಗಿನ ಮರದ ಮಱೆಯೊಳಿರೆ ಮೆ
ಲ್ಲನೆ ಬಂದತ್ತೊಂದು ಸೊರ್ಕಿದೆಕ್ಕಲನಾಗಳ್ ॥ ೯೯

ನಿಟ್ಟುಸಿರು, ಏಕಾಗ್ರತೆಯಿಂದ ಶಕ್ತಿಮೀರಿ ಕುಪ್ಪಳಿಸಿ, ಗರ್ಜಿಸಿ ಓಡಿಹೋಗಿ ಜಿಂಕೆಯೊಂದನ್ನು ಕೆಡವಿ ಅದರ ರಕ್ತವನ್ನು ಹೀರಿತು ಆ ಹೆಬ್ಬುಲಿ! ೯೬. ಒಂದು ಪೊದೆಯಲ್ಲಿ ಅತ್ಯಂತ ಮದಿಸಿದ ಬಲಿಷ್ಠವಾದ ಹೆಬ್ಬುಲಿಯೊಂದಿತ್ತು. ಅದನ್ನು ಕಂಡು ಶಬರರು ಹರ್ಷಗೊಂಡರು. ಇನ್ನೊಂದು ಕಡೆ-೯೭ ಒಂದು ಮೆಳೆಯಲ್ಲಿ ಅಡಗಿದ್ದ ಹೆಬ್ಬಲಿಯನ್ನು ಬೇಡರು ಬೆದರಿಸಿ ಎಬ್ಬಿಸಿದರು. ಅದು ಕಣ್ಣುಕೆಂಪಗೆ ಮಾಡಿ ಭಯಂಕರ ವದನವುಳ್ಳುದಾಗಿ, ತೀಕ್ಷ್ಣವಾದ ಕೋರೆದಾಡೆಗಳಿಂದ ಕೂಡಿದ ಆ ಹೆಬ್ಬುಲಿ ಉಗ್ರವಾಗಿ ಅಲ್ಲಿಂದ ಹೊರಬಿತ್ತು. ೯೮. ಹುಲಿ ಮೆಳೆಯಿಂದ ಹೊರಬಿದ್ದುದನ್ನು ಕಂಡ ಕಿರಾತರು ಧೈರ್ಯದಿಂದ ಅದನ್ನು ಮುತ್ತಿದರು. ಅವರು ಮರ್ಮು, ಭಾಪು ಎಂದು ಅಬ್ಬರಿಸುತ್ತಿರುವಾಗ, ಬಗ್ಗಿ ಕುಳಿತು ಕೋಪಗೊಂಡ ಒಬ್ಬ ಬೇಡನು ಕೊಬ್ಬಿದ ಆ ಹೆಬ್ಬುಲಿಯನ್ನು ಒಂದು ಹರಿತವಾದ ಅಲಗಿನಿಂದ ಇರಿದನು. ವ॥ ಮತ್ತೊಂದು ಕಡೆ ಬೇಡರೊಡೆಯರೆಲ್ಲರೂ ಒಂದಾಗಿ-೯೯. ವನಚರರು ತಾವು ತಾವಾಗಿಯೇ ಹಂದಿ ಬೇಟೆಗೆ ಸಿದ್ಧರಾದರು. ಒಂದು ನೀರ್ದಾಣದಲ್ಲಿ ಮರದ ಮರೆಯಲ್ಲಿ ನಿಂತು ನಿರೀಕ್ಷಿಸುತ್ತಿರುವಾಗ ಒಂದು ಸೊಕ್ಕಿದ ಹಂದಿ ಬಂದಿತು.

ಶಾ।। ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನ
ಕ್ರೂರಂ ವಜ್ರಸಮಾನರೋಮನಿಚಯಂ ಸಂಪೂರ್ಣಕಾಯಂ ಸ್ಥಿರಂ ।
ಶೂರಂ ರೌದ್ರಗಭೀರಚತ್ತನತಿಮಾನಿ ಸ್ವಲ್ಪ ಪುಚ್ಛಾನ್ವಿತಂ
ಘೋರಾರಣ್ಯಚರಂ ವಿರಾಜಿಸಿದುದುದ್ಧೀಕರಂ ಸೂಕರಂ ।। ೧೦೦

ಮ।।ಸ್ರ।। ಬರೆ ಕಾಣುತ್ತಲ್ಲಿ ಭಿಲ್ಲಪ್ರಕರಮಡಸಿ ಸೂರ್ನಾಯ್ಗಳಂ ಬಿಟ್ಟು ಬೊಬ್ಬಿ
ಟ್ಟರರೇ ಕೆಯ್ಕೊಂಡು ನಾಲ್ಕುಂದೆಸೆಗೆ ಮಸಗೆ ಕಂಡೆಕ್ಕಲಂ ದಾಡೆಗುಟ್ಟು ।
ತ್ತೆರಡುಂ ಕಣ್ಣಿಂ ಸ್ಫುಲಿಂಗಂ ಸುರಿದಪುವೆನೆ ನೋಡುತ್ತೆ ತೀಡುತ್ತೆ ಕಲ್ಲಿಂ
ದುರದಂಷ್ಟ್ರಾಗ್ರಂಗಳಿಂ ಭೂಮಿಯನುಱದೆ ಬೆಱಂಟುತ್ತೆ ಮುಂಗಾಲ್ಗಳಿಂದಂ ।। ೧೦೧

ಕಂ।। ನಟ್ಟಡವಿಯೊಳಗೆ ಮುಳಿಸಿಂ
ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುಱಿ ಕ ।
ರ್ಗುಟ್ಟುತೆ ಮುಂದಟ್ಟ ಪೆಡಂ
ಮುಟ್ಟುತೆ ಸೂಕರನಡರ್ದು ಸಾರ್ದುದು ಮೆಳೆಯಂ ।। ೧೦೨

ಕಂ।। ಕುಪ್ಪಳಿಸಿ ತುರುಗಿ ಪರ್ವಿದ
ಱೊಪ್ಪವನಿರದಂಡುಗೊಂಡು ಪಂದಿಯ ಬಳಿಯೊಳ್ ।
ನೊಪ್ಪುನೆಗೆದುರ್ಬ ಪಾಯುತೆ
ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ ।। ೧೦೩

ವ।। ಮತ್ತಮವಱೊಳಗೊಂದು ಜಾತಿಜಾಯಿಲಂ ಪೋಗದೆ ನಿಂದು

೧೦೦. ಧೈರ್ಯಶಾಲಿ, ಕೆಂಪುಕಣ್ಣು, ಪರಿತವಾದ ಕೋರೆದಾಡೆ, ಭಯಂಕರ ಮುಖ, ಕ್ರೂರಿ, ವಜ್ರದಂತೆ ಕಠಿನವಾದ ಮೈಗೂದಲು, ನೀಳಕಾಯ, ರುದ್ರ ಗಂಭೀರವಾದ ಚಿತ್ತ, ಅಭಿಮಾನಶಾಲಿ, ಮೋಟುಬಾಲ, ಹೀಗೆ ಘೋರಾರಣ್ಯಸಂಚಾರಿಯೂ ಭೀಕರವೂ ಆದ ಕಾಡುಹಂದಿಯೊಂದು ಅಲ್ಲಿ ಕಾಣಿಸಿಕೊಂಡಿತು. ೧೦೧. ಹಂದಿಯು ಬಂದೊಡನೆಯೇ ಅದನ್ನು ಕಂಡ ಭಿಲ್ಲರು ಕ್ರೂರನಾಯಿಗಳನ್ನು ಅದರ ಮೇಲೆ ಛೂ ಬಿಟ್ಟು ಬೊಬ್ಬಿಟ್ಟರು. ಅದನ್ನು ಕಂಡ ಹಂದಿಯು ನಾಲ್ಕು ದಿಕ್ಕುಗಳಿಗೂ ನೋಡಿ ಎರಡೂ ಕಣ್ಣುಗಳಿಂದ ಕಿಡಿಯುದುರುತ್ತಿರುವವೋ ಎಂಬಂತೆ ಕೋರೆದಾಡೆಗಳನ್ನು ಕಲ್ಲಿಗೆ ತೀಡುತ್ತ ಉರದಿಂದ ಕೋರೆದಾಡೆಗಳಿಂದ ಭೂಮಿಯನ್ನು ತಿವಿಯುತ್ತ ಮುಂಗಾಲು ಗಳಿಂದ ಭೂಮಿಯನ್ನು ಕೆರೆಯತೊಡಗಿತು. ೧೦೨. ಆ ನಡುಕಾಡಿನಲ್ಲಿ ಕೋಪದಿಂದ ಮೇಲೆ ಹಾಯ್ದು ಬರುವ ನಾಯಿಗಳನ್ನು ತುಂಡರಿಸಲೆಂದು ಕಿರ್ಗುಟ್ಟುತ್ತ ಮುಂದಡಿ ಯಿಟ್ಟು ಹಿಮ್ಮೆಟ್ಟಿದ ಆ ಹಂದಿಯು ಮತ್ತೆ ಮೆಳೆಯನ್ನು ಸೇರಿತು. ೧೦೩. ಆಗ ನಾಯಿ ಗಳು ಪೊದೆಗೆ ನುಗ್ಗಿ ಅದನ್ನು ಹಿಂಬಾಲಿಸಿ ಹಂದಿಯ ಬಳಿಯಲ್ಲಿ ನೆಗೆದು ಮೇಲೆಬಿದ್ದು

ಕಂ॥ ಮುಳಿದಟ್ಟಿ ತಿರುಗಿ ನೋಡು
ತ್ತೊಳಪೊಕ್ಕು ಮರಳ್ದು ಮತ್ತೆ ಬೆನ್ನಟ್ಟಿ ಕರಂ ।
ಕಳಿದು ಪೆಡಂಬಾಯ್ದಳಲಿಂ
ಬಳಸುತ್ತಿರೆ ನಿಂದ ಪಂದಿಯಂ ಶುನಕೇಂದ್ರಂ ॥ ೧೦೪

ಮಿಕ್ಕುಪುಗಲತ್ತು ಕಿರ್ಗ
ಣ್ಬೆಕ್ಕುತ್ತೊಳಪೊಕ್ಕು ಜಾಯಿಲನ ಬಡನಡುವಂ ।
ಚಕ್ಕನೆ ತುಂಡಿಸಿ ಮಲೆಯುತೆ
ಧಿಕ್ಕರಿಸುತ್ತತುಳ ಕೋಪನೀಡಂ ಕ್ರೋಡಂ ॥ ೧೦೫

ವ॥ ಆಗಳ್

ಅಳ್ಕಿ ಪುಳಿಂದಂ ಕಾಣುತೆ
ತಳ್ಕೈಸಿಯೆ ಕೊಂಡು ಶುನಕನೆರಡುಂ ಕಡಿಯಂ ।
ಕಾಳ್ಕಿರ್ಚು ತಗುಳ್ದ ತೆಱದಿಂ
ನಿಳ್ಕೈಸದೆ ನೊಂದು ಬೆಂದು ಬಳಲುತ್ತಿಂದಂ ॥ ೧೦೬

ಉ॥ ಪಾಸಿನ ಮೇಲೆ ಪಟ್ಟರಿಸಿ ಪಾಲೆಱೆದೆನ್ನೊಡಗೂಡಿ ಬಾಲಿಕಾ
ಭ್ಯಾಸದಿನೆತ್ತಿ ಸತ್ತಿಗೆಯ ತಣ್ಪಳಲೊಳ್ ಬಳಿವಂತು ಮಾಡಿಯು ।
ಚ್ಛಾಸನದಲ್ಲಿ ಕುಳ್ಳಿರಿಸಿಯೋವಿದ ಕುನ್ನಿಯನೀ ವರಾಹನೀ
ಸಾಸಿಗನೀ ಕಠೋರಮನನೆನ್ನಯೆ ಮುಂದೆ ಸಮಂತು ಕೊಲ್ವುದೇ ॥ ೧೦೭

ಕ॥ ಒಡಗೂಡುತ್ತೊಡವೆಳಸು
ತ್ತೊಡನಾಡಿಸಿದೆನ್ನ ಚೆನ್ನ ಕುನ್ನಿಯನೀ ಕ ।
ಕ್ಕಡವಂದಿ ಕೊಂದುದಿನ್ನಿದ
ಱೊಡನಳಿವೆಂ ಕೊಲ್ದದುಳಿಯೆನೀ ಸೂಕರನಂ ॥ ೧೦೮

ಅದನ್ನು ಬಗೆದು ತೆಗೆದವು. ೧೦೪. ಮತ್ತೊಂದು ಜಾತಿಯ ನಾಯಿಯು ಕೋಪಗೊಂಡು, ತಿರುಗಿ ನೋಡಿ, ಒಳಹೊಕ್ಕು, ಮರಳಿ, ಬೆನ್ನಟ್ಟಿ ಬಳಲಿದ್ದ ಹಂದಿಯನ್ನು ನೋಡಿ ೧೦೫. ಇಣಕಿನೋಡಿ ಮೆಳೆಯೊಳಗೆ ನುಗ್ಗಿದ ಆ ನಾಯಿಯ ಬಡನಡುವನ್ನು ಹಂದಿಯು ಚಕ್ಕನೆ ತುಂಡರಿಸಿ ಮಲೆದು ಧಿಕ್ಕರಿಸುತ್ತ ಅಧಿಕ ಕೋಪದಿಂದ ಗುರುಗುಟ್ಟಿತು. ೧೦೬. ನಾಯಿಗೆ ಆದ ಗತಿಯನ್ನು ಕಂಡ ಪುಳಿಂದನು ಮನನೊಂದು ಆ ನಾಯಿಯ ಎರಡೂ ತುಂಡುಗಳನ್ನು ತಕ್ಕೈಸಿ, ಕಾಳ್ಕಿಚ್ಚು ತಗುಲಿತೊ ಎಂಬಂತೆ ಸಹಿಸಲಾರದೆ ಬಹುವಾಗಿ ನೊಂದು ಹೀಗೆಂದನು. ೧೦೭. ಅಯ್ಯೊ! ಇದನ್ನು ಎಳೆತನದಿಂದಲೂ ನಾನು ಹಾಸಿಗೆಯ ಮೇಲೆ ಮಲಗಿಸಿ, ಹಾಲೆರೆದು, ಎತ್ತಿ ಕೊಡೆಯ ನೆಳಲಲ್ಲಿ ಬೆಳೆಸಿದೆ. ಇದನ್ನು ಎತ್ತರವಾದ ಪೀಠದಲ್ಲಿ ಕೂಡಿಸಿ, ಕಾಪಾಡಿದೆ; ಅಂತಹ ಈ ಕುನ್ನಿಯನ್ನು ಸಾಹಸಿಗನಾದ ಈ ಹಂದಿಯು ಕಠೋರ ಮನಸ್ಕನಾದ ನನ್ನ ಮುಂದೆಯೇ ಕೊಂದಿತಲ್ಲಾ! ಎಂದು ಆ ಪುಳಿಂದನು ಬಿಸುಸುಯ್ದನು. ೧೦೮. ನನ್ನ ಜೊತೆಯಲ್ಲಿ ಆಹಾರವನ್ನುಣಿಸಿ, ಬೆಳೆಸಿ, ಆಡಿಸಿದ ನನ್ನ ಈ ಒಳ್ಳೆಯ ಕುನ್ನಿಯನ್ನು ಈ ನಿಷ್ಠುರ ಹಂದಿಯು ಕೊಂದಿತು. ಇದಕ್ಕಾಗಿ ಈ ಸೂಕರನನ್ನು ಕೊಂದು ಇದರೊಡನೆ

ಉ॥ ಎಂದು ಪುಳಿಂದನಾಥನುಳಿದಾರುತೆ ಕೂರಲಗಿಂ ಕಱುತ್ತು ಪೆ
ರ್ಬಂದಿಯನೆಯ್ದಿ ತಳ್ತೆಱೆದೊಡುಂಗುಟದಿಂದೆ ಶರಂಬರಂ ವರಾ ।
ಹಂ ದಿಟಮೆತ್ತೆ ಮತ್ತಿಱೆಯೆ ಮತ್ತೆಕರಂ ಸೆಳೆದೆತ್ತೆ ನೊಂದು ತಾ
ನೊಂದೆಸೆಯೊಳ್ ವರಾಹಪತಿಯೊಂದೆಸೆಯೊಳ್ ಕೆಡೆದತ್ತರಣ್ಯದೊಳ್ ॥ ೧೦೯

ಕ॥ ಕೆಡೆದಿರ್ದ ಶಬರನಂ ಕ
ಕ್ಕಡವಂದಿಯನೀಕ್ಷಿಸುತ್ತೆ ಶಬರಸಮೂಹಂ ।
ಬಿಡೆ ಕೊಂಡು ಕೊನೆದು ಬಲ್ಪಂ
ನುಡಿಯುತ್ತಿರ್ಪನ್ನಮಿತ್ತ ಮತ್ತೊಂದೆಡೆಯೊಳ್ ॥ ೧೧೦

ಕಂ॥ ಪ್ರಕುಪಿತದಿಂ ತೆಗೆದಿಸೆ ಮ
ಸ್ತಕಮಂ ಕರಿ ನೊಂದು ತಿರುಗೆ ಪರಿವ ಶರಂ ಪೇ ।
ಚಕದಿಂದುರ್ಚಿ ಕರಂ ಲು
ಬ್ಧಕನಂ ತಾಗಿತ್ತು ಮಗುಳ್ದು ವನದೊಳ್ ಚಿತ್ರಂ ॥ ೧೧೧

ಮ॥ಸ್ರ॥ ದರಿಯಂ ದಂತಾಗ್ರದಿಂದೀಡಿಱೆದು ಕೆಡುಪುತುಂ ಗುಲ್ಮವೃಕ್ಷಂಗಳಂ ತತ್
ಕರದಿಂದಂ ಸುತ್ತಿ ಕಿೞ್ತೆತ್ತುತೆ ನಿಜವಿಪುಳಚ್ಛಾಯೆಯಂ ಕುಂಭಗೆತ್ತು ।
ದ್ಧುರಕೋಪಾಟೋಪದಿಂ ಕಂಡೆಱಗುತೆ ಮದಸೌರಭ್ಯಲೋಲುಪ್ತಭೃಂಗೋ
ತ್ಕರಮಂ ಕರ್ಣಾಗ್ರದಿಂ ಸೋವುತೆ ಕರಿಯಿರೆ ನಿಂದುದೊಂದಭ್ರಾಭ್ರಕಾಯಂ ॥ ೧೧೨

ಉ॥ ಕಂಡು ಕಿರಾತನೊರ್ವನಿಭಮಸ್ತಕಮೌಕ್ತಿಕಲೋಭದಿಂದೆ ಕೋ
ದಂಡಮನಾರ್ಪಿನಿಂ ತೆಗೆದು ಕೂರ್ಪಿನ ಬಾಣದಿನೆಚ್ಚೊಡುರ್ಚ ವೇ ।
ದಂಡಲಲಾಟದಿಂ ಪೆಱಗೆ ಪೇಚಕದೊಳ್ ಪಿಗೆ ಮೂಡೆ ತಲ್ಲಣಂ
ಗೊಂಡುದು ಕುರ್ಗಿ ಕುಕ್ಕಱಿಸಿ ಘೀಳಿಡುತಿರ್ದುದು ಬಳ್ದು ಭೂಮಿಯೊಳ್ ॥ ೧೧೩

ಅಸುನೀಗುವೆನು ಎಂದು ಆತ ಪಣತೊಟ್ಟನು. ೧೦೯. ಹೀಗೆಂದ ಆ ಪುಳಿಂದನು ಕೋಪಕೊಂಡು ಕ್ರೂರವಾದ ಅಲಗಿನಿಂದ ಆ ಹೆಬ್ಬಂದಿಯನ್ನು ಇರಿದನು. ಮತ್ತೆ ಅದು ತಲೆಯೆತ್ತಲು ಮತ್ತೆ ಅದನ್ನಿರಿದು ತಾನೂ ಇರಿದುಕೊಂಡನು. ಹಂದಿಯೊಂದುಕಡೆ ಬಿತ್ತು, ತಾನು ಇನ್ನೊಂದೆಡೆ ಮಡಿದನು. ೧೧೦. ಹೀಗೆ ಬಿದ್ದಿದ್ದ ಶಬರ ಮತ್ತು ಕ್ರೂರ ಹಂದಿಯನ್ನು ನೋಡಿದ ಶಬರರು ವೀರಾಲಾಪಗಳನ್ನು ಮಾಡುತ್ತಿರುವಾಗ ಇನ್ನೊಂದೆಡೆ-೧೧೧. ಶಬರನೊಬ್ಬನು ಕೋಪಗೊಂಡು ಆನೆಗೆ ಗುರಿಯಿಟ್ಟು ಬಾಣ ಪ್ರಯೋಗಮಾಡಿದನು. ಅದು ಅದರ ಮಸ್ತಕಕ್ಕೆ ತಾಗಿತು. ಕೂಡಲೆ ನೊಂದ ಆ ಕರಿಯು ಹಿಂದಿರುಗಿತು. ಅವನು ಬಿಟ್ಟಬಾಣವು ಕರಿಯ ಮಲದ್ವಾರದಿಂದ ಹೊರಟು ಮತ್ತೆ ಅದನ್ನು ಪ್ರಯೋಗಿಸಿದ ಶಬರನಿಗೆ ತಗುಲ್ಲಿತು ಎಂಬುದು ಸೋಜಿಗವಲ್ಲವೆ? ೧೧೨. ಅಲ್ಲೊಂದು ಮದ್ದಾನೆ, ಅದು ದಂತದ ತುದಿಯಿಂದ ಕಂದರವನ್ನು ಇರಿದು ಕೆಡವಿ, ಪೊದೆಗಳನ್ನು ಮರಗಳನ್ನು ಸೊಂಡಲಿನಿಂದ ಕಿತ್ತು ಮೇಲೆತ್ತಿ, ತನ್ನ ನೆರಳನ್ನೇ ಬೇರೆ ಆನೆಯೆಂದು ಭ್ರಮಿಸಿ ಕೋಪಾಟೋಪದಿಂದ ಅದರ ಮೇಲೆ ಎರಗಿ, ಮದೋದಕದ ವಾಸನೆಗೆ ಮುತ್ತಿಬರುತ್ತಿರುವ ಧುಂಬಿವಿಂಡನ್ನು ಕಿವಿಗಳಿಂದ ಸೋವುತ್ತ ನಿಂತಿತು. ೧೧೩. ಅದನ್ನು ಕಂಡ ಒಬ್ಬ ಶಬರ. ಅವನಿಗೆ ಆ ಆನೆಯ ಮಸ್ತಕದಲ್ಲಿರುವ ಮುತ್ತುಗಳನ್ನು ಪಡೆವ ಆಸೆ; ಆತ ಬಾಣವೊಂದನ್ನು ಬಿಲ್ಲಿಗೇರಿಸಿ, ಬಲವಾಗಿ ಎಳೆದು

ಕಂ॥ ಬೀಳೆ ಪರಿತಂದು ಶಬರಂ
ಸೀಳುತ್ತಂ ಕುಂಭದೊಳಗಣಲ್ಲಿಯ ಮುಕ್ತಾ ।
ಜಾಳಕಮನೆ ಕೊಂಡು ಸುಖಂ
ದಾಳುತ್ತಂ ಬಂದನಬಲೆಗೀವತಿಭರದಿಂ ॥ ೧೧೪

ವ॥ ಅಂತು ಬಂದು

ಕಂ॥ ಮತ್ತಗಜಮಸ್ತಕದ ಪೊಸ
ಮುತ್ತಂ ಬಲ್ಪಿಂದೆ ತಂದೆನೆಂದೊಲವಿಂದಂ ।
ವ್ಯತ್ಯೋತ್ತುಂಗಪಯೋಧರಿ
ಗಿತ್ತಂ ಮತ್ತೋರ್ವ ಶಬರಿ ಮಿಗೆ ನಗೆ ವನದೊಳ್ ॥ ೧೧೫

ವ॥ ಮತ್ತಮೊಂದೆಡೆಯಲ್ಲಿ

ಮತ್ತಮದಲ್ಲದೆ ಘನಸುಖ
ಚಿತ್ತಂ ಚಿತ್ತಜನ ಪೋಲೆ ಮನ್ಮಥರಾಗೋ ।
ನ್ಮತ್ತನದೊರ್ವಂ ಲುಬ್ಧಕ
ನತ್ತಿತ್ತಂ ಶಬರಿಯಿಲ್ಲದೊಂದಡಿಯನಿಡಂ ॥ ೧೧೬

ಕೆಲದೊಳ್ ಪುಳಿಂದಿಯಿರೆ ಪೆ
ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ ।
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ ॥ ೧೧೭

ಮಸ್ತಕಕ್ಕೆ ಗುರಿಯಿಟ್ಟ; ಆ ತೀಕ್ಷ್ಣವಾದ ಬಾಣ ಅಲ್ಲಿಂದ ಒಳಹೊಕ್ಕು ಮಲದ್ವಾರದಲ್ಲಿ ಮೂಡಿತು. ಅದರಿಂದ ತಲ್ಲಣಿಸಿದ ಆ ಗಜ ನೆಲಕ್ಕೆ ಕುಕ್ಕರಿಸಿ, ಘೀಳಿಟ್ಟು ಭೂಮಿಗೆ ಉರುಳಿತು. ೧೧೪. ಆನೆಯು ಕೆಳಕ್ಕೆ ಬೀಳಲು ಶಬರ ಅಲ್ಲಿಗೆ ಬಂದು, ಮಸ್ತಕವನ್ನು ಸೀಳಿದ; ಅಲ್ಲಿದ್ದ ಮುತ್ತುಗಳನ್ನು ಆರಿಸಿಕೊಂಡು ಸಂತೋಷಗೊಂಡನು. ತನ್ನ ಪ್ರಿಯೆಗೆ ಅವುಗಳನ್ನು ಕೊಡುವ ಆತುರದಿಂದ ಬಂದನು. ವ॥ ಹಾಗೆ ಬಂದು ೧೧೫. "ಮತ್ತಗಜದ ಮಸ್ತಕದಲ್ಲಿದ್ದ ಮುತ್ತುಗಳನ್ನು ತನ್ನ ಭುಜಬಲದಿಂದ ತಂದೆ" ಎಂದು ಆ ಶಬರನು ತನ್ನ ಬಲ್ಮೊಲೆಯ ಶಬರಿಗೆ ಕೊಟ್ಟ. ಇದನ್ನು ನೋಡಿದ ಮತ್ತೊಬ್ಬ ಶಬರಿಯ ಮುಖ ಅರಳಿತು. ವ॥ ಇನ್ನೊಂದು ಕಡೆಯಲ್ಲಿ ೧೧೬. ಇಷ್ಟೇ ಅಲ್ಲದೆ ಅಲ್ಲಿ ಮತ್ತೊಬ್ಬ ಶಬರ; ಅವನಿಗೆ ಘನಸುಖದಲ್ಲಿ ಇಚ್ಛೆ, ಮನ್ಮಥನ ಹೋಲಿಕೆ ಅವನದು; ಆತ ಕಾಮರಾಗೋನ್ಮತ್ತ; ಅವನು ಶಬರಿ ಇಲ್ಲದಿದ್ದರೆ ಒಂದು ಹೆಜ್ಜೆಯನ್ನೂ ಮುಂದೆ ಇಡುತ್ತಿರಲಿಲ್ಲ. ೧೧೭. ಆತ ಮಗ್ಗುಲಲ್ಲಿ ತನ್ನ ಪ್ರಿಯೆ ಶಬರಿಯಿದ್ದ ಪಕ್ಷದಲ್ಲಿ ಹೆಬ್ಬುಲಿ ಹತ್ತಿರ ಬಂದರೂ ಅಂಜುವುದಿಲ್ಲ. ಅಳುಕುವುದಿಲ್ಲ, ಅದನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಚಲದಿಂದ ಅದನ್ನು ಕಾಡುತ್ತಲೂ ಇರಲಿಲ್ಲ; ಆತ ಹಸಿವನ್ನೂ ಮರೆತು ಸಂತೃಪ್ತನಾಗಿರುತ್ತಿದ್ದುದರಿಂದ ಏನನ್ನೂ ಬೇಡುತ್ತಲೂ ಇರಲಿಲ್ಲ.

ಪೆಱತೊಂದೆಡೆಯೊಳ್ ಮುತ್ತಿಂ
ತುಱುಗಿದ ಮಂಡನಚಯಂಗಳಂ ತೊಟ್ಟೊಲವಿಂ ।
ದೆಱಗಿ ಕುಣಿದಾಡಿಸುತ್ತುಂ
ಮೆಱೆವ ಪುಳಿಂದಿಯರ ನಿಂದ ಮೊತ್ತದೊಳೊರ್ವಳ್ ॥ ೧೧೪

ಎಳನವಿಲ ಕಲಾಪಂಗಳ
ನಳವಡೆ ತಳೆದುಂ ಮದೇಭಮಸ್ತಕ ಮುಕ್ತಾ ।
ಫಳವಿಳಸಿತ ಸಾಪತ್ನೀ
ಕುಳದೊಳ್ ಗರ್ವಿಸುವ ಶಬರಿಯಿರವತಿಚಿತ್ರಂ ॥ ೧೧೫

ನಡೆದು ಗಳಗಳನೆ ಮತ್ತೊಂ
ದೆಡೆಯೊಳ್ ಗಜಮೆಯ್ದೆ ಪೊಕ್ಕು ನದಿಯೊಳ್ ಕಡುನೀ ।
ರಡಸಿ ತೆಗೆದೀಂಟ ಜಲಮಂ
ಬಿಡೆ ತಮ್ಮೊಳ್ ತೀವಿಕೊಂಡು ಚಿಲ್ಲುವ ಪದದೊಳ್ ॥ ೧೧೦

ಇಳೆಯೊಳ್ ತಮ್ಮಂ ಕಾದಾ
ಪುಳಿಂದನಾಯಕಿಯ ಯೌವನಕ್ಕರ್ಘ್ಯಮುಮಂ ।
ತಳವಡೆ ಕುಡುವಂತಿರ್ದುದು
ಜಳಪೂರಿತ ಹಸ್ತದಿಂದ ಹಸ್ತಿಕದಂಬಂ ॥ ೧೧೧

ಏಲಸನತ್ತಗಜೇಂದ್ರೋ
ಜ್ವಲ ನಿರ್ಮಳದಂತ ಮುಸಲ ಹಸ್ತಸಮೇತಂ ।
ನಲಿನಲಿದು ಕಿರಾತಸ್ತ್ರೀ
ಕುಲಮೊರ್ಬುಳಿಗೊಂಡು ನಿಂದು ಮತ್ತೊಂದೆಡೆಯೊಳ್ ॥ ೧೧೨

೧೧೪. ಮತ್ತೊಂದು ಎಡೆಯಲ್ಲಿ ಪುಳಿಂದಿಯರು ಮುತ್ತುಗಳನ್ನು ದಟ್ಟವಾಗಿ ಧರಿಸಿ, ಒಡವೆಗಳನ್ನು ತೊಟ್ಟು, ಸಂತೋಷದಿಂದ ನರ್ತಿಸುತ್ತಿದ್ದಾರೆ; ಅವರಲ್ಲಿ ಒಬ್ಬಳು- ೧೧೫. ಎಳೆನವಿಲಿನ ಗರಿಗಳನ್ನು ಅಂಗಾಂಗಗಳಲ್ಲಿ ಅಳವಡಿಸಿಕೊಂಡಿದ್ದಾಳೆ. ಅವಳು ಮದ್ದಾನೆಯ ಮಸ್ತಕದ ಮುಕ್ತಾಫಲಗಳನ್ನು ಅಲಂಕರಿಸಿಕೊಂಡು ತನ್ನ ಇತರ ಸವತಿಯರ ಮಧ್ಯದಲ್ಲಿ ಗರ್ವಿಸುವ ಬೆಡಗು ಬಹುಸೋಜಿಗ! ೧೧೦. ಮತ್ತೊಂದು ಕಡೆ ಆನೆಯೊಂದು ಗಳಗಳನೆ ನಡೆದು ನದಿಯನ್ನು ಹೊಕ್ಕು, ಬಾಯಾರಿದ್ದುದರಿಂದ ಜಲವನ್ನು ಸಾಕಷ್ಟು ಕುಡಿಯಿತು. ಅದು ಜಲವನ್ನು ಸೊಂಡಲಿನಲ್ಲಿ ತುಂಬಿಕೊಂಡು ಚಿಲ್ಲುತ್ತಿತ್ತು. ೧೧೧. ಇಳೆಯಲ್ಲಿ ತಮ್ಮನ್ನು ಕಾಡುವ ಪುಳಿಂದನಾಯಕಿಯ ಯೌವನಕ್ಕೆ ಅರ್ಘ್ಯವನ್ನು ಕೊಡಲೋ ಎಂಬಂತೆ ಆನೆಗಳ ಗುಂಪು ಸೊಂಡಲಿನಿಂದ ನೀರನ್ನು ತುಂಬಿಕೊಂಡಿತ್ತು. ೧೧೨. ಮತ್ತೊಂದು ಕಡೆ ಮದಗಜಗಳ ಒನಕೆಯಂತಿರುವ ದಂತ ಮತ್ತು ಹಸ್ತಗಳಿಂದ ಕೂಡಿದ ಕಿರಾತಸ್ತ್ರೀಯರು ನಲಿನಲಿದು ಒಟ್ಟುಗೂಡಿದ್ದರು.

ಚಂ॥ ತಳಿರ್ಗಳ ಸೀರೆಯುಟ್ಟು ಗುರುಗುಂಜೆಯ ಹಾರಮನಾಂತು ಮುಂದೆ ಶೀ
ತಳ ಶಶಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿ ।
ಚ್ಚಳಮನ ಸುವ್ವಿ ಕಾಡೊಡೆಯ ಸುವ್ವಿ ಮನೋಹರ ಸುವ್ವಿಸುವ್ವಿಯಂ
ದಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂದಕಾಂತೆಯರ್ ॥ ೧೨೩

ವ॥ ಅದಲ್ಲದೆಯುಂ ಮತ್ತೊಂದೆಡೆಯೊಳ್ ಅತಿಬಳನೊರ್ವ ಪುಳಿಂದನಾಥಂ ಒಡನೆಯ ಬೇಡರ ಮುಂದಾಸುರದಿಂ ಭಾಷೆಗುಡುತಿರ್ದನದೆಂತೆಂದೊಡೆ

ಸ್ರ॥ ನಿಂದೆಂ ನಿಂದೆಂತುವೀ ವೀರದ ರದನಿಕರಂ ಬಂದೊಡಂ ಬಂದೊಡಂಗೊಂ
ಡಂದಾವಂದಾವನಂತಿರ್ಪ ಸರಪಸರಮಂ ಕಾಣ್ಬನಾ ಮಾತದಿರ್ಕೆ ।
ನ್ನಂದಂ ನಂದಂ ಕನಲ್ದಿರ್ಪೊಡೆ ಪೊಡೆ ಪುಲಿಯಂ ಬೇಗದಿಂ ಬೇಗದಿಂದಂ
ಬಂದಂ ಬಂದಂತೆ ಕೊಂದುರ್ಕುವ ಕುವರನವಂ ಸೋಂಕಿರಾತಂ ಕಿರಾತಂ ॥ ೧೨೪

ಕಂ॥ ಬಿದಿರಂ ಬಿದಿರಂ ನಡೆ ನಡೆ
ಯದೆಯದೆ ಪಿಡಿ ಪಿಡಿಗೆ ಬಂದ ಕರಿಯಂ ಕರಿಯಂ ।
ಪದೆದೆಚ್ಚಂ ಕಲಿ ಕಲಿ ಹೇ
ಸದೆ ಸದೆದಪನೆಂದು ಬೇಡರೆನೆ ನಲಿದಿಸುವೆಂ ॥ ೧೨೫

ವ॥ ಮತ್ತೊಂದೆಡೆಯೊಳ್

ಕಂ॥ ಇನಿಯನೊಡಗೂಡಲೆಂದಿಂ
ಪಿನ ರಮ್ಯಸ್ಥಳಮನಱಿಸಿ ಬರುತಂ ನವಯೌ ।
ವನೆ ಮುಗ್ಧೆ ತುಱುಗಿ ಪರ್ವಿದ
ವನದೊಳಗಣ ಮೆಳೆಗಳೊಳಗ ಪುಗುವನ್ನೆವರಂ ॥ ೧೨೬

೧೨೩. ಆ ಕಾಡಿನಲ್ಲಿರುವ ಶಬರಸ್ತ್ರೀಯರು ಚಿಗುರುಗಳ ಸೀರೆಯನ್ನು ಉಟ್ಟು, ಗುರುಗಂಬಿಯ ಹಾರವನ್ನು ಸಿಂಗರಿಸಿಕೊಂಡು, ಚಂದ್ರಕಾಂತಶಿಲೆಯಲ್ಲಿ ಮಾಡಿದ ಒರಳುಗಳಲ್ಲಿ ಬಿದಿರಕ್ಕಿಯನ್ನು ಹಾಕಿ, "ನಿಚ್ಚಳಮನ ಸುವ್ವಿ, ಕಾಡೊಡೆಯ ಸುವ್ವಿ, ಮನೋಹರ ಸುವ್ವಿ, ಸುವ್ವಿ" ಎಂದು ರಾಗದಿಂದ ಹಾಡುತ್ತ ಕುಟ್ಟಿದರು. ವ॥ ಅದೂ ಅಲ್ಲದೆ ಮತ್ತೊಂದು ಕಡೆ ಅತಿ ಬಲಶಾಲಿಯಾದ ಒಬ್ಬ ಪುಳಿಂದರ ಒಡೆಯನು ಬೇಡರ ಮುಂದೆ ಆಸುರದಿಂದ ಭಾಷೆಕೊಡುತ್ತಿದ್ದಾನೆ-ಹೇಗೆಂದರೆ ೧೨೪. ನಿಂದೆನು, ನಿಂತು ಹೇಗೆ ಈ ವೀರದ ಆನೆಸಮೂಹವು ಬಂದು ಎರಗುವಾಗ ಬಂದವನು ಹೇಗಿದ್ದಾನು! ಅವನು ನನ್ನ ಶರಪ್ರಹಾರವನ್ನು ಕಾಣುವನು! ಆ ಮಾತು ಹಾಗಿರಲಿ! ನನ್ನ ಹಾಗೆ ನಂದನು ಕನಲಿದಂತೆ ಹುಲಿಯನ್ನು ಹೊಡೆ! ಬೇಗ ಬೇಗವಾಗಿ ಬಂದ ಬಂದ ಹಾಗೆ ಅವುಗಳನ್ನು ಕೊಂದು ವಿಜೃಂಭಿಸುವ ಆ ಶಬರಕುಮಾರನು ಸೋಂಕಿರಾತ (ಸೋಂಕಿರೆ-ಆತಂ) ೧೨೫. ಬಿದಿರನ್ನು ಬಿಡುವುದಿಲ್ಲ; ನಡೆ, ನಡೆ! ಅದೆ ಅದೆ ಹಿಡಿ, ಹಿಡಿ! ಹೆಣ್ಣಾನೆಗೆ ಬಂದ ಆನೆಯನ್ನು ಆ ಕಪ್ಪನೆಯ ಕಿರಾತನು ಗುರಿಯಿಟ್ಟು ಬಾಣದಿಂದ ಹೊಡೆದನು! ಕಲಿ ಕಲಿ! ಹೇಸದೆ ಸದೆಬಡಿಯುವನು ಎಂದು ಬೇಡರು ಹುರುಪುಗೊಡಲು ನಾನು ನಲಿದು ಶರಪ್ರಹಾರ ಮಾಡುವೆನು. ೧೨೬. ಅಲ್ಲೊಬ್ಬ ಶಬರ. ಆತ ತನ್ನ ಇನಿಯಳನ್ನು ಒಡಗೂಡಬೇಕೆಂಬ ಬಯಕೆಯಿಂದ ರಮ್ಯಸ್ಥಳವೊಂದನ್ನು

ಬೆಳಗಂ ಕಳ್ತಲಿಸುವ ಮೆಳೆ
ಮೆಳೆಯಂ ಪೊಕ್ಕಲ್ಲಿ ತನ್ನ ಕಣ್ಗಳ ಬೆಳಗಿಂ ।
ಬೆಳಗಾಗಿರೆ ಬೆಳಗಿಲ್ಲದ
ಮೆಳೆಯಿಲ್ಲೆಂದಬಲೆ ಶಬರಿ ಸೊಬಗಳಿದಿರ್ದಳ್ ॥ ೧೨೭

ಇರೆ ಸುಪ್ರೌಢಕಿರಾತಂ
ತರುಣಿಯ ಮುಗ್ಧತೆಗೆ ಮೆಚ್ಚಿ ಮುಗ್ಧೆಯ ಕಣ್ಣಂ ।
ಬರೆ ಮುಚ್ಚಿ ಇಡಿದ ಕಳ್ತಲೆ
ದೊರೆಕೊಂಡತ್ತೆಂದು ನೆರೆದು ಸುಖಿಯಾಗಿರ್ದಂ ॥ ೧೨೮

ವ॥ ಮತ್ತಮತಿವಿಸ್ತಾರಮಾದ ಘೋರಾರಣ್ಯಂ ಕಡು ನಿಡುದುಗೊಂಡಂಬರ ಚುಂಬಿತಮಾಗಿ ನಳನಳಿಸಿ ಕೊರ್ಬಿ ಬೆಳೆದ ಪೆರ್ಬಿದಿರ ತುದಿ ತಾಗಿ ಪಱೆದ ಕಿಱುಮುಗಿಲ್ಗಳಿಂದವನೀತಳಕ್ಕಾಲಿಕಲ್ಲೊಕ್ಕು ಚಿಲ್ಲಿದಂತಿರ್ಪ ಮುಕ್ತಾಫಲಂಗಳಂ ವಂಶತಂಡುಲಂಗೆತ್ತು ಸುತ್ತಿ ಬಂದುಡುಗುವ ಮುಗ್ಧಶಬರಿಯರಂ ನಗುವ ಕಾಮುಕ ಶಬರಸಂದೋಹದಿಂ,

ಹುಡುಕುತ್ತ ಬಂದ; ನವಯೌವನೆಯೂ ಮುಗ್ಧೆಯೂ ಆದ ಇನಿಯಳೊಡನೆ ಅವನು ಆ ವನದೊಳಗಿನ ಮೆಳೆಗಳಲ್ಲಿ ಪ್ರವೇಶಿಸಿದ. ೧೨೭. ಹಗಲಿನ ಬೆಳಕನ್ನೇ ಕತ್ತಲುಗೊಳಿಸುವ ದಟ್ಟವಾದ ಮೆಳೆಗಳು; ಅಂತಹ ಯಾವ ಮೆಳೆಯನ್ನು ಹೊಕ್ಕರೂ ಅವಳ ಕಣ್ಣಿನ ಬೆಳಗಿನಿಂದ ಮೆಳೆಗಳು ಬೆಳಗಿನಿಂದ ತುಂಬುತ್ತಿದ್ದವು. ಇದನ್ನು ಕಂಡ ಆ ಶಬರಿಯು ಬೆಳಗಿಲ್ಲದ ಮೆಳೆಯಿಲ್ಲವಲ್ಲಾ ಎಂದು ಕಳೆಗುಂದಿದಳು. ೧೨೮. ಇದನ್ನು ಕಂಡ ಆ ಕಿರಾತ ಪ್ರೌಢನಾದ್ದ. ಆತ ತರುಣಿಯ ಮುಗ್ಧತೆಗೆ ಮೆಚ್ಚಿ ಕೂಡಲೆ ಅವನು ಅವಳ ಕಣ್ಣನ್ನು ಮುಚ್ಚಿದ. ಕತ್ತಲೆ ಕವಿಯಿತು. ಆಗ ಅವನು 'ನೋಡು; ಕತ್ತಲೆ ಕವಿಯಿತು' ಎಂದು ಹೇಳಿ ಒಪ್ಪಿಸಿ ಅವಳೊಡನೆ ನೆರೆದು ಸುಖಿಸಿದ. ವ॥ ಅತಿ ವಿಸ್ತಾರವಾದ ಕಡುಕಾಡು, ಅಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದು ಗಗನವನ್ನು ಸೋಂಕಿ ಸುಂದರವಾಗಿ ಕೊಬ್ಬಿಬೆಳೆದ ದೊಡ್ಡ ದೊಡ್ಡ ಬಿದಿರುಮೆಳೆಗಳು. ಅವುಗಳ ತುದಿ ತಾಗಿ ಹರಿದ ಸಣ್ಣ ಸಣ್ಣ ಮೋಡಗಳು, ಅವುಗಳಿಂದ ಸುರಿದು ಆಲಿಕಲ್ಲು ಚೆಲ್ಲಿದೆಯೋ ಎಂಬಂತಿರುವ ಮುತ್ತುಗಳನ್ನು ಬಿದಿರ ಅಕ್ಕಿ ಎಂದು ಭ್ರಮಿಸಿ ಸುತ್ತು ಬಂದು ಗುಡಿಸಿಕೊಳ್ಳುತ್ತಿರುವ ಮುಗ್ಧ ಶಬರಿಯರು, ಅವರನ್ನು ಕಂಡು ನಗುತ್ತಿರುವ ಕಾಮುಕ ಶಬರರ ಗುಂಪು ಒಂದು ಕಡೆ; ಬೇರೆಯ ಕಡೆ ಕೆಲವು ಶಬರರು ಹುಲಿಯ ಬೇಂಟೆಯ ಸಮಯದಲ್ಲಿ ಹುಲಿಯೊಡನೆ ಹೋರಾಟ ನಡೆಸಿ ಮಲ್ಲಾಮಲ್ಲಿ ದ್ವಂದ್ವ ಯುದ್ಧದಲ್ಲಿ ತೊಡಗಿದ್ದಾರೆ. ಆಗ ಹುಲಿಯ ಉಗುರುಗಳು ತಗುಲಿ ಅವರ ಭುಜಗಳಲ್ಲಿ ಹೊಸಗಾಯಗಳಾಗಿವೆ, ಅವರು ಮನೆಗೆ ಬಂದೊಡನೆಯೇ ಆ ಗಾಯಗಳನ್ನು ಕಂಡು ಕಿರಾತೆಯರು ಅವು ಪರಸತಿಯ ರತಿಸಮಯದಲ್ಲಿ ಎಸಗಿದ ನಖಿಕ್ಷತಗಳೆಂದು ಭ್ರಮಿಸಿದರು, ಕೋಪವುಕ್ಕಿ ಬಂತು, ಪ್ರಣಯಕಲಹ ಆರಂಭವಾಯಿತು, ಅವರು ಚಿಗುರಿನಿಂದ ತಮ್ಮ ಪ್ರಿಯ ಪುಳಿಂದರನ್ನು ಹೊಡೆದು ಹೊಡೆದು ಉತ್ಕಂಠೆಯರಾದರು,

ಮತ್ತೆ ಪೞುತೊಂದೆಡೆಯೊಳ್ ಪುಲಿಯ ಬೇಂಟೆಯ ಕಾಳೆಗದ ಕೋಳಾಹಳದ ಮಲ್ಲಾ
ಮಲ್ಲಿಯಿನಾದ ಕರನಖರನವವ್ರಣಕಳಂಕಾಂಕಿತಭುಜವಳಯನಾಗಿ ಬಂದ ಪುಳಿಂದನಂ ಕಂಡು
ಕಡುಮುಳಿದು ಪ್ರಣಯಕಲಹಂ ಕೆಯ್ಗಳ್ಮೆ ಪಲ್ಲವದಿಂ ಪೊಯ್ದು ಪೊಯ್ದತಿ
ಕೋಪದಿಂದುತ್ಕಂಠೆಯಾದ ನಲ್ಲಳ್ಗೆ ಲಲ್ಲೆಗರೆದು ಬೆರಲಂ ಕರ್ಚಿ ಕಾಲ್ಗೆಱಗಿ ವಿನಯದಿಂ ತಿಳಿಪಿ
ಮುಳಿಸಂ ಕಳಲ್ಚಿ ಕಳ್ತಲಿಪ ಮೆಳೆಗಳೊಳ್ ಉತ್ತಾನಲತೆ ಚತ್ತಜಂಗೆತ್ತಿದುಪ್ಪರವಟ್ಟಮಾಗೆ ನಿರಂತರಂ
ನೆರೆವ ಕಿರಾತಮಿಥುನಂಗಳಿಂ, ಮತ್ತಂ ಸಂಚಿತ ತಿಳಕಿತವರ್ಧಕಪೋಳಿತವತಿವರ್ತಿತ
ವಧೋನುಬಂಧಿನಿ ಕ್ರೋಧಿನಿ ಗಂಧಚಾರಿಣಿಗಳೆಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ
ತನ್ನ ನೆಳಲಂ ಪ್ರತಿಗಜವೆಂದುಱಿದೆ ಕಱುತ್ತೆಱಗಿ ಬೆಟ್ಟದ ಪೆಟ್ಟಿಗಳನೆತ್ತಿಯೆತ್ತಿ ಕೋಪಮಾಱಿದೆ
ಮಾಱೆ ಬಂದು ನೀಡುಂ ನೋಡಿ ಕೋಡುಗಲ್ಲಂ ಪರಿದು ಪಾಯ್ದು ಕೋಡುಡಿಯೆ ಸಾಡೆ
ನೊಂದು ನೋವಂ ಮಱಿದು ಚಂದ್ರಕಾಂತಶಿಲಾತಲದೊಳ್ ಮಾರ್ಪೊಳೆವ ನಿಜಬಿಂಬಮಂ
ಕಂಡು ಕರಿಣಿಗೆತ್ತಡಿಗಡಿಗೆ ಕರಮನಿಟ್ಟಾರಯ್ದು ಸಾರುತಿರ್ಪ ಮದಾಂಧಗಂಧಸಿಂಧುರಗಳಿಂ,
ಮತ್ತಮೊಂದೆಡೆಯೊಳ್ ಪಸಿವೆತ್ತು ಮಸಗಿಬಂದು ಬಲಂಗಳೊಳಗಣಿರುಂಪೆಗಳಂ ಮೊಗಮಿಟ್ಟೂದಿ
ಯೂದಿ ತಣಿಯದೆ ತವಕದಿಂ ನಡೆ ನಡೆದು ನಳನಳಿಸುವ ಬೆಳಲಮರದ ತಳದೊಳಿರ್ದ
ಪಕ್ವಫಲಂಗಳನಾಯ್ದುಕೊಂಡು ಗಳಗಳನೆ ಪರಿದು ಪಾಸಱಿಯ ಮೇಲಾಸುರದಿಂದೊಡೆದೊಟ್ಟ

ಇದರಿಂದ ಸೋಜಿಗಗೊಂಡ ಪುಳಿಂದರು ತಮ್ಮ ನಲ್ಲೆಯರನ್ನು ಲಲ್ಲೆಗರೆದು ಅನುನಯಮಾಡಿ ಬೆರಲು ಕಚ್ಚಿ, ಕಾಲಿಗೆಬಿದ್ದು, ವಿನಯದಿಂದ ಅವರ ಹುಸಿಕೋಪವನ್ನು ಹೋಗಲಾಡಿಸಿ ಕತ್ತಲು ಕವಿದ ಬಿದಿರಮೆಳೆಗಳಲ್ಲಿ ಉದ್ದವಾಗಿ ಬೆಳೆದ ಲತೆಗಳೇ ಮನ್ಮಥನಿಗೆತ್ತಿ ಕಟ್ಟಿದ ಮೇಲ್ಕಟ್ಟು ಬಟ್ಟೆಯಾಗಿರಲು ಅಲ್ಲಿ ನಿರಂತರವೂ ತಮ್ಮ ನಲ್ಲೆಯರೊಡನೆ ನೆರೆಯುತ್ತಿದ್ದಾರೆ. ಮತ್ತೊಂದು ಕಡೆ ಮದೋನ್ಮತ್ತವಾದ ಆನೆಗಳು, ಅವು ಸಂಚಿತ, ತಿಳಕಿತ, ಅರ್ಧಕಪೋಳಿತ, ಅತಿವರ್ತಿತ, ಅಧೋನುಬಂಧಿನಿ, ಕ್ರೋಧಿನಿ, ಗಂಧಸಂಚಾರಿಣಿ ಎಂಬ ಸಪ್ತಅವಸ್ಥೆಗಳಿಂದ ಕೂಡಿದವುಗಳಾದುದರಿಂದ ಮುಂದುವರಿಯದೆ ತಮ್ಮ ನೆಳಲನ್ನೇ ಮತ್ತೊಂದು ಆನೆಯೆಂದು (ಪ್ರತಿಗಜವೆಂದು) ಭ್ರಮಿಸಿದವು, ಅವು ರಭಸದಿಂದ ಅವಕ್ಕೆ ಎದಿರುಬಿದ್ದು ಬೆಟ್ಟದ ದೊಡ್ಡ ದೊಡ್ಡ ಹೆಂಟೆಗಳನ್ನು ಎತ್ತಿಹಾಕಿದವು, ಅಲ್ಲಿಗೂ ಅವುಗಳ ಕೋಪ ತೀರಲಿಲ್ಲ, ಅಲ್ಲಿಂದ ಮೀರಿ ಬಂದು ದಿಟ್ಟಿಸಿನೋಡಿ ಕೋಡುಗಲ್ಲುಗಳನ್ನು ತಾಗಿದವು, ಅವುಗಳ ಕೊಂಬು ಮುರಿಯಿತು, ನೋವಾಯಿತು, ಆದರೂ ಅದನ್ನು ಮರೆದು ಚಂದ್ರಕಾಂತ ಶಿಲೆಯಲ್ಲಿ ಪ್ರತಿಬಿಂಬಿಸಿದ್ದು ತಮ್ಮ ಬಿಂಬವನ್ನು ನೋಡಿ ಹೆಣ್ಣಾನೆಯೆಂದು ಭ್ರಮಿಸಿ ಅವು ಸೊಂಡಿಲನ್ನು ಚಾಚಿ ಹುಡುಕುತ್ತಿವೆ; ಮತ್ತೊಂದೆಡೆ ನಲಿವ ಕರಡಿಗಳು- ಅವು ಹಸಿದಿವೆ, ಹುತ್ತಗಳ ಹತ್ತಿರ ಬಂದು ಬಿಲದಿಂದ ಹೊರಬರುವ ಇರುವೆಗಳನ್ನು ಕಂಡು ಬಿಲದಲ್ಲಿ ಮುಖಹೊಗಿಸಿ ಊದಿ ಊದಿದರೂ ಅವಕ್ಕೆ ತೃಪ್ತಿಯಾಗಲಿಲ್ಲ. ಅಲ್ಲಿಂದ ಮುನ್ನಡೆದು ಅಲ್ಲಲ್ಲಿ ಬೇಲದ ಮರದ ತಳದಲ್ಲಿ ಪಕ್ವವಾಗಿ ಬೇಲದ ಕಾಯಿಗಳು ಬಿದ್ದಿದ್ದವು, ಅವುಗಳನ್ನು ಆಯ್ದುತಂದು ಒಂದು ಹಾಸಗಲ್ಲ ಮೇಲೆ ಚಚ್ಚಿ ಬಿಚ್ಚಿದವು, ತರುವಾಯ

ಜೇನ ಹುಟ್ಟುಗಳನ್ನಿಟ್ಟಟ್ಟಲಸದೆ ಕಲಸಿ ತಣಿವಿನಂ ತಿಂದು ತೇಗಿ ತೂಗಿ ಕೆಲೆ ಕೆಲೆದು ಕುಪ್ಪಿ ಕುಪ್ಪಿ ಯುರ್ಬಿ ಕೊರ್ಬಿ ನಲಿದಾಡುವ ಭಲ್ಲೂಕನಿಕಾಯದಿಂ, ಮತ್ತಮೊಂದೆಡೆಯೊಳ್ ಎಳೆವುಲ್ಲಳಂ ಮೇದು ತಿಳಿನೀರನೀಂಟಿ ನೆಳಲೊಳ್ ಪಟ್ಟರ್ದು ಬೆಂಡೇಳ್ದ ಲೋಳೆಹಿಂಡಿಲ್ಲಟ್ಟೆ ಮೇವಂ ಮಗುಳ್ದಿ ಕಟ್ಟದಿರ ಪುಲಿಯಂ ತೊಟ್ಟನೆ ಕಂಡು ಭೋಂಕನೆಳ್ದು ಮೊಗಮನೆತ್ತಿ ಕಡುಮುಳಿದು ಖಾತಿಗೊಂಡು ಚಲದಿಂ ಮಲೆದು ಫಳಿಲನೆಯ್ದಿ ಪಾಯ್ದು ಪೊಯ್ದು ಕೋಡಿಟ್ಟು ಜಲ್ಲಿಸಿ ಬಿಸುಟ್ಟು ನೊಸಲ ತೀಂಟೆ ತೀಅದೆ ಕೊಣಕಿಟ್ಟು ಮುರಿದು ಪಿರಿದಪ್ಪ ಪುತ್ತಿನೊಳೊತ್ತಿ ಪೋರ್ದು ಮೆತ್ತಿದ ಕರ್ದಮಂ ನಿಟಲ ತಟದೊಳ್ ಪತ್ತಿರ್ದ ಧೂಳಿ ಮೆಯ್ಕೊಳೆ ಮೆಱೆಯೆ ಪಲವೋತ್ಕರದಿಂ ಪೊಱಮಟ್ಟ ಕಾಳರಕ್ಕಸರಂತಿರ್ಪ ಕಾಳ್ಕೋಣಂಗಳಿಂ, ಮತ್ತಮೊಂದೆಡೆಯೊಳ್ ಮರದಿಂ ಮರಕ್ಕೆ ತಿರುಗಿ ಪಾಯ್ದೆಳಗೊಂಬನಲ್ಲಾಡಿ ತೂಗಿ ತೊನೆದಳ್ಳಿಱೆದು ಕುಳ್ಳಿರ್ದು ಕಾಲ್ಗಳಂ ನೀಡಿ ಬರಿಯಂ ಬೆರಂಟ ಬಸಿಲ್ಗಾಯ್ದು ಪಸಿವೆತ್ತಿ ಮೇಲಂ ನೋಡಿ ನೀಡಿ ನೆಗೆದು ತಿಣ್ಣಗೊಂಬನೊಳ್ ಬಣ್ಣವಳಿಯದ ಪಣ್ಣಂ ತಿಂದು ತಣ್ಣನೆ ತಣಿದು ಕಣ್ಣಂ ಬಟ್ಟು ಪುರ್ಬಕ್ಕಿ ಪಲ್ಗಿಱೆದು ಹುಱ್ರಿಂದು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರದಿಂ, ಮತ್ತಮೊಂದೆಡೆಯೊಳ್ ಚಿತ್ತಜಕೇಳಿಗೆಂದು ಮತ್ತಗಜಂ ಪರಿವ ಕರಿಣಿಯ ಬಳಿಸಂದು ಬೋಳ್ಪಿಸಿ ಕರಮಂ ನೆಗಪಿ

ಜೇನುಹುಟ್ಟುಗಳನ್ನು ಕಿತ್ತು ತಂದು ಅದೆಲ್ಲವನ್ನು ಬೆರೆಸಿದವು, ತಣಿವಂತೆ ಚೆನ್ನಾಗಿ ತಿಂದು ತೇಗಿ ತೂಗಿ ಕೆಲೆದು ಕುಪ್ಪಳಿಸಿ ಕೊಬ್ಬಿ ನಲಿದಾಡುತ್ತಿವೆ; ಇನ್ನೊಂದು ಕಡೆ ಕಾಡು ಕೋಣಗಳು, ಅವು ಕಾಡಿನಲ್ಲಿ ಎಳೆಯ ಹುಲ್ಲನ್ನು ಚೆನ್ನಾಗಿ ಮೇದು, ತಿಳಿನೀರನ್ನು ಕುಡಿದು, ನೆಳಲಿನಲ್ಲಿ ಒಟ್ಟಿದ್ದು ಬೆಂಡಾಗಿರುವ ಲೋಳೆ ಹಿಂಡಿಲು ಮೇವನ್ನು ತಿರುವಿ ಹಾಕುತ್ತಿರುವಾಗ ಎದುರಿನಲ್ಲಿಯೇ ಹುಲಿಯನ್ನು ಕಂಡವು, ಕೂಡಲೆ ಮೇಲೆ ತಲೆಯೆತ್ತಿ ನೋಡಿ ಕೋಪಗೊಂಡು ಚಲದಿಂ ಮಲೆದು ಅದರ ಮೇಲೆ ಬಿದ್ದು ಕೋಡಿನಿಂದ ತಿವಿ ತಿವಿದು ಎಸೆದವು, ಅಲ್ಲಿಗೂ ಅವುಗಳ ನೊಸಲ ತೀಟೆ ತೀರಲಿಲ್ಲ, ನೆಗೆದು ಮುರಿದು ದೊಡ್ಡ ಹುತ್ತವನ್ನು ತಿವಿದವು, ಅದರ ಕೆಸರು ಮುಖಕ್ಕೆ ಮೆತ್ತಿಕೊಂಡಿತು, ಮಣ್ಣ ಧೂಳಿ ಮೆಯ್ಯೆಲ್ಲ ಮೆತ್ತಿಕೊಂಡಿತು. ಇದರಿಂದ ಆ ಕಾಡುಕೋಣಗಳು ಭುಜದ ತೀಟೆ ತೀರಿಸಲು ಹೊರಟ ಕಾಳರಕ್ಕಸರೋ ಎಂಬಂತಿವೆ; ಮತ್ತೊಂದು ಕಡೆ ಕೋತಿಗಳ ಹಿಂಡು, ಅವು ಮರದಿಂದ ಮರಕ್ಕೆ ನೆಗೆದು ಎಳೆಕೊಂಬುಗಳನ್ನು ಅಳ್ಳಾಡಿಸಿ, ತೂಗಿ, ಕುಳಿತು, ಕಾಲುಗಳನ್ನು ಚಾಚಿ, ಪಕ್ಕವನ್ನು ಕೆರೆದುಕೊಳ್ಳುತ್ತಾ ಬಿಸಿಲು ಕಾಯ್ದು, ಹಸಿದು, ಮೇಲೆನೋಡಿ, ನೀಡಿನೆಗೆದು ದಪ್ಪವಾದ ಕೊಂಬುಗಳಲ್ಲಿ ಹಣ್ಣಾಗದ ಕಾಯಿಗಳನ್ನು ತಿಂದು, ತಣಿದು, ಕಣ್ಣುಮಿಟುಕಿಸಿ, ಹುಬ್ಬುಹಾರಿಸಿ, ಹಲ್ಲುಕಿರಿದು, ಹುರ್ದೆಂದು ಕಿರುಚಿ, ಅಲ್ಲಿರುವ ಕಿರಾತೆಯರನ್ನು ನಗಿಸತೊಡಗಿವೆ; ಇನ್ನೊಂದೆಡೆ ಮದ್ದಾನೆಗಳ ದಂಪತಿಗಳು, ಅವು ರತಿಕೇಳಿಗೆ ಎಳಸಿವೆ, ಮದ್ದಾನೆಗಳು ವಿಹರಿಸುವ ಕಣಿವೆಯ ಹತ್ತಿರ ಬಂದಿವೆ, ಅಲ್ಲಿ ಗಂಡಾನೆ ತನ್ನ ಸೊಂಡಿಲನ್ನು ಚಾಚಿ ತನ್ನ ನಲ್ಲೆಗೆ ಮೊದಲ ಚುಂಬನ ಮಾಡುವಷ್ಟರಲ್ಲಿ ಸಿಂಹಗರ್ಜನೆ ಕೇಳಿಬಂತು, ಕೂಡಲೆ ಭಯದಿಂದ ಅವುಗಳ ಮೈಬೆವರಿತು, ಬಿಳಿಚಿ, ರಾಗವಳಿದು, ಹಮ್ಮೈಸಿ ದಿಕ್ಕು ತಿಳಿಯದೆ ಓಡಿಬಂದು ಒಂದು

ಕೂಡುವ ಪಿಂಚಿಕ ಚುಂಬನ ಪ್ರಾರಂಭಸಮಯದೊಳ್ ತೊಟ್ಟನೆ ಕಂಠೀರವರವಮಂ ಕೇಳಲಾಗೆ ಬೆಳ್ಳಾಗಿ ಬಿಗುರ್ತು ರಾಗಮಳಿದಗಿದು ಸುಗಿದು ಹಳುಂಗಿ ಹಮ್ಮದಂಬೋಗಿ ಪರಿದೋಡಿ ಪಿರಿಯ ಗುಹೆಯೊಳಡಂಗಿ ಬೆಡಂಗಳಿದು ತಡಂಗೆಡೆದಿರ್ಪ ಮಾತಂಗದಂಪತಿಗಳಿಂ, ಮತ್ತ ಮೊಂದೆಡೆಯೊಳಾರ್ದು ಸಾರ್ದು ಪರಿತರ್ದ ಕಿರಾತನಿಕರದೊಳೊರ್ವ ಲುಬ್ಧಕಂ ಯಮಕಿಂಕರನಂತೆ ಮುಳಿದು ಪರಿತಂದು ಪಿರಿದಪ್ಪ ಪಕ್ಕಿಗಳ್ ನೆರೆದಿರ್ದ ಶಾಲ್ಮಲಿಯ ತುದಿಯನದಿರದೆ ನೋಡಿ ಮೀಱಿದ ಮರನನೇಱಲ್ ಸಾಲದೆ ಕಾಲಪಾಶದಂತೆ ಮುರಿದು ಪರಿದು ಪರ್ವಿದ ಪೆರ್ಬಳ್ಳಿಯನಡರ್ದೇಱಿ ಬಡದೆ ಬರ್ಪುದಂ ತಡೆಯದೆ ಕಂಡು ನಡನಡಂ ನಡುಗಿ ತಲ್ಲಣಿಸಿ ಮಲ್ಲಳಿಗೊಂಡು ಪೋಳಲೊಳಗಣ ಬಾಲವಿಹಂಗಂಗಳನೆಱಂಕೆಯೊಳಿಱುಂಕಿಕೊಂಡು ಪಾಱಲನು ವಾಗಿ ತೂಱಲ್ಗೊಂಬನೊಳಿರ್ಪ ವಿಹಂಗಸಂಕುಳದಿಂದತಿಸೌಂದರ್ಯಮನುರುತರ ವಿಕ್ರಮ ಮನುಧ್ದ್ಧಯಾನಕಮನೂರ್ಜಿತಸಂಪದಮನಪಾರಗಭೀರತೆಯನನಂತಕೌತುಕಮನನೇಕರೌದ್ರರಸ ಮನೊಳಕೊಂಡಿರ್ಪುದಂತುಮಲ್ಲದೆಯುಂ

ಶಾ॥ ಇಂತುದ್ಯನ್ಮೃಗಸಂಘದಿಂ ವನಚರಸ್ತೋಮಂಗಳಿಂ ಭೂಮಿಜಾ
ನಂತಶ್ರೇಣಿಗಳಿಂದರಣ್ಯಕುಲದಿಂದಂ ತಾಪಸವ್ರಾತದಿಂ ।
ಸಂತಂ ಸುತ್ತಿದ ಸೂಕ್ಷ್ಮಗೋತ್ರಚಯದಿಂ ಗಂಧರ್ವಸಿದ್ಧಾಮರೌ
ಘಂ ತೀವಿರ್ದ ಮಹಾಗುಹಾವಳಿಗಳಿಂದೊಪ್ಪಿರ್ದುದುದ್ಯನ್ನಗಂ ೧೨೯

ದೊಡ್ಡ ಗುಹೆಯನ್ನು ಹೊಕ್ಕವು, ಅಲ್ಲಿ ಭಯದಿಂದ ಬಸವಳಿದು ಬೆಂಡಾಗಿ ತಲೆಮರಸಿಕೊಂಡಿವೆ; ಇನ್ನೊಂದೆಡೆ ಒಂದು ಲುಬ್ಧಕರ ಗುಂಪು, ಅವರು ಬೇಟೆಗಾಗಿ ಆತುರದಿಂದ ಬರುತ್ತಿದ್ದಾರೆ, ಅವರಲ್ಲಿ ಒಬ್ಬನು ಯಮಕಿಂಕರನಂತೆ ಕುಪಿತನಾಗಿದ್ದಾನೆ, ಅವನು ಹೆಚ್ಚು ಹಕ್ಕಿಗಳಿರುವ ಒಂದು ಬೂರುಗದ ಮರದ ಸಮೀಪಕ್ಕೆ ಬಂದು, ಅದನ್ನು ಏರುವುದಕ್ಕಾಗಲಿಲ್ಲ. ಅಲ್ಲಿ ಕಾಲಪಾಶದಂತಿದ್ದ ಮರಕ್ಕೆ ಸುತ್ತಿಕೊಂಡಿರುವ ಬಳ್ಳಿಯ ಸಹಾಯದಿಂದ ಮರವನ್ನು ಏರಿದ, ಇವನು ಬರುತ್ತಿರುವುದನ್ನು ಕಂಡ ಪಕ್ಷಿಗಳು, ಭಯದಿಂದ ನಡುಗಿದವು, ಕೂಡಲೆ ಅವು ಪೊಟರೆಗಳಲ್ಲಿದ್ದ ಎಳೆಮರಿಗಳನ್ನು ತಮ್ಮ ರೆಕ್ಕೆಗಳ ಮರೆಯಲ್ಲಿ ಅಡಗಿಸಿಕೊಂಡು ಹಾರಲು ಪ್ರಯತ್ನಿಸಿದವು. ಹೀಗೆ ತುದಿಕೊಂಬುಗಳಲ್ಲಿ ಕುಳಿತಿರುವ ಹಕ್ಕಿಗಳಿಂದ ಕೂಡಿದ ಆ ಕಾಡು ಅತ್ಯಂತ ಸುಂದರವಾಗಿಯೂ, ಉರುತರವಿಕ್ರಮ, ಭಯಾನಕ, ಊರ್ಜಿತ ಸಂಪತ್ತು, ಅಪಾರ ಗಾಂಭೀರ್ಯ, ಅನಂತಕೌತುಕ, ರೌದ್ರರಸಗಳನ್ನು ಒಳಗೊಂಡಿತ್ತು. ೧೨೯. ಹೀಗೆ ಮೃಗಗಳ ಗುಂಪುಗಳಿಂದ, ವನಚರರ ಸಮೂಹಗಳಿಂದ, ವಿವಿಧ ಮರಗಳಿಂದ ಕೂಡಿದ ಕಾಡುಗಳಿಂದ, ತಾಪಸರ ನೆರವಿಗಳಿಂದ, ಸುತ್ತಲೂ ಹಬ್ಬಿರುವ ಸಣ್ಣಪುಟ್ಟ ಗುಡ್ಡಬೆಟ್ಟಗಳಿಂದ, ಗಂಧರ್ವ-ಸಿದ್ಧ ಮೊದಲಾದ ದೇವತೆಗಳ ವಿಹಾರಗಳಿಂದ ತುಂಬಿದ್ದ ಆ ಹಿಮಾಲಯ ಪರ್ವತವು ಅನೇಕ ಗುಹೆಗಳಿಂದ ಒಪ್ಪಿ ರಮ್ಯವಾಗಿತ್ತು.

ಮ॥ ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿ ಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷ ಶಿವಾವಲ್ಲಭಂ ॥ ೧೩೦

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರವೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಹೈಮಾಚಲ ವರ್ಣನಂ
ಪ್ರಥಮಾಶ್ವಾಸಂ

೧೩೦. ಪರಮಪ್ರಭು, ಜಟಾಧರ, ಶಶಿಧರ, ಗಂಗಾಧರ, ಕಾಲಸಂಹರ, ಅಜ್ಞಾನವನ್ನು ಕಳೆಯುವವನು, ತ್ರಿಪುರಗಳನ್ನು ಸುಟ್ಟವನು, ಸುಖಕರ, ಶಂಭು, ಶಂಕರ, ಆನಂದಕರ, ಶಿವೆಗೆ ಪ್ರಿಯನಾದ ಹಂಪೆಯ ವಿರೂಪಾಕ್ಷಸ್ವಾಮಿಯು ಪ್ರಸನ್ನನಾಗಿ ನನಗೆ ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಕರುಣಿಸಲಿ.

ದ್ವಿತೀಯಾಶ್ವಾಸಂ

ಗಿರಿರಾಜ ದೇಶಪುರಾಸ್ಥಾನ ವರ್ಣನಂ

ಕಂ॥ ಶ್ರೀಮಚ್ಛರ್ವಂ ಪರಮ
ಸ್ವಾಮಿ ದಯಾವಾರ್ಧಿ ಭಕ್ತಿಯಿಂ ಕುಡುಗೆಮಗು ।
ದ್ದಾಮ ಸುರರಾಜರಾಜಂ
ಸೋಮಧರಂ ಕೂರ್ತು ಹಂಪೆಯ ವಿರೂಪಾಕ್ಷಂ ॥ ೧

ಉ॥ ಆ ಹಿಮಶೈಲದುತ್ತರವಿಭಾಗದೊಳೊಪ್ಪುವುದಾತ್ತನಂದನ
ವ್ಯೂಹ ತಟಾಕ ವೀಥಿ ಕಳಮಾವಳಿ ಕೈರವರಾಜಿಯಬ್ಜಸಂ ।
ದೋಹ ವಿಶಾಲ ರಾಜನಗರೀವ್ರಜ ಚಾರುನದೀನದಾಳಿಯು
ತ್ಸಾಹ ಸಮಗ್ರದಿಂದ ಗಿರಿರಾಜನ ದೇಶಮಿಳಾವಿಭೂಷಣಂ ॥ ೨

ಚಂ॥ ಸೊಗಯಿಪ ದೇಶಮಚ್ಚರಿಯ ದೇಶಮದುತ್ತಮ ದೇಶಮಾಗೆಯುಂ
ಬಗೆದುದನೀವ ದೇಶಮತಿ ಮಂಗಳ ದೇಶಮನೂನದೇಶಮು ।
ರ್ವಿಗೆ ಸುಖಮಪ್ಪ ದೇಶಮುದಿತೋದಯ ದೇಶಮಪಾರಪುಣ್ಯಕಾ
ರಿಗಳನುಕೂಲದೇಶಮಮೃತೋದಯದೇಶಮದೆಂತು ಬಣ್ಣಿಪೆಂ ॥ ೩

ಕಂ॥ ತೀವಿ ಬೆಳೆಯಿಲ್ಲದಿಳೆಯಿ
ಲ್ಲಾವಡೆ ಬೆಳೆಯಿಸದ ವನಮದಿಲ್ಲನವರತಂ ।
ಪೂವಿಲ್ಲದ ಕೊಳನಿಲ್ಲ ಫ
ಲಾವಳಿಯಿಲ್ಲದ ಮರಂಗಳಿಲ್ಲಾ ನಾಡೊಳ್ ॥ ೪

೧. ಪರಮಸ್ವಾಮಿ, ಶರ್ವ, ದಯೆಗೆ ಸಾಗರ, ಸುರರಾಜನಿಗೆ ರಾಜ, ಸೋಮನನ್ನು ಧರಿಸಿರುವ ಹಂಪೆಯ ವಿರೂಪಾಕ್ಷನು ನಲುಮೆಯಿಂದ ನಮಗೆ ಅಮಿತ ಭಕ್ತಿಯನ್ನು ಕರುಣಿಸಲಿ. ೨. ಆ ಹಿಮಗಿರಿಯ ಉತ್ತರದಲ್ಲಿ ಒಪ್ಪುವ ಸುಂದರವಾದ ನಂದನವನ, ತಟಾಕಗಳು, ಗದ್ದೆಗಳು, ನೈದಿಲೆ-ಕಮಲಗಳಿಂದ ಅಲಂಕೃತವಾದ ರಾಜನಗರೀವ್ರಜ, ಸುಂದರವಾದ ನದೀ-ನದಗಳು ಮುಂತಾದವುಗಳಿಂದ ಗಿರಿರಾಜನ ನಾಡು ಭುವಿಗೆ ಭೂಷಣವಾಗಿದೆ. ೩. ಅದು ಒಂದು ಸೊಗಸಾದ ದೇಶ, ಅದು ಅನೇಕ ಸೋಜಿಗಗಳುಳ್ಳದ್ದು; ಬಹುಶ್ರೇಷ್ಠವಾದ ದೇಶ, ಯಾರಿಗಾದರೂ ಬೇಡಿದುದನ್ನು ನೀಡುವ ದೇಶವದು: ಮಂಗಳಕರವಾದದ್ದು, ಯಾವುದಕ್ಕೂ ಅಲ್ಲಿ ಕಡಮೆಇಲ್ಲ; ಭೂಲೋಕಕ್ಕೇ ಅದು ಸುಖಕರವಾದ ದೇಶ, ಅಭಿವೃದ್ಧಿಯುಳ್ಳ ದೇಶ, ಪುಣ್ಯವಂತರ ನಾಡು, ಅದು ಅಮೃತಮಯ ಎಂದ ಮೇಲೆ ಬಣ್ಣಿಸುವುದಿನ್ನೇನು! ೪. ಆ ನಾಡಿನಲ್ಲಿ ಹುಲುಸಾಗಿ ಬೆಳೆ ಇಲ್ಲದ ನೆಲವಿಲ್ಲ. ಯಾವಕಡೆಯಲ್ಲಿಯೂ ಬೆಳೆ ಆಗಿಸದಿರುವ ಕಾಡೂ ಇಲ್ಲ, ಹೂವಿಲ್ಲದ ಕೊಳವಿಲ್ಲ, ಫಲಿಸದ ಮರಗಳೂ ಆ ನಾಡಿನಲ್ಲಿಲ್ಲ.

ಅಳಿಯಾಸೆ ಪುಷ್ಪವಾಟೀ
ಸ್ಥಳದೊಳ್ ರಾಜಭಯಮಬ್ಜಸಂಕುಳದೊಳ್ ಸಂ ।
ಚಳತೆ ಪವಮಾನನೊಳ್ ವಿ
ಹ್ವಳತೆ ರಥಾಂಗದೊಳಮಲ್ಲದಿಲ್ಲಾ ನಾಡೊಳ್ ॥ ೫

ಸಕಲಂಕತೆ ಚಂದ್ರಮನೊಳ್
ವಿಕಲಧ್ವನಿ ವಿಹಗದಲ್ಲಿ ಭಂಗಂ ನದಿಯೊಳ್ ।
ಸಕುಟಿಲತೆ ಲತೆಗಳೊಳ್ ಭುವ
ನಕಂಟಂಕಂ ಬಸದೊಳಲ್ಲದಿಲ್ಲಾ ನಾಡೊಳ್ ॥ ೬

ಕರವಿಚ್ಛೇದಂ ಗ್ರಾಮನಿ
ಕರಂಗಳೊಳ್ ಬಂಧನಂ ಕುಸುಮಮಾಲಿಕೆಯೊಳ್ ।
ಪರವಶಮೆಂಬುದು ಯೋಗೀಂ
ದ್ರರೊಳಲ್ಲದೆ ಶೈಲವತಿಯ ದೇಶದೊಳುಂಟೇ ॥ ೭

ಆ ಮಯಮಕ್ಷರ ಕುಲದೊಳ್
ಸಾಮಂ ವೇದಂಗಳಲ್ಲಿ ಭೀಮಂ ಚಿತ್ರ ।
ಸ್ತೋಮದೊಳಂ ಕ್ಷಾಮಂ ಲಲ
ನಾಮಧ್ಯದೊಳಲ್ಲದಾ ಸುದೇಶದೊಳುಂಟೇ ॥ ೮

೫. ಆ ನಾಡಿನಲ್ಲಿ ಅಳಿಯಾಸೆ-ಕೀಳು ಆಸೆ, ರಾಜ-ಭಯ, ಸಂಚಲತೆ (ಚಾಂಚಲ್ಯ) ವಿಹ್ವಲತೆ (ಕಳವಳಗೊಳ್ಳುವಿಕೆ) ಎಂಬ ಗುಣಗಳು ಇದ್ದಿಲ್ಲ; ಆದರೆ ಅಳಿ (ದುಂಬಿ) ಯಾಸೆಯು ಪುಷ್ಪವಾಟಿಕೆಯಲ್ಲಿಯೂ, ರಾಜಭಯ ಎಂದರೆ ಚಂದ್ರನಭಯವು ತಾವರೆಗಳಲ್ಲಿಯೂ, ಸಂಚಲತೆ ಎಂದರೆ ಚಲಿಸುವಿಕೆಯು ಮಂದಮಾರುತದಲ್ಲಿಯೂ, ವಿಹ್ವಲತೆ ಎಂದರೆ ಕಳವಳಗೊಳ್ಳುವುದು ಚಕ್ರವಾಕಪಕ್ಷಿಗಳಲ್ಲಿ ಮಾತ್ರವೇ ಇತ್ತು. ೬. ಕಳಂಕ ಎಂಬ ದೋಷವು ಚಂದ್ರನಲ್ಲಿ, ವಿಕಲವಾಗಿ ಕೂಗುವ ಗುಣ ಹಕ್ಕಿಗಳಲ್ಲಿ, ಭಂಗ ಎಂದರೆ ವಕ್ರವಾಗಿ ಹರಿಯುವ ಸ್ವಭಾವ ನದಿಯಲ್ಲಿ ಕುಟಿಲತೆ ಎಂದರೆ ಡೊಂಕಾಗಿರುವಿಕೆಯು ಲತೆಗಳ (ಬಳ್ಳಿಗಳು)ಲ್ಲಿ, ಭುವನಕಟಂಕ ಎಂದರೆ ಕಮಲದ ದಂಟಿನಲ್ಲಿರುವ ಮುಳ್ಳು (ಸುಂಕು) ತಾವರೆ ದಂಟನಲ್ಲಿದ್ದಿತೇ ಹೊರತು ಉಳಿದ ಕಳಂಕ (ಅಪವಾದ) ವಿಕಾರವಾಗಿ ಕಾಣದು, ವಕ್ರಸ್ವಭಾವ, ಕುಟಿಲತ್ವ ಮತ್ತು ಲೋಕಕಂಟಕ ವಾಗುವ ಸ್ವಭಾವಗಳು ನಾಡಿನ ಜನರಲ್ಲಿರಲಿಲ್ಲ. ೭. 'ಕರವಿಚ್ಛೇದ' ಕಂದಾಯವನ್ನು ಬಿಡಿಸಿಕೊಳ್ಳುವಿಕೆ ಎಂಬುದು ಆ ಗ್ರಾಮಗಳ ಜನತೆಯಲ್ಲಿದ್ದಿತೆ ಹೊರತು, ಅಲ್ಲಿ ಕರವಿಚ್ಛೇದ-ಕೈಕತ್ತರಿಸುವ ಪ್ರಮೇಯವಿರಲಿಲ್ಲ; 'ಬಂಧನ' ಕಟ್ಟುವಿಕೆಯು ಹೂ ಪೋಣಿಸುವ ವ್ಯವಹಾರದಲ್ಲಿದ್ದಿತೇ ಹೊರತು ಅಲ್ಲಿ 'ಬಂಧನ'ವೆಂಬುದಿರಲಿಲ್ಲ; 'ಪರವಶ' 'ತನ್ಮಯವಾಗು' ಎಂಬ ವ್ಯವಹಾರವು ಯೋಗಿಗಳಲ್ಲಿದ್ದಿತೇ ಹೊರತು ಆ ನಾಡಿನಲ್ಲಿ 'ಪರವಶ' ಶತ್ರುವಿಗೆ ವಶನಾಗು ಎಂಬ ಅರ್ಥದಲ್ಲಿ ಆ ಹೈಮವತಿ ನಾಡಿನಲ್ಲಿ ಬಳಕೆಯಲ್ಲಿರಲಿಲ್ಲ. ೮. ಆ ಮಯರೋಗ ಮತ್ತು ಆಕಾರದಿಂದ ಕೂಡಿದ ಅಕ್ಷರಗಳು; ಆದೇಶದಲ್ಲಿ 'ಆಮಯ' ಎಂಬ ಪದವು ಅಕ್ಷರಮಾಲೆಯಲ್ಲಿದ್ದಿತೇ ಹೊರತು ಅಲ್ಲಿಯ

ಆ ದೇಶಂ ಸಲೆ ಗಿರಿರಾ
ಜಾದೇಶಂ ತೀವಿ ವಿಪ್ರವೇದೋಚ್ಚರಣಾ ।
ನಾದ ಶಿವವಾಕ್ಯದೊಳ್ ಸಮ
ನಾದ ಶಿವಜ್ಞಾನಗಾನದಿಂದಿಸೆದಿರ್ಕುಂ ॥ ೯

ಗ್ರಾಮಂ ಜಿತಾಘಕುಲಸಂ
ಗ್ರಾಮಂ ಸದನಂ ಸುಖಕ್ಕೆ ಪಸದನಮೆಸೆವಾ ।
ರಾಮಂ ರಾಮಂ ಜನಕುಲ
ಕಾಮಂ ಕಾಮಹರಪೂಜೆ ನೋಡಾ ನಾಡೊಳ್ ॥ ೧೦

ಕಂ॥ ಕಲ್ಪಿಲ್ಲಂ ಪರುಷಂ ತರು
ವೆಲ್ಲಂ ಕಲ್ಪತರು ಗುಲ್ಮಮೆಲ್ಲೌಷಧಿ ಗೋ ।
ವೆಲ್ಲಂ ಸುರಭಿಕುಲಂ ಮಡು
ವೆಲ್ಲಂ ಸಿದ್ಧರಸಮೆನಿಕುಮಂತಾ ನಾಡೊಳ್ ॥ ೧೧

ಆ ವಿಷಯದೊಳೊಪ್ಪುವ ಕಳ
ಮಾವಳಿ ನಳನಳಿಸಿ ಬೆಳೆದು ಪಸುರೇಱೆ ಲಸದ್ ।
ಭೂವನಿತೆಗೆ ಧಾತ್ರಂ ಪರಿ
ಭಾವಿಸಿ ಪೊದೆಯಿಸಿದ ಹರಿತಪಟದಂತಿರ್ಕುಂ ॥ ೧೨

ಜನತೆಯಲ್ಲಿ ರೋಗರುಜಿನಗಳಿರಲಿಲ್ಲ; 'ಸಾಮ' ಸವಿಮಾತುಗಳನ್ನಾಡಿ ವಂಚಿಸುವಿಕೆ ಮತ್ತು ಸಾಮವೇದ; ಆ ದೇಶದಲ್ಲಿ ಸಾಮ ಎಂಬ ಪದವು ವೇದವಾಚಕವಾಗಿದ್ದಿತಲ್ಲದೆ ಸವಿಮಾತುಗಳನ್ನಾಡಿ ವಂಚಿಸು ಎಂಬ ಅರ್ಥದಲ್ಲಿರಲಿಲ್ಲ; 'ಭೀಮ' ಭಯಂಕರ ಎಂಬ ಪದವು ಭಯಂಕರವಾದ ಚಿತ್ರಗಳು ಎಂಬ ಅರ್ಥದಲ್ಲಿ ಮಾತ್ರವೇ ಇತ್ತಲ್ಲದೆ ಜನತೆಯಲ್ಲಿ ಭೀಕರತೆ ಇದ್ದಿಲ್ಲ; ಅದರಂತೆ ಕ್ಷಾಮ ಎಂದರೆ ಕೃಶನಾಗು ಮತ್ತು ಬರ (ಮಳೆ- ಬೆಳೆಗಳಿಲ್ಲದ್ದು) ಎಂದು ಅರ್ಥ; ಇಲ್ಲಿ ಕ್ಷಾಮ ಎಂಬುದು ಸ್ತ್ರೀಯರ ನಡು ಕೃಶವಾಗಿದೆ ಎಂಬ ಅರ್ಥದಲ್ಲಿ ಮಾತ್ರವೇ ಬಳಕೆಯಲ್ಲಿತ್ತೇ ಹೊರತು ಸರ್ವ ಸಮೃದ್ಧವಾದ ಆ ನಾಡಿನಲ್ಲಿ ಕ್ಷಾಮವೆಂಬುದಿರಲಿಲ್ಲ. ೯. ಆ ದೇಶವು ಗಿರಿರಾಜನ ಆದೇಶ (ಆಜ್ಞೆ)ಕ್ಕೆ ಒಳಗಾಗಿತ್ತು. ಅಲ್ಲಿ ವಿಪ್ರರ ವೇದೋಚ್ಚಾರದ ನಾದ ಶಿವವಾಕ್ಯದಲ್ಲಿ ಸಮನಾದ ಶಿವ ಜ್ಞಾನಗಾನಗಳಿಂದ ಆ ದೇಶವು ವಿರಾಜಮಾನವಾಗಿತ್ತು. ಎಲ್ಲೆಲ್ಲಿಯೂ ವೇದಾಧ್ಯಯನ, ಶಿವಜ್ಞಾನಧ್ಯಾನ-ಗಾನಗಳು ಮೊಳಗುತ್ತಿದ್ದವು ಎಂದು ಭಾವ. ೧೦. ಅಲ್ಲಿಯ ಗ್ರಾಮಗಳು ಎಂದರೆ ಆ ಗ್ರಾಮವಾಸಿಗಳು ಆಸುರೀವೃತ್ತಿ (ಪಾಪ ಚಿಂತನ)ಗಳ ಸಂಗ್ರಾಮದಲ್ಲಿ ಜಯಗಳಿಸಿದ್ದರು ಎಂದರೆ ಪಾಪದೂರರಾಗಿದ್ದರು, ಆ ದೇಶ ಸುಖಕ್ಕೆ ನೆಲೆಯಾಗಿತ್ತು; ಪ್ರಸನ್ನತೆ (ಕಾಣಿಕೆ)ಯಿಂದ ಬೆಳಗುವ ಮನೋಹರವಾದ ತೋಟಗಳು, ಜನತೆಗೆ ಇಷ್ಟಾರ್ಥಗಳನ್ನು ನೀಡುವ ಕಾಮಹರನಾದ ಪರಶಿವನ ಪೂಜೆಗಳು ಆ ನಾಡಿನಲ್ಲೆಲ್ಲಿಯೂ ಕಂಗೊಳಿಸುತ್ತಿದ್ದವು. ೧೧. ಅಲ್ಲಿಯ ಕಲ್ಪೆಲ್ಲ ಸ್ಪರ್ಶ ಮಣಿಗಳು, ಮರಗಳೆಲ್ಲ ಕಲ್ಪಕುಜಗಳು, ಗಿಡಗೆಂಟೆಗಳೆಲ್ಲ ಓಷಧಿಗಳು, ಗೋವುಗಳು ಕಾಮಧೇನುಗಳ ಹಿಂಡು, ಮಡುಗಳೆಲ್ಲ ಸಿದ್ಧರಸಭರಿತವಾಗಿದ್ದವು. ೧೨. ಆ ದೇಶದಲ್ಲಿ ಒಪ್ಪುವ ಬತ್ತದ ಗದ್ದೆಗಳು ಹಸುರು ಚಿಲ್ಲಿದಂತೆ ಹುಲುಸಾಗಿ ಬೆಳೆದಿವೆ. ಅದನ್ನು

ಸೊಂಪಾಗುತ್ತುಂಕುರಿಸು
ತ್ತುಂ ಪಸುರೇಱುತ್ತೆ ಕವಲಿಱೆದು ಪೊಡೆಯೊತ್ತು ।
ತ್ತುಂ ಪಾಲೇಱುತ್ತುಂ ನೆಱೆ
ದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ ॥ ೧೩

ಉಗುವೆಳನೀರಿಂದಂ ಕದ
ಳಿಗಳಾ ಕದಳಿಗಳ ಪಣ್ಣ ರಸದಿಂ ಪುಂಡ್ರೇ ।
ಕ್ಕುಗಳಿಕ್ಕುರಸದಿನಾ ಕಳ
ವೆಗಳಾ ಕಳವೆಗಳ ಕಣಿಶದಿಂ ಗಿಳಿ ಬಳೆಗುಂ ॥ ೧೪

ವ॥ ಆ ಕಳಮಕ್ಷೇತ್ರಮಂ ಬಳಸಿ ತಾಮರಸಾಕ್ಷಿಯರಪ್ಪ ಪಾಮರಿಯರ್ ಸಾದರಂ ಕಾದಿರ್ಪಲ್ಲಿ,

ಚಂ॥ ತ್ವರಿತಗತಿಪ್ರಚಾರತೆ ಮರಾಳಲಸದ್ಗತಿ ಸಾರುತೆಳ್ದಲ
ಬ್ಬರಿಸುವ ನಾದಮನ್ಯಭೃತನಾದಮಡರ್ಚುತಿರಲ್ಕೆ ಮಚ್ಚೆ ಮ ।
ಚ್ಚರಿಸುವ ತೋಳ್ ಮರುದ್ಧಲತಾಕುಳಮೆಂದುಱೆ ಪಕ್ಕಸೋವ ಪಾ
ಮರಿಯರ ಝಂಕೆಗಲ್ಲಿ ಗಿಳಿಯಂಜದೆ ಬೆರ್ಚದೆ ನಿಲ್ಕುಮಾವಗಂ ॥ ೧೫

ವ॥ ಮತ್ತಮಲ್ಲಿ

ಕಂ॥ ಮುಡಿ ಮೊಲೆ ನಿತಂಬಭಾರದಿ
ನಡಿಯಿಡಲಾಱದೆ ಶುಕಾಳಿಯಂ ಪಾಮರಿಯರ್ ।
ಬಿಡೆ ಸೋವುತ್ತಿರ್ಪರ್ ಸಂ
ಗಡಮಿರ್ದಲ್ಲಿರ್ದು ಬಱೆಯ ಗಳಬಳದಿಂದಂ ॥ ೧೬

ನೋಡಿದರೆ ಸೃಷ್ಟಿಕರ್ತನಾದ ಬ್ರಹ್ಮನು ಭೂವನಿತೆಗೆ ಹೊದಿಸಿದ ಹಸುರುವಸ್ತ್ರವೊ ಎಂಬಂತಿದೆ. ೧೩. ಅಲ್ಲಿಯ ಗಂಧಶಾಲಿ ಗದ್ದೆಗಳಲ್ಲಿ ಸೊಂಪಾಗಿ, ಅಂಕುರಿಸಿ, ಪಸುರಾಗಿ, ಕವಲೊಡೆದು, ಪೊಡೆಯೊತ್ತಿ, ಹಾಲುತುಂಬಿ, ಸುಂದರವಾಗಿ ಭತ್ತದ ಪೈರು ಹುಲುಸಾಗಿ ಬೆಳಗುತ್ತಿದೆ. ೧೪. ಉಕ್ಕಿಬರುವ ಎಳೆನೀರಿನಿಂದ ಕದಳಿ (ಬಾಳೆ)ಗಳು; ಆ ಕದಳಿಗಳ ಹಣ್ಣಿನ ರಸದಿಂದ ಪುಂಡ್ರೇಕ್ಷು (ಪಟಾವಳಿಕಬ್ಬು)ಗಳು, ಆ ಇಕ್ಷು (ಕಬ್ಬಿನ) ರಸದಿಂದ ಕಳವೆ (ಗಂಧಶಾಲಿಭತ್ತ) ಪೈರು, ಆ ಭತ್ತದ ತೆನೆಯ ಹಾಲಿನಿಂದ ಗಿಳಿಗಳು ಬೆಳೆಯುತ್ತಿವೆ. ವ॥ ಆ ಗಂಧಶಾಲಿಯ ಭತ್ತದ ಗದ್ದೆಗಳನ್ನು ತಾವರೆಗಣ್ಣಿನ ನಾಡ ಹೆಣ್ಣು ಮಕ್ಕಳು ಕಾಯುತ್ತಿದ್ದಾರೆ. ೧೫. ಹಕ್ಕಿಗಳನ್ನು ಸೋವುತ್ತಿರುವ ಪಾಮರಿಯರ ತ್ವರಿತ ಗತಿಯು ಅವರ ಹಂಸನಡಗೆಯನ್ನು ಸಾರುತ್ತಿರಲು, ಅವರು ಅಬ್ಬರಿಸುವ ನಾದವು ಕೋಗಿಲೆಯ ನಾದವನ್ನು ತಿರಸ್ಕರಿಸುತ್ತಿರಲು, ಮೆಚ್ಚಿ ಮಚ್ಚರಿಸುವ ಅವರ ತೋಳ್ಗಳನ್ನು ಗಾಳಿಯಿಂದ ಅಲುಗಾಡುವ ಲತೆಯೆಂದು ತಿಳಿದ ಗಿಳಿಗಳು ಅವರ ಝಂಕೆಗೆ ಬೆದರದೆ ಬೆಚ್ಚದೆ ಭತ್ತದ ಗದ್ದೆ ಬಿಟ್ಟು ಏಳುತ್ತಲೇ ಇರಲಿಲ್ಲ. ೧೬. ಆ ಪಾಮರಿಯರಿಗೆ ತಲೆಯಲ್ಲಿ ಮುಡಿಭಾರ, ಎದೆಯ ಮೇಲೆ ಮೊಲೆಭಾರ, ಸಾಲದ್ದಕ್ಕೆ ನಿತಂಬಭಾರ, ಇದರಿಂದ,

ಗಿಳಿಯಂ ಸೋವೆಳೆಯಳ ನುಡಿ
ವಳಿಯಿಂದೆ ವಿಕಾಸಮಾದ ಬಾಯ್ದೆಱೆಗಂಡಂ ।
ದೆಳಸುತ್ತಿರ್ಪುವು ದಾಡಿಮ
ಫಳಬೀಜಂಗೆತ್ತು ದಂತಕುಳಮಂ ಗಿಳಿಗಳ್ ॥ ೧೭

ವ॥ ಮತ್ತಂ ಪೆಱತೊಂದೆಡೆಯ ಕಳಮಕ್ಷೇತ್ರಮಂ ಕಾದಿರ್ಪ ಕಾಮಿನಿಯರೊಳೊರ್ವ ಪ್ರೌಢಪಾಮರಿ ಪಾಂಥರೊಳಗೆ ಬಳಲ್ದು ಬರ್ಪ ಜವ್ವನಿಗನಂ ಕಂಡು ನಾಡೆ ಮನಮೆಳಸಿ ಕೂಡಲೆಂದು,

ಕಂ॥ ಪತ್ತಿತು ಬಿಸಿಲುಱೆ ಕಾಲಂ
ಮುತ್ತಿತು ಸೋವುದಕದಿಚ್ಛೆಯಿಂದಂ ಬೆಳರ್ವಾಯ್ ।
ಬತ್ತಿತ್ತಯ್ಯೋ ಶ್ರಮಮನಿ
ನಿತ್ತಂ ಕಳೆವವರೆ ಜಾಣರೆನುತುಂ ನುಡಿದಳ್ ॥ ೧೮

ಚಂ॥ ನುಡಿಯೆ ಬಳಲ್ದ ಪಾಂಥನೆರ್ದೆ ತಣ್ಪಿನ ಸೋನೆಯನಾಂತ ಮಾಳ್ಕೆಯಿಂ
ಪೊಡಕರಿಸುತ್ತೆ ಪೆರ್ಚಿ ಮಿಗೆ ಸಾರ್ದು ನಿವಾಸಸುಖಸ್ಥಳಕ್ಕೆ ಬಂ ।
ದೆಡೆಗುಡದನ್ಯಚಿಂತೆಗೆ ಮನೋಜಸುಖಾರ್ಣವಮಧ್ಯದೊಳ್ ಮನಂ
ಗುಡುತಮಮರ್ಚುತೀ ಸುತೆ ಧುಡುಮ್ಮಿಱೆಯುತ್ತಮೆ ಪಾಂಥನೊಪ್ಪಿದಂ ॥ ೧೯

ಕಂ॥ ನೆಳಲಾದುದು ಧಮ್ಮಿಲ್ಲಂ
ಪುಳಿನಸ್ಥಳಮಾಯ್ತು ವೃತ್ತಜಘನಭರಂ ಶೀ ।
ತಳತರಜಳಮಾದುದು ಕೋ
ಮಳೆಯಧರಮರೀಚಿ ಪಾಂಥನೇಂ ಬರ್ದುಕಿದನೋ ॥ ೨೦

ಅವರು ಅಡಿಯಿಡಲಾರದೆ ಇದ್ದಲ್ಲಿಯೇ ಕುಳಿತು ಬರಿಯ ಗಳಬಳ ಶಬ್ದಗಳಿಂದಲೇ ಗಿಳಿಗಳನ್ನು ಸೋವುತ್ತಿದ್ದರು. ೧೭. ಗಿಳಿಯನ್ನು ಸೋವ ಒಬ್ಬ ಎಳೆಯಳು, ಅವಳ ನುಡಿವಳಿಯಿಂದ ಅರಳಿದ ತುಟಿಗಳ ಹಿಂದೆ ಇರುವ ದಂತಪಂಕ್ತಿಯನ್ನು ದಾಳಿಂಬೆಯ ಬೀಜವೆಂದು ತಿಳಿದ ಗಿಳಿಗಳು ಅವನ್ನು ಬಯಸುತ್ತಿದ್ದವು. ವ॥ ಮತ್ತೊಂದು ಕಡೆಯ ಕಳಮ ಕ್ಷೇತ್ರವನ್ನು ಕಾಯ್ದಿರುವ ಹೆಣ್ಣುಗಳಲ್ಲಿ ಒಬ್ಬ ಪ್ರೌಢೆ, ಅವಳು ದಾರಿಗರಲ್ಲಿ ಆಯಾಸಗೊಂಡು ಬರುತ್ತಿರುವ ಒಬ್ಬ ಯುವಕನನ್ನು ಕಂಡು ಮನ ತಿಳಿಸಿ ಕೂಡಬಯಸಿ. ೧೮. ಬಿಸಿಲು ಏರಿತು, ಕಾಲುನೊಂದಿದೆ, ನೀರಡಸಿ ಬಾಯಿ ಬತ್ತಿದೆ, ಅಯ್ಯೊ, ಎಂಥ ಶ್ರಮ! ಇಷ್ಟನ್ನೂ ಒಮ್ಮೆಗೇ ಕಳೆಯುವವರೇ ಜಾಣರು! ಎಂದು ಅರ್ಥಗರ್ಭಿತವಾಗಿ ನುಡಿದಳು. ೧೯. ಅವಳ ನುಡಿಯನ್ನು ಕೇಳಿದ ಆ ಪಾಂಥನ ಎದೆಗೆ ತಣ್ಣನೆ ಸೋನೆಮಳೆ ಬಿದ್ದಂತಾಯಿತು. ಅದರಿಂದ ಉತ್ಸಾಹಗೊಂಡು ಅವನು ಒಂದು ನಿರ್ಜನಪ್ರದೇಶಕ್ಕೆ ಆಗಮನಿಸಿದ, ಅಲ್ಲಿ ಅವನು ಬೇರೆ ಯೋಚನೆಯನ್ನು ಬಿಟ್ಟು, ರತಿವಿಲಾಸಸುಖದಲ್ಲಿ ಮಗ್ನನಾಗಿ ಸುಖಿಸುತ್ತಿದ್ದ. ೨೦. ಆ ಪಾಂಥನಿಗೆ ಅವಳ ನೀಳಕೇಶಪಾಶವೆ ನೆಳಲಾಯಿತು. ಅವಳ ವೃತ್ತಜಘನವೇ ವಿಹಾರಕ್ಕೆ ಯೋಗ್ಯವಾದ ಮರಳ ದಿಣ್ಣೆಯಾಯಿತು; ಆ ಕೋಮಲೆಯ ಅಧರ ಮರೀಚಿಯೇ ಅವನಿಗೆ ತಣ್ಣನೆಯ

ವ॥ ಮತ್ತಮಾ ದೇಶದೊಂದಱವಟಗೆಯಲ್ಲಿ

ಸ್ರ॥ ಕಳಕೇಕೇಶಪಾಶಂ ಶಶಿನಿಭವದನಂ ಭೃಂಗನೀಲಾಳಕಂ ಸಂ
ಚಳಿತ ಪ್ರೋನ್ಮತ್ಸ್ಯನೇತ್ರಂ ಘಟಕುಚಯುಗಳಂ ಲೇಶಮಧ್ಯಂ ಗಭೀರೋ ।
ಜ್ವಳ ಶೋಭಾನಾಭಿ ಕುಂಭಸ್ಥಳಸದೃಶನಿತಂಬಂ ಸುರಂಭಾವಿಳಾಸಂ
ದಳೆದೊಪ್ಪಿರ್ದೂರುದಂಡಂ ತನಗೆಸೆದಿರೆ ಸಂತಂ ಪ್ರಪಾಕಾಂತೆಯಿರ್ದಳ್ ॥ ೨೧

ಕಂ॥ ವರನಾಭಿ ಸುಳಿಗಳಂ ತೋಳ್
ತರಂಗಮಾಲೆಗಳನಂಬಕಂ ಮತ್ಸ್ಯಮನಂ ।
ಗರುಚೆ ರುಚಿರಾಂಬುವಂ ಪೋ
ಲ್ತು ರಮಣಿ ನದಿಯಂದದಿಂ ಪ್ರಪಾಂತದೊಳಿರ್ದಳ್ ॥ ೨೨

ಇರೆ ಬಂದ ಪಥಿಕನೋರ್ವಂ
ತರುಣಿಯ ಲಾವಣ್ಯರಸಮನಕ್ಷಿಗಳಿಂದಂ ।
ಬರೆ ಪೀರ್ದು ದಣಿದು ಬಟ್ಟೆಯ
ಪರಿಶ್ರಮವ್ಯಥೆಯನಱೆಯದಿರ್ದಂ ಸುಖದೊಳ್ ॥ ೨೩

ವ॥ ಆ ಪ್ರಪಾಕಾಮಿನಿ ಪಥಿಕರ್ಗೆ ನೀರ್ಗುಡಿಯಲಿಱವಲ್ಲಿಯೊರ್ವ ಏಟಂ ಜಲಪಾನಂ ಮಾಡುತಂ ತರುಣಿಯ ನಿರತಿಶಯಲಾವಣ್ಯಮಂ ಕಂಡು,

ಕಂ॥ ತೀರ್ದುದು ನೀರ್ ತೀರ್ದುದು ತೃಷೆ
ತೀರ್ದುದು ಕಡುಸೇದೆ ತೀರ್ದೊಡೇಂ ಪಥಿಕಂ ತಾ ।
ನಿರ್ದಂತಿರ್ದಂ ಸ್ತ್ರೀಮುಖ
ಮಿರ್ದಿರವಂ ನೋಡುವಾಸೆ ತೀಱದೆ ಮನದೊಳ್ ॥ ೨೪

ಜಲವಾಯಿತು ಎಂದಮೇಲೆ ಆ ಪಾಂಥನ ಪುಣ್ಯವೆಂತಹುದಿರಬೇಕು! ವ॥ ಆ ಅರವಟ್ಟಿಗೆಯಲ್ಲಿದ್ದ ಪ್ರಪಾಕಾಂತೆಯ ಸೌಂದರ್ಯವಿದು-೨೧. ಸುಂದರವಾದ ನವಿಲಿನ ಪಿಂಛದಂತಿರುವ ಕೇಶಪಾಶ; ಚಂದ್ರನಂತಿರುವ ಮುಖ; ದುಂಬಿಯಂತಿರುವ ಕಪ್ಪಾದ ಚೂರ್ಣ ಕುಂತಳ, ಮೀನುಕಣ್ಣು, ಕಲಶಕುಚ, ಸಿಂಹಮಧ್ಯ, ಶೋಭಿಸುವ ನಾಭಿ, ಆನೆಯ ಕುಂಭಸ್ಥಳದಂತಿರುವ ನಿತಂಬ, ಬಾಳೆಯ ದಂಟಿನಂತಿರುವ ತೊಡೆಗಳು ಮುಂತಾದುವುಗಳಿಂದ ಅವಳು ಒಪ್ಪಿದ್ದಳು. ೨೨. ಅರವಟ್ಟಿಗೆಯಲ್ಲಿ ಪಾಂಥರಿಗೆ ನೀರೆರೆಯುತ್ತಿದ್ದ ಒಬ್ಬ ತರುಣಿ ನದಿಯಂತೆ ಕಂಗೊಳಿಸುತ್ತಿದ್ದಳು. ಅವಳ ಸುಂದರ ನಾಭಿಯು ಸುಳಿಯನ್ನೂ, ತೋಳು ತರಂಗ (ಅಲೆ) ಮಾಲೆಯನ್ನೂ, ಕಣ್ಣು ಮೀನನ್ನೂ, ಶರೀರಕಾಂತಿಯು ನೀರನ್ನೂ ಹೋಲುತ್ತಿತ್ತು. ೨೩. ಹೀಗಿರುವ ಆ ತರುಣಿಯ ಲಾವಣ್ಯರಸವನ್ನು ಕಣ್ಣುಗಳಿಂದ ಚೆನ್ನಾಗಿ ಹೀರಿದ ಪಥಿಕ ಆ ಸುಖದಲ್ಲಿ ತಾನು ದಾರಿ ನಡೆದು ಬಂದ ಆಯಾಸವನ್ನೆಲ್ಲ ಮರೆತಿದ್ದ. ವ॥ ಹೀಗೆ ಅರವಟ್ಟಿಗೆಯ ಆ ಲಲನೆ ಪಥಿಕರಿಗೆ ನೀರೆರೆಯುತ್ತಿರುವಾಗ ಒಬ್ಬ ವಿಟ ಜಲಪಾನವನ್ನು ಮಾಡುತ್ತಾ ಆಕೆಯ ಮನಂಬುಗುವ ಲಾವಣ್ಯವನ್ನು ಕಂಡು, ೨೪. ತಂಬಿಗೆಯಲ್ಲಿದ್ದ ನೀರು ತೀರಿತು, ಅವನ ಬಾಯಾರಿಕೆಯೂ ತೀರಿತು, ಆಯಾಸವೂ ತೀರಿತು. ಆದರೇನು? ಅವನಿಗೆ ಅವಳ

ನಡೆ ನುಡಿ ಬಳಲ್ಕೆ ಮುನ್ನಂ
ಕಡು ಚಲ್ವೆಯ ರೂಪುಗಂಡ ಬಳಿಕಂ ನಡೆಯರ್ ।
ನಡುಯರ್ ನೀರಂ ಕುಡಿಯರ್
ನಡೆನೋಡುತ್ತಿರ್ಪರತನುಶಿಥಿಲರ್ ಪಥಿಕರ್ ॥ ೨೫

ವ॥ ಮತ್ತಮೊಂದು ಪ್ರಪಾಶಾಲೆಯಲ್ಲಿ

ಕಂ॥ ಅಂಬುವನೆಱಿವಾಗಳ್ ಪ್ರತಿ
ಬಿಂಬಿಸೆ ಕೆಯ್ನೀರೊಳವಳ ವದನಂ ಪಥಿಕಂ ।
ನಂಬಿ ನಲಿದೀಂಟದಂ ಪ್ರತಿ
ಬಿಂಬಾಧರ ಮಧುರರಸಮನೀಂಟುವ ತೆಱದಿಂ ॥ ೨೬

ವ॥ ಮತ್ತಮಾ ದೇಶದಲ್ಲಿ –

ಕಂ॥ ಬಳಸಿಗಮೊಪ್ಪಿದುವು ಜಿನುಗಿ
ಗಳಪಿ ಕುಳಿರ್ಕೋಡಿ ಕಳ್ತಲಿಸಿ ಮಲೆದುದ್ದಂ ।
ದಳೆದು ಫಲಮಾಗೆ ಪರಿವಡೆ
ದಳಿ ಗಿಳಿ ಮಡು ಗಿಡು ಕರಿ ಗಿರಿ ಚೂತಂ ಗೀತಂ ॥ ೨೭

ನಾನಾ ದೇವಾಯತನಾ
ನೂನವಿಭೋಗಾದಿ ಸಂಪದಪ್ರದಮೆನಿಸಿ ।
ರ್ಪಾನಾಡಿಂಗೆ ಶಿರೋಮಣಿ
ತಾನೆನಿಕುಂ ಪೆಸರೊಳೋಷಧಿಪ್ರಸ್ಥಪುರಂ ॥ ೨೮

ಮುಖವು ಇದ್ದ ರೀತಿಯನ್ನು ನೋಡುವ ಆಸೆ ತೀರದೆ, ಅವನು ಇದ್ದಂತೆಯೇ ಇದ್ದ! ೨೫. ಮೊದಲು ಆ ದಾರಿಗರಿಗೆ ನಡೆನುಡಿಗಳಲ್ಲಿ ಬಳಲಿಕೆ ಇತ್ತು. ಕಡುಚೆಲುವೆಯಾದ ಅವಳ ರೂಪು ಕಂಡ ಮೇಲೆ ಅವರು ನಡೆಯರು, ನುಡಿಯರು, ನೀರನ್ನೂ ಕುಡಿಯರು; ಶಿಥಿಲ ಮನಸ್ಸುಳ್ಳ ಆ ಪಥಿಕರು ಸುಮ್ಮನೆ ಅವಳನ್ನು ನೋಡುತ್ತಲೇ ಇದ್ದರು. ವ॥ ಇನ್ನೊಂದು ಅರವಟ್ಟಿಗೆಯಲ್ಲಿ, ೨೬. ದಾರಿಗನಿಗೆ ನೀರೆರೆಯುವಾಗ ಅವಳ ಮುಖವು ಅವನ ಬೊಗಸೆಯ ನೀರಿನಲ್ಲಿ ಪ್ರತಿಬಿಂಬಿಸಿತು. ಅದನ್ನು ಅವನು ಅವಳ ನಿಜವಾದ ಮುಖವೆಂದೇ ತಿಳಿದ. ಇದರಿಂದ ಅವನು ಬೊಗಸೆಯಲ್ಲಿದ್ದ ನೀರನ್ನು ಪ್ರತಿಬಿಂಬಾ ಧರದ ಮಧುರರಸವನ್ನು ಹೀರುವಂತೆ ಹೀರಿದ. ವ॥ ಮತ್ತೆ ಆ ನಾಡಿನಲ್ಲಿ, ೨೭. ಅಳಿ ಜಿನುಗಿ, ಗಿಳಿ ಗಳಪಿ (ಹೆಚ್ಚು ಮಾತನಾಡಿ) ಮಡು ತಂಪನ್ನುಂಟುಮಾಡಿ, ಗಿಡಗಳು ಬೆಳೆದು ಕತ್ತಲೆಯುಂಟುಮಾಡಿ, ಕರಿ (ಆನೆ) ಮದೋನ್ಮತ್ತವಾಗಿ, ಗಿರಿ ಎತ್ತರವಾಗಿ ಬೆಳೆದು, ಚೂತ (ಮಾವು) ಫಲಿಸಿ, ಗೀತವು ಹರಡಿ ಆ ದೇಶದ ಸುತ್ತುಮುತ್ತಲೂ ಒಪ್ಪಿದ್ದವು. ೨೮. ಅನೇಕ ದೇವಾಲಯಗಳು, ಯಾವುದಕ್ಕೂ ಕೊರತೆಯಿಲ್ಲದ ಭೋಗ ಸಂಪತ್ತುಗಳು, ಇವುಗಳನ್ನು ನೀಡುವ ಆ ನಾಡಿಗೆ ಶಿರೋಮಣಿ ಎನಿಸಿತ್ತು ಓಷಧಿ

ಅದು ಗಿರಿರಾಜನ ರಾಜ್ಯಾ
ಸ್ಪದ ರಾಜಿತರಾಜಧಾನಿ ತಾನೆಂದೆನಿಸಿ ।
ರ್ಪುದು ಪುರಮಾ ಪುರಮಂ ಸು
ತ್ತಿದ ಬಹಿರುದ್ಯಾನಚಯಮನಾರ್ ಬಣ್ಣಿಸುವರ್ ॥ ೨೯

ಚಂ॥ ಕರಮೆಸೆವೀಳೆ ಬಾಳೆ ನವಪೂಗಚಯಂ ಪನಸಾಳಿ ಶಾಳಿ ಭಾ
ಸುರ ಸುರಹೊನ್ನೆ ಜಂಬು ಘನನಿಂಬಕುಳಂ ಬಕುಳಂ ಕವುಂಗು ತೆಂ ।
ಗುರುತರಮಾತುಳಂಗತತಿ ಚೂತಕುಜಾತಮಶೋಕೆ ಪೂಗೊಳಂ
ಕುರುವಕನತ್ತಮಾಲ ಕೃತಮಾಲ ತಮಾಲದಿನೊಪ್ಪುಗುಂ ವನಂ ॥ ೩೦

ಮ॥ ಸಿರಿತಂದಿಕ್ಕಿದಶೋಕೆ ವಾಗ್ದನಿತೆಯಿಟ್ಟಾಮ್ರಂ ಶಚೀದೇವಿಯಿ
ಟ್ಟರನೇರಿಲ್ ಮಿಗೆ ರಂಭೆಯಿಟ್ಟ ಕದಳೀಷಂಡಂ ಸುರಸ್ತ್ರೀಯರಿ ।
ಟ್ಟರವಿಂದಾಕರಮೂರ್ವಶೀವಧು ಸರಾಗಂ ತಂದ ಪೂಗದ್ರುಮಂ
ತರದಿಂದಂ ರತಿಯಿಟ್ಟ ದಾಡಿಮಕುಲಂ ಸಾರ್ವರ್ತುಕೋದ್ಯಾನದೊಳ್ ॥ ೩೧

ಚಂ॥ ಸುರುಚಿರಸಾರಪಕ್ವಫಲವಕ್ತ್ರಲಸಚ್ಛುಕಚುಂಬನಂ ಬನಂ
ಪರಮವಿರಕ್ತಸಂತತಿಗಿದೇತಱ ಮೋಹನಮೆಂಬನಂ ಬನಂ ।
ಚರಿತದೆ ಸೋಲಿಕುಂ ಶುಕಪಿಕಾಳಿಕುಲಕ್ಕತಿಜೀವನಂ ವನಂ
ಧರೆಗೆ ವಿಚಿತ್ರಭಾಸುರಮದೇಳಿಪುದಗ್ಗದ ಕಾವನಂ ವನಂ ॥ ೩೨

ಪ್ರಸ್ಥಪುರ. ೨೯. ಆ ಪುರವು ಗಿರಿರಾಜನ ರಾಜ್ಯಕ್ಕೆ ಆಶ್ರಯವಾದ ರಾಜಧಾನಿ. ಆ ಪುರದ ಹೊರಗೆ ಸುಂದರವಾದ ಉದ್ಯಾನ. ಅದನ್ನು ಯಾರು ತಾನೆ ಬಣ್ಣಿಸಲು ಸಾಧ್ಯ! ೩೦. ಪ್ರಕಾಶಿಸುವ ಈಳೆ, ಬಾಳೆ, ಅಡಕೆ, ಹಲಸು, ಗಂಧಶಾಳಿ, ಸುರಹೊನ್ನೆ, ಜಂಬುನೇರಳೆ, ನಿಂಬೆ, ಬಕುಳ, ಶ್ರೇಷ್ಠಅಡಿಕೆ, ತೆಂಗು, ಮಾತುಳಂಗ, ಮಾವು, ಅಶೋಕ, ಹೂವು ಅರಳಿದ ಕೊಳ, ಕುರುವಕ, ಹೊಂಗೆ, ಕೃತಮಾಲ ಮೊದಲಾದ ಗಿಡಮರಗಳಿಂದ ಆ ವನವು ಒಪ್ಪಿತ್ತು. ೩೧. ಅದು ಎಲ್ಲ ಋತುಗಳಿಗೂ ಹೊಂದಿ ಕೊಂಡ ಉದ್ಯಾನವನ. ಏಕೆಂದರೆ ಆ ಉದ್ಯಾನದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯೆ ಅಶೋಕೆ ನೆಟ್ಟಿದ್ದಳು, ಶಾರದೆ ಮಾವಿನಗಿಡ ನಾಟಿದ್ದಳು, ಶಚೀದೇವಿ ಅರನೇರಿಲನ್ನು, ರಂಭೆಯು ಕದಳಿಗಳನ್ನು, ಸುರಸ್ತ್ರೀಯರು ಕಮಲ ಮಡುವನ್ನು, ಊರ್ವಶಿಯು ಅಡಕೆ ಸಸಿಗಳನ್ನು, ರತಿಯು ದಾಳಿಂಬೆಯನ್ನು ನೆಟ್ಟಿದ್ದರು. ೩೨. ಆ ವನದಲ್ಲಿ ಸುರುಚಿರಸಾರವೆನಿಸುವ ಹಣ್ಣುಗಳನ್ನು ಗಿಳಿಗಳು ಕಚ್ಚಿದ್ದವು; ಪರಮವಿರಕ್ತಸಂತತಿಗೆ ಇದೆಂತಹ ಮೋಹಕವಾದ ವನ ಎನಿಸಿತ್ತು! ಶುಕ-ಪಿಕಗಳ ಕುಲಕ್ಕೆ ಅತಿ ಜೀವನಪ್ರದವಾದ ಚಾರಿತ್ರವನ್ನು ಸೋಲಿಸುತ್ತಿದೆ. ಧರೆಗೆ ವಿಚಿತ್ರವೂ, ಭಾಸುರ (ಮನೋಹರ)ವೂ ಆದ ಆ ವನವು ಕಾಮನ ವನವನ್ನು ಹೀಯಾಳಿಸುವಂತಿತ್ತು.

ವ॥ ಆ ಸಾರ್ವರ್ತುಕಮೆನಿಸಿದುದ್ಯಾನದಲ್ಲಿ,

ಉ॥ ಅಂಕುರದಿಂ ಪ್ರವಾಳಕುಲದಿಂ ನನೆಯಿಂ ಮುಗುಳಿಂ ಪ್ರಸೂನದಿಂ
ದಂ ಕಿಱುಗಾಯ್ಗಳಿಂ ತೊರೆದ ದೋರೆಗಳಿಂ ತನಿವಣ್ಣ ಪಂಕ್ತಿಯಿಂ ।
ದಂ ಕಳಕಂಠಕೂಜಿತದಿನೊಪ್ಪುವ ಪಟ್ಟದವೃಂದಗಾನದಿಂ
ದಂ ಕಡುಕೊರ್ಬಿ ಚಪ್ಪರಿಪ ರಾಜಶುಕಾಳಿಯಿನಾಮ್ರಮೊಪ್ಪುಗುಂ ॥ ೩೩

ವ॥ ಮತ್ತಂ,

ಚಂ॥ ಇದು ರತಿರಾಜಭದ್ರಗಜಮೋ ಇದು ಚೈತ್ರನ ರಾಜಧಾನಿಯೋ
ಇದು ವನಲಕ್ಷ್ಮಿಗೆತ್ತಿಸಿದ ಪೀಲಿಯ ಸತ್ತಿಗೆಯೋ ವಸಂತನಿಂ ।
ದಿದು ಶಶಿಯಳ್ತಿಯಿಂ ಸಲಪಿದರ್ವಿದ ಕೊರ್ವಿದ ಕಲ್ಪವೃಕ್ಷಮೋ
ಇದು ಧರೆಯಿಂದೆ ಮೂಡಿದ ನವಾಂಬುದಮೋ ಎನೆ ಚೂತಮೊಪ್ಪುಗುಂ ॥ ೩೪

ಮ॥ ತರದಿಂದಂಕುರಮಂ ಕುರಪ್ರಕರದಿಂದಂ ಪಲ್ಲವಂ ಪಲ್ಲವೋ
ತ್ಕರದಿಂದಂ ಕುಸುಮಂ ಲಸತ್ಕುಸುಮದಿಂ ಚಂಚತ್ಫಲಂ ತತ್ಫಲೋ ।
ತ್ಕರದಿಂ ಚಾರುಶುಕಂ ಶುಕಾವಳಿಗಳಿಂ ಭೃಂಗಾಳಿ ಭೃಂಗಾಳಿಯಿಂ
ಪರಪುಷ್ಟಂ ಪರಪುಷ್ಟಪೋತಕಕುಲಂ ಪೊಣ್ಮಿರ್ಪುದಿಮ್ಮಾವಿನೊಳ್ ॥ ೩೫

ಚಂ॥ ಸಲೆ ಸಹಕಾರದಲ್ಲಿ ಕೆಲವಂಕುರಮಂ ಕೆಲವಾಪ್ರಸೂನಮಂ
ಕೆಲವು ಫಲಂಗಳಂ ಮಿಸುಪ ಚಂಚುಗಳಿಂ ನವನಾಸಿಕಂಗಳಿಂ ।
ತೊಲಗದೆ ಜಿಹ್ವೆಯಿಂ ಕರ್ದುಕಿ ವಾಸಿಸಿ ಪೀರ್ದುಱಿ ಸೊರ್ಕುತುಂ ಕರಂ
ನಲಿಯುತೆ ಮೀಱೆ ತೊಂಡುಗೆಡೆಯುತ್ತ ಪಿಕಾಳಿ ಶುಕಾಳಿಯೊಪ್ಪುಗುಂ ॥ ೩೬

ವ॥ ಸರ್ವಋತುಗಳಲ್ಲೂ ಫಲಕೊಡುವ ಉದ್ಯಾನದಲ್ಲಿ ೩೩. ಅಂಕುರ, ಚಿಗುರು, ನನೆ, ಮುಗುಳು (ಮೊಗ್ಗೆ) ಹೂವು, ಕಿರುಗಾಯಿಗಳು, ದೋರೆಹಣ್ಣು, ಮಾಗಿದ ಹಣ್ಣು, ಮಧುರವಾದ ಕೂಜಿತದಿಂದ ಒಪ್ಪುವ ದುಂಬಿಗಾನ, ಕಡುಕೊಬ್ಬಿ ಚಪ್ಪರಿಸುವ ರಾಜಶುಕಗಳಿಂದ ಒಪ್ಪುವ ಮಾವಿನಮರಗಳು ಇವುಗಳಿಂದ ಆ ವನವು ಶೋಭಿಸಿತ್ತು. ೩೪. ಅಲ್ಲೊಂದು ಮಾವಿನಮರ; ಅದು ರತಿರಾಜ ಮನ್ಮಥನ ಭದ್ರಗಜವೊ, ಚೈತ್ರನ ರಾಜಧಾನಿಯೊ, ವನಲಕ್ಷ್ಮಿಗೆ ಎತ್ತಿಸಿದ ಪೀಲಿಯ ಛತ್ರಿಯೊ, ವಸಂತನು ಶಶಿಯ ಪ್ರೀತಿಗಾಗಿ ಸಲಹಿದ ಕಲ್ಪವೃಕ್ಷವೊ ಅಥವಾ ನೆಲದಿಂದೊಗೆದ ನವಮೇಘವೊ ಎಂಬಂತೆ ಶೋಭಿಸುತ್ತಿದೆ. ೩೫. ಆ ಇನಿದಾದ ಮಾವಿನಮರ; ಅದರಿಂದ ಮೊಳಕೆಗಳು, ಅವುಗಳಿಂದ ಚಿಗುರು, ಚಿಗುರಿನಿಂದ ಹೂವು, ಹೂವಿನಿಂದ ಪ್ರಕಾಶಿಸುವ ಫಲ, ಫಲಕ್ಕೆ ಬಂದೆರಗುವ ಗಿಳಿಗಳು, ಅವುಗಳಿಂದ ದುಂಬಿಗಳು, ಅವುಗಳಿಂದ ಕೋಗಿಲೆಗಳು, ಅವುಗಳಿಂದ ಕೋಗಿಲೆ ಮರಿಗಳು ಹೀಗೆ ಆ ಇಮ್ಮಾವಿನಲ್ಲಿ ಹುದುಗಿ ಬೆಳಗುತ್ತಿವೆ. ೩೬. ಮನೋಹರ ವಾದ ಸಹಕಾರ (ಮಾವು)ದಲ್ಲಿ ಕೆಲವು ಅಂಕುರಗಳನ್ನು ಕೆಲವು ಹೂವುಗಳನ್ನು ಕೆಲವು ಫಲಗಳನ್ನು ತಮ್ಮ ಚೂಪಾದ ಕೊಕ್ಕುಗಳಿಂದ, ಮೂಗುಗಳಿಂದ, ಜಿಹ್ವೆ (ನಾಲಗೆ)ಗಳಿಂದ ಕ್ರಮವಾಗಿ ಕುಕ್ಕಿ, ಮೂಸಿನೋಡಿ, ಹೀರಿ, ಸೊಕ್ಕಿರುವ

ಕಂ।। ಕಾವಂಗೆಂದು ವಸಂತಂ
ಭಾವಿಸಿ ಸಮೆದಿಟ್ಟ ನೀಲದರಮನೆಯೆನಿಕುಂ ।
ಮಾವಿನ ಹೂವಿನ ಕಾವಿನ
ಠಾವಿನ ಮೊದಲಿಂದೆ ತೀವಿದಳಿಗಳ ಬಳಗಂ ।। ೩೭

ಬರಿಯಲ್ ಪೊಂಗಿದ ಪಣ್ಗಳ
ಸಿರೆಯಱೆದಲ್ಲಿರಿಸಿ ಚಂಚುಪುಟದಿಂ ಸವಿಯಂ ।
ಬರೆತೆಗೆದು ತಣಿವು ತವಕಮ
ನರಳ್ಚುತ್ತಿರೆ ಮೆಱೆದುದಾಮ್ರದೊಳ್ ಶುಕನಿಕರಂ ।। ೩೮

ಬಿಗಿಯಪ್ಪಿ ಮೊಗಮನಿಟ್ಟಾ
ಲಿಗಳವು ನಸುಮುಚ್ಚಿ ಪಕ್ಷಯುಗಮೆಳಲೆ ರಸಂ ।
ದೆಗೆವ ದನಿ ನಿಮಿರೆ ನಾಲಗೆ
ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ ।। ೩೯

ಎಳಸಿ ನೆಗೆತಂದು ಮಿಕ್ಕ
ಗ್ಗಳಿಸುತಮಿರ್ದಂತಿರಪ್ಪೆ ಮಧುರಸಸಂ ವೆ ।
ಗ್ಗಳಿಸೆ ಲವಲವಿಸುತುಂ ಪ
ಣ್ಗಳೊಳಳ್ದುದೊಂದು ರಾಜಶುಕನತಿಭರದಿಂ ।। ೪೦

ವ।। ಮತ್ತಮಲ್ಲದೆ

ಕಂ।। ಅರಳಿಲೆ ಮೇಲಾಡುತ್ತಿರೆ
ಭರದಿಂ ಮಾಂಗಾಯ್ಗಳೊಲೆಯೆ ಕೆಲಬಲದೊಳ್ ನಿಂ ।
ದರಗಿಳಿಯ ತೊದಳ್ನುಡಿ ಬಿ
ತ್ತರಿಸೆ ವಸಂತನ ಕುಮಾರನೆನಿಸಿತ್ತಾಮ್ರಂ ।। ೪೧

ಕೋಗಿಲೆ ಮತ್ತು ಗಿಳಿಗಳು ಕಲರವ ಮಾಡುತ್ತಿದ್ದವು. ೩೭. ಆ ಮಾವಿನ ಮರವು ವಸಂತನು ಕಾಮನಿಗೋಸ್ಕರ ಮಾಡಿಸಿದ ನೀಲದ ಅರಮನೆ ಎಂಬಂತೆ ಇತ್ತು. ಆ ಮಾವಿನ ಹೂವಿನ, ಕಾವಿನ, ಠಾವಿನ ನೆಲೆಗಳಲ್ಲಿ ದುಂಬಿಗಳ ಬಳಗವು ಮೊರೆಯುತ್ತಿತ್ತು. ೩೮. ಮಾವಿನಮರದಲ್ಲಿ ಮಾಗಿದ ಹಣ್ಣುಗಳು ಬಿರಿದಿವೆ. ಅವುಗಳ ನರವನ್ನು ಗುರ್ತಿಸಿ, ಚಂಚುಪುಟವನ್ನು ಅದಕ್ಕೆ ಚುಚ್ಚಿ, ಹಣ್ಣಿನ ಸವಿಯನ್ನು ಬರಸೆಳೆದು ಗಿಳಿಗಳು ತಣಿದು ನಲಿಯುತ್ತಿವೆ. ೩೯. ಅಲ್ಲಿ ಒಂದು ಗಿಳಿ; ಅದು ಒಂದು ತನಿ ಹಣ್ಣನ್ನು ಬಿಗಿದಪ್ಪಿ, ಮುಖವನ್ನಿಟ್ಟು, ಕಣ್ಣುಗಳನ್ನು ನಸುಮುಚ್ಚಿ, ರೆಪ್ಪೆಗಳು ಸ್ತಬ್ಧವಾಗಿ, ರಸವನ್ನು ಹೀರುವ ದನಿ ನಿಮಿರಲು, ನಾಲಗೆ ಚಪ್ಪರಿಸುತ್ತಾ ಸವಿಯುತ್ತಿದೆ. ೪೦. ಅಲ್ಲೊಂದು ರಾಜ ಶುಕವು ರುಚಿಬಯಸಿ, ನೆಗೆದು ಬಂದು ಅತಿಶಯವಾಗಿ ಇದ್ದಂತೆಯೇ ಹಣ್ಣನ್ನು ಅಪ್ಪಿಕೊಳ್ಳಲು ಅದರಿಂದ ಮಧುರರಸವು ವೆಗ್ಗಳಿ (ಚಿಮ್ಮಿ)ಸಿತು. ಆಗ ಅದು ಅತ್ಯಾಶೆಯಿಂದ ಹಣ್ಣುಗಳಲ್ಲಿಯೇ ಮಗ್ನವಾಯಿತು. ವ।। ಅಲ್ಲದೆ, ೪೧. ಅರಳಿಲೆ ಮೇಲೆ ಆಡುತ್ತಿವೆ, ಮಾಂಗಾಯ್ಗಳು ಕೆಲಬಲಗಳಲ್ಲಿ ತೊನೆಯುತ್ತಿವೆ. ಅರಗಿಳಿಗಳ ತೊದಲ್ನುಡಿಗಳು ಬಿತ್ತರಿಸುತ್ತಿವೆ. ಇವೆಲ್ಲವುಗಳಿಂದ ಮಾವಿನಮರವು ವಸಂತನ ಕುಮಾರನಂತೆ

ಅಂತಂತೆ ನಲಿದು ನಾಲಗೆ
ತೀಂತೆ ಮಿಗಲ್ ಕಳಿಕೆಗೆಳಸಿ ಚಂಚುವನಿಟ್ಟೋ ।
ರಂತೆ ಸವಿ ಸವಿದು ಸೊರ್ಕಿ ನಿ
ರಂತಂ ಕರೆದತ್ತು ಮಾವಿನೊಳ್ ಪರಪುಟ್ಟಂ ॥ ೪೨

ಅಳಿ ಗಿಳಿ ಪಿಕಕುಲರವದಿಂ
ನೆಳಲಿಂ ರೂಪಿಂ ಫಲಂಗಳಿಂ ಪೂವಿಂದಂ ।
ಬಳಸಿ ತಣಿಪುವುದು ಪೊಸಮಾ
ವೆಳಸಿದ ಪಾಂಥಪ್ರತಾನ ಪಂಚೇಂದ್ರಿಯಮಂ ॥ ೪೩

ತಿಳಿನೀರಿಂ ತಾವರೆಯಿಂ
ಕಳಹಂಸೆಯಿನೆಸೆವುದಲ್ಲಿ ಸರಸೀಷಂಡಂ ।
ತಳಿರಿಂ ನನೆಯಿಂ ಪೂವಿಂ
ಫಳಂಗಳಿಂದೆಸೆವುದಲ್ಲಿ ಚೂತಕುಜಾತಂ ॥ ೪೪

ಪಿಕಕುಲದ ಸೊರ್ಕು ಮಧುಕರ
ನಿಕರದ ಮದವರಗಿಳಿಗಳ ಗರ್ವಂ ನವಚೂ ।
ತಕುಜಂ ಮಲ್ಲಿಗೆ ದಾಡಿಮ
ನಿಕಾಯಮಂಕುರದೆ ಪುಷ್ಪದಿಂ ಫಲದಿಂದಂ ॥ ೪೫

ವ॥ ಮತ್ತಮಲ್ಲದೆಯುಂ,

ಕಂ॥ ಬೇರಿಂದಂ ನೀರುಂಡಾ
ಬೇರಿಂದಗ್ರಂಬರಂ ಫಲಂಗಳನೀವೆಂ ।
ಧಾರಿಣಿಗೆಂಬಂತಿರೆ ಫಲ
ಪೂರಿತ ಪನಸದ್ರುಮಂಗಳೆಸೆದುವು ಬನದೊಳ್ ॥ ೪೬

ಇತ್ತು. ೪೨. ಅಲ್ಲೊಂದು ಕೋಗಿಲೆ, ಅದು ಹಾಗೆಯೇ ನಲಿದು, ನಾಲಗೆಯ ತೀಟೆಗೆ ಮಾವಿನ ಚಿಗುರಿಗೆ ಆಸೆಪಟ್ಟು, ತನ್ನ ಚಂಚುವನ್ನಿಟ್ಟು, ರಸವನ್ನು ಚೆನ್ನಾಗಿ ಸವಿದು, ಸೊಕ್ಕಿ, ಒಂದೇ ಸಮನೆ ಕೂಗುತ್ತಿತ್ತು. ೪೩. ಅಲ್ಲಿರುವ ಪೊಸ ಮಾವಿನಮರಗಳು ದಾರಿಗರ ಪಂಚೇಂದ್ರಿಯಗಳನ್ನು (ಕ್ರಮವಾಗಿ ಕಿವಿ-ಮೈ-ಕಣ್ಣು ನಾಲಗೆ-ಮೂಗು) ದುಂಬಿ-ಗಿಳಿ-ಕೋಗಿಲೆಗಳ ಮಧುರ ಧ್ವನಿಯಿಂದಲೂ, ನೆಳಲಿನಿಂದಲೂ, ರೂಪಿನಿಂದಲೂ, ಹಣ್ಣುಗಳಿಂದಲೂ, ಹೂವುಗಳಿಂದಲೂ, ತಣಿಸುತ್ತಿತ್ತು. ೪೪. ಅಲ್ಲಿಯ ತಾವರೆ ಕೊಳಗಳು ತಿಳಿನೀರಿನಿಂದಲೂ, ತಾವರೆಯಿಂದಲೂ, ಕಳಹಂಸೆಗಳಿಂದಲೂ ಪ್ರಕಾಶಿಸುತ್ತಿವೆ. ಮಾವಿನ ಮರಗಳು ತಳಿರಿನಿಂದಲೂ, ನನೆಯಿಂದಲೂ, ಹೂವಿನಿಂದಲೂ ಫಲಗಳಿಂದಲೂ ಬೆಳಗುತ್ತಿವೆ. ೪೫. ಕೋಗಿಲೆಗಳ ಸೊಕ್ಕು, ದುಂಬಿಗಳ ಪದ, ಅರಗಿಳಿಗಳ ಗರ್ವಗಳು ಪೊಸಮಾವಿನಮರ, ಮಲ್ಲಿಗೆ, ದಾಳಿಂಬೆಗಳ ಚಿಗುರು-ಫಲಗಳಿಂದ ಉದ್ಯಾನವು ಶೋಭಿಸುತ್ತಿತ್ತು. ವ॥ ಅದೂ ಅಲ್ಲದೆ, ೪೬. ಬೇರಿನಿಂದ ನೀರನ್ನು ಹೀರಿದ ಹಲಸಿನ ಮರಗಳು ಬೇರಿನಿಂದ ತುದಿಯವರೆಗೆ ಫಲಗಳನ್ನು ಧಾರುಣಿಗೆ ಕೊಡುವೆವು ಎನ್ನುತ್ತಿವೆಯೊ ಎಂಬಂತೆ ಹಣ್ಣು ಬಿಟ್ಟಿವೆ. ಇಂಥ ಹಲಸಿನ

ನೀರೆಱಿದುಪಕಾರಕ್ಕೆಳ
ನೀರಂ ರುಚಿವೆರಸು ತೀವಿ ವನಪಾಲಕರಂ ।
ಪಾರುತ್ತಿರ್ಪಂತಿರ್ಪುವು
ನಾರಾಯ ಫಲಾಳಿನಾಳಿಕೇರಂ ಬನದೊಳ್ ॥ ೪೭

ವನಲಕ್ಷ್ಮಿಗೆ ಸಕಲವಿಲಾ
ಸಿನಿಯರ್ ಬಳೆದೋಳ್ಗಳಿಂದೆ ಚಾಮರಮಿಕ್ಕಲ್ ।
ತನತನಗೆ ನಿಂದರೆನೆ ತದ್
ವನದೊಳ್ ಪೊಂಬಾಳೆಯಿಂದೆ ಪೂಗಮದೆಸೆಗುಂ ॥ ೪೮

ಕುಸುಮಶರಂಗೆ ವಸಂತಂ
ಪೊಸ ಪೊಂಗಳಸಂಗಳಲ್ಲಿ ಸೌರಭ್ಯ ಸುಧಾ ।
ರಸಮಂ ತೀವಿರಿಸಿದವೋ
ಲೆಸೆವುವು ಫಳಭಾರಮಾತುಳಂಗವ್ರಾತಂ ॥ ೪೯

ಕಂ॥ ಬಾಗುತೆ ಬಲಿಯುತೆ ಪೊಳೆದಿನಿ
ದಾಗುತೆ ದಳವೇಱಿತಿದಿಡಿದು ಹಿಗ್ಗುತೆ ಪ ।
ಣ್ಣಾಗುತೆ ಕಾಯ್ಗಳ್ ಪೊಱಮಡೆ
ಬೀಗುತ್ತುಂ ಬೆಳೆದುವಲ್ಲಿಂ ಕದಳೀಷಂಡಂ ॥ ೫೦

ವ॥ ಅಂತುಮಲ್ಲದೆಯುಂ,

ಕಂ॥ ಅಳಿಗಳ ಗಿಳಿಗಳ ಕೋಗಿಲೆ
ಗಳ ಕಳಹಂಸೆಗಳ ಪಾರಿವಂಗಳ ಕೋಕಂ ।
ಗಳ ಪುರುಳಿಗಳ ನವಿಲ್ಗಳ
ಕೊಳರ್ವಕ್ಕಿಗಳೆಸೆವ ಮನದ ಬನದಂ ವನದೊಳ್ ॥ ೫೧

ಮರಗಳಿಂದ ಉದ್ಯಾನವು ಬೆಳಗುತ್ತಿದೆ. ೪೭. ಅಲ್ಲಿಯ ತೆಂಗಿನಮರಗಳು; ಅವು ತಮಗೆ ನೀರೆರೆದ ಉಪಕಾರಕ್ಕಾಗಿ ರುಚಿಯಾದ ಎಳನೀರನ್ನು ತುಂಬಿ ವನಪಾಲಕರನ್ನು ನೋಡುತ್ತಿವೆಯೊ ಎಂಬಂತೆ ಇರುವ ಒಳ್ಳೆಯ ನಾರಿಕೇಳವೃಕ್ಷಗಳು ಆ ವನದಲ್ಲಿದ್ದವು. ೪೮. ಅಲ್ಲಿರುವ ಅಡಕೆ ಮರಗಳು; ಅವು ವನಲಕ್ಷ್ಮಿಗೆ ಸಕಲವಿಲಾಸಿನಿಯರೂ ತಮ್ಮ ಬಳೆತೋಳುಗಳಿಂದ ಚಾಮರವನ್ನು ಹಾಕುವುದಕ್ಕಾಗಿ ತನತನಗೆ ಎಂದು ಬಂದು ನಿಂದಿರುವರೊ ಎಂಬಂತೆ ಹೊಂಬಾಳೆಯಿಂದ ಶೋಭಿಸುತ್ತಿವೆ. ಇಂಥ ಅಡಕೆಮರಗಳು ಆ ವನದಲ್ಲಿ ಪ್ರಕಾಶಿಸುತ್ತಿದ್ದವು. ೪೯. ಫಲಭಾರದಿಂದ ಬೆಳಗುವ ಮಾತುಲುಂಗ ವೃಕ್ಷಗಳು; ಅವು, ಹೂಬಾಣನಾದ ಮನ್ಮಥನಿಗೆ ವಸಂತನು ಹೊಸ ಹೊನ್ನ ಕಲಶಗಳಲ್ಲಿ ಸುವಾಸನೆಯುಳ್ಳ ಸುಧೆಯನ್ನು ತುಂಬಿ ಇರಿಸಿರುವನೋ ಎಂಬಂತಿವೆ. ೫೦. ಅಲ್ಲಿಯ ಬಾಳೆಯ ಮರಗಳು; ಅವು ಬಾಗಿ, ಬಲಿತು, ಹೊಳೆದು, ಮಾಗಿ, ಹೂವಿನ ಎಸಳೇರಿ, ಕಿಕ್ಕಿರಿದು, ಹಿಗ್ಗಿ, ಹಣ್ಣಾಗಿ, ಕಾಯಿಗಳು ಹೊರಬೀಳುತ್ತಿರಲು ಅಲ್ಲಿ ಬೀಗಿ ಬೆಳೆದಿವೆ. ವ॥ ಅದೂ ಅಲ್ಲದೆ ೫೧. ದುಂಬಿಗಳು, ಗಿಳಿಗಳು, ಕೋಗಿಲೆಗಳು, ಕಲಹಂಸೆಗಳು, ಪಾರಿವಾಳಗಳು, ಚಕ್ರವಾಕ ಪಕ್ಷಿಗಳು, ಪುರುಳಿಗಳು, ನವಿಲುಗಳು ಹಾಗೂ ನೀರು

ನಲಿದು ಕೊರಲೆತ್ತಿ ಕುಕಿಲಿಜೆ
ದುಲಿದುಂ ಸುಳಿದೆಳಸಿ ಬಳಸಿ ಬಳಿಸಂದು ಪಳಂ ।
ಚಲಿದೊಲೆದು ಪಕ್ಮಮಂ ಬ
ರ್ಚ ಲಲ್ಲೆಗೆಯ್ದತ್ತು ಪಾರಿವಂ ಪಾರಿವದೊಳ್ ॥ ೫೨

ಚಾರುತರಂ ನಿರ್ಮಲಜಲ
ಪೂರಂ ಸೌರಭ್ಯಮುದಿತಮದಮಧುಕರರ್ಮೋಂ ।
ಕಾರಂ ಹಂಸಕುಲ ಕ್ರೇಂ
ಕಾರಂ ರಾಜೀವಭರಿತ ನವಕಾಸಾರಂ ॥ ೫೩

ವ॥ ಅಂತುಮಲ್ಲದೆಯುಂ

ಚಂ॥ ಸುರರ ನಿವಾಸದಂತನಿಮಿಷಪ್ರಕರಂ ನಭದಂತಿರಬ್ಜಬಂ
ಧುರ ಮಧುಮಾಸದಂತೆ ಸಿತಪಕ್ಷಯುತಂ ರಥದಂತೆ ಚಕ್ರವಿ ।
ಸ್ತರಮುರುಪದ್ಮಜಾಂಡದವೊಲಾತ್ತರಸದ್ಭುವನಾಶ್ರಯಂ ಧನು
ರ್ಧರರ ಕಳಾಪದಂತೆ ರಮಣೀಯ ಶಿಳೀಮುಖಸಂಕುಳಂ ॥ ೫೪

ಹಕ್ಕಿಗಳು ಇವುಗಳಿಂದ ಆ ವನವು ಮನೋಹರವಾಗಿತ್ತು. ೫೨. ಆ ವನದಲ್ಲಿಯ ಪಾರಿವಾಳಗಳು; ಅವು ಒಂದನ್ನೊಂದು ಕಂಡು, ನಲಿದು, ಕೊರಲೆತ್ತಿ, ಕುಕಿಲಿಜೆದು, ಉಲಿದು, ಸುಳಿದು, ಎಳಸಿ, ಬಳಸಿ, ಹತ್ತಿರಕ್ಕೆ ಬಂದು, ಮೈಮೇಲೆ ಹಾಯ್ದು, ರೆಕ್ಕೆಯನ್ನು ಬಿಚ್ಚಿ, ಅನುನಯ ಮಾಡುತ್ತಿದ್ದವು. ೫೩. ಅಲ್ಲಿಯ ಕೊಳಗಳು; ಅವು ಮನೋಹರವಾದ ನಿರ್ಮಲವಾದ ಜಲಪೂರ, ಸೌರಭದಿಂದ ಹರ್ಷಗೊಂಡ ಮದಿಸಿದ ದುಂಬಿಗಳ ಝೇಂಕಾರ, ಹಂಸಗಳ ಕ್ರೇಂಕಾರ ಮತ್ತು ತಾವರೆಗಳಿಂದ ಅಲಂಕೃತವಾಗಿವೆ. ವ॥ ಅದೂ ಅಲ್ಲದೆ-೫೪. ಅಲ್ಲಿಯ ಕೊಳಗಳು, ಅವು ಸುರರ ನಿವಾಸ(ದೇವಲೋಕ)ದಂತೆ ಅನಿಮಿಷಪ್ರಕರ ಎಂದರೆ ದೇವಲೋಕವು ಬಿಡುಗಣ್ಣರಿಂದ ಕೂಡಿರುವಂತೆ ಕೊಳಗಳು ಮೀನು (ಅನಿಮಿಷ) ಗಳಿಂದ ತುಂಬಿವೆ. ನಭದಂತೆ ಅಬ್ಜಬಂಧುರ-ನಭವು ಅಬ್ಜ (ಕಮಲಜನಾದ ಬ್ರಹ್ಮ)ನಿಂದ ಮನೋಹರ; ಕೊಳವು ಅಬ್ಜ-ಕಮಲಗಳಿಂದ ಸುಂದರ; ಮಧುಮಾಸ (ವಸಂತವು) ಸಿತಪಕ್ಷ-ಶುಕ್ಲಪಕ್ಷದಿಂದ ಕೂಡಿದೆ; ಕೊಳವು ಬಿಳಿಯ ರೆಕ್ಕೆಯ ಹಂಸಗಳಿಂದ ಕೂಡಿದೆ. ರಥದಂತೆ ಚಕ್ರವಿಸ್ತರ ಎಂದರೆ ರಥವು ಚಕ್ರಗಳಿಂದ ಕೂಡಿರುವಂತೆ ಕೊಳವು ಚಕ್ರವಾಕಪಕ್ಷಿಗಳಿಂದ ವಿಸ್ತೃತವಾಗಿದೆ. ಪದ್ಮಜಾಂಡ (ಬ್ರಹ್ಮಾಂಡ)ವು ಭುವನ (ಲೋಕ)ಗಳಿಗೆ ಆಶ್ರಯ, ಕೊಳವು ಭುವನ (ನೀರು)ಕ್ಕೆ ಆಶ್ರಯವಾಗಿದೆ. ಧನುರ್ಧರರ ಕಳಾಪವು ರಮಣೀಯ ಶಿಳೀಮುಖ (ಬಾಣ) ಗಳಿಂದ ಕೂಡಿದೆ, ಕೊಳವು ಶಿಳೀಮುಖ (ದುಂಬಿ)ಗಳಿಂದ ಕೂಡಿ

ಕಂ॥ ನಳಿನದ ಕರ್ಣಿಕೆಯೊತ್ತಿನೊ
ಳಳವಡೆ ಕಣ್ಮುಚ್ಚಿ ಮಗ್ಗುಲಿಕ್ಕಿಯಜಸ್ರಂ
ತಳರದೆ ನಿದ್ರಾಸುಖದಿಂ
ಕಳಹಂಸೆಯ ಮರಿಗಳಿರ್ಪುವಂತಾ ಕೊಳನೊಳ್ ॥ ೫೫

ವ॥ ಇಂತೊಪ್ಪುವ ಸರೋವರದೊಳೊಂದು ಕಳಹಂಸಂ ಕಾಂತೆಯನಗಲ್ದು

ಕಂ॥ ಅತಿಭರದಿಂ ನವಕುವಲಯ
ತತಿಯೊಳ್ ಕಾಸಾರದೊಳ್ ಕುಶೇಶಯಚಯದೊಳ್ ।
ಲತೆವನೆಯೊಳ್ ವನದೊಳ್ ಪುಳಿ
ನತಳದೊಳಱಸಿದುದು ಕಾಂತೆಯಂ ಕಳಹಂಸಂ ॥ ೫೬

ಪುಳಿನಮನಡಿಗಡಿಗೇಱುತೆ
ಕೊಳನೊಳಗಡಿಗಡಿಗೆ ಪೊಕ್ಕು ಪೊಱಮಡುತೆ ಲತಾ ।
ವಳಿಗಳೊಳಡಿಗಡಿಗಾಲಿಸು
ತಳವಳದಡಿಗಡಿಗೆ ಬಳಲುತಿರ್ದುದು ಹಂಸಂ ॥ ೫೭

ಬಱೆದೆ ಗಳಗಳನೆ ನಡೆವುದು
ಪೊಱಸಾರ್ವುದು ಬೆರ್ಚುವುದು ಬಳಲ್ವುದು ಮತ್ತೆ ।
ಳ್ಚಱೊಳಿರ್ಪುದು ಕಣ್ಗಳನರೆ
ದೆಱೆವುದು ನೆನೆನೆನೆದು ಕಾಂತೆಯಂ ಕಳಹಂಸಂ ॥ ೫೮

ಇರೆ ಸಿರಿ ಬರ್ಪಂದದೆ ಸುಂ
ದರಿ ಬರೆ ಪರಿತಂದು ಚಂಚುಗೂಡುತೆ ಪಕ್ಷಾಂ ।
ತರದೊಳ್ ಮುಸುಂಕಿ ಬಿಬ್ಬರ
ಬರಿವಂತಪ್ಪಿದುದು ದೇಹಮೊಂದೆಂಬನೆಗಂ ॥ ೫೯

ರಮ್ಯವಾಗಿದೆ. ೫೫. ಆ ಕೊಳದಲ್ಲಿಯ ತಾವರೆಗಳು, ಅವುಗಳ ಕರ್ಣಿಕೆಯ ಮಗ್ಗುಲಲ್ಲಿ ಮಲಗಿ, ಕಣ್ಮುಚ್ಚಿ, ಮಗ್ಗುಲಿಕ್ಕಿ, ಯಾವಾಗಲೂ ಕದಲದೆ ನಿದ್ರಾಸುಖದಲ್ಲಿವೆ, ಕಳಹಂಸೆಯ ಮರಿಗಳು. ವ॥ ಹೀಗಿರುವ ಆ ಸರೋವರದಲ್ಲಿಯ ಒಂದು ಹಂಸವು ತನ್ನ ಕಾಂತೆಯನ್ನಗಲಿ-೫೬. ಹೀಗೆ ಅಗಲಿದ ಹಂಸವು ಅತಿ ಭರದಿಂದ ನೂತನ ನೈದಿಲೆಯ ಗುಂಪಿನಲ್ಲಿ, ಕೊಳದಲ್ಲಿ, ಕಮಲಗಳ ತಂಡದಲ್ಲಿ, ಬಳ್ಳಿಪೊದೆಯಲ್ಲಿ, ವನದಲ್ಲಿ, ಮರಳುದಿಣ್ಣೆಗಳಲ್ಲಿ ತನ್ನ ಕಾಂತೆಯನ್ನು ಹುಡುಕುತ್ತಿತ್ತು. ೫೭. ಮರಳು ದಿಬ್ಬಗಳನ್ನು ಮತ್ತೆ ಮತ್ತೆ ಏರುತ್ತಾ, ಕೊಳದಲ್ಲಿ ಮತ್ತೆ ಮತ್ತೆ ಹೊಕ್ಕು; ಹೊರಬಂದು, ಪೊದೆಗಳಲ್ಲಿ ಪುನಃ ಪುನಃ ಅಲಿಸುತ್ತಾ, ಸುಸ್ತಾಗಿ ಮತ್ತೆ ಮತ್ತೆ ಬಳಲುತ್ತಿತ್ತು, ಆ ಅಗಲಿದ ಹಂಸ. ೫೮. ಸುಮ್ಮನೆ ಗಳಗಳ ನಡೆಯುವುದು, ಹೊರಕ್ಕೆ ಹೋಗಿ ನೋಡುವುದು, ಬೆಚ್ಚುವುದು, ಬಳಲುವುದು, ಮತ್ತೆ ಎಚ್ಚರಿಕೆಯಿಂದಿರುವುದು, ಕಣ್ಣುಗಳನ್ನು ಅರ್ಧ ತೆಗೆದು ಕಾಂತೆಯನ್ನು ನೆನೆನೆನೆದು ನಿಡುಸುಯ್ಯುತ್ತಿತ್ತು. ೫೯. ಇದ್ದಕ್ಕಿದ್ದ ಹಾಗೆಯೇ ಆ ಕಾಂತೆ ಬಂದುದು ಆ ಹಂಸಕ್ಕೆ ಸಿರಿಬಂದಂತಾಯಿತು. ಕೂಡಲೆ ಅದು ಓಡಿ ಬಂದು ಅದರ ಕೊಕ್ಕಿಗೆ ತನ್ನ ಕೊಕ್ಕು ಕೂಡಿಸಿ, ತನ್ನ ರೆಕ್ಕೆಯನ್ನು ಅಗಲಿಸಿ ಅದರಲ್ಲಿ ಅದನ್ನು

ವ॥ ಮತ್ತಮೊಂದೆಡೆಯೊಳ್

ಉ॥ ಕಾಮನ ಬಾಣದಿರ್ಕೆವನೆಯೋ ಭ್ರಮರಾಳಿಯ ಸತ್ರಸಾಲೆಯೋ
ಭೂಮಿಯದೊಂದು ಗಂಧಗುಣಮಿರ್ಪೆಡೆಯೋ ಏಲಸತ್ ಸದಾಗತಿ ।
ಪ್ರೇಮದೆ ಸೌರಭಂದಳೆದ ತಾಣಮೋ ಪೇಳಿಮಿದೆಂದು ಕಂಡವರ್
ಕಾಮಿಸೆ ಮಾಲೆಗಾಱರೊಸೆದೋವಿದ ಪೂವಿನ ತೋಂಟಮೊಪ್ಪುಗುಂ ॥ ೬೦

ಚಂ॥ ಸುರಗಿಯ ಕಂಪು ಸಂಪಗೆಯ ಕಂಪದಿರ್ಗಂತಿಯ ಸೊರ್ಕುಗಂಪು ಪಾ
ದರಿಯಲರ್ಗಂಪು ಪಡ್ಡಳಿಯ ಕಂಪಿರವಂತಿಯ ಕಂಪು ಮೊಲ್ಲೆಯೊಂ ।
ದುರವಣೆಗಂಪು ಮಲ್ಲಿಗೆಯ ಕಂಪು ಸರೋಜದ ಕಂಪು ನೀಲನೀ
ರರುಹದ ಕಂಪು ಕೇತಕಿಯ ಕಂಪೆಸೆಗುಂ ಸಲೆ ಪುಷ್ಪವಾಟಿಯೊಳ್ ॥ ೬೧

ಕಂ॥ ಆ ನವಗಂಧಕ್ಕೆಳಸಿಯ
ನೂನಂ ಮಧುಕರನಿಕಾಯಮೊಲ್ದನವರತಂ ।
ನಾನಾ ಮಂಜುಳನಿನದದೊ
ಳಾನಂದಂ ಮಿಕ್ಕು ಕಂಪನೀಂಟುತ್ತಿರ್ಕುಂ ॥ ೬೨

ಬಿಗಿಯಪ್ಪಿ ಪುಷ್ಪರಸಮಂ
ತೆಗೆದೀಂಟಿ ತುಳುಂಕಿ ತೂಳಿ ತೇಂಕಾಡಿ ಮನಂ ।
ಮಿಗೆ ಸೊರ್ಕ ಜಿನುಗಿ ಜೀವಿಸಿ
ಮಗಮಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ॥ ೬೩

ವ॥ ಅಂತುಮಲ್ಲದೆಯುಂ

ಆಲಿಂಗಿಸಿ, ಎರಡೂ ಒಂದೇ ದೇಹವೆಂಬಂತೆ ಅವುಕಿಕೊಂಡಿತು. ವ॥ ಮತ್ತೊಂದು ಕಡೆ, ೬೦. ಅಲ್ಲೊಂದು ಹೂವಿನ ತೋಟ. ಅದು ಕಾಮನ ಬಾಣದ ಬತ್ತಳಿಕೆಯೋ, ದುಂಬಿಗಳ ಸತ್ರವೋ, ನೆಲದ ಗಂಧಗುಣವುಳ್ಳ ಸ್ಥಳವೋ, ಗಾಳಿಯು ಪ್ರೇಮದಿಂದ ಸೌರಭವನ್ನು ತಳೆದ ತಾಣವೋ ಎಂಬಂತೆ ಇತ್ತು. ಕಂಡವರು ಆಸೆಪಡುವಂತಹ, ಹೂವಾಡಿಗರು ಬೆಳೆಸಿದ ತೋಟ ಅದು. ೬೧. ಆ ಪುಷ್ಪವಾಟಿಕೆಯಲ್ಲಿ ಎಲ್ಲೆಲ್ಲಿಯೂ ಸುರಗಿಯ ಸುವಾಸನೆ, ಸಂಪಿಗೆಯ ಕಂಪು, ಅದಿರ್ಮುತ್ತಿಯ ಕಟುಸುವಾಸನೆ, ಪಾದರಿಯ ಹೂಗಳ ಕಂಪು, ಪಡ್ಡಳಿ ಹೂವಿನ ಸುವಾಸನೆ, ಇರವಂತಿ, ಮೊಲ್ಲೆ, ಮಲ್ಲಿಗೆ, ಸರೋಜ, ಕನ್ನೈದಿಲೆ ಮತ್ತು ಕೇದಿಗೆಗಳ ಸುವಾಸನೆ ಹಬ್ಬಿತ್ತು. ೬೨. ಆ ನೂತನ ಸುವಾಸನೆಗೆ ಆಸೆಮಾಡಿ ಬಂದ ದುಂಬಿಗಳು ಯಾವಾಗಲೂ ಮಂಜುಳನಿನಾದಮಾಡುತ್ತ ಆನಂದದಿಂದ ಕಂಪನ್ನು ಹೀರುತ್ತಿದ್ದವು. ೬೩. ಅವುಗಳಲ್ಲಿ ಒಂದು ಮಧುಕರ (ದುಂಬಿ), ಅದು ಪುಷ್ಪರಸವನ್ನು ಬಿಗಿಯಪ್ಪಿ, ತೆಗೆದೀಂಟಿ, ತುಳುಂಕಿ, ತೂರಿ ತೇಂಕಾಡಿ, ಸೊಕ್ಕಿ ಜಿನುಗಿ, ಜೀವಿಸಿ, ಮಲ್ಲಿಗೆಯೆಲ್ಲಿ ಮಗಮಗಿಸಿ ಮನೋಮಗ್ನವಾಗಿತ್ತು. ವ॥ ಅದೂ ಅಲ್ಲದೆ-

ಕಂ॥ ಧೃತಕಂಟಕಮಾದೊಡಮು
ನ್ನತಿಯಂ ಕೇತಕಿಯೊಳೆಅಗಿದುದು ಮಧುಕರನಿಂ ।
ತತಿರೂಕ್ಷರಾದೊಡಂ ಸ್ನೇ
ಹಿತರಂ ಕಾಯಲ್ಕೆ ಬರ್ಪುದೇ ಧಾರಿಣಿಯೊಳ್ ॥ ೬೪

ವ॥ ಅದಲ್ಲದೆಯುಂ

ಕಂ॥ ಭದ್ರಮೆನಿಸಿರ್ದ ಕುಸುಮಲ
ಸದ್ರಸಮಂ ಪೀರ್ವ ಪದದೊಳೊಪ್ಪಿತು ಮದನಂ ।
ಮುದ್ರಿಸಿದಂಬಿನ ಲಾಕ್ಷಾ
ಮುದ್ರೆಯಿದೆಂಬಂತೆ ತೀವಿದಳಿನಿಕುರುಂಬಂ ॥ ೬೫

ವ॥ ಅದಲ್ಲದೆಯುಂ

ಕಂ॥ ನನೆಯಂ ಮುಂಡಾಡುತೆ ಬಲ್
ನನೆಯಂ ಬಲವಂದು ಮುಗುಳನಾಲಿಂಗಿಸಿ ಕಂ ।
ಪಿನ ಬರಿಮುಗುಳಂ ಚುಂಬಿಸಿ
ಯನುನಯದಿಂದಲರನಲೆದು ತೀವಿದುವಳಿಗಳ್ ॥ ೬೬

ಅಂಡಲೆದು ಜಾದಿಯಂ ಬಂ
ಡುಂಡಳಮುಂ ಮಿಕ್ಕು ಮಧುಕರಂಗಳ್ ಭರದಿಂ ।
ಬಂಡುಣ್ಬೆನೆ ಸುಗಂಧಮ
ಖಂಡಿತಮತಿನುತ ರಸೋದಯಂ ಮಾಳತಿಯಾ ॥ ೬೭

ವ॥ ಅಂತುಮಲ್ಲದೆಯುಂ

೬೪. ಕೇದಗೆ ಎಲ್ಲರಿಗೂ ತಿಳಿದಂತೆ ಧೃತಕಂಟಕ ಎಂದರೆ ಮುಳ್ಳುಳ್ಳದ್ದು, ಹೀಗೆ ಎಷ್ಟೇ ಕಂಟಕಗಳಿದ್ದರೂ ಮಧುಕರನಿಕರವು ಕೇತಕಿಗೆ ಎರಗಿತು; ಹೀಗೆ ಜಗತ್ತಿನಲ್ಲಿ ಸ್ನೇಹಿತರು ಎಷ್ಟೇ ಕ್ರೂರಿಗಳಾದರೂ ಕೂಡ ಅವರನ್ನು ಕೈಬಿಡುವುದಕ್ಕಾಗುತ್ತದೆಯೇ? ವ॥ ಅದೂ ಅಲ್ಲದೆ, ೬೫. ಮಧುರವಾದ ಕುಸುಮರಸವನ್ನು ಹೀರುತ್ತಿರುವ ದುಂಬಿಹಿಂಡು ಮದನನು ಮುದ್ರಿಸಿದ ಅಂಬಿನ ಅರಗಿನ ಮುದ್ರೆಯೋ ಎಂಬಂತಿತ್ತು. ವ॥ ಅದೂ ಅಲ್ಲದೆ, ೬೬. ಅಲ್ಲಿಯ ದುಂಬಿಗಳು ನನೆ (ಮೊಗ್ಗು)ಯನ್ನು ಮುಂಡಾಡಿ, ಬಲ್ನನೆಯನ್ನು ಸುತ್ತಿ, ಮೊಗ್ಗುಗಳನ್ನು ಆಲಿಂಗಿಸಿ, ಸುವಾಸನೆಯ ಬಿರಿಯುತ್ತಿರುವ ಮೊಗ್ಗೆಗಳನ್ನು ಚುಂಬಿಸಿ, ಎಷ್ಟೋ ಅನುನಯದಿಂದ ಹೂವಿನಿಂದ ಹೂವಿಗೆ ಅಲೆಯುತ್ತಿದ್ದವು. ೬೭. ಅಂಡಲೆದು ಜಾಜಿಯ ಮಕರಂದವನ್ನು ಉಂಡ ಅಳಿಯನ್ನು ಮೀರಿ ಮಧುಕರಗಳು ಅದಕ್ಕಿಂತ ಮಿಗಿಲಾದ ರುಚಿಯುಳ್ಳ ಸುಗಂಧಯುತವಾದ ಮಾಲತಿಯ ಬಂಡನ್ನು ಉಣ್ಣುತ್ತಿವೆಯೋ ಎಂಬಂತಿತ್ತು. ವ॥ ಅದೂ ಅಲ್ಲದೆ

ಕಂ॥ ಆ ವನದ ಕೊಳದ ಪೂಗೊಳ
ನೇವೇಳ್ದೆಂ ಹಂಸೆ ರಾಜಹಂಸೆಗಳಾಹಾ ।
ತಾವರೆ ಹೊಂದಾವರೆಗಳ್
ಮಾವಿಮ್ಮಾವಳಿ ಮದಾಳಿ ಗಿಳಿಯರಗಿಳಿಗಳ್ ॥ ೬೮

ವ॥ ಅಂತುಮಲ್ಲದೆಯುಂ

ಕಂ॥ ತವೆ ಬೆಳೆದ ಪೊಸ ಪನಸು ಬ
ಕ್ಕೆವಲಸು ನಳನಳಿಸುವಿಕ್ಕು ಪುಂಡ್ರೇಕ್ಷು ಪಳಂ ।
ಚುವ ತೆಂಗವು ಚೆಂದೆಂಗೊ
ಪ್ಪುವ ದಾಳಿಂಬಂಗಳೆಲ್ಲ ರಸದಾಳಿಂಬಂ ॥ ೬೯

ಚಂ॥ ಬನವಿದೆ ನೋಡು ಸರ್ವಸುಖಮಪ್ಪುದು ಕೇಳ್ ನುಡಿಯಿಲ್ಲ ತಣ್ಣೆಲರ್
ಮನದೊಲವಿಂದೆ ತೀಡುತಿದೆ ಚೆಲ್ವು ಮನೋಹರಮಿರ್ಪುದಳ್ಕಿಂ ।
ದನುದಿನಮೆಯ್ದಿ ಕಿಂಪುರುಷ ಕಿನ್ನರ ಖೇಚರ ಭೂಚರಾದಿ ಮಂ
ಡನ ಮಿಥುನಂ ರತೀಶ್ವರ ಸುಖಾಬ್ಧಿಯೊಳೊಪ್ಪುಗುಮಾ ವನಾಂತದೊಳ್ ॥ ೭೦

ಚಂ॥ ಸುರತರ ವೊಂದೆ ತತ್ಸುರಭಿಯೊಂದೆ ಸುರಾಪಗೆಯೊಂದೆ ನಿಶ್ಚಯಂ
ಸುರಪುರದಲ್ಲಿ ಇಲ್ಲಿ ಸುಮನಸ್ತರು ಗೋ ಪಶು ನಿರ್ಜರಾಪಗೋ
ತ್ಕರಮುಮನಂತಮೆಂದು ಗಿರಿರಾಜ ಪುರೋಪವನಾಳಿಯಲ್ಲಿಯ
ಪ್ಸರತತಿ ಕಿನ್ನರಪ್ರತತಿ ಕಿಂಪುರುಷವ್ರಜಮಿರ್ಪುದಾವಗಂ ॥ ೭೧

೬೮. ಆ ವನದ ಕೊಳದ ಪೂಗೊಳಗಳ ಸೌಂದರ್ಯವನ್ನು ಬಣ್ಣಿಸಲು ಸಾಧ್ಯವೆ? ಅಲ್ಲಿಯ ಹಂಸೆಗಳು, ರಾಜಹಂಸೆಗಳು; ಆಹಾ! ತಾವರೆ-ಹೊಂದಾವರೆಗಳು; ಮಾವು, ಇನಿದಾದ ಮಾವುಗಳು; ಮದಿಸಿದ ದುಂಬಿಗಳು, ಗಿಳಿ, ಅರಗಿಳಿಗಳು, ಇವುಗಳ ಬೆಡಗನ್ನು ಹೇಗೆ ವರ್ಣಿಸುವುದು! ವ॥ ಅದೂ ಅಲ್ಲದೆ, ೬೯. ಚೆನ್ನಾಗಿ ಬೆಳೆದ ಹೊಸ ಹಲಸು, ಬಕ್ಕೆ ಹಲಸು, ನಳನಳಿಸುವ ಕಬ್ಬು, ಪಟಾವಳಿ ಕಬ್ಬು, ತೆಂಗು ಚೆಂದೆಂಗು; ದಾಳಿಂಬ ಹಾಗೂ ರಸವತ್ತಾದ ದಾಳಿಂಬಗಳು ಅಲ್ಲಿ ಒಪ್ಪಿದ್ದವು. ೭೦. ಇಗೊ, ಈ ವನವನ್ನು ನೋಡು; ಇಲ್ಲಿ ಸರ್ವಸುಖಿಗಳು ಉಂಟು ಎಂಬ ವಿಷಯದಲ್ಲಿ ಎರಡು ನುಡಿಯಿಲ್ಲ; ಇಲ್ಲಿ ತಂಗಾಳಿಯು ಮನೋಹರವಾಗಿ ಬೀಸುತ್ತಿದೆ. ಚೆಲ್ವು ಮೈದಾಳಿ ನಿಂತಿದೆ. ಇಲ್ಲಿಗೆ ಪ್ರತಿದಿನವೂ ಕಿಂಪುರುಷರು, ಕಿನ್ನರರು, ಖೇಚರರು, ಭೂಚರರಾದಿಯಾಗಿ ಅಲಂಕೃತರಾಗಿ ಬಂದ ಸ್ತ್ರೀಪುರುಷರು ಮನ್ಮಥ ಸುಖಿಸಾಗರದಲ್ಲಿ ಮುಳುಗಿರುತ್ತಾರೆ. ೭೧. ದೇವಲೋಕದಲ್ಲಿ ಕಲ್ಪವೃಕ್ಷ, ಕಾಮಧೇನು, ದೇವಗಂಗೆಗಳು ಒಂದೊಂದೆ ಇವೆ. ನಿಜ; ಆದರೆ ಇಲ್ಲಿ ಅಂತಹ ಕಲ್ಪವೃಕ್ಷ, ಕಾಮಧೇನು, ದೇವಗಂಗೆಗಳು ಅಸಂಖ್ಯಾತವಾಗಿವೆ ಎಂದು ಗಿರಿರಾಜನ ಪುರದ ಉಪವನದಲ್ಲಿಯ ಅಪ್ಸರೆಯರು, ಕಿನ್ನರ-ಕಿಂಪುರುಷರು ಅಲ್ಲಿ ಯಾವಾಗಲೂ ನಲಿಯುತ್ತಿದ್ದಾರೆ.

ವ|| ಮತ್ತಮಾ ಪುರದ ಬಹಿರುದ್ಯಾನಂ ನಾನಾ ಪಿಕ ಚಂಚುಸಂಚಾರಿತ ಚೂತಾಂಕುರ ಪ್ರಕರದಿಂದೊಸರ್ದು ಮಂದಾನಿಲನಿಂ ಸೂಸಿ ಮಂಜುಮಸಗಿ ಬೀಳ್ವ ಪೊಸರಸದಿಂ ವಿಕಸಿತಪ್ರಸೂನಕುಲದೊಳ್ ಕೂಡೆ ಬಂಡುಣ್ಬ ಷಟ್ಪದ ಪದಘಾತದಿಂದುದಿರ್ದ ಪರಾಗಧೂಳಿಯಿಂ ಶುಕ ತುಂಡವಿದಾರಿತ ಪಕ್ವಫಲಗಳಿತ ರಸಾಸಾರದಿಂ ಪರಿಮಳದ ಕೆಸಱ್ ಮಸಗಿದ ವನಸ್ಥಳದೊಳ್ ಬನದದಿಂ ನಡೆವಲ್ಲಿ ಕಾಲ್ ಜಗುಳ್ದು ಜೋಲ್ದು ಬೀಳ್ವ ಕಳಹಂಸೆಗಳಂ ನಗುವಂತಿರರೆವಿರಿದ ಪಣ್ಗಳಿಂ ಕಣ್ಮೊಳಿಪ ದಾಡಿಮದ್ರುಮಂಗಳಿಂ – ಮತ್ತಮೊಂದೆಡೆಯೊಳ್ ಮಿಱೆ ಪಾಱುವ ಪಱಿಮೆಗಳ ಪಜ್ಜೆವಿಡಿದಱಿಸಿ ಗಂಧವಹನನೊಡಗೂಡಿ ಬಂದೆಳೆದುಯ್ದು ಮಿಸುಗುವ ಕುಸುಮ ಕರ್ಣಿಕೆಯೊಳ್ ಕಡುಪಿಂ ಕೆಡೆಪಿ ಕೊಲ್ವುದಿದೆಂಬ ಶಂಕೆ ಭೋಂಕನೆ ಪುಟ್ಟಿ ಝೆಂಕಾರರವದಿಂ ಪಲ್ಮೊರೆವಂತೆ ಸಲೆ ಮೊರೆದು ಸಂಪಗೆಯ ಕಂಪಿಂಗೆ ಕಂಪಿಸಿ ಮಲ್ಲಳಿಗೊಂಡೊಲ್ಲದೆ ಮೊಗಂದಿರುವಿ ಪರಿತಂದು ಸಾದರದಿಂ ಪೂದೋಂಟದ ಪ್ರಸೂನಕುಲ ಮನಂಡಲೆದು ಬಂಡುಣ್ಬಲ್ಲಿ ಬಾಯಕುಟುಕನೆಳಕುಳಿಗೊಂಡು ತೀಡುವ ಗಂಧವಹನ ಬಳಿವಿಡಿದು ಫಳಿಲನೆಳ್ದು ಪರಿಮಳದ ಪಸಿವಿನುಱವಣೆಯಡಂಗದೆ ಕಡಂಗಿ ಕಾಯ್ದು ವಸಂತರಾಜಂಗೆ ಪುಯ್ಯಲಿಡುವಂತೆ ನೆರೆನೆರೆದು ಮೊರೆವ ಮಧುಕರಪ್ರಕರದಿಂ, ಮತ್ತಮೊಂದೆಡೆಯೊಳ್ ತೀವಿ ಪೂತ ಸೇವಂತಿಗೆಯ ತೋಂಟದೊಳ್ ಮೀಂಟುವರಿವ ಪರಿಮಳದ ಪನಿನೀರ ಪಳ್ಕಮಂ ದಾಂಟಲಾಱದ ಬಾಲಮರಾಳಂಗಳಂ ಪದ್ಮಪತ್ರದಿನೊಪ್ಪುವ ತೆಪ್ಪದೊಳಿಟ್ಟು ದಾಂಟಿಸುತಿರ್ಪ ರಾಜ ಹಂಸರಾಜಿಗಳಿಂ, ಮತ್ತಂ ಚಕ್ರವಾಕ ಚಕ್ರವಳಯಾಗ್ರದೊಳೊಗ್ಗಿನ ಕಮಳದ ಮೊಗ್ಗೆಯ ಗುಂಡಿಗೆಯಂ ತಂಡದೊಳಮರ್ಚಿ ಕೊಳರ್ವಕ್ಕಿಯಂ ಹೂಡಿ ದ್ರಾಕ್ಷಾರಸಪೂರಿತ ಕಾಸಾರಜಲಮಂ

ವ|| ಮತ್ತು ಆ ಪುರದ ಹೊರಗಿನ ಉದ್ಯಾನವು ಅನೇಕ ಕೋಗಿಲೆಗಳ ಚಂಚು ಸೋಕಿದ ಚೂತಾಂಕುರಗಳಿಂದ ಒಸರಿದ ಮಂದಮಾರುತದಿಂದಲೂ, ಸೂಸಿ ಮಂಜು ಮಸಗಿ ಬೀಳುವ ಹೊಸರಸದಿಂದಲೂ, ಅರಳಿದ ಹೂವುಗಳಲ್ಲಿ ಮಕರಂದವನ್ನು ಸವಿಯುವ ದುಂಬಿಗಳ ಕಾಲ ತುಳಿತದಿಂದ ಉದುರಿದ ಪರಾಗಧೂಳಿಯಿಂದಲೂ, ಗಿಳಿಗಳ ಕೊಕ್ಕಿನಿಂದ ಸೀಳಿದ ಪರಿಪಕ್ವವಾದ ಹಣ್ಣುಗಳಿಂದ ಸುರಿಯುತ್ತಿರುವ ರಸಸಾರದಿಂದಲೂ ಪರಿಮಳದ ಕೆಸರು ತುಂಬಿದ ವನದಲ್ಲಿ ವಿನೋದದಿಂದ ನಡೆಯುವಾಗ ಕಾಲು ಜಾರಿ ಜೋಲ್ದು ಬೀಳುವ ಕಳಹಂಸೆಗಳನ್ನು ನಗಿಸುವಂತೆ ಅರ್ಧಬಿರಿದ ಹಣ್ಣುಗಳಿಂದ ಕಂಗೊಳಿಸುವ ದಾಳಿಂಬೆಯ ಮರಗಳಿಂದಲೂ; ಮತ್ತೊಂದು ಸ್ಥಳದಲ್ಲಿ ಮೀರಿ ಓಡುತ್ತಿರುವ ದುಂಬಿಗಳ ಹೆಜ್ಜೆ ಹಿಡಿದು ಹುಡುಕಿ ಮಂದಾನಿಲನೊಡಗೂಡಿ ಬಂದು ಎಳೆದೊಯ್ದು ಮಿಸುಗುವ ಹೂವಿನ ಕರ್ಣಿಕೆಯಲ್ಲಿ ನಿರ್ಬಂಧವಾಗಿ ಕೆಡವಿ, ಇದು ತನ್ನನ್ನು ಕೊಲ್ಲುವುದೆಂಬ ಸಂಶಯವು ತಟ್ಟನೆ ಹುಟ್ಟಿ ಝೆಂಕಾರ ಶಬ್ದದಿಂದ ಹಲ್ಲುಮೊರೆವಂತೆ ಚೆನ್ನಾಗಿ ಮೊರೆದು ಸಂಪಿಗೆಯ ಕಂಪಿಗೆ ನಡುಗಿ ಮೇಳವಾಗಲು ಬಯಸದೆ ಮುಖ ತಿರುಗಿಸಿ ಮುಂದೆ ಬಂದು ಹೂವಿನ ತೋಟದಲ್ಲಿರುವ ಹೂವುಗಳಲ್ಲಿನ ಮಕರಂದವನ್ನು ಆದರದಿಂದ ಉಣ್ಣುವಾಗ ಬಾಯಿಯಲ್ಲಿನ ಗುಟುಕನ್ನು ಎಳೆದುಕೊಂಡು ಬೀಸುವ ಗಾಳಿಯನ್ನು ಅನುಸರಿಸಿ, ಬೇಗನೆ ಎದ್ದು ಸುವಾಸನೆಯ ಹಸಿವು ಅಡಗದೆ, ಬಯಸಿ, ಕಾಯ್ದು, ವಸಂತರಾಜನಿಗೆ ಹುಯ್ಯಲಿಡುತ್ತಿವೆಯೊ ಎಂಬಂತೆ ಮೊರೆಯುವ ದುಂಬಿಗಳಿಂದಲೂ; ಮತ್ತೊಂದು ಕಡೆ ಚೆನ್ನಾಗಿ ಹೂ ಬಿಟ್ಟ ಸೇವಂತಿಗೆಯ ತೋಟ, ಅಲ್ಲಿ ಪರಿಮಳದ ಹನಿಗಳ ನೀರಿನ

ಕೇತಕೀದಳದ ದೋಣಿಯೊಳ್ ವಸಂತರಾಜಂ ಕಸ್ತುರಿಯ ಮಡಿಯೊಳ್ ಕರ್ಪುರದ ಗಿಡುವಂ ನಟ್ಟು ಜಾಟಳಮನೆತ್ತಿ ಬೆಳೆಯಿಸಿದನೆಂಬಂತಿರ್ದ ಕರ್ಪೂರದ್ರುಮಂಗಳಿಂ, ಮತ್ತಮೊಂದೆಡೆಯೊಳ್ ಪಸಿದ ಮಳೆಗಿಳಿಯ ಮೊಗಮಂ ನೋಡಿ ಚಂಚುಗೂಡಿ ಕಿಸಲಯದೆಸಳ ಮಾಣಿಕ್ಯದ ಸಿಂಪಿಂ ಫಳರಸದ ಪಾಲನೆಱೆದು ತಳಿರ ತೊಟ್ಟಿಲೊಳಿಟ್ಟು ಸಣ್ಣನೆನೆಗಳ ನನೆಯಕ್ಕಿಯನಿಕ್ಕಿ ಪಣ್ಣ ಬಾಯಿನಮನಣ್ಣವಳಿಯದೆ ಕೊಟ್ಟು ಚೂತವಲ್ಲಭನೆಂಬ ಪೆಸರಿಟ್ಟು ಮಂದಾನಿಳಂ ತೂಗೆ ಮಧುಕರನಿಕರಂ ಪಾಡೆ ಸಹಕಾರಕುಲದೊಳ್ ಸಂತಸದಿಂ ಸಲಪುತಿರ್ಪ ರಾಜಶುಕಪ್ರಕರದಿಂ, ಮತ್ತಮೊಂದು ಪೂಗೊಳದೊಳ್ ಪೆತ್ತ ಮಱೆದುಂಬಿಯಂ ಕಂಡು ಮನಂಗೊಂಡು ಪುಂಡರೀಕದೆಸಳ ಬೆಳ್ಳಿಯ ಸಿಂಪಿಂ ಪರಿಮಳದ ರಸಮನೆಱೆದು ಪರಾಗದ ತಿಲಕಮನಿಕ್ಕಿ ಸೌರಭದ ತುಂತುಱೆಂ ತೂಪಿಱೆದೆಸಳ ಸೋಗಿಲ ಹಸುಳೆಯಂ ಝಂಕಾರರವದಿಂ ಜೋಗುಳಂಬಾಡಿ ತರಂಗದಿಂ ತೂಗಿ ವಸಂತತಿಲಕನೆಂದು ನಾಮಕರಣಮಂ ಮಾಡಿ ಬಾಳುತಿರ್ಪ ಬಾಣಂತಿದುಂಬಿಗಳ ಗೊಂದಣಂಗಳಿಂ, ಮತ್ತಮೊಂದೆಡೆಯೊಳ್ ಚಂದ್ರಕಾಂತನಿರ್ಮಿತಕೃತಕಾಚಳನಿತಂಬವಿಳಸಿತ ಲತಾಮಂಟಪವಳಯಸ್ಥಿತ ಪುಳಿನಸ್ಥಳ ಕುಸುಮತಳ್ಪದೊಳ್ ಕುಸುಮಾಯುಧ ಸಕಳಸುಖ ಸಾಮ್ರಾಜ್ಯಧರದಿಂ ನೆರೆವ ಹಂಸ ಕೀರ ಪಾರವತಂಗಂಳಂ ನೋಡಿ ನಾಡೆ ನಲಿದು ಕಾಮಬಾಣಮನಿಕ್ಕಿ ಮೆಟ್ಟಿದಂತೆ ಹೂವಿನ ಹಸೆಯೊಳ್ ಮನಮುಟ್ಟಿ ಮಾಣದೆ ನೆರೆದ ವಿದ್ಯಾಧರ ಮಿಥುನಂಗಳಿಂ, ಇಂತು ತರುಕುಲದ ತೆಕ್ಕೆಯಿಂ ಗುಲ್ಮಕುಲದಿರ್ಕೆಯಿಂ ನೆಳಲ ತಣ್ಬೆಂದಂಕುರದ ಸೊಂಪಿಂ ಪಲ್ಲವದ ನುಣ್ಪಿಂ ಕುಸುಮಾವಳಿಯ ಕಂಪಿಂ ಪಣ್‌ಗೊನೆಯ ಬಣ್ಪಿಂ

ಹಳ್ಳವನ್ನು ದಾಟಲಾರದೆ ಇವೆ. ಎಳೆಯ ಹಂಸೆಯ ಮರಿಗಳು, ಅವುಗಳನ್ನು ತಾವರೆ ಎಲೆಯ ತೆಪ್ಪದಲ್ಲಿಟ್ಟು ದಾಟಿಸುತ್ತಿರುವ ರಾಜಹಂಸೆಗಳಿಂದಲೂ, ಮತ್ತು ಚಕ್ರವಾಕಗಳ ಚಕ್ರವಲಯದ ಅಗ್ರದಲ್ಲಿ ಒಗ್ಗಿನ ಕಮಲದ ಮೊಗ್ಗೆಯ ಗುಂಡಿಗೆಯನ್ನು ಸಮೂಹದಲ್ಲಿರಿಸಿ, ಅದಕ್ಕೆ ಕೊಳದ ಹಕ್ಕಿಗಳನ್ನು ಹೂಡಿ, ದ್ರಾಕ್ಷಾರಸದಿಂದ ತುಂಬಿದ ಕೊಳದ ಜಲರಸವನ್ನು ಕೇದಗೆಯ ದಳದ ದೋಣಿಯಲ್ಲಿ ವಸಂತರಾಜನು ಕಸ್ತೂರಿಯ ಪಾತಿಯಲ್ಲಿ ಕರ್ಪೂರದ ಗಿಡವನ್ನು ನಟ್ಟು ರಾಟಳದಿಂದ ನೀರನ್ನೆತ್ತಿ ಬೆಳೆಸಿದನೋ ಎಂಬಂತಿರುವ ಕರ್ಪೂರದ ಮರಗಳಿಂದಲೂ, ಮತ್ತೊಂದು ಕಡೆ ಹಸಿದಿರುವ ಮರಿಗಿಳಿಗಳು, ಅವುಗಳ ಮುಖವನ್ನು ನೋಡಿ ಚಂಚುಗೂಡಿ ಚಿಗುರಿನ ಎಸಳು ಎಂಬ ಮಾಣಿಕ್ಯ ಚಿಪ್ಪು, ಅದರಲ್ಲಿ ಫಲರಸವೆಂಬ ಹಾಲನ್ನೆರೆದು ಚಿಗುರಿನ ತೊಟ್ಟಿಲಲ್ಲಿಟ್ಟು, ಸಣ್ಣ ಮೊಗ್ಗೆಗಳೆಂಬ ನೆನೆದ ಅಕ್ಕಿಯನ್ನಿಟ್ಟು, ಹಣ್ಣಿನ ಬಾಗಿನವನ್ನು ಅಂದಗೆಡದೆ ಕೊಟ್ಟು ಚೂತವಲ್ಲಭ ಎಂದು ಹೆಸರಿಟ್ಟು, ಮಂದಾನಿಲನು ತೂಗುತ್ತಿರಲು; ದುಂಬಿಗಳು ಹಾಡುತ್ತಿರಲು, ಮಾವಿನಮರಗಳಲ್ಲಿ ಸಂತಸದಿಂದ ಸಲಹುತ್ತಿರುವ ರಾಜಶುಕ ಸಮೂಹದಿಂದಲೂ, ಮತ್ತೊಂದು ಹೂವಿನ ಕೊಳದಲ್ಲಿ ಹೆತ್ತ ಮರಿದುಂಬಿಯನ್ನು ಕಂಡು ಮನಸ್ಸುಮಾಡಿ ಕಮಲದ ದಳದ ಬೆಳ್ಳಿಯ ಚಿಪ್ಪಿನಲ್ಲಿ ಪರಿಮಳದ ರಸವನ್ನೆರೆದು, ಪರಾಗದ ತಿಲಕವನ್ನಿಟ್ಟು, ಸುವಾಸನೆಯ ತುಂತುರಿನಿಂದ ತೂಪಿರಿದ ಎಸಳ ಸೋಗಿಲ ಹಸುಳೆಯನ್ನು ಝಂಕಾರರಸದಿಂದ ಜೋಗುಳಹಾಡಿ, ಅಲೆಗಳಿಂದ ತೂಗಿ, ವಸಂತತಿಲಕನೆಂದು ನಾಮಕರಣವನ್ನು ಮಾಡಿ ಬಾಳುತ್ತಿರುವ ಬಾಣಂತಿ ದುಂಬಿಗಳ ಸಮೂಹಗಳಿಂದಲೂ, ಮತ್ತೊಂದು ಕಡೆಯಲ್ಲಿ ಚಂದ್ರಕಾಂತದ ಕೃತಕ ಪರ್ವತಗಳ ತಪ್ಪಲಲ್ಲಿ ಪ್ರಕಾಶಿಸುವ ಲತಾಮಂಟಪಗಳು, ಅಲ್ಲಿರುವ ಮರಳು ದಿಣ್ಣೆಗಳು, ಅಲ್ಲಿ

ಪಕ್ವಫಲರಸದಿಂಪಿಂ ಕೋಕಿಲ ಧ್ವಾನದಿಂದಳಿಕುಲದ ಗಾನದಿ ಶುಕರವಪ್ರತಾನದಿಂ ಫಲರಸ ಪಾನದಿಂ ರಾಜಹಂಸಯಾನದಿಂ ಲತಾಮಂಟಪಸ್ಥಾನದಿಂ ಪರಿಕಾಲ ಪರ್ಬಂ ಪೂದೋಂಟದ ಕೊರ್ಬಂ ವಿಹಂಗಮ ಕುಲದುರ್ಬಂ ತಮಾಳವನದ ಮರ್ಬಂ ವಿದ್ಯಾಧರಿಯಗುರ್ಬಂ ಪ್ರಸೂನಕುಲದ ಪರ್ಬಂ ಚಕ್ರವಾಕದ ಪೆರ್ಮೆಯಿಂ ಮಂದಾನಿಲನ ಕೂಮೆರ್ಯಂ ಇಂತು ಪುರದ ಬಹಿರುದ್ಯಾನಂ ಸಕಲ ಸೌಂದರ್ಯಮನಧಿಕತರಸುಕುಮಾರತೆಯನುರುತರ ಭೋಗಮನುನ್ನತ ಕ್ರೀಡೆಯನತ್ಯುದಾರತೆಯನತಿಪ್ರಸನ್ನತೆಯನೊಳ ಕೊಂಡಿರ್ಪುದಂತುಮಲ್ಲದೆಯುಂ

ಮ॥ಸ್ರ॥ ಮೊಗಮಬ್ಜಂ ಲೋಚನಂಗಳ್ ಕುವಲಯಮಧರಂ ಬಿಂಬಮಾ ನಾಸಿಕಂ ಸಂ
ಪಗೆ ತೋಳ್ ಶಾಖಾನಿಕಾಯಂ ಘನಕುಚಯುಗಳಂ ಚಕ್ರವಾಕದ್ವಯಂ ನಾ ।
ಭಿ ಗಭೀರೋದ್ಯತ್ಸರಂ ತೋಱುವ ತೊಡೆ ಕದಳೀಸ್ತಂಭಮಂಘ್ರಿ ಪ್ರವಾಳಂ
ಸೊಗಸಿಂ ತಾವಾಗೆ ತನ್ನಂದನಮೆ ಘನ ವನಶ್ರೀಗೆ ರೂಪಾಗಿ ತೋರ್ಕುಂ ॥ ೭೨

ಕಂ॥ ಆ ವನದ ಪುರದ ನಡುವೆ ಸು
ಖಾವಹಮತಿವಿಭ್ರಮಂ ವಿಶಾಲಂ ಸರ್ವೋ ।
ರ್ವೀವರ ಶಸ್ತ್ರಾಭ್ಯಾಸ ನಿ
ಜಾವಾಸಂ ಸುಭಟಪಟಲ ಪಟುರವಭರಿತಂ ॥ ೭೩

ಉದುರಿರುವ ಹೂವಿನ ಹಾಸಿಗೆಯಲ್ಲಿ ಮನ್ಮಥನ ಸಕಲ ಸುಖಸಾಮ್ರಾಜ್ಯದಿಂದ ನೆರೆವ ಹಂಸ-ಕೀರ-ಪಾರಿವಾಳಗಳನ್ನು ನೋಡಿ, ಚನ್ನಾಗಿ ನಲಿದು, ಕಾಮಬಾಣವನ್ನಿಕ್ಕಿ ಮೆಟ್ಟಿದಂತೆ ಹೂವಿನ ಹಸೆಯಲ್ಲಿ ಮನಸಾರೆ ಮುಟ್ಟಬಿಡದೆ ನೆರೆದ ವಿದ್ಯಾಧರ ಮಿಥುನ ಗಳಿಂದಲೂ, ಹೀಗೆ ಮರಗಳ ತೆಕ್ಕೆಯಿಂದಲೂ, ಪೊದೆಗಳ ಇರುವಿಕೆಯಿಂದಲೂ, ನೆಳಲಿನ ತಂಪು, ಅಂಕುರದ ಸೊಂಪು, ಪಲ್ಲವದ ನುಣುಪು, ಹೂವುಗಳ ಕಂಪು, ಹಣ್ಣಿನ ಗೊನೆಗಳ ಗಡಸು, ಮಾಗಿದ ಹಣ್ಣಿನ ಇಂಪುಗಳಿಂದಲೂ, ಕೋಗಿಲೆಯ ಧ್ವನಿ, ಅಳಿಕುಲದ ಗಾನ, ಗಿಳಿಗಳ ಗುಂಪುಗಳು, ಫಲರಸಪಾನ, ರಾಜಹಂಸಯಾನ, ಲತಾಮಂಟಪಗಳ ಸ್ಥಾನ, ಪರಿಕಾಲದ ಹಬ್ಬುವಿಕೆ, ಹೂತೋಟಗಳ ಕೊಬ್ಬು, ವಿಹಂಗ ಕುಲದ ಉಬ್ಬು, ಹೊಂಗೆಮರಗಳ ಮಬ್ಬು, ವಿದ್ಯಾಧರಿಯರ ವಿಹಾರ, ಹೂವುಗಳು ಹರಡಿರುವಿಕೆ, ಚಕ್ರವಾಕಗಳ ಹೆಮ್ಮೆ, ಮಂದಾನಿಲನ ಕೂರ್ಮೆ ಮುಂತಾದವುಗಳಿಂದ ಆ ಪುರದ ಉದ್ಯಾನವು ಸಕಲ ಸೌಂದರ್ಯದಿಂದ ಅಧಿಕತರವಾದ ಸೌಕುಮಾರ್ಯದ ಶ್ರೇಷ್ಠ ಭೋಗವನ್ನು, ಉನ್ನತ ಕ್ರೀಡೆಯನ್ನು, ಅತ್ಯುದಾರತೆ ಅತಿಪ್ರಸನ್ನತೆಯನ್ನು ಒಳಗೊಂಡು ಇದೆ. ಅಷ್ಟೇ ಅಲ್ಲದೆ-೭೨. ಆ ಘನವನಲಕ್ಷ್ಮಿಗೆ ಕಮಲವೇ ಮುಖ, ನೈದಿಲೆಗಳೇ ಕಣ್ಣುಗಳು, ತೊಂಡೆಯ ಹಣ್ಣುಗಳೇ ತುಟಿ, ಸಂಪಿಗೆ ಮೂಗು, ಕೊಂಬೆ ಗಳೇ ತೋಳುಗಳು, ಚಕ್ರವಾಕದ್ವಯವೇ ಸ್ತನದ್ವಯ, ಗಂಭೀರವಾದ ಸರಸ್ಸುನಾಭಿ, ಬಾಳೆಯ ಮರಗಳೇ ತೊಡೆ, ಚಿಗುರು ಪಾದಗಳಾಗಿ ಒಟ್ಟಿನಲ್ಲಿ ಆ ನಂದನವನವೇ ಅವಳ ರೂಪು ಎನಿಸಿ ತೋರುತ್ತಿದೆ. ೭೩. ಆ ವನದ ಹಾಗೂ ಪುರದ ಮಧ್ಯದಲ್ಲಿ ಅತಿ ವಿಶಾಲವೂ ಸುಖಕರವೂ ಆದ ಒಂದು ನಿವೇಶನವು ಸೈನ್ಯ ಚಟುವಟಿಕೆಗಳಿಗೆ

ಹಯಶಿಕ್ಷಕರಿಂ ಗಜಶಿ
ಕ್ಷೆಯ ಭೀಕರದಿಂ ಸ್ರವಂಗುಡುವ ಜೋದರ ಸಂ ।
ಚಯದಿಂ ನಯದಿಂ ವೈಹಾ
ಳಿಯ ಬಯಲೊಪ್ಪಿತ್ತು ಪಟ್ಟಣದ ವನದೆಡೆಯೊಳ್ ॥ ೭೪

ವ॥ ಮತ್ತಮಲ್ಲಿ

ಕಂ॥ ಕರಿಗಳ್ ಬಾಳ್ಗಂಬದೊಳೊ
ಪ್ಪಿರುತಿರ್ದುವು ಸುಳಿವ ನೀಲಮೇಘಾವಳಿಯಂ ।
ತರದಿಂ ಸೆಱೆಯಿಟ್ಟಂತಾ
ಗಿರಿಪತಿ ಸುರಪತಿಯ ಹಗೆಯ ಹರಿಬದ ಚಲದೊಳ್ ॥ ೭೫

ಸುರಿವ ಮದಂ ಮಳೆ ಗಂಭೀ
ರ ರವಂ ಮೊಳಗಂಗಮಂಬುದಂ ದಂತಂ ನಿ ।
ಷ್ಠುರದಿಂದೆಱಗುವ ಸಿಡಿಲಾ
ಗಿರೆ ಕಾರ್ಗಾಲದವೊಲಿರ್ದುವಲ್ಲಿಯ ಕರಿಗಳ್ ॥ ೭೬

ವ॥ ಮತ್ತಮಾ ಪೊಱವೊಳಲ ವೈಹಾಳಿಯ ಬಯಲಿಂದೊಳಗೆ

ಕಂ॥ ಧರೆಯಂ ಸುತ್ತಿದ ಜಲಧಿಗೆ
ಪುರುಡಿಸಿ ಪುರವಳಯ ವಿಳಸಿತ ಪ್ರಾಕಾರಂ ।
ಪುರಮಂ ಸುತ್ತಿರ್ಪುದು ತತ್
ಪರಿಖಾತಂ ಜಲೌಘಮೌರ್ವವಿಹರಣದೂರಂ ॥ ೭೭

ಮೀಸಲಾಗಿತ್ತು. ಅಲ್ಲಿ ಇಡಿಯ ಜಗತ್ತಿನಲ್ಲಿಯೇ ಶ್ರೇಷ್ಠವಾದ ಶಸ್ತ್ರಾಭ್ಯಾಸ ವ್ಯವಸ್ಥೆ ಇತ್ತು. ಯೋಧರ ನಿಜಾವಾಸಗಳೂ ಅಲ್ಲಿದ್ದವು. ಅವರ ಪಟುರವಭರಿತವಾಗಿತ್ತು ಆ ಪ್ರದೇಶ. ೭೪. ಅಲ್ಲಿ ಕುದುರೆಗಳಿಗೆ ಶಿಕ್ಷಣ ಕೊಡುತ್ತಿದ್ದ ಹಯಶಾಸ್ತ್ರವಿಚಕ್ಷಣರಿದ್ದರು. ಗಜ (ಆನೆ) ಶಿಕ್ಷಕರಾದ ಭಯಂಕರವಾಗಿ ಸ್ರವವನ್ನು ಕೊಡುವ ಯೋಧರಸಂಚಯ ಒಂದು ಕಡೆ; ನಯದಿಂದ ಜಾಣ್ಮೆಯಿಂದ ವೈಹಾಳಿ (ಕುದುರೆಸವಾರಿ) ಎಸಗುವ ಆ ಬಯಲು ಅಲ್ಲಿತ್ತು. ವಳಿ ಮತ್ತೆ ಅಲ್ಲಿ, ೭೫. ಆನೆಗಳು ಬಾಳ್ಗಂಬ (ಆಲಾನಸ್ತಂಭ-ಆನೆಕಟ್ಟುವ ಎತ್ತರವೂ ದಪ್ಪವೂ ಆದ ಕಂಭ)ದಲ್ಲಿ ಬಂಧಿತವಾಗಿದ್ದವು. ಇದನ್ನು ನೋಡಿದರೆ ಪರ್ವತರಾಜನು ತನ್ನ ಹಗೆಯಾದ ಸುರಪತಿಯ ಕಾರಣದಿಂದ ಛಲವಿಡಿದು ಸುಳಿವ ನೀಲಮೇಘಗಳನ್ನೆಲ್ಲ ಹಿಡಿದು ಸೆರೆಯಲ್ಲಿಟ್ಟಂತೆ ಇತ್ತು. ೭೬. ಅಲ್ಲಿಯ ಕರಿಗಳು ಮುಂಗಾರಿನಂತೆ ಕಾಣುತ್ತಿದ್ದವು. ಅಲ್ಲಿ ಆನೆಗಳಿಂದ ನಿರಂತರ ಸುರಿವ ಮದೋದಕವೇ ಮಳೆ, ಆನೆಗಳ ಗಂಭೀರ ಘೀಂಕಾರವೆ ಗುಡುಗಿನಿಂದ ಕೂಡಿದ ಮೇಘ, ಅವುಗಳ ದಂತಗಳೇ ನಿಷ್ಠುರದಿಂದ ಬೀಳುವ ಸಿಡಿಲು, ಹೀಗಾಗಿ ಆ ಕರಿಗಳು ಕಾರ್ಗಾಲದಂತೆ ಆಗಿದ್ದವು. ವ॥ ಪಟ್ಟಣದ ಹೊರವಳಯದ ವೈಹಾಳಿಯ ಬಯಲಿನಲ್ಲಿ, ೭೭. ಧರೆಯ ಸುತ್ತಲೂ ಸಮುದ್ರವಿದೆ. ಅಂಥ ಜಲಧಿಯ ಮೇಲಣ ಸ್ಪರ್ಧೆಯಿಂದಲೋ ಎಂಬಂತೆ ಆ ಪುರದ

ಹರಿ ಮತ್ಸ್ಯಾಕಾರದೊಳು
ದ್ದುರತಮನಂ ಹತಿಸಲೆಂದು ಪಾತಾಳ ತಳ ।
ಕ್ಕರದಿಳಿದ ತಾಣಮೆಂಬಂ
ತಿರೆ ಪುರದಗಳಿರ್ಪುದತುಳಮತಿ ಗಂಭೀರಂ ॥ ೭೮

ವ॥ ಮತ್ತಮನಂತರದಲ್ಲಿ

ಚಂ॥ ಪಳಿಕಿನ ಕೋಂಟೆ ಬಟ್ಟದೆನೆ ಬೇವಿನ ದಂಡೆ ನಭಕ್ಕೆ ಮೀಱುವ
ಟ್ಟಳೆ ನಿಮಿರ್ದೇಱೆ ಪಾಱುವ ಪತಾಕೆ ವಿರಾಜಿಪ ಗೊಂಟು ಗೊಂಟನೊಳ್ ।
ಬಳಸಿದ ಕೊತ್ತಳಂ ಸೊಗಯಿಪಾಳ್ವರಿ ಡೆಂಕಣಿ ಸಾರಮಾಗಿಯ
ಗ್ಗಳಿಸುವ ಗೋಪುರಂ ಪುಲಿಮೊಗಂ ಮೆಱೆಗುಂ ಪುರದೊಳ್ ನಿರಂತರಂ ॥ ೭೯

ಕಂ॥ ನೆಗೆದ ಪತಾಕಾಪಟಕೋ
ಟಿಗಳೊಪ್ಪಿದುವಾವಗಂ ತೊಳಲ್ದು ಬಳಲ್ದಾ ।
ಖಗನ ತುರಂಗಪ್ರತತಿಗೆ
ಗಗನಾಂಗನೆ ಬೀಸುತಿರ್ಪ ವೀಜನತತಿವೋಲ್ ॥ ೮೦

ವ॥ ಅಂತುಮಲ್ಲದೆಯುಂ

ಕಂ॥ ಬಗೆವೊಡಮರಾವತಿಗೆ ಮಿಥಿ
ಳೆಗೆಯುದಯನಗಕ್ಕೆ ಉಜ್ಜಯಂತಿಗೆ ದಿಟಮಾ ।
ನಗರಿ ಗುಣೋನ್ನತಿಯಿಂದಂ
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥ ೮೧

ಸುತ್ತಲೂ ಇರುವ ಪ್ರಾಕಾರ (ಕೋಟೆ)ವನ್ನು ಬಳಸಿಕೊಂಡು ಬಂದಿದೆ. ನೀರಿನಿಂದ ತುಂಬಿದ ಬಡಬಾಗ್ನಿ (ನೀರಿನಲ್ಲಿರುವ ಬೆಂಕಿ) ಯಿಲ್ಲದ ಅಗಳ್ತೆ (ಸಂಖೆ) ೭೮. ಆ ಪುರದ ಸುತ್ತಲೂ ಇರುವ ಬಹು ಆಳವಾದ ಅಗಳ್ತೆಯನ್ನು ನೋಡಿದರೆ ಹಿಂದೆ ವಿಷ್ಣುವು ಅತ್ಯಂತ ಉದ್ಧತನೂ, ತಮೋಗುಣ ತುಂಬಿದವನೂ ಸಮುದ್ರದ ತಳದಲ್ಲಿ ನೆಲೆಸಿದ್ದವನೂ ಆದ ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಕೊಲ್ಲಲು ಮತ್ಸ್ಯಾವತಾರವನ್ನೆತ್ತಿ ಸಮುದ್ರಕ್ಕೆ ಇಳಿದ ಸ್ಥಾನವೋ ಎಂಬಂತಿದೆ. ೭೯. ಸ್ಫಟಿಕದ ಕೋಟೆ ಬಟ್ಟದೆನೆ ಬೇವಿನದಂಡೆ ನಭ (ಗಗನ)ಕ್ಕೆ ಮೀರುವ ಅಟ್ಟಳೆ (ಅಟ್ಟ), (ಗೊತ್ತು ಮಾಡಿದ ಪ್ರತಿ ಸ್ಥಳದಲ್ಲಿಯೂ) ಎತ್ತರಕ್ಕೆ ಏರಿಸಿರುವ ಬಾವುಟ; ಪ್ರಾಕಾರವನ್ನು ಬಳಸಿರುವ ಕೊತ್ತಳ (ಹುಡೆ); ಸೊಗಸಾದ ಆಳ್ವರಿ (ಕಂದಕ); ಯುದ್ಧಕಾಲದಲ್ಲಿ ಬಳಸುವ ಆಯುಧಯಂತ್ರ (ಡೆಂಕಣಿ)ವೇ ಮುಖ್ಯ ವಾಗಿರುವ ಅತಿಶಯವಾದ ಹುಲಿಮುಖದ ಗೋಪುರ ಇವೆಲ್ಲವೂ ಆ ಪುರದಲ್ಲಿ ಯಾವಾಗಲೂ ಬೆಳಗುತ್ತಿವೆ. ೮೦. ಆ ಪುರದಲ್ಲಿ ಎಲ್ಲಿ ನೋಡಿದರೂ ಬಾವುಟಗಳೇ! ಆ ಬಾವುಟ ಪಟ (ಬಟ್ಟೆ)ಗಳು ಕೋಟಿಗಟ್ಟಲೆ ಆಕಾಶದಲ್ಲಿ ಯಾವಾಗಲೂ ಹಾರಾಡುತ್ತಿವೆ. ಇದನ್ನು ನೋಡಿದರೆ ಗಗನದಲ್ಲಿ ಪ್ರತಿನಿತ್ಯವೂ ತೊಳಲಿ ಬಳಲಿ ಬರುವ ಸೂರ್ಯನ ರಥದ ಕುದುರೆಗಳ ಶ್ರಮವನ್ನು ಪರಿಹರಿಸಲು ಗಗನಾಂಗನೆ ಬೀಸುತ್ತಿರುವ ಬೀಸಣಿಗೆ ಗಳೊ ಎಂಬಂತಿವೆ. ವ॥ ಅಲ್ಲದೆ, ೮೧. ಜಗತ್ತಿನಲ್ಲಿ ಅತ್ಯಂತ ಪ್ರಸಿದ್ಧವಾದ ನಗರ ಗಳೆಂದರೆ ಇಂದ್ರನ ರಾಜಧಾನಿ ಅಮರಾವತಿ, ಮಿಥಿಲಾ, ಉದಯಾದ್ರಿ, ಉಜಯಂತಿ ಮುಂತಾದವು. ನಿಜವಾಗಿಯೂ ವಿಚಾರ ಮಾಡಿ ನೋಡಿದರೆ ಗಿರಿರಾಜನಗರವು

ಪೊಸಸೊದೆ ಕೌಮುದಿಯಂ ಪಸ
ರಿಸೆ ಕನಕದ ಕಳಶಮಾಲೆ ಪೊಂಬಸಿಲಂ ಪೂ ।
ರಿಸೆ ತರತರದಿಂದಂ ರಾ
ಜಿಸುತಿರ್ಪುವು ಸೋಮಸೂರ್ಯವೀಥಿಗಳದಱೊಳ್ ॥ ೮೨

ವ॥ ಆ ವೀಥಿಗಳೊಳಗೆ

ಕಂ॥ ನಯದಿಂ ಮಾಱುಗುಡುವ ಕೊ
ಳ್ಬ ಯತ್ನಪೂರ್ವಕದೊಳಿರ್ಪ ಘನಧನಿಕರ ಪ ।
ಚ್ಚೆಯ ಮುಂದೆ ಸಂದಣಿಸಿ ವಿ
ಕ್ರಯ ನವ ಕಳಮಾದಿಧಾನ್ಯರಾಶಿಗಳಿಸೆಗುಂ ॥ ೮೩

ವ॥ ಅನಂತರಮಲ್ಲಿ

ಕಂ॥ ಪರಿಮಳದಾಡುಂಬೊಲನಿದು
ವರವಿಟರ ವಿಶಾಲ ಲೋಲ ಲೀಲಾಸ್ಥಲಮಾ ।
ತುರಿಸುವ ತುಂಬಗಳೌತಣ
ದರಮನೆಯೆನೆ ಪುಷ್ಪವಿಕ್ರಯಸ್ಥಲಮೆಸೆಗುಂ ॥ ೮೪

ಭರದಿಂ ಪೂಮಾಲೆಗಳಂ
ತರದಿಂ ಪಿಡಿದೆತ್ತಿ ನಿಂದ ಶಶಿಮುಖಿಯರ್ ಬಂ ।
ಧುರ ಶಶಿಕಳೆಗಳನೀವಂ
ತಿರ್ದರಾ ವಿಟಚಕೋರ ಸಂಗತಿಗಾಗಳ್ ॥ ೮೫

ಗುಣೋನ್ನತಿಯಲ್ಲಿ ಸೌಂದರ್ಯದಲ್ಲಿ ಇವೆಲ್ಲಕ್ಕಿಂತ ಎರಡರಷ್ಟು ಮೂರರಷ್ಟು ನಾಲ್ಕರಷ್ಟು ಅಥವಾ ಐದರಷ್ಟು ಅಧಿಕವಾಗಿತ್ತು. ೮೨. ಆ ನಗರದಲ್ಲಿ ಸೂರ್ಯ- ಚಂದ್ರ ಬೀದಿಗಳಿದ್ದವು. ಹೊಸ ಸುಧೆ (ಸುಣ್ಣ ಬಳಿದ ಮನೆಗಳ ಬೆಳಕು) ಬೆಳದಿಂಗಳನ್ನು ಬಿತ್ತರಿಸುತ್ತಿತ್ತು; ಚಿನ್ನದ ಕಲಶಮಾಲೆಯು ಹೊಂಬಿಸಿಲನ್ನು ಬೀರುತ್ತಿತ್ತು. ಇದರಿಂದ ವಿವಿಧ ಸೌಂದರ್ಯವು ಅಲ್ಲಿ ನೆಲೆಸಿತ್ತು. ವ॥ ಆ ಬೀದಿಗಳಲ್ಲಿ, ೮೩. ವಿನಯದಿಂದ ಮಾರಾಟ ಮಾಡುತ್ತಿರುವ ಪ್ರಯತ್ನಪೂರ್ವಕವಾಗಿ ಕೊಳ್ಳುವ ಧನಿಕರ ಮುಂದೆ ವಿಕ್ರಯಕ್ಕೆ ಸಿದ್ಧವಾಗಿರುವ ವಿವಿಧ ಧಾನ್ಯರಾಶಿಗಳಿದ್ದವು. ವ॥ ಮತ್ತೆ ಅಲ್ಲಿ, ೮೪. ಅಲ್ಲಿಯ ಹೂವಿನ ಮಾರುಕಟ್ಟೆ; ಅದು ಪರಿಮಳದ ಬೀಡು, ವರವಿಟ (ರಸಿಕ)ರ ವಿಶಾಲ ಲೀಲಾರಂಗ, ಆತುರದಿಂದ ಬಂದು ಮುತ್ತಿರುವ ದುಂಬಿಗಳ ಔತಣದ ಅರಮನೆಯೋ ಎಂಬಂತಿತ್ತು. ೮೫. ಅಲ್ಲಿ ಹೂವಿನ ಹಾರಗಳನ್ನು ವೈಯಾರದಿಂದ ಹಿಡಿದೆತ್ತಿ ನಿಂತಿರುವ ಶಶಿಮುಖಿಯರು, ವಿಟಚಕೋರಗಳಿಗೆ ಶಶಿಕಳೆಗಳನ್ನು ಬೀರುತ್ತಿರುವರೋ ಎಂಬಂತಿತ್ತು.

ವ।। ಮತ್ತೊರ್ವಳ್

ಕಂ।। ವರಮಲ್ಲಿಗೆ ಮೊಲ್ಲೆಗಳೊಳ್
ಬೆರಸಿದ ಮಧುಕರಕದಂಬದಿಂದಂ ನೀಲೋ ।
ತ್ಕರಮಂ ಮೌಕ್ತಿಕಮಂ ಪೋ
ಲ್ತರೆ ಮೆಱೆದಳ್ ಮಾಲೆಗಾರ್ತಿ ಮಣಿಗಾರ್ತಿಯವೋಲ್ ।। ೮೬

ವ।। ಆ ಮಾಲೆಗಾರ್ತಿಯರ ನಡುವೆಯೋರ್ವ ಪಣ್ಯಾಂಗನೆಯಿರೆ ಕಂಡು

ಕಂ।। ನಗೆಗಣ್ಗಳ ಕಾಂತಿಯ ಸೆ
ಳ್ಕುಗುರ್ಗಳ ಕಾಂತಿಯ ಕರದ್ವಯದ ಕಾಂತಿಯ ಮಾ ।
ಲೆಗಳಂ ಹೊಸಹೂವಿನ ಮಾ
ಲೆಗೆತ್ತು ಬೆಲೆಗೊಟ್ಟು ಕೊಂಡು ನಗಿಸಿದನೊರ್ವಂ ।। ೮೭

ವ।। ಅಂತುಮಲ್ಲದೆ

ಉ।। ಎತ್ತಿದುದೊಂದು ಮಾಲೆ ಪೊಸಪೂವಿನ ಬಿಲ್ಲವೊಲಾಗೆ ಮೀಱೆ ಬೆಂ
ಬಿತ್ತುವ ನೋಟಮಂಗಜನ ಬಾಣದವೋಲಿರೆ ಕಾಯಕಾಂತಿ ಸೈ ।
ತೊತ್ತಿದ ಮೌರ್ವಿಯಂತಿರೆಸಲೆಂದು ಯುವೋನ್ಮೃಗಮಂ ಕಱುತ್ತು ಕೋ
ಲೆತ್ತುವ ಬೇಂಟೆಕಾರ್ತಿಯವದೋಲೆಸೆದರ್ ಎಗೆ ಮಾಲೆಕಾರ್ತಿಯರ್ ।। ೮೮

ವ।। ಮತ್ತಮಲ್ಲದೆಯುಮಾ ಪುರದಲ್ಲಿ

೮೬. ಮತ್ತೊಬ್ಬಳು ಮಾಲೆಗಾರ್ತಿ, ಅವಳು ಹಿಡಿದಿರುವ ಮಾಲೆಯಲ್ಲಿರುವ ಮಲ್ಲಿಗೆ-ಮೊಲ್ಲೆಗಳಲ್ಲಿ ದುಂಬಿಗಳು ಮಕರಂದಪಾನ ಮಾಡುತ್ತಿವೆ. ಅದನ್ನು ನೋಡಿದರೆ ನೀಲ ಮತ್ತು ಮುತ್ತುಗಳನ್ನು ಪೋಣಿಸಿದ ಮಾಲೆಯಂತೆ ಕಾಣುತ್ತಿದೆ. ಇದರಿಂದ ಆ ಮಾಲೆಗಾರ್ತಿಯು ಮಣಿಗಾರ್ತಿ(ಮಣಿ ಮಾರುವವಳು)ಯಂತೆ ಕಂಡಳು. ವ।। ಅವರ ಮಧ್ಯೆ ಒಬ್ಬಳು ಬೆಲೆವಣ್ಣು, ೮೭. ಅವಳ ನಗೆ ಕಣ್ಣುಗಳ ಕಾಂತಿ, ಚೂಪಾದ ಉಗುರುಗಳ ಕಾಂತಿ, ನಳಿತೋಳುಗಳ ಕಾಂತಿ ಮಾಲೆಗಳನ್ನೇ ಹೊಸ ಹೂವಿನ ಮಾಲೆಗಳೆಂದು ಬಗೆದು ಬೆಲೆಗೊಟ್ಟು ಕೊಂಡು ಒಬ್ಬ ಎಲ್ಲರನ್ನೂ ನಗಿಸಿದ. ವ।। ಅದೂ ಅಲ್ಲದೆ ೮೮. ಅಲ್ಲಿರುವ ಮಾಲೆಗಾರ್ತಿಯರು ಯುವಕರೆಂಬ ಮೃಗಗಳನ್ನು ಉದ್ದೇಶಿಸಿ ಬಾಣಗಳನ್ನು ಬಿಡುವ ಬೇಂಟೆಕಾರ್ತಿಯರೆಂಬಂತೆ ಎಸೆದರು. ಈ ಬೇಂಟೆಕಾರ್ತಿಯರಿಗೆ ಅವರು ಹಿಡಿದು ಎತ್ತಿರುವ ಹೂವಿನ ಮಾಲೆಯೆ ಹೊಸ ಹೂವಿನ ಬಿಲ್ಲು, ಯುವಕರನ್ನು ಬೆಂಬತ್ತುವ ನೋಟವೇ ಕಾಮನ ಬಾಣ, ಅವರ ಶರೀರ ಕಾಂತಿಯೆ ಶಿಂಜಿನಿ (ಬಿಲ್ಲಿಗೆ ಬಿಗಿದ ದಾರ), ಇದರಿಂದ ಅವರು ಬೇಂಟೆಗಾರ್ತಿಯರೆ ಎಂಬಂತಿದ್ದರು! ವ।। ಅಲ್ಲದೆ ಆ ಪುರದಲ್ಲಿ,

ಚಂ॥ ಎಸೆಯೆ ಪುರಂಧ್ರಿಯರ್ ಪಡೆದು ಸಂಗಮಿರ್ದು ಮನೋನುರಾಗದಿಂ
ದಸುವೆಯಕಲ್ಗಳಂ ತೊಳೆದು ಚಂದನಮಂ ಪನಿನೀರ್ಗಳಿಂದೆ ಚಾ ।
ರಿಸಿ ಹಿಮಚೂರ್ಣಮಂ ತಳಿದು ಕಂದುಗಳಂ ಪಿಡಿದೌಂಕಿ ನೂಂಕಿದರ್
ದೆಸೆ ದೆಸೆಗೆಲ್ಲ ಕಂಪೆಸಗೆ ಗಟ್ಟಿಮಗುಳ್ಚುತೆ ಗಟ್ಟಿವಳ್ತಿಯರ್ ॥ ೮೯

ಚಂ॥ ಸುಳಿಗುರುಳಾಡೆ ತೋಳ್ಗಳೆಡೆಯಾಡೆ ಬೆಮರ್ ಮಿಗೆ ಮೂಡೆ ಸುಯ್ಲೆರ್
ಮಿಳಿರೆ ಕುಚಂಗಳೊತ್ತರಿಸೆ ಕಕ್ಷಪುಟಂ ನಸುದೋಱೆ ಮೇಲುದಿಂ ।
ಬಳಿಯೆ ಕರಂ ಕರಂ ಕೊರಗೆ ಸೋರ್ಮುಡಿ ಲಂಬಿಸೆ ಕರ್ಣಪೂರಿತೋ
ತ್ಪಳಮೊಲೆದಾಡೆ ಗಟ್ಟಿಗಳನಂದು ಮಗುಳ್ದಿದರಿಂದುವಕ್ತ್ರೆಯರ್ ॥ ೯೦

ಕಂ॥ ಚಂದನಗಂಧಕ್ಕಂ ವದ
ನೇಂದೀವರ ಪರಿಮಳಕ್ಕಮೆಱಗುವ ಭೃಂಗೀ ।
ವೃಂದಮನುಱೆ ಸೋವುತ್ತುಂ
ಮಂದಯ್ಸಿ ಮಗುಳ್ಚಿ ಗಟ್ಟಿವಳ್ತಿಯರೆಸೆಗುಂ ॥ ೯೧

ಬೆಳಗಿನ ಬಿಂಬಂಗಳನಂ
ತಳವಡೆ ತರತರದಿನಿಳಿಪಿದಂತಿರ್ದುವು ನಿ ।
ರ್ಮಳ ಪಾತ್ರಾಕುಲದಿಂದಂ
ತೊಳತೊಳಗಿರುತಿರ್ಪ ಕಂಚುಗಾಱರ ಪಸರಂ ॥ ೯೨

ಚಾರುತರ ವಿಮಳ ಮೌಕ್ತಿಕ
ಹಾರಾದಿ ಸಮಸ್ತರತ್ನರಾಶಿಗಳಿಂದಂ ।
ನೀರೋಡಿದ ರತ್ನಾಕರ
ದೋರನ್ನಮದಾಯ್ತು ರನ್ನವಸರಂ ಪುರದೊಳ್ ॥ ೯೩

೮೯. ಅಲ್ಲಿರುವ ಪುರಂಧ್ರಿಯರು (ಗಂಡ ಮತ್ತು ಮಗ ಇರುವ ಸ್ತ್ರೀ), ಜೊತೆಗಿದ್ದು ಮನೋನುರಾಗದಿಂದ ಅರೆಯುವ ಕಲ್ಲುಗಳನ್ನು ತೊಳೆದು ಪನ್ನೀರಿನಿಂದ ಚಂದನವನ್ನು ತೆಗೆಯುವಂದು ಹಿಮಚೂರ್ಣವನ್ನು ತಳಿದು ಗುಂಡುಕಲ್ಲುಗಳನ್ನು ಹಿಡಿದು ಔಂಕಿ, ನೂಕಿದರು; ಇದರಿಂದ ದಿಕ್ಕು ದಿಕ್ಕಿಗೂ ಸುವಾಸನೆ ಹರಡಿತು. ಹೀಗೆ ಆ ಗಟ್ಟಿವಳ್ತಿಯರು ಗಂಧವನ್ನು ತೆಯ್ಯುತ್ತಿದ್ದರು. ೯೦. ಗಂಧತೇಯುವ ಇಂದುಮುಖಿಯರ ವರ್ಣನವಿದು. ತೇಯವ ವಯ್ಯಾರದಲ್ಲಿ ಅವರ ಸುಳಿ ಮುಂಗುರುಳುಗಳು ಆಡುತ್ತಿದ್ದವು, ತೋಳು ಸಂದಿಯಲ್ಲಿ ಬೆವರು ಮೂಡಿತು, ಸುಯ್ಲೆರು (ಸುವಾಸನೆಯ ಉಸಿರು) ಸೂಸಿತು, ಸ್ತನಗಳು ಒತ್ತರಿಸಿದವು, ಕಕ್ಷ (ಕಂಕುಳು) ಪುಟವು ತುಸು ಕಂಡಿತು. ಮೇಲುದು (ಸೆರಗು) ಜಾರಿತು, ಕೈಸೋತಿತು, ಸೋರ್ಮುಡಿ ಲಂಬಿಸಿತು, ಕರ್ಣಪೂರವಾಗಿ ಧರಿಸಿದ್ದ ನೈದಿಲೆ ಒಲೆದಾಡಿತು. ೯೧. ಚಂದನಗಂಧಕ್ಕೆ, ಅವರ ವದನಕಮಲದ ಪರಿಮಳಕ್ಕೆ ಎರಗುವ ಹೆಣ್ಣುದುಂಬಿಗಳನ್ನು ಸೋವುತ್ತಾ ಆ ಗಟ್ಟಿವಳ್ತಿಯರು ನಿಧಾನವಾಗಿ ಗಂಧತೇಯುತ್ತಿದ್ದರು. ೯೨. ಅಲ್ಲಿರುವ ಕಂಚುಗಾರರ ಅಂಗಡಿಗಳು; ಅಲ್ಲಿ ನಿರ್ಮಲವಾದ ಪಾತ್ರೆಗಳನ್ನು ಜೋಡಿಸಿದ್ದರು. ಅವುಗಳಲ್ಲಿ ತೊಳಗುವ ಬೆಳಗಿನ ಬಿಂಬಗಳನ್ನೇ ತರತರದಿಂದ ಅಳವಡಿಸಿದಂತಿತ್ತು. ೯೩. ಮನೋಹರವಾದ ಸ್ವಚ್ಛವಾದ ಮುತ್ತಿನ ಹಾರವೇ ಮೊದಲಾದ ಸಮಸ್ತ ರತ್ನಗಳ ರಾಶಿಗಳು ಅಲ್ಲಿವೆ. ಇದರಿಂದ ರತ್ನಪಡಿ

ತೀವಿರ್ಪಶ್ವಾವಳಿಯ ಗ
ಜಾವಳಿಯ ನರಾವಳಿಗಳ ವಿಕ್ರಯದಿಂದಂ ।
ಭಾವಿಸೆ ದೂಸಿಗವಸರಂ
ಮೂವರ್ ರಾಯರನೆ ಮಾಱುವಂತೆಸೆದಿರ್ಕುಂ ೯೪

ಕಂ॥ ತನತನಗೆ ಪೊನ್ನರಾಶಿಯ
ನನವರತಂ ಮುಂದುಗೊಂಡನೇಕ ಕುಬೇರರ್ ।
ಜನಿಯಿಸಿ ನಿಂದಂತಿರ್ಪುದು
ಕನಕವ್ಯವಹಾರದಿಂದೆ ವೈಶ್ಯಕದಂಬಂ ॥ ೯೫

ವ॥ ಮತ್ತಮಾ ಪುರದಲ್ಲಿ

ಕಂ॥ ನೀಲದ ಪಚ್ಚೆಯ ಪವಳದ
ಶಾಲೆಗಳ ಮರೀಚಿಯಂ ಪುರಂದರಧನುಗೆ ।
ತ್ತಾಲೋಕಿಸಿ ನವನರ್ತನ
ಲೀಲೆಯನೊಳಕೊಳ್ಳುವಲ್ಲಿ ಪುರದ ನವಿಲ್ಗಳ್ ॥ ೯೬

ಬೆಳೆಬೆಳೆಪ ಸುಧಾಧವಳಿತ
ನಿಳಯಂಗಳ ಧವಳಕಾಂತಿಯಂ ಕೌಮುದಿಗೆ ।
ತ್ತೆಳಸುತ್ತಿರ್ಪುವು ಪಗಲುಂ
ಬಳಸಿ ಚಕೋರಾಳಿ ಪುರದ ನಿಳಯದೊಳೆಲ್ಲಂ ॥ ೯೭

ವ॥ ಅಂತುಮಲ್ಲದೆ,

ಕಂ॥ ಒದವಿದ ಮುತ್ತಿನ ಮಾಣಿ
ಕ್ಯದ ಗೋಮೇಧಿಕದ ಪುಷ್ಯರಾಗದ ವೈಡೂ ।
ರ್ಯದ ವಜ್ರದ ಪಚ್ಚೆಯ ಪವ
ಳದ ನೀಲದ ಕಳಶದಿಂ ಶಿವಾಲಯಮೆಸೆಗುಂ ॥ ೯೮

ವ್ಯಾಪಾರದ ಆ ಬೀದಿಯು ನೀರು ಇಲ್ಲದ ರತ್ನಾಕರ (ಸಮುದ್ರ)ದಂತೆ ಇತ್ತು. ೯೪. ಅಲ್ಲಿ ನೆರೆದಿರುವ ಬಟ್ಟೆ ಅಂಗಡಿಗಳವರು ಅಶ್ವ-ಗಜ-ನರ (ಕಾಲಾಳು) ಸೈನ್ಯಗಳನ್ನು ಮಾರುವ ಮೂವರು ಅಶ್ವಪತಿ-ಗಜಪತಿ ಮತ್ತು ನರಪತಿಗಳೋ ಎಂಬಂತಿದ್ದರು. ೯೫. ಅಲ್ಲಿಯ ವೈಶ್ಯರು; ಅವರು ಹೊನ್ನ ರಾಶಿಗಳು ತನತನಗೆ ಬೇಕೆಂದು ಮುಂದುವರಿದು ಬರುತ್ತಿದ್ದಾರೆ. ಇದನ್ನು ನೋಡಿದರೆ ಕುಬೇರರೇ ಇಲ್ಲಿ ಜನಿಸಿ ಕನಕ ವ್ಯವಹಾರ ಮಾಡುತ್ತಿರುವಂತಿದೆ. ೯೬. ನೀಲ, ಪಚ್ಚೆ ಮತ್ತು ಹವಳದ ಶಾಲೆಗಳ ಕಿರಣಗಳ ಮೊತ್ತವನ್ನು ಕಂಡು ಕಾಮನಬಿಲ್ಲು ಎಂದು ತಿಳಿದ ಆ ಪುರದ ನವಿಲುಗಳು ನರ್ತಿಸತೊಡಗಿವೆ. ೯೭. ಅಲ್ಲಿ ಬೆಳಗುತ್ತಿರುವ ಸುಧಾಲೇಪನದಿಂದ ಬಿಳುಪೇರಿದ ಮಲೆಗಳ ಬಿಳಿಯ ಕಾಂತಿಯನ್ನು ಬೆಳದಿಂಗಳೆಂದು ತಿಳಿದ ಚಕೋರ ಪಕ್ಷಿಗಳು ಹಗಲಿನಲ್ಲಿಯೇ ವಿಹರಿಸತೊಡಗಿವೆ. ವ॥ ಅದೂ ಅಲ್ಲದೆ, ೯೮. ಅಲ್ಲಿಯ ಶಿವಾಲಯ; ಅದು ಮುತ್ತು, ಮಾಣಿಕ್ಯ, ಗೋಮೇಧಿಕ, ಪುಷ್ಯರಾಗ, ವೈಡೂರ್ಯ, ವಜ್ರ, ಪಚ್ಚೆ, ಹವಳ ಮತ್ತು ನೀಲಾದಿ ರತ್ನಗಳ ಕಲಶಗಳಿಂದ ಅಲಂಕೃತವಾಗಿದೆ.

ಮ।।ಸ್ರ।। ಶ್ರುತಿಘೋಷಂ ಮಂತ್ರಘೋಷಂ ನತಜನಜಯಘೋಷಂ ಪುರಾಣಪ್ರಘೋಷಂ
ಸ್ಮೃತಿಘೋಷಂ ಗೀತಘೋಷಂ ಪರಶಿವ ವಿಮಳಜ್ಞಾನಸಂವಾದಘೋಷಂ ।
ಕೃತಿಘೋಷಂ ಯಜ್ಞಘೋಷಂ ಪರಿಣಯನ ಮಹೋತ್ಸಾಹವಿಸ್ತಾರಘೋಷಂ
ಸತತಂ ತೀವಿರ್ಪುದಂತಾ ಪುರದೊಳಭವಗೇಹಾವಳೀ ವಾದ್ಯಘೋಷಂ ।। ೯೯

ವ।। ಮತ್ತಮಾ ಪುರದ ರಾಜವೀಥಿಯಲ್ಲಿ

ಮ।।ಸ್ರ।। ವಿಳಸತ್ ಸೇವಾಪುರಂಧ್ರೀನಿಕರ ಚರಣಮಂಜೀರ ತನ್ಮುದ್ರಿಕಾ ಮಂ
ಜುಳನಾದಂ ರಾಜಪುತ್ರಪ್ರಕರ ಪರಿವೃತಾಶೇಷಗೀತಂ ಪ್ರಣಾದಂ ।
ಜಳಪಾನಾಸಕ್ತ ಮುಕ್ತದ್ವಿಪಕುಲ ನಿಗಳವ್ರಾತ ಸಂಭೂತ ನೂತ್ನೋ
ಜ್ವಳನಾದಂ ಪೊಣ್ಮುತಿರ್ಕುಂ ನರಪಯುತ ಕವೀಂದ್ರಾಸ್ಯ ಸಂಸ್ತೋತ್ರನಾದಂ ।। ೧೦೦

ಕಂ।। ತಿಂತಿಣಿಪ ನಿಳಯದಿಂ ಜನ
ದಿಂ ತರದಿಂದೆಸೆವ ವೀಥಿಯಿಂ ನೃಪಕುಲದಿಂ ।
ದಂ ತರುಣೀತತಿಯಿಂ ತಾ
ನಿಂತೊಪ್ಪುವುದಿಳೆಯೊಳೋಷಧಿಪ್ರಸ್ಥಪುರಂ ।। ೧೦೧

ಉ।। ಶ್ರೀ ಪರಮೇಶ್ವರಾಂಘ್ರಿ ಸರಸೀಜಮಧುವ್ರತನುದ್ಧತೇಜನು
ರ್ವೀಪತಿ ಸರ್ವದಿಗ್ಗರಿತ ಕೀರ್ತಿಯುತಂ ವರಭೂಭುಜಂ ಜಗ ।
ದ್ದೀಪಕನತ್ಯುದಾರನತಿಧೀರನತಿಸ್ತುತಿಪಾತ್ರಗೋತ್ರಸಂ
ತಾ ಪುರನಾಥನೊಪ್ಪುವನುದಾತ್ತಗುಣಂ ಗಿರಿರಾಜನುರ್ವಿಯೊಳ್ ।। ೧೦೨

೯೯. ಆ ಪಟ್ಟಣದ ಶಿವಾಲಯಗಳಲ್ಲಿ ವೇದಘೋಷ, ಮಂತ್ರಪಠನ, ಶರಣಾಗುತ್ತಿರುವ ಭಕ್ತರ ಜಯಘೋಷ, ಪುರಾಣಪ್ರವಚನ, ಸ್ಮೃತಿವಿಚಾರ, ಗೀತಪಠನ, ಪರಶಿವ ವಿಚಾರ ಸಂವಾದ, ಕೃತಿ ಪಾರಾಯಣ, ಯಜ್ಞಘೋಷ, ಮದುವೆಯ ಮಹೋತ್ಸಾಹದ ವಿಸ್ತಾರವಾದ ಘೋಷ ಇವುಗಳು ನಿರಂತರವಾಗಿ ನಡೆಯುತ್ತಿವೆ. ವ।। ಆ ಪುರದ ರಾಜವೀಥಿಯಲ್ಲಿ ೧೦೦. ಶಿವನ ಸೇವೆಗಾಗಿ ಬರುತ್ತಿರುವ ಪುರಂಧ್ರಿಯರ ಚರಣ ಮಂಜೀರಗಳ ಮಂಜುಳನಾದ, ರಾಜಪುತ್ರರು ಹಾಡುತ್ತಿರುವ ಗೀತೆಗಳ ನಾದ, ನೀರು ಕುಡಿಯುತ್ತಿರುವ ಮುಕ್ತವಾದ ಆನೆಗಳ ಸರಪಳಿಗಳಿಂದ ಹುಟ್ಟಿದ ನೂತನ ಉಜ್ವಲನಾದ ಮತ್ತು ರಾಜನೊಂದಿಗಿರುವ ಕವೀಂದ್ರರು ಸ್ತುತಿಸುವ ಸ್ತೋತ್ರಗಳ ನಾದಗಳು ಅಲ್ಲಿ ಮೊಳಗುತ್ತಿದ್ದವು. ೧೦೧. ಆ ಓಷಧಿಪ್ರಸ್ಥಪುರವು ಕಿಕ್ಕಿರಿದ ಮನೆಗಳಿಂದಲೂ, ಜನನಿಬಿಡವಾದ ಬೀದಿಗಳಿಂದಲೂ, ರಾಜಸಮೂಹದಿಂದಲೂ, ಯುವತಿ ಯರಿಂದಲೂ ಒಪ್ಪುತ್ತಿತ್ತು. ೧೦೨. ಆ ಪುರದ ಒಡೆಯ ಉದಾತ್ತ ಗುಣಶಾಲಿಯಾದ ಗಿರಿರಾಜ; ಆತ ಶ್ರೀಪರಮೇಶ್ವರನ ಪಾದಕಮಲದಲ್ಲಿ ದುಂಬಿಯಂತಿದ್ದಾನೆ. ಮಹಾ ತೇಜಸ್ವಿ, ಸಾರ್ವಭೌಮ, ದಿಗಂತವಿಶ್ರಾಂತವಾದ ಕೀರ್ತಿಶಾಲಿ, ಶರಣಾದ ಅನೇಕ ರಾಜರುಳ್ಳವ, ಜಗತ್ತನ್ನು ಬೆಳಗುವವನು, ಉದಾರಿ, ಧೀರ, ಸ್ತುತಿಗೆ ಪಾತ್ರವಾದ

ಮ॥ ಪರಭೂಪಾಲ ವಿಶಾಲ ಮೌಳಿಮಣಿಸಂಘಾತ ಪ್ರಭಾಪುಂಜವಿ
ಸ್ತರಪಾದಂ ನತ ಸರ್ವಲೋಕನಭಯಂ ತೀವ್ರಪ್ರತಾಪಂ ಮಹೀ ।
ಧರರಾಜಂ ಮಹಿಮಾಂಬುರಾಶಿಯಚಲಂ ಭರ್ಗಪ್ರಿಯಂ ಭೋಗಭಾ
ಸುರನುದ್ದಾಮಗುಣಂ ಪ್ರಚಂಡಭುಜನೊಪ್ಪಿರ್ಪಂ ನಗಾಧೀಶ್ವರಂ ॥ ೧೦೩

ಚಂ॥ ಎಱಗದ ಭೂಪರಿಲ್ಲ ಬೆಸಕೆಯ್ಯದ ರಾಜಕುಮಾರರಿಲ್ಲ ಕೂ
ರ್ತಜೆಯದ ಪೆಣ್ಗಳಿಲ್ಲ ತಲೆವಾಗದ ಚಾಗಿಗಳಿಲ್ಲ ತಳ್ತು ಕು ।
ಕ್ಕುಜೆಸದ ವೀರರಿಲ್ಲ ನತರಾಗದ ಬಲ್ಲಿದರಿಲ್ಲ ಕೀರ್ತಿಯಿಂ
ತುಱುಗದ ದಿಕ್ಕತಾನಮಣಮಿಲ್ಲೆನೆ ಬಾಳ್ವನಗಾಧಿನಾಯಕಂ ॥ ೧೦೪

ಉ॥ ಆತನ ಪುಣ್ಯವಲ್ಲಭೆ ವಿರಾಜಿತೆ ಪೂಜ್ಯೆ ಪರಾಪರೈಕ ವಿ
ಖ್ಯಾತೆ ಪತಿವ್ರತಾಗುಣವಿಭೂಷಣೆ ಸಲ್ಲಲಿತಾಂಗಿ ಸತ್ಯೆ ಶೈ ।
ವಾತುರೆ ಶಾಂತೆ ಶಾಶ್ವತೆ ಶುಭಾಚರಣಾನ್ವಿತೆ ಮಾನ್ಯೆ ಸದ್ಗುಣ
ವಾತೆ ವಿಳಾಸವಿಭ್ರಮಕಳಾನಿಧಿ ಮೇನೆಯೆನಿಪ್ಪಳುರ್ವಿಯೊಳ್ ॥ ೧೦೫

ವ॥ ಇಂತು ಪಿತೃಗಳ ಮನದೊಳ್ ಪುಟ್ಟಿದ ಸಕಲ ಗುಣಾಲಂಕೃತೆಯಪ್ಪ ಮೇನಾದೇವಿ ನಿಜವಲ್ಲಭೆಯಾಗೆ ನಿಶ್ಚಿಂತತೆಯಿಂದಿರ್ದಿರುಂ ಪರ್ವಿದ ಹರ್ಷಕ್ಕಿಂಬುಗೊಟ್ಟು ನಲಿನಲಿದು ಕೆಲವು ದಿನಂ ಸಮಸುಖದೊಳಿರ್ದುಂ ಮೈನಾಕನೆಂಬ ಕುಮಾರನಂ ಪಡೆದು ಸಕಳಸಾಮ್ರಾಜ್ಯಧರಿತ ದಿಗ್ಪಳಯನಾಗಿ ಅಪ್ರತಿಹತ ಪ್ರತಾಪಭೂಷಣನೆನಿಸಿಯೋಷಧಿಪ್ರಸ್ಥಪುರಕ್ಕೆ ಮಲಯಜತಿಲಕದಂತೆ ವಿರಾಜಿಸುವರಮನೆಯ ಸಭಾನಿಳಯದೊಳ್ ಪ್ರಭಾವಳಯಮೆನಿಸಿದ ನವಕನಕ ಮಣಿಗಣ

ಸದ್ವಂಶವುಳ್ಳವನು. ೧೦೩. ಆ ಗಿರಿರಾಜನು ಶತ್ರುರಾಜರು ಮಣಿವಾಗ ಅವರ ಕಿರೀಟದಲ್ಲಿನ ಮಣಿಪ್ರಭೆಗಳಿಂದ ಬೆಳಗುವ ಪಾದಗಳುಳ್ಳವನು, ಸರ್ವಲೋಕವಂದ್ಯ, ಭಯರಹಿತ, ತೀವ್ರಪ್ರತಾಪಶಾಲಿ, ಪರ್ವತಗಳಿಗೆಲ್ಲ ರಾಜ, ಮಹಿಮಾವಂತ, ಅಚಲ, ಶಿವನಿಗೆ ಪ್ರಿಯನಾದವನು, ಭೋಗಭಾಸುರ, ಶ್ರೇಷ್ಠ ಗುಣಶಾಲಿ, ಪ್ರಚಂಡ ಪರಾಕ್ರಮಶಾಲಿ ಎನಿಸಿದ್ದನು. ೧೦೪. ಆ ನಗಾಧಿರಾಜನಿಗೆ ವಂದಿಸದೆ ಇರುವ ರಾಜರಿಲ್ಲ, ಗೌರವಿಸದ ರಾಜಪುತ್ರರಿಲ್ಲ, ಒಲಿಯದ ಪೆಣ್ಣುಗಳಿಲ್ಲ, ತಲೆಬಾಗದಿರುವ ತ್ಯಾಗಿಗಳಿಲ್ಲ, ಮಣಿಯದ ವೀರರಿಲ್ಲ, ಶರಣಾಗದ ಬಲವಂತರಿಲ್ಲ, ಆತನ ಕೀರ್ತಿ ವ್ಯಾಪಿಸದೆ ಇರುವ ಯಾವ ದಿಕ್ಕೂ ಇಲ್ಲ ಎಂಬಂತೆ ಆತ ಎಲ್ಲರಿಗೂ ಗೌರವಾರ್ಹ ನಾಗಿದ್ದನು. ೧೦೫. ಆತನ ಪುಣ್ಯಾಂಗನೆ ಮೇನಾದೇವಿ; ಆಕೆ ಮಹಾಸೌಂದರ್ಯವತಿ, ಪೂಜ್ಯಳು, ಪರಾಪರಕ್ಕೆಲ್ಲ ಮುಖ್ಯಳಾದವಳು, ಪತಿವ್ರತೆ, ಸತ್ಯೆ, ಶಿವಭಕ್ತಿಯಲ್ಲಿ ಆಸಕ್ತಿಯುಳ್ಳವಳು, ಶಾಂತೆ, ಶಾಶ್ವತೆ, ಶುಭಕರ್ಮನಿರತೆ, ಸದ್ಗುಣವತಿ, ವಿಲಾಸ-ವಿಭ್ರಮಕಲೆಗಳಿಗೆ ನಿಧಿ, ಎಂಬಂತೆ ಆಕೆ ಇದ್ದಳು. ವ॥ ಹೀಗೆ ಪಿತೃಗಳ ಮನೋಭವೆಯಾದ ಮೇನಾದೇವಿಯು ಹಿಮವಂತನಿಗೆ ಮನದನ್ನೆಯಾದಳು. ಆ ದಂಪತಿಗಳು ನಿಶ್ಚಿಂತೆಯಿಂದ ಆನಂದವಾಗಿ ಕೆಲವು ದಿನವಿರಲು ಅವರಿಗೆ ಮೈನಾಕನೆಂಬ ಪುತ್ರನುದಿಸಿದನು. ಸಕಲಸಾಮ್ರಾಜ್ಯವನ್ನು ಅಪ್ರತಿಮ ಪ್ರತಾಪದಿಂದ ಆಳುತ್ತಿದ್ದಾನೆ ಹಿಮವಂತ. ಓಷಧಿಪ್ರಸ್ಥಪುರಕ್ಕೆ ಅವರ ಅರಮನೆ ಮಲಯಜತಿಲಕದಂತಿದೆ. ಅದರಲ್ಲಿ ಮಣಿಖಚಿತ

ಭಾಸುರ ನಿವಾಸಭದ್ರಾಸನಮಂ ದುಷ್ಪವಿದ್ವಿಷ ವಿದ್ರಾವಣನೆನಿಪ್ಪ ಶೈಲರಾಜನವಷ್ಟಂಭಸಲೊಡಂ, ಸಿಂಹಾಸನದಿರ್ಕೆಲದೊಳ್ ನಿಂದ ವೀರಲಕ್ಷ್ಮಿ ವಿಜಯಲಕ್ಷ್ಮಿಯರ್ ಸಕಲ ಭೂಪಾಲರ ಸುಕೃತ ಬೀಜರಾಜಿಗಳಂ ಜಗದ್ವಿಜಯವಲ್ಲಭೈಕಪಟ್ಟಕ್ಕೆ ವೀರಶೇಷೆಯನಿಕ್ಕುವಂತೆ ಬಿಂಕದಿಂ ಕೊಂಕಿ ನಿಂದು ಕಂಕಣ ಝಣಝಣತ್ಕಾರಂ ಸಭೆಯ ಕಿವಿಗೆ ಸವಿಗಳಂ ಸಾಲಿಡೆ ಸೂಳಱೆದಿಕ್ಕುವ ಚಾಮರ ಗ್ರಾಹಿಣಿಯರೊಳಂ, ಮತ್ತಮಾಸ್ಥಾನಮೆಂಬ ನೀರ್‌ತೆಗೆದ ರತ್ನಾಕರದೊಳಲ್ಲಲ್ಲಿ ತರತರಂಬಿಡಿದು ಗುಡಿಸಿದ ರತ್ನರಾಶಿಗಳಿವೆಂಬಂತೆ ಮಣಿನಿಕರಖಚಿತಮಕುಟಕೋಟಿಗಳ್ ಮೆಱೆಯೆ ಬಹುರತ್ನಕದಂಬಕಾಂತಿ ಮಂಡಳಿಸಿ ಪರಿವೇಷಂಗೊಂಡ ರವಿಮಂಡಲದ ಹಿಂಡುಗಳಂತೆ ತೆಕ್ಕನೆ ತೀವಿ ಕಿಕ್ಕಿಱಿಗಿಱಿದು ಕುಳ್ಳಿರ್ದ ಲಾಳ ಗೌಳ ಚೋಳ ಕೇರಳ ಪಾಂಡ್ಯ ಪಲ್ಲವ ಮಗಧ ಮಾಳವ ವಂಗ ಕಳಿಂಗ ಬಂಗಾಳ ತೆಲುಂಗ ಗುರ್ಜರ ಹಮ್ಮೀರ ನೇಪಾಳರ್ ಮೊದಲಾದ ರಾಜಪುತ್ರರ ಪಜ್ಜೆಗಳೊಳಂ, ಮತ್ತಮಾ ಶೈಳಪತಿಗೆ ನೆನೆವ ಮನಂ, ನುಡಿವ ನಾಲಗೆ, ನೋಡುವ ಕಣ್, ಕುಡುವ ಕೆಯ್, ಪಿಡಿವ ಕೈದುಗಳೆನಿಸಿ ಸುರಗುರುವಿನ ಬುದ್ಧಿಯೆಲ್ಲಂ ದೇವಲೋಕ ವಿಳಸಿತಮೆಂದೇಳಿಸಿ ದೈತ್ಯಗುರುವಿನ ಮಂತ್ರಮನಧೋಭುವನ ವಿಳಸಿತಮೆಂದಧಃಕರಿಸಿ ನಿಜಮಂತ್ರಶಕ್ತಿಯಿಂ ಸರ್ವೋರ್ವೀಧರನಿಕಾಯಮಂ ಕಾಲ್ಗೆಱಗಿಸಿಕೊಳ್ವ ಮಂತ್ರಿಗಳ ಮಂತಣದೊಳಂ, ಮತ್ತಮೊತ್ತರದಿನೆತ್ತಿ ನಡೆವೆಡೆಯೊಳರಿರಾಯರ ಗುಹೆ ಗಹ್ವರಂ ಬೆಟ್ಟುಗಟ್ಟ ಬಿದಿರ್ಬೆತ್ತದಿಂದೆತ್ತಲುಂ ಮುತ್ತಲರಿದೆನಿಸಿದರಿ ಬರುದಿನ ಗಿರಿದುರ್ಗಂಗಳಂ ವಜ್ರಧರನಂತಡಿಸಿ ಘುಡುಘುಡಿಸಿ

ರತ್ನಸಿಂಹಾಸನ, ಅದರಲ್ಲಿ ಶತ್ರುಭಯಂಕರನಾದ ಗಿರಿರಾಜ ವಿರಾಜಿಸುತ್ತಿದ್ದಾನೆ. ಸಿಂಹಾಸನದ ಎರಡೂ ಕಡೆಗಳಲ್ಲಿ ವೀರಲಕ್ಷ್ಮಿ ವಿಜಯಲಕ್ಷ್ಮಿಯರಂತೆ ಬಿಂಕದಿಂದ ಕೊಂಕಿನಿಂದು ಚಾಮರಗ್ರಾಹಿಣಿಯರು, ಚಾಮರ ಬೀಸುತ್ತಿದ್ದಾರೆ. ಅದು ಸಕಲ ಭೂಪಾಲರ ಸುಕೃತ ಬೀಜರಾಜಿಗಳನ್ನು ಜಗದ ವಿಜಯಪಟ್ಟಕ್ಕೆ ಕೂಡಿಸಿ ವೀರಶೇಷೆಯನ್ನಿಕ್ಕುವಂತೆ ಇದೆ. ಚಾಮರ ಬೀಸುವಾಗ ಅವರ ಕಂಕಣಝಣತ್ಕಾರ ಸಭೆಯ ಕಿವಿಗೆ ಇಂಪು ತರುತ್ತಿದೆ. ಹಿಮವಂತನ ಸಭಾಸ್ಥಾನವು ನೀರು ತೆಗೆದ ರತ್ನಾಕರ (ಸಾಗರ)ವೊ ಎಂಬಂತೆ ಗುಡಿಸಿ ರಾಶಿ ಮಾಡಿದ ರತ್ನರಾಶಿಗಳಿಂಬಂತೆ ಮಣಿನಿಕರ ಖಚಿತ ಮಕುಟ ಕೋಟಿಗಳು ರಾಜಿಸುತ್ತಿವೆ. ಬಹುರತ್ನಕಾಂತಿಗಳು ಮಂಡಳಿಸಿದ್ದರಿಂದ ಗೂಡುಗಟ್ಟಿದ ರವಿಮಂಡಳಿಗಳ ಹಿಂಡುಗಳಂತೆ ಲಾಳ, ಗೌಳ, ಚೋಳ, ಕೇರಳ ಮೊದಲಾದ ರಾಜಪುತ್ರರು ಪಂಕ್ತಿಕಟ್ಟಿ ಕುಳಿತಿದ್ದಾರೆ. ಮತ್ತು ಆ ಶೈಲಪತಿಗೆ ನೆನೆವ ಮನವೂ, ನುಡಿವ ನಾಲಗೆಯೂ, ನೋಡುವ ಕಣ್ಣೂ, ಕೊಡುವ ಕೈಯೂ, ಹಿಡಿವ ಕೈದು(ಆಯುಧ)ವೂ ಎನಿಸಿ, ಸುರಗುರುವಿನ ಪ್ರಜ್ಞಾಶಕ್ತಿ, ಅದು ದೇವಲೋಕದ ವಿಲಾಸವೆಂದೂ ದೈತ್ಯಗುರು (ಶುಕ್ರಾಚಾರ್ಯ)ವಿನ ಮಂತ್ರಶಕ್ತಿಯು ಅಧೋಭುವನ(ಪಾತಾಳ)ವಿಲಾಸವೆಂದು ತಿರಸ್ಕರಿಸಿ, ನಿಜಮಂತ್ರಶಕ್ತಿಯಿಂದ ಎಲ್ಲ ಪರ್ವತಗಳನ್ನೂ ಕಾಲಿಗೆ ಎರಗಿಸಿಕೊಳ್ಳುವ ಮಂತ್ರಿಗಳನ್ನು ಒಳಗೊಂಡಿದೆ. ಮತ್ತು ಮೇಲೇರಿ ಬರುವ ಅರಿರಾಯರಿಗೆ ಗುಹೆ-ಗಹ್ವರ-ಬೆಟ್ಟ-ಗಟ್ಟ-ಬಿದಿರು-ಬೆತ್ತ ಮೊದಲಾದವುಗಳಿಂದ ಅಸಾಧ್ಯವಾಗಿರುವ ಗಿರಿದುರ್ಗಗಳನ್ನು ವಜ್ರಧರನಂತೆ ಪ್ರತಿಭಟಿಸುತ್ತಿದೆ. ಸಕಲ ತರುಸಮೂಹಗಳಿಂದ ಗುಂಪುಗುಂಪಾಗಿ ಹಬ್ಬಿರುವ ವನದುರ್ಗಗಳನ್ನು ದಾವಾನಲನಂತೆ ಸುಟ್ಟುರಿಸುವ, ಮೇಲಾಗಿ ನಾಲ್ದೆಸೆಗಳಲ್ಲಿ ಸುತ್ತಿಮುತ್ತಿ ಹೆದ್ದೆರೆಗಳ ಘೋಷಣೆಯಿಂದ ಜಲಪೂರ್ಣವಾದ

ಪುಡಿಗುಟ್ಟುವ, ಮತ್ತಂ ಸಕಲತರುನಿಕರದಿಂದಿಡಿದಿಡಿದುರ್ವಿ ಕೊರ್ವಿ ಪರ್ಬಿದ ಮರ್ಬಿಂದಗುರ್ವಿಸುತ್ತಪ್ರತಿಹತಮೆನಿಸಿ ದುಷ್ಪ್ರವೇಶಮಾದ ವನದುರ್ಗಂಗಳಂ ದಾವಾನಳನಂತಟ್ಟಿ ಮುಟ್ಟಿ ಸುಟ್ಟುರಿಪುವ, ಮತ್ತಮಲ್ಲದೆಯುಂ, ನಾಲ್ಕುಂ ದೆಸೆಗಳೊತ್ತರದಿಂ ಸುತ್ತು ಮುತ್ತಿ ನಿಬಿಡತರ ನಿರ್ಘೋಷ ಪ್ರಭೂಷಣ ಲೋಲಕಲ್ಲೋಲ ಮಾಲಾಸಂಘಟ್ಟನ ಸಮುದ್ಭೂತಸಲಿಲ ಪೂರ್ಣಮಾದ ಜಲದುರ್ಗಂಗಳಂ ಬಡಬಾನಳನಂತೆ ನಾಡೆ ಪೀರ್ವ, ನಿಜಭುಜಪ್ರತಾಪಂ ರೂಪುಗೊಂಡಂತೆ ತಂಡತಂಡದೊಳ್ ಕುಳ್ಳಿರ್ದ ದಂಡನಾಥಯೂಥದೊಳಂ ; ಮತ್ತಂ ನಿಜಮಂದಿರದ ರಸಿಕರ ಗಾಯಕರ ಗೋಷ್ಠಿಯೊಳ್ ಪುಟ್ಟಿದ ರಸಕಾವ್ಯಗಾನಮನುಱೆ ಕೇಳ್ದು ಸವಿವ, ಮುಖಮಂಡಲದ ಲಲಿತಲಾವಣ್ಯಮಂ ಕಮನೀಯಕಾಂತಿಯಂ ಕನ್ನಡಿಯೊಳ್ ಕಳ್ದು ನೋಳ್ಪ, ಸಖೀಜನಂ ಕಲಿಸಿದ ಸುಖಪ್ರತಿಕೂಲವಚನಮಂ ಮುಖದ ಮುನಿಸುಮಂ ಪ್ರಿಯ ದರ್ಶನದಿಂ ಮುನ್ನಮೆ ಮಱೆದು ನಲ್ಲನೊಳ್ ಸಲ್ಲಿಲೆಯಿಂ ನೆರೆವ, ಕೇಳೀವನದ ಬನದಕ್ಕೆ ಇನಿಯಂ ಪೋದನಿತು ಬೇಗಮಂ ಸೈರಿಸಲಾಱದೆ ಪರಿತಂದು ಪೆಜ್ಜವನೆಯ ಸಿರಿಮಂಚದೊಳ್ ಕುಳ್ಳಿರ್ದು ಬಳ್ಳಿವರಿವ ನೇಹಂ ಕುದಿನಿಮಿರೆ ಸುರತಸಮಯದೊಳಿನಿಯನಾಡಿದ ಸವಿನುಡಿ ಗಳನುಸಿರ್ದುಸಿರ್ದು ಸವಿ ಸವಿದಾಲಿಸಿ ಪುಳಕಿಸುತುಂ ಕೆಲಬಲನಂ ನೋಡಿ ಭಿತ್ತಿಯ ಚಿತ್ರಂ ಕಾಣ್ಗುಮೆಂದು ನಾಣ್ಚಿ ನಿಲುತ್ತೆ ತಡೆದ ನಲ್ಲನಂ ಕಣ್ಮುಚ್ಚಿ ನೆನೆದು ಮನದ ಕಣ್ಣೊಳ್ ಸನ್ನೆಗೆಯ್ದು ಬುದ್ಧಿಯಿಂ ಬರಿಸಿಯಹಂಕಾರದಿಂ ಪಿಡಿದು ಚಿತ್ತದೊಳ್ ನೆರೆದು ಭಾವರತಿ ಒಲಿದು ಬಂದಂತೆ ಬಗೆದು ಕಣ್ದೆಱೆದು ಕಾಣದೆ ಬಯಲನಪ್ಪಿದ ತೋಳ್ ಬಂಜೆಯಾಗೆ ಬಾಡಿದ ಲತೆಯಂತೆ ಕಂದಿ ಕುಂದುವ ಪೊಳ್ತುಮಱೆಯಿಲ್ಲದೆ ಪೊಸಂತಿಲಂ ಪೊಱಮಡಲಱೆಯದೋಲಗಕ್ಕೆ ಪೋಪಲ್ಲಿ ದಾದಿಯ ಸೆರಗಂ ಪಿಡಿದು ನಡೆವಲ್ಲಿ ರಾಜವೀಥಿಯೊಳ್ ಸುಳಿವ ಜವ್ವನಿಗರಂ ಕಂಡು ಪೊಲಂಬುಗೆಟ್ಟ ಪುಲ್ಲೆಯಂತೆ

ಜಲದುರ್ಗಗಳನ್ನು ಬಡಬಾನಳನಂತೆ ಚೆನ್ನಾಗಿ ಹೀರುವ, ತನ್ನ ಭುಜಪ್ರತಾಪವೇ ರೂಪುಗೊಂಡಂತೆ ತಂಡತಂಡವಾಗಿ ಕುಳಿತಿರುವ ದಂಡನಾಥರ ಸಮೂಹಗಳಲ್ಲಿಯೂ; ಮತ್ತು ತಮ್ಮ ತಮ್ಮ ಮನೆಗಳಲ್ಲಿ ರಸಿಕರ ಗಾಯಕರ ಗೋಷ್ಠಿಗಳಲ್ಲಿ ರಚಿತವಾದ ರಸಕಾವ್ಯಗಾನವನ್ನು ಸವಿಯುವ, ತಮ್ಮ ಮುಖಮಂಡಲಗಳ ಲಲಿತ ಲಾವಣ್ಯವನ್ನು ಕನ್ನಡಿಗಳಲ್ಲಿ ಕದ್ದುನೋಡುವ, ಸಖಿಯರು ಕಲಿಸಿದ ಸುಖಕ್ಕೆ ಪ್ರತಿಕೂಲವಾದ ಮಾತುಗಳನ್ನು, ಹುಸಿ ಮುನಿಸನ್ನು ಪ್ರಿಯರ ದರ್ಶನಕ್ಕೆ ಮೊದಲೇ ಮರೆತು ತಮ್ಮ ನಲ್ಲರಲ್ಲಿ ರಮಿಸುವ, ವಿನೋದಕ್ಕಾಗಿ ಕೇಳೀವನಕ್ಕೆ ಹೋದ ಇನಿಯನ ವಿರಹವನ್ನು ಸೈರಿಸಲಾರದೆ ಓಡಿಬಂದು ಶಯನಗೃಹದ ಮಂಚದಲ್ಲಿ ಕುಳಿತು ಬೆಳೆದ ಸ್ನೇಹವು ಚಿಗುರಿ, ಸುರತ ಸಮಯದಲ್ಲಿ ಇನಿಯನು ನುಡಿದ ಸವಿಮಾತುಗಳನ್ನು ನೆನೆಸಿಕೊಂಡು ಅವುಗಳನ್ನು ಕೇಳಿ ಕೇಳಿ, ನವಿರೇರಿ ಸುತ್ತಲೂ ನೋಡಿ ಭಿತ್ರಚಿತ್ರಗಳು ಕಾಣುವುವೆಂದು ನಾಚಿ ನಿಲ್ಲುತ್ತಾ, ತಡೆದ ನಲ್ಲನನ್ನು ಕಣ್ಣುಮುಚ್ಚಿ ನೆನೆದು ಮಾನಸಿಕವಾಗಿ ಸನ್ನೆಮಾಡಿ, ಬುದ್ಧಿಯಿಂದ ಬರಮಾಡಿಕೊಂಡು ಅಹಂಕಾರದಿಂದ ಹಿಡಿದು, ಚಿತ್ತದಲ್ಲಿ ನೆರೆದು, ಭಾವರತಿಯಿಂದ ಒಲಿದು ಬಂದಂತೆ ತಿಳಿದು, ಕಣ್ದೆರೆದು ಕಾಣದೆ ಬಯಲನ್ನು ಅಪ್ಪ ತೋಳು ನಿರರ್ಥಕವಾಗಲು, ಬಾಡಿದ ಲತೆಯಂತೆ ಕಂದಿಕುಂದುವ, ಹೊತ್ತು ಮರೆಯಿಲ್ಲದೆ ಹೊಸ್ತಿಲನ್ನು ದಾಟಲರಿಯದೆ ಓಲಗಕ್ಕೆ ಹೋಗುವಾಗ, ದಾದಿಯ ಸೆರಗನ್ನು ಹಿಡಿದು ನಡೆಯುವಾಗ, ರಾಜಬೀದಿಗಳಲ್ಲಿ ಸುಳಿಯುವ ಯುವಕರನ್ನು ಕಂಡು ಹೊಲಬುಗೆಟ್ಟ ಹುಲ್ಲೆಯಂತೆ ದೆಸೆದೆಸೆಗೆ ಬೆಚ್ಚುವ, ಮಾತನಾಡಿಸಿದ ವಿಟನಿಗೆ

ದೆಸೆದೆಸೆಗೆ ಬೆರ್ಚುವ ನುಡಿಸಿದ ಏಟಂಗೆ ಮೌನಮನುತ್ತರಂ ಗುಡುವ, ಸಮದೃಷ್ಟಿಯಾಗೆ ಮಿಂಚು ಪಳಂಚದಂತೆ ಕಣ್ಮುಚ್ಚುವ, ಎಸೆವ ಸಭೆಯೊಳ್ ನಸು ಮುಸುಂಕು ನಾಡೆ ಮೆಱೆಯೆ ಮೆಱೆಗೊಂಡು ಕುಳ್ಳಿರ್ಪಲ್ಲಿ ರಾಜಪುತ್ರರ್ ನೆವದಿಂ ಸೋಂಕಿ ಭೀತಿಯಿಂ ಬೆಮರ್ವ, ಸಾತ್ವಿಕರಸಂ ಪುಟ್ಟ ಸನ್ನೆಯಱೆಯದ ಸರಸವಱೆಯದ ಜಾಣಱೆಯದ ಕೇಣವಱೆಯದ ನಿಲವು ನಿರ್ವಿಕಾರಸುಖಮನೀಯೆ ಕಾಮಸುಖಕ್ಕೆ ಕಣ್ ಬಂದಂತೆ ಸೌಕುಮಾರ್ಯಕ್ಕೆ ಸವಿಯೀಱೆದಂತೆ ಆಲಿಂಗನಕ್ಕೆ ಅವಯವಂ ಬಂದಂತೆ ಚೆಲ್ವಿಂಗೆ ಮೊಲೆಮೂಡಿದಂತಲ್ಲಲ್ಲಿ ಕುಳ್ಳಿರ್ದ ಬಚ್ಚಬಱೆಯಚ್ಚಸುಖದ ಪಚ್ಚಪಸಿಯ ಪೊಚ್ಚ ಪೊಸ ಹರೆಯದ ಮುಗ್ಧಾಂಗನೆಯರೊಳಂ; ಮತ್ತಂ ನಿಳಯಾಂಗಣದೊಳ್ ಸುಳಿವ ವಿಟನಂ ನೋಟದೊಳೊಳವುಗಿಸಿ ಕೂಟದೊಳ್ ಕೊಸಱೆ ಬೇಟದೊಳ್ ಬಳೆಯಿಸಿ ನೆರೆವ, ಪರಿಮಿತದ ಮೋಡಾಮೋಡಿಯನುಭವದೊಳ್ ವಲ್ಲಭನ ಮನಂ ಪಲ್ಲಟಿಸುವ ಕಾಲಮನಱೆದು ಕಡುಮುಳಿದ ಖಾತಿಮಿಕ್ಕು ಪ್ರಣಯಕಲಹಂ ಕೈಗಣ್ಮೆ ಕಂಡಂಜಿ ಕಾಲ್ಗೆಱಗಿದ ಕಾಂತಂಗೆ ಕಾರುಣ್ಯಮಂ ನೀಡಿ ಕೂಡುವ ಸುರತಚಂದ್ರೋದಯದೊಳ್ ಕಾಮಸುಖಾಬ್ಧಿಯುರ್ಕಿ ಪರಿಯೆ ಗಾಢಾಲಿಂಗನಂ ತೆರಪುಗುಡದಿರೆ ಸರ್ವಾಂಗಮಂ ಪ್ರತ್ಯಂಗದೊಳ್ ಮೇಳಯಿಸಿ ಕುಸುಮಾಯುಧ ಸುಖತರಂಗಿಣಿಯ ಸುಳಿಯೊಳ್ ಮನಂ ಮುಳುಂಗಿರ್ದ ಸುಖಸಮಯದೊಳರಮನೆಯ ಸೂಳಾಯ್ತರ ಸರವೆತ್ತಿ ಸಾಱುವ ದನಿಯಂ ಭೋಂಕನೆ ಕೇಳ್ದು ಮುಗಿಲ ದನಿಗೇಳ್ದ ಮರಾಳನಂತೆ ಮನಂಗುಂದಿ ಕೂಟದ ಕೇಡಿಂಗೆ ನಾಡೆ ನೊಂದು ಮನದಪ್ಪು ಸಡಿಲದೆ ತನುವಿನಪ್ಪು ಸಡಿಲ್ದು ಸಂಗಸುಖಮಂ ಪಿಂಗಲಾಱದೆ ಕಾಮನ ಬಾಣಕ್ಕೆ ಗುಱಿಯಾಗಿ ಮಱುಗಿ ಮಲ್ಲಳಿಗೊಂಡು ಮೆಲ್ಲನೇಳ್ದು ಮುಂದುಗೆಟ್ಟಂತಂತೆ ಸಿಂಗರಿಸಿ ಸಿಡಿಮಿಡಿಗೊಂಡು ನಡೆತರ್ಪಾಗಳ್ ಮುಡಿಯ ಭಾರಕ್ಕೆ ಕೊರಳ್ ಕೊಂಕೆ ನೆಲಿಮೊಲೆಯ ಬಿಣ್ಪಿಂಗೆ ಬಡನಡು ಬಳ್ಕೆ

ಮೌನವಾಗಿಯೇ ಉತ್ತರಿಸುವ, ಸಮದೃಷ್ಟಿಯಾಗಲು ಮಿಂಚು ಹೊಳೆದಂತೆ ಕಣ್ಮುಚ್ಚುವ; ರಾಜಸಭೆಯಲ್ಲಿ ಮುಖಪರದೆಯ ಮರೆಯಲ್ಲಿ ಕುಳಿತಿದ್ದ ರಾಜಪುತ್ರರು ನೆವದಿಂದ ಸೋಂಕಲು ಭೀತಿಯಿಂದ ಬೆವರುವ, ಸಾತ್ವಿಕರಸವು ಹುಟ್ಟಲು ಸನ್ನೆಯರಿಯದ, ಸರಸವರಿಯದ ನಿಲವು ನಿರ್ವಿಕಾರವನ್ನೂ ಈಯಲು ಕಾಮಸುಖಕ್ಕೆ ಕಣ್ಣುಬಂದಂತೆ, ಸೌಕುಮಾರ್ಯಕ್ಕೆ ಸವಿಯೇರಿದಂತೆ, ಆಲಿಂಗನಕ್ಕೆ ಅವಯವವು ಬಂದಂತೆ, ಚೆಲ್ವಿಕೆಗೆ ಸ್ತನವು ಮೂಡಿದಂತೆ ಅಲ್ಲಲ್ಲಿ ಕುಳಿತು ಪಚ್ಚಪಸಿಯ ಹರಯದ ಮುಗ್ಧಾಂಗನೆಯರಲ್ಲಿಯೂ; ಮತ್ತು ನಿಲಯಾಂಗಣದಲ್ಲಿ ಸುಳಿವ ವಿಟನನ್ನು ನೋಟದಲ್ಲಿ ಹುದುಗಿಸಿ, ಕೂಟದಲ್ಲಿ ಕೊಸರಿ, ಬೇಟದಲ್ಲಿ ಬಳೆಯಿಸಿ ನೆರೆವ, ಪರಿಮಿತಿಯ ಮೋಡಾಮೋಡಿಯ ಅನುಭವದಲ್ಲಿ ಪ್ರಿಯನ ಮನಸ್ಸನ್ನು ಪಲ್ಲಟಿಸುವ ಕಾಲವನ್ನು ಅರಿತು, ಕಡುಮುಳಿದು ಪ್ರಣಯಕಲಹವು ಕಂಡುಬರಲು ಕಾಲಿಗೆ ಬಿದ್ದ ಕಾಂತನಿಗೆ ಕರಗಿ ಕೊಡುವ ಸುರತದಲ್ಲಿ ಕಾಮಸುಖವು ಉಕ್ಕಿಬಂದು ಗಾಢವಾಗಿ ಆಲಿಂಗಿಸಿ ಅಂಗಾಂಗಗಳನ್ನು ಅಂಗಾಂಗಗಳಿಗೆ ಮೇಳವಿಸಿ ಮದನಸುಖತರಂಗಿಣಿಯಲ್ಲಿ ಸುಳಿದು ಮನವು ಮಗ್ನವಾಗಿರುವಾಗ ಅರಮನೆಯ ಜಾವಕಾವಲುಗಾರರ ಎಚ್ಚರಿಕೆಯನ್ನು ಕೇಳಿ ಮೇಘಧ್ವನಿಯನ್ನು ಆಲಿಸಿದ ಹಂಸೆಯರಂತೆ ಖಿನ್ನರಾಗಿ ಮನಸ್ಸು ಸಡಿಲದಿದ್ದರೂ ಶರೀರದ ಅಪ್ಪುಗೆ ಸಡಿಲಿ, ಸಂಗಸುಖವು ಹಿಂಗಲಾರದೆ ಮದನಬಾಣಕ್ಕೆ ಗುರಿಯಾಗಿ ಮರುಗಿ ಮೆಲ್ಲನೆ ಎದ್ದು ಸಿಂಗರಿಸಿಕೊಂಡು ನಡೆತರುವಾಗ ಮುಡಿಯ ಭಾರಕ್ಕೆ ಕೊರಲು ಕೊಂಕಿತು, ಮೊಲೆಯ ಭಾರಕ್ಕೆ ನಡು ಬಳುಕಿತು, ನಿತಂಬಭಾರಕ್ಕೆ ನಡೆ

ನಿತಂಬಭಾರಕ್ಕೆ ಮೆಲ್ಲಡಿ ಮಲ್ಲಳಿಗೊಳ್ಳುತ್ತಿರೆ ನೇವುರದ ನುಣ್ಪಿನಿಗೆ ಗಾವಜೆಸುವ ವಿಟರ ನೋಟಮಂ ಜಡಿವಂತೆ ಪಾದ ಮುದ್ರಿಕೆ ಪಳಂಚೆ ಕಡೆಗಣ್ಗಳ ಕಾಂತಿಯೊಳೆಳಲ್ವ ನವಜವ್ವನಿಗರಂ ನಗುವಂತೆ ಸೂಕ್ತಿಯೊಡನೆ ಸೂಸುವ ಸುಲಿಪಲ್ಲ ಬೆಳಗು ಬೀದಿವರಿಯೆ ನಡೆತಂದೊಡ್ಡೋಲಗಮನೊಟ್ಟಯಿಸಿ ಪೊಕ್ಕು ಮಕುಟವರ್ಧನರಂ ಮರುಳ್ಗೊಳಿಸುತುಂ ಮಲೆದು ಕುಳ್ಳಿರ್ದ ಮಧ್ಯಮ ನಾಯಕಿಯರ ನಿಕರದೊಳಂ ; ಮತ್ತಮನುರಾಗಮೇಱೆ ಮನಂದಂದು ಬಂದ ವಿಟರ್ಗುನ್ನತಾಸಮನಿತ್ತು ಮನ್ನಿಸಿ ಮಣಿದು ಸಜ್ಜೆವನೆಗುಯ್ದು ಸಜ್ಜನಸ್ನೇಹದಿಂ ಸಾಗಿಸಿ ನೋಡಿ ಭೋಗದೊಳ್ ಬೋಳಯಿಸಿ ರಾಗದಿಂ ಮೇಳಯಿಸಿ ಮುಂದೆವಾಳಂ ಮೆಯ್ಸಂದೊಂದೆರಳ್ ಬಂಧದನುಭವದೊಳ್ ಮಂದಯಿಪ ಸುಖಮನಿತ್ತು ನೆತ್ತದೊಳ್ ಬತ್ತರಂಬಡೆದು ಚದುರಂಗದೊಳ್ ಚಾತುರ್ಯ ಮನಿತ್ತು ಓದಿನೊಳ್ ಮಾಧುರ್ಯಂಬಡೆದು ಪಾಡಿನೊಳ್ ಪರಿವಡೆದು ನುಡಿಯೊಳ್ ನಯಂಬಡೆದು ವೀಣೆಯೊಳ್ ಜಾಣಂ ಮೆಱೆದು ಉಪಚಾರದೊಳೊಯ್ಯಾರಂ ಬಡೆದು ಇಚ್ಛೆಯೊಳ್ ಕೆಚ್ಚುಗಟ್ಟ ಸಿಂಗರದೊಳ್ ಸೊಬಗುವೆತ್ತು ವಿಳಾಸದೊಳ್ ವಿವೇಕಂಬಡೆದು ನಡೆದು ಬಂದರಮನೆಯಂ ಪುಗುವಾಗಳ್ ಮುಖಮಂಡಲಂ ಚಂದ್ರಮಂಡಲಮನಿಳಿಕೆಗೆಯ್ಯೆ ಪುರ್ವಿನ ಕೊರ್ವು ಕರ್ವುವಿಲ್ಲಂ ಕೀಳ್ವಾಡೆ ಕಡೆಗಣ್ಣ ಕಾಂತಿ ಕುಸುಮಾಸ್ತ್ರಮಂ ಕೆದಱೆ ಕರ್ಣಾಭರಣಂ ರವಿಕಿರಣಮನನುಕರಿಸೆ ಉಟ್ಟ ಬಿಳಿದು ಬೆಳ್ದಿಂಗಳಂ ಬೀಱೆ ಪಿಡಿದ ಲೀಲಾಬ್ಜಂ ನೂತನಂಬಡೆಯೆ ನೇವುರದ ದನಿ ನೆಲನನುಗ್ಗಡಿಸೆ ಕಂಕಣ

ಮಂದವಾಯಿತು, ನೂಪುರಧ್ವನಿಗೆ ಕಿವಿಗುಡುವ ವಿಟರ ನೋಟವನ್ನು ಪಾದಮುದ್ರಿಕೆ ಕಾಂತಿ ಎದುರಿಸಿತು. ಕಡೆಗಣ್ಣ ನೋಟಕ್ಕೆ ಅಳುಕಿದ ನವಯುವಕರನ್ನು ನಗುವಂತೆ ಸೂಕ್ತಿಯೊಡನೆ ಸೂಸುವ ಸುಲಿಪಲ್ಲ ಬೆಳಕು ಹರಡುತ್ತಿರಲು, ಒಡ್ಡೋಲಗಕ್ಕೆ ಬಂದು ರಾಜಕುಮಾರರನ್ನು ಮರುಳುಗೊಳಿಸುವ ಮಧ್ಯಮ ನಾಯಕಿಯರ ಗುಂಪುಗಳಲ್ಲಿಯೂ, ಮತ್ತೆ ಅನುರಾಗವು ಹೆಚ್ಚಿ ಬಂದ ವಿಟರಿಗೆ ಉನ್ನತಾಸನವಿತ್ತು ಮನ್ನಿಸಿ, ಮಲಗುವ ಮನೆಗೊಯ್ದು ಸಂಗಮಿಸಿ ರಾಗದಿಂದ ಒಂದುಗೂಡಿ ವಿವಿಧಬಂಧದ ಅನುಭವಗಳಿಂದ ಸುಖವನ್ನಿತ್ತು, ಪಗಡೆ, ಚದುರಂಗ ಮೊದಲಾದ ಆಟಗಳು, ಓದುಗಾರಿಕೆ, ಹಾಡಿಕೆ, ಸಲ್ಲಾಪ, ವೀಣಾವಾದನ, ಮುಂತಾದವುಗಳಿಂದ ಅವರನ್ನು ಸಂತೋಷಗೊಳಿಸಿ, ಅರಮನೆಗೆ ಹಿಂದಿರುಗುವಾಗ, ಆ ಅಂಗನೆಯರ ಮುಖಮಂಡಲ ಚಂದ್ರಮಂಡಲವನ್ನು, ಕಣ್ಣುಹುಬ್ಬು ಕಾಮನಬಿಲ್ಲನ್ನು ಹಿಯ್ಯಾಳಿಸುತ್ತಿತ್ತು, ಅವರ ಕಡೆಗಣ್ಣ ಕಾಂತಿ ಕುಸುಮಾಸ್ತ್ರವನ್ನು ಕೆದರುವಂತಿತ್ತು. ಕರ್ಣಾಭರಣಗಳು ರವಿಕಿರಣಗಳನ್ನು ಅನುಕರಿಸುತ್ತಿದ್ದವು, ಉಟ್ಟ ಬಿಳಿಸೀರೆ ಬೆಳ್ದಿಂಗಳನ್ನು ಬೀರುತ್ತಿತ್ತು, ಅವರು ಹಿಡಿದ ಲೀಲಾಕಮಲ ಹೊಸತೆನಿಸಿತ್ತು, ನೂಪುರ ಧ್ವನಿ ನೆಲದ ಘೋಷಣೆಯಂತಿತ್ತು, ಕಂಕಣಗಳ ಝಣತ್ಕಾರ ರಾಜಕುಮಾರರನ್ನು ಹೊಡೆವಂತಿತ್ತು. ಅವರು ವಿಲಾಸಕ್ಕಾಗಿ ಬಳಿದಿದ್ದ ಶ್ರೀಗಂಧ ಮಗಮಗಿಸುತ್ತಿತ್ತು, ಆ ಕಂಪಿಗೆ ದುಂಬಿವಿಂಡು ಮುಸರುತ್ತಿತ್ತು. ಅದು ಸೌಭಾಗ್ಯಲಕ್ಷ್ಮಿಗೆ ಬೀಸುವ ನೀಲಚಾಮರದ ಸೊಬಗು ಪಡೆದಿತ್ತು; ಇಂತೆಸೆವ ವಿದಗ್ಧವನಿತೆಯರ ಸಮೂಹದಲ್ಲಿಯೂ, ಮತ್ತು ಕಟುವಾದ ಸೌರಭಕ್ಕೆ ಎರಗಿದ (ಮುತ್ತಿದ) ದುಂಬಿಗಳು ಸೀದುಹೋಗಿ ನೆಲದ ಮೇಲೆ ಉದುರಲು ತುದಿಚಿಗುರಿನಿಂದ ಬೀಸಿಕೊಳ್ಳುವ, ನೆಗೆದ ತುಂತುರುಹನಿಗಳು ಮುಗಿಲನ್ನು

ಝಣತ್ಕಾರರವಂ ಅರಸುಮಕ್ಕಳಂ ಜಡಿಯೆ ವಿಳಾಸದಿಂ ಪೊಕ್ಕು ಮೆಯ್ಯೊಳ್ ಪೂಸಿದ ಸಿರಿಗಂಧದ ಕಕ್ಷದೊಳಳವಟ್ಟ ಸಾದಿನ ಕವಿಯೊಳ್ ಮಗಮಗಿಪ ಮೃಗಮದದ ಮುಡಿದ ಕದಂಬಪ್ರಸೂನದ ಬೆರಕೆಗಂಪಿಗುರವಣಿಸಿ ಮುಸುಱೆ ಮೊರೆದು ಮಂಡಳಿಸಿ ಮೌಳಿಚಳನದೊಳೇಳುತೆಱಗುವ ಮಧುಕರನಿಕರಂ ಸೌಭಾಗ್ಯಲಕ್ಷ್ಮಿಯರಿಕ್ಕುವ ನೀಲದ ಸೀಗುರಿಯಂತಿರೆ ತರದಿಂ ಕುಳ್ಳಿರ್ದ ವಿದಗ್ಧವನಿತಾಸಮೂಹದೊಳಂ; ಮತ್ತಂ ಸೊರ್ಕಿನ ಸೊವಡಿಂಗೆಱಗಿ ತುಱುಗಿದ ಪರಮೆಗಳ್ ಕರಿಮುರಿವೋಗಿ ಧರೆಯ ಮೇಲುದಿರಲಗ್ರಪಲ್ಲವದಿಂ ಬೀಸಿಕೊಳ್ವ ನೆಗೆದ ತುಂತುರ್ವನಿಗಳಂ ಮುಗಿಲ ಮೆಯ್‌ಪುಗಳೇಳೆ ಪುಷ್ಕರದಿಂ ಪೂತ್ಕರಿಸುವ ಒಳಗುರ್ಕಿ ತೆರಮಸಗುವ ಮದಸಮುದ್ರದೊಡನೆ ಕ್ರೋಧಬಡಬಾನಳನಂ ಬೆರಸಿ ಸುರಿದಪುದೆಂಬಂತೆ ನೆಗೆದ ಪೊಗೆವೆರಸಿ ಕೀಳ್ದದಂಬಿಡುವ ಕಣ್ಣಂ ಕೋಡ ಮೊನೆಗನೇಕ ಕಾಲದೊಳ್ ಬಂದ ರೂಪಂ ಪ್ರತಿಮಾನದೊಳಟ್ಟಿಕೊಳ್ವ ಕಟ್ಟಣಕದ ದುಷ್ಪಗಜಮನಗ್ಯ ಪಲ್ಲವಮಂ ಪಿಡಿದೇಱೆ ಭಂಗಿಸುತ್ತುಂಗುಟಕ್ಕಾಳ್ಮಾಡಿ ಬಿದುವನಪ್ಪಳಿಸಿ ಚಪ್ಪರಿಸುತ್ತಬ್ಬರಿಸುವ ಕೊರ್ಬನುಡಿಯೆ ಕೂರಂಕುಸಮಾಗೆ ತೋಱೆ ತೊಟ್ಟು ಕೀಱೆ ಬಿಟ್ಟಕ್ಕುವ ಬಲ್ಪಿನ ಕಟ್ಟುಬ್ಬಟೆಯ ಬಿರುದಿನ ಹಾಹೆ ಕಾಲೊಳೊಳಲೆ ಕಡುಪಿಂ ಬಂದು ಪುರುಷಸಿಂಹಂಗಳಂತೆ ತರದಿಂ ಕುಳ್ಳಿರ್ದ ಗಜಾರೋಹಕರ ಗೊಂದಣದೊಳಂ; ಮತ್ತಂ ಮಂದುರದೊಳ್ ನಟ್ಟ ಕೆಚ್ಚಿನ ಮುಂಡಿಗೆ ಮುಱೆಯೆ ಪಾಳಾಸಂ ಪಱೆಯೆ ಪೊಱಮಟ್ಟು ನೆರವಿಯನುರವಣಿಸಿ ಪಾಯ್ದು ಬೀದಿವರಿದಾಱೆಗೊಂಡು ಸಿಕ್ಕಿದ ರೂಪಿನ ತಲೆಯೊಳ್ ನಿಳಿಲ್ ನಿಕ್ಕೆಂದು ತರ್ಗಿ ನುರ್ಗಿ ಕರ್ಬೆಕೊಡಹುವ ನಚ್ಚಿನ ಗೋವಂ ದನಿದೋಱೆ

ಪುಗಲು ಮೇಲೇಳಲು ಸೊಂಡಿಲಿನಿಂದ ಪೂತ್ಕರಿಸುವ, ಒಳಗೆ ಉಕ್ಕಿ ತೆರೆಯೇಳುವ ಮದಸಾಗರದೊಡನೆ ಕ್ರೋಧವೆಂಬ ಬಡಬಾಗ್ನಿಯು ಬೆರತು ಸುರಿವುದೋ ಎಂಬಂತೆ, ನೆಗೆದ ಹೊಗೆ ಬೆರತು ಮದೋದಕವನ್ನು ಸುರಿಸುವ ಕಣ್ಣಿಗೂ, ಕೊಂಬಿನ ಮೊನೆಗೂ ಏಕಕಾಲದಲ್ಲಿ ಬಂದ ರೂಪವನ್ನು ಪ್ರತಿಮಾನದಲ್ಲಿ ಒಟ್ಟಿಕೊಳ್ಳುವ, ಎದುರಾದ ದುಷ್ಪಗಜವನ್ನು ಅಗ್ರ ಪಲ್ಲವವನ್ನು ಹಿಡಿದೇರಿ ಭಂಗಿಸುತ್ತಾ, ಉಂಗುಟದಲ್ಲಿ ಕಿಳ್ಮಾಡಿ, ಗಂಡಸ್ಥಳವನ್ನು ಅಪ್ಪಳಿಸಿ, ಚಪ್ಪರಿಸುತ್ತಾ ಅಬ್ಬರಿಸುವ ಕೊಬ್ಬಿನ ನುಡಿಯೇ ಕ್ರೂರ ಅಂಕುಶವಾಗಲು, ಕೋರಿ, ತೊಟ್ಟು ಕೀರಿಬಿಟ್ಟಿಕ್ಕುವ, ಬಲ್ಪಿನ ಕಟ್ಟುಬ್ಬಟೆಯ ಬಿರುದಿನ ಹಾಹೆ (ಗೊಂಬೆ)ಗಳು ಕಾಲಿಗೆ ತೊಡರಲು ಮೊಗದಿಂದ ಬಂದು ಪುರುಷಸಿಂಹಗಳಂತೆ ಸಡಗರದಿಂದ ಕುಳಿತಿರುವ ಗಜಾರೋಹಕರ ಸಮೂಹದಿಂದಲೂ; ಅಶ್ವವಾಹಕರು ಮತ್ತು ಕುದುರೆ ಕಟ್ಟುವ ಲಾಯದಲ್ಲಿ ನಟ್ಟಿದ್ದ ಗೂಟವು ಮುರಿಯಲು ಮುತ್ತುಗ (ಪಾಳಾಸ)ದ ಗೂಟವು ಹರಿದು ಹೊರಬಂದು ಜನರ ಗುಂಪನ್ನು ರಭಸದಿಂದ ದಾಟಿ ಬೀದಿಗೆ ಬಂದು ತಲೆಕೊಡಹುತ್ತಾ ನಚ್ಚಿನ ಗೋವನ್ನು ಬೆದರಿಸಿ, ಕಿವಿಯನ್ನು ನಿಮಿರಿಸಿ, ಕೆಕ್ಕಳಿಸುವ ದೃಷ್ಟಿಯಿಂದ ಕೋಪಗೊಂಡು, ಮುಂಗಾಲಿನಿಂದ ನೆಲವನ್ನು ಕುಟ್ಟುತ್ತಾ ಮುನ್ನಡೆವ, ಮುಂದೆ ಕಚ್ಚುವುದು, ಹಿಂದೆ ಒದೆವುದು, ಪಕ್ಕಕ್ಕೆ ಚಿಮ್ಮುವುದು, ದುಂಡಿಸಿ ನೆಗೆವುದು, ಮಂಡಿಸಿ ನಿಲ್ಲುವುದು; ಪೊರಕಾಲೊಳ್ ನಡೆವ ಸುಕಳಾಶ್ವವನ್ನು ಬೇಗನೆ ಹಿಂಬಾಲಿಸಿ ತೊಡೆ (ರಾಫೆ)ಯಲ್ಲಿ ಅದುಮಿ, ಕಡಿವಾಣದಿಂದ ನಿಲ್ಲಿಸಿ, ಅಕ್ಕ ಪಕ್ಕಗಳಿಗೆ ಹೊಡೆದು ಸರಸಬೀದಿಯಲ್ಲಿ ಏರಿ, ಅಶ್ವಹೃದಯ ಬಲ್ಲ ನಳನನ್ನು ತಿರಸ್ಕರಿಸುವ ಬಿರುದಿನ ಅಶ್ವಶಿಕ್ಷಕರ ಸಮೂಹದಿಂದಲೂ, ಮತ್ತು ಜಟ್ಟಿ (ಮಲ್ಲ)ಗಳ ನೆರವಿಗಳು,

ಕತ್ತರಿಮೊನೆಗೊಂಡ ಕವಿಯಂ ಕೆಕ್ಕಳಿಸುವ ದಿಟ್ಟಯಿಂ ಕಂಗನೆ ಕನಲ್ದು ಮುಂಗಾಲಿಂ ನೆಲನಂ ಪೊಯ್ದೆಳ್ದು ಪರಿದೆಯ್ದುವ ಮುಂದೆ ಕಚ್ಚುವ ಹಿಂದೆ ಮೆಟ್ಟುವ ಕೆಲಕೆ ಚಿಮ್ಮುವ ದುಂಡಿಸಿ ನೆಗೆವ ಮಂಡಿಸಿ ನಿಲ್ವ ಮುರಿದಪ್ಪವರಿ ತರಹರಿಸಿ ಪೊಣ್ಮುವ ಪೊಱಕಾಲೊಳ್ ನಡೆವ ಸುಕಳಾಶ್ವಮಂ ಬೇಗದಿಂ ಬೆಂಗೆವಾಯ್ದೆ ರಾಫೆಯೊಳೌಂಕಿ ವಾಫೆಯೊಳ್ ನಿಲಿಸಿ ಕೆಲಬಲಕ್ಕಿಕ್ಕಿ ಸರಸ ಬೀದಿಯೊಳೀಜೆ ತೋಜೆ ನಳನಂ ದತ್ತಿಳನನಿಳಿಕೆಗೆಯ್ದ ಬಿರುದಿನ ಬಂಕದಂಕಮಾಲೆ ಕೆಲಬಲದೊಳಲಂಕರಿಸುತ್ತುಮಿರೆ ನಡೆತಂದು ಸಮುಚಿತಾಸನದೊಳ್ ಕ್ರಮದಿಂ ಕುಳ್ಳಿರ್ದ ಪಟ್ಟಸಹಣಿಯರ ಪರಿವಿಡಿಯೊಳಂ ಮತ್ತಂ ಮಲೆತು ನಿಂದು ಅಖ್ಖಡದೊಳ್ ಪೊಕ್ಕು ಬಾಹಪ್ಪಳಿಸಿ ಬಲ್ದುದೋಜೆಸಿದ ಮಲ್ಲನನುರ್ಬುತ್ತೊಯ್ಯನೊಳಪೊಕ್ಕು ಮಿಕ್ಕು ಪರಿದಿಕ್ಕಿ ಮುರಿವ ಆಡುಪಾಯದಳವಿಂಗೆ ಕಡಂಗುವ ಮಲ್ಲನನಡಸಿ ತಿವಿದು ಕಡುಪಿಂ ಕೆಡಪಿ ಕೊಪ್ಪರದೊಳ್ ಕುಮ್ಮಿ ಮಂಡಿಯೊಳ್ ಮಿದಿದು ಕುದಿದು ಸದೆದು ಸಣ್ಣಿಸುವ ಚೊಕ್ಕೆಯದಾಸೆಗೆ ಪೊಕ್ಕ ಮಲ್ಲನನಿಕ್ಕಿ ಮೆಟ್ಟಿ ವಜ್ರದ ಬಳ್ಳಿಯಂತೆ ಛಡಿಕೆಯೊಳ್ ಬಿಗಿದು ಚಾಳಿಸಿ ನೂಂಕುವ ನೂಂಕೆ ಪೋಗದೆ ನಿಂದ ಸೆಳೆಹನಂ ಸೆಳೆದು ಕೆಡಪಿ ಪಿಡಿದೆತ್ತಿಯೊತ್ತಿ ಕುಸುಬಿ ಕುಸುಕಿಜೆದು ಪೊಸೆದು ಪೂಳ್ವ ಸಾಹಸಿತನಕೆ ಬೆರಸಿದ ಮಲ್ಲನನೊರಸಿಬಿಡುವ ಲವಣಿಸಾರದೊಳ್ ನುಣ್ಚುವ ಮಲ್ಲನನೌಂಕಿ ಪಿಡಿದು ಸುತ್ತಿ ಮುತ್ತಿ ಸೆಳೆದಿಕ್ಕಿ ಸೀಸಕದೊಳ್ ಪೊಕ್ಕು ಭುಜದೊಳಣೆದುರದೊಳ್ ತೇದು ಉತ್ತಾನಕ ದೊಳ್ ನಿಂದು ಸಖಾಯರ್ ಝಣಝಣರೆನೆ ಬಳಸಿ ಭುಂಜಿಸುವ ಐರಾವತಂ ಮಲ್ಲವೇಷದೊಳಿದಿರಾದೊಡಂ ತೋಹತ್ತದೊಳಂ ತಿವಿದು ತಿರುಪುವ ಸಂಚಳಿಸುವ ಮುಂಚ ಮೇಳವಿಸಿ ಚೊಕ್ಕೆಯದನುಮಾನದೊಳ್ ಡೊಕ್ಕರಿಸಿ ಪಿಡಿವರಿಬಿರುದಿನ ಕಲ್ಲ ಮಾನಸರಂತಿರ್ಪ

ಅವರ ವರ್ಣನೆ-ಮಲೆತು ನಿಂತು ಅಖಾಡದಲ್ಲಿ ಹೊಕ್ಕು ಭುಜತಟ್ಟಿ ಶಕ್ತಿತೋರಿಸಿದ ಪ್ರತಿಜಟ್ಟಿಯನ್ನು ಒಳಹೊಕ್ಕು ಮುರಿವ ಅಡುಪಾಯದ ಅಳ(ಶಕ್ತಿ)ವಿಗೆ ಕೋಪಿಸಿಕೊಂಡು ಮಲ್ಲನನ್ನು ಅಡಸಿ ತಿವಿದು, ಕೆಳಕ್ಕೆ ಕೆಡವಿ, ಮೊಣಕೈ (ಕೊಪ್ಪರ)ಯಿಂದ ಚಿಮ್ಮಿ, ಮಂಡಿಯಿಂದ ಮಿದಿದು, ಸದೆದು, ಚೊಕ್ಕೆಯದ ಆಸೆಗೆ ಹೊಕ್ಕ ಜಟ್ಟಿಯನ್ನು ಮೆಟ್ಟಿ ಚಡಿಕೆಯಿಂದ ಬಿಗಿದು ಚಾಳಿಸಿ ನೂಂಕುವ, ನೂಕಿದರೂ ಹೋಗದಿರುವ ಸೆಳೆಹನನ್ನು ಎಳೆದು ಕೆಡವಿ, ಹಿಡಿದೆತ್ತಿ, ಒತ್ತಿ, ಕುಸುಬಿ, ಪೊಳ್ಕಾದ ಸಾಹಸತನಕ್ಕೆ ಬೆರಸಿದ ಮಲ್ಲನನ್ನು ಒರೆಸಿ ಬಿಡುವ ಒಂದು ಕುಸ್ತೀಪೇಚು (ಲವಣಿಸಾರ) ಮಲ್ಲನನ್ನು ಅಮುಕಿ ಹಿಡಿದು ಸುತ್ತಿಮುತ್ತಿ ಸೆಳೆದಿಕ್ಕಿ, ಶೀರ್ಷಕದಲ್ಲಿ ಹೊಕ್ಕು, ಭುಜದೊಳ್ ಅಣೆದುರದೊಳ್ ತೇದು ಉತ್ತಾನಕ (ಕುಸ್ತಿಯ ಒಂದು ಪಟ್ಟು)ದಲ್ಲಿ ನಿಂತು, ಜೊತೆಗಾರರು ಝಣಝಣರೆನಲು ಬಳಸಿ ಭಂಗಪಡಿಸುವ, ಐರಾವತವು ಮಲ್ಲವೇಷದಿಂದ ಇದಿರಾದರೂ ತೋರಹತ್ತದಿಂದ ತಿವಿದು ತಿರುಪುವ, ತುಯ್ದಾಡುವ ಕಲ್ಲಮಾನಸರಂತಿರುವ ಮಲ್ಲರ ನೆರವಿಗಳು, ವೀರ (ಮಾಸಾಳ್)ರ ವರ್ಣನ-ಕಳನೇರಿದ ಅಂಕವನ್ನು ಗಳಿಯೊಡ್ಡುವ ಮುನ್ನವೇ ಕುತ್ತಿ ಕೆಡಪುವ, ತಳ್ತುಗಂಟಿಕ್ಕಿ ಟೆಂಟಣಿಸುವ, ಎಳೆದು ಕೆಡಪುವ, ಕೋಪಿಸಿ ಮೆಟ್ಟುವ, ಸುಳಿದುಸುತ್ತಿ ಮೊನೆದೋರುವ ಬಿರುದಿನ ಅಂಕವನ್ನು ಉರವಣಿಸಿ ಪತ್ತಿ ಹೊರಳಿಸಿಕೊಳ್ಳುವ, ಬಿನ್ನಾಣ ತೋರುವ ಗನ್ನದ ಅಂಕವನ್ನು ಬಿಡಿಸಿ ಬೆನ್ನು ಹತ್ತಿ ಉಬ್ಬಟೆಯ ಬಿರುದಿನ ಉಪ್ಪರವಟ್ಟದ ಉಭಯಸತ್ತಿಗೆಯುಳ್ಳ ಹಗಲ ಕೈದೀವಿಗೆ, ಕಾಲಹಾಹೆ, ಮೊತ್ತದ

ಮಲ್ಲರ ನೆರವಿಗಳೊಳಂ ; ಮತ್ತಂ ಕಳನೇಱೆದಂಕಮಂ ಗಳೆಯೊಡ್ಡದ ಮುನ್ನಂ ಕುತ್ತಿ ಕೆಡೆಪುವ ತಳ್ತು ಗಂಟಿಕ್ಕಿ ಟಿಂಟಣಿಸುವಂತಮಂ ಸೆಳೆದು ಕೆಡೆಪುವ ಮುಳಿದು ಮೆಟ್ಟುವ ಸುಳಿದು ಸುತ್ತಿ ಬಳಸಿ ಮೊನೆದೋಱುವ ಬರುದಿನಂತಮನುರವಣಿಸಿ ಪೊತ್ತಿ ಪೊರಳ್ಚಿ ಕೊಳ್ವ ಬನ್ನಣಂದೋರ್ಪ ಗನ್ನದಂಕಮಂ ಬಡಿಸಿ ಬೆಂಬತ್ತಿ ಕುತ್ತಿ ಸುರುಳ್ಚುವುಚ್ಚಟೆಯ ಬರುದಿನುಪ್ಪರವಟ್ಟದುಭಯಸತ್ತಿಗೆಯ ಪಗಲ ಕೈಯ್ದೀವಿಗೆಯ ಕಾಲ ಹಾಹೆಯ ಮೊತ್ತದ ಬಾವುಲಿಯ ಮಾಲೆದೊಡರ ಮಾಸಾಳ್ಗಳ ಮಂತಣದೊಳಂ; ಮತ್ತಂ ವಕ್ರೋಕ್ತಿ ಸ್ವಭಾವೋಕ್ತಿ ಪಾಕ ಲಾಲಿತ್ಯ ಗುಂಪು ಇಂಪು ರೀತಿ ನೂತನಮಾಗೆ ಗದ್ಯ ಪದ್ಯ ಕಾವ್ಯಕಳಾಪ್ರೌಢಿ ರೂಢಿವಡೆಯೆ ಮೆಱೆದಿರ್ದ ಸರಸಕವಿಗಳ ಸಂದಣಿಯೊಳಂ ; ಮತ್ತಮಾರಭಟಿಯೊಳ್ ದೆಖ್ಖಾಳಂ ಮಿಕ್ಕು ಸಾತ್ವತಿಯೊಳ್ ಪಜ್ಜಳಂಬೆತ್ತು ಭಾರತಿಯೊಳ್ ಕಾಂತಿ ಕೈಗಣ್ಮಿ ಆಸ್ಥಾನಮಂ ಕೌತುಕರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥ್ಯಮನೊಳಕೊಂಡು ಕುಳ್ಳಿರ್ಪ ಗಮಕಿಗಳ ತಂಡದೊಳಂ; ಮತ್ತಂ ಶಬ್ದಖಂಡನ ಮರ್ಥಖಂಡನಮನುಮಾನಖಂಡನಮೆಂಬ ತರ್ಕತಂತ್ರಕೋವಿದರಪ್ಪ ವಾದಿಗಳೊಳಂ; ಮತ್ತಂ ಮಧುರರಸಮೊಸರ್ವ ಪೊಸನುಡಿಗಳಂ ಕೇಳ್ವ ಸಭೆಗೆ ಕರ್ಣರಸಾಯನಮನೀವ ಮಾಧುರ್ಯಗುಣಂ ಮೆಯ್ಮಿಕ್ಕಿರ್ದ ವಾಗ್ಮಿಗಳೊಳಂ; ಮತ್ತವಳಿ ವಕ್ರತೆಯನೀವ ವಹಣಿ ತರಂಗಿಸುವ ತಿರುಪು ಸುಳಿಗೊಳ್ವ ಹೆಂಪು ಇಂಪಂ ಕಱೆವ ಸುಧಾರಸಗಾನಂ ನಾನಾರಸದ ಲಹಣಿಯ ರೂಪುವಡೆಯೆ ಪಾಡುವ ಗಾಯಕರೊಳಂ; ಮತ್ತಂ ಸುಗತಿಗಳಂ ಸೂಸುವ ಮದ್ದಳಿಗರಿಂ ರೂಪುರೇಖೆ ರಸಂಬಡೆವ ನೃತ್ಯನಾಯಕಿಯರಿಂ ನವೀನಗತಿಯಂ ನೀಡುವ ನರ್ತಕರಿಂ ಭಾವರಸಮನೀವ ಚಿತ್ರಕರಿಂ ಇಂತು ಗಿರಿರಾಜನೊಡ್ಡೋಲಗಮನಂತ ಗಂಭೀರಮನತುಳಪ್ರತಾಪಮನುರುತರಸೌಂದರ್ಯಮನೂರ್ಜಿತವಿಳಾಸಮನನುಪಮೌದಾರ್ಯ ಮನೊಳಕೊಂಡಿರ್ದುದಾ ಪ್ರಸ್ತಾವದೊಳ್

ಬಾವುಲಿ, ಮಾಲೆತೊಡರು ಇವುಗಳುಳ್ಳ ವೀರರ ಸಂದಣಿಯಲ್ಲಿ; ಇನ್ನು ಸರಸಕವಿಗಳ ತಂಡ; ಅವರು ವಕ್ರೋಕ್ತಿ ಸ್ವಭಾವೋಕ್ತಿ ಪಾಕಲಾಲಿತ್ಯ ಗುಂಪು ಇಂಪುಗಳ ನೂತನ ರೀತಿಯಲ್ಲಿ ಗದ್ಯಪದ್ಯಕಳಾಪ್ರೌಢಿ ಮೆರೆಯೆ ಬಂಧ ರಚಿಸತಕ್ಕವರು; ಒಂದು ಕಡೆ ಗಮಕಿಗಳು; ಅವರು ಆರಭಟೀ, ದೆಖ್ಖಾಳ ರೀತಿಗಳನ್ನು ಮೀರಿ ಸಾತ್ವತಿಯಲ್ಲಿ ಪ್ರಜ್ವಲಿಸಿ, ಭಾರತಿಯಲ್ಲಿ ಕಾಂತಿಗೊಂಡು ಆಸ್ಥಾನವನ್ನು ಅಚ್ಚರಿಗೊಳಿಸುತ್ತಿದ್ದಾರೆ, ಇನ್ನೊಂದೆಡೆ ವಾದಿಗಳು, ಅವರು ಶಬ್ದಖಂಡನ, ಅರ್ಥಖಂಡನ ಮತ್ತು ಅನುಮಾನ ಖಂಡನವೆಂಬ ತರ್ಕತಂತ್ರಕೋವಿದರು; ಮತ್ತೊಂದೆಡೆ ವಾಗ್ಮಿಗಳು; ಮಧುರ ರಸವನ್ನು ಉಕ್ಕಿಸುವ ವಾಕ್ಚಾತುರ್ಯದಿಂದ ಕೇಳುವವರ ಕಿವಿಗೆ ಸವಿಯನ್ನು ಉಂಟುಮಾಡುತ್ತಿದ್ದಾರೆ. ಅವರ ಸನಿಹದಲ್ಲಿ ಗಾಯಕರು, ಅವರು ವಳಿವಕ್ರತೆಯನ್ನು ನೀಡುವ, ವಹಣಿ (ರಾಗದ ಅಲೆಗಳು) ತರಂಗಿಸುವ ತಿರುಪು, ಸುಳಿಗೊಳ್ಳುವ ಪೆಂಪು, ಇಂಪೆರೆವ ಸುಧಾಗಾನ ಮಾಡುತ್ತಿದ್ದಾರೆ; ಸುಗತಿಗಳನ್ನು ಸೂಸುವ ಮದ್ದಳಿಗರು, ರೂಪುರೇಖೆ ವಿನ್ಯಾಸಗಳಲ್ಲಿ ರಸವನ್ನು ಉದ್ರೇಕಿಸುವ ನೃತ್ಯನಾಯಕಿಯರು, ನವೀನಗತಿ ನೀಡುವ ನವೀನ ನರ್ತಕರು, ಭಾವರಸವನ್ನೀವ ಚಿತ್ರಗಳನ್ನು ರಚಿಸುವ ಚಿತ್ರಕರು, ಹೀಗೆ ಗಿರಿರಾಜನ ಒಡ್ಡೋಲಗವು ಅತುಳ ಗಾಂಭೀರ್ಯ, ಪ್ರತಾಪ, ಸೌಂದರ್ಯವಿಳಾಸ, ಅನುಪಮೌದಾರ್ಯಗಳನ್ನು ಒಳಗೊಂಡಿತ್ತು.

ಚಂ॥ ನುಡಿಯದಿರಾಂಧ್ರ ಕೆಯ್ಮುಗಿ ಕಳಿಂಗ ಕುನುಂಗೆಲೆ ವಂಗ ಕೇರಳಂ
ಗೆಡೆಗುಡು ಚೋಳ ಲಾಳ ಪೆಱಸಾರ್ ಪುಗದಿರ್ ಮಗಧೇಶ ಕಾಣ್ಕೆಯಂ ।
ಪಿಡಿದಿರು ಪಾಂಡ್ಯ ಬಿನ್ನವಿಸು ಮಾಳವ ಗೌಳನೆ ಪಿಂಗೆನುತ್ತಣಂ
ಜಡಿವರಿಳೀಶರಂ ಪಡಿಯಱಿರ್ ಗಿರಿರಾಜಸಭಾಂತರಾಳದೊಳ್ ॥ ೧೦೬

ಮ॥ ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೦೭

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಗಿರಿರಾಜದೇಶ ಪುರಾಸ್ಥಾನ ವರ್ಣನಂ
ದ್ವಿತೀಯಾಶ್ವಾಸಂ

೧೦೬. ಆಂಧ್ರನೆ ಮಾತು ನಿಲ್ಲಿಸು, ಕಳಿಂಗ ಕಯ್ಮುಗಿ, ವಂಗನೆ ಬಗ್ಗು, ಕೇರಳನಿಗೆ ಎಡೆಕೊಡು, ಚೋಳ-ಲಾಳ ಪಕ್ಕಕ್ಕೆ ಸರಿ, ಮಗಧೇಶ ನುಗ್ಗ ಬೇಡ, ಪಾಂಡ್ಯನೆ ಕಾಣ್ಕೆಯನ್ನು ಸಿದ್ಧಪಡಿಸಿಕೊಂಡಿರು, ಮಾಳವನೆ ಬಿನ್ನಹ ಮಾಡು, ಮಾಳವ-ಗೌಳ ಹಿಂದಿರು ಎಂದು ಗಿರಿರಾಜನ ಸಭೆಯಲ್ಲಿದ್ದ ಪಡಿಹಾರರು ನೆರೆದ ರಾಜರನ್ನು ಜರೆಯುತ್ತಿದ್ದರು.

ತೃತೀಯಾಶ್ವಾಸಂ

ಹೈಮವತೀ ಶೈಶವವರ್ಣನಂ

ಕಂ॥ ಶ್ರೀ ಗೌರೀ ಕುಚಯುಗಳ ಪ
ರಾಗಯುತಾನರ್ಘ್ಯರತ್ನವಿಳಸದ್ವಕ್ಷೋ ।
ಭಾಗಂ ಸದ್ಭಕ್ತಿಯನೆಮ
ಗೀಗೆ ದಯಾವಾರ್ಧಿ ಹಂಪೆಯ ವಿರೂಪಾಕ್ಷಂ ॥ ೧

ಸ್ರ॥ ಅಂತಿರ್ಪಾಸ್ಥಾನದೊಳ್ ಭೂಭುಜನಿಕರ ಕಿರೀಟಪ್ರರತ್ನಪ್ರಭೂತಾ
ನಂತಪ್ರದ್ಯೋತ ನೂತ್ನೋದಕಜನಿತ ಪದಾಂಭೋಜನುದ್ಯದ್ಧರಿತ್ರೀ ।
ಕಾಂತಾ ವಕ್ಷಃಸ್ಥಲಾಲಿಂಗನಭರ ನಿಜದೋರ್ದಂಡ ಚಂಡಾಸಿಧಾರಾ
ಶ್ರಾಂತಂ ಪ್ರಾತರ್ಕ್ಯವೈರಿವ್ರಜಧರನೆನಿಸಿರ್ದಂ ಗಿರಿವ್ರಾತನಾಥಂ ॥ ೨

ಕಂ॥ ಇರೆ ಮಾಧ್ಯಂದಿನ ಡಿಂಡಿಮ
ವರನಾದಂ ಕೇಳಲಾಗೆ ಗಿರಿಕುಲರಾಜಂ ।
ತರದಿಂ ನೆರೆದೋಲಗಮಂ
ಪರೆಯಲ್ವೇಳ್ಕೆಂದು ಪೇಳ್ದ ಸಮನಂತರದೊಳ್ ॥ ೩

ಮ॥ಸ್ರ॥ ಕ್ವಣಿತಾನೇಕಪ್ರಧಾನಾಭರಣ ಚರಮಹಾಮಾತ್ಯ ಸಾಮಂತಯೂಥಂ
ಗಣಿಕಾಸಂತಾನ ನಾನಾ ನವಮಣಿಗಣ ವಿಸ್ತೀರ್ಣ ಮಂಜೀರಮುದ್ರಾ ।
ರಣಿತಂ ತದ್ವೇತ್ರ ಹಸ್ತಪ್ರತಿಮುಖರ ಪ್ರೋದ್ಘತಾಭೀಳಘೋಷಂ
ಪ್ರಣತಾಸಕ್ತಾವನೀಶ ಪ್ರಕಟಮಕುಟಯುಕ್ತಂ ಸಭಾವಾಸವಕ್ತ್ರಂ ॥ ೪

೧. ಜಗಜ್ಜನನಿಯಾದ ಗೌರೀದೇವಿಯ ಸ್ತನದ್ವಯ ಶ್ರೀಸುಗಂಧಧೂಳಿಯಿಂದ ಕೂಡಿದ, ಶ್ರೇಷ್ಠರತ್ನಗಳಿಂದ ಪ್ರಕಾಶಿಸುವ ಎದೆಯುಳ್ಳ ದಯಾಸಾಗರನಾದ ಹಂಪೆಯ ವಿರೂಪಾಕ್ಷನು ನಮಗೆ ಸದ್ಭಕ್ತಿಯನ್ನು ನೀಡಲಿ. ೨. ಹಾಗಿರುವ ಆಸ್ಥಾನದಲ್ಲಿ ಆ ಗಿರಿರಾಜನು ಅಲ್ಲಿ ನೆರೆದಿದ್ದ ರಾಜರ ಕಿರೀಟಗಳಲ್ಲಿದ್ದ ರತ್ನಗಳ ಉಜ್ವಲಪ್ರಕಾಶವೆಂಬ ನೂತನ ಉದಕದಲ್ಲಿ ಹುಟ್ಟಿದ ಪಾದಕಮಲವುಳ್ಳವನೂ, ಭೂಕಾಂತೆಯ ವಕ್ಷಃಸ್ಥಲವನ್ನು ಆಲಿಂಗಿಸಿದ ಪ್ರಚಂಡವಾದ ಅಸಿಧಾರೆಗಳಿಂದ ಶ್ರಮಗೊಂಡ ಭುಜದಂಡವುಳ್ಳವನೂ, ಪ್ರಾತರ್ಕ್ಯ-ಚನ್ನಾಗಿ ಯೋಚಿಸುವ ಶತ್ರುಗಳುಳ್ಳವನೂ ಆಗಿದ್ದನು. ೩. ಹೀಗೆ ರಾಜಸಭೆಯಲ್ಲಿ ಗಿರಿರಾಜನಿರುವಾಗ ಮಧ್ಯಾಹ್ನವನ್ನು ಸೂಚಿಸುವ ಡಿಂಡಿಮವಾದ್ಯ ಘೋಷ ಕೇಳಿಸಿತು. ರಾಜನು ಓಲಗವನ್ನು ಮುಕ್ತಾಯಗೊಳಿಸಿದನು. ಆ ತರುವಾಯ - ೪. ಮುಕ್ತಾಯಗೊಂಡ ಆಸ್ಥಾನವರ್ಣನವಿದು. ಅದು ಮಹಾಮಾತ್ಯರೂ, ಸಾಮಂತ ರಾಜರೂ ಧರಿಸಿದ್ದ ಮುಖ್ಯ ಆಭರಣಗಳ ಧ್ವನಿ(ಕ್ವಣಿತ)ಯಿಂದಲೂ, ಗಣಿಕೆಯರು ಧರಿಸಿದ್ದ ಮಣಿಗಳು ಮಂಜೀರ ಮುದ್ರೆಗಳ ರಣಿತದಿಂದಲೂ, ಬೆತ್ತವನ್ನು ಹಿಡಿದಿರುವ ಪ್ರತೀಹಾರಿಯರ ಗದರಿಸುವ ಶಬ್ದದಿಂದಲೂ, ವಂದಿಸುತ್ತಿರುವ ರಾಜರ ಬಾಗಿದ

ಮ।।ಸ್ರ।। ಗಿರಿರಾಜಂ ಸಿಂಹಪೀಠೋತ್ಥಿತಕರಭರನಾಗುತ್ತುಮೇಳ್ದಂದು ಸೌಖ್ಯಾ
ಕರರೂಪಂ ಮಜ್ಜನಂಮಾಡುತೆ ಭಸಿತಲಲಾಟಂ ಸರುದ್ರಾಕ್ಷ ಕಂಠಂ ।
ಸ್ಥಿರಚಿತ್ತಂ ಲಿಂಗಪೂಜಾವಿರಚನಪರಿತುಷ್ಟಂ ಪ್ರಸಾದಪ್ರಮೋದಂ
ಸ್ಮರಬಾಣವ್ರಾತಮಂ ಲೆಕ್ಕಿಸದತಿಸುಖದಿಂ ಮೇನೆಯುಂ ತಾನುಮಿರ್ದರ್ ।। ೫

ವ।। ಇಂತು ವಿಮಳ ಮನದಿಂ ಸಮಸುಖದೊಳಿರ್ಪಲ್ಲಿ,

ಕಂ।। ಭರದಿಂ ಬಹುಸಂತಾನಾ
ತುರೆ ಸಾಧುಸುಶೀಲೆ ಲೀಲೆ ಮಿಕ್ಕಾದರದಿಂ ।
ಗಿರಿರಾಜಂಗೆ ವಿರಾಜಿಪ
ವರಜೀವಸಮಾನೆ ಮೇನೆ ನಯದಿಂ ನುಡಿದಳ್ ।। ೬

ಚಂ।। ಮೊಲೆಯುಣುತಳ್ಕಳೆಂ ನಗುವ ನಿಂದಿರುತಪ್ಪುವ ಪೊಂಗಿ ಹಿಗ್ಗುತಂ
ಮಲೆವ ಮರಳ್ವ ಕಣ್ಗಳನಲರ್ಚುವ ಮುಚ್ಚುವ ನೋಡುತಾಡುತಂ ।
ನಲಿನಲಿದುರ್ಬುತಂ ತೊಲೆಯುತಿಂತೊಲೆವಳ್ತಿಯ ಮುದ್ದಿನೊಪ್ಪದೊಳ್
ನೆಲಸಿದ ಪುತ್ರಿಯಂ ಬಯಸುತಿರ್ದಪುದೆನ್ನಮನಂ ಮನಃಪ್ರಿಯಾ ।। ೭

ಕಂ।। ಉಗ್ರತಪದಿಂದೆಯತುಳಸ
ಮಗ್ರೆಯನಭವಂಗೆ ವಧುವೆನಿಪ್ಪಳನಾನ ।
ವ್ಯಗ್ರದೆ ಪಡೆವೆಂ ಕುಧರ
ಪ್ರಾಗ್ರನೆ ಕಳಿಪೆಂದು ಮೇನೆ ನುಡಿವವಸರದೊಳ್ ।। ೮

ಮಕುಟಯುತವೂ ಆದ ವಿಸರ್ಜಿತ ಆಸ್ಥಾನವಾಗಿತ್ತು. ೫. ಗಿರಿರಾಜನು ಸಿಂಹಾಸನದಿಂದ ಎದ್ದು ಬಂದು ಸ್ನಾನಮಾಡಿ ಭಸ್ಮರುದ್ರಾಕ್ಷಗಳನ್ನು ಧರಿಸಿ, ಲಿಂಗಪೂಜೆಯನ್ನು ಸ್ಥಿರಚಿತ್ತದಿಂದ ಎಸಗಿದನು. ಪ್ರಸಾದವನ್ನು ಸ್ವೀಕರಿಸಿ ಪರಿತುಷ್ಟನಾಗಿ, ಮದನನ ಬಾಣಗಳನ್ನು ಲೆಕ್ಕಿಸದೆ ಎಂದರೆ ಮೋಹಪರವಶನಾಗದೆ ಮೇನೆಯೊಡನೆ ಸುಖಿಸಿದನು. ವ।। ಹೀಗೆ ನಿರ್ಮಲ ಮನಸ್ಸುಳ್ಳ ಅವರು ಸಮಸುಖದಲ್ಲಿರುವಾಗ ೬. ಬಹು ಸಂತಾನಾಪೇಕ್ಷೆಯುಳ್ಳವನೂ, ಗಿರಿರಾಜನಿಗೆ ಜೀವಸಮಾನೆಯೂ ಸಾಧು ಸುಶೀಲೆಯೂ ಆದ ಮೇನಾದೇವಿ ಗಿರಿರಾಜನಿಗೆ ಹೀಗೆ ನುಡಿದಳು. ೭. ಎಲ್ಲೆ ಪ್ರಿಯನೆ, ಮೊಲೆಯುಣ್ಣುವ, ನಲ್ಮೆಯಿಂದ ನಗುವ ನಿಂತಿರುವಾಗ ಬಂದು ಅಪ್ಪಿಕೊಳ್ಳುವ ಹಿಗ್ಗುತ ಮಲೆವ ಮರಳ್ವ ಕಣ್ಣನರಳಿಸುವ ಕಣ್ಣುಗಳನ್ನು ಮುಚ್ಚುವ ನೋಡುತ್ತ ಆಡುತ್ತ ನಲಿದು ಉಬ್ಬುತ್ತ ಹಾಗೆ ಹೀಗೆ ಒಲೆಯುತ್ತಾ ಮುದ್ದಿನ ಒಪ್ಪದಲ್ಲಿ ಲೀಲೆಗಳಲ್ಲಿ ತೊಡಗಿರುವ ಮಗಳನ್ನು ನನ್ನ ಮನಸ್ಸು ಬಯಸುತ್ತಿದೆ ಎಂದಳು. ೮. ನಾನು ಉಗ್ರತಪಸ್ಸನ್ನು ಮಾಡಿ ಅನುಪಮ ಗುಣಶೀಲೆಯೂ ಅಭವನಿಗೆ ವಧುವಾಗುವವಳೂ ಆದ ಮಗಳನ್ನು ಪಡೆಯುತ್ತೇನೆ. ಪರ್ವತಶ್ರೇಷ್ಠನೆ, ನನ್ನನ್ನು ತಪಸ್ಸಿಗೆ ಕಳುಹಿಸು ಎಂದು ಪ್ರಾರ್ಥಿಸಿದಳು.

ಕಂ॥ ಗಿರಿರಾಜನೊಡಂಬಟ್ಟಾ
ದರದಿಂದಂ ಪುಳಕಿಸುತ್ತೆ ಪುಟವೇಳುತ್ತುಂ ।
ಪರಿಚಾರ ಪಟುಗಳೆನಿಸುವ
ತರುಣಿಯರಂ ಕೂಡಿಕೊಟ್ಟು ಸಂತಸದಿಂದಂ ॥ ೯

ಮ॥ ವರಪುತ್ರೀ ಸ್ಥಿರಭಾವಕಾಮ್ಯವಿಲಸತ್‌ಸನ್ಯಾಸ್ಯಯಂ ಯಾನೆಯಂ
ತರುಣೀ ಕುಂತಳಮಲ್ಲಿಕಾ ಮಧುಕರೀ ಸಂತಾನೆಯಂ ಜ್ಞಾನೆಯಂ ।
ಪರಮಾನಂದ ತಪೋಭರೋತ್ಥಿತ ಮನಃಪ್ರಾಧೀನೆಯಂ ಸ್ಥಾನೆಯಂ
ಗಿರಿರಾಜಂ ಕಳಿಪುತ್ತುಮಿರ್ದನತಿಯೋಗಧ್ಯಾನೆಯಂ ಮೇನೆಯಂ ॥ ೧೦

ಕಂ॥ ಕಳಿಪೆ ನಡೆತಂದು ರಮ್ಯ
ಸ್ಥಳದೊಳ್ ನಿಂದೇಕಪಾದದಿಂದಂ ಮೇನಾ ।
ಲಳನೆ ಮಾಹಾದೇವಿಯ ನಿ
ರ್ಮಳರೂಪಂ ಹೃದಯಕಮಲದೊಳ್ ತಳೆದಿರ್ದಳ್ ॥ ೧೧

ಮುಗಿದುವು ನಯನಸರೋಜಂ
ಮಿಗೆಯಲರ್ದುದು ಚಿತ್ತಕ್ಕೈರವಂ ಮಿಕ್ಕೇಜೆ ।
ತ್ತು ಗಭೀರ ತಪೋವಾರಿಧಿ
ಬಗೆಯೊಳಗಾ ಧ್ಯಾನಚಂದ್ರಸುದಯಿಸುವಾಗಳ್ ॥ ೧೨

ವ॥ ಇಂತು ತಪೋಬೀಜಂ ಚಿತ್ತಭೂಮಿಯೊಳ್ ಬೇರೂಜೆಯಹಂಕಾರದೊಳಂಕುರಿಸಿ ಬುದ್ಧಿಯೊಳ್ ಪಲ್ಲವಿಸಿ ಮನದೊಳ್ ನಿಮಿರ್ದು ನಿಷ್ಠೆಯೊಳ್ ಕುಡಿವರಿದು ಪರಿದು ಪರ್ವಿ

೯. ಗಿರಿರಾಜನಿಗೆ ಒಪ್ಪಿಗೆಯಾಯಿತು, ಸಂತೋಷವೂ ಆಯಿತು. ಆತ ಪರಿಚಾರ ಸಮರ್ಥೆಯರಾದ ಅನೇಕ ತರುಣಿಯರನ್ನು ಅವಳ ಸೇವೆಗೆ ನೇಮಿಸಿ, ೧೦. ಗಿರಿರಾಜನು ಒಳ್ಳೆಯ ಮಗಳನ್ನು ಪಡೆಯಬೇಕೆಂಬ ಬಯಕೆಯುಳ್ಳವಳೂ, ಮುಂಗುರುಳುಗಳಲ್ಲಿ ಧರಿಸಿದ ಮಲ್ಲಿಗೆ ಹೂವಿಗೆ ಮುತ್ತಿದ ದುಂಬಿಯುಳ್ಳವಳೂ, ಜ್ಞಾನಿಯೂ, ಪರಮಾನಂದವೆಂಬ ತಪೋಭಿಲಾಷೆಯಿಂದ ಮನಸ್ಸಂತುಷ್ಟಿಯುಳ್ಳವಳೂ ಯೋಗ ಧ್ಯಾನಿಯೂ ಆದ ಮೇನಾದೇವಿಯನ್ನು ತಪಸ್ಸಿಗೆ ಕಳುಹಿಸಿದನು. ೧೧. ಗಿರಿರಾಜನಿಂದ ಬೀಳ್ಕೊಂಡು ಬಂದ ಮೇನಾದೇವಿಯು ತಪೋಯೋಗ್ಯವಾದ ರಮ್ಯಸ್ಥಲದಲ್ಲಿ ಒಂದೇ ಕಾಲಿನಿಂದ ನಿಂತುಕೊಂಡು, ಮಹಾದೇವನ ಅರ್ಧಾಂಗಿನಿಯಾದ ಮಹಾದೇವಿ ಸರ್ವಮಂಗಳೆಯ ನಿರ್ಮಲರೂಪವನ್ನು ಹೃದಯಕಮಲದಲ್ಲಿ ತಳೆದಿದ್ದಳು. ೧೨. ಮೇನಾದೇವಿಯ ಮನಸ್ಸಿನಲ್ಲಿ ಧ್ಯಾನವೆಂಬ ಚಂದ್ರನು ಉದಯಿಸುವಾಗ ಅವಳ ಕಣ್ಣುಕಮಲಗಳು ಮುಚ್ಚಿದವು. ಅವಳ ಚಿತ್ತವೆಂಬ ನೈದಿಲೆ ಅರಳಿತು. ಅವಳ ಗಂಭೀರವಾದ ತಪಸ್ಸು ಎಂಬ ಸಮುದ್ರ ಉಕ್ಕೇರಿತ್ತು. ವ॥ ಮೇನಾದೇವಿಯ ಚಿತ್ತಭೂಮಿಯಲ್ಲಿ ತಪೋಬೀಜವು ಬೇರೂರಿತು, ಅಹಂಕಾರದಲ್ಲಿ ಅಂಕುರಿಸಿತು, ಬುದ್ಧಿಯಲ್ಲಿ ಪಲ್ಲವಿಸಿತು (ಚಿಗುರಿತು), ಅದು ಮುಂದೆ ನಿಷ್ಠೆಯಲ್ಲಿ ನಿಮಿರಿ ಕುಡಿಯಿಟ್ಟು

ಪುರಹರನರಸಿಯ ಮೆಲ್ಲಡಿಗಳ್ಗೆ ನಿಲ್ಲದೆ ಧೀಂಕಿಡೆ ಭವಾನಿ ಭೋಂಕನಱೆದು ಮೇನೆಯ ತಪಕ್ಕೆ ಮಿಗೆ ಮೆಚ್ಚಿ ಕರುಣಿಸಿ ಹರನಂ ಬೀಳ್ಕೊಂಡು ತಂದೆ ಮಾಡುವ ಯಾಗಮಂ ನೋಳ್ಪ ನೆವದಿಂ ಕೈಲಾಸಮಂ ಪೊಱಮಟ್ಟು ದಕ್ಷನ ಪುರಕ್ಕಭಿಮುಖಿಯಾಗಿ,

ಕಂ।। ತ್ರಿಣಯನ ವಿರಹಿತಯಾಗ
ಕ್ಕಣಿಯರದಿಂ ಪೋಗಿ ಮುಂದೆ ನಿಲೆ ದಕ್ಷಂ ನಿ ।
ರ್ಗುಣನಂ ನಿಂದಿಸೆ ದಾಕ್ಷಾ
ಯಣಿ ಕೇಳದೆ ವಿಮಳಯೋಗದಿಂ ನಡೆತಂದಳ್ ।। ೧೩

ಸುರತರುವಿಂ ಬೀಜಂ ದಿ
ವ್ಯರತ್ನದಿಂ ಕಾಂತಿ ಪೂರ್ಣಶಶಿಯಿಂ ಕಿರಣಂ ।
ವರುಸುಧೆಯಿಂ ಮಧುರತೆ ಬಂ
ಧುರಕುಸುಮದೆ ಕಂಪು ಬರ್ಪತೆರದಿಂ ಬಂದಳ್ ।। ೧೪

ಬಂದು ನಿಜ ತಪದ ಮೇನೆಯ
ನಂದೀಕ್ಷಿಸಿ ಶಾಂತ ರವಿನಿಕಾಯ ಮರೀಚೀ ।
ವೃಂದನಿಭಕಮಳ ವಿಮಳಾ
ನಂದವಿಕಾಶಪ್ರಕಾಶನಿಧಿ ನಿಂದಿರ್ದಳ್ ।। ೧೫

ವ।। ಅಂತು ನಿಂದು,

ಕಂ।। ಉತ್ಕಟ ತಪೋನಿಷ್ಠೆಗೆ
ಸತ್ಕರುಣಮನಾಂತು ನಿನ್ನ ಬಸಿಱೊಳ್ ಬರ್ಪೆಂ ।
ಸತ್ಕುಲಜೆಯೆನುತೆ ಮೇನೆಯ
ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿರ್ದಳ್ ।। ೧೬

ಮುಂದುವರಿದು ಹಬ್ಬಿ ಪರಶಿವನ ಅರಸಿಯ ಮೆಲ್ಲಡಿಗಳಿಗೆ ಧಾಳಿಯಿಟ್ಟಿತು. ಕೂಡಲೆ ಭವಾನಿಗೆ ಇದು ಅರಿವಾಯಿತು. ದೇವಿ ಮೇನೆಯ ತಪಕ್ಕೆ ಮೆಚ್ಚಿದಳು. ಕರುಣಾಳುವಾದ ಭವಾನಿಯು ಪರಶಿವನ ಅಪ್ಪಣೆ ಪಡೆದು ತಂದೆ ದಕ್ಷನು ಕೈಗೊಂಡಿದ್ದ ಯಾಗವನ್ನು ನೋಡುವ ನೆಪದಿಂದ ಕೈಲಾಸದಿಂದ ಹೊರಟು ದಕ್ಷಪುರಾಭಿಮುಖಿಯಾಗಿ ೧೩.ದಾಕ್ಷಾಯಿಣಿಯಾದ ಗೌರಿಯು ಮುಕ್ಕಣ್ಣನಿಲ್ಲದ ಯಾಗಭೂಮಿಗೆ ಬಂದಳು. ದಕ್ಷನು ನಿರ್ಗುಣಶಿವನಿಂದೆಯಲ್ಲಿ ತೊಡಗಿದ್ದ. ಅದನ್ನು ಕೇಳಿ ಸೈರಿಸಲಾರದೆ ವಿಮಳ ಯೋಗದಿಂದ ಹಿಂದಿರುಗಿದಳು. ೧೪. ಅವಳು ಬಂದುದು ಕಲ್ಪವೃಕ್ಷದಿಂದ ಬೀಜವೂ, ದಿವ್ಯರತ್ನದಿಂದ ಕಾಂತಿಯೂ, ಪೂರ್ಣಚಂದ್ರನಿಂದ ಕಿರಣವೂ, ಅಮೃತದಿಂದ ಮಾಧುರ್ಯವೂ, ಹೂವಿನಿಂದ ಸುವಾಸನೆಯೂ ಬರುವಂತೆ ಇತ್ತು. ೧೫. ಭವಾನಿ, ನಿಜ ತಪೋಮಗ್ನೆಯಾಗಿದ್ದ ಮೇನಾದೇವಿಯ ಮುಂದೆ ಬಂದು ನಿಂತಳು. ಆ ದೇವಿಯ ಅಂದಿನ ನಿಲವು ಶಾಂತನಾದ ಸೂರ್ಯನ ಬಿಂಬದಿಂದ ಹೊರಟ ಕಿರಣವೃಂದಕ್ಕೆ ಸಮನಾಗಿದ್ದು ಮೇನೆಯ ಮುಖಕಮಲ ವಿಮಳಾನಂದವನ್ನು ಅರಳಿಸುವ ಪ್ರಕಾಶದಂತೆ ಇತ್ತು. ೧೬. ಭವಾನಿಯು ಮೇನೆಯ ಉತ್ಕಟ ತಪೋನಿಷ್ಠೆಗೆ ಮೆಚ್ಚಿ, ಅವಳಲ್ಲಿನ ಕರುಣೆಯಿಂದ "ನಿನ್ನ ಬಸಿರಲ್ಲಿ ಬರುತ್ತೇನೆ" ಎಂದು ಮೇನೆಯ ಹೃದಯಕಮಲದಲ್ಲಿನ

ಇರೆ ಮೇನೆಯಱೆದು ಹರ್ಷದ
ಶರನಿಧಿಯೊಳ್ ಪೊಕ್ಕು ಲೀಲೆ ಮಿಕ್ಕೋಲಾಡು ।
ತ್ತರಲುತ್ತೀಸಾಡುತ್ತುಂ
ಪೊರೆಯೇಱುತೆ ಜಪದ ವಿಪ್ರುಳಿ ತಪಮಂ ಬಟ್ಟಳ್ ॥ ೧೭

ಮ॥ ನಡೆತಂದಳ್ ಗಿರಿರಾಜವಲ್ಲಭೆ ಭವಾನೀ ಪ್ರೇಮದಿಂ ರಾಗದಿಂ
ಬಡದುದ್ಯತ್ ಕಲಶಪ್ರಬದ್ಧಲಲನಾ ಸಂತಾನದಿಂ ಗಾನದಿಂ ।
ಕಡುಪಿಂ ಪೊಣ್ಮುವ ವಾದ್ಯ ವಿಪ್ರವದನ ಪ್ರೋನ್ನಾದದಿಂ ವೇದದಿಂ
ಗುಡಿಗುಟ್ಟುತ್ತಿದಿರ್ಗೊಳ್ದ ಪೌರಜನತಾ ಸಂತೋಷದಿಂ ಘೋಷದಿಂ ॥ ೧೮

ಉ॥ ಬಂದಗರಾಜ ರಾಜಗೃಹಮಂ ಪುಗುತುಂ ಪರಮ ಪ್ರದೀಪೆ ಸಾ
ನಂದೆ ಸರೋಜನೇತ್ರವರವಕ್ತ್ರೆ ಮನೋಹರೆ ಮಾನ್ಯೆಮೇನೆ ಸಾ ।
ರ್ತಂದು ನಿಜೇಶನುಂ ಪ್ರಿಯದೊಳಪ್ಪಿ ಮನೋರಥ ಸಿದ್ಧಿಯಾದುದಂ
ನಿಂದುಸಿರ್ದಂತರಂಗ ಬಹಿರಂಗ ಸುಖಾನ್ವಿತೆಯಾಗುತೊಪ್ಪಿದಳ್ ॥ ೧೯

ವ॥ ಇಂತು ತನ್ನ ಬಸಿಱೊಳ್ ಭವಾನಿ ಬರ್ಪ ವರಮಂ ಪಡೆದು ಮೇನಾದೇವಿ ನಾನಾ ಸುಖದೊಳೊಪ್ಪಿರ್ದು,

ಕಂ॥ ಮುಂದಾ ಸ್ತ್ರೀರತ್ನಮನೊಲ
ಏಂದಂ ಪಡೆದಪ್ಪೆನೆಂಬುದಂ ಸೂಚಿಸುವಂ ।
ತೊಂದೆರಡು ದಿನದೊಳತ್ಯಾ
ನಂದದೆ ಕಡುಜಾಣೆ ಮಾನಿಕಂಗಂಡಿರ್ದಳ್ ॥ ೨೦

ಬೆಳಗಿನಲ್ಲಿ ಬೆಳಕಾಗಿದ್ದಳು. ೧೭. ಅದು ಮೇನಾದೇವಿಗೆ ಅರಿವಾಯಿತು. ಅವಳು ಆನಂದದ ಕಡಲಿನಲ್ಲಿ ಓಲಾಡಿದಳು. ತನ್ನ ತಪಸ್ಸು ಸಿದ್ಧಿಸಿತೆಂಬ ತೃಪ್ತಿ ಮೂಡಿತು. ಕೂಡಲೆ ಅವಳು ತನ್ನ ತಪಸ್ಸನ್ನು ಮುಗಿಸಿದಳು. ೧೮. ಭವಾನಿಯು ತನ್ನ ಉದರದಲ್ಲಿ ಹುಟ್ಟುವಳೆಂಬ ಸಂತೋಷದಿಂದ ಮೇನಾದೇವಿ ತನ್ನ ಪುರಕ್ಕೆ ಹಿಂದಿರುಗಿದಳು. ಅವಳನ್ನು ಎದುರುಗೊಳ್ಳುವ ಸಂಭ್ರಮ ಓಷಧಿಪ್ರಸ್ಥಪುರದಲ್ಲಿ ನಡೆದಿತ್ತು. ಮುತ್ತೈದೆಯರು ಪೂರ್ಣಕಲಶಗಳನ್ನು ಹಿಡಿದು ನಡೆತಂದರು. ಒಂದೆಡೆ ಗಾನ, ವಾದ್ಯಗಳ ಹಾಗೂ ವಿಪ್ರರ ವೇದಘೋಷ ಮೊಳಗುತ್ತಿತ್ತು. ಪೌರರು ಸಂತೋಷದಿಂದ ಮಹಾರಾಣಿಯನ್ನು ಎದುರುಗೊಂಡರು. ೧೯. ಮಾನ್ಯೆಯಾದ ಮೇನಾದೇವಿ ಪುರವನ್ನು ಪ್ರವೇಶಿಸಿ ಆನಂದ ದಿಂದ ಅರಮನೆಯನ್ನು ಹೊಕ್ಕಳು. ತನ್ನ ಪ್ರಾಣಕಾಂತನನ್ನು ಅಪ್ಪಿ ಮನೋರಥವು ಸಿದ್ಧಿಸಿದ ಬಗೆಯನ್ನು ವಿವರಿಸಿದಳು. ಅವಳ ಅಂತರಂಗ ಬಹಿರಂಗಗಳಲ್ಲಿ ಆನಂದ ಉಕ್ಕುತ್ತಿತ್ತು. ವ॥ ಭವಾನಿಯು ತನ್ನ ಉದರದಲ್ಲಿ ಜನಿಸುವಳೆಂಬ ಸಂತೋಷದಿಂದ ಮೇನೆ ಒಪ್ಪಿದಳು. ೨೦. ಮುಂದೆ, ಒಂದು ಸ್ತ್ರೀರತ್ನವನ್ನು ಒಲವಿನಿಂದ ಪಡೆಯುವೆನು ಎಂಬುದನ್ನು ಸೂಚಿಸುವಂತೆ ಕಡುಜಾಣೆಯಾದ ಮೇನೆ ಒಂದೆರಡು ದಿನಗಳಲ್ಲಿಯೇ ರಜಸ್ವಲೆಯಾದಳು.

ವ।। ಆ ಸಮಯದೊಳ್

ಕಂ।। ಎಸೆವ ಬಳಲ್ಮೊಗಮುಷ್ಣಮ
ನುಸಿರ್ವುಸಿರನುರಾಗವೇಱುವಕ್ಕಿದ್ದಿತಯಂ ।
ಪೊಸಕಂಪನುಗುಳ್ವ ಕಕ್ಷಂ
ನಸು ಕರಗುವ ತನು ಮನೋಹರಂ ಮಾನಿನಿಯಾ ।। ೨೧

ಸೆಡೆವ ನಡೆ ತೊಡೆಯ ತಡೆಗಾಲ್
ನಡುವಿಂಗತಿಗಾಢದುಡಿಗೆ ಬಡತನು ಸೊಂಕಂ ।
ಗೆಡೆಗುಡದ ಮನಂ ಮಾತಂ
ಮಡಗುವ ಪರಿ ಸೊಗಯಿಸಿತ್ತು ಪಂಕಜಮುಖಿಯೊಳ್ ।। ೨೨

ಮಾನಿನಿಯಾತೆಱದಿಂ ಸಂ
ದಾ ನಾಲ್ಕುಂದಿವಸಮಿರ್ದು ಬಳಿಯಿಂ ಶುದ್ಧ ।
ಸ್ನಾನಾಂಗೀಕೃತವಿಮಳ
ಶ್ರೀನಿಧಿ ಮೇನಾ ಲತಾಂಗಿ ಕಣ್ಗೆಸೆದಿರ್ದಳ್ ।। ೨೩

ಬೆಳಗಿದ ಮಣಿ ಮುಕುರದವೋಲ್
ಜಳದಂಗಳಗಲ್ದ ಚಂದ್ರಕಳೆವೋಲ್ ಪುಟವಿ ।
ಟ್ಟವಟ್ಟ ಮಿಸುನಿವೋಲ್ ಮಂ
ಗಳ ನಿರ್ಮಳ ರುಚಿರರೂಪೆಯೊಪ್ಪುತಿರ್ದಳ್ ।। ೨೪

ಮ।।ಸ್ರ।। ಸುಲಿಪಲ್ ಬಿಂಬಾಧರಂ ರಾಜಿಪ ನಯನಯುಗಂ ಚಂಪಕಾಮೋದಿತಂ ನಿ
ರ್ಮಲವಕ್ತ್ರಂ ಶ್ರೀಲಲಾಮಂ ಸುರುಚಿರವರ ವಕ್ಷೋಜಯುಕ್ತಾಂಗರಾಗಂ ।
ಎಲಸತ್ ಕಕ್ಷಾಂತದೊಳ್ ಪೂಸಿದ ಮೃಗಮದಮುದ್ಯದ್ದುಕೂಲಂ ಪ್ರಸೂನೋ
ಜ್ವಲ ಧಮ್ಮಿಲ್ಲಂ ಸರಾಗಂ ಮೆಱೆಯೆ ನಿಜಪತಿಧ್ಯಾನದೊಳ್ ಮೇನೆಯಿರ್ದಳ್ ।। ೨೫

೨೧. ಎಸೆವ ಬಳಲಿದ ಮುಖ, ಉಷ್ಣವನ್ನು ಸೂಚಿಸುವ ಉಸಿರು, ಅನುರಾಗವೇರುವ ಕಣ್ಣುಗಳು, ಹೊಸ ಸೌರಭವನ್ನು ಸೂಸುವ ಕಕ್ಷ (ಕಂಕುಳು)ಗಳು, ತುಸು ಕರಗಿದ ತನುಲತೆಯಿಂದ ಮೇನಾದೇವಿ ಬೆಳಗಿದಳು. ೨೨. ಆ ಪಂಕಜವದನೆ, ಸೆಡೆವ ನಡೆ, ತೊಡೆಯ ತಡೆಗಾಲ್ ನಡುವಿಗೆ ಅತಿ ಬಿಗಿಯಾದ ಉಡಿಗೆ, ಸೊಂಕಿಗೆ ಎಡೆಗೊಡದ ಬಡತನು, ಮಾತು-ಮನಸ್ಸನ್ನು ಬಯ್ಚಿಡುವ ರೀತಿ ಗಳಿಂದ ಶೋಭಿಸಿದ್ದಳು. ೨೩. ಹೀಗೆ ನಾಲ್ಕು ದಿವಸಗಳನ್ನು ಕಳೆದು ಶುದ್ಧಸ್ನಾನವನ್ನು ಮಾಡಿ, ಗೃಹಲಕ್ಷ್ಮಿಯೆನಿಸಿದ ಆ ಮಾನಿನಿಯಾದ ಮೇನಾದೇವಿ ಕಂಗೊಳಿಸಿದಳು. ೨೪. ಬೆಳಗಿದ ಮಣಿಮುಕುರ (ಕನ್ನಡಿ)ದಂತೆಯೂ, ಮೋಡಗಳನ್ನು ಬಿಟ್ಟ ಚಂದ್ರಕಳೆ ಯಂತೆಯೂ, ಪುಟಕ್ಕಿಟ್ಟ ಸುವರ್ಣದಂತೆಯೂ ಮಂಗಳವೂ ನಿರ್ಮಲವೂ ಮನೋಹರವೂ ಆದ ರೂಪು ತಳೆದ ಮೇನೆ ಶೋಭಿಸಿದಳು. ೨೫. ಹಸನಾದ ಹಲ್ಲು, ತೊಂಡೆಹಣ್ಣು ತುಟಿ, ಸುಂದರನಯನ, (ಕಣ್ಣು) ಸಂಪಗೆಯಂತೆ ಸುವಾಸನೆಯುಳ್ಳ, ನಿರ್ಮಲಮುಖ,

ಕಂ॥ ಇರೆ ಕುಸುಮಮಾಲೆಯಲ್ಲಿಗೆ
ವರಮಧುಕರನೆಯ್ದೆ ಬರ್ಪತೆಱದಿಂ ಬಂದಂ ।
ಗಿರಿರಾಜಂ ಸ್ಮರರಾಗಾ
ತುರಭರಭರಿತಂ ರತಾರ್ಥಿಮೂರ್ತಿ ವಿಳಾಸಂ ॥ ೨೬

ವ॥ ಅಂತು ಬಂದು ಸಜ್ಜನ ಸ್ನೇಹದಿಂ ಸಜ್ಜೆವನೆಯಂ ಪೊಕ್ಕು ಹಂಸತೂಳಿತಳ್ಪದ ಮೇಲೆ ಮೇನೆಯುಂ ತಾನು ಕುಳ್ಳಿರ್ದು ಬಳ್ಕಿವರಿವ ನೇಹಂ ಕುಡಿವರಿದು ನಿಮಿರೆ ಸುಖ ಸೊಂಕು ವಿಕಾಸಮನೆಯ್ದೆ ಸಹಜಾಮೋದಂ ಸೊಗಸನೀಯೆ ನೀಡಾಗದೆ ಗಾಢಾಲಿಂಗನಕ್ಕಾತರಿಸುವಲ್ಲಿ

ಕಂ॥ ಲವಲವಿಸುವ ನೋಟಂ ಕೆ
ತ್ತುವ ತೋಳ್ ಕಂಪಿಸುವ ಹಸ್ತಮೊಗೆವ ಬೆಮರ್ ಪೊ ।
ಣ್ಮುವ ಪುಳಕಮುಣ್ಮುವಶ್ರುಗ
ಳವತರಿಸುವ ಗದ್ಗದಂ ಮನೋಹರಮಾಗಳ್ ॥ ೨೭

ಚಂ॥ ಬರೆತೆಗೆದಪ್ಪಿಯಪ್ಪಿ ಮುದದಿಂ ಮೊಗದೊಳ್ ಮೊಗಮಿಕ್ಕಿಯಿಕ್ಕಿ ಸು
ಯ್ಯೆರಲೆಡೆಯಾಡೆ ಜಿಹ್ವೆ ನಲಿದಾಡೆ ಸುಖಂ ಸುಳಿದಾಡೆ ಲೀಲೆ ಮೋ ।
ಹರಿಸೆ ಗಳಂ ಚಮತ್ಕರಿಸೆ ಗದ್ಗದಮಾಂತಿರೆ ಕಂಪನಂ ಕೊನ
ರ್ತಿರೆ ಪುಳಕಂಗಳೆಳ್ದಿರೆ ಪರಸ್ಪರಮಾರ್ತದೊಳೊಲ್ದು ಕೂಡಿದರ್ ॥ ೨೮

ಕಂ॥ ಪ್ರಿಯದಿಂದೆ ಮನಂ ಮನದೊಳ್
ನಯನಂ ನಯನಂಗಳೊಳ್ ಮುಖಂ ಮುಖದೊಳಗಾ ।
ಸುಯಿ ಸುಯ್ಯೊಳ್ ಕೆಯ್ ಕೆಯ್ಯೊಳ್
ಮೆಯಿ ಮೆಯ್ಯೊಳ್ ಬೆರಸೆ ಬೆರಸಿದರ್ ದಂಪತಿಗಳ್ ॥ ೨೯

ಮನೋಹರವಕ್ಷೋಜಗಳಿಗೆ ಲೇಪಿಸಿದ ಅಂಗರಾಗ, ಬೆಳಗುವ ಕಂಕುಳಲ್ಲಿ ಬಳಿದ ಕಸ್ತೂರಿ, ಸುಂದರದುಕೂಲ, ಹೂಮುಡಿದ ಕೇಶಪಾಶಗಳಿಂದ ಪ್ರಕಾಶಿಸುವ ಮೇನಾದೇವಿ ನಿಜಪತಿಯ ನೆನಹಿನಲ್ಲಿದ್ದಳು. ೨೬. ಹೀಗೆ ಮೇನೆ ಇರು ವಾಗ ಹೂವಿನಮಾಲೆ ಇರುವಲ್ಲಿಗೆ ದುಂಬಿ ಬರುವಂತೆ ಗಿರಿರಾಜನ ಸ್ಮರರಾಗಾತುರ ದಿಂದ ರತಾರ್ಥಿಯಾಗಿ ಬಂದ. ವ॥ ಹೀಗೆ ರಾಜನು ನಲ್ಮೆಯಿಂದ ಶಯ್ಯಾಗಾರವನ್ನು ಪ್ರವೇಶಿಸಿ ಹಂಸತೂಲಿಕಾತಲ್ಪದಲ್ಲಿ ಮೇನೆಯೊಡನೆ ಕುಳಿತು, ಬಳ್ಕಿವರಿದ ಸ್ನೇಹವು ಕುಡಿಯಿಟ್ಟು, ಸುಖಸೊಂಕುವಿಕಾಸವಾಗಿ, ಪ್ರಕೃತಿ ಸಹಜವಾದ ಹರ್ಷದಿಂದ ಪುಳಕಿತ ನಾಗಿ, ಗಾಢಾಲಿಂಗನಕ್ಕೆ ಎಳಸುತ್ತಿರುವಲ್ಲಿ ೨೭. ಲವಲವಿಸುವ ನೋಟ, ಸ್ಫುರಿಸು (ಅದಿರು)ವ ತೋಳು, ನಡುಗುವಹಸ್ತ, ಹೊಮ್ಮುತ್ತಿರುವ ಬೆವರು, ಮೂಡುವ ರೋಮಾಂಚ, ಉಕ್ಕಿಬರುವ ಆನಂದಾಶ್ರು, ಗದ್ಗದ ನುಡಿಗಳಿಂದ ಮೇನೆ ಮಹೋಹರ ಳಾಗಿದ್ದಾಳೆ. ೨೮. ಸತಿಪತಿಗಳು ಪರಸ್ಪರವಾಗಿ ಬರಸೆಳೆದು ಮತ್ತೆಮತ್ತೆ ಬಿಗಿಯಪ್ಪಿ, ಮದದಿಂದ ಮುಖದಲ್ಲಿ ಮುಖವನ್ನು ಮತ್ತೆಮತ್ತೆ ಇಟ್ಟು ಮುದ್ದಿಸಿ, ಸುಯ್ಯೆಲರು (ನಿಟ್ಟುಸಿರು) ಆಡುತ್ತಿರಲು, ಜಿಹ್ವೆ ನಲಿದಾಡಲು, ಸುಖವು ಸುಳಿದಾಡಲು, ಲೀಲೆ ಮೋಹರಿಸಲು, ಕಂಠರವವು ಚಮತ್ಕಾರವಾಗಿ ಗದ್ಗದವಾಗಿರಲು, ಕಂಪನವು ಮೂಡಿ, ನವಿರೆದ್ದು ಅವರು ಪರಸ್ಪರ ಒಲಿದು ಕೂಡಿದರು. ೨೯. ಆ ದಂಪತಿಗಳು ಮನಸ್ಸಿಗೆ ಮನಸ್ಸು, ಕಣ್ಣಿಗೆ ಕಣ್ಣು, ಮುಖಕ್ಕೆ ಮುಖ, ಸುಯ್ಯಿಗೆ ಸುಯ್, ಕೈಗೆ ಕೈ, ಮೈಗೆ ಮೈ

ಅರಲುತಿರೆ ನಯನ ಕುಮುದಂ
ಪೊಱೆಯೇರುತ್ತಿರೆ ತನುಪ್ರಭಾ ಕೌಮುದಿ ಕಾ ।
ಮರಸಾಬ್ಧಿ ಮಿಕ್ಕುಮೀಱು
ತ್ತಿರೆ ನೆರೆದರ್ ಭರಿತ ಸುರತ ಚಂದ್ರೋದಯದೊಳ್ ॥ ೩೦

ಕಂ॥ ಸುರತಸುಖಂ ತವಿಲಱೆಯದೆ
ಭರದಿಂದಮರ್ದಪ್ಪಿದಪ್ಪು ಸಡಿಲದೆ ತಮ್ಮೊಳ್ ।
ಬೆರಸಿದ ಸುಯ್ ಬರ್ಚದೆ ಬೇ
ರ್ವರಿದ ಮನಂ ಬೇಱೆ ಪರಿಯದಿರೆ ನೆರೆದಿರ್ದರ್ ॥ ೩೧

ವ॥ ಇಂತು ಸಮಾನರಾಗ ಭೋಗ ಭರಿತ ಪರಮಸುಖದಿಂ ಸಂತುಷ್ಟ ಪುಷ್ಪಹೃದಯರಾಗಿ,

ಕಂ॥ ತಿಳಿದು ಸುರತಾಂತದೊಳ್ ಕ
ಣ್ಗೊಳಿಸುವ ಗಿರಿಪತಿಯುಮೆಸೆವಮೇನಾಸತಿಯುಂ ।
ಕಳೆಯೋಡಿದಿಂದು ಬೆಳ್ದಿಂ
ಗಳನಾಂತ ಚಕೋರಿಯೆಂಬನಂ ಮೆಱೆದಿರ್ದರ್ ॥ ೩೨

ವ॥ ಆ ಸಮಯದೊಳ್

ಕಂ॥ ಪದೆಪಿಂ ಮೇನೆಯ ಹೃತ್ಕಮ
ಲದ ಬೆಳಗಿಳಿತಂದು ಮಿಕ್ಕ ಶಕ್ತಿಸುಖದ ಸಂ ।
ಗದೊಳೊಂದಿ ಬಳೆಯುತ್ತಿರ್ದುದು
ಸದಮಳರೂಪಿ ಭವಾನಿಯುಜ್ವಳ ತೇಜಂ ॥ ೩೩

ಚಂ॥ ತೊಳಪ ಸರೋಜಗರ್ಭದೊಳಗೊಪ್ಪುವ ಬಾಲಮರಾಳ ಪಿಂಡದಂ
ತಳವಡೆ ಶಾರದಾಭ್ರದೊಳಗಿರ್ಪಲಸಚ್ಛಶಿಲೇಖೆಯಂತೆಯು ।
ಜ್ವಲಿಸುವ ಬೀಜದೊಳ್ ಪೊಳೆವ ಪುಣ್ಯಸುಧಾಲತೆಯಂತೆ ನಾಡೆ ಕಣ್
ಗೊಳಿಸಿತು ಪುಣ್ಯಗರ್ಭಮತಿಶೈವ ಸುಖೋದರದಲ್ಲಿ ಮೇನೆಯಾ ॥ ೩೪

ಮೇಳಯಿಸಿ ಸುಖಿಸಿದರು. ೩೦. ದಂಪತಿಗಳ ಸುರತವೆಂಬ ಚಂದ್ರೋದಯದಲ್ಲಿ ಅವರ ನಯನವೆಂಬ ಕುಮುದ (ನೈದಿಲೆ)ಗಳು ಅರಳುತ್ತಿದ್ದವು, ಅವರ ಶರೀರ ಪ್ರಭೆಯೆಂಬ ಬೆಳದಿಂಗಳು ಮೈಯುಬ್ಬಿ ಬೆಳಗುತ್ತಿತ್ತು. ಕಾಮರಸವೆಂಬ ಅಬ್ಧಿ (ಸಮುದ್ರ)ಯು ಉಕ್ಕಿ ಬರುತ್ತಿತ್ತು. ೩೧. ಸುರತಸುಖವು ಮುಗಿಯದೆ, ಗಾಢಾಲಿಂಗನವು ಸಡಿಲವಾಗದೆ, ತಮ್ಮಲ್ಲಿ ಬೆರಸಿದ ಸುಯ್‌ಬಿಚ್ಚದೆ, ಮನಸ್ಸು ಬೇರೆಯಾಗದಂತೆ ಅವರು ನೆರೆದರು. ವ॥ ಹೀಗೆ ಸಮರತಿ ಸುಖಸಂತುಷ್ಟ ಹೃದಯರಾಗಿ ೩೨. ಸುರತಾಂತ್ಯದಲ್ಲಿ ಎಚ್ಚೆತ್ತ ಆ ಗಿರಿರಾಜ ಮತ್ತು ಮೇನೆಯರು ಸುಪ್ರಸನ್ನರಾಗಿ ಕಳಂಕವಿಲ್ಲದ ಚಂದ್ರ ಮತ್ತು ಬೆಳದಿಂಗಳನ್ನು ಪಡೆದ ಚಕೋರಿಯರಂತೆ ಪ್ರಕಾಶಿಸಿದರು. ವ॥ ಆ ಸಮಯದಲ್ಲಿ ೩೩. ಭವಾನಿಯ ಉಜ್ವಲ ತೇಜಸ್ಸು ಮೇನಾದೇವಿಯ ಹೃತ್ಕಮಲಕ್ಕೆ ಇಳಿದುಬಂದು ಮಿಕ್ಕ ಶಕ್ತಿಸುಖದ ಸಂಗದೊಳಗೆ ಸೇರಿ ಸದಮಲ ರೂಪಿನಿಂದ ಬೆಳೆಯುತ್ತಿತ್ತು. ೩೪. ಬೆಳಗುವ ಕಮಲ ಮಧ್ಯದಲ್ಲಿ ಪ್ರಕಾಶಿಸುವ ಹಂಸದ ಎಳೆಯ ಪಿಂಡದಂತೆಯೂ, ಶರತ್ಕಾಲದ ಮೇಘದಮರೆಯಲ್ಲಿರುವ ಶುಭ್ರ ಚಂದ್ರಲೇಖೆಯಂತೆಯೂ,

ವ॥ ಇಂತೊಪ್ಪುತ್ತುಮಿರ್ದು

ಕಂ॥ ಒಂದೆರಡು ಮೂಱು ನಾಲ್ಕ
ಯ್ದೆಂದಾಱೇಳೆಂಬ ಮಾಸಮಾಗಿರೆ ಗರ್ಭಂ ।
ಚಂದಂಬಡೆದೊಳಗೆಸೆದಾ
ನಂದದೆ ಬಳೆಯಿತ್ತಗಣ್ಯ ಪುಣ್ಯೋದರದೊಳ್ ॥ ೩೫

ಅಱೆವಿನ ಕಣಿ ಮುಕ್ತಿಯ ಮಣಿ
ಹೆಱಿಸೂಡಿದನಚ್ಚ ಸೊಗದ ಮೊಳೆ ಬೆಳೆಯುತ್ತುಂ ।
ತೆಱಪುಗೊಳುತ್ತಿರೆ ಮೇನೆಯ
ಹೊಱಗೊಗೆದುದು ಗರ್ಭಸೂಚನಾ ಸೌಂದರ್ಯಂ ॥ ೩೬

ವ॥ ಅದೆಂತೆಂದೊಡೆ,

ತಿಳಿವಳಿಯವಿಳತ್ತಮಾದುವು
ನವನಾಭ ನಿವಾರಿಸಿತ್ತು ಗುಣ್ಪಂ ಕುಚವಾಂ
ತುವು ಕುಡಿಗರ್ಪಂ ನೋಟಂ
ತವೆ ತಳೆದುವು ನಸು ಬಳಲ್ಕೆಯಂ ಮೇನಕೆಯಾ ॥ ೩೭

ನಡೆ ನಾಡೆ ಮಾಂದ್ಯದೊಳ್ ಪುಗೆ
ಮುಡಿ ಮೂಡೆ ಕವಲ್ತು ಕದಪು ಕಾಂತಿಯನುಗೆ ಮೆಲ್ ।
ನುಡಿ ನೀಡೆ ಮೃದುಮಧುರಮಂ
ನಡು ನೀಡಂ ಪೊಂಗೆ ಮೇನೆಗೆಸೆದುದು ಗರ್ಭಂ ॥ ೩೮

ಕಂ॥ ಮಿಗೆ ಬಾಸೆ ಬಣ್ಣವೇಱೆತು
ಸೊಗಯಿಸಿದುದು ಮೊಗರಸಂ ತುಳುಂಕಾಡುತೆ ಮೆಲ್ ।
ನಗೆ ಸೂಸಿತ್ತು ಬಳಲ್ಕೆಯ
ನೊಗೆದುವು ನವನವ ಮನೋರಥಂ ಮೇನಕೆಯಾ ॥ ೩೯

ಉಜ್ವಲವಾದ ಬೀಜದಲ್ಲಿ ಹೊಳೆಯುವ ಪುಣ್ಯ ಅಮೃತಲತೆಯಂತೆಯೂ ಮೇನಾದೇವಿಯ ಸುಖೋದರದಲ್ಲಿ ಪುಣ್ಯಗರ್ಭವು ಕಂಗೊಳಿಸಿತು. ವ॥ ಹೀಗಿರುವಾಗ ೩೫. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳುತಿಂಗಳವರೆಗೆ ಮೇನಾದೇವಿಯ ಪುಣ್ಯಗರ್ಭದಲ್ಲಿ ಶೈವಪಿಂಡವು ಬೆಳೆಯುತ್ತಿತ್ತು. ೩೬. ಅರಿವಿನ ಗಣಿ, ಮುಕ್ತಿಯ ಮಣಿ, ಚಂದ್ರಶೇಖರನ ಅಚ್ಚಸುಖದ ಮೊಳಕೆಯು ಬೆಳೆಯುತ್ತಿರುವಾಗ ಮೇನೆಯ ಶರೀರದ ಹೊರಗೆ ಗರ್ಭಸೂಚನೆಯ ಸೌಂದರ್ಯ ಕಂಡಿತು. ೩೭. ಮೇನಾದೇವಿಯ ಉದರದ ಮೇಲಿನ ತ್ರಿವಳಿಗಳು ಕಾಣದಂತಾದವು, ನಾಭಿಯು ತನ್ನ ಆಳವನ್ನು ಕಳೆದುಕೊಂಡಿತ್ತು. ಸ್ತನಗಳ ಚೂಚುಕಗಳು ಕಪ್ಪಿಟ್ಟವು. ಕಣ್ಣುಗಳು ತುಸು ಬಳಲಿಕೆಯನ್ನು ತಳೆದವು. ೩೮. ಮೇನೆಗೆ ಗರ್ಭಬೆಳೆಯುತ್ತಿರುವಾಗ ಅವಳ ನಡೆ ಮಂದವಾಯಿತು. ಮುಡಿ ಟಿಸಿಲೊಡೆಯಿತು, ಕದಪು ಕಾಂತಿಸೂಸುತ್ತಿತ್ತು. ಮೆಲ್ನುಡಿ ಮಧುರವಾಯಿತು, ನಡು ಹಿಗ್ಗುತ್ತಿತ್ತು. ೩೯. ಮೇನಕೆಯ ಹೊಟ್ಟೆಯ ಮೇಲಿನ ರೋಮ ರಾಜಿ ಬಣ್ಣವೇರಿತು, ಅವಳ ಮುಖಕಾಂತಿಯ ಹರ್ಷರಸ ತುಳುಕಾಡಿ

ವ।। ಇಂತು ತೀವಿದ ಗರ್ಭದಿಂ ಭಾವಭರಿತ ಪರಮಹರ್ಷಂ ನೆಲೆಗೊಂಡು ಸುಖದೊಳಿರ್ಪ ಮೇನಾದೇವಿಯಿರವನಂತಃಪುರದೊಳ್ ಕಳಾಪ್ರೌಢೆಯರಪ್ಪ ವಿಳಾಸಿನಿಯರ್ ಗಿರಿರಾಜಂಗೆ ತೋಱುತ್ತುಮಿರ್ದರದೆಂತೆಂದೊಡೆ,

ಚಂ।। ಮುಡಿಯ ಭರಕ್ಕುರೋಜದ ಭರಕ್ಕೆ ನಿತಂಬಭರಕ್ಕೆ ನಾಡೆ ಮೆ
ಲ್ಲಡಿಯಿಡಲೆತ್ತಲಾಱದಿವೆ ಮತ್ತಮದಲ್ಲದೆ ಪುಣ್ಯಗರ್ಭದಿಂ ।
ಕಡುಪಿರಿದಾದ ಭಾರದೊಳದೆಂತಡಿಯಿಟ್ಟಪಳೆಂತು ನಿಂದಪಳ್
ನುಡಿದಪಳೆಂತು ನೋಡುವಳದೆಂತು ಗಿರೀಶ್ವರ ನೋಡು ಮೇನೆಯಂ ।। ೪೦

ವ।। ಎಂದು ಬಿನ್ನವಿಸುತ್ತಿರೆ ಕೆಲವುಂ ದಿನದೊಳ್,

ಆದುದು ನವಮಾಸಂ ಪು
ಣ್ಯೋದರದೊಳ್ ಪಕ್ವಸಮಯಮಲರ್ದುದು ಸುಪಥಂ ।
ವೇದಿಸಿದುದು ಸುಮುಹೂರ್ತಂ
ಕಾದಿರ್ದುವು ಭರದೊಳೆಮಗೆ ತಮಗೆನುತಾಗಳ್ ।। ೪೧

ವ।। ಆ ಸಮಯದೊಳ್

ಚಂ।। ಅಲರ್ದ ಸರೋಜದಿಂದಮೊಗೆತರ್ಪ ಲಸತ್ಕಳ ಹಂಸಿಯಂತೆ ನಿ
ರ್ಮಲತರ ಮೇರುವಿಂದೆ ಪೊಱಪೊಣ್ಮುವ ತನ್ಮಣಿಮಾಲೆಯಂತೆ ನಿ ।
ಶ್ಚಲ ಪುರುಹೂತ ದಿಙ್ಮುಖದಿನೇಳ್ತರುತಿರ್ಪ ಮೃಗಾಂಕ ಬಿಂಬದಂ
ತಳವಡೆ ಗೌರಿ ಗರ್ಭದೊಳಗಿಂ ಬರುತೊಪ್ಪಿದಳಂದು ಮೇನೆಯಾ ।। ೪೨

ಮೆಲ್‌ನಗೆ ಸೂಸಿತ್ತು. ಮೇನಕೆಯ ಮನೋರಥವು ಹೊಸ ಹೊಸ ಮನೋರಥಗಳನ್ನು ಬಯಸುತ್ತಿತ್ತು. ವ।। ಹೀಗೆ ಮೇನಾದೇವಿ ಬಳೆದ ಗರ್ಭದಿಂದ ಭಾವಭರಿತ ಪರಮಹರ್ಷದಿಂದ ಸುಖವಾಗಿರುವಾಗ, ಅಂತಃಪುರದ ಕಳಾಪ್ರೌಢೆಯರಾದ ವಿಳಾಸಿನಿಯರು ಗಿರಿರಾಜನಿಗೆ, ಹೀಗೆ ಸೂಚನೆ ನೀಡಿದರು. ೪೦. "ಎಲೈ ಗಿರೀಶ್ವರ, ಮೇನಾದೇವಿಗೆ ಮುಡಿಯ ಭಾರ, ಉರೋಜ (ಸ್ತನ)ಭಾರ, ನಿತಂಬಭಾರ ಇವುಗಳಿಂದಾಗಿ ಅವಳು ಮೊದಲೇ ಮೆಲ್ಲಡಿಯಿಡಲು ಅಸಮರ್ಥಳಾಗಿದ್ದಳು? ಅದೂ ಅಲ್ಲದೆ ಈಗ ಪುಣ್ಯಗರ್ಭ ಧರಿಸಿರುವುದರಿಂದ ಇವೆಲ್ಲಕ್ಕೂ ಮಿಗಿಲಾದ ಭಾರವಾಗಿದೆ ಎಂದ ಮೇಲೆ ಅವಳು ಹೇಗೆ ತಾನೆ ಅಡಿಯಿಡುವಳು, ನಿಲ್ಲುವಳು, ನುಡಿವಳು, ನೋಡುವಳು? ನೀನೇ ವಿಚಾರ ಮಾಡು" ಎಂದು ಅರಿಕೆ ಮಾಡಿದರು. ವ।। ಮತ್ತೆ ಕೆಲವು ದಿನ ಕಳೆಯಲು-೪೧. ನವಮಾಸ ತುಂಬಿ ಬಂತು, ಪುಣ್ಯಗರ್ಭದಲ್ಲಿ ಪರಿಪಕ್ವತೆ ಕೂಡಿ ಬಂತು, ಸುಪಥವು ಏರ್ಪಟ್ಟಿತು, ಸುಮುಹೂರ್ತಗಳು ತಮತಮಗೆಂದು ಕಾಯ್ದಿದ್ದವು. ೪೨. ಅರಳಿದ ಕಮಲದಿಂದ ಹೊರಬರುವ ಪ್ರಕಾಶಿಸುವ ಕಲಹಂಸಿಯಂತೆಯೂ ನಿರ್ಮಲವಾದ ಮೇರುವಿನಿಂದ ಹೊರ ಹೊಮ್ಮುವ ಮಣಿಮಾಲೆಯೂ, ಪೂರ್ವದಿಙ್ಮುಖದಿಂದ ಹೊರಬರುತ್ತಿರುವ ಚಂದ್ರಬಿಂಬದಂತೆಯೂ ಮೇನಾದೇವಿಯ ಪುಣ್ಯಗರ್ಭದಿಂದ ಗೌರೀದೇವಿಯು ಹೊರಹೊಮ್ಮಿದಳು.

ಕಂ॥ ಇಂದಿರೆ ಬಂದಿರೆ ಕೆಲದೊಳ್
ನಿಂದಿರೆಯನಸೂಯೆ ಸಪ್ತಮಾತೃಕೆಯರ್ ತಾ ।
ವೊಂದಿರೆ ರೋಹಿಣಿ ತಣ್ಪಂ
ತಂದಿರೆ ಗಿರಿಜಾತೆಯೋತು ಪೊಱಮಡುತಿರ್ದಳ್ ॥ ೪೩

ತೆರೆ ಮಸಗೆ ಕಾಂತಿ ನಾಭೀ
ಸರೋಜಮಲ್ಲಾಡೆ ಜೀವಹಂಸಿ ಬೆದಱಿ ಬಂ ।
ಧುರ ಕುಚ ಚಕ್ರಂ ನಡುಗು
ತ್ತಿರೆ ಮೇನೆಯ ಗರ್ಭಸರಸಿಯಂ ಪೊಱಮಟ್ಟಳ್ ॥ ೪೪

ರತಿ ನೆಲನುಗ್ಗಡಿಸೆಯರುಂ
ಧತಿ ಕೆಯ್ಗುಡೆ ಸುಖಮನೆಯ್ದೆ ಸಾವಿತ್ರಿ ಸರ ।
ಸ್ವತಿ ಪೊಗಳೆ ಶಚಿ ನಲಿಯೆ ಹಾ
ರ್ವತಿ ಮೇನೆಯ ಗರ್ಭನಿಳಯದಿಂ ಪೊಱಮಟ್ಟಳ್ ॥ ೪೫

ಇಳೆಯೊಳ್ ಪಾರ್ವತಿಯುದಯಿಸೆ
ಕಳೆಯೇಱೆದನಿಂದು ಜೊನ್ನಮಲರ್ದುದು ಕಾಮಂ ।
ತಳೆದಂ ನಿಜಭುಜ ಬಲಮಂ
ಪುಳಕಿತಮಾಯ್ತಿಂದುಧರನ ವರವಾಮಾಂಗಂ ॥ ೪೬

ಚಂ॥ ಮದನನ ಕರ್ವುವಿಲ್ಗೆ ಮದವೇಱಿ ವಸಂತನ ಸರ್ವಭಾಗ್ಯ ಸಂ
ಪದ ದಳವೇಱಿ ಲೋಕನಯನೋತ್ಪಳರಾಜಿ ವಿಕಾಸವೇಱಿ ಪ ।
ರ್ಚೋದವಿದ ಮೇನೆ ತತ್ಪತಿಗಳುತ್ಸವವಾರಿಧಿಯೇಱಿ ಗೌರಿ ತಾ
ನುದಯಿಸಿದಳ್ ಸುಧಾಂಶುಕಳೆ ಪಶ್ಚಿಮಭಾಗದೆ ಪುಟ್ಟದಂದದಿಂ ॥ ೪೭

೪೩. ಭಕ್ತಪ್ರಿಯೆಯಾದ ಗಿರಿಜಾತೆಯು ಹೊರಬರುತ್ತಿರುವಾಗ ಲಕ್ಷ್ಮಿ ಪಕ್ಕದಲ್ಲಿದ್ದಾಳೆ, ಅನಸೂಯೆ ನಿಂತಿದ್ದಾಳೆ. ಸಪ್ತಮಾತೃಕೆಯರು ವಿನೀತೆಯರಾಗಿ ಕಾಯ್ದಿದ್ದಾರೆ, ರೋಹಿಣಿ ತಂಪನ್ನು ತಂದಿದ್ದಾಳೆ. ೪೪. ಕಾಂತಿ ಹೆಚ್ಚಿತು, ನಾಭಿಕಮಲವು ಕದಲಿತು, ಜೀವಹಂಸಿ ಬೆದರಿತು, ಬಂಧು ಕುಚಚಕ್ರ ನಡುಗುತ್ತಿತ್ತು, ಮೇನೆಯ ಗರ್ಭದಿಂದ ಶಿಶು ಹೊರಬರುವಾಗ ೪೫. ಪಾರ್ವತಿಯು ಮೇನೆಯ ಗರ್ಭದಿಂದ ಹೊರಬರುತ್ತಿರುವಾಗ ರತಿದೇವಿ ಘೋಷಿಸುತ್ತಿದ್ದಾಳೆ, ಅರುಂಧತಿ ಹಸ್ತನೀಡಿದ್ದಾಳೆ, ಸಾವಿತ್ರಿ ಆನಂದಿಸುತ್ತಿದ್ದಾಳೆ, ಸರಸ್ವತಿ ಸ್ತುತಿಸುತ್ತಿದ್ದಾಳೆ; ಶಚಿ ನಲಿಯುತ್ತಿದ್ದಾಳೆ. ೪೬. ಪಾರ್ವತಿಯು ಭುವಿಯಲ್ಲಿ ಅವತರಿಸಿದಾಗ ಚಂದ್ರನಿಗೆ ಕಳೆಯೇರಿತು, ಬೆಳದಿಂಗಳು ಹರಡಿತು, ಕಾಮನಿಗೆ ಭುಜಬಲ ಹೆಚ್ಚಿತು, ಪರಶಿವನ ಎಡಭಾಗ ರೋಮಾಂಚಿತವಾಯಿತು. ೪೭. ಗೌರಿಯು ಅವತರಿಸಿದ್ದರಿಂದ ಮದನನ ಕಬ್ಬಿನಬಿಲ್ಲಿಗೆ ಮದವೇರಿತು, ವಸಂತನ ಸರ್ವಭಾಗ್ಯ ಸಂಪತ್ತು ದಳವೇರಿತು, ಲೋಕದ ನಯನೋತ್ಪಳರಾಜಿ ವಿಕಾಸವಾಯಿತು, ಹರ್ಷಗೊಂಡ ಮೇನೆ ಮತ್ತು ಅವಳ

ಜಡೆಮುಡಿ ಇಂದು ಬಾಹು ಬಳೆ ಭಾಳವಿಲೋಚನಮಕ್ಷಮಾಲೆಯೊ
ಳ್ಕುಡೆ ನವಕಾಂತಿ ಹಸ್ತಕಟಕಂ ಮೆಱೆಯುತ್ತಿರೆ ಪುಣ್ಯದಂತೆ ಕಂ ।
ಪಿಡಿದ ಸುರದ್ರುಮ ಪ್ರಸವದಂತೆ ಪರಾಪರಮುಕ್ತಿಯಂತೆ ಸಂ
ಗಡಿಸಿದ ಕಾಮಧೇನುವಿನವೋಲ್ ಗಿರಿರಾಜತನೂಜೆಯೊಪ್ಪಿದಳ್ ॥ ೪೮

ವ॥ ಇಂತೊಪ್ಪುತ್ತುಮಿರ್ದು,

ಕಂ॥ ಶಿವಲಿಂಗೇಕ್ಷಣ ಲೋಲುಪೆ
ಶಿವಪ್ರಸಾದಾತ್ತಚಿತ್ತೆ ಶಿವಭಕ್ತೆ ಶಿವೋ ।
ತ್ಸವೆ ಶಿವಪುಣ್ಯಾಂಭೋನಿಧಿ
ಶಿವನಂ ನೆಱಿನಚ್ಚೆ ಮಚ್ಚೆ ಕಣ್ಮುಚ್ಚಿರ್ದಳ್ ॥ ೪೯

ಇರೆ ಮೇನಾ ಮಾನಿನಿಯುಂ
ಗಿರಿರಾಜನುಮಱೆಯದಂಜಿ ಗುರುಶೈವಾಚಾ ।
ರ್ಯರನಂದು ಕೇಳಿ ಶಿವ ಶಿವ
ಪರಮಶಿವಜ್ಞಾನದಿಂದಮವರಿಂತೆಂದರ್ ॥ ೫೦

ಚಂ॥ ಅನುನಯದಿಂದೆ ಮುನ್ನಮವನೀತಳದೊಳ್ ಮಿಗೆ ಬಾಣನೆಂಬವಂ
ಜನಿಯಿಸಿ ಕಣ್ಗಳಂ ತೆಱೆಯದಿರ್ದೊಡೆ ಲಿಂಗಮನಂದು ತೋಱೆ ಭೋಂ ।
ಕನೆ ನಯನಂಗಳಂ ತೆಱೆದು ಕಂಡೊಲವಿಂ ಮೊಲೆಯುಂಡನಂತೆ ಸ
ಜ್ಜನೆ ಗಿರಿಜಾತೆ ಕಣ್ದೆಱೆಯದಿರ್ಪುದು ತಪ್ಪದಿದುತ್ತರೋತ್ತರಂ ॥ ೫೧

ಪತಿಯರ ಉತ್ಸವ ಸಾಗರ ಉಕ್ಕಿತು, ಚಂದ್ರಕಲೆ ಪಶ್ಚಿಮದಲ್ಲಿ ಉದಯಿಸಿದಂತೆ ಗೌರಿ ಉದಯಿಸಿದಳು. ೪೮. ಜಡೆಮುಡಿ ಇಂದು ಬಾಹು ಬಳೆ ಹಣೆಗಣ್ಣು ಅಕ್ಷಮಾಲೆ ಒಳ್ಕೆಯ ಉಡುಗೆ, ನವಕಾಂತಿ, ಕೈಬಳೆಗಳು ಮೆರೆಯುತ್ತಿರಲು ಆ ಪುಣ್ಯಶಿಶು ಪುಣ್ಯದಂತೆ, ಸುವಾಸನೆಯುಳ್ಳ ಕಲ್ಪಕುಜದ ಚಿಗುರಿನಂತೆ, ಪರಾಪರಮುಕ್ತಿಯಂತೆ, ಜೊತೆಗೆ ಬಂದ ಕಾಮಧೇನುವಿನಂತೆ ಗಿರಿಜಾದೇವಿ ಒಪ್ಪಿದ್ದಳು. ೪೯. ಶಿವಭಕ್ತೆಯಾದ ಆ ಶಿಶುವಿಗೆ ಶಿವಲಿಂಗವನ್ನು ನೋಡುವುದರಲ್ಲಿ ಆಸಕ್ತಿ, ಶಿವಪ್ರಸಾದಕೊಂಬಲ್ಲಿ ಮನಸ್ಸು, ಶಿವೋತ್ಸವ, ಶಿವಪುಣ್ಯಾಂಬುಧಿಯೆನಿಸಿರುವ ಶಿಶು ಶಿವನನ್ನು ನಚ್ಚಿಮಚ್ಚಿ ಕಣ್ಣುಮುಚ್ಚಿದ್ದಳು. ೫೦. ಹೀಗೆ ಹುಟ್ಟಿದ ಮಗು ಕಣ್ಣು ತೆರೆಯದೆ ಇರುವಾಗ ಅದನ್ನು ನೋಡಿ ಮೇನಾ-ಗಿರಿರಾಜರು ಹೆದರಿದರು. ಕೂಡಲೆ ಕುಲಗುರು ಶಿವಾಚಾರ್ಯರಲ್ಲಿ ಬಿನ್ನವಿಸಿದಾಗ ಶಿವಜ್ಞಾನಿಗಳಾಗಿ ಅವರು ಹೀಗೆಂದರು. ೫೧. ಶಿವಾಚಾರ್ಯರು ಗಿರಿರಾಜನಿಗೆ ಮಹಾಶಿವಭಕ್ತನಾದ ಬಾಣನ ಕಥೆಯನ್ನು ಹೇಳಿದರು-"ಹಿಂದೆ ಬಾಣನು ಉದಯಿಸಿದಾಗ ಅವನು ಮುಚ್ಚಿದ ಕಣ್ಣುಗಳನ್ನು ತೆರೆದಿರಲಿಲ್ಲ, ಆಗ ಅವನಿಗೆ ಶಿವಲಿಂಗವನ್ನು ತಂದು ತೋರಿಸಲು ಕೂಡಲೆ ಕಣ್ಣು ತೆರೆದು ಮೊಲೆಯುಂಡನಂತೆ, ಎಂದಮೇಲೆ ಸಜ್ಜನೆಯಾದ ಗಿರಿಜಾತೆ ಕಣ್ಣು ತೆರೆಯದಿರುವುದಕ್ಕೆ ಇದೇ

ಕಂ॥ ಎನೆ ಗಿರಿರಾಜಂ ದೇವಾ
ರ್ಚನಾ ನಿಕೇತನಕೆ ಬಂದು ಶಶಿ ರವಿ ಶಿಖಿ ಲೋ ।
ಚನ ಶಿವಲಿಂಗಮನುತ್ಸವ
ಜನಿತಮನಂ ತಂದು ಮುಂದೆ ನಿಂದೊಲವಿಂದಂ ॥ ೫೨

ಅಮಮ ಪಯೋವಾರ್ಧಿಗೆ ಚಂ
ದ್ರಮನಂ ಪುಣ್ಯಕ್ಕೆ ಮುಕ್ತಿಯಂ ತೋರ್ಪಂತಾ ।
ವಿಮಳೆಗೆ ಗಿರಿಜೆಗೆ ಶಿವಲಿಂ
ಗಮನಧಿಕ ಮನಃಪ್ರಮೋದದಿಂ ತೋಱುವುದುಂ ॥ ೫೩

ತೋಱಲೊಡಂ ಕಣ್ದೆಱೆದಳ್
ಪೇಱೆದಳಿರಡುಂ ಕರಂಗಳಂ ನೊಸಲೊಳ್ ಸೊಂ ।
ಪೇಱೆದಳಭವನೊಳಗೆ ಬೇ
ರೂಱೆದಳಂಕುರಿಸಿ ಪಲ್ಲವಿಸಿ ಫಲವಾದಳ್ ॥ ೫೪

ಕಂ॥ ಆ ಕೆಯ್ಯೊಳ್ ಮೊಲೆಯುಂಡಳ್
ಸಾಕಾರೆ ಶಿವಪ್ರಸಾದ ನವನೀತಮುಮಂ ।
ಕೆಯ್ಕೊಂಡಳ್ ಗಿರಿಜಾವಧು
ಲೋಕೈಕಾರಾಧ್ಯೆ ಮೇನೆಯೊಡನೊಪ್ಪಿರ್ದಳ್ ॥ ೫೫

ವ॥ ಆ ಸಮಯದೊಳ್

ಉ॥ ಮೂಡಿದ ಶೀತದೀಧಿತಿಗೆ ಕಾಲಪಿತಂ ಪ್ರಸವೋತ್ಸವಂಗಳಂ
ಮಾಡುವ ಮಾಳ್ಕೆಯಿಂದಮರಭೂರುಹದಿಂ ನೆಗೆದಂಕುರಕ್ಕೆ ಕೊಂ ।
ಡಾಡಿ ವಸಂತಕಂ ಜನನ ಕರ್ಮವನೊಪ್ಪಿರೆ ಮಾಡುವಂದದಿಂ
ಮಾಡಿದನಳ್ಕೆಯಿಂದೆ ಗಿರಿರಾಜನ ಜಾತೆಗೆ ಜಾತಕರ್ಮಮಂ ॥ ೫೭

ಕಾರಣವಿರಬೇಕು” ಎಂದರು. ೫೨. ಅದನ್ನು ಕೇಳಿದ ಗಿರಿರಾಜ ಶಿವಾರ್ಚನಾ ಮಂದಿರಕ್ಕೆ ಬಂದು ಸಂತೋಷದಿಂದ ಮುಕ್ಕಣ್ಣನಾದ ಪರಶಿವನ ಲಿಂಗಮೂರ್ತಿಯನ್ನು ತಂದು ಮುಂದೆ ನಿಂತನು. ೫೩. ಗಿರಿರಾಜನು ಗಿರಿಜೆಗೆ ಅಧಿಕಮನಸ್ಸಂತೋಷದಿಂದ ಶಿವಲಿಂಗವನ್ನು ತೋರಿದುದು ಸಮುದ್ರಕ್ಕೆ ಚಂದ್ರನನ್ನು ಪುಣ್ಯಕ್ಕೆ ಮುಕ್ತಿಯನ್ನು ತೋರಿಸಿದಂತಾಯಿತು. ೫೪. ಶಿವಲಿಂಗವನ್ನು ಕಂಡೊಡನೆಯೇ ಗಿರಿಜೆ ಕಣ್ಣು ತೆರೆದಳು, ಎರಡೂ ಕೈಗಳನ್ನು ಜೋಡಿಸಿ ಹಣೆಯಲ್ಲಿಟ್ಟು ಕೈಮುಗಿದಳು. ಅಭವನೊಳಗೆ ಸೊಂಪೇರಿದಳು, ಬೇರೂರಿದಳು, ಅಂತೆಯೇ ಪಲ್ಲವಿಸಿ ಫಲವಾದಳು. ೫೫. ಲೋಕೈಕಾರಾಧ್ಯೆಯಾದ ಗಿರಿಜೆಯು ಶಿವಲಿಂಗದರ್ಶನಮಾಡಿದ ತರುವಾಯ ಮೊಲೆಯುಂಡಳು, ಶಿವಪ್ರಸಾದ ನವನೀತವನ್ನು ತೆಗೆದುಕೊಂಡು ಮೇನೆಯೊಡನಿದ್ದಳು. ೫೬. ಉದಯಿಸಿದ ಚಂದ್ರನಿಗೆ ಕಾಲಪಿತನು ಪ್ರಸವೋತ್ಸವಗಳನ್ನು ಮಾಡುವಂತೆ, ಕಲ್ಪವೃಕ್ಷದಿಂದ ಮೂಡಿದ ಚಿಗುರಿಗೆ ವಸಂತಕನು ಜನನ ಕರ್ಮವನ್ನು ಮಾಡುವಂತೆ ಗಿರಿರಾಜನು ಅಜಾತೆಯಾದ ಸುತೆಗೆ ಜಾತಕರ್ಮವನ್ನು ನೆರವೇರಿಸಿದನು. ೫೭. ಬೆಳಗುವ ಕಣ್ಣುಗಳ ಕಾಂತಿ, ಬೆಳಗುವ ಕಪೋಲಗಳು, ಬೆಳಗುವ ಕೋಮಲ ಶರೀರ ಕಾಂತಿಗಳಿಂದ ಅಂಬಿಕೆ ತೊಳತೊಳಗುತ್ತ ನಳನಳಿಸಿ ಹೊಳೆಯುತ್ತಿದ್ದಳು.

ವ।। ಅಂತು ಮಾಡೆ

ಕಂ।। ಬೆಳಗುವ ನಯನದ್ಯುತಿಯಿಂ
ಬೆಳಗುವ ಗಂಡಸ್ಥಳಂಗಳಿಂ ಬೆಳಗುವ ಕೋ ।
ಮಳ ತನುರುಚಿಯಿಂದಂ ತೊಳ
ತೊಳಗುತೆ ನಳನಳಿಸಿ ಪೊಳೆಯುತಂಬಕೆ ಎಸೆದಳ್ ।। ೫೭

ಮಂಗಳಮುಖಿ ಮಾನಿನಿ ಶಿವ
ಲಿಂಗದ ಸುಖಲತೆ ಸಮಸ್ತ ಲಕ್ಷಣಯುತೆ ತಾ ।
ನಂಗೆಯ್ಯ ಪದ್ಮದಿಂ ಚರ
ಣಂಗಳ ಪದ್ಮಂಗಳಿಂದೆ ಗಿರಿಸುತೆಯೆಸೆದಳ್ ।। ೫೮

ವ।। ಆ ಪ್ರಸ್ತಾವದೊಳ್

ಕಂ।। ಜಯ ಜಯ ಜಯ ಜಯತು ಶುಭೋ
ದಯೆ ವರನಿಧಿ ಮಾಯೆ ದೇವಿ ಶರ್ವಾಣಿ ಶಿವ ।
ಪ್ರಿಯೆ ಶಾಶ್ವತೆ ಶಾಂತೆ ಜಗ
ತ್ತ್ರಯಹಿತೆ ಶರಣೆನುತುಮಿರ್ದುದಬಳಾಲೋಕಂ ।। ೫೯

ವ।। ಎಂಬ ಪುಣ್ಯ ಕೀರ್ತಿಯಂ ತಳೆದಿರ್ಪ ಸಮಯದೊಳ್ ಸಕಳ ವಾದ್ಯಂಗಳ ಮಂಗಳ ಧ್ವನಿಗಳುಂ ಪಿಂಗದೆ ಸುರಿವ ಸುರಕುಜದ ಸುಮನೋವೃಷ್ಟಿಯಂ ಪುಟ್ಟಿದುದೆಂತೆಂದೊಡೆ :

ಕಂ।। ವರ ಶಂಖರವಂ ಕಹಳೆಗ
ಳ ರವಂ ಡಿಂಡಿಮ ರವಂಗಳಾನಕದ ರವಂ ।
ಕರಡೆಗಳ ರವಂ ನಿಸ್ಸಾ
ಳರವಂ ಭೇರೀರವಂ ಮೃದಂಗರವಂಗಳ್ ।। ೬೦

ಎಳನನೆಗಳ ಮೆಲ್ಸರಿ ನನೆ
ಗಳ ಬಲ್ಸರಿ ಮುಗುಳ ತಂದಲಾ ಮೊಗ್ಗೆಯ ಪೆ ।
ರ್ಮಳೆಯಲರ್ಗಳ ಬಿಱುಮಳೆ ಎಸ
ಳ್ಗಳ ಸೋನೆ ಪರಾಗ ಪರಿಮಳದ ತುಂತುಱುಗಳ್ ।। ೬೧

೫೮. ಮಂಗಳಕರವಾದ ಮುಖವುಳ್ಳವಳು, ಮಾನಿನಿ, ಶಿವಲಿಂಗದ ಸುಖಲತೆ, ಸಮಸ್ತ ಲಕ್ಷಣಯುತೆ ಗಿರಿಸುತೆಯು ಕರಕಮಲ ಮತ್ತು ಪಾದಪದ್ಮಂಗಳಿಂದ ಪ್ರಕಾಶಿಸಿದಳು. ೫೯. ಅಲ್ಲಿದ್ದ ಅಬಲೆಯರೆಲ್ಲ ಕೈಜೋಡಿಸಿ ಶುಭೋದಯೇ, ವರನಿಧಿ, ಮಾಯೆ, ದೇವಿ, ಶರ್ವಾಣಿ, ಶಿವಪ್ರಿಯೆ, ಶಾಶ್ವತೆ, ಶಾಂತೆ, ಮೂರು ಲೋಕಕ್ಕೂ ಹಿತವೆಸಗುವ ಅಂಬಿಕೆ ಎಂದು ಶರಣಾಗಿ ಜಯಕಾರ ಮಾಡುತ್ತಿದ್ದರು. ವ।। ಈ ಬಗೆಯ ಪುಣ್ಯ ಕೀರ್ತಿಯನ್ನು ತಳೆದಿರುವ ಸಮಯದಲ್ಲಿ ಸಕಲವಾದ್ಯಗಳ ಮಂಗಳ ಧ್ವನಿಗಳಾದವು, ಕಲ್ಪವೃಕ್ಷದಿಂದ ಪುಷ್ಪವೃಷ್ಟಿಯಾಯಿತು. ೬೦. ಶ್ರೇಷ್ಠ ಶಂಖಗಳ ನಾದ, ಕಹಳೆಗಳ ರವ, ಡಿಂಡಿಮ, ದುಂದುಭಿ, ಕರಡೆ, ವಾದ್ಯರವ, ನಿಸ್ಸಾಳ-ಭೇರೀ ಮೃದಂಗರವಗಳು ಮೊಳಗಿದವು. ೬೧. ಎಳೆಮೊಗ್ಗುಗಳ ಮೃದುಮಳೆ, ಬಲಿತ ಮೊಗ್ಗುಗಳ ಬಲ್ಸರಿ, ಮುಗುಳು ತಂದಲು ಮೊಗ್ಗೆಗಳ ಪೆರ್ಮಳೆ, ಹೂವುಗಳ ಬಿರುಮಳೆ, ಎಸಳುಗಳ

ವ|| ಅಂತು ಪುಟ್ಟಿದ ವಾದ್ಯಧ್ವನಿಗಳುಮಂ ಗಿರಿರಾಜಂ ಕಂಡು ಮನಂಗೊಂಡು

ಚಂ|| ಇಳೆಗತಿಶೀತಳಂ ಮಿಗೆ ಗಿರೀಶ್ವರನುತ್ಸವದಿಂದೆ ತುಪ್ಪದೋ
ಕುಳಿ ನವದುಗ್ಧದೋಕುಳಿ ಹಿಮವಜ್ರದೋಕುಳಿ ಜೇನುತುಪ್ಪದೋ ।
ಕುಳಿ ದಧಿಯೋಕುಳಿ ಪ್ರಸವದೋಕುಳಿ ಕಸ್ತುರಿ ಚಂದನಂಗಳೋ
ಕುಳಿ ಪನಿನೀರ್ಗಳೋಕುಳಿಯನಾಡಿದನುಬ್ಬದನೊಕ್ಕಿಲಿದಕ್ಕಿದಂ ॥ ೬೨

ವ|| ಅಂತೋಕುಳಿಯನಾಡಿ ನವೀನ ಶೃಂಗಾರಮಂ ಮಾಡಿ

ಕಂ|| ಆದರದಿಂ ಗೋದಾನಂ
ಸ್ತ್ರೀದಾನಂ ವಸ್ತ್ರದಾನಮಿಭಕುಲದಾನಂ ।
ಭೂದಾನಂ ಧನದಾನಂ
ಶ್ರೀದಾನಂಗುಡುತುಮೊಪ್ಪಿದಂ ಗಿರಿರಾಜಂ ॥ ೬೩

ಗುಡಿಕಟ್ಟಿತು ನೆಱೆ ಪುರದೊಳ್
ಮಡುಗಟ್ಟಿತ್ತಚಳ ನಾಥ ಸಂತೋಷರಸಂ ।
ಕುಡಿಯಿಟ್ಟುದು ಧೀಂಕಿಟ್ಟುದು
ಗಡಿಗೆಟ್ಟುದು ಪುಣ್ಯಕೀರ್ತಿಲತೆ ಧಾರಿಣಿಯೊಳ್ ॥ ೬೪

ವ|| ಎಂಬ ಯಶಸ್ಸಿಂಗೆ ತಾವೆ ಭಾಜನರಾಗಿ ಗಿರಿರಾಜನುಂ ಮೇನಾದೇವಿಯುಂ ಪರಿಜನಮುಂ ಪುರಜನಮುಂ ಧರಾವಳಯಮುಂ ಪರಮಸುಖದಿಂದಿರ್ಪಲ್ಲಿ

ಚಂ|| ತೊಲಗದ ಪುಣ್ಯವಾರಿಧಿಗಗಣ್ಯಮರೀಚಿಗೆ ಲೀಲೆಯಿಂದೆ ಬಂ
ದಿಳೆಯೊಳೆ ಪುಟ್ಟಿದಪ್ರತಿಮೆಗಾನತಲೋಕೆಗೆ ಶರ್ವನಾಮೆಗು ।
ಜ್ವಲಿಪ ನಿಜಕ್ಕೆ ನಾಮಕರಣಂ ಗಿರಿಜಾತೆಯೆನಿಪ್ಪುದಾಗೆ ತೊ
ಟ್ಟಲೊಳಿಡುತಿರ್ದರೊಪ್ಪುವ ಸುವಾಸಿನಿಯರ್ ಮನದುತ್ಸವಂಗಳಿಂ ॥ ೬೫

ಸೋಸೆ ಪರಾಗ ಪರಿಮಳಗಳ ತುಂತುರು ಸುರಿಯಿತು. ೬೨. ಪುತ್ರಿಯ ಜನನೋತ್ಸವದ ಅಂಗವಾಗಿ ಗಿರಿರಾಜನು ಓಕುಳಿಯಾಡಿದನು. ಅದರ ವರ್ಣನವಿದು- ಇಳೆಗೇ ಅತಿಶೀತಳನಾದವನು ಹಿಮವಂತ; ಆತ ಅತ್ಯಂತ ಸಂತೋಷದಿಂದ ತುಪ್ಪದೋಕುಳಿ, ನವದುಗ್ಧ (ಹಾಲು) ದೋಕುಳಿ, ಹಿಮವ್ರಜ (ಆಲಿಕಲ್ಲು) ದೋಕುಳಿ, ಜೇನುತುಪ್ಪದೋಕುಳಿ, ದಧಿ (ಮೊಸರು) ಯೋಕುಳಿ, ನವಪ್ರಸವ (ಹೊಸ ಹೂವು) ದೋಕುಳಿ, ಕಸ್ತೂರಿ-ಶ್ರೀಗಂಧಗಳ ಓಕುಳಿ ಮತ್ತು ಪನ್ನೀರುಗಳ ಓಕುಳಿಯನ್ನು ಆಡಿದ. ೬೩. ಗಿರಿರಾಜ ಪುತ್ರಿಯ ಜನನೋತ್ಸವದ ಸಂತೋಷ ಸಂದರ್ಭದಲ್ಲಿ ಸತ್ಪಾತ್ರರಿಗೆ ಗೋದಾನ, ಕನ್ಯಾದಾನ, ವಸ್ತ್ರದಾನ, ಆನೆ, ಭೂ, ಹಿರಣ್ಯ (ಹಣ) ಮತ್ತು ಸಂಪದ್ದಾನಗಳನ್ನು ಮಾಡಿದನು. ೬೪. ಪರ್ವತರಾಜನ ಸಂತೋಷ ರಸವು ಗುಡಿಗಟ್ಟಿತು, ಮಡುಗಟ್ಟಿತು; ಆತನ ಪುಣ್ಯಕೀರ್ತಿಲತೆ ಕುಡಿಯಿಟ್ಟಿತು. ಗಡಿಮೀರಿ ಭೂಲೋಕದಲ್ಲೆಲ್ಲಾ ಧಾಳಿಯಿಟ್ಟಿತು. ವ|| ಹೀಗೆ ಕೀರ್ತಿಭಾಜನರಾದ ಗಿರಿರಾಜ ದಂಪತಿಗಳು ಪರಿಜನ, ಪುರಜನ ಮತ್ತು ಭೂಮಂಡಲವೆಲ್ಲ ಆನಂದ ಪಡುತ್ತಿರುವಾಗ- ೬೫. ಅಮಿತ ಪುಣ್ಯದ ಕಡಲು, ಅಗಣಿತಮರೀಚಿ, ಅನುಪಮೆ, ಶರಣಾದ ಸರ್ವಲೋಕೆ, ಶರ್ವೆಗೆ, ಭುವಿಯಲ್ಲಿ ಅವತರಿಸಿದ ಉಜ್ವಲ ನಿಜಕ್ಕೆ ಸುವಾಸಿನಿಯರು

ಕಂ॥ ದಿಟದಿಂ ಜಗಕ್ಕೆ ತನ್ನುಂ
ಗುಟಮೇ ತಾಯ್ದೊಟ್ಟಲಾದ ಗಿರಿಸುತೆಯನತಿ ।
ಸ್ಫುಟಮಣಿಗಣಪ್ರಭಾಸಂ
ಪುಟಮೆನಿಸುವ ರನ್ನದೊಟ್ಟಲೊಳಗಿರಿಸುತ್ತುಂ ॥ ೬೬

ರಾಗಂ ಮಿಗೆ ಸಪ್ತರ್ಷಿ
ಸ್ತ್ರೀಗಣಮೊಲವಿಂದೆ ಲಳಿತೆ ಬಂಗಾಳಂ ಶ್ರೀ ।
ರಾಗಂಗಳೊಗೆಯೆ ಪಾಡುತೆ
ತೂಗಿದರಖಿಳ ಪ್ರಪಂಚವಾಡಿಪ ಶಿಶುವಂ ॥ ೬೭

ಜೋ ಸಕಳ ತತ್ತ್ವಮಯೆ ಜೋ
ಜೋ ಸತ್ತ್ವಾದಿ ಗುಣರಹಿತೆ ಜೋ ನಿರ್ಮಳೆ ಜೋ ।
ಜೋ ಸದ್ಗುಣೆ ಜೋ ಶಾಶ್ವತೆ
ಜೋ ಸಂಪದೆ ಜೋ ವಿಶಾಲೆ ಜೋ ಶಿವೆ ಜೋಜೋ ॥ ೬೮

ಶಾ॥ ಜೋಜೋ ಶಂಕರನರ್ಧಮಂ ಕವರ್ದುಕೊಳ್ವತ್ಸಂತರೂಪಾನ್ವಿತೇ
ಜೋಜೋ ಸರ್ವಜಗಚ್ಛಿಶುಪ್ರಕರಮಂ ರಕ್ಷಿಪ್ಪ ಮಾತಾಮಹೇ ।
ಜೋಜೋ ಶೈವಸಮುದ್ರವರ್ಧನಕರ ಪ್ರಖ್ಯಾತ ಚಂದ್ರಾನನೇ
ಜೋಜೋ ರಕ್ಷಿಸೆನುತ್ತೆ ತೂಗಿ ನಲಿದರ್ ಶರ್ವಾಣಿಯಂ ಜಾಣೆಯರ್ ॥ ೬೯

ವ॥ ಅಂತು ತೂಗುವ ಜೋಗುಳದ ರಾಗದೊಳಂ, ಮೊಲೆಯೂಡುವ ಮೇನೆಯ ಮಗ್ಗುಲೊಳಂ, ಸಾಗಿಸುವ ಸಾವಿತ್ರಿಯ ಸೋಗಿಲೊಳಂ, ಎತ್ತುವನಸೂಯೆಯ ಹಸ್ತದೊಳಂ, ಅಪ್ಪುವರುಂಧತಿಯುರದೊಳಂ, ನೆಗಪುವ ಗಾಯತ್ರಿಯ ಸೊಗಸಿನೊಳಂ, ಮುಟ್ಟುವ ರೋಹಿಣಿಯ ತಣ್ಪಿನೊಳಂ, ಸೋಂಕುವ ಕಮಲೆಯ ಸಂಪದದೊಳಂ, ಮುದ್ದಾಡಿಸುವ ಸರಸ್ವತಿಯ ಮಧುರ ವಾಣಿಯೊಳಂ, ನೋಡುವ ಶಚಿಯ ಸಂತೋಷದೊಳಂ, ಪರಸುವ ಸಪ್ತಮಾತೃಕೆಯರ

'ಗಿರಿಜಾತೆ' ಎಂದು ಹೆಸರಿಟ್ಟು ತೊಟ್ಟಲಲ್ಲಿಟ್ಟು ತೂಗಿದರು. ೬೬. ನಿಜವಾಗಿಯೂ ಲೋಕಕ್ಕೆ ತನ್ನ ಅಂಗುಷ್ಠವೇ ತಾಯ್ತೊಟ್ಟಲು; ಅಂಥ ಗಿರಿಸುತೆಯನ್ನು ಮಣಿಗಣಪ್ರಭಾ ಸಂಪುಟವೆನಿಸುವ ರತ್ನದ ತೊಟ್ಟಲಲಿಟ್ಟು, ೬೭. ಅಖಿಲ ಪ್ರಪಂಚವನ್ನು ಆಡಿಸುವ ಶಿಶುವನ್ನು ಸಪ್ತರ್ಷಿಪತ್ನಿಯರು ಮೊದಲಾದ ಸ್ತ್ರೀಗಣವು ಲಳಿತೆ-ಶ್ರೀರಾಗ-ಬಂಗಾಳಿ ಮುಂತಾದ ರಾಗಗಳಲ್ಲಿ ಹಾಡಿ ತೂಗಿದರು. ೬೮. ಜೋಗುಳವನ್ನು ಹಾಡುವ ಸ್ತ್ರೀಯರು ಗಿರಿಜೆಯ ಗುಣಗಳನ್ನು ಹೇಳುತ್ತ ಸಕಲತತ್ವಮಯೆ, ಸತ್ವಾದಿಗುಣರಹಿತೆ, ನಿರ್ಮಳೆ, ಸದ್ಗುಣೆ, ಶಾಶ್ವತೆ, ಸಂಪದೆ, ವಿಶಾಲೆ, ಶಿವೆ ಎಂದು ಸ್ತುತಿಸಿದರು. ೬೯. ಜೋಗುಳ ಹಾಡುವ ಆ ಜಾಣೆಯರು, ಶರ್ವಾಣಿಯನ್ನು ಕುರಿತು 'ಶಂಕರನ ಅರ್ಧವನ್ನೇ ಕಸಿದುಕೊಳ್ಳುವರೂಪಸಿ, ಸಮಸ್ತ ಜಗತ್ತಿನ ಶಿಶುಗಳನ್ನೇ ರಕ್ಷಿಸುವ ಮಾತಾಮಾಹೆ, ಶಿವಭಕ್ತಿಸಮುದ್ರವನ್ನು ಉಕ್ಕೇರಿಸುವ ಚಂದ್ರಮುಖಿ ಕಾಪಾಡು' ಎಂದು ತೂಗಿ ನಲಿದರು. ವ॥ ಶಿಶುಗಿರಿಜೆಯ ಲಾಲನೆ ಪಾಲನೆಗಳ ಹೊಣೆ ಮೇನಾದೇವಿ, ಸಾವಿತ್ರಿ, ಅನಸೂಯೆ, ಅರುಂಧತಿ, ಗಾಯತ್ರಿ, ರೋಹಿಣಿ, ಲಕ್ಷ್ಮಿ, ಸರಸ್ವತಿ,

ಪರಕೆಯೊಳಂ, ಮಿಕ್ಕುನಲಿವಚಲಗತಿಯಳ್ಳಿಂಗೊಳಂ, ಸಾಮರ್ಥ್ಯದ ಬಳ್ಳಿನಂತೆ, ಸೌಂದರ್ಯದಂಕುರದಂತೆ, ಸೌಕುಮಾರ್ಯದ ಪಲ್ಲವದಂತೆ, ಸಾಹಿತ್ಯದ ಕುಸುಮದಂತೆ, ಸತ್ಯದ ಫಲದಂತೆ, ಭೂಮಿಯ ಬಿಣ್ಪಿನಂತೆ, ಸಲಿಲದ ತಣ್ಪಿನಂತೆ, ಗಗನದ ಪೆಂಪಿನಂತೆ, ಪಯೋನಿಧಿಯ ಗುಣ್ಪಿನಂತೆ, ಪವಮಾನಸುಸಿರಿ ಪಾವಕನ ತೇಜದಂತೆ, ಚಂದ್ರನ ಬಲದಂತೆ, ದಿವಸೇಂದ್ರನ ಕಿರಣದಂತೆ, ಪರಮಾತ್ಮನ ಪರಿಣಾಮದಂತೆ, ಲೋಕವಾಲೋಕದಂತೆ, ಸಲ್ಲಕ್ಷಣದ ಲಾವಣ್ಯದಂತೆ, ಬೆಳ್ದಿಂಗಳ ಬಣ್ಣದಂತೆ, ವಸಂತನ ವಶ್ಯದಂತೆ, ಮಲಯಾನಿಲನ ಮಹಿಮೆಯಂತೆ, ಮಕರಧ್ವಜನ ಮದದಂತೆ, ಕುಸುಮಬಾಣದ ಕುಶಲದಂತೆ, ಪುಣ್ಯದ ಜೀವದಂತೆ, ಶಿವಜ್ಞಾನದ ದೇಹದಂತೆ, ಸಾಲೋಕ್ಯದ ಸವಿಯಂತೆ, ಸಾಮೀಪ್ಯದ ಸೀಮೆಯಂತೆ, ಸಾರೂಪ್ಯದ ಸುಧೆಯಂತೆ, ಸಾಯುಜ್ಯದ ನಿಲವಿನಂತೆ, ಶಿವನ ಸುಖದಂತೆ, ಮುಕ್ತಿಯ ಮುಖದಂತೆ, ಕಾಂತಿಯ ಲತೆಯಂತೆ, ನಿರುಪಾಧಿಕ ಜ್ಯೋತಿಯಂತೆ, ಸಕಲ ಜಗನ್ಮಾತೆಯಪ್ಪ ಗಿರಿಜಾತೆ ಶೈಶವ ಲೀಲೆಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬಳೆಯುತಿರ್ದಳಂತುಮಲ್ಲದೆಯುಂ,

ಕಂ|| ಸರಸಿಜ ಕುಟ್ಮಳಮಲರ್ವಂ
ತಿರೆ ಕರುಣಾನಿಳಯ ಮೃದು ಕವಾಟಂದೆಗೆವಂ ।
ತಿರೆ ನಗೆ ಮೊಗಮಂ ಸವಿವಂ
ತಿರೆ ಗಿರಿಸುತೆ ಕಲ್ತಳಮರ್ದಿನಗೆಯಂ ನಗೆಯಂ ॥ ೭೦

ಘನರಜತಗಿರಿಯ ಸಿಂಹಾ
ಸನದೊಳ್ ನಲಿದಿರ್ಪ ಪರಿಯನಭವನ ತೊಡೆಯೊಳ್ ।
ಮನದೊಲವಿಂ ಕುಳ್ಳಿರ್ಪುದ
ನನುಕರಿಸುವ ತೆಱದೊಳಗಜೆ ಕುಳ್ಳಿರೆ ಕಲ್ತಳ್ ॥ ೭೧

ಕಂ|| ತ್ರ್ಯಂಬಕನಂ ಬಲವರಲೆರ
ಡೆಂಬೀ ಪದವೆಯ್ದವೆಂದು ನಾಲ್ಕುಂ ಕಾಲಿಂ ।
ದಂ ಬಲವಂದಪಳೆಂಬಂ
ತಂಬಿಕೆಯಂಬಳಿಕಯಾಡುವಳ್ ಶೈಶವದೊಳ್ ॥ ೭೨

ಶಚಿ, ಸಪ್ತಮಾತೃಕೆಯರು ಮೊದಲಾದವರದಾಗಿತ್ತು. ಸಾಮರ್ಥ್ಯದ ಬೀಜದಂತೆ, ಸೌಂದರ್ಯ, ಸೌಕುಮಾರ್ಯ, ಸಾಹಿತ್ಯ, ಸತ್ಯ ಮುಂತಾದ ಶ್ರೇಷ್ಠವಸ್ತುಗಳ ಸಾಧರ್ಮ್ಯವನ್ನು ಹೊಂದಿ ಲೋಕಮಾತೆ ಗಿರಿಜಾತೆ ಶೈಶವಲೀಲೆಗಳಲ್ಲಿ ತೊಡಗಿ ಬೆಳೆಯುತ್ತಿದ್ದಳು. ೭೦. ಕಮಲದ ಮೊಗ್ಗು ಅರಳುವಂತೆ, ಕರುಣೆಯ ಮನೆಯ ಕದವನ್ನು ತೆರೆವಂತೆ, ನಗೆಮೊಗವನ್ನು ಸವಿಯುವಂತೆ ಅಮೃತದ ಅಗೆ (ಮೊಳಕೆ)ಯಂತಿರುವ ನಗೆಯನ್ನು ಕಲಿತಳು. ೭೧. ರಜತಗಿರಿಯ ಚಿತ್ಪೀಠದಲ್ಲಿ ಮಂಡಿಸಿರುವ ಪರಶಿವನ ತೊಡೆಯ ಮೇಲೆ ಮನದೊಲವಿನಿಂದ ಕುಳಿತಿದ್ದುದನ್ನು ಅನುಕರಿಸುವಳೋ ಎಂಬಂತೆ ಅಗಜೆ ಕುಳಿತುಕೊಳ್ಳುವುದನ್ನು ಕಲಿತಳು. ೭೨. ಅಂಬಿಕೆ ಶೈಶವದಲ್ಲಿ ಪರಶಿವನನ್ನು ಪ್ರದಕ್ಷಿಣೆ ಮಾಡಿದರೆ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕೂ ಪದರಗಳು ಕೈಸಾರುವುವೆಂಬುದನ್ನು ಸೂಚಿಸಲೋ ಎಂಬಂತೆ ನಾಲ್ಕು ಕಾಲುಗಳಿಂದ ಸುಳಿದಾಡುವಳು.

ಬೇರ್ಪಡದೆ ಕೂಡೆ ತಾನೆಯ
ಡರ್ಪಖಿಳಕ್ಕೆಂಬ ನೈಜಮಂ ಮೆಱೆಯಿಸುತಂ ।
ದಾರ್ಪಿಂ ಭಿತ್ತಿಗಳಂ ನೆ
ಮ್ಮಿರ್ಪಳ್ ನಿಂದಗಜೆ ಬಾಲ್ಯಮಂ ನಟಯಿಸುತುಂ ॥ ೭೩

ಅಡಿಗಳ ಕೋಮಲತೆಗೆ ಧರೆ
ಬಿಡಲಾಱದೆ ಪೊಡಮಡುತ್ತೆ ಬಡದಿರೆ ನಯದಿಂ ।
ಬಿಡಿಸಿಕೊಳುತ್ತುಂ ಮೆಲ್ಲನೆ
ನಡೆದಪಳೆನೆ ಮೆಱೆದುವಗಜೆಯೊಳ್ ದಟ್ಟಡಿಗಳ್ ॥ ೭೪

ಒಡನೆಯ ಸತಿಯರ್ ನೆಲನು
ಗ್ಗಡಿಸೆ ಧರಾಕಾಂತೆ ಮೆಲ್ಲಡಿಗೆ ಮದುವಾಗು ।
ತ್ತೆಡೆಗುಡುತುಂ ಪುಳಕಿಸುತಿರೆ
ನಡೆಗಲ್ತಳ್ ಗಿರಿಜೆ ಪರಮನರಮನೆಯತ್ತಲ್ ॥ ೭೫

ರಸನೆಯ ಸುಧೆಯಂ ಮಿಗೆ ಸವಿ
ದುಸವಿದು ಮಗ್ನತೆಯನೆಯ್ದಿ ಮಧುರಾಕ್ಷರಮು ।
ಬ್ಬಸದಿಂ ಪೊರಳುತ್ತುರುಳು
ತ್ತೊಸರ್ದಪುದೆನೆ ಗಿರಿಜೆಯೊಳ್ ತೊದಳ್ನುಡಿಯೆಸೆಗುಂ ॥ ೭೬

ಕಂ॥ ಮನದೊಳಗೆ ಪುಟ್ಟಿ ಕಂಠದೊ
ಳನುನಯದಿಂ ಬಳೆದು ಜಿಹ್ವೆಯೊಳ್ ದಟ್ಟಡಿಯಿ ।
ಟ್ಟೆನಸುಂ ಸುಳಿಗೊಳುತುಂ ಗಿರಿ
ತನಯಳ ಮುಖದೊಳ್ ತೊದಳ್ನುಡಿಗಳೆಸೆದಿರ್ಕುಂ ॥ ೭೭

೭೩. ಶಿವನಿಂದ ಬೇರ್ಪಡದೆ ಎಂದರೆ ಶಿವನಲ್ಲಿ ಅವಿನಾಭಾವದಿಂದ ಇರುವ ತಾನು ಅಖಿಲ ಜಗತ್ತಿಗೂ ಆಧಾರ ಎಂಬ ನಿಜವನ್ನು ಸೂಚಿಸುವಳೋ ಎಂಬಂತೆ ಅವಳು ಸ್ವಶಕ್ತಿಯಿಂದ ಎದ್ದುನಿಂತು ಗೋಡೆಹಿಡಿದು ಬಾಲಲೀಲೆಗಳನ್ನು ನಟಿಸಿದಳು. ೭೪. ಅವಳ ಮೆಲ್ಲಡಿಗಳ ಸೌಕುಮಾರ್ಯವನ್ನು ಕಂಡು ಬಿಡಲಾರದೆ ಧರೆಯು ಪೊಡಮಟ್ಟು ಬಿಡದಿರುವಾಗ, ಅವಳು ನಯದಿಂದ ಅವುಗಳನ್ನು ಬಿಡಿಸಿಕೊಂಡು ಮೆಲ್ಲನೆ ನಡೆಯುತ್ತಿರುವಳೋ ಎಂಬಂತೆ ದಟ್ಟಡಿ ಇಡುತ್ತಿದ್ದಳು. ೭೫. ಒಡನಿದ್ದ ಸತಿಯರು ನೆಲವನ್ನು ಎಚ್ಚರಿಸುತ್ತಿರಲು, ಧರಾಕಾಂತೆಯು ಅವಳ ಮೆಲ್ಲಡಿಗಳಿಗೆ ಮೃದುವಾಗುತ್ತಾ, ಪುಳಕಿಸುತ್ತಿರಲು, ಅಗಜೆಯು ಪರಮನ ಅರಮನೆ ಹತ್ತುವುದಕ್ಕಾಗಿಯೋ ಎಂಬಂತೆ ನಡೆಯಕಲಿತಳು. ೭೬. ರಸನೆ (ಜಿಹ್ವೆ)ಯ ಮಾಧುರ್ಯವನ್ನು ಚನ್ನಾಗಿ ಸವಿಸವಿದು ಮಗ್ನವಾಗಿ ಮಧುರ ಅಕ್ಷರಗಳು ನಾಲಗೆಯಲ್ಲಿ ಉಕ್ಕಿ ಹೊರಳುತ್ತಿವೆಯೋ ಎಂಬಂತೆ ಗಿರಿಜೆಯಲ್ಲಿ ತೊದಳ್ನುಡಿಗಳು ಎಸೆಯುತ್ತಿದ್ದವು. ೭೭. ಗಿರಿಜೆಯ ಮುಖದಿಂದ ಹೊರಬೀಳುತ್ತಿರುವ ತೊದಳ್ನುಡಿಗಳು ಅವಳ ಮನಸ್ಸಿನಲ್ಲಿ ಹುಟ್ಟಿ, ಕಂಠದಲ್ಲಿ

ವ॥ ಅಂತುಮಲ್ಲದೆಯುಂ

ಕಂ॥ ಮಂಗಳ ಮುಖಿಯರ್ ಸಖಿಯರ್
ಸಂಗಡದಿಂ ಕೊಂಡುಕೊನೆಯುತಾಡಿಸುವೆಡೆಯೊಳ್ ।
ಪಿಂಗದೆ ಭುಜಲತೆ ಶಿವನಾ
ಲಿಂಗನಮಂ ಪೇಳೆ ಬಾಲೆ ತೋಳಾಡಿಸುವಳ್ ॥ ೭೮

ಉಣ್ಮೆ ಶಶಿಧರನ ಬಗೆ ಮಿಗೆ
ಪೊಣ್ಮುವ ಪುಳಕಂಗಳಿಂದೆಯಂತಃಸ್ಥಳದೊಳೊ ।
ಲ್ಲಾಣ್ಮನನೀಕ್ಷಿಪ ತೆಱದಿಂ
ಕಣ್ಮಿಚ್ಚುವಳಮಳೆ ವಿಮಳ ಕಮಳಾಕೃತಿಯಂ ॥ ೭೯

ಗಿರಿಸುತೆ ಹರನಂಘ್ರಿಯನಂ
ತರಂಗದೊಳ್ ಮುಚ್ಚಿ ಪೊಱಗೆ ನೋಳ್ಪಾಸೆಯೊಳಾ ।
ಚರಣಾರುಣೋದಯಕೆ ತಾ
ವರೆಯಲರ್ದವೊಲಂದು ಮುಂದೆ ಕಣ್ದೆಱಿದಿರ್ದಳ್ ॥ ೮೦

ವ॥ ಮತ್ತಮಾ ಶೈಶವದಲ್ಲಿ

ಕಂ॥ ವರಭಾಳಾಕ್ಷದ ಮೇಲೊಂ
ದುರುತರೆ ನಿಟಿಲಾಕ್ಷಮೊಗೆದುದೆಂಬಂತಿರೆ ಶಾಂ ।
ಕರಿಗೆಸೆದುದು ಮುಂದಲೆಯೊಳ
ಗರಳಿಲೆ ಬಹುರತ್ನ ನೂತ್ನಕಾಂತಿ ಪ್ರಕರಂ ॥ ೮೧

ನೋಡಭವವಲ್ಲಭೆಯ ಕವಿ
ಗೂಡಿದೆಪತಿ ಸಫಲವಾದೆವೆನುತಂ ಕುಣಿವಂ ।
ತಾಡುವ ಗಿರಿಜೆಯ ಮೊಗದೊಡ
ನಾಡುವ ಹೊನ್ನೋಲೆವಿಡಿದು ಪೊಸ ಮಾಗಾಯ್ಗಳ್ ॥ ೮೨

ಅನುನಯದಿಂದ ಬಳೆದು, ನಾಲಗೆಯಲ್ಲಿ ದಟ್ಟಡಿಯಿಟ್ಟು ಸುಳಿದಾಡುವವೋ ಎಂಬಂತೆ ಅವಳಲ್ಲಿ ತೊದಳ್ನುಡಿಗಳು ಹೊರಡುತ್ತಿದ್ದವು. ೭೮. ಮಂಗಳಮುಖಿಯರಾದ ಜೊತೆಗಾರ್ತಿಯರು ಅವಳನ್ನೆತ್ತಿಕೊಂಡು ನಲಿಯುತ್ತಿರುವಾಗ ಅವಳ ಭುಜಲತೆ ಶಿವನ ಆಲಿಂಗನವನ್ನು ಪೇಳುವುದೋ ಎಂಬಂತೆ ಅವಳು ತೋಳು ಆಡಿಸುತ್ತಿದ್ದಳು. ೭೯. ಶಶಿಧರನ ಕಡೆ ಮನಸ್ಸಾಗಿ, ಅವಳ ಮೈಪುಳಕವೆದ್ದು ಅವಳ ಅಂತರಂಗದಲ್ಲಿರುವ ತನ್ನ ಆಣ್ಮ (ಮನಃಪ್ರಿಯ)ನನ್ನು ನೋಡುವಂತೆ ತನ್ನ ಕಮಲದಂತಿರುವ ಕಣ್ಣುಗಳನ್ನು ಮುಚ್ಚುವಳು. ೮೦. ಗಿರಿಸುತೆಯು ಅಂತರಂಗದಲ್ಲಿ ಶಿವನ ಪಾದಗಳನ್ನು ಮೆಚ್ಚಿ ಹೊರಗೆ ನೋಡುವ ಆಸೆಯಿಂದ, ಅರುಣೋದಯಕ್ಕೆ ತಾವರೆಯು ಅರಳುವಂತೆ ಅವಳು ಕಣ್ಣು ತೆರೆದಳು. ೮೧. ಶ್ರೇಷ್ಠವಾದ ಫಾಲಾಕ್ಷದ ಮೇಲೆ ಮತ್ತೊಂದು ನಿಟಿಲಾಕ್ಷ (ಹಣೆಗಣ್ಣು) ಮೂಡಿದೆಯೊ ಎಂಬಂತೆ ಆ ಶಾಂಕರಿಗೆ ರತ್ನಮಯವಾದ ಅರಳಿಲೆ ಮುಂದಲೆಯಲ್ಲಿ ರಾಜಿಸಿತು. ೮೨. ಅವಳು ಕವಿಗಳಿಗೆ ಧರಿಸಿದ ಮಾಂಗಾಯ್ಗಳು-ಅವು ಅಭವ ವಲ್ಲಭೆಯ ಕವಿಯನ್ನು ಸೇರಿದೆವು, ನಮ್ಮ ಜನ್ಮ ಸಫಲವಾಯಿತು ಎಂದು

ಶಿವನಂ ಬಿಡದಪ್ಪುವ ತೋ
ಳಿವನಪ್ಪಿ ಕೃತಾರ್ಥರಪ್ಪೆವೆಂಬಂದದೊಳಾ ।
ನವರತ್ನದ ರವೆಯದ ಬಂ
ದಿ ವಿರಾಜಿಸುತಿರ್ಪುದಪ್ಪಿಯಗಜೆಯ ತೋಳಂ ॥ ೮೩

ಒದವಿರ್ದ ಸಕಲ ಲಾವ
ಣ್ಯದ ಸಿರಿ ಕೆಯ್ಸಾರ್ದುದರ್ಕೆ ಕಂಕಣಮಂ ಕ ।
ಟ್ಟಿದವೋಲ್ ಮೆಱೆದುವು ವರ ಹ
ಸ್ತದೊಳೆಸೆವಂಬಕೆಯ ಸುಕರ ಮಣಿಮಯಕಟಕಂ ॥ ೮೪

ಕಂ॥ ಪುರಮಥನನ ವರಕೀರ್ತ್ಯಂ
ಕುರಮೀ ಗಿರಿಸುತೆಯ ವದನದೊಳ್ ಮೊಳೆತುದು ಸಾ ।
ದರದಿಂ ತಾನೆಂಬಂತಿರೆ
ಕರಮೆಸೆದುದು ವಿಮಳಮೌಕ್ತಿಕಂ ನಾಸಿಕದೊಳ್ ॥ ೮೫

ಅನವಧಿ ಗುಣನಿಧಿ ಪಾರ್ವತಿ
ಜನಿಯಿಸೆ ತಾನಱೆದು ಬಂದು ಚಂದ್ರಾಭರಣಂ ।
ಮನಮೊಸೆದು ತಾಳಿಗಟ್ಟಿದ
ನೆನೆ ಮೆಱೆದುದು ಕೊರಲೊಳೇಕಮುಖ ರುದ್ರಾಕ್ಷಂ ॥ ೮೬

ಈ ಶಶಿಮುಖಿ ದಿಟದಿಂ ವ್ಯಾ
ಘ್ರಾಸುರ ಹರನನರಸಿಯೆಂಬುದರ್ಕಿದೆ ಕುಱುಪೆಂ ।
ಬಾ ಸೈಪನಱಿವಂತಿರೆ
ಬಾಸುರಮಾಯ್ತುರರೆ ಪುಲಿಯುಗುರ್ ನಗಸುತೆಯಾ ॥ ೮೭

ಕುಣಿದಾಡುವವೊ ಎಂಬಂತೆ ಗಿರಿಜೆಯ ಮೊಗದೊಡನಾಡುವ ಹೊನ್ನೋಲೆಯೊಡನೆ ಪೊಸಮಾಗಾಯಿಗಳು ಅಲುಗಾಡುತ್ತಿದ್ದವು. ೮೩. ಅಗಜೆಯ ತೋಳುಗಳಿಗೆ ನವರತ್ನ ಖಚಿತ ಬಂದಿ ತೊಡಿಸಲಾಗಿತ್ತು; ಅವು ಶಿವನನ್ನು ಅಪ್ಪುವ ತೋಳನ್ನು ತಾವು ಅಪ್ಪಿ ಕೃತಾರ್ಥರಾದೆವು ಎಂಬಂತೆ ವಿರಾಜಿಸುತ್ತಿದ್ದವು. ೮೪. ಅಗಜೆಯ ಮುಂಗೈಗೆ ಮಣಿಮಯ ಕಟಕ (ಬಳೆ) ತೊಡಿಸಲಾಗಿತ್ತು. ಒದಗಿ ಬಂದ ಸಕಲಲಾವಣ್ಯದ ಸಿರಿ ಕೈವಶವಾದುದಕ್ಕೆ ಕಂಕಣ ಕಟ್ಟಲಾಗಿದೆಯೋ ಎಂಬಂತೆ ಅವು ರಂಜಿಸುತ್ತಿದ್ದವು. ೮೫. ಅವಳ ನಾಸಿಕದಲ್ಲಿ ನಿರ್ಮಲ ಮೂಗುತಿ ಬೆಳಗುತ್ತಿತ್ತು. ಅದನ್ನು ನೋಡಿದರೆ ತ್ರಿಪುರಹರನ ಕೀರ್ತಿಯ ಅಂಕುರವು ಗಿರಿಜೆಯ ವದನದಲ್ಲಿ ಮೊಳೆತಿದೆಯೋ ಎಂಬಂತೆ ಇತ್ತು. ೮೬. ಗಿರಿಜೆಯ ಕೊರಳಿಗೆ ಒಂದು ಏಕಮುಖಿ ರುದ್ರಾಕ್ಷವನ್ನು ಕಟ್ಟಲಾಗಿತ್ತು. ಅದನ್ನು ನೋಡಿದರೆ ಅಗಣಿತಗುಣಗಳಿಗೆ ನಿಧಿಯಾದ ಪಾರ್ವತಿಯು ಜನಿಸಿದ್ದಾಳೆ ಎಂಬುದನ್ನು ತಿಳಿದು ಸಾಕ್ಷಾತ್ ಚಂದ್ರಶೇಖರನೇ ಒಲಿದು ಬಂದು ಮಾಂಗಲ್ಯವನ್ನು ಧರಿಸಿರುವನೋ ಎಂಬಂತಿತ್ತು. ೮೭. ಬಾಲಕಿಯಾದ ಅಗಜೆಗೆ ದೃಷ್ಟಿಯಾಗ ಬಾರದೆಂದು ಹುಲಿಯ ಉಗುರು ಕಟ್ಟಿದ್ದರು. ಅದನ್ನು ನೋಡಿದರೆ ನಿಜವಾಗಿಯೂ

ಹೆಱಿಸೂಡಿದನ ಮನವನೀ
ತೆಱದಿಂದಂ ಸುತ್ತುವಳ್ ಭವಾನಿಯೆನಿಪ್ಪಾ ।
ತೆಱನಂ ತೋಱುವ ತೆಱದಿಂ
ಮೆಱಿವುಡಿಗೆಯ ಮೇಲೆ ಸುತ್ತಿದುಡೆವಣಿ ತೋರ್ಕುಂ ॥ ೮೮

ಬಿಡೆವಿನ್ನೀ ಗಿರಿಜೆಯ ಮೆ
ಲ್ಲಡಿಗಳನೆಂದಖಿಳ ವೇದಮುಲಿವಂತೆ ವಲಂ ।
ನಡೆವೆಡೆಯೊಳಗುರ್ಬಿಂ ಬೊ
ಬ್ಬಡುವಂದುಗೆ ಗೆಜ್ಜೆ ಸಜ್ಜನೆಗೆ ಸೊಗಯಿಸುಗುಂ ॥ ೮೯

ವ॥ ಇಂತು ಸಕಲ ಸೌಂದರ್ಯಮಂ ಬೀಱುವ ಬಾಲದುಡಿಗೆವೆರಸು ಲೀಲೆ ಮಿಕ್ಕು

ಕಂ॥ ತರದಿಂ ಗೆಜ್ಜೆಗಳುಲಿಯು
ತ್ತಿರೆ ಮಾಂಗಾಯಲುಗೆ ಮೂಡೆ ಮೆಲ್ನಗೆ ನಲವಿಂ ।
ಪರಿಪರಿದು ಪೋಗಿ ಗಿರಿಸುತೆ
ಹರಿಸಂ ಮಿಗೆ ಹರನ ನಿಳಯದೊಳ್ ನೆಲಸಿರ್ಪಳ್ ॥ ೯೦

ನಲಿವಳ್ ನಗುವಳ್ ರಾಗಿಪ
ಳುಲಿವಳ್ ಮುದ್ದಿಸುವಳಳುವಳಪ್ಪುವಳಂತಿಂ ।
ತೊಲೆವಳ್ ನಿಲ್ವಳ್ ಮೇನೆಯ
ಮೊಲೆಯಂ ಮಱೆದಭವನಾಟದೊಳ್ ಸಂದಿರ್ಪಳ್ ॥ ೯೧

ವ॥ ಇಂತಾರುಮಂ ಬಗೆಯದೆ ನೆರಮಂ ಪಾರದೆ ಪೋಗಿ ಪರಮ ಪ್ರೀತಿಯಿಂ

ಇವಳು ವ್ಯಾಘ್ರಾಸುರನನ್ನು ಮರ್ದಿಸಿದ ಪರಶಿವನ ಅರ್ಧಾಂಗಿನಿ ಎಂಬುದನ್ನು ಸೂಚಿಸುವ ಕುರುಹು ಎಂಬಂತಿತ್ತು. ೮೮. ಪಾರ್ವತಿಯು ಉಟ್ಟಿದ್ದ ಉಡಿಗೆಯ ಮೇಲೆ ರತ್ನಮಯ ಕಾಂಚೀಧಾಮ ಪಟ್ಟಿಯನ್ನು ಸುತ್ತಿ ಕಟ್ಟಲಾಗಿತ್ತು. ಅದನ್ನು ನೋಡಿದರೆ ಈ ಭವಾನಿಯು ಹೆರೆ(ಚಂದ್ರ)ಸೂಡಿದವನ ಮನಸ್ಸನ್ನು ಈ ರೀತಿಯಿಂದ ಸುತ್ತುವಳು ಎಂಬುದನ್ನು ಸೂಚಿಸುವಂತಿತ್ತು. ೮೯. ಆ ಬಾಲಿಕೆಯ ಕಾಲಿಗೆ ಕಟ್ಟಿದ್ದ ಅಂದುಗೆ-ಗೆಜ್ಜೆಗಳು ಮಂಜುಳವಾಗಿ ದನಿಮಾಡುತ್ತಿದ್ದವು. ಇದನ್ನು ನೋಡಿದರೆ ಎಲ್ಲ ವೇದಗಳೂ ನಾವಿನ್ನು ಗಿರಿಜೆಯ ಅಡಿಗಳನ್ನು ಬಿಡೆವು ಎಂದು ಉಲಿವಂತೆ ಅವಳು ಹೆಜ್ಜೆಯಿಡುವಾಗ ಅವು ಬೊಬ್ಬಿಡುತ್ತಿದ್ದವು. ವ॥ ಹೀಗೆ ಸುಂದರವಾದ ಬಾಲ್ಯದ ಉಡುಗೆ ತೊಟ್ಟು ಅವಳು-೯೦. ಗಿರಿಸುತೆ ಹರ್ಷದಿಂದ ಶಿವಾಲಯಕ್ಕೆ ಹೋಗುವಾಗ ನೆಲೆಸುವಾಗ ಗೆಜ್ಜೆಗಳು ಉಲಿಯುತ್ತಿವೆ, ಮಾಂಗಾಯಿಗಳು ಅಲುಗುತ್ತಿವೆ, ಮೆಲ್ನಗೆ ಮೂಡಿದೆ. ೯೧. ಗಿರಿಜೆಯು ಬಾಲಲೀಲೆಗಳಲ್ಲಿ ತೊಡಗಿ ನಲಿದು, ನಕ್ಕು, ರಾಗಿಸಿ, ಉಲಿದು, ಮುದ್ದಿಸಿ, ಅತ್ತು, ಅಪ್ಪಿ, ಅಂತಿಂತೊಲೆದು, ನಿಲ್ಲುವಂತಾದಳು, ಕಡೆಗೆ ಅವಳು ತಾಯಿ ಮೊಲೆಯನ್ನು ಮರೆತು ಅಭವನ ಆಟದಲ್ಲಿ ಮಗ್ನಳಾದಳು. ವ॥ ಹೀಗೆ ಯಾರನ್ನೂ ಬಗೆಯದೆ, ನೆರವನ್ನು ನಿರೀಕ್ಷಿಸದೆ ಹೋಗಿ ಗಿರಿಜೆ ಶಿವಾಲಯದಲ್ಲಿರುವುದನ್ನು ಕಂಡ

ಹರನಾಲಯದೊಳ್ ಗಿರಿಜಾತೆಯಿರ್ಪುದುಂ ಗಿರಿರಾಜಂ ಕಂಡು ಮನಂಗೊಂಡು ಜಡೆಮುಡಿಯ ಜಾಣೆಗೆ ಭೂಳತಳದ ಭಾಮಿನಿಗೆ ತ್ರಿಲೋಚನದ ಲಲನೆಗೆ ಕರ್ಣಪಾಲಿಕೆಯ ಕಾಮಿನಿಗೆ ಕಪ್ಪೋಳ ವಿಪುಳೆಗೆ ನಗೆಗಣ್ಗಳ ನಲ್ದೆಗೆ ನಾಸಿಕದ ನೀಱಿಗೆ ಬೆಳರ್ವಾಯ ಭಾಗ್ಯನಿಧಿಗೆ ಸಿರಿಮೊಗದರಸಿಗೆ ತೊದಳ್ನುಡಿಯ ಸದಮಳಗೆ ಕಂಬುಗ್ರೀವದ ಕಲ್ಯಾಣಿಗೆ ಪೇರುರದ ಪಾರಿಜಾತಕ್ಕೆ ನಳಿತೋಳ ನಿಜಕ್ಕೆ ಹಸ್ತಕಡಗದ ಹರಿಣಾಕ್ಷಿಗೆ ಬಡನಡುವಿನ ಬಾಲೆಗೆ ಸುಳಿನಾಭಿಯೆಳೆಯಲ್ಗೆ ಎಸೆವುಡಿಗೆಯ ಪೊಸಚೆಲ್ವೆಗೆ ನುಣ್ಪೊಡೆಯ ನೂತನೆಗೆ ಕಿಱುದೊಡೆಯ ಕಾಮಧೇನುಗೆ ಮೃದುತಳದ ಮಂದಯಾನೆಗೆ ಗೆಜ್ಜೆಗಳ ಸಜ್ಜನೆಗೆ ಅಂದುಗೆಯಾನಂದೆಗೆ ನೇವುರದ ಭಾವಕಿಗೆ ಪಾಡಗದ ಪರುಷಕ್ಕೆ ಉಡಿಗೆಯ ಮೃಡಾಣಿಗೆ ಉಡೆವಣಿಯುತ್ಸಾಹಕ್ಕೆ ಕರವಲಯದ ಪರಬೊಮ್ಮಕ್ಕೆ ಹೊಂಗಡಗದ ಲಿಂಗವಂತೆಗೆ ತೋಳಬಂದಿಯ ಬಾಲಕಿಗೆ ಪುಲಿಯುಗುರ ಸುಲಲಿತೆಗೆ ನೇವಳದ ನಾಯಕಿಗೆ ರತ್ನದಾಳಿಯ ರಾಜಹಂಸೆಗೆ, ಮಾಗಾಯ್ಗಳ ಮುಗ್ಧೆಗೆ ಹೊನ್ನೋಲೆಯ ಚೆನ್ನೆಗೆ ಮೂಗತಿಯ ಮುಗುಳ್ಗೆ ಅಂಜನದಮೃತಕ್ಕೆ ತಿಲಕದ ಲಲಿತೆಗೆ ಅರಳೆಲೆಯ ತರಳೆಗೆ ಸೂಸಕದ ಸುಮ್ಯಾನೆಗೆ ರುದ್ರಾಕ್ಷಿಯ ಭದ್ರಾಂಗಿಗೆ ವಿಭೂತಿಯ ವಿಳಾಸನಿಧಿಗೆ ಭಕ್ತಿಯ ಭಾವಕ್ಕೆ ಆಱೆವಿನವಯವಕ್ಕೆ ಶಿವಜ್ಞಾನದ ಸೀಮೆಗೆ ವೈರಾಗ್ಯದ ಮೇರೆಗೆ ಪರಮೈಶ್ವರ್ಯಧ ಪುಣ್ಯಕ್ಕೆ ಲೋಕದ ಲೋಚನಕ್ಕೆ ಸಾಕಾರದ ಸುಧೆಗೆ ಪಶುಪತಿಯ ಪಟ್ಟದ ಮಹಾದೇವಿಗೆ ಸಕಳ ಜಗನ್ಮಾತೆಗೆ ಸಕಳ ಬ್ರಹ್ಮಾಂಡಮಂ ರಕ್ಷಿಸುವ ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ ದಂಡಿಗೆಯ ಧವಳಛತ್ರದ ಅಂಗರಕ್ಷಕರ ಸಹವಾಸಿಗಳ ದಾದಿಯರ ಪಡಿಯಱತಿಯರ ಚಾಮರದ ಸೀಗುರಿಯ ಹಡಪದ ಮಡಿವರ್ಗದ ಅಂಜನದ ಕನ್ನಡಿಯ ಕಳಶದ ಸಿರಿಮುಡಿಯ ಸಿಂಗರದ ಸಾದಿನ ಕುಸುಮ ಕುಳದ ಕತ್ತುರಿಯ ಕರ್ಪೂರದ ಶ್ರೀಖಂಡದ ರಾಜಶುಕಪಠಣದ ಹಂಸರಕ್ಷಣದ ಮಯೂರ ನರ್ತನದ ಲೀಲಾಂಬುಜದ ರತ್ನಕಂತುಕದ ವಿಳಾಸಿನಿಯರ ಹರಿದ್ರಾಭರಣದ ಚರಣ ಪ್ರಕ್ಷಾಳನದ ಕದಂಬ ಫಲಭಾರದ ಮಂಗಳಾರತಿಯ ಮಾನಿನಿಯರಾದಿಯಾದ ಪುಣ್ಯಾಗಣ್ಯಲಾವಣ್ಯಮಯ ಸಾಮ್ರಾಜ್ಯ ಪರಿಚರ್ಯಪಟುಗಳೆನಿಸಿದ ಷೋಡಶಸಹಸ್ರವಿಳಾಸಿನಿಯರ್ವೆರಸು ನಡೆತಂದ ಪೂರ್ವ ಸರ್ವವಿದ್ಯೆಗಳನಭ್ಯಾಸಂಮಾಡದೊಡಂ ಮುನ್ನಿನಂತೆ ಸಹಜಮಾಗಿ ನೆಲಸಿ ನಿಲೆ ವಿಹಿತ ನವೀನ ಕ್ರೀಡೆ ಬಾಲ್ಯಮಂ ಸವಿದಪುದೆನೆ ಸಲ್ಲೀಲೆಯಿಂ ಶೈಲಾತ್ಮಜೆ ಕೇಳೀವನಂಗಳಂ ಪುಗುತಂದು,

ಉ॥ ಎಲ್ಲಿ ಸರೋಜಮೆಲ್ಲಿ ವಿಮಳೋತ್ಪಳಮೆಲ್ಲಿ ಲತಾನದೊ
ಳೆಲ್ಲಿ ವನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಪ್ಪತ ।
ಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀನದಾಳಿ ತಾ
ನಲ್ಲಿ ಭವಾನಿ ಭಕ್ತಿಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್ ॥ ೯೨

ತಂದೆ ಗಿರಿರಾಜನು, ವ್ಯಾಕುಲನಾಗಿ ಆ ಜಡೆಮುಡಿಯ ಜಾಣೆಗೆ ಭೂಳತಳದ ಭಾಮಿನಿ, ತ್ರಿಲೋಚನದ ಲಲನೆ ಮುಂತಾದ ಅನುಪಮ ಗುಣಗಣ ವಿಭೂಷಿತಳಾದ ಸಕಲ ಬ್ರಹ್ಮಾಂಡವನ್ನು ರಕ್ಷಿಸುವ ರುದ್ರಾಣಿಗೆ ರಕ್ಷಣೆಗಾಗಿ ಕೆಲವರು ಅಂಗರಕ್ಷಕರನ್ನು ನಿಯಮಿಸಿದನು. ಅವರಲ್ಲಿ ಸಹದಾಸಿಗಳು, ದಾದಿಯರು, ಪಡಿಯರತಿಯರು ಚಾಮರದ, ಸೀಗುರಿಯ, ಹಡಪದ ಮುಂತಾದ ವಿವಿಧ ಸೇವಾವರ್ಗದಲ್ಲಿ ಷೋಡಶ ಸಹಸ್ರ ವಿಳಾಸಿನಿಯರಿದ್ದರು. ಅವಳು ಅಂತಹ ವೈಭವದಲ್ಲಿದ್ದು ಸರ್ವವಿದ್ಯೆಗಳನ್ನು ಅಭ್ಯಾಸಮಾಡದಿದ್ದರೂ ಆ ವಿದ್ಯೆಗಳೆಲ್ಲ ಸಂಸ್ಕಾರವಶವದಿಂದ ಅವಳಲ್ಲಿ ಸಹಜವಾಗಿ ಬಂದು ನೆಲೆಸಿದವು. ಆ ಶೈಲಾತ್ಮಜೆ ಸಲ್ಲೀಲೆಯಿಂದ ಕೇಳಿವನಗಳಲ್ಲಿ ವಿಹರಿಸುತ್ತಿದ್ದಳು. ೯೨. ಗಿರಿಜೆ ಸರೋವರ, ವಿಮಳೋತ್ಪಳ, ಲತಾವಿತಾನ, ವನಂಗಳು ಕೃತಕ ಪರ್ವತಗಳು ಎಲ್ಲೆಲ್ಲಿ ಕಂಡರೆ ಅಲ್ಲಿ ಅತ್ಯಂತ ಭಕ್ತಿಯಿಂದ ಭರ್ಗನನ್ನು ಒಲಿದು

ಕಂ॥ ಕಣ್ಮಲರಿಂದಶ್ರುಜಲಂ
ಪೊಣ್ಮುತ್ತಿರೆ ತನುವಿನಲ್ಲಿ ಪುಳಕಂ ಸಾಲ್ಗೊಂ ।
ಡುಣ್ಮುತ್ತಿರೆ ಗಿರಿಪತಿಸುತೆ
ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್ ॥ ೯೩

ವಿರಚಿಸುವ ಲಿಂಗದೊಳ್ ಮೃದು
ಕರಾಂಗುಲಿಸ್ಪರ್ಶಸುಖಮನೆಳೆಸುತೆ ಶರ್ವಂ ।
ಪರಿತಂದು ನಿಲ್ವನೆಂದೊಡೆ
ಗಿರಿಜೆಯ ಸೌಭಾಗ್ಯದಿರವನಾರ್ ಬಣ್ಣಿಸುವರ್ ॥ ೯೪

ವ॥ ಇಂತು ಸೌಕುಮಾರ್ಯ ಶೃಂಗಾರಮನಾಂತು,

ಕಂ॥ ಹಿಮಕರ ಕಿರಣಾವಳಿಗಳ್
ಕುಮುದದ ಸೋಂಕಿಂದೆ ಕಂಪನಪ್ಪಿದುವೆನೆ ವಿ ।
ಭ್ರಮ ಮಲ್ಲಿಕಾನಿಕಾಯದೆ
ಕಮಳಾನನೆ ವಿಮಳಲಿಂಗಮಂ ಪೂಜಿಸುವಳ್ ॥ ೯೫

ತರಣಿಯ ತರುಣಕಿರಣಮಂ
ಬುರುಹಪರಿಷ್ವಂಗದಿಂದೆ ಪರಿಮಳಮಂ ಪೊ ।
ತ್ತರಲ್ದಪುವೆನಿಸುವ ಸಂಪಗೆ
ಯರಲಿಂದಂ ಗಿರಿಜೆ ಹರನನೊಲ್ದರ್ಚಿಸುವಳ್ ॥ ೯೬

ತರಣಿಯ ಮಧುಕರನಿಕರದ
ಮರುತನ ಕಾಲ್ದುಳಿಯಿವೆಂದು ಪೂವಂ ಬಿಟ್ಟಾ ।
ಗಿರಿಸುತೆ ಮನಃಕುಸುಮದಿಂ
ಪರಮನನೇಕಾಂತಭೂಮಿಯೊಳ್ ಪೂಜಿಸುವಳ್ ॥ ೯೭

ಪೂಜಿಸುತ್ತಿದ್ದಳು. ೯೩. ಕಣ್ಣುಗಳಿಂದ ಆನಂದಾಶ್ರುಗಳು ಉಕ್ಕಿ ಬರುತ್ತಿರಲು, ತನುವಿನಲ್ಲಿ ಪುಳಂಕಗಳು ಉಣ್ಮುತ್ತಿರೆ, ಅಗಜೆ ನುಣ್ಮಳಲಿಂದ ದಿವ್ಯಲಿಂಗವನ್ನು ರಚಿಸಿ ಪೂಜಿಸುವಳು. ೯೪. ಅವಳು ರಚಿಸುವ ಲಿಂಗದಲ್ಲಿ ಅವಳ ಮೃದುವಾದ ಕರಾಂಗುಲಿಗಳ ಸ್ಪರ್ಶವನ್ನು ಬಯಸಿ ಶಿವನು ಬಂದು ನಿಲ್ಲುವನೆಂದ ಮೇಲೆ ಇನ್ನು ಗಿರಿಜೆಯ ಸೌಭಾಗ್ಯದ ಹೆಮ್ಮೆಯನ್ನು ಯಾರು ತಾನೆ ವರ್ಣಿಸಲು ಸಾಧ್ಯ! ೯೫. ಚಂದ್ರನ ಕಿರಣಗಳು ನೈದಿಲೆಯನ್ನು ಸೋಂಕಿದುದರಿಂದ ಸುವಾಸನೆಯನ್ನು ಪಡೆದುವೋ ಎಂಬಂತೆ ಆ ಕಮಲಮುಖಿ ಗಿರಿಜೆ ಮಲ್ಲಿಗೆಯ ಕುಸುಮಗಳಿಂದ ಶಿವಲಿಂಗವನ್ನು ಪೂಜಿಸುವಳು. ೯೬. ರವಿಯ ತರುಣಕಿರಣವು ತಾವರೆಯ ಸಂಗದಿಂದ ಪರಿಮಳವನ್ನು ಹೊತ್ತು ಅರಳುವವೆನಿಸುವ ಸಂಪಿಗೆಯ ಹೂವುಗಳಿಂದ ಗಿರಿಜೆ ಹರನನ್ನು ಪೂಜಿಸುವಳು. ೯೭. ಲೋಕದಲ್ಲಿರುವ ಹೂವುಗಳು ರವಿಯ, ದುಂಬಿಗಳ ಹಾಗೂ ಗಾಳಿಯ ಕಾಲ್ತುಳಿತಕ್ಕೆ ಸಿಕ್ಕಿ ಮೈಲಿಗೆಯಾಗಿವೆ ಎಂದು ತಿಳಿದ ಅಗಸುತೆ ಹೂವುಗಳನ್ನು ಬಿಟ್ಟು ಕೇವಲ ಮನಃಕುಸುಮಗಳಿಂದಲೇ ಪರಶಿವನನ್ನು ಏಕಾಂತದಲ್ಲಿ ಅರ್ಚಿಸುವಳು.

ವ॥ ಅಂತುಮಲ್ಲದೆಯುಂ,

ಕಂ॥ ವನರುಹನಾಳಂ ದಂಡಂ
ವನರುಹ ನವಪತ್ರವೊಂದೆ ಪೊಸಸೂರೆ ಮತ್ತಾ ।
ವನರುಹ ಸೂತ್ರಂ ತಂತ್ರಿಗ
ಳೆನೆ ಶಿವನಂ ಜಾಣೆ ವೀಣೆಯಂ ಕೇಳಿಸುವಳ್ ॥ ೯೮

ವ॥ ಇಂತು ಬಾಲಲೀಲೆ ಶಿವಲೀಲೆಯಾಗಿ ಕೆಲನಱೆಯದೆ ಬಲನಱೆಯದೆ ಹಸಿವನಱೆಯದೆ ತೃಷೆಯನಱೆಯದೆ ದೆಸೆಯಱೆಯದಿರುಳ್ ಪಗಲಱೆಯದೆ ಪರಿಜನಮಂ ಪರೀಕ್ಷಿಸದೆ ಶಿವನಂ ಮರುಳ್ಗೊಂಡು ಭವಾನಿಯಿರೆ ಕಂಡು ಕೌತುಕಗೊಂಡು ಸಹಚರಿಯರ್ ತಮತಮಗಂಜಿ ಭಾರತಿಗೋರನ್ನಳೆನಿಪ್ಪ ನಾರಿಯೊರ್ವಳಂ ಗಿರಿರಾಜನಲ್ಲಿಗೆ ಭರದಿಂ ಕಳುಪಿದೊಡಾ ತರುಣಿ ಭೀತಿಯಿಂ ಪರಿತಂದರಮನೆಯಂ ಪೊಕ್ಕೊಲಗದೊಳ್ ನಿಂದು ನಗಾಧಿಪಂಗೆ ನಯಂ ಮಿಗೆ ಭಯಭಕ್ತಿಯಿಂ ಮೆಯ್ಮಿಕ್ಕಿ ಕೆಯ್ಮುಗಿದು ನಿಂದು,

ಉ॥ ದೇವಕುಮಾರಿಬಾಲೆ ಸುಕುಮಾರಿ ಸಮರ್ಥೆಯತಿ ಸ್ವತಂತ್ರೆ ನಾ
ನಾವಿಧ ಶೈಲರಾಜೆ ನವರಾಜೆ ಸರೋವರರಾಜೆ ಸಲ್ಲತಾಂ ।
ತಾವಳೆ ಸೈಕತಾವಳಿ ಲತಾವಳಿಯೆಂಬವಱಲ್ಲಿ ಸಂತತಂ
ದೇವರ ದೇವನಂ ಶಿವನನರ್ಚಿಸುತಿರ್ದಪಳೊಲ್ಲಳೇನುಮಂ ॥ ೯೯

ಕಂ॥ ದೇವಿಯ ಮೊಲೆವಾಲಂ ಪರಿ
ಭಾವಿಸಳಾರಯ್ಕಳಂಜಳಳ್ಕಳ್ ವನದೊಳ್ ।
ತೀವಿರ್ದ ಗುಲ್ಮಲತೆ ವ್ಯ
ಕ್ಷಾವಳಿಯೊಳ್ ಲಿಂಗಪೂಜೆಯೊಳ್ ಸಂದಿರ್ಪಳ್ ॥ ೧೦೦

೯೮. ಕಮಲನಾಳವೆ ವೀಣೆಯದಂಡ, ಕಮಲಪತ್ರವೆ ವೀಣೆಗೆ ಜೋಡಿಸಿದ ಸೋರೆ ಬುರುಡೆ, ಕಮಲದಂಟಿನಲ್ಲಿರುವ ಎಳೆಗಳೆ ವೀಣೆಯ ತಂತಿಗಳೋ ಎಂಬಂತೆ ಆ ಜಾಣೆ ಶಿವನಿಗೆ ವೀಣೆಯನ್ನು ಕೇಳಿಸುವಳು. ವ॥ ಹೀಗೆ ಬಾಲಲೀಲೆ ಶಿವಲೀಲೆಯಾಗಿ, ಕೆಲಬಲಗಳನ್ನರಿಯದೆ, ಹಸಿವು ತೃಷೆಗಳನ್ನರಿಯದೆ, ದೆಸೆಯರಿಯದೆ, ರಾತ್ರಿಹಗಲೆಂಬ ಭೇದವಿಲ್ಲದೆ, ಪರಿಜನರನ್ನು ಪರೀಕ್ಷಿಸದೆ, ಭವಾನಿಯು ಶಿವನಿಗೆ ಮರುಳಾಗಿರಲು, ಅವಳ ಸಖಿಯರು ಕಂಡು ಆಶ್ಚರ್ಯಗೊಂಡು ಸಹಚರಿಯರು ಬೆದರಿ, ಭಾರತಿಗೆ ಸಮಳಾದ ತರುಣಿಯೊಬ್ಬಳನ್ನು ಗಿರಿರಾಜನ ಬಳಿಗೆ ಕಳುಹಿಸಿಕೊಟ್ಟರು. ಅವರು ಓಲಗಕ್ಕೆ ಧಾವಿಸಿ ಬಂದು ಗಿರಿರಾಜನಿಗೆ ಭಯಭಕ್ತಿಯಿಂದ ವಂದಿಸಿ ಕೈಮುಗಿದು ನಿಂತು, ೯೯. ಮಹಾರಾಜ, ಸುಕುಮಾರಿಯಾದ ಅಗಜೆ ಸಮರ್ಥೆ, ಅತಿ ಸ್ವತಂತ್ರೆ; ಅವಳು ಬೆಟ್ಟ ಗುಡ್ಡಗಳು, ಸರೋವರ ಮರಳುದಿಬ್ಬ ಮುಂತಾದ ಎಡೆಗಳಲ್ಲೆಲ್ಲ ಯಾವಾಗಲೂ ದೇವದೇವನಾದ ಪರಶಿವನನ್ನು ಅರ್ಚಿಸುತ್ತಿದ್ದಾಳೆ; ಆಕೆ ಮತ್ತೇನನ್ನೂ ಬಯಸುತ್ತಿಲ್ಲ. ೧೦೦. ಆಕೆ ತಾಯಿಯ ಸ್ತನ್ಯವನ್ನು ಆಶಿಸುತ್ತಿಲ್ಲ, ಕಾಡಿನಲ್ಲಿ ಹೆದರಿಕೆ ಅವಳಿಗಿಲ್ಲ, ದಟ್ಟವಾಗಿ ಬೆಳೆದ ಪೊದೆಗಳಲ್ಲೆಲ್ಲ ಪ್ರವೇಶಿಸಿ ಲಿಂಗಪೂಜೆಯಲ್ಲಿ ನಿರತಳಾಗುತ್ತಾಳೆ.

ಕಂ॥ ಕಲ್ಲೆನ್ನಳ್ ಮುಳ್ಳೆನ್ನಳ್
ಮೆಲ್ಲಿತ್ತಿದು ಬೆಟ್ಟತೆನ್ನಳತಿ ಭಕ್ತಿಯೊಳಂ ।
ತಲ್ಲಿ ಸುಖಸ್ಥಳಮುಂಟಾ
ದಲ್ಲಿ ವಿರೂಪಾಕ್ಷ ಪೂಜೆಗೀಡಾಗಿರ್ಪಳ್ ॥ ೧೦೧

ಬರೆದರೊ ಬೈತರೊ ಪೊಲ್ದರೊ
ಪೊರೆದರೊ ಬೆಚ್ಚರೊ ಮಗುಳ್ಚಿ ಕರುವಿಟ್ಟರೊ ಕಂ ।
ಡರಸಿದರೊ ಕಡೆದರೊ ಎನೆ
ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ ॥ ೧೦೨

ಬೇಡೆಂದೊಡೆ ಮಾಣಳ್ ನಲಿ
ದಾಡುವಳಪ್ಪುವಳಮರ್ಚುವಳ್ ಪುಳಕಿಪ್ಪಳ್ ।
ಮಾಡುವ ಲಿಂಗಾರ್ಚನೆಯೊಳ್
ನೋಡಳ್ ನುಡಿಯಳ್ ಭವಾನಿಯೇನೆಂದಱಿಯಳ್ ॥ ೧೦೩

ವ॥ ಎಂದು ಬನ್ನವಿಸೆ ಕೇಳ್ದು ಗಿರಿರಾಜಂ ನಿಜಾತ್ಮಾಜಾವಲೋಕನ ಹರ್ಷವದನಂ ಭದ್ರಾಸನದಿಂ ಭೋಂಕನೇಳ್ದು ಪೊಱಮಡುತ್ತೆ ಆರಾಧಿತಾರ್ಯ ಪ್ರಕರನುಂ, ದಾನಪ್ರಮೋದಿತ ನಾನಾದ್ವಿಜನುಂ, ತ್ಯಾಗಪರಿಪೋಷಿತ ವಂದಿವ್ರಜನುಂ, ಅವಷ್ಟಂಭಿತ ಕುಂಭ ಕುಂಭಸ್ಥಳ

೧೦೧. ಕಲ್ಲು ಮುಳ್ಳು; ಮೆದುಗಟ್ಟಗಳೆನ್ನದೆ ಅವಳು ಕೇವಲ ಭಕ್ತಿಯಿಂದ ತನಗೆ ಮನಸೊಪ್ಪಿದಂತೆ ಶಿವಪೂಜೆಗೆ ತೊಡಗಿದ್ದಾಳೆ. ೧೦೨. ಗಿರಿಜೆ ಪೂಜೆಯಲ್ಲಿ ತೊಡಗಿರುವಾಗ ಅವಳ ಮೂರ್ತಿಯು ಬರೆದರೂ, ಗಟ್ಟಿಯಾಗಿ ಕೂಡಿಸಿರುವರೋ, ಪೊಲ್ದರೊ, ಪೊರೆದರೊ, ಬೆಚ್ಚರೊ, ಕೆತ್ತಿರುವರೊ, ಕಂಡರಸೆದರೊ, ಕಡೆದರೊ ಎಂಬಂತೆ ನಿಶ್ಚಲವಾಗಿ ಪ್ರಕಾಶಿಸುತ್ತಿದೆ. ೧೦೩. ಬೇಡವೆಂದರೆ ಬಿಡುವುದಿಲ್ಲ, ನಲಿದಾಡುವಳು, ಅಪ್ಪುವಳು, ರೋಮಾಂಚಿತಳಾಗುವಳು; ತಾನು ಮಾಡುವ ಲಿಂಗಾರ್ಚನೆಯಲ್ಲಿ ತೊಡಗಿದ ಅವಳು ಯಾರನ್ನೂ ನೋಡಳು ನುಡಿಯಳು ಏನೆಂದೂ ಅರಿಯಳು. ವ॥ ಎಂದು ವಿಜ್ಞಾಪಿಸಲು ಗಿರಿರಾಜನು ತನ್ನ ಮಗಳನ್ನು ಕಾಣಬೇಕೆಂದು ಹರ್ಷದಿಂದ ಭದ್ರಾಸನದಿಂದ ಎದ್ದು ಹೊರಟನು. ಮಗಳನ್ನು ನೋಡ ಹೊರಟ ರಾಜನ ವರ್ಣನವಿದು-ರಾಜ ಹಿರಿಯರನ್ನು ಗೌರವಿಸಿದ್ದಾನೆ, ದಾನದಿಂದ ಅನೇಕ ದ್ವಿಜರನ್ನು ಸಂತೋಷಗೊಳಿಸಿದ್ದಾನೆ; ವಂದಿಮಾಗಧರಿಗೆ ಉದಾರವಾಗಿ ಪಾರಿತೋಷಕ ಗಳನ್ನು ಕೊಟ್ಟು ಸಂತೃಪ್ತಿಪಡಿಸಿದ್ದಾನೆ, ಆನೆಯ ಕುಂಭಸ್ಥಳದಲ್ಲಿ ಪೂರ್ವಾಸನದಲ್ಲಿ ಕುಳಿತಿದ್ದಾನೆ. ಮುತ್ತಿನ ಸತ್ತಿಗೆ (ಛತ್ರ) ಹಿಡಿಯಲಾಗಿದೆ, ಎರಡು ಪಕ್ಕಗಳಲ್ಲಿಯೂ ಚಾಮರ ವೀಜನವಾಗುತ್ತಿದೆ. ಹೊಸ ನರ್ತಕಿಯರ ನರ್ತನಲೀಲೆಯನ್ನು ಗಮನಿಸು ತ್ತಿದ್ದಾನೆ. ಏಕಕಾಲದಲ್ಲಿ ಅನೇಕ ಕಹಳೆಗಳು ಮೊಳಗಿದುದರಿಂದ ದಿಙ್ಮಂಡಲಗಳೆ ಕಿವುಡಾಗಿವೆ! ದೊಡ್ಡ ನಗಾರಿಗಳು ಧ್ವನಿ ಮಾಡುತ್ತಿವೆ, ಚತುರಂಗ ಸೇನಾಸಮುದ್ರವೇ ಅತನ ಜೊತೆ ಬರುತ್ತಿದೆ. ಆ ಸೇನಾಸಮುದ್ರಕ್ಕೆ ಆನೆಗಳೇ ಮಕರಗಳು, ಕುದುರೆಯ ಸಮೂಹಗಳೇ ಅಲೆಗಳು, ಮೇಘದಂತಿರುವ ರಥಗಳು; ಹೀಗೆ ಮುನ್ನಡೆದು ಬಂದರೆ

ಪೂರ್ವಾಸನನುಂ, ಸಮಸ್ತಮುಕ್ತಾನೀತ ಮೌಕ್ತಿಕಾತಪತ್ರನುಂ, ಪಾರ್ಶ್ವಯುಗನರ್ತಿತ ಚಮರ ವಿಭ್ರಮನುಂ, ನವೀನನರ್ತಕೀನರ್ತನಲೀಲಾವಿಲಾಸೇಕ್ಷಣನುಂ, ಬಹಳ ಕಹಳಾರವಬಧಿರೀ ಕೃತದಿಙ್ಮಂಡಲನುಂ, ನಿಸ್ಸೀಮೋದ್ಧತ ನಿಸ್ಸಾಳನಾದನುಂ, ಮಕರಾಯಮಾನದ್ವಿರದ ಕುಲತರಂಗಾಯಮಾನ ತುರಂಗೌಘ ಮೇಘಾಯಮಾನರಥಯುತ ಸೇನಾಸಮುದ್ರನುಮಾಗಿ ನಡೆತರುತ್ತುಂ ಮುಂದೆನಿಂದು ಬಹಿರ್ವನದೊಳಗಣ ಹಾಲಚೂತಾಂಕುರಮಂ ಬಲವಂದು ಭಾವಿಸಿ ನೋಡಿ ತೀವಿದ ನೇಹದಿಂದೋವಿಯೋವಿ ನಸುಕರ್ದುಂಕಿ ನವರಸಮಂ ಸವಿಸವಿದು ಸೊರ್ಕಿ ಪಕ್ಕಮಂ ಬರ್ಚಿ ಮಿಕ್ಕು ನೆಗೆದೆಳದಳಿರ ಬಳಗದೊಳ್ ಪೊರಳ್ದು ಪಾರ್ದು ನಲಿನಲಿದು ನೋಡಿನೋಡಿ ಮಲೆತುನಿಂದು ಮೇಲಣ ತರುಶಾಖಮನೇಜೆ ವಿರಹಿಗಳತ್ತಲ್ ಬರಲಾಗ ಕಾಮದೇವನ ತೋಟಿ ಬೇಡೆಂದು ಬಿರುದೆತ್ತಿ ಕರೆವ ಕಂದರ್ಪನ ಕಹಳೆಗಳೆಂಬಂತೆ ತಂಡ ತಂಡದಿಂ ಕೂಗುವ ಗಂಡುಗೋಗಿಲೆಗಳಂ, ಮತ್ತಮಲರ್ದಿರದೆ ಮುಕುಳಿತಮಾಗದುಳ್ಳಲರ್ದ ಬರಿಮುಗುಳೊಳ್ ಭರದಿಂ ಪೊಕ್ಕು ಪೊಸಕಂಪನೆಸೆಯೆ ಪೀರ್ದು ತಣಿ ತಣಿದಣಿಯರದಿಂದುರ್ಕಿ ಸೊರ್ಕಿ ಮೊರೆದ ನೆರೆದು ಮೇಗಣ್ಗೆ ನೆಗೆದು ಸಾಲ್ಗೊಂಡೇಜೆ ವನಲಕ್ಷ್ಮಿಪಾರ್ವತಿಗೆ ಲೀಲೆಯಿಂದೋಲಗಿಸಲೆಂದೆತ್ತಿದ ನೀಲದ ಮಾಲೆಯಂತೆ ನೆಱೆಮೆಱೆವ ಮಧುಕರ ಪ್ರಕರಮಂ, ಮತ್ತಂ ಸೆಳೆಗೊಂಬಿನ ತನಿವಣ್ಣಂ ತವಕದೊಳಪ್ಪಿ ರಸದೊಱತೆಯ ಸೆಱೆಯಂತಿರ್ಪ ಪಣ್ಣ ಸೆರೆಯಂ ಕಂಡು ಕಣ್ಣೊಳಾಲಿಂಗಿಸುವಂತೆ ಸವಿ ಸವಿದು ನೋಡಿ ಚಂಚುಪುಟದೋಳೀಡಿಱೆದೆಚ್ಚು ಪಾಯ್ದ ರಸಧಾರೆಗೆ ನಾಲಗೆಯೊಡ್ಡಿ ನಲಿನಲಿದೀಂಟಿ ತಣಿದು ತೂಗಿ ತೊಂಡುಗೆಡೆದು ವಸಂತರಾಜನ ಪಡಿಯಱರಂತೆ ವಿರಹಿಗಳಂ ಚಪ್ಪರಿಪ ರಾಜಕೀರಂಗಳಂ ಮತ್ತಮಗಲ್ದ ಪೆಣ್ಣಂಚೆಯಂ ಪುಳಿನಸ್ಥಳದ ಕುಸುಮರಜದ ಪೊಸಪಜ್ಜೆವಿಡಿದಱಸಿ ಪೋಗಿ ಕೊಳನಂ ಪೊಕ್ಕು ಫಳಿಲನೆ ಕಂಡಮರ್ದಪ್ಪಿ ಕಮಲವನದೆಲೆದುಱುಗಲಿಱುಂಬನೊಳನುರಾಗದಿಂ ನೆರೆವ ರಾಜಹಂಸ ಮಿಥುನಂಗಳಂ, ಮತ್ತಂ ಕಳ್ತಲಿಪ ತಮಾಲವನದೊಳ್ ವಿರಹಿಗಳನಱಸಲೆಂದು ಕಾಮದೇವನೆತ್ತಿಸಿದ ಕೆಯ್ದೀವಿಗೆಗಳಂತೆ

ನಗರೋದ್ಯಾನ, ಅಲ್ಲೊಂದು ಮಾವಿನಮರ, ಅದರ ಎಳೆಯ ಚಿಗುರು, ಅದನ್ನು ನೋಡಿ ಅತ್ಯಾಸೆಯಿಂದ ನಸುಕುಕ್ಕಿ ನವರಸವನ್ನು ಸವಿದು ಸೊಕ್ಕಿ, ರೆಕ್ಕೆಯನ್ನು ಬಿಚ್ಚಿ, ಎಳಿತಳಿರಿನ ಬಳಗದಲ್ಲಿ ಹೊರಳಾಡಿ, ನಲಿದು ನೋಡಿ, ಮಲೆತು, ತರುಶಾಖೆಯನ್ನೇರಿ, ವಿರಹಿಗಳು ಈ ಕಡೆ ಬರಬಾರದು ಎಂದು ಮದನನೊಡನೆ ಕದನ ಬೇಡವೆಂದು ಬಿರುದೆತ್ತಿ ಕರೆವ ಕಂದರ್ಪನ ಕಹಳೆಗಳೊ ಎಂಬಂತೆ ತಂಡತಂಡವಾಗಿ ಗಂಡು ಕೋಗಿಲೆಗಳು ಕೂಗುತ್ತಿವೆ, ಮತ್ತೊಂದೆಡೆ ದುಂಬಿಗಳು, ಅವು ಅರಳಲಿರುವ ಮುಗುಳುಗಳಲ್ಲಿ ಹೊಕ್ಕು ಹೊಸ ಕಂಪನ್ನು ಚೆನ್ನಾಗಿ ಹೀರಿ, ತಣಿದು ವೇಗವಾಗಿ ಉಕ್ಕಿ ಸೊಕ್ಕಿಮೊರೆದು ನೆರೆದು ಮೇಲೆ ನೆಗೆದು ಸಾಲುಸಾಲಾಗಿ ವನಲಕ್ಷ್ಮಿ ಪಾರ್ವತಿಗೆ ಓಲಗಿಸಲು ಎತ್ತಿದ ನೀಲಮಾಲೆಯೊ ಎಂತಿವೆ ಆ ಮಧುಪಗಳು; ಮತ್ತಲ್ಲಿರುವ ರಾಜಕೀರಗಳು, ಅವು ಸೆಳೆಗೊಂಬಿನಲ್ಲಿ ಮಾಗಿರುವ ಹಣ್ಣುಗಳನ್ನು ಅಪ್ಪಿ ಉಕ್ಕುತ್ತಿರುವ ರಸವತ್ತಾದ ಅವುಗಳನ್ನು ತವಕದಿಂದ ಕಣ್ಣಿನಿಂದಲೆ ಆಲಿಂಗಿಸಿ, ಚನ್ನಾಗಿ ಸವಿದು ನೋಡಿ, ಚಂಚುಪುಟದಿಂದ ಕುಕ್ಕಿ ಸೋರುವ ರಸಧಾರೆಗೆ ನಾಲಗೆಯೊಡ್ಡಿ ನಲಿದು ಈಂಟಿ ತಣಿದು ಹರಟೆಯಾಡುತ್ತಾ ವಸಂತರಾಜನ ಪ್ರತೀಹಾರಿಯರಂತೆ ವಿರಹಿಗಳನ್ನು ಗೋಳುಹೊಯ್ದುಕೊಳ್ಳುತ್ತಿವೆ; ಮತ್ತೊಂದು ಕಡೆ ರಾಜಹಂಸ ಮಿಥುನಗಳು, ಅವುಗಳಲ್ಲಿ, ಗಂಡು ಹಂಸೆಯೊಂದು ಅಗಲಿದ ಹೆಣ್ಣುಹಂಸವನ್ನು ಮರಳದಿಬ್ಬಗಳಲ್ಲಿ,

ಪಲ್ಲವರಾಗದಿಂ ಪಲ್ಲವಿಸಿ ತೋರ್ಪಶೋಕದ್ರುಮಗಳಂ, ನಿಂದ ಲತೆಗಳನಲ್ಲಾಡಿಪ ಮಂದಾನಿಳನಂ, ಅಗಲ್ದರಂ ನಗುವಂತೆ ನಸುವಿರಿದ ದಾಡಿಮಂಗಳಂ, ಸುಳಿವ ವಿದ್ಯಾಧರಿಯರಂ, ಕುಣಿವ ನವಿಲ್ಗಳಂ, ಕರೆವ ಕೊಳರ್ವಕ್ಕಿಗಳಂ, ನೆರೆವ ಚಕ್ರಮಿಥುನಂಗಳಂ, ಕಂಡು ಗಿರಿರಾಜಂ ಕೊಂಡಾಡುತಂ ಬಂದು ಮುಂದೆ ಪುಂಡರೀಕ ಪ್ರಕರ ಪರಿಮಳಾಸಕ್ತ ಭ್ರಮರಕುಲವಿಲಸಿತಮಾದ ಕಾಸಾರತಟದೊಳ್ ಮಂದಾನಿಳನಿಂ ಪರೆದ ಪರಾಗದ ಪೀಠದ ಮೇಲಣ ನುಣ್ಣಲ ಶಿವಲಿಂಗಮನಗಣಿತ ಪ್ರೇಮದಿಂ ಸೊಗಮಿಕ್ಕು ಮಿಗೆ ಪೂಜಿಸುತ್ತಿರ್ದ ಮಗಳಂ ಕಂಡು,

ಬಿಡದೇಳ್ದ ಪುಳಕತತಿಯೊಡ
ನೊಡನಾನಂದಾಶ್ರುವೊಗೆಯೆ ಬಗೆವೆರ್ಚುತ್ತಿ ।
ರ್ಮಡಿ ಮೂವಡಿ ನಾಲ್ವಡಿಯ
ಯ್ದಡಿ ಸಂಸತದಿಂದೆ ತಂದೆ ಮಗಳಂ ಕರೆದಂ ॥ ೧೦೪

ಶಾ॥ ಬಾರೆನ್ನಾಯುವೆ ಬಾರ ಪುಣ್ಯತತಿಯೇ ಬಾರೆನ್ನ ಸೌಂದರ್ಯವೇ
ಬಾರೆನ್ನಾದಿಯೆ ಬಾರ ಶೈವನಿಧಿಯೇ ಬಾರೆನ್ನಯ ಪ್ರಾಣವೇ ।
ಬಾರೆನ್ನೊಲ್ಮೆಯೆ ಬಾರ ತತ್ತ್ವಸುಖಮೇ ಬಾರೆನ್ನ ಮಾತಾಮಹೇ
ಬಾರೆನ್ನಾಳ್ದಳೆನುತ್ತುಮೊಲ್ದು ಕರೆದಂ ಶರ್ವಾಣಿಯಂ ಶೈಲಪಂ ॥ ೧೦೫

ವ॥ ಇಂತು ಕರೆದ ನಿಜಜನಕಜನಿತ ಸ್ನೇಹರಸಾರ್ದ್ರಮಧುರಾಕ್ಷರಸಮ್ಮಿಳಿತ ಸಾತ್ವಿಕ ಸರಮಂ ಕೇಳ್ದು ಪುತ್ರೀಭಾವಮಂ ನಟಸಲೆಂದು ಶಿವಲಿಂಗಮಂ ಬೀಳ್ಕೊಂಡು ತಿರುಗಿನೋಡಿ,

ಕುಸುಮಮಂಜರಿಗಳಲ್ಲಿ, ಹೊಸ ಹೊಸ ಹೆಜ್ಜೆಗಳನ್ನು ಗುರ್ತಿಸಿ ಹುಡುಕುತ್ತ ಹೋಗಿ ಕೊಳದಲ್ಲಿ ಕಂಡಕೂಡಲೆ ಅಮರ್ದಪ್ಪಿ ದಟ್ಟವಾದ ಕಮಲದೆಲೆಗಳಲ್ಲಿ ಅನುರಾಗದಿಂದ ನೆರೆಯುತ್ತಿವೆ; ಮತ್ತೊಂದೆಡೆ ಅಶೋಕವೃಕ್ಷಗಳು, ಅವು ಹೊಂಗೆಯ ವನದಲ್ಲಿ ವಿರಹಿಗಳನ್ನು ಹುಡುಕಲು ಕಾಮದೇವನು ಹೊತ್ತಿಸಿದ ಕೈದೀವಿಗೆಗಳಂತೆ ಪಲ್ಲವಿಸಿ ಕಂಗೊಳಿಸುತ್ತಿವೆ. ಮಂದಮಾರುತನಿಂದ ಲತೆಗಳನ್ನು ಅಲ್ಲಾಡಿಸುತ್ತಿದೆ; ಅಗಲಿದವನನ್ನು ನಗುವಂತೆ ಮಾಡುವ ನಸುಬಿರಿದ ದಾಳಿಂಬಗಳು, ಸುಳಿವ ವಿದ್ಯಾಧರಿಯರು, ಕುಣಿವ ನವಿಲುಗಳು, ಕರೆವ ಕೊಳದ ಹಕ್ಕಿಗಳು, ನೆರೆವ ಚಕ್ರವಾಕಗಳು ಮುಂತಾದವುಗಳನ್ನೆಲ್ಲ ಗಿರಿರಾಜನು ಕಂಡು, ಹರ್ಷದಿಂದ ಬರುತ್ತಿದ್ದಾನೆ. ಅರಳಿದ ಕಮಲಗಳುಳ್ಳ, ಅವುಗಳ ಪರಿಮಳಕ್ಕೆ ಬಂದೆರಗಿದ ದುಂಬಿಗಳುಳ್ಳ ಕೊಳದ ದಡದಲ್ಲಿ, ಪುಷ್ಪಧೂಳಿವಿಡಿದ ಪೀಠದ ಮೇಲೆ ಪೂಜೆಗೊಂಡ ಶಿವಲಿಂಗ, ಪೂಜಾಮಗ್ನಳಾದ ಮಗಳು ಗಿರಿಜೆ ಈ ದೃಶ್ಯವನ್ನು ಕಂಡ ರಾಜ-೧೦೪. ಅವಳನ್ನು ಕಂಡೊಡನೆಯೆ ಮೈ ರೋಮಾಂಚಿತ ವಾಯಿತು ರಾಜನಿಗೆ, ಆನಂದಾಶ್ರುಗಳು ಕೋಡಿವರಿಯುತ್ತಿವೆ, ಸಂತಸವು ಉಕ್ಕಿಬರುತ್ತಿದೆ, ಈ ಸ್ಥಿತಿಯಲ್ಲಿ ಆತ ಮಗಳನ್ನು ಕರೆದ-೧೦೫. ನನ್ನ ಆಯುಷ್ಯವೇ, ಪುಣ್ಯತತಿಯೇ, ಸೌಂದರ್ಯವೇ, ಆದಿಯೇ, ಶೈವನಿಧಿಯೇ, ಪ್ರಾಣವೇ, ಒಲ್ಮೆಯೇ, ತತ್ತ್ವಸುಖವೇ, ಮಾತಾಮಹೇ ಎಂದು ಮುಂತಾದ ಮುದ್ದುಮಾತುಗಳಿಂದ ಕರೆದನು. ವ॥ ಹೀಗೆ ತಂದೆಯ ಸಹಜ ಪುತ್ರೀ ಸ್ನೇಹದ ಮಧುರ ನುಡಿಯನ್ನು ಕೇಳಿ ಪುತ್ರೀಭಾವವನ್ನು ನಟಿಸಿ ಶಿವಲಿಂಗವನ್ನು ಬೀಳ್ಕೊಂಡು ತಿರುಗಿ ನೋಡಿ,

ನಿಂದಿರ್ದು ನಗುತೆ ನಲಿಯು
ತ್ತಂದುಗೆ ಪೊಂಗೆಜ್ಜೆಯುಲಿಪು ನೆಲನುಗ್ಗಡಿಸು ।
ತ್ತಂದೆಸೆಯ ಮಂದಯಾನದೊ
ಳಿಂದು ಪ್ರಭೆ ಮುಂದೆ ಮುಂದೆ ನಡೆತರುತಿರ್ದಳ್ ॥ ೧೦೬

ಅರಳೆಲೆ ಭಾಳದೊಳಾಡು
ತ್ತಿರೆ ಮಾಂಗಾಯ್ಗಂಡಯುಗಳಮಂ ಮುಂಡಾಡು ।
ತ್ತಿರೆ ಕುರುಳ್ಗಳ್ ಕುಣಿದಾಡು
ತ್ತಿರೆ ಸತಿಯರ ನಡುವೆ ಗಿರಿಜೆ ನಡೆತರುತಿರ್ದಳ್ ॥ ೧೦೭

ನವಿಲಾಟಂ ಹಂಸೆಯ ನಡೆ
ತವೆ ಮಂದಾನಿಳನ ಸುಗತಿ ಮದಗಜಗಮನಂ ।
ತವತವಗಡಂಗುತಿರ್ದುವು
ನವೀನ ಬಾಲಕಿಯ ಮಧುರ ಮೃದುಪದಗತಿಯೊಳ್ ॥ ೧೦೮

ಎಂದೆನಿಪ ವಿಳಾಸಂ ಮಿಗೆ
ಮುಂದಾಡುತೆ ತೊಳಪ ಬೆಳಪ ಬೆಳತಿಗೆಗಣ್ಗಳ್ ।
ಮಂದೈಪ ಮೆಲ್ನಗೆಯನುಗೆ
ಬಂದಪ್ಪಿದಳಗಜೆ ಸೊಗಯಿಸುತ್ತಿರೆ ಪಿತನಂ ॥ ೧೦೯

ವ॥ ಅಂತು ಬಂದಪ್ಪಿದಾಗಳ್,

ಮಾಣಿಕವೆ ಮೌಕ್ತಿಕವೆ ಮತ್
ಪ್ರಾಣವೆ ಪೊನ್ನೊಳಿಯೆ ಪರುಷವೇ ಮುಕ್ತಿಯ ನಿ ।
ರ್ಮಾಣವೆ ಎನುತುಂ ಮೂರ್ಧ್ನಾ
ಘ್ರಾಣಂ ಬೆರಸಗಲಪ್ಪಿದಂ ಗಿರಿರಾಜಂ ॥ ೧೧೦

ಸುತ್ತಿದ ಪರಮ ಸ್ನೇಹದೆ
ಮತ್ತಂ ಮತ್ತಪ್ಪಿ ಪುಳಕಿಸುತ್ತುಂ ಪುಟವೇ ।
ಱುತ್ತುಂ ಪೊಣ್ಮುತ್ತುಂ ನಲಿ
ಯುತ್ತೆ ಗಜಾರೂಢನಾಗುತುಂ ಗಿರಿರಾಜಂ ॥ ೧೧೧

೧೦೬. ನಗುತ್ತಾ ನಲಿಯುತ್ತಾ ಅಂದುಗೆ ಪೊಂಗೆಜ್ಜೆಗಳು ಧ್ವನಿಮಾಡುತ್ತಿರಲು ಅವಳು ಮಂದಗಮನದಿಂದ ನಡೆತರುತ್ತಿದ್ದಳು. ೧೦೭. ಹಣೆಯಲ್ಲಿ ಅರಳೆಲೆ ಆಡುತ್ತಿದೆ, ಮಾಂಗಾಯಿಗಳು ಕೆನ್ನೆಗಳ ಮೇಲೆ ಮುಂಡಾಡುತ್ತಿವೆ, ಮುಂಗುರುಳು ಕುಣಿದಾಡುತ್ತಿರಲು ಗಿರಿಜೆ ಕೆಳದಿಯರ ನಡುವೆ ನಡೆತರುತ್ತಿದ್ದಾಳೆ. ೧೦೮. ಅವಳ ಮೃದುಗಮನದಲ್ಲಿ ನವಿಲ ನಡೆ, ಹಂಸೆಯ ಗಮನ, ಮಂದಮಾರುತ, ಗತಿ, ಮದಗಜಗಮನಗಳ ಹೋಲಿಕೆಯಿತ್ತು. ೧೦೯. ಹೊಳೆವ ಕಣ್ಣುಗಳು, ನಸುನಗೆಯಿಂದ ಬಂದ ಗಿರಿಜೆ ತಂದೆಯನ್ನು ಅಪ್ಪಿದಳು. ೧೧೦. ಮಾಣಿಕ್ಯವೆ, ಮುತ್ತೆ, ಮತ್‌ಪ್ರಾಣವೆ, ಹೊನ್ನ ಒರೆಯೇ, ಪರುಷವೇ, ಮುಕ್ತಿಯ ನಿರ್ಮಾಣವೆ ಎಂದು ಗಿರಿರಾಜ ಅವಳನ್ನು ಆಲಿಂಗಿಸಿ ಮುಂದಲೆ ಮೂಸಿದನು. ೧೧೧. ಸುತ್ತುವರಿದ ಸ್ನೇಹದಲ್ಲಿ ಮಗಳನ್ನು ಮತ್ತೆ ಮತ್ತೆ ಆಲಿಂಗಿಸಿ ಪುಳಕಿತನಾಗಿ ನಲಿದು ಗಿರಿರಾಜ ಆನೆಯನ್ನೇರಿದನು.

ಪೂರ್ವಾಸನದೊಳ್ ಪದೆಪಿಂ
ಪಾರ್ವತಿಯಂ ಹರ್ಷವೇಱಿ ಬಿಜಯಂಗೆಯ್ಯು ।
ತ್ತುರ್ವ್ಯತೆ ಕೊರ್ವ್ಯತೆ ಪರ್ವ್ಯತೆ
ಪರ್ವತರಾಜಂ ಪುರಕ್ಕೆ ತಿರುಗಿದನಾಗಳ್ ॥ ೧೧೨

ಮ॥ಸ್ರ॥ ಒಸೆದೆತ್ತಲ್ ತನ್ನ ಬೆನ್ನೊಳ್ ಬರುತಿರೆ ಚತುರಂಗಂ ಮಹಾದೇವಿ ಶರ್ವಾ
ಣಿ ಸಮಸ್ತಾಧಿಕ್ಕೆ ಪೂರ್ವಾಸನದೊಳಿರೆ ಬರುತೊಪ್ಪಿದಂ ಶೈಳಪಂ ಸಂ ।
ತಸದಿಂ ಭೂಭಾಗಮಂ ನೋಳ್ಪತಿಭರವಶದಿಂ ಪೂರ್ವಗೋತ್ಸಾಗ್ರದೊಳ್ ತಾಂ
ಶಶಿಯಂ ಮುಂತಿಟ್ಟು ಬರ್ಪುದ್ದಳ ವಿಮಳ ವಸಂತಂಬೊಲಾನಂದದಿಂದಂ ॥ ೧೧೩

ಚಂ॥ ಬರುತಿರೆ ಮುಂದೆ ಪಟ್ಟಣದೆರಳ್ಕೆಸೆಯೊಪ್ಪುವ ರಾಜವೀಥಿಯೊಳ್
ನೆರೆದ ಶಶಾಂಕವಕ್ತ್ರೆಯರ ಕಣ್ಗಳ ಕಾಂತಿ ಶರೀರ ಕಾಂತಿಯಾ ।
ಭರಣದ ಕಾಂತಿ ರತ್ನಕುಲಕಾಂತಿ ದರಸ್ಮಿತಕಾಂತಿಯೆಂಬ ವಿ
ಸ್ತರಿತ ಸುಖಾಬ್ಧಿಯಂ ಸುಖದೊಳೀಸುತೆ ಬಂದನಗೇಂದ್ರವಲ್ಲಭಂ ॥ ೧೧೪

ವ॥ ಅಂತು ಬಂದು ಸಕಲ ರಾಜಲೋಕಂ ಬೆರಸು ಗಿರಿರಾಜಂ ರಾಜಧಾನಿತಿಳಕಮೆನಿಪ ರಾಜಮಂದಿರದ ಮುಂದೆ ನಿಂದು,

ಪೊಳೆವ ಗಜದಿಂದಮವನೀ
ತಳಕ್ಕೆ ನಿಜತನುಜೆವೆರಸು ಬಿಜಯಂಗೆಯ್ದು ।
ಗ್ಗಳಿಪ ಶಶಿಸೂರ್ಯ ವಂಶೋ
ಜ್ವಳರಂ ಕಳಿಪುತ್ತೆ ಬಂದನಗಕುಲರಾಜಂ ॥ ೧೧೫

ಪರಿಜನಮೊಡನೊಡನೊಲ್ದೊ
ಪ್ಪಿರೆ ಕೆಲ ಬಲ ಪಡಿತಳಾವಧಾರುಯೆನುತ್ತುಂ ।
ಬರುತಿರೆ ತನೂಜೆ ಸಹಿತಂ
ಗಿರಿರಾಜಂ ಸಿಂಹವಿಷ್ಟರಸ್ಥಿತನಾದಂ ॥ ೧೧೬

೧೧೨. ಮುಂದಿನ ಆಸನದಲ್ಲಿ ಮಗಳನ್ನು ಕೂಡಿಸಿ ಹರ್ಷನಿರ್ಭರನಾಗಿ ಗಿರಿರಾಜನು ಪುರಕ್ಕೆ ಹಿಂದಿರುಗಿದನು. ೧೧೩. ರಾಜನ ಹಿಂದೆ ಚತುರಂಗಬಲ, ಮುಂದೆ ಶರ್ವಾಣಿ, ಕುಳಿತಿದ್ದಾಳೆ; ಆಗ ಗಿರಿರಾಜನು, ಅಖಿಲ ಭೂಭಾಗವನ್ನು ನೋಡುವ ಸಂತಸದಿಂದ ವಸಂತನು ಶಶಿಯನ್ನು ಮುಂದಿಟ್ಟುಕೊಂಡು ಬರುವಂತಿತ್ತು. ೧೧೪. ಬರುವಾಗ ಮುಂದೆ ಪಟ್ಟಣದ ಎರಡೂ ಕಡೆ ರಾಜವೀಥಿಯಲ್ಲಿ ಇಂದುಮುಖಿಯರು ನಿಂತಿದ್ದಾರೆ. ಅವರ ಕಣ್ಣುಗಳ ಕಾಂತಿ, ಶರೀರ ಕಾಂತಿ, ಆಭರಣಗಳ ಕಾಂತಿ, ರತ್ನಗಳ ಕಾಂತಿ, ನಸುನಗೆಯ ಕಾಂತಿ, ಎಂಬ ಸುಖಿಸಾಗರವನ್ನು ಈಜಿಕೊಂಡು ರಾಜ ಬರುತ್ತಿದ್ದಾನೆ. ವ॥ ಹಾಗೆ ಬಂದು ಸಕಲ ರಾಜಸಮೂಹ ದೊಂದಿಗೆ ಗಿರಿರಾಜನ ರಾಜಧಾನಿಯ ತಿಲಕದಂತೆ ಶೋಭಿಸುವ ರಾಜಮಂದಿರದ ಮುಂದೆ ನಿಂತು ೧೧೫. ಆನೆಯಿಂದಿಳಿದು, ಮಗಳನ್ನೂ ಇಳಿಸಿದ ರಾಜನು ಸಾಮಂತ ರಾಜರೊಡನೆ ಅರಮನೆಗೆ ಬಂದನು. ೧೧೬. ಪರಿಜನರೊಡನೆ ರಾಜ ಅರಮನೆ ಪ್ರವೇಶಿಸಿದಾಗ ಪ್ರತೀಹಾರಿಗಳು ಅವಧಾರು! ಅವಧಾರು! ಎಂದು ಘೋಷಿಸುತ್ತಿದ್ದರು; ಗಿರಿರಾಜ ಮಗಳೊಡನೆ ಬಂದು

ಉ॥ ಹಾರಮರೀಚಿ ತತ್ಕುಚಮರೀಚಿ ಕಪೋಲ ಮರೀಚಿಯಾನನ
ಸ್ಮೇರಮರೀಚಿ ಲೋಚನಮರೀಚಿ ಲಲಾಟಮರೀಚಿ ದಂತವಿ ।
ಸ್ತಾರಮರೀಚಿಗಳ್ ತೊಳಗುವಾರತಿಗಾರತಿವೆತ್ತು ಸುತ್ತಿ ನಿಂ
ದಾರತಿಯೆತ್ತಿದರ್ ಗಿರಿಜೆಗಂ ಜನಕಂಗಮನಂತಕಾಂತೆಯರ್ ॥ ೧೧೭

ವ॥ ಅಂತೆತ್ತುವಾರತಿಗಳಂ ಕೆಯ್ಕೊಂಡು ಗಿರಿರಾಜಂ ನಾನಾ ಹರ್ಷದಿಂ ಮೇನಾದೇವಿಯಂ ಕರೆಯಿಸೆ ಬರುತ್ತಿರ್ದಳದೆಂತೆಂದೊಡೆ,

ಚಂ॥ ಎಡಬಲವಂಕದೊಳ್ ನೆಲನನುಗ್ಗಡಿಪಾಳಿಯರಿಂ ವಿಳಾಸದಿಂ
ದಡಿಯಿಡುವಲ್ಲಿ ನೇವುರದ ನುಣ್ಪಿನಿಗಾಡುವ ಹಂಸೆವಿಂಡಿನಿಂ ।
ಬಡದೆ ಮುಖಾಬ್ಜಸೌರಭವನುಣ್ಬ ಮದಾಳಿಗಳಿಂ ವಿನೂತನಂ
ಬಡೆದತಿಮಾನಿ ಮೇನೆ ನಡೆತಂದು ನಿರೀಕ್ಷಿಸುತಂ ಭವಾನಿಯಂ ॥ ೧೧೮

ಶಾ॥ ಏನೆನ್ನಾಯುವೆ ಎನ್ನಪಾರಸುಖಮೇ ಏನೆನ್ನ ಪುಣ್ಯಾಬ್ಧಿಯೇ
ಏನೆನ್ನುತ್ಸವಮೇ ವಿಳಾಸನಿಧಿಯೇ ಏನೆನ್ನ ಸೌಂದರ್ಯಮೇ ।
ನಾನಾ ಪರ್ವತದೊಳ್ ವನ ಪ್ರಕರದೊಳ್ ಸಂಪೂರ್ಣಕಾಸಾರದೊಳ್
ನೀನೇಕಂತಿರಲೇಕೆ ತಾಯೆ ಎನುತುಂ ಬಂದಪ್ಪಿಕೊಂಡಪ್ಪಿದಳ್ ॥ ೧೧೯

ವ॥ ಇಂತು ಮೊಲೆಯೊಡನೆ ಕಣ್ತೊಱೆಯೆ, ಪುಳಕದೊಡನೆ ಗದ್ಗದಂ ಪೊಣ್ಮೆ ಸ್ವೇದದೊಡನೆ ಕಂಪಂನಂ ಕನರೆ, ಸಿಂಹಪೀಠದ ಸಿಂಗರದ ಶಿಶುವಂ ಮೊಗೆದಪ್ಪಿ ತೆಗೆದಪ್ಪಿ ಮೂರ್ಧ್ನಾಘ್ರಾಣಮಂ ಮಾಡಿ ಮೊಲೆಯೂಡಿ, ಮೇನೆಯುಂ ಗಿರಿರಾಜನುಂ, ಕಣ್ ತೀವಿ ನೋಡಿ, ಮೆಯ್ ತೀವಿಯಪ್ಪಿ, ಮನಂತೀವಿ ನೆನಹಿನೊಳಿಟ್ಟು ಶಶಿಕಲೆಯಂ ಸಲಹುವಂತೆ ಸೌಕುಮಾರ್ಯಮಂ ಸುಯಿಧಾನಂ ಮಾಳ್ಪಂತೆ ಸೊಬಗಂ ಸಂವರಿಸುವಂತೆ ಬೆಳ್ದಿಂಗಳಂ

ಸಿಂಹಾಸನದಲ್ಲಿ ಮಂಡಿಸಿದನು. ೧೧೭. ಅರಮನೆಯಲ್ಲಿನ ಅನೇಕ ಕಾಂತೆಯರು ಗಿರಿಜೆ-ಗಿರಿರಾಜರಿಗೆ ಆರತಿಯೆತ್ತಿದರು. ಅವರ ಹಾರಗಳ ಮರೀಚಿಗಳು, ಅವರ ಕುಚಮರೀಚಿಗಳು, ಅವರ ಕಪೋಲ, ಆನನ, ಲೋಚನ, ಲಲಾಟ, ದಂತಮರೀಚಿಗಳು ತೊಳಗುವ ಆರತಿಯಾಗಿರಲು ಅವರು ಆರತಿ ಎತ್ತಿದರು. ವ॥ ಮೇನಾದೇವಿ ಆ ಸಮಯಕ್ಕೆ ಆಗಮಿಸುತ್ತಿದ್ದಾಳೆ-೧೧೮. ಎರಡು ಪಕ್ಕಗಳಲ್ಲಿ ಉದ್ಘೋಷಿಸುವ ಸಖಿಯರು, ಅವಳು ಅಡಿಯಿಡುವಾಗ ನೇವುರದ ನುಣ್ಪಿನಿಗೆ ಆಡುವ ಹಂಸಗಳು, ಅವಳ ಮುಖಕಮಲ ಸೌರಭಕ್ಕೆ ಎಳಸಿ ಬಂದ ದುಂಬಿಗಳು, ಇಂತಿರುವಾಗ ಮೇನಾದೇವಿ ನಡೆತಂದು ಮಗಳನ್ನು ನೋಡಿದಳು. ೧೧೯. ಎನ್ನಾಯುವೆ, ಅಪಾರ ಸುಖವೆ, ಪುಣ್ಯದ ಕಡಲೆ, ಉತ್ಸವವೆ, ವಿಳಾಸನಿಧಿಯೇ, ಸೌಂದರ್ಯವೆ, ನೀನು ಈ ಪರ್ವತದಲ್ಲಿ, ಕೊಳದ ತಡಿಯಲ್ಲಿ ಏಕಿರುವೆ ಎಂದು ಮೇನಾದೇವಿ ಮಗಳನ್ನು ಆಲಿಂಗಿಸಿಕೊಂಡಳು. ವ॥ ಮಗಳನ್ನು ನೋಡಿ ಮೇನಾದೇವಿಯ ಮೊಲೆ-ಕಣ್ಣುಗಳು ತೊಯ್ದುವು, ಗದ್ಗದ-ಸ್ವೇದಗಳು ಪೊಣ್ಮಿದವು, ಮೈಕಂಪಿಸಿತು, ಸಿಂಗರದ ಶಿಶುವನ್ನು ಅಪ್ಪಿದಳು. ತಲೆಮೂಸಿದಳು,

ಬಣ್ಣವಿಡುವಂತೆ, ಭೋಗಮಂ ಸಾಗಿಸುವಂತೆ, ಚೆಲ್ವಂ ಚಮತ್ಕರಿಸುವಂತೆ, ಸಾಹಿತ್ಯಮಂ ಸಯ್ತಿಡುವಂತೆ, ಪ್ರಾಣಮಂ ಪರಿರಕ್ಷಿಪಂತೆ, ಜ್ಞಾನಮಂ ಬಳಿಯಿಸುವಂತೆ, ಶಾಂತಿಯಂ ಕಾಂತಿಯಿಡುವಂತೆ, ಸತ್ಯಮಂ ಸಂತವಿಡುವಂತೆ, ನಿತ್ಯಮಂ ಪ್ರತ್ಯಕ್ಷಮಂ ಮಾಳ್ಪಂತೆ, ಪುಣ್ಯಮಂ ಪುಟವಿಡುವಂತೆ, ಮುಕ್ತಿಯಂ ಮೂರ್ತಿಗೊಳಿಸುವಂತೆ, ಪಾರ್ವತಿಯಂ ಸಲಹುತ್ತುಮಿರೆಯಿರೆ,

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಯವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಹೈಮವತೀ ಶೈಶವವರ್ಣನಂ
ತೃತೀಯಾಶ್ವಾಸಂ

ದಂಪತಿಗಳಿಬ್ಬರೂ ಮಗಳನ್ನು ಮನಸಾರೆ ನೋಡಿ ತಣಿದರು. ಅವರು ಅವಳನ್ನು ಅಕ್ಕರೆಯಿಂದ ಸಲಹುತ್ತಿದ್ದರು.

ಚತುರ್ಥಾಶ್ವಾಸಂ

ಪಾರ್ವತೀಯೌವನ ರಾತ್ರಿವಿಹಾರವರ್ಣನಂ

ಕಂ॥ ಶ್ರೀಸಕಳಸುರ ಮುನೀಶ್ವರ
ವಾಸವ ಹರಿಕಮಲ ಪುತ್ರಪೂಜಿತಚರಣಂ ।
ಭಾಸುರತೇಜಂ ಭಕ್ತವಿ
ಳಾಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ॥ ೧

ಶಿವ ಶಿವ ನಳನಳಿಸುವ ಶೈ
ಶವದೊಳ್ ಬಳೆಯುತ್ತುಮಿರ್ಪ ಗಿರಿಜೆಗೆ ರೂಪೋ ।
ತ್ಸವದೊಡನೆ ಮೆಱೆವ ದಶವ
ರ್ಷವದಾಯ್ತುಲರ್ಗಣೆಗೆ ಕೂರ್ಪು ಕೂಡುವ ತೆಱದಿಂ ॥ ೨

ಇಂತಾಗೆ ಮೇನೆಯುಂ ತತ್
ಕಾಂತನುಮತಿಹರ್ಷಪುಳಕಯುತರಾಗುತ್ತುಂ ।
ಮುಂತಿರ್ದ ತನುಜೆಯಂ ಮನ
ದಿಂ ತೂಪಱೆಯುತ್ತೆ ತಮ್ಮೊಳೊಲ್ದಿಂತೆಂದರ್ ॥ ೩

ಅನವದ್ಯಂ ಚರಿತಂ ಮು
ನ್ನಿನ ಸರಿ ತಾನಲ್ಲ ಬಾಲ್ಯಮೀಪ್ರೋದುದೆ ಯೌ ।
ವನಮೀ ಸಾರ್ದುದೆ ಬಣ್ಣಿಸು
ವನ ಜಾಣ್ಮೆಗತರ್ಕ್ಯಮತುಳಮನುಪಮಮಧಿಕಂ ॥ ೪

೧. ಎಲ್ಲ ಸುರರು, ಮುನೀಶ್ವರರು ಮಾತ್ರವಲ್ಲದೆ ಇಂದ್ರ-ವಿಷ್ಣು-ಬ್ರಹ್ಮಾದಿಗಳಿಂದ ಪೂಜಿಸಲ್ಪಟ್ಟ ಪಾದಕಮಲವುಳ್ಳವನೂ, ದಿವ್ಯತೇಜಸ್ಸುಳ್ಳವನೂ ಆದ ಹಂಪೆಯ ವಿರೂಪಾಕ್ಷನು ನಮಗೆ ಅತಿಶಯ ಭಕ್ತಿಯನ್ನು ಕರುಣಿಸಲಿ. ೨. ಗಿರಿಜೆಗೆ ಹತ್ತುವರ್ಷ ತುಂಬಿಬಂದಿತ್ತು. ನಳನಳಿಸುವ ಆ ಶೈಶವದೆಸೆಯಲ್ಲಿ ವಯಸ್ಸಿನ ಜೊತೆಗೆ ಅವಳ ಲಾವಣ್ಯವೂ ಬಳೆಯುತ್ತಿತ್ತು. ಅದು ಮನ್ಮಥನ ಕುಸುಮ ಬಾಣಕ್ಕೆ ಒಂದು ನೂತನ ಶಕ್ತಿ ಕೂಡಿಬಂದಂತಾಗಿತ್ತು. ೩. ಇದರಿಂದ ಮೇನೆ ಮತ್ತು ಗಿರಿರಾಜರು ಹರ್ಷಪುಳಕಿತರಾದರು. ಅವರು ಎದುರಿಗಿದ್ದ ಮಗಳನ್ನು ಕಂಡು ಮನಸ್ಸಿನಲ್ಲಿ ಧ್ವನಿಯಿಂದ ನಿವಾಳಿಸಿ ತೆಗೆವಂತೆ ತಮ್ಮಲ್ಲೆ ಹೀಗೆಂದುಕೊಂಡರು. ೪. ನಡೆ ಪರಮ ಪವಿತ್ರ, ಇದು ಎಲ್ಲರಂತಲ್ಲ! ಈ ಬಾಲ್ಯ ಕಳೆದದ್ದು ಹಾಗೂ ಯೌವನವು ತುಂಬಿಬಂದದ್ದು ಅತ್ಯಂತ ಸೋಜಿಗ! ಇದು ವರ್ಣನೆಗೆ ಮೀರಿದ್ದು, ಊಹೆಗೂ ನಿಲುಕದ್ದು, ಅನುಪಮ, ಅತುಲ, ಅನಿರ್ವಚನೀಯ! ಎಂದುಕೊಂಡರು.

ಚಂ॥ ನಗೆ ನಸುಲಜ್ಜೆಯೊಳ್ ತೊಡರಲಿರ್ದುದೆ ಬಲ್ನಡೆ ಮಾಂದ್ಯ ಭಾವದೊಳ್
ಪುಗಲಿದೆ ಬಾಸೆ ಸಾಲಲೆತಲರ್ದುದೆ ಸೂಸುವ ನೋಟವಾಸೆಯೊಳ್
ಮಿಗಲಿದೆ ತತ್ಕುಚಂ ನಿಜಸೀಮೆಗೆ ರೇಖೆಯನೊತ್ತಿ ಲಜ್ಜಿಸಲ್
ಬಗೆದಿವೆ ಯೌವನೋದಯಮೊ ಬಾಲ್ಯವಿಮೋಚನಮೋ ಭವಾನಿಯಾ ॥ ೫

ಕಂ॥ ಅಳಕಂ ತಿಲಪುಗೊಡಲ್ಕವೆ
ತಿಳಕಕ್ಕೆ ತದಾಸ್ಯಬಿಂಬಮಾದರ್ಶದೊಳಂ ।
ಪೊಳೆಯಲಿದೆ ನಾಭಿಮಂಡಲ
ಮೊಳಪುಗಲಿದೆ ನೋಡು ಮೇನೆಯಂಬಕೆಯಿರವಂ ॥ ೬

ದಂತಂ ಮುಸುಂಕುಗಳೆಯ
ಲ್ಕಾಂತಿವೆ ನಡು ತನುವನೆಳಸದಿದೆ ನುಡಿ ಮೌನ ।
ಪ್ರಾಂತಮನೊತ್ತುಗೊಳಲ್ಕಿದೆ
ಕಾಂತಿ ಶರೀರಮನಮರ್ಚಲಿದೆ ಪಾರ್ವತಿಯಾ ॥ ೭

ವ॥ ಎಂದಿಂತು ಮಗಳ ವಯಸ್ಸಂಧಿಯಂ ವಯಃಪರಿಣತರಪ್ಪ ಮಾತಾಪಿತೃಗಳ್ ಬಣ್ಣಿಸುತಿರ್ಪಿನಮನುಕ್ರಮದಿಂ ಪಲಕೆಲವು ದಿಕ್ಕೆ ಬನಮಂ ಸಹಕಾರಂ ಸಹಕಾರಮಂ ವಸಂತಂ ವಸಂತನಂ ಕಾಮಂ ಕಾಮನಂ ಇಕ್ಷುಚಾಪಂ ಇಕ್ಷುಚಾಪಮಂ ನನೆಗಣೆ ಸಾರ್ವಂತೆ ಪಾರ್ವತಿಯಂ ನವಯೌವನಂ ಸಾರ್ವಲ್ಕೆ

೫. ಅವಳ ಸರ್ವಸಾಧಾರಣವಾದ ನಗೆ ಈ ನಸುಲಜ್ಜೆಯಲ್ಲಿ ತೊಡರುತ್ತಿದೆ. ಬಾಲ್ಯದ ಬಲ್ನಡೆ ಮಾಂದ್ಯಭಾವದಲ್ಲಿ ಪರಿಣಮಿಸುತ್ತಿದೆ. ಎಂದರೆ ನಡೆಯಲ್ಲಿ ಗಾಂಭೀರ್ಯ ಕಾಣುತ್ತಿದೆ. ಬಾಸೆ (ಹೊಟ್ಟೆಯ ಮೇಲಣ ರೋಮರಾಜಿ) ಸಾಲುಗಟ್ಟುತ್ತಿದೆ. ಅವಳ ನೋಟದಲ್ಲಿ ಆಸೆ ಮೂಡುತ್ತಿದೆ. ಇನ್ನು ಕುಚಗಳು ತಮ್ಮ ಎಲ್ಲೆ ಮೀರಿ ಲಜ್ಜಿಸಲೆಳಸಿವೆ! ಇದೇನು, ಯೌವನೋದಯವೊ, ಇಲ್ಲವೆ ಬಾಲ್ಯ ವಿಮೋಚನವೊ! ಎಂದು ಶಂಕಿಸಿದರು. ೬. ಎಲೌ ಮೇನೆ, ಅಂಬಿಕೆಯ ಇರವನ್ನು ನೋಡು. ಅವಳ ಮುಂಗುರುಳು ತೆರಪುಗೊಡತೊಡಗಿವೆ. ತಿಲಕವಿಡುವಾಗ ಅವಳ ಮುಖ ಬಿಂಬವು ಕನ್ನಡಿಯಲ್ಲಿಯೂ ಹೊಳೆಯುತ್ತಿದೆ. ನಾಭಿಮಂಡಲವೊ ಮೊಳೆವುಗಲಿದೆ ಎಂಬುದನ್ನಾದರೂ ಗಮನಿಸು. ೭. ಅವಳ ದಂತಪಂಕ್ತಿ ತಮ್ಮ ಮುಸುಕು ಕಳೆಯಲು ಹಾತೊರೆಯುತ್ತಿವೆ. ನಡು ಕೃಶವಾಗಹತ್ತಿದೆ, ನುಡಿ ಮೌನವಾಗುತ್ತಿದೆ, ಇನ್ನು ಕಾಂತಿಯು ಪಾರ್ವತಿಯ ಶರೀರವನ್ನೆಲ್ಲ ವ್ಯಾಪಿಸುತ್ತಿದೆ. ವ॥ ಎಂದು ಅನುಭವಶಾಲಿಗಳಾದ ತಂದೆತಾಯಿಯರು ಅವಳ ವಯಸ್ಸಂಧಿಯನ್ನು ಕುರಿತು ಮಾತನಾಡುತ್ತಿರುವಾಗ ಕ್ರಮಕ್ರಮವಾಗಿ ದಿನಗಳೆದಂತೆ ವನಕ್ಕೆ ಸಹಕಾರ(ಮಾವು)ವೂ, ಸಹಕಾರಕ್ಕೆ ವಸಂತಋತುವೂ, ವಸಂತನಿಗೆ ಕಾಮನೂ, ಕಾಮನಿಗೆ ಕಬ್ಬಿನಬಿಲ್ಲೂ, ಆ ಬಿಲ್ಲಿಗೆ ಹೂ ಬಾಣಗಳೂ ಸೇರುವಂತೆ ಪಾರ್ವತಿಗೆ ನವಯೌವನವು ತುಂಬಿಬಂತು.

ಕಂ॥ ನವಕುಚಕಳಶಂಗಳಿನೊ
ಪ್ಪುವ ಮುಖದರ್ಪಣದಿನಳಕತೋರಣದಿಂ ಪೊ ।
ಣ್ಮುವ ಮುಡಿ ಗುಡಿಯಿಂದಂ ಮಿ
ಕ್ಕವಯವದಿಂದಗಜೆ ಯೌವನಮನಿದಿರ್ಗೊಂಡಳ್ ॥ ೮

ಎಂಬಂತೆ ತೀವಿ ಪರ್ವಿದ
ಚುಂಬಿತಮುದಿತೋದಿತ ಪ್ರಕಾಶಿತ ಗಿರಿಶಾ ।
ಲಂಬಿತ ಗಿರಿಜಾಯೌವನ
ಮಂ ಬಣ್ಣಿಪ್ಪೊಡುರಗ ಖಚರ ಭೂಚರರಳವೇ ॥ ೯

ಶರ್ವಾಣಿಯ ಸೌಂದರ್ಯಮ
ನೊರ್ವಂ ಬಣ್ಣಿಸುವೆನೆಂಬವಂ ಗಾಂಪಂ ಪ ।
ನ್ನಿರ್ವರ್ ಭಾರತಿಯರ್ ಸಾ
ಸಿರ್ವರ್ ಫಣಿರಾಜರಾದೊಡಂ ತೀರ್ದಪುದೇ ॥ ೧೦

ಮ॥ ಮದಮಂ ವಿಭ್ರಮಮಂ ವಿಲಾಸದೊದವಂ ಸೌಂದರ್ಯಮಂ ಸೌಖ್ಯಮಂ
ಸದಲಂಕಾರತೆಯಂ ಸಲಕ್ಷಣಮನಾಂತಿರ್ದಂಬಿಕಾ ಯೌವನ ।
ಪದೆಪಿಂ ಪೇಳ್ವೊಡದತ್ಯನೂನಪದಮತ್ಯಾಶ್ಚರ್ಯಮತ್ಯುಜ್ವಲ
ಪ್ರದಮತ್ಯೂರ್ಜಿತಮತ್ಯಸಾಧ್ಯಗುಣಮತ್ಯಾನಂದಮತ್ಯುನ್ನತಂ ॥ ೧೧

ಕಂ॥ ಅತಿಮಧುರಮತಿಮನೋಹರ
ಮತಿಮಂಗಳಮತಿವಿಚಿತ್ರಮತಿಬಂಧುರಮಂ ।
ತತಿಸಂಭ್ರಮಮತಿವಿಭ್ರಮ
ಮತಿಯೌವನಮತಿವಿಲಾಸಮತಿ ಪಾರ್ವತಿಯಾ ॥ ೧೨

೮. ಆಗ ಗಿರಿಜೆಯು ನವ ಕುಚಕಳಶಗಳು, ಅವಕ್ಕೆ ಒಪ್ಪುವ ಮುಖದರ್ಪಣ, ಮುಂಗುರುಳ ತೋರಣ, ಪೊಣ್ಮುವ ಮುಡಿಗುಡಿಗಳು ಹಾಗೂ ಅದಕ್ಕೆ ಅನುಗುಣವಾದ ಉಳಿದ ಅವಯವಗಳಿಂದ ನವಯೌವನವನ್ನು ಪಡೆದಳು. ೯. ಹೀಗೆ ಸಾಕ್ಷಾತ್ ಪರಶಿವನನ್ನೇ ಅವಲಂಬಿಸಿದ ಗಿರಿಜೆಯ ಯೌವನವು ಅವಳ ಅಂಗಾಂಗಗಳನ್ನು ವ್ಯಾಪಿಸಿ ಚುಂಬಿತ-ಮುದ್ರಿತ ಪ್ರಕಾಶಿತ ಸ್ಥಿತಿಯಲ್ಲಿ ಬೆಳಗುತ್ತಿದೆ ಎಂದ ಮೇಲೆ ಅದನ್ನು ವರ್ಣಿಸುವುದಕ್ಕೆ ಯಾರಿಗೆ ತಾನೆ ಸಾಧ್ಯ! ೧೦. ಶರ್ವಾಣಿಯ ಸೌಂದರ್ಯವನ್ನು ಯಾವನಾದರೊಬ್ಬನು ವರ್ಣಿಸುತ್ತೇನೆ ಎಂದು ಹೇಳಿದರೆ ಅವನೊಬ್ಬ ದಡ್ಡನೇ ಸರಿ! ಏಕೆಂದರೆ ಅವಳ ಸೌಂದರ್ಯವನ್ನು ವರ್ಣಿಸಬೇಕಾದರೆ ಹನ್ನೆರಡುಜನ ಶಾರದೆಯರಾಗಲಿ, ಸಾವಿರ ಜನ ಆದಿಶೇಷರಾದರೂ ಸಾಧ್ಯವಿಲ್ಲ. ೧೧. ಮದ, ವಿಭ್ರಮ, ವಿಲಾಸ, ಸೌಂದರ್ಯ, ಸೌಖ್ಯ, ಸದಲಂಕಾರ, ಸಲಕ್ಷಣತೆಗಳನ್ನು ಪಡೆದಿದ್ದ ಆ ಅಂಬಿಕೆಯ ಯೌವನವನ್ನು ಹೇಳಬೇಕಾದರೆ ಸಾಮಾನ್ಯವಲ್ಲ! ಅದು ಅನೂನಪದ, ಅತ್ಯಾಶ್ಚರ್ಯಕರವೂ ಅತ್ಯುಜ್ವಲಪ್ರದವೂ ಅಸಾಧ್ಯವೂ, ಆನಂದಪ್ರದವೂ ಆಗುತ್ತದೆ! ೧೨. ನವಯೌವನವತಿಯಾದ ಆ ಪಾರ್ವತಿಯಲ್ಲಿನ ಮಾಧುರ್ಯ, ಮನೋಹರತೆ-ಮಂಗಳವೈಚಿತ್ರ್ಯ, ಬಂಧುರತೆ, ಸಂಭ್ರಮ, ವಿಭ್ರಮಗಳಲ್ಲಿ ಅವಳು ಮಿತಿಮೀರಿ

ವ॥ ಮತ್ತಮಾ ಪಾರ್ವತಿಯ ನವಯೌವನಂ ವಸಂತನಂತೆ ರಾಗೋದಯಂ ಮಕರ ಧ್ವಜನ ಮತ್ತಗಜದಂತೆ ಮಂದಯಾನಂ ಕಂದರ್ಪನ ಶಿಳೀಮುಖಕಳಾಪದಂತೆ ಜಗನ್ಮೋಹನಂ ಝಷಕೇತನ ನಿಕೇತನ ತೋರಣ ರತ್ನಸ್ತಂಭಗಳಂತೆ ಕಾಂತಿಮಯಂ ಶಶಿಕಾಂತ ಕೃತಕಾಚಲದಂತೆ ನಿರ್ಮಳೀಕೃತಂ ಕ್ಷೀರಾಬ್ಧಿಯ ತರಂಗದಂತುತ್ತರೋತ್ತರಂ ಕಮಲಾಕರದಂತೆ ಪ್ರಸನ್ನ ಗಂಭೀರಂ ಬಿಸಜನಾಳದಂತೆ ಭುವನಾಲಂಕಾರಂ ವನಲತೆಯಂತೆ ಸುಕೋಮಲಂ ಸುವರ್ಣಕಳಶದಂತೆ ರಮಣೀಯಂ ಸುರದ್ರುಮಶಾಖೆಯಂತೆ ಸರ್ವವಾಂಛಿತ ಫಲಪ್ರದಂ ಕಂಬುವಿನಂತೆ ತ್ರಿರೇಖಾನ್ವಿತಂ ಪೂರ್ಣಚಂದ್ರನಂತೆ ಕಲಾಭರಿತಂ ವ್ಯೋಮದಂತೆ ಘನಚಿತ್ರಮೆನಿಸಿರ್ದುದಂತುಮಲ್ಲದೆಯುಂ,

ಕಂ॥ ತೀವಿದ ಜವ್ವನಮಂ ಪರಿ
ಭಾವಿಸೆ ಮಾಧುರ್ಯಚರಿತಮೆಡೆಗೊಂಡುದು ಸದ್ ।
ಭಾವಂ ಚಂದ್ರಾಭರಣನ
ಜೀವಂ ಬಣ್ಣಿಪ್ಪನಾವನೇ ದೇವಂ ॥ ೧೩

ವ॥ ಆದೆಂತೆಂದೊಡೆ,

ಕಂ॥ ಮನದಾಸೆ ವದನದೊಳ್ ಲೋ
ಚನದೊಳ್ ನುಡಿನಗೆ ಕಪೊಳೆದೊಳ್ ಕೋಪಂ ಪು ।
ರ್ಬಿನೊಳಱಿವು ಬುದ್ಧಿಯೊಳ್ ಭಾ
ವನೆ ಚಿತ್ತದೊಳಮರ್ದುವಂಬಿಕೆಗೆ ಯೌವನದೊಳ್ ॥ ೧೪

ವಿಲಾಸವತಿಯಾಗಿದ್ದಾಳೆ. ವ॥ ಆ ಪಾರ್ವತಿಯ ನವಯೌವನವು ವಸಂತನಂತೆ ರಾಗೋ(ಅನುರಾಗ-ಬಣ್ಣ)ದಯವುಳ್ಳದ್ದು, ಮನ್ಮಥನ ಮದಗಜದಂತೆ ಮಂದ ಗಮನ (ಮೆಲ್ನಡೆ)ವುಳ್ಳದ್ದು. ಕಾಮನ ಕುಸುಮಬಾಣಗಳಂತೆ ಜಗನ್ಮೋಹಕವಾದದ್ದು, ಮೀನಕೇತನನ ತೋರಣ ರತ್ನಸ್ತಂಭಗಳಂತೆ ಕಾಂತಿಮಯ, ಚಂದ್ರಕಾಂತಗಳ ಕೃತ್ರಿಮಪರ್ವತದಂತೆ ನಿರ್ಮಲವಾದದ್ದು, ಹಾಲು ಕಡಲಿನ ತೆರೆಗಳಂತೆ ಉತ್ತರೋತ್ತರ, ಕಮಲಮಡುವಿನಂತೆ ಪ್ರಸನ್ನಗಂಭೀರ, ಕಮಲದ ದಂಟಿನಂತೆ ಭುವನ (ನೀರು-ಜಗತ್ತು)ಕ್ಕೆ ಅಲಂಕಾರ, ವನಲತೆಯಂತೆ ಕೋಮಲ, ಸುವರ್ಣಕಳಶದಂತೆ ರಮಣೀಯ, ಕಲ್ಪವೃಕ್ಷಶಾಖೆಯಂತೆ ಇಷ್ಟಾರ್ಥವನ್ನು ಕೊಡುವಂತಹುದು, ಶಂಖದಂತೆ ಮೂರುರೇಖೆಗಳುಳ್ಳದ್ದು, ಪೂರ್ಣಚಂದ್ರನಂತೆ ಕಲಾಭರಿತ, ಗಗನದಂತೆ ಅತಿ ವಿಚಿತ್ರವಾಗಿತ್ತು. ೧೩. ಚಂದ್ರಾಭರಣನಾದ ಪರಶಿವನ ಜೀವವೆನಿಸಿರುವ ಗಿರಿಜೆಯ ಆ ಯೌವನ, ಮಾಧುರ್ಯ ಮತ್ತು ಸದ್ಭಾವಗಳನ್ನು ಯಾರಾದರೂ ವರ್ಣಿಸಿದಲ್ಲಿ ಅವನೇ ದೇವ ಎನ್ನಬೇಕಾಗುತ್ತದೆ. ೧೪. ಅಂಬಿಕೆಗೆ ಯೌವನೋದಯವಾದಾಗ ಅವಳ ಮುಖದಲ್ಲಿ ಮನದ ಆಸೆ, ಕಣ್ಣುಗಳಲ್ಲಿ ಮಾತು, ಕಪೋಲದಲ್ಲಿ ನಗೆ, ಹುಬ್ಬಿನಲ್ಲಿ ಕೋಪ, ಬುದ್ಧಿಯಲ್ಲಿ ಅರಿವು, ಚಿತ್ತದಲ್ಲಿ ಭಾವನೆಗಳು ಅಳವಟ್ಟುವು.

ಮ।।ಸ್ರ।। ನುಡಿಯೊಳ್ ಜಾಣ್ ನೋಟದೊಳ್ ವಕ್ರತೆ ಪೊಸನಡೆಯೊಳ್ ವಿಭ್ರಮಂ
ಸಾರ್ದುದೆಯ್ದಿ

ತ್ತಡಿಯಿಟ್ಟತ್ತಾಹ ಕರ್ಣಾಮೃತಮತಿರುಚಿರಂ ಕಣ್ಣ ಪುಣ್ಯಂ ದಿಟಕ್ಕಿ ।
ರ್ಮಡಿ ವಾಣೀದೇವಿಗಂ ನೂರ್ಮಡಿ ಕುಸುಮಶರಕ್ಕಂಚೆವಿಂಡಿಂಗೆ ಸಾಸಿ
ರ್ಮಡಿ ಸಾಹಿತ್ಯಂ ವಿಳಾಸಂ ಗಮಕಮಮರ್ದುದಾರ್ಯಾಂಗದೊಳ್ ಕಣ್ಗೆ ಚತ್ರಂ।।೧೫

ವ।। ಇಂತೊಪ್ಪುವ ನವಯೌವನದೊಳ್ ಸಕಲಲೀಲಾವಿಲಾಸೆಯಪ್ಪ ಪಾರ್ವತೀ ದೇವಿ ನಲವಿಂ ಜಲಕ್ರೀಡೆಗೆಂದು ಷೋಡಶಸಹಸ್ರವಿಳಾಸಿನಿಯರ್ವೆರಸು ಕೇಳೀವನಮಂ ಪುಗುತರ್ಪಾಗಳ್,

ಚಂ।। ವಿದಳಿತ ಪದ್ಮ ಸೌರಭಕೆ ಸಂದಣಿಗೊಳ್ವ ಮಧುವ್ರತ ಪ್ರತಾ
ನದಿನೆಸೆವುತ್ಪಳ ಪ್ರಕರದೊಳ್ ನೆಱಿಸಿಲ್ಕಿ ಜಿನುಂಗುತಿರ್ಪ ಷ ।
ಟ್ಪದ ಶಿಶುವ್ಯಂದದಿಂ ಕಮಲ ತಂಡುಲಮಂ ಕೊಳುತಿರ್ಪ ಹಂಸೆಯಿಂ
ಮದನ ಸುಖಾಬ್ಧಿಯೊಳ್ ನೆರೆವ ಚಕ್ರದಿನೊಪ್ಪುವುದೊಂದು ಪೂಗೊಳಂ ।। ೧೬

ಮ।। ಕೊಳನಂ ಕಂಡು ವಿಳಾಸಿನೀನಿಕರಮುದ್ಯಚ್ಚಂದನಂ ಕುಂಕುಮಂ
ವಿಳಸನ್ನೂತನ ಪುಷ್ಪರಾಜಿ ಮೃಗನಾಭಿವ್ರಾತಂ ತಂದು ನಿ ।
ರ್ಮಳಕಾಸಾರದೊಳೊಂದುಗೂಡಿ ಶಿವೆ ಬಾ ಸರ್ವಜ್ಞೆ ಬಾ ದೇವಿ ಬಾ
ಕಳನಾದಪ್ರಿಯೆ ಬಾರೆನುತ್ತ ಕರೆದರ್ ಶರ್ವಾಣಿಯಂ ಜಾಣೆಯರ್ ।। ೧೭

೧೫. ನುಡಿಯಲ್ಲಿ ಜಾಣ್ಮೆ, ನೋಟದಲ್ಲಿ ವಕ್ರತೆ, ಆ ಹೊಸ ನಡೆಯಲ್ಲಿ ವಿಳಾಸಗಳು ಒಪ್ಪಿದ್ದವು ಎಂಬುದು ಅತ್ಯಂತ ಸೋಜಿಗ! ಅತಿವಿಚಿತ್ರವೇನೆಂದರೆ, ಈ ವಿಷಯ ಕೇಳಲಿಕ್ಕೆ ಅಮೃತಪ್ರಾಯ, ನೋಡುವ ಕಣ್ಣುಗಳ ಪುಣ್ಯ, ಆ ಆರ್ಯೆಯ ಅಂಗಾಂಗ ಗಳಲ್ಲಿ ಮೂಡಿದ್ದ ಸೌಂದರ್ಯ ಶಾರದೆಗೆ ಇಮ್ಮಡಿ, ಕುಸುಮವರನಿಗೆ ನೂರ್ಮಡಿ, ಹಂಸಸಮೂಹಕ್ಕೆ ಸಾಸಿರ್ಮಡಿ. ಅಧಿಕವಾಗಿ ಅವಳಲ್ಲಿ ಸಾಹಿತ್ಯ, ವಿಳಾಸ, ಗಮಕಾದಿಗಳು ಒಪ್ಪಿದ್ದವು. ವ।। ಇಂಥ ನವಯೌವನದಲ್ಲಿ ಸಕಲಲೀಲಾವಿಲಾಸೆ ಅಗಜೆ, ಹದಿನಾರು ಸಾವಿರ ವಿಳಾಸಿನಿಯರೊಂದಿಗೆ ಜಲಕ್ರೀಡೆಗಾಗಿ ಕೇಳಿವನಕ್ಕೆ ಬರುತ್ತಿದ್ದಾಳೆ. ೧೬. ಅಲ್ಲಿ ಒಂದು ಹೂವಿನ ಕೊಳ. ಅದು ಅರಳಿದ ಕಮಲಗಳ ಸುವಾಸನೆಗೆ ಮುತ್ತಿ ಬರುತ್ತಿರುವ ದುಂಬಿಗಳಿಂದಲೂ, ನೈದಿಲೆಗಳಲ್ಲಿ ಸಿಕ್ಕಿ ಜಿನುಗು ತ್ತಿರುವ ಮರಿದುಂಬಿಗಳಿಂದಲೂ, ತಾವರೆಯ ಅಕ್ಕಿಯನ್ನು ಕೊಳುತ್ತಿರುವ ಹಂಸೆ ಗಳಿಂದಲೂ, ಮದನ ಸುಖದಲ್ಲಿ ನೆರೆವ ಚಕ್ರವಾಕಗಳಿಂದಲೂ ಒಪ್ಪುತ್ತಿದೆ. ೧೭. ಆ ಕೊಳವನ್ನು ಕಂಡು ವಿಳಾಸಿನಿಯರಲ್ಲಿ ಕೆಲವು ಜಾಣೆಯರು ಶ್ರೇಷ್ಠವಾದ ಚಂದನ, ಕುಂಕುಮ, ಹೊಸ ಹೂಗಳು ಮತ್ತು ಕಸ್ತೂರಿಗಳನ್ನು ತಂದು ಎಲ್ಲರೂ ಸೇರಿ 'ಶಿವೆ ಬಾ, ಸರ್ವಜ್ಞೆ ಬಾ, ದೇವಿ ಬಾ', ಮುಂತಾಗಿ ಶರ್ವಾಣಿಯನ್ನು ಅಕ್ಕರೆಯಿಂದ ಕರೆದರು.

ವ॥ ಅಂತು ಕರೆಯೆ,

ಕಂ॥ ವನಲಕ್ಷ್ಮಿ ಕೆಯ್ಗುಡುತ್ತಿರೆ
ಯನಸೂಯಾದೇವಿಯಾದಿಯಾದಂಗನೆಯರ್ ।
ಜನನಿ ಜಗಜ್ಜೀವನೆ ಮೆ
ಲ್ಲನೆ ಪಾಯವಧಾರು ದೇವಿಯೆನೆ ನಡೆತಂದಳ್ ॥ ೧೮

ನೇವುರದ ಮುದ್ರಿಕೆಯ ಹಾ
ರಾವಳಿಗಳ ಮಧುರನಾದಮಬ್ಜಾಕರಮಂ ।
ತೀವುತ್ತಿರೆ ಸಕಲಕ್ರೀ
ಡಾವಾರಿಧಿ ಎಳಸಿ ಬಳಸಿ ಕೊಳನಂ ಪೊಕ್ಕಳ್ ॥ ೧೯

ತೊಳಗುವ ವಿಮಳಾಕಾಶದೊ
ಳಿಳವೆಱಿ ಪುಗುವಂತೆ ಮುಂತೆ ನಿರ್ಮಳ ಶಶಿಮಂ ।
ಡಳದಧಿದೇವತೆ ಬೆಳ್ದಿಂ
ಗಳೊಳಗೆ ಪುಗುವಂತೆ ಪೊಕ್ಕಳಂಬಿಕೆ ಕೊಳನೊಳ್ ॥ ೨೦

ಗಿರಿಜೆ ಶಶಿವದನೆ ಕೊಳನಂ
ಭರದಿಂ ಪುಗೆ ನೆಯ್ದಲೆಯ್ದಿದುವು ವಿಕಸನಮಂ ।
ವಿರಹಮನಾಂತುವು ಕೋಕಂ
ಸರಸಿರುಹಂ ಮುಗಿದುವರರೆ ಪಗಲೊಳ್ ಚತ್ರಂ ॥ ೨೧

ವ॥ ಇಂತು ಜಲಕ್ರೀಡೆಗೆಂದು ಕೊಳನಂ ಪೊಕ್ಕಲ್ಲಿ ನನೆದೊಡಿಗೆಯ ನಾಯಕಿಯರುಂ, ತಿಲಕದ ಲಲನೆಯರುಂ, ಪೂದುಱುಂಬಿನ ಪುಣ್ಯವತಿಯರಂದುಗೆಯ ಭಂಗಿಯರುಂ, ನಗೆಗಣ್ಗಳ

೧೮. ಶರ್ವಾಣಿ ಬರುವಾಗ ವನಲಕ್ಷ್ಮಿ ಹಸ್ತಲಾಘವ ಕೊಡುತ್ತಿದ್ದಾಳೆ. ಅನಸೂಯಾ ದೇವಿ ಮುಂತಾದವರು 'ಜನನಿ, ಜಗಜ್ಜೀವೆ, ಮೆಲ್ಲನೆ ಮುಂದಡಿಯಿಡು! ಅವಧಾರು'! ಮುಂತಾದ ಗೌರವವಾಚಕ ಪದಗಳಿಂದ ಸಂಬೋಧಿಸುತ್ತಿರಲು ದೇವಿ ನಡೆತಂದಳು. ೧೯. ವಿಳಾಸಿನಿಯರ ನೂಪುರ, ಉಂಗುರ, ಹಾರಗಳು ಇವುಗಳ ಮಧುರ ನಾದ ಆ ಕೊಳದಲ್ಲಿ ವ್ಯಾಪಿಸಿರುವಾಗ ಸಕಲ ಕ್ರೀಡೆ(ಲೀಲೆ)ಗಳಿಗೂ ನಿಧಿಯೆನಿಸಿರುವ ಜಲಕ್ರೀಡೆಗೆ ಬಯಸಿ ಆ ದೇವಿ ಆ ಕೊಳವನ್ನು ಹೊಕ್ಕಳು. ೨೦. ಬೆಳಗುವ ವಿಮಳಾಕಾಶದಲ್ಲಿ ಎಳೆಶಶಿ ಪುಗುವಂತೆ, ನಿರ್ಮಲ ಶಶಿಮಂಡಳಕ್ಕೇ ಅಧಿದೇವತೆ ಬೆಳ್ದಿಂಗಳನ್ನು ಪೊಗುವಂತೆ, ಅಂಬಿಕೆ ಆ ಕೊಳವನ್ನು ಪ್ರವೇಶಿಸಿದಳು. ೨೧. ಶಶಿವದನೆ ಗಿರಿಜೆ ಕೊಳವನ್ನು ಪ್ರವೇಶಿಸಿದೊಡನೆಯೇ ಹಗಲಿನಲ್ಲಿಯೂ ಕೂಡ ನೈದಿಲೆಗಳು ಅರಳಿದವು, ಕೋಕಗಳು ವಿರಹವನ್ನು ತಳೆದವು, ತಾವರೆಗಳು ಮುಚ್ಚಿಕೊಂಡವು, ಇದು ಸೋಜಿಗ! ವ॥ ಜಲಕ್ರೀಡೆಗೆ ಆಗಮಿಸಿದ ಆ ವಿಳಾಸಿನಿಯರಲ್ಲಿ ನನೆ(ಮೊಗ್ಗು)ದೊಡಿಗೆಯ ನಾಯಕಿಯರು, ತಿಲಕದ

ನೀಱಿಯರು, ಗಿರಿಜೆಯ ಚರಣಕಮಲಕ್ಕೆ ಭರದಿಂದೆಱಗುತ್ತುಂ ನತಮುಖಿಯರ್ ಸನ್ನದ್ಧೆಯರಾಗಿ

ಕಂ॥ ಬಿಗೆ ಮಿಗೆ ಸತಿಯರ್ ಜಲಕೇ
ಳಿಗೆ ಚಿತ್ತಂಗೊಟ್ಟು ದೇವಿಯವಧಾರೆನುತುಂ ।
ಪುಗುತುಂ ಮಿಗುತುಂ ನಗುತುಂ
ಸೊಗಯಿಸಿದರ್ ಸೆಣಸಿದರ್ ಸಮಂತಿದಿರಾದರ್ ॥ ೨೨

ಅಳಿಗಳಳಕಂಗಳೊಡನು
ತ್ಪಳಮಕ್ಷಿಗಳೊಡನೆ ಕಮಳಮಾಸ್ಯದೊಡನೆ ನಿ ।
ರ್ಮಳ ಚಕ್ರಂ ಕುಚದೊಡನ
ಗ್ಗಳಿಸಿದುವಿದಿರಾದುವಮರ್ದುವುರ್ಬಿದುವಾಗಳ್ ॥ ೨೩

ಮೃದುಕರತಳದಿಂದಬಲೆಯ
ರುದಕಂಗಳನೆತ್ತಿ ಸುತ್ತಿ ಸೂಸುವ ಪದದೊಳ್ ।
ಮುದದಿಂ ಕುಡುವಂತಿರ್ದುದು
ಮೊದಲೊಳ್ ಮದನಂಗೆ ಮೆಱಿವ ರತ್ನಾಂಜಲಿಯಂ ॥ ೨೪

ಕಂ॥ ಓರೋರ್ವರೊಳೋರೊರ್ವರ್
ವಾರಿಗಳಂ ಚೆಲ್ಲುವಲ್ಲಿ ಜಲದೇವತೆಯರ್ ।
ಕಾರೊಳಗಾಡುವೊಲಿರ್ದುದು
ಹಾರಯ್ಸುತೆ ನಲಿಯುತಾಲಿವರಲೋಕುಳಿಯಂ ॥ ೨೫

ವ॥ ಮತ್ತಮಲ್ಲದೆ

ಲಲನೆಯರು, ಹೂವಿನ ತುರುಬಿನ ಪುಣ್ಯವತಿಯರು, ಅಂದುಗೆಯ ಭಂಗಿಯರು, ನಗೆಕಣ್ಣುಗಳ ನೀರೆಯರು ಇದ್ದರು. ಅವರೆಲ್ಲ ಗಿರಿಜೆಗೆ ವಂದಿಸಿ ಸಿದ್ಧರಾದರು. ೨೨. ಆ ಸತಿಯರೆಲ್ಲ ಜಲಕೇಳಿಯಲ್ಲಿ ಆಸಕ್ತರಾಗಿ ದೇವಿ, ಅವಧಾರು, ಎಂದು ಅಗಜೆಗೆ ಬಿನ್ನೈಸಿ ಕೊಳದಲ್ಲಿ ನಗುನಗುತ್ತಾ ಕ್ರೀಡೆಗಿಳಿದರು. ಇಳಿದು ನಗುತ್ತ ಗಿರಿಜೆಯೊಡನೆ ಆಟದಲ್ಲಿ ಶೋಭಿಸಿದರು. ೨೩. ಆಗ ಅವರ ಮುಂಗುರುಳುಗಳೊಡನೆ ದುಂಬಿಗಳೂ, ಕಣ್ಣುಗಳೊಡನೆ ನೈದಿಲೆಗಳೂ, ಮುಖಿಗಳೊಡನೆ ತಾವರೆಗಳೂ, ಕುಚಗಳೊಡನೆ ನಿರ್ಮಲ ಚಕ್ರವಾಕಗಳೂ ಅಗ್ಗಳಿಸಿದವು, ಇದಿರಾದುವು, ಅಮರ್ದುವು, ಉರ್ಬಿದವು. ಎಂದರೆ ಅವರ ಮುಂಗುರುಳು ಮುಂತಾದ ಆಯಾ ಅಂಗಾಂಗಗಳು ಆಯಾ ವಸ್ತುಗಳೊಡನೆ ಸ್ಪರ್ಧಿಸುತ್ತಿದ್ದವು ಎಂದರೆ ಹೋಲುತ್ತಿದ್ದವು ಎಂದು ಭಾವ. ೨೪. ಆ ಅಬಲೆಯರು ಕ್ರೀಡೆಯ ಪ್ರಾರಂಭದಲ್ಲಿ ತಮ್ಮ ಕೋಮಲವಾದ ಕೈಗಳಿಂದ ನೀರನ್ನು ಎತ್ತಿ ಚೆಲ್ಲುತ್ತಿದ್ದರು; ಅದು ಆಟದ ಮೊದಲಲ್ಲಿ ಮನ್ಮಥನಿಗೆ ಅವರು ರತ್ನಾಂಜಲಿ ಕೊಡುವಂತಿತ್ತು! ೨೫. ಆ ನೀರೆಯರು ಒಬ್ಬರಿಗೊಬ್ಬರು ನೀರು ಚೆಲ್ಲುತ್ತಿದ್ದರು. ಇದನ್ನು ನೋಡಿದರೆ ಜಲದೇವತೆಯರು ನಲಿಯುತ್ತ ಓಕುಳಿಯಿಂದ ಹಾರಯಿಸುತ್ತ ಮುಂಗಾರಿನಲ್ಲಿ ಆಡಿದಂತೆ ಇತ್ತು.

ಅಳಕಾಳಿಗಳಿಂ ನಯನೋ
ತ್ಪಳದಿಂ ಮುಖಕಮಲದಿಂದೆ ಕುಚಚಕ್ರದಿನು ।
ಜ್ವಳಕಾಂತಿಸಲಿಲದಿಂದಾ
ಕೊಳನೊಳ್ ಕೊಳನಾಡುವಂತಿರೊಪ್ಪಿದರಾಗಳ್ ॥ ೨೬

ವ॥ ಅಲ್ಲದೆ ತಮ್ಮೊಳಿಂವಚ್ಚಿಕೊಂಡು ಮತ್ಸರಂಗೆಯ್ದು

ಕಂ॥ ಕಮಳದಳಂಗಳೊಳಗೆ ಕುಂ
ಕುಮಜಳಮಂ ತೀವಿ ಚಕ್ರಕುಚೆಯರ್ ಚಲದಿಂ ।
ವಿಮಳೇಂದು ಮುಖಿಯರಂ ವಿ
ಭ್ರಮದಿಂ ನಡೆದಿಟ್ಟು ಕಱಿದರೆಳವಿಸಿಲೊಳ್ಪಂ ॥ ೨೭

ಇಡೆ ಶಶಿಮುಖಿಯರ್ ಕಂಡಾ
ಗಡೆ ಧವಳೋತ್ಪಳದ ನಡುವೆ ಚಂದನರಸಮಂ ।
ಬಡೆ ತೀವಿಕೊಂಡು ನಡೆನಡೆ
ದೊಡನೊಡನಿಟ್ಟಟ್ಟು ಜೊನ್ನಮಂ ಪಸರಿಸಿದರ್ ॥ ೨೮

ವ॥ ಇಂತಾಡುವಲ್ಲಿ

ಕಂ॥ ಅಂಬುವಿನೊಳಗೆ ನಿಜಪ್ರತಿ
ಬಿಂಬವನೀಕ್ಷಿಸುತೆ ತರುಣಿ ಪೋಗದಿರೆನುತುಂ ।
ಬೆಂಬತ್ತಿ ನಡೆದು ಕಾಣದೆ
ಡಂ ಬಲನಂ ನೋಡಿ ಮುಗ್ಧೆ ನಗಿಸಿದಳಾಗಳ್ ॥ ೨೯

೨೬. ಆ ನೀರೆಯರು ಕೊಳದಲ್ಲಿ ಆಟವಾಡುತ್ತಿದ್ದಾರೆ. ಒಂದು ಕೊಳದೊಡನೆ ಮತ್ತೊಂದು ಕೊಳ ಆಟವಾಡುವಂತೆ ಇತ್ತು. ಹೇಗೆಂದರೆ ಕೊಳದ ದುಂಬಿಗಳು ಇವರ ಮುಂಗುರುಳೂ, ಇವರ ಕಣ್ಣುಗಳು-ಕೊಳದ ನೈದಿಲೆಗಳು ಹಾಗೂ ಮುಖಕ್ಕೆ ಕಮಲ, ಕುಚಕ್ಕೆ ಚಕ್ರವಾಕ, ಕಾಂತಿಗೆ ಸಲಿಲ ಇವುಗಳಿಗೆ ಬಲವಾದ ಹೋಲಿಕೆ ಇದ್ದುದರಿಂದ "ಕೊಳನೊಳ್ ಕೊಳನಾಡುವಂತೆ" ಇತ್ತು! ವ॥ ತಮ್ಮ ತಮ್ಮಲ್ಲಿಯೇ ಗುಂಪುಕಟ್ಟಿ ಸ್ಪರ್ಧೆಹೂಡಿ, ೨೭. ಚಕ್ರಕುಚೆಯರಾದ ಆ ನೀರೆಯರು ಕಮಲದಳಗಳಲ್ಲಿ ಕುಂಕುಮ ಜಲವನ್ನು ತುಂಬಿ ಚಲದಿಂದ ನೀರೆರಚುತ್ತಿದ್ದರೆ ಅದು ಎಳೆಬಿಸಿಲನ್ನು ಕರೆವಂತೆ ಇತ್ತು. ೨೮. ಅವರಲ್ಲಿ ಕೆಲವರು ಬಿಳಿ ನೈದಿಲೆಯಲ್ಲಿ ಚಂದನರಸವನ್ನು ತುಂಬಿ ಎರಚುತ್ತಿದ್ದಾರೆ. ಅದು ಬೆಳದಿಂಗಳನ್ನು ಪಸರಿಸಿದಂತಿತ್ತು. ೨೯. ಹೀಗೆ ಆಡುತ್ತಿರುವಾಗ ಒಬ್ಬಳು ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಭ್ರಾಂತಿಯಿಂದ ಎಲೌ ತರುಣಿ, ಹೋಗದಿರು! ಎಂದು ಅವಳನ್ನು ಬೆಂಬತ್ತಿ ನಡೆದು ಕಾಣದೆ ತನ್ನ ಹುಚ್ಚಾಟದಿಂದ ಎಲ್ಲರನ್ನೂ ನಗಿಸಿದಳು. ೩೦. ನೀರಾಟವಾಡುವ ಕಾಲದಲ್ಲಿ ಸಡಲಿದ ಆ ಚಂದ್ರಮುಖಿಯರ ಕೇಶಪಾಶಗಳು ಚಂದ್ರಬಿಂಬಗಳನ್ನು ಚಲದಿಂದ ಬೆಂಬತ್ತಿದ ರಾಹುಮಂಡಲಗಳಂತೆ

ಮಡದಿಯರಾಡುವ ಪದದೊಳ್
ಸಡಿಲ್ದ ಘನಕುಂತಳಾಳಿ ಪೋಲ್ದುದು ಚಲದಿಂ ।
ದುಡುಪತಿ ಬಿಂಬಂಗಳ ಬೆಂ
ಬಿಡದೆಯ್ದುವ ರಾಹುಮಂಡಲಂಗಳ ತೆಱನಂ ॥ ೩೦

ಉರವಣಿಸಿ ಚೆಲ್ಲಿ ಸತಿಯರ್
ಕರಂಗಳಂ ವದನವೃಂದಮಂ ಮುಚ್ಚರೆ ತ ।
ಳ್ತರವಿಂದಂ ಶಶಿಬಿಂಬೋ
ತ್ಕರಮಂ ಮುತ್ತಿದುದೆನಿಪ್ಪ ತೆಱನಾಯ್ತಾಗಳ್ ॥ ೩೧

ನೋಡುವ ಪಾರ್ವತಿ ಮುದಮಂ
ಕೂಡುತ್ತಿರೆ ತುಂಬಿವಿಂಡು ಪಾಡುತ್ತಿರೆ ತು ।
ಳ್ಕಾಡಿದರಿಟ್ಟಾಡಿದರೀ
ಸಾಡಿದರಮರ್ದಾಡಿದರ್ ಸರೋಜಾನನೆಯರ್ ॥ ೩೨

ವ॥ ಇಂತಾಡುವ ಸತಿಯರ್ಗೆ ಸಂತಸದಿಂ ಮುಯ್ಯಾಂತು

ಕಂ॥ ಈ ತೆರದಿಂ ಜಲಕೇಳಿಯೊ
ಳೋತು ಮನಂಗೂಡಿ ನೋಡಿಯಾಡುತ್ತೆ ಜಗ ।
ನ್ಮಾತೆ ಗಿರಿಜಾತೆ ಸುಖಸಂ
ಭೂತೆ ನುತಖ್ಯಾತೆ ಸರಸಿಯಂ ಪೊಱಮಟ್ಟಳ್ ॥ ೩೩

ವ॥ ಅಂತು ಪೊಱಮಟ್ಟು ನವ್ಯದುಕೂಲಮನುಟ್ಟು ದಿವ್ಯಾಭರಣಂ ತೊಟ್ಟು ಸಂತಸಮಂ ಮುಂತಿಟ್ಟು ಸಕಳಕಳೆಗಳನೊಚ್ಚತಂಗೊಂಡು ನಿಶ್ಚಲಿತಚಿತ್ತೆಯುಚ್ಚಾಸನಮನೇಱಿ ವಿಲಾಸಿನಿಯರ್ ಕೆಲಬಲದೊಳ್ ನೆಲನುಗ್ಗಡಿಸೆ ಪುರಾಭಿಮುಖಿಯಾಗಿ ಬರುತ್ತಮಿರೆ,

ಕಂ॥ ಇತ್ತಲ್ ತಮ್ಮೊಳ್ ನುಡಿದರ್
ವೃತ್ತಸ್ತನೆ ಗಿರಿಜೆಗುತ್ತರೋತ್ತರ ರೂಪಂ ।
ಬೆತ್ತ ಘನಯೌವನ ಸಾ
ರುತ್ತಿರ್ದಪುದೀ ವರಾಂಗನೆಗೆ ವರನಾರೋ ॥ ೩೪

ಕಂಡವು. ೩೧. ಹೀಗೆ ರಸಾವೇಶದಿಂದ ಸತಿಯರು ನೀರೆರಚುತ್ತಿರುವಾಗ ಎದುರು ಇದ್ದ ನೀರೆಯರು ತಮ್ಮ ಕರಕಮಲಗಳಿಂದ ಶಶಿವದನಗಳನ್ನು ಮುಚ್ಚಿಕೊಂಡರು; ಅದು ಅರಳಿದ ಕಮಲಗಳು ಶಶಿಬಿಂಬಗಳನ್ನು ಮುತ್ತಿದಂತೆ ಇತ್ತು. ೩೨. ಈ ಸೋಜಿಗವನ್ನೆಲ್ಲ ನೋಡುತ್ತಿದ್ದ ಪಾರ್ವತಿ ಹರ್ಷಗೊಂಡಳು. ಆಗ ತುಂಬಿವಿಂಡು ಹಾಡುತ್ತಿತ್ತು. ಸರೋಜ ಮುಖಿಯರಾದ ಆ ನೀರೆಯರು ತುಳ್ಕಾಡಿದರು, ಇಟ್ಟಾಡಿದರು, ಈಸಾಡಿದರು. ೩೩. ಹೀಗೆ ಜಲಕೇಳಿಯಾಡಿ ನೋಡಿ ಸಂತಸಗೊಂಡ ಜಗನ್ಮಾತೆ ಗಿರಿಜೆ ಸರೋವರದಿಂದ ಹೊರಬಂದಳು. ವ॥ ಹೀಗೆ ಹೊರಬಂದು ಹೊಸ ಉಡುಪು ಧರಿಸಿ ದಿವ್ಯಾಭರಣಗಳನ್ನು ಧರಿಸಿ ಸಂತಸದಿಂದ ಸಕಲಕಲಾವಿಭೂಷಿತೆಯಾಗಿ ನಿಶ್ಚಲ ಚಿತ್ತೆಯಾದ ಗಿರಿಜೆ ಯಾನದ (ಮೇನೆಯ) ಉಚ್ಚಾಸನದಲ್ಲಿ ಮಂಡಿಸಿ ವಿಲಾಸಿನಿ ಯರೊಡನೆ ಪುರಾಭಿಮುಖಿಯಾಗಿ ಬರುತ್ತಿದ್ದಾಳೆ. ೩೪. ಹೀಗೆ ಬರುತ್ತಿರುವಾಗ ಅವಳನ್ನು ಕಂಡ ಜನ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. "ದಿನೇದಿನೇ ವೃತ್ತಸ್ತನೆ

ಈ ರೂಪಿಂಗೀ ಯೌವನ
ಕೀ ರಮಣೀಯಾಂಗವತಿಗೆ ಮಿಗೆ ಸೌಂದರ್ಯ ।
ಕ್ಕೀ ರಾಜಪ ಗಿರಿಜೆಯ ವಿ
ಸ್ತಾರಕ್ಕಂ ವರನನಿಂದುಧರನೇ ಬಲ್ಲಂ ॥ ೩೫

ವ॥ ಎಂದಿಂತು ನುಡಿಯುತ್ತೆ ಶರ್ವಾಣಿಯ ರೂಪಾತಿಶಯಕ್ಕೆ ಬೆಱಗಾಗಿ ಮೇನೆಯ ತಪಕ್ಕೆ ದಾಕ್ಷಾಯಿಣಿ ಕರುಣಿಸಿ ಬಂದಳೆಂಬುದನತ್ಯಾಶ್ಚರ್ಯದಿಂ ಮೆಱೆದು

ಕಂ॥ ತಿಳಿಯದೆ ಮೇನಾಸತಿಯುಮ
ಚಳಪತಿಯುಂ ಚಿಂತಿಸುತ್ತುಮಿರೆಯಿರೆ ತೋಱೆ ।
ತ್ತಳವಲ್ಲದೆ ನಳನಳಿಸುತೆ
ತಳ ತಳಿಸುತೆ ಪೊಳೆದು ಬಳೆವ ಬೆಳಗಾಗಸದೊಳ್ ॥ ೩೬

ಚಂ॥ ಅಮೃತಮಯೂಖಮಂಡಲದಿನೇಳ್ತರುತಿರ್ಪ ಶಶಾಂಕಮೂರ್ತಿಯೋ
ಅಮರನದೀ ಪ್ರವಾಹದೊಳಗಿಂದೊಗೆತರ್ಪ ವಿಶಾಲ ಪುಣ್ಯಮೋ ।
ಪ್ರಮುದಿತ ಶೈವಕೀರ್ತಿ ಬರುತಿರ್ದಪುದೋ ಎನೆ ಬಂದನಳ್ಕಿಲೆಂ
ವಿಮಳ ವಿಶಾರದಂ ಘನಶರದ್ಘನ ಸನ್ನಿಭನೊಲ್ದು ನಾರದಂ । ೩೭

ಕಂ॥ ಇಳಿವ ಜಡೆ ಬಳಿವ ವೀಣಾ
ಕಳಸ್ವನಂ ಭಸಿತಗಾತ್ರಮುಜ್ವಳ ತೇಜಂ ।
ವಿಳಸನ್ಮಂಜುಳ ಮುಖಮಂ
ಡಳ ಚಂದ್ರಿಕೆಯೊಪ್ಪೆ ನಾರದಂ ನಡೆತಂದಂ ॥ ೩೮

ಗಿರಿಜೆಗೆ ರೂಪ ಯೌವನ ಸಂಪತ್ತು ಬೆಳೆಯುತ್ತಿದೆ. ಈ ವರಾಂಗನೆಗೆ ತಕ್ಕ ವರನು ಯಾರು?" ಎಂಬ ಚಿಂತೆ ಅವರದು. ೩೫. ಅವರು ಈ ರೂಪು, ಈ ಯೌವನ, ಈ ರಮಣೀಯವಾದ ಅಂಗಸೌಷ್ಠವ, ಈ ಸೌಂದರ್ಯಲಾವಣ್ಯಗಳಿಂದ ತುಂಬಿದ ಗಿರಿಜಾದೇವಿಗೆ ತಕ್ಕ ವರನು ಎಲ್ಲಿರುವನು? ಅದನ್ನು ಪರಶಿವನೇ ಬಲ್ಲ! ಎಂದು ಆಡಿಕೊಂಡರು. ವ॥ ಹೀಗೆಂದು ಶರ್ವಾಣಿಯ ರೂಪಾತಿಶಯಕ್ಕೆ ಬೆರಗಾದ ಆ ತಾಯಿ ತಂದೆಯರು ಹಿಂದೆ ಮೇನೆಯ ತಪಸ್ಸಿಗೆ ಮೆಚ್ಚಿದ ದಾಕ್ಷಾಯಿಣಿ ತಮ್ಮ ಉದರದಲ್ಲಿ ಅವತರಿಸಿರುವ ವಿಷಯವನ್ನೇ ಮರೆತರು, ಇದು ಸೋಜಿಗ, ೩೬. ಹೀಗೆ ಮೇನೆ ಮತ್ತು ಗಿರಿರಾಜರು ಯೋಚಿಸುತ್ತಿರುವಾಗ ಆಕಾಶದಲ್ಲಿ ಒಂದು ಬೆಳಕು ಕಾಣಿಸಿತು. ಆ ಬೆಳಗಿನೊಳಗೆ, ೩೭. ನಿರ್ಮಲನೂ, ಶರತ್ಕಾಲದ ಮೇಘದಂತೆ ಶುಭ್ರನೂ ಆದ ನಾರದನು ಸಂತೋಷದಿಂದ ಬಂದನು. ಬಂದ ರೀತಿಯನ್ನು ಕವಿ ಉತ್ಪ್ರೇಕ್ಷಿಸಿದ್ದಾನೆ. ನಾರದನು ಬಂದದ್ದು ಅಮೃತಕಿರಣಗಳ ಮಂಡಲದಿಂದ ಎದ್ದು ಬರುತ್ತಿರುವ ಚಂದ್ರಬಿಂಬವೋ, ದೇವಗಂಗೆಯ ಪ್ರವಾಹದೊಳಗಿನಿಂದ ಹುಟ್ಟಿಬರುವ ವಿಶೇಷ ಪುಣ್ಯವೊ, ಹರ್ಷಿತವಾದ ಶೈವಕೀರ್ತಿಯೇ ಬರುತ್ತಿದೆಯೋ ಎಂಬಂತೆ ಇತ್ತು. ೩೮. ಇಳಿಬಿದ್ದ ಜಡೆಗಳು, ಭಸ್ಮ ಧರಿಸಿದ ಶರೀರ, ಉಜ್ವಲ ತೇಜಸ್ಸು, ಮಂಜುಳ ಮುಖಮಂಡಲ, ಚಂದ್ರಿಕೆ ಒಪ್ಪಿ ವೀಣಾಕಲಸ್ವನ ಕೇಳುತ್ತಿರಲು ನಾರದಮುನಿ

ಬರೆ ಗಿರಿಪತಿಯುಂ ಸತಿಯುಂ
ವರಮುನಿಗತಿ ವಿನತರಾಗಿ ಭದ್ರಾಸನದೊಳ್ ।
ಭರದಿಂ ಕುಳ್ಳಿರಿಸುತ್ತುಂ
ಚರಣಂದೊಳೆಯುತ್ತೆ ತೀರ್ಥಜಳಮಂ ತಳೆದರ್ ॥ ೩೯

ವ॥ ಅಂತು ತಳೆದು

ಕಂ॥ ಗುರುಮೂರ್ತಿ ಶೈವನಿಧಿ ಶಂ
ಕರಮೂರ್ತಿ ಕೃಪಾಪರೈಕವರ ಶಾಂತಿ ಸುಧಾ ।
ಕರಮೂರ್ತಿ ದೇವ ನಿಮ್ಮಯೆ
ಬರವಿಂದೆ ಕೃತಾರ್ಥರಾದೆವೆಂದಿಂತೆಂದರ್ ॥ ೪೦

ಮ॥ ಬರವೆಂತಾದುದು ನಾಕಲೋಕಸುಖಮಂ ಬಿಟ್ಟೀ ಧರಾಮಂಡಲ
ಕ್ಕಿರದಿಂದೆಮ್ಮಯೆ ಪುಣ್ಯವೆಮ್ಮ ಜನನಂ ಸಾಫಲ್ಯವೆಮ್ಮಿಂದೆ ವಿ ।
ಸ್ತರ ಸೌಖ್ಯಾಕರರಾರೆನುತ್ತೆ ನಲವಿಂ ಬಿನ್ನಯ್ಸುತಿರ್ಪನ್ನೆಗಂ
ಬರುತಿರ್ದಳ್ ಗಿರಿಜಾತೆ ಷೋಡಶ ಸಹಸ್ರ ಸ್ತ್ರೀಪರಿಷ್ಕಂದದೊಳ್ ॥ ೪೧

ಮ॥ಸ್ರ॥ ಇದು ವಿದ್ಯುನ್ಮಾಲೆಯೋ ಚಂದ್ರಮನ ಕಮನಪೀಯೂಷ ದೀಪ್ತಿಸ್ಫರೂಪೋ
ಮದನಾಸ್ತ್ರವ್ರಾತಮೋ ನೂತನವನಲತಿಕಾನೀಕಮೋ ನಾಕಲೋಕಾ ।
ಸ್ಪದ ನಾರೀಕ್ಷೀರವಾರಾಶಿಯೊ ಸುರುಚಿರ ಸೌಂದರ್ಯ ಸಂಘಾತಮೋ ನೋ
ಡಿದು ತಾನೆಂಬಂತೆ ತೀವಿರ್ದಬಲೆಯರೊಳಗಿರ್ದಂಬಿಕಾಕಾಂತೆ ಬಂದಳ್ ॥ ೪೨

ಚಂ॥ ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗ ಪಾತ್ರೆಯ
ತ್ಕುರುತರದಾನಿ ನಿರ್ಮಲ ಭವಾನಿ ನಿರಂತರಮಾನಿ ನವ್ಯಸೌಂ ।
ದರವರ ಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನರ್ತಿ ಬಂದಳೊ
ಪ್ಪಿರೆ ಗಿರಿಜಾತೆ ಲೋಕಚಯಮಾತೆ ಜಗಕ್ಕೆ ವಿನೂತೆಯಳ್ಕಜೆಂ ॥ ೪೩

ಆಗಮಿಸಿದನು. ೩೯. ಮುನಿಯ ಆಗಮನದಿಂದ ಗಿರಿರಾಜದಂಪತಿಗಳು ಆನಂದಿಸಿದರು. ಅವರು ನಾರದನನ್ನು ಭದ್ರಾಸನದಲ್ಲಿ ಕುಳ್ಳಿರಿಸಿ, ಆತನ ಪಾದಗಳನ್ನು ತೊಳೆದು ತೀರ್ಥವನ್ನು ಶಿರಸ್ಸಿನಲ್ಲಿ ಪ್ರೋಕ್ಷಿಸಿಕೊಂಡರು. ೪೦. "ಗುರುಮೂರ್ತಿ, ಶೈವನಿಧಿ, ಕೃಪಾಕರ, ವರಶಾಂತಿ ಸುಧಾಕರಮೂರ್ತಿ, ಸ್ವಾಮಿ ನೀವು ದಯೆಮಾಡಿದುದರಿಂದ ನಾವು ಕೃತಾರ್ಥರಾದೆವು ಎಂದು ರಾಜದಂಪತಿಗಳು ಬಿನ್ನೈಸಿದರು. ೪೧. "ತಾವು ನಾಕಲೋಕ ಸುಖವನ್ನು ಬಿಟ್ಟು ಈ ಭೂಲೋಕಕ್ಕೆ ಬಂದ ಕಾರಣವೇನು? ತಮ್ಮ ಆಗಮನದಿಂದ ನಮ್ಮ ಜನ್ಮ ಸಫಲವಾಯಿತು; ನಾವೇ ಪುಣ್ಯವಂತರು; ಈ ವಿಷಯದಲ್ಲಿ ನಮಗಿಂತ ಪುಣ್ಯವಂತರು ಇನ್ನಾರು ಇದ್ದಾರೆ?" ಎಂದು ವಿನಯದಿಂದ ನಿವೇದಿಸುತ್ತಿರುವಾಗ ಗಿರಿಜಾತೆ ಸ್ತ್ರೀಪರಿವಾರದೊಡನೆ ಬಂದಳು. ೪೨. ಬರುತ್ತಿರುವ ಅಬಲೆಯರ ಮಧ್ಯದಲ್ಲಿ ಬರುತ್ತಿದ್ದ ಅಂಬಿಕೆ ಮಿಂಚುಗಳ ಮಾಲೆಯೊ, ಚಂದ್ರನ ಅಮೃತದೀಪ್ತಿಯೊ, ಮನ್ಮಥನ ಅಸ್ತ್ರವೊ, ನೂತನ ವನಲತೆಗಳ ಸಮೂಹವೊ, ನಾಕಲೋಕಕ್ಕೆ ಅರ್ಹವಾದ ಸ್ತ್ರೀಯರ ಪಾಲ್ಗಡಲೊ, ಸೌಂದರ್ಯ ಸಂದಣಿಯೊ ಎಂಬಂತೆ ಕಂಡಳು. ೪೩. ಕಮಲನೇತ್ರೆ, ಪುಣ್ಯಗಾತ್ರೆ, ಸದಾಶಿವನ ಪ್ರೇಯಸಿ, ಇಷ್ಟಾರ್ಥವನ್ನು ಕೊಡುವ ದಾನಿ, ವಿನೂತನ ಸುಂದರಿ, ಪರಶಿವಸುಕೀರ್ತಿ ಪವಿತ್ರಳಾದ ಭವಪತ್ನಿ ಜಗನ್ಮಾತೆ

ವ|| ಇಂತು ಬಂದು ತಾರೆಗಳ ನಡುವಣ ತಾರಾಪತಿಯ ಕಳೆಯಂತೆ ಲತೆಗಳ ನಡುವಣ ಕಲ್ಪಲತೆಯಂತೆ ರತ್ನಂಗಳ ನಡುವಣ ಚಿಂತಾರತ್ನದಂತೆ ಧೇನುಗಳ ನಡುವಣ ಕಾಮಧೇನುವಿನಂತೆ ರುದ್ರಾಕ್ಷಗಳ ನಡುವಣೇಕಮುಖ ರುದ್ರಾಕ್ಷಿಯಂತೆ ಸಕಲಸ್ತ್ರೀಯರ ನಡುವೆ ಗಿರಿರಾಜತನೂಜೆ ವಿರಾಜಿಸುತಿರ್ದು

ಕಂ|| ಸುರುಚಿರ ಪೂರ್ವಾಚಳದೊಳ್
ಗುರುತರ ಪೂರ್ಣೇಂದುವುದಯಿಪಂತಿರೆ ರಾತ್ರೀ ।
ಶ್ವರವದನೆ ಗಿರಿಜೆ ಭರದಿಂ
ಗಿರಿರಾಜನ ತೊಡೆಯ ಮೇಲೆ ಬಜಯಂಗೆಯ್ದಳ್ ॥ ೪೪

ವ|| ಆ ಸಮಯದೊಳ್

ಸ್ರ|| ಕಂಡಷ್ಟಾಂಗಪ್ರಣಾಮಂಬೆರಸು ಹರಿಸದಿಂ ನಾರದಂ ಭೀತಿಯಂ ಕೆಯ್
ಕೊಂಡಿಷ್ಟಾರ್ಥಪ್ರದೈಕಪ್ರಭೆಗೆ ವಿಭವದಿಂದಂ ನವಾಶ್ಚರ್ಯ ಪೂರ್ವಂ ॥
ಹಿಂಡೇಳ್ವಾನಂದ ರೋಮಾಂಚದ ಪೊದಕೆಗಳಂ ತಾಳ್ದು ನಿಂದಿರ್ದು ತಾಯೇ
ಚಂಡಾಂಶುವ್ಯಾತ ತೇಜೋನಿಧಿ ಶರಣೆನುತಂ ಸ್ತೋತ್ರಮಂ ಮಾಡುತಿರ್ದಂ ॥ ೪೫

ಕಂ|| ಶ್ರೀನಿಧಿ ಶಾಂಕರಿ ಶೈವ
ಜ್ಞಾನಿ ಸದಾವರದೆ ಭುವನ ಭರಿತೆ ಭವಾನೀ ।
ಮಾನಿನಿ ಮಾತೆ ಮಹೇಶ
ಧ್ಯಾನಿ ಮಹಾದಾನಿ ನೀನೆ ಶರಣೆನುತಿರ್ದಂ ॥ ೪೬

ಇಂತಿಂತು ಬಣ್ಣಿಸುತ್ತುಂ
ಮುಂತಿರ್ದಗರಾಜಸುತೆಯನುಚ್ಚಾಸನದೊಳ್ ।
ಸಂತಂ ಬಿಜಯಂಗೆಯ್ಸು
ತ್ತುಂ ತಣಿಯದೆ ಮತ್ತೆ ನಾರದಂ ನುತಿಗೆಯ್ದುಂ ॥ ೪೭

ಬಂದಳು. ವ|| ನಾರಿಯರ ಮಧ್ಯದಲ್ಲಿದ್ದ ಅಗಜಾತೆ ತಾರೆಗಳ ಮಧ್ಯೆ ಇರುವ ಚಂದ್ರ ಕಳೆಯಂತೆ, ಲತೆಗಳ ನಡುವೆ ಇರುವ ಕಲ್ಪಲತೆಯಂತೆ, ರತ್ನಗಳ ಮಧ್ಯದ ಚಿಂತಾರತ್ನದಂತೆ, ಆಕಳುಗಳ ನಡುವೆ ಕಾಮಧೇನುವಿನಂತೆ, ರುದ್ರಾಕ್ಷಿಗಳ ನಡುವೆ ಏಕಮುಖಿ ರುದ್ರಾಕ್ಷದಂತೆ ವಿರಾಜಿಸುತ್ತಿದ್ದಳು. ೪೪. ಮುದ್ದುಕುವರಿ ಇಂದುಮುಖಿ ಅಗಜೆ ಬಂದು ಗಿರಿರಾಜನ ತೊಡೆಯ ಮೇಲೆ ಕುಳಿತಳು. ಅದು ಪೂರ್ವಾಚಲದ ಮೇಲೆ ಪೂರ್ಣಚಂದ್ರನು ಉದಯಿಸಿದಂತೆ ಇತ್ತು. ೪೫. ಅಂಬಿಕೆಯನ್ನು ಕಂಡ ಕೂಡಲೇ ನಾರದಮುನಿ ಎದ್ದು ಕೈಮುಗಿದು ಭಕ್ತಿಯಿಂದ ಸಾಷ್ಟಾಂಗಪ್ರಣಾಮ ಮಾಡಿದನು. ಆಗ ಅವನಿಗೆ ಉಂಟಾದ ಹರ್ಷದಿಂದ ಮೈ ರೋಮಾಂಚಿತವಾಯಿತು. ಭಯಭಕ್ತಿಯಿಂದ "ತಾಯೆ, ತೇಜೋನಿಧಿ, ಶರಣು" ಎಂದು ಮುಂತಾಗಿ ಸ್ತುತಿಸುತ್ತಿದ್ದನು. ೪೬. ಹೇ ದೇವಿ, ನೀನು ಮಂಗಳಕ್ಕೆ ಗಣಿ, ಶಂಕರ ಪ್ರಿಯೆ, ಶಿವಜ್ಞಾನಿ, ಸದಾ ವರವನ್ನು ನೀಡುವವಳು, ಜಗತ್ತನ್ನೆಲ್ಲ ತುಂಬಿರುವವಳು, ಮಹೇಶ ಧ್ಯಾನಶೀಲೆ, ಶರಣು" ಎಂದು ಸ್ತುತಿಸುತ್ತಿದ್ದನು ನಾರದ. ೪೭. ಹೀಗೆ ಬಗೆ ಬಗೆಯಾಗಿ ಸ್ತುತಿಸಿ ಅಗಸುತೆಯನ್ನು ಉಚ್ಚಾಸನದಲ್ಲಿ ಬಿಜಯಂಗೆಯ್ಸಿ ನಾರದ ಮತ್ತೆ ಸ್ತುತಿಸ

ಕಂ॥ ತಾಯೇ ತವರೇ ತ್ರಿಭುವನ
ದಾಯುವೆ ಜಗದುಸಿರೆ ಜಗದ ಕಣ್ಣೆ ಜಗನ್ನಿ ।
ರ್ಮಾಯಾನಿಧಿಯೇ ಸುಧಿಯೇ
ಕಾಯೆನ್ನಂ ಕರುಣದಿಂದೆ ಸಲಹೆನುತಿರ್ದಂ ॥ ೪೮

ವ॥ ಎಂದಿಂತಾರ್ತದಿಂ ಸ್ತೋತ್ರಂಗೆಯ್ಯೆ ಕೇಳ್ದು ಕೌತುಕಂದಾಳ್ದು ಗಿರಿರಾಜನುಂ ಮೇನೆಯುಮಿರ್ದೆಲೆಲೆ ಮುನೀಂದ್ರಾ ನಿಮ್ಮಡಿಗಳನೊಚ್ಚತಂಗೊಂಡುಚ್ಚಾಸನದೊಳಿರಿಸಿ ಪಾದೋದಕ ಮನಾದರದಿಂ ಕೊಂಡು ಅತಿಹರ್ಷದಿಂ ಕೃತಾರ್ಥರಾದೆವಲ್ಲದೆಮ್ಮ ಮಗಳ್ಗೆ ನಿಮ್ಮಡಿಗಳ್ ವಂದನಂಗೆಯ್ವು ದತ್ಯಾಶ್ಚರ್ಯವೆಂದಜ್ಞಾನದಿಂ ನುಡಿಯೆ ದಿವ್ಯಜ್ಞಾನಿ ನಾರದಂ ನಸುನಗುತ್ತುಮಿಂತೆಂದಂ

ಕಂ॥ ಸುರರಱಿಯರಿಂದ್ರನಱಿಯಂ
ಹರಿಕಮಲಜರಱಿಯರಖಿಳ ಮನುಗಳ್ ಮುನಿಗಳ್ ।
ಕರಮಱಿಯರೆಂದೊಡಗಜೆಯ
ಚರಣಾಬ್ಜಕ್ಕೆಱಗಲಿಳೆಯೊಳಾನೆನಿತಱಿವಂ ॥ ೪೯

ಮ॥ಸ್ರ॥ನೆವದಿಂದಂ ನಿಮ್ಮ ಪುಣ್ಯೋದರದೊಳೊಗೆದೊಡೀ ಬಾಲೆಯಂ ಪುತ್ರಿಯೆಂಬೊಂ
ದವಿಚಾರಂ ಬೇಡ ನೀವೇ ಜನನಿಜನಕರಲ್ಲಲ್ಲದಂತಿರ್ಕೆ ತಾಯೇ ।
ನವರತ್ನಕ್ಕಬ್ಧಿ ಚಿಂತಾಮಣಿಗೆ ಮೊರಡಿ ಮುತ್ತಿಂಗೆ ಸಿಂಪಿಂದುವಿಂಗಂ
ರವಿಗಂ ಪೂರ್ವಾಶೆ ಲಿಂಗಕ್ಕವನಿ ಸುಧೆಗೆ ದುಗ್ಧಾಬ್ಧಿ ಪದ್ಮಕ್ಕೆ ಪಂಕಂ ॥ ೫೦

ತೊಡಗಿದನು. ೪೮. ಪಾರ್ವತಿಯನ್ನು ಸಾರ್ಥಕವಾದ ಬಹುವಿಧ ವಿಶೇಷಣಗಳಿಂದ ಸ್ತುತಿಸಿದನು. ವ॥ ಹೀಗೆ ನಾರದನು ತಮ್ಮ ಮಗಳು ಅಗಜೆಗೆ ವಂದಿಸಿ ಸ್ತುತಿಸಿದುದನ್ನು ಕಂಡ ತಂದೆತಾಯಿಗಳಿಗೆ ಸೋಜಿಗವಾಯಿತು. ಅವರು "ಎಲೆ ಮುನೀಂದ್ರಾ ನೀವು ಹಿರಿಯರು, ತಪಸ್ವಿಗಳು, ಮೇಲಾಗಿ ದಿವ್ಯಜ್ಞಾನಿಗಳು; ನಿಮ್ಮನ್ನು ಮೇಲೆ ಕೂಡಿಸಿ, ಪಾದತೊಳೆದು ನಾವು ತೀರ್ಥ ತೆಗೆದುಕೊಳ್ಳುವುದು ಉಚಿತ, ಆದರೆ ನೀವೇ ನಮ್ಮ ಮಗಳಿಗೆ ಹೀಗೆ ವಂದನಾದಿಗಳನ್ನು ಮಾಡುತ್ತಿರುವುದು ಅತ್ಯಾಶ್ಚರ್ಯ!" ಎಂದು ಅವರು ಅಜ್ಞಾನದಿಂದ ಬೆಸಗೊಂಡರು. ೪೯. "ಅಯ್ಯ ಗಿರಿರಾಜ, ಈ ದೇವಿಯ ರಹಸ್ಯವನ್ನು ದೇವತೆಗಳಾಗಲಿ, ಇಂದ್ರಹರಿಬ್ರಹ್ಮಾದಿಗಳಾಗಲಿ, ಮನುಗಳಾಗಲಿ ಅರಿಯರು. ಅಂದ ಮೇಲೆ ಈಕೆಯ ಪಾದಕಮಲಗಳಿಗೆ ಎರಗಲು ನಾನು ಎಷ್ಟರವನು." ಎಂದು ನಾರದನು ದೇವಿಯ ಮುಂದೆ ವಿಜ್ಞಾಪಿಸಿದನು. ೫೦. "ಗಿರಿರಾಜ, ಯಾವುದೊ ಒಂದು ನೆಪದಿಂದ ಈಕೆ ನಿಮ್ಮ ಪುಣ್ಯೋದರದಲ್ಲಿ ಜನಿಸಿದಳು. ಆದರೆ ಈಕೆ ನಮ್ಮ ಮಗಳು ಎಂಬ ಭ್ರಾಂತಿ ನಿಮಗೆ ಬೇಡ, ನೀವು ಈಕೆಗೆ ಜನನೀ-ಜನಕರು ಎಂಬುದು ಕೇವಲ ಒಂದು ಸಂಕೇತ-ಹೇಗೆ ನವರತ್ನಗಳ ಉದಯಕ್ಕೆ ಸಮುದ್ರವೂ, ಚಿಂತಾಮಣಿಗೆ ಕಲ್ಲುಮೊರಡಿಯೂ, ಮುತ್ತಿಗೆ ಚಿಪ್ಪು, ರವಿ-ಶಶಿಗಳಿಗೆ ಪೂರ್ವದಿಕ್ಕೂ, ಲಿಂಗಕ್ಕೆ ನೆಲವೂ, ಅಮೃತಕ್ಕೆ ಪಾಲ್ಗಡಲೂ, ಕಮಲಕ್ಕೆ ಕೆಸರೂ ಕಾರಣವಾಗಿರುವುವೋ ಆ ಮಟ್ಟದಲ್ಲಿ ಮಾತ್ರವೇ ನೀವೂ ಈಕೆಯ ತಂದೆತಾಯಿಯರು"

ವ।। ಮತ್ತಮಲ್ಲದೆ

ಕಂ।। ಮೇನೆಯೆ ನಿನ್ನ ತಪಕ್ಕತಿ
ಮಾನಿ ಮಹಾದೇವಿ ಕರುಣದಿಂ ನಿನ್ನುದರ ।
ಸ್ಥಾನದೊಳಂ ಜನಿಯಿಸೆ ಸು
ಜ್ಞಾನಿಯನೆಲೆ ಪುತ್ರಿಯೆಂಬರೇ ಧಾರಿಣಿಯೊಳ್ ।। ೫೧

ಶಿವನ ಸುಧೆ ಶಿವನ ಜೀವಂ
ಶಿವನಾನಂದಂ ಸದಾಶಿವನ ಘನಪುಣ್ಯಂ ।
ಶಿವನ ಸುಖಂ ಶಿವನ ಮುಖಂ
ಶಿವನಾಯು ಗಿರೀಂದ್ರ ಗಿರಿಜೆಯಂ ಸುತೆಯೆಂಬಯ್ ।। ೫೨

ದಕ್ಷನ ಶಿವನಿಂದೆಗೆ ಕಮ
ಲಾಕ್ಷಿಮಹಾದೇವಿ ಸೆಡೆದು ನಿಜಯೋಗದೊಳಿಂ ।
ತಕ್ಷಯನಿಧಿ ಮೇನೆಗೆ ಕರು
ಣೇಕ್ಷಣೆಯಾಗುತ್ತೆ ಬಂದುದಂ ಭಾವಿಸಿರೇ ।। ೫೩

ಅದುಕಾರಣದಿಂ ಮುನ್ನಮೆ
ಮೊದಲಿಂ ಹರನರಸಿ ಗಿರಿಶನರ್ಧಾಂಗಿ ವರ ।
ಪ್ರದೆ ವರನೀಶ್ವರನೀಕೆಗೆ
ಮುದದಿಂ ಶಿವನಲ್ಲಿಗಿರದೆ ಕಳಿಪುವುದುಚಿತಂ ।। ೫೪

ಕಂ।। ಗಿರಿಸುತೆ ಬಳೆವನ್ನವರಂ
ಹರನಿರ್ದಪನೊಲ್ದು ಹೇಮಕೂಟಸ್ಥಳದೊಳ್ ।
ಪರಿಪೂರ್ಣಪರಂಜ್ಯೋತೀ
ಸ್ವರೂಪ ನಿಜಯೋಗ ಭೋಗರಾಗೋನ್ನತಿಯಂ ।। ೫೫

ಎಂದ. ೫೧. ಎಲೌ ಮೇನೆ, ನಿನ್ನ ತಪಸ್ಸಿಗೆ ಮೆಚ್ಚಿ ಸಾಕ್ಷಾತ್ ಜ್ಞಾನನಿಧಿಯಾದ ಮಹಾದೇವಿಯೇ ನಿನ್ನ ಉದರದಲ್ಲಿ ಜನಿಸಿದ್ದಾಳೆ. ಅವಳನ್ನು ಮಗಳು ಎಂದು ಭ್ರಮಿಸಬಹುದೆ? ೫೨-೫೩. ಶಿವನ ಜೀವ, ಶಿವನ ಆನಂದ, ಸದಾಶಿವನ ಪುಣ್ಯ, ಶಿವನ ಆಯುವಾಗಿರುವ ಈಕೆಯನ್ನು ನಿನ್ನ ಮಗಳು ಎಂದು ಹೇಳುವಿಯ? ಹಿಂದೆ ದಕ್ಷ ತಾನು ಕೈಕೊಂಡ ಯಾಗಕ್ಕೆ ಕರೆಯದೆ ಬಂದ ತನ್ನ ಸುತೆ ಭವಾನಿಯನ್ನು ಕಂಡು ಶಿವನಿಂದೆ ಮಾಡಿದ. ಪತಿನಿಂದೆಯನ್ನು ಕೇಳಲಾರದೆ ಶಿವೆ ನಿಜಯೋಗಾಗ್ನಿಗೆ ತನ್ನ ತನುವನ್ನು ಈಡಾಡಿದಳು. ಮತ್ತೆ ಈ ಮೇನೆ ಆ ದೇವಿಯನ್ನು ಕುರಿತು ತಪಸ್ಸು ಮಾಡಲು ಆಗ ಪ್ರತ್ಯಕ್ಷಳಾದ ದೇವಿ ನಿನ್ನ ಉದರದಲ್ಲಿ ಜನಿಸುವುದಾಗಿ ಅಭಯವನ್ನು ಇತ್ತುದನ್ನು ನೆನೆ. ೫೪. ಆ ಕಾರಣದಿಂದ ಪರಶಿವನ ಅರ್ಧಾಂಗಿ, ವರಪ್ರದೆ, ಈಕೆಗೆ ಪರಶಿವನೇ ವರ; ಆದ್ದರಿಂದ ಇವಳನ್ನು ಶಿವನಲ್ಲಿಗೇ ಕಳುಹಿಸುವುದು ಉಚಿತ ಎಂದನು. ೫೫. ಈಕೆ ಬೆಳೆದು ದೊಡ್ಡವಳಾಗುವವರೆಗೆ ಪರಿಪೂರ್ಣ, ಪರಂಜ್ಯೋತಿ, ಸ್ವರೂಪನಾದ ಹರನು ನಿಜಯೋಗ ಭೋಗರಾಗೋನ್ನತಿಯಲ್ಲಿ ಹೇಮಕೂಟದಲ್ಲಿರುತ್ತಾನೆ

ವ।। ಎಂದಿಂತತರ್ಕ್ಯ ಮುನಿಹಿತೋಪದೇಶಮಂ ಪೇಳ್ದು ಗಿರಿಜೆಯ ಪರಮ ಲಾವಣ್ಯಾವಯವಂಗಳಂ ಕಂಡು ನೋಡಲಣ್ಮದೆ ಪೊಡಮಡುತ್ತೆ ಮತ್ತಮಿಂತೆಂದಂ,

ಕಂ।। ಈ ಗಿರಿಜೆಯ ನವಯೌವನ
ಮೀ ಗಿರಿಜೆಯ ರೂಪವಿಭವಮೀ ಗಿರಿಜೆಯ ಸೌ
ಖ್ಯಾಗಮವೀ ಗಿರಿಜೆಯ ನಿಜ
ರಾಗಂ ಶಂಕರನ ಚಿತ್ತಮಂ ಚಗುರಿಸದೇ ।। ೫೬

ಚಂ।। ಹರನ ಮನೋಹರಂ ಗಿರಿಜೆಯೀ ನಡೆಯೀ ನುಡಿಯೀ ವಿಳಾಸವೀ
ತರಳಕಟಾಕ್ಷವೀ ಪರಿಮಳಾಕೃತಿಯೀ ದರಹಾಸವೀ ಸುಖಾ ।
ವರಣತೆಯೀ ಸಲಕ್ಷಣತೆಯೀ ಸೊಬಗೀ ಮಧುರಸ್ವಭಾವವೀ
ಸುರುಚಿರಕಾಂತಿಯೀ ಹರೆಯವೀ ಸುಕುಮಾರತೆಯೀ ಸುಧಾಮಯಂ ।। ೫೭

ಮ।। ಉರಮಿಂಬಲ್ಲ ಪಯೋಧರದ್ವಯದ ಕೊರ್ಬಿಂಗಾಸ್ಯಮಿಂಬಲ್ಲ ಭಾ
ಸುರನೇತ್ರದ್ವಿತಯ ಪ್ರಚಾರತೆಗೆ ಬೆನ್ನಿಂಬಿಲ್ಲ ಧಮ್ಮಿಲ್ಲ ಬಂ ।
ಧುರ ಸೀಮಾವಳಯಕ್ಕೆ ನೋಡ ನಡುವಿಂಬಿಲ್ಲೊಪ್ಪುವೀ ಬಾಸೆಗೆ
ಗಿರಿಜಾಯೌವನ ಸಂಪದಕ್ಕೆ ತನುವೆಂತಪ್ಪುದೋ ರುದ್ರನಾ ।। ೫೮

ಕಂ।। ಇಂತೊಪ್ಪುವ ಜವ್ವನೆಯಂ
ಶಾಂತೆಯನಖಿಳೈಕಮಾತೆಯಂ ಶಂಕರನೇ ।
ಕಾಂತದ ಸುಖಮಂ ಸ್ತ್ರೀಮಾ
ತ್ರಂ ತನುಜೆಯೆನಿಪ್ಪ ಬಗೆಯನುಳಿ ಗಿರಿರಾಜಾ ।। ೫೯

ವ।। ಹೀಗೆ ನಾರದನು ಅವರಿಗೆ ಹಿತೋಪದೇಶವನ್ನು ಮಾಡಿ, ಅವಳ ಅಂಗ ಸೌಷ್ಠವವನ್ನು ಕಂಡು ಮತ್ತೆ ನಮಿಸಿ ಹೀಗೆಂದನು: ೫೬. ಈ ಗಿರಿಜೆಯ ನವಯೌವನ, ಇವಳ ರೂಪವೈಭವ, ಈಕೆಯ ಸೌಂದರ್ಯಾತಿಶಯವು ಶಂಕರನ ಚಿತ್ತವನ್ನು ಚಿಗುರಿಸದೆ ಬಿಡುವುದೆ! ಎಂದುಕೊಂಡ. ೫೭. ಪರಶಿವನಿಗೆ ಅತಿಮನೋಹರವಾದ ಇವಳ ನಡೆ-ನುಡಿ, ವಿಲಾಸ, ಚಂಚಲ ಕಟಾಕ್ಷ, ಪವಿತ್ರವಾದ ಆಕಾರ, ನಸುನಗೆ, ಸಲಕ್ಷಣತೆಗಳು, ಈ ಸೊಬಗು, ಈ ಮಧುರ ಸ್ವಭಾವ, ಸುರುಚಿರಕಾಂತಿ ಮತ್ತು ಎಳೆಪ್ರಾಯ ಹಾಗೂ ಸುಧಾಮಯವಾದ ಸೌಕುಮಾರ್ಯಗಳು ಹರನಿಗೆ ಮನೋಹರವಲ್ಲವೆ? ೫೮. ಛೆ! ಇವಳ ಪಯೋಧರದ್ವಯದ ಉಬ್ಬಿಗೆ ಎದೆಯೇ ಸಾಲದು! ಪ್ರಕಾಶಿಸುವ ನೇತ್ರದ್ವಯದ ವಿಸ್ತಾರಕ್ಕೆ ಮುಖಕಮಲವೂ ಸಾಲದು! ಇವಳ ಕೇಶಪಾಶಗಳು ಹರಡಲು ಬೆನ್ನು ಏನೇನೂ ಸಾಲದು! ರೋಮರಾಜಿಯ ವ್ಯಾಪ್ತಿಗೆ ನಡು ಏನೇನೂ ಸಾಲದು! ಅಂದಮೇಲೆ ಈಕೆಯ ಯೌವನಸಂಪದಕ್ಕೆ ಆ ರುದ್ರನ ತನು ಹೇಗೆ ತಾನೆ ಸುಮ್ಮನೆ ಇದ್ದೀತು! ಎಂದುಕೊಂಡ ನಾರದ. ೫೯. ಎಲೈ ಗಿರಿರಾಜ, ಇಂಥ ಯೌವನವತಿ, ಲೋಕಮಾತೆ, ಪರಶಿವನ ಏಕಾಂತ ಸುಖ ವೆನಿಸಿರುವ ಈಕೆಯನ್ನು ಉಳಿದ ಸ್ತ್ರೀಯರಂತೆ ಮಗಳೆಂದು ಬಗೆಯುವುದೇ?

ನಿನಗಱಿಪಲ್ ಬಂದೆಂ ಶ
ರ್ವನ ವಧು ಶರ್ವಾಣಿಯೆಂದು ನಗಜೆಯ ನಗರಾ ।
ಜನೆ ಕೇಳ್ ಭರದಿಂ ಕೈಲಾ
ಸನಗಕ್ಕಾಂ ಪೋದಪೆನೆಂದು ನಾರದನೆಂದಂ ॥ ೬೦

ಎನೆ ಕೇಳ್ದು ಶೈಲರಾಜಂ
ವಿನಯಂಬೆರಸಗಜೆಗಂದು ಕೆಯ್ಮುಗಿಯುತ್ತುಂ ।
ಮನದೊಳ್ ಬೆಱಗಾಗುತ್ತುಂ
ಘನ ಶೈವಾಂಬುನಿಧಿಗೆ ನಾರದಂಗಿಂತೆಂದಂ ॥ ೬೧

ಶಾ॥ ನೀವೆಂದಂತೆ ಭವಾನಿಯಂ ಮಱೆದು ಪುತ್ರೀಭಾವಮಂ ತಾಳ್ದೆವಿ
ನ್ನೇವೇಳ್ದಂ ಮರುಳಾಗುತಿರ್ದೆಮಗೆ ನಿಮ್ಮೀ ಬೋಧೆಯಿಂ ಜ್ಞಾನ ಸ ।
ದ್ಭಾವಂ ಪುಟ್ಟಿದುದಿಂಪಿನಿಂ ಪರಸುತಂ ಪಂಪಾವಿರೂಪಾಕ್ಷನಿ
ರ್ಪಾವಾಸಕ್ಕಿರದುಯ್ದು ತೋಱೆದಪೆನೀ ಶರ್ವಾಣಿಯಂ ಜಾಣೆಯಂ ॥ ೬೨

ಕಂ॥ ನೀವಿಂದೆಮ್ಮರಮನೆಯೊಳ್
ದೇವಾರ್ಚನಂಗೆಯ್ದು ನಾಳೆ ಪೋಪುದೆನುತ್ತುಂ ।
ತೀವಿರ್ದ ಮೃದು ಮಧುರ ವಾ
ಕ್ಯಾವಳಿಯಿಂ ನಾಡೆ ಬೇಡಿಕೊಂಡಂ ಭೂಪಂ ॥ ೬೩

ವ॥ ಇಂತು ಬೇಡಿಕೊಳುತ್ತುಮಿರೆ,

ಚಂ॥ ನಗಪತಿಯೆಂದುದಂ ಸಲಿಸಿ ನಾರದನಾತನ ಕೂಡೆ ರುದ್ರನಂ
ಮೃಗಧರಚೂಡನಂ ಶಿವನನರ್ಚಿಸಿ ತತ್ಪರಮಪ್ರಸಾದದಿಂ ।
ಮಿಗೆ ತಣಿದಿರ್ವರುಂ ಕನಕಪೀಠದೊಳಿರ್ಪಿನಮಿತ್ತಲತ್ತಲಾ
ಖಗನ ತುರಂಗವೆಯ್ದಲಣಮಿರ್ದುವು ಪಶ್ಚಿಮ ಪರ್ವತಾಗ್ರಮಂ ॥ ೬೪

೬೦. ಈ ವಿಷಯವನ್ನು ನಿನಗೆ ತಿಳಿಸುವುದಕ್ಕಾಗಿಯೇ ನಾನು ಬಂದದ್ದು. ಈಕೆ ಶರ್ವನ ವಧು ಶರ್ವಾಣಿ! ಎಂದು ತಿಳಿದುಕೊ! ನಾನು ಈಗಲೇ ಕೈಲಾಸಪರ್ವತಕ್ಕೆ ತೆರಳುತ್ತಿದ್ದೇನೆ ಎಂದು ನಾರದ ಹೇಳಿದ. ೬೧. ಅದನ್ನು ಕೇಳಿ ಗಿರಿರಾಜನು ವಿನಯದಿಂದ ಅಗಜೆಗೆ ಕೈಮುಗಿದ. ಮನದಲ್ಲಿ ಸೋಜಿಗಗೊಂಡು ನಾರದನಿಗೆ ಹೀಗೆಂದ. ೬೨. "ನಿಜ, ನೀವು ಹೇಳಿದಂತೆ ನಾವು ಭವಾನಿ ಎಂಬುದನ್ನು ಮರೆತಿದ್ದೆವು. ಅವಳು ನಮ್ಮ ಮಗಳೆಂದೇ ಭ್ರಮಿಸಿದ್ದೆವು. ನಿಮ್ಮ ಬೋಧೆಯಿಂದ ನಮಗೆ ಜ್ಞಾನೋದಯವಾಯಿತು. ಈಗ ಜಾಣೆಯಾದ ಈಕೆಯನ್ನು ಪಂಪಾವಿರೂಪಾಕ್ಷನಿರುವ ಹೇಮಕೂಟಕ್ಕೆ ಕೊಂಡೊಯ್ಯುವೆನು." ೬೩. ನೀವು ಈ ನಮ್ಮ ಅರಮನೆಯಲ್ಲಿ ಶಿವಾರ್ಚನೆ ಮಾಡಿ ನಾಳೆ ದಯೆಮಾಡಿಸಬೇಕು ಎಂದು ರಾಜನು ನಾರದಮುನಿಗಳನ್ನು ಮೃದು ಮಧುರವಾದ ಮಾತುಗಳಿಂದ ಕೇಳಿಕೊಂಡನು. ೬೪. ಗಿರಿರಾಜನ ಅಪೇಕ್ಷೆಯಂತೆ ನಾರದನು ಆ ದಿನ ಅಲ್ಲಿಯೇ ಉಳಿದು ರಾಜನೊಂದಿಗೆ ಶಿವಾರ್ಚನೆಯೆಸಗಿ

ವ॥ ಆ ಸಮಯದೊಳ್

ಅದು ಪೂರ್ವಾಂಗನೆಯಿಡೆ ನೆಗೆ
ದೊದೆವುತೆ ಬೆಳ ಬೆಳಗುತೆಯ್ದಿ ಪಶ್ಚಿಮಶೈಲಾ ।
ಗ್ರದ ಮೇಲೆ ಬಿಳ್ದ ಮಾಣಿ
ಕ್ಯದ ಕಂತುಕದಂತಿರೆಸೆದುದರ್ಕನ ಬಿಂಬಂ ॥ ೬೫

ವ॥ ಆ ಸಮಯದೊಳ್

ಚಂ॥ ಅರೆಮುಗಿವಬ್ಜಮುಳ್ಕಲರ್ವಕೈರವಮಾಕುಲಿಪಾ ಮಧುವ್ರತಂ
ಕೊರಗುವ ಕೋಕಮುತ್ಸವಿಪ ಜಾರತೆಯರೊಂದೆರಡೇಳ್ವಮೀನ್ಗಳಂ ।
ಕುರಿಪ ತಮಂಧಮಳ್ಕಿಳಿಪೊಳೆ ಪಕ್ಕೆಗೆ ಸಾರ್ವ ವಿಹಂಗವೀಥಿ ಚೇ
ತರಿಸುವ ಮಾರುತಂ ನಸುಕಲಂಕುವ ಸಾಂದ್ರಮಯೂಖಲೇಖೆಗಳ್ ॥ ೬೬

ಕಂ॥ ಅತ್ತಿತ್ತಂ ಮಿಸುಕದೆ ಮೆ
ಯ್ವೆತ್ತಿದ ಮನ್ಮಥ ಸುಖೋತ್ತಮಾಂಗದೊಳಿರುತುಂ ।
ಮುತ್ತಿನ ಕಾಂತಿಗೆ ಭಯಮಂ
ಪೊತ್ತಿನ ವಕ್ತ್ರಮನೆ ನೋಡಿ ಸುಯ್ದುದು ಕೋಕಂ ॥ ೬೭

ಕಾಲ್ಗೆ ಗೆಯೆ ಬಿಳ್ದಿನಂ ಮಿಗೆ
ಸಾಲ್ದೆಗೆದುದು ವಿಹಗವೀಥಿ ಮುಗಿಯುತ್ತಬ್ಬಂ ।
ಜೋಲ್ದುವು ನೊಂದು ರಥಾಂಗಂ
ಕೀಲ್ದೆಗೆದವೊಲಗಲೆ ಸಾರ್ದು ಕೊರಗಿದುವಾಗಳ್ ॥ ೬೮

ಶಿವಪ್ರಸಾದವನ್ನು ಸ್ವೀಕರಿಸಿದನು. ತರುವಾಯ ಇಬ್ಬರೂ ಕನಕಪೀಠಗಳಲ್ಲಿ ಕುಳಿತಿರುವಾಗ ಸಂಜೆಯಾಯಿತು. ಸೂರ್ಯನ ಕುದುರೆಗಳು ಆಗಲೇ ಪಶ್ಚಿಮ ಗಿರಿಯನ್ನು ಏರಿದ್ದವು! ೬೫. ಸೂರ್ಯಬಿಂಬವು ಪಶ್ಚಿಮ ಶೈಲದ ಶಿಖರದ ಮೇಲೆ ಇದ್ದುದನ್ನು ನೋಡಿದರೆ ಅದು ಪೂರ್ವದಿಗಂಗನೆಯು ಎಸೆದ ಮಾಣಿಕ್ಯದ ಚೆಂಡು ಪುಟನೆಗೆದು ಬೆಳಬೆಳಗುತ್ತ ಬಂದು ಪಶ್ಚಿಮ ಶಿಖರದ ಮೇಲೆ ಬಿದ್ದಿದೆಯೊ ಎಂಬಂತೆ ಇತ್ತು. ೬೬. ಅರ್ಧಮುಚ್ಚಿದ ತಾವರೆ, ಅರಳುವುದರಲ್ಲಿರುವ ನೈದಿಲೆ, ವ್ಯಾಕುಲ ಗೊಂಡಿರುವ ದುಂಬಿಗಳು, ಕೊರಗುವ ಕೋಕಪಕ್ಷಿಗಳು, ಸಂತಸಗೊಂಡ ಜಾರೆಯರು, ಒಂದೆರಡು ಏಳುವ ಮೀನುಗಳು, ಅಂಕುರಿಸುತ್ತಿರುವ ಕತ್ತಲೆ, ಅಕ್ಕರೆಯಿಂದ ಪಕ್ಕಕ್ಕೆ ಸರಿಯುವ ಪಕ್ಷಿಪಂಕ್ತಿ, ಚೇತರಿಸಿಕೊಳ್ಳುತ್ತಿರುವ ಮಂದಮಾರುತ, ನಸುಕಪ್ಪಾಗುತ್ತಿರುವ ರವಿಕಿರಣಗಳು ಹಬ್ಬುತ್ತಿವೆ. ೬೭. ಅಲ್ಲೊಂದು ಕೋಕಪಕ್ಷಿ, ಹಗಲು ಕಳೆದುದರಿಂದ ಅದಕ್ಕೆ ಸಹಿಸಲಸದಳವಾದ ವಿರಹ ತಾಪ! ಅದು ಅತ್ತಿತ್ತ ಮಿಸುಕದೆ ಮದನ ಸುಖದಲ್ಲಿ ಮಗ್ನವಾಗಿ, ಮುತ್ತಿನ ಕಾಂತಿಯನ್ನು ನೋಡಿ ಸೂರ್ಯೋದಯವಾಯಿತೆಂದು ಭ್ರಮಿಸಿ, ನಿಟ್ಟುಸಿರುಬಿಟ್ಟಿತು. ೬೮. ಹಗಲು ಕಾಲ್ತೆಗೆಯಿತು, ಹಕ್ಕಿಗಳು ಸಾಲ್ದೆಗೆದು ತಮ್ಮ ಗೂಡು ಸೇರಿದವು. ತಾವರೆ ಮುಚ್ಚಿಕೊಂಡಿತು. ಚಕ್ರವಾಕ ಪಕ್ಷಿಗಳು ಕೀಲುತೆಗೆದಂತೆ ಪರಸ್ಪರ

ಬಗೆಗುಂದಿ ಚಕ್ರಮಿಥುನಂ
ಮಿಗೆ ನೊಂದೊಂದೊಂದನಗಲಲಾಱದೆ ನೋಟಂ ।
ದೆಗೆಯುತ್ತಳಲುತ್ತೊರಲು
ತ್ತಗಲ್ದುವು ಉಱೆ ಪಗಲನರಸಿ ತಿರುಗುವ ತೆಱದಿಂ ॥ ೬೯

ಮುಗಿವ ಸರಸಿರುಹಪಂಡಮ
ನಗಲ್ದ ಚಕ್ರಪ್ರತಾನಮಂ ಕೋಟರದೊಳ್ ।
ಪುಗುವ ವಿಹಗಂಗಳಂ ಮಿಗೆ
ನಗುವಂತಿರೆ ನೆಯ್ದಿಲೆಯ್ದುವು ವಿಕಸನಮಂ ॥ ೭೦

ವ॥ ಇಂತು ಮುಗಿವ ಕಮಲಂಗಳನಗಲ್ವ ಚಕ್ರಮಿಥನಂಗಳಂ ನೋಡಲಾಱದಿಳಿವಂತೆ ಜಳಜಸಖಂ ಪಶ್ಚಿಮಾಬ್ಧಿಯೊಳಿಳಿಯೆ ನಾನಾ ಶಿವಾಲಯಾಂತರಂಗ ಸಂಧ್ಯಾಸಮಯ ಸಮುದ್ಭೂತ ಮೃದುಮೃದಂಗಪಟಹಶಂಖಭೇರೀನಿನಾದಮಂ ವಾರನಾರೀಸಂಗೀತನೃತ್ಯಚಟುಳತರರವಭರಿತ ಪುರವಳಯ ವಿಳಸಿತ ಬಹುರತ್ನರಚಿತಸಹಸ್ರವೀಥೀಪ್ರತಿನಿಳಯಂಗಳೊಳ್ ಪತಂಗನ ಕಿರಣಂಗಳಂ ಕಳ್ತಲೆ ಸೆಱೆವಿಡಿದಂತೆ ಪೊತ್ತಿಸಿದ ದೀಪಿಕಾನಿಕಾಯಂ ನಾಡೆಮೞಿಯೆ, ಕಡುಗಳ್ತಲೆ ಕವಿತಾರ್ಪಾಗಳೊರ್ವ ಜಾರೆ ಮನೆಯರ್ಗಂಜಿ ಮಹೋತ್ಸಾಹದಿಂ ಪುದಿದ ತಮಮಂ ಪದಿರಿಂ ಪಾಡಿದಳದೆಂತೆಂದೊಡೆ

ಕಂ॥ ಅಳಿಯಂ ಕತ್ತುರಿಯಂ ಕೋ
ಕಿಳನಂ ಕಾಳಿಂದಿಯಂ ವಿನೀಳಾಂಬುದಮಂ ।
ಬಳನನುಜನನುಱೆ ಪಾಡಿದ
ಳಳವಟ್ಟತಿ ಜಾರೆ ಧೀರೆ ರಜನೀಮುಖದೊಳ್ ॥ ೭೧

ಅಗಲಿ ನೊಂದು ಜೋಲುಮುಖ ಹಾಕಿಕೊಂಡವು. ೬೯. ಚಕ್ರವಾಕ ಮಿಥುನಗಳು ಮನಸ್ಸು ಕುಂದಿ ಅವು ಒಂದನ್ನೊಂದು ಅಗಲಲಾರದೆ ನೋಟವನ್ನು ಹಿಂದೆಗೆಯುತ್ತ ಅಳಲುತ್ತ ಒರಲುತ್ತಾ ಹಗಲನ್ನು ಅರಸಿ ತಿರುಗಲೋ ಎಂಬಂತೆ ಅಗಲಿದವು. ೭೦. ಆ ಸಂಧ್ಯಾಸಮಯದಲ್ಲಿ ತಾವರೆಗಳು ಮುಚ್ಚಿದವು. ಚಕ್ರವಾಕಗಳು ಅಗಲುತ್ತಿದ್ದವು, ಹಕ್ಕಿಗಳು ಗೂಡು ಸೇರುತ್ತಿದ್ದವು. ನೆಯ್ದಿಲೆಗಳು ನಗುತ್ತಿವೆಯೊ ಎಂಬಂತೆ ಅರಳುತ್ತಿದ್ದವು. ವ॥ ಕಮಲಗಳು ಮುಚ್ಚಿಕೊಂಡದ್ದು, ಚಕ್ರವಾಕಗಳು ಅಗಲಿದ್ದು ಕಂಡು ಸಹಿಸ ಲಾರದೆಯೊ ಎಂಬಂತೆ ಕಮಲಮಿತ್ರನಾದ ರವಿ ಪಶ್ಚಿಮಸಮುದ್ರಕ್ಕೆ ಇಳಿದ; ಎಲ್ಲ ದೇವಾಲಯಗಳಲ್ಲಿ ಸಂಧ್ಯಾಪೂಜಾಸಮಯವಾದ್ದರಿಂದ ಮೃದು ಮೃದಂಗ ಪಟಹ ಶಂಖ ಭೇರಿಗಳು ಮೊಳಗಿದವು. ವಾರನಾರಿಯರ ಸಂಗೀತ ನೃತ್ಯಗಳು ಬಹುರತ್ನ ರಚಿತವಾದ ಬೀದಿ ಬೀದಿಗಳಲ್ಲಿನ ಪ್ರತಿಯೊಂದು ಮನೆಗಳಲ್ಲಿ ನೆರೆದವು. ಸೂರ್ಯನ ಕಿರಣಗಳನ್ನು ಕತ್ತಲೆ ಸೆರೆಹಿಡಿಯಿತೊ ಎಂಬಂತೆ ದೀಪಗಳು ಹೊತ್ತಿಸಲ್ಪಟ್ಟವು; ಕಗ್ಗತ್ತಲೆ ಕವಿಯುತ್ತಿರುವ ಸಮಯದಲ್ಲಿ ಒಬ್ಬಳು ಪಾಣ್ಬೆ (ಜಾರೆ) ಅವಳ ಮನೆಯವರಿಗೆ ಹೆದರಿ ಉತ್ಸಾಹಭರಿತಳಾಗಿ ಕವಿವ ಕತ್ತಲೆಯನ್ನು ಕುರಿತು ವ್ಯಂಗ್ಯಾರ್ಥ ತೋರುವಂತೆ ಹಾಡಿದಳು. ೭೧. ಆ ಸಂಜೆಯಲ್ಲಿ ಅವಳು ದುಂಬಿ, ಕಸ್ತೂರಿ, ಕೋಗಿಲೆ, ಯಮುನಾ ನದಿ, ಕಪ್ಪುಮೋಡ, ಶ್ರೀಕೃಷ್ಣರನ್ನು ಕುರಿತು ಹಾಡತೊಡಗಿದಳು.

ವ।। ಮತ್ತಮಲ್ಲದೆ

ಕಂ।। ಪರಸಿದರಿದಿರ್ಗೊಂಡರಲಂ
ಕರಿಸಿದರಾದರಿಸಿದರ್ ಕರಂ ನುತಿಗೆಯ್ದರ್ ।
ಬೆರಸಿದರೆಳಸಿದರಪ್ಪಿದ
ರೆರೆದರ್ ನಲಿನಲಿದು ಜಾರೆಯರ್ ಕಳ್ತಲೆಯಂ ।। ೭೨

ವ।। ಆಗಳಭಿಸಾರಿಕಾನಿಕಾಯದುತ್ಸವಂ ಪೆರ್ಚುವಂತೆ,

ಕಂ।। ನಸುಗಳ್ತಲೆಯರೆಗಳ್ತಲೆ
ಮುಸುಕುಂಗಳ್ತಲೆ ಪೊಗಳ್ದ ಪೆರ್ಗಳ್ತಲೆ ನಾ ।
ಲ್ದೆಸೆಗಳ್ತಲೆ ಪೊಸಗಳ್ತಲೆ
ರಸೆಗಳ್ತಲೆಯೆನಿಸಿ ಕೂಡೆ ತೀವಿತು ತಿಮಿರಂ ।। ೭೩

ದಿವಸುಧೆಯಬ್ಧಿಯನೊಲವಿಂ
ತವೆ ಜನರಿಚ್ಛೆಯನೆ ಪಡೆಯಲೆಂದುಱಿ ಕಡೆಯಲ್ ।
ಹವಣಿಸಿದ ವಿಷಮನನುಕರಿ
ಸುವ ತೆಱದಿಂದುದಯಮುಳಿದು ತಳೆದುದು ತಮಮಂ ।। ೭೪

ಅಱೆಯೆಂ ಪಿರಿದಂ ಪೊಗಳಲ್
ಪೆಱತೇಂ ಮುಚ್ಚಡೊಡೆ ಮುಚ್ಚದಂತಲ್ಲದೆ ಕಣ್ ।
ತೆಱೆದೊಡೆ ತೆಱೆದಂತಲ್ಲದೆ
ಮಱೆದಂತೆನೆಯಿಕ್ಕಲೀಯದಿಡಿದ ತಮಂಧಂ ।। ೭೫

ಸು।। ಉಗುರಿಂದಂಟಿ ಬೆಱಂಟಿಯಂಜನಮದಕ್ಕುಂ ಚೌಕಮಂ ಕೀಱುತುಂ
ತೆಗೆದೆಚ್ಚಾದಿಸೆ ಕೇಳ ನೀಳಪಟಮಕ್ಕುಂ ಬಟ್ಟಿತಂ ಮಾಡಿ ಸು
ತ್ತುಗಳೆತ್ತಲ್ಕಸಿತಾತಪತ್ರಮೆನಲಕ್ಕುಂ ತಾನಿದೆಂಬಂತಿರೀ
ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆರೆದಟ್ಟಯ್ನಿತ್ತನಿತ್ತಂ ತಮಂ ।। ೭೬

೭೨. ಕತ್ತಲೆ ಕವಿದುದು ಜಾರೆಯರಿಗೆಲ್ಲ ಸಂತೋಷವನ್ನು ಉಂಟುಮಾಡಿತು. ಅವರು ಕತ್ತಲೆಯನ್ನು ಹರಸಿದರು, ಇದಿರ್ಗೊಂಡರು, ಅಲಂಕರಿಸಿದರು, ಆದರಿಸಿದರು, ನುತಿಸಿದರು, ಬೆರಸಿದರು, ಎಳಸಿದರು, ಅಪ್ಪಿದರು, ನಲಿದರು. ವ।। ಆಗ ಸ್ವೈರಿಣಿಯರ ಗುಂಪಿನ ಸಂತೋಷ ಹೆಚ್ಚುವಂತೆ ೭೩. ಕ್ರಮಕ್ರಮವಾಗಿ ಗಾಢವಾಗಿ ಹಬ್ಬಿ ಕಗ್ಗತ್ತಲೆ ಎಲ್ಲೆಲ್ಲಿಯೂ ಕವಿಯಿತು. ೭೪. ಜನರ ಇಚ್ಛೆಗಳನ್ನು ಪಡೆಯಲೊ ಎಂಬಂತೆ ಹಗಲು (ದಿನವು) ಹಾಲಿನ ಕಡಲನ್ನು ಒಲವಿನಿಂದ ಕಡೆಯಿತು. ಆಗ ಹೊರಟ ವಿಷವನ್ನು ಅನುಕರಿಸುವಂತೆ ಉದಯದವರೆಗೆ ಕತ್ತಲನ್ನು ತಳೆಯಿತು. (ಕವಿಯಿತು) ೭೫. ಹೆಚ್ಚು ಹೊಗಳಲು ನನಗೆ ತಿಳಿಯದು; ಹೆಚ್ಚು ಹೇಳುವುದಿನ್ನೇನು! ಕಣ್ಣು ಮುಚ್ಚಿದರೆ ಮುಚ್ಚಿಯೇ ಇರಬೇಕು, ಕಣ್ಣು ತೆರೆದ ಪಕ್ಷದಲ್ಲಿ ತೆರೆದೇ ಇರಬೇಕೆ ಹೊರತು ರೆಪ್ಪೆಹೊಡೆಯಲು ತೆರಹಿಲ್ಲದಷ್ಟು ಕತ್ತಲು ಕವಿದಿತ್ತು. ೭೬. ಕತ್ತಲೆ ಎಷ್ಟು ದಟ್ಟವಾಗಿತ್ತು ಎಂಬುದು ಈ ಪದ್ಯದ ಆಶಯ-ಎಂದರೆ ಉಗುರ್ಗೊನೆಯಿಂದ ಕೆರೆದರೆ ಅದು

ಕಂ॥ ಇದು ಮಧುಕರಮಿದು ಮಲ್ಲಿಗೆ
ಯಿದು ಕೋಕಿಳಮಿದು ಮರಾಳಮಿದು ಮದಗಜಮಿಂ ।
ತಿದು ಕಂಠೀರವಮಿದು ಕರಿ
ದಿದು ಬಿಳಿದೆಂದಱಿಯಬಾರದುರ್ವಿದ ತಮದೊಳ್ ॥ ೭೭

ಮನದೊಳಗಂ ಪೊಱಗಂ ತೆ
ಕ್ಕನೆ ತೀವಿದ ಮರ್ಬಿನಲ್ಲಿ ಮನಸುಂ ನೆನಸುಂ ।
ಕನಸುಂ ತಾನುಂ ಕಳ್ತಲೆ
ಯೆನಿಸಿರ್ದುದು ತಮದ ಘನಮನದನೇನೆಂಬೆಂ ॥ ೭೮

ನೆಲಸಿ ನೆಲೆಗೊಂಡ ಪೆರ್ಗ
ಳ್ತಲೆಯೊಳ್ ತೊಳತೊಳಗಿ ಮಿನಿಮಿನಿಸುತ್ತುಂ ।
ಪಲವುಂ ದೀವಿಗೆಗಳ್ ಕ
ಳ್ತಲೆ ಪೂತಂತೊಪ್ಪುತಿರ್ದುವಾ ಮನೆ ಮನೆಯೊಳ್ ॥ ೭೯

ವ॥ ಅಂತೊಪ್ಪುತ್ತುಮಿರೆಯಿರೆ,

ಕಂ॥ ರಸೆಯಂ ನಭಃಸ್ಥಳಮನೆ
ಣ್ಣೆಸೆಯಂ ದಟ್ಟಯ್ಸುತಮರ್ದ ತಮದೊಳ್ ಜಾರ ।
ಪ್ರಸರಂ ಪೊಡಮಟ್ಟುದು ಶಂ
ಕಿಸದೊಲ್ದಲ್ಲಲ್ಲಿ ಕುಟಿಲಪಥ ಸಮತಳದೊಳ್ ॥ ೮೦

ಅಂಜನವಾಗುತ್ತಿತ್ತು. ಚೌಕಾಕಾರವಾದ ವಸ್ತ್ರವನ್ನು ಕತ್ತರಿಸಿ ಮುಚ್ಚಲು ಅದು ನೀಲವಸ್ತ್ರವಾಗುತ್ತಿತ್ತು. ವೃತ್ತಾಕಾರವಾಗಿ ಕುಯ್ದು ತೆಗೆದರೆ ಕಪ್ಪುಬಣ್ಣದ ಛತ್ರಿಯೆಂಬಂತಿತ್ತು. ಹೀಗೆ ಈ ಜಗತ್ತಿನಲ್ಲಿ ನೋಡುವವರ ಕಣ್ಣಿಗೆ ಬಹಳ ವಿಚಿತ್ರವಾಗಿ ದಟ್ಟವಾಗಿ ಕತ್ತಲೆ ಕವಿದಿತ್ತು. ೭೭. ಆ ಕಗ್ಗತ್ತಲೆಯಲ್ಲಿ ಕಪ್ಪು ಬಿಳುಪುಗಳಿಗೆ ವ್ಯತ್ಯಾಸವೇ ತಿಳಿಯುತ್ತಿರದಷ್ಟು ದಟ್ಟವಾಗಿ ಕವಿದಿತ್ತು. ಇದು ದುಂಬಿ-ಇದು ಮಲ್ಲಿಗೆ, ಇದು ಕೋಗಿಲೆ-ಇದು ಹಂಸೆ, ಇದು ಮದಗಜ-ಇದು ಸಿಂಹ, ಇದು ಕಪ್ಪು-ಇದು ಬಿಳುಪು ಎಂಬ ಭೇದವೇ ತಿಳಿಯುತ್ತಿರಲಿಲ್ಲ. ೭೮. ಮನೆಯೊಳಗೆ-ಮನದೊಳಗೆ ಹೇಗೋ ಹಾಗೆ ಹೊರಗೂ ಕತ್ತಲೆ ಕವಿದಿದೆ. ಆ ಮಬ್ಬಿನಲ್ಲಿ ಮನಸ್ಸು, ನೆನಸು, ಕನಸು, ತಾನು ಎಲ್ಲವೂ ಕತ್ತಲೆ ತುಂಬಿತ್ತು ಎಂದ ಮೇಲೆ ಆ ಕತ್ತಲೆಯ ಘನೀಭಾವವನ್ನು ಹೆಚ್ಚು ಹೇಳುವುದೇನು? ೭೯. ಕತ್ತಲೆ ಕವಿದ ಮನೆ ಮನೆಗಳಲ್ಲಿಯೂ ಹೊತ್ತಿಸಿದ ದೀಪಗಳೆಲ್ಲ ಕತ್ತಲೆ ಲೇಪಿಸಿದಂತೆ ಮಂದ ಪ್ರಕಾಶದಿಂದ ಬೆಳಗುತ್ತಿದ್ದವು. ೮೦. ನೆಲ-ಮುಗಿಲು-ಎಂಟು ದಿಕ್ಕುಗಳನ್ನೆಲ್ಲ ದಟ್ಟವಾಗಿ ಕವಿದಿರುವ ಕಗ್ಗತ್ತಲೆಯಲ್ಲಿ ಜಾರರು ತಮ್ಮ ತಮ್ಮ ಪ್ರಿಯ-ಪ್ರೇಯಸಿಯರನ್ನು ಅರಸಿಕೊಂಡು ಕಳ್ಳಹಾದಿ ಹಿಡಿದು

ಒದವಿದ ಕಳ್ತಲೆಯೊಳ್ ಸ
ಮ್ಮುದದಿಂ ಪೊಱಮಟ್ಟ ಜಾರಮಿಥುನಾಳಿಗೆ ಕಂ ।
ಡುದೆ ಬರವೆಳಸಿತೆ ಮನಮಿ
ರ್ದುದೆ ಮನೆ ಪಟ್ಟದುದೆ ಪಾಸು ಮುಟ್ಟಿತೆ ಮರ್ಮಂ ॥ ೮೧

ದಾರಿಯೊಳಿಡುಕುಱಿಸೊಳೋಣಿಯೊ
ಳಾರವೆಗಳ ತಳದೊಳಂಗಡಿಗಳೊಳ್ ಮನೆಯೊಳ್ ।
ಕೇರಿಯೊಳಾವಿಗೆಗಳೊಳಂ
ಬೇರೂಜಿತು ಜಾರರನುಭವಂ ಕಳ್ತಲೆಯೊಳ್ ॥ ೮೨

ವ॥ ಅದೆಂತೆಂದೊಡೆ

ಕಂ॥ ತಾಗದ ಚುಂಬನಮುಱಿ ಸೊ
ಪ್ಪಾಗದ ಕರಘಾತಮಗಲದಿರ್ಪನುಭವದೊಳ್ ।
ಸಾಗಿಸುವ ಸರಭಸಂ ಮಿಗೆ
ರಾಗಿಸುವ ಮನಂ ಮನೋಹರಂ ಜಾರೆಯರೊಳ್ ॥ ೮೩

ಆರೈವ ಮನಂ ಸುಖದೊಳ್
ಪೂರೈಪ ಶರೀರಮುಸಿರದುಸಿರ್ಪಡಕಂ ।
ಸ್ಮೇರಾಸ್ಯಂ ಮೊಳೆನುಡಿಗಳ
ಸೌರಂಭಂ ಸುರತ ಸಂಭ್ರಮಂ ಜಾರೆಯರಾ ॥ ೮೪

ಪುಳಕಿಪ ತನು ಪೊಣ್ಮುವ ಸುಯ್
ಬಳೆವ ರತಂ ಬೆಮರ್ವ ಗಂಡಮಿಳಿವಶ್ರು ಸುಖಂ ।
ದಳೆವ ಮನಂ ಕಂಪಿಪ ಕೆಯ್
ಕಳವಳಿಸುವ ಗಳಮನೊನಮಸತೀಕುಳದೊಳ್ ॥ ೮೫

ಹೊರಟರು. ೮೧. ಕವಿದ ಕತ್ತಲೆಯಲ್ಲಿ ಸಂತೋಷದಿಂದ ಹೊರಟ ಜಾರಮಿಥುನ (ಸ್ವೈರವಿಹಾರಿ)ಗಳಿಗೆ ಕಂಡದ್ದೆ ಬರವು, ಅಪೇಕ್ಷಿಸಿದ್ದೆ ಮನಸ್ಸು, ಇದ್ದ ಎಡೆಯೆ ಮನೆ, ಮಲಗಿದ ನೆಲೆಯೇ ಹಾಸಿಗೆ, ಮುಟ್ಟಿದ ಸ್ಥಳವೆ ಮರ್ಮವೆಂಬಂತಿತ್ತು. ೮೨. ದಾರಿಯಲ್ಲಿ, ಇಕ್ಕಟ್ಟಿನ ಓಣಿಗಳಲ್ಲಿ, ಆರಾಮ ತೋಟಗಳ ಸ್ಥಳಗಳಲ್ಲಿ, ಅಂಗಡಿ ಗಳಲ್ಲಿ, ಮನೆಯಲ್ಲಿ, ಕೇರಿ, ಆವಿಗೆ ಮೊದಲಾದ ಎಡೆಗಳಲ್ಲೆಲ್ಲ ಕತ್ತಲೆ ಕವಿದಿದ್ದುದರಿಂದ ಅಲ್ಲೆಲ್ಲ ಜಾರರ ಅನುಭವ ಬೇರೂರಿತು. ೮೩. ಜಾರೆಯರ ಈ ಬಗೆಯ ಅನುಭವದ ಆ ಕದರೇ ಬೇರೆ! ಅಲ್ಲಿ ಸೋಂಕಿಯೂ ಸೋಂಕದ ಚುಂಬನ! ಶಬ್ದವಾಗದೇ ಇರುವ ಕರತಾಡನ! ಅಗಲದೆ ಇರುವ ಆಲಿಂಗನಾದಿಗಳು! ಹೀಗೆ ರಭಸದಿಂದ ರಾಗಿಸುವ ಸಾಗಿಸುವ ಅನುಭವ ಅದೇನು ಮನೋಹರವೊ! ೮೪. ಜಾರೆಯರ ಸುರತ ಸಂಭ್ರಮ ಬಣ್ಣಿಸಲು ಸಾಧ್ಯವೆ! ಅಲ್ಲಿಯ ಆರೈವ ಮನಸ್ಸು, ಸುಖದಲ್ಲಿ ತನ್ಮಯವಾದ ಶರೀರ, ಉಸಿರದೆಯೇ ಉಸಿರ್ಪಡಕ, ಕಮನೀಯವಾದ ಮುಖ, ಮಿದುನುಡಿಗಳ ಸ್ವಾರಸ್ಯದ ಪರಿಯೇ ಬೇರೆ! ಅದು ಅನುಭವ ಮಾತ್ರಗಮ್ಯ ಎಂದು ಭಾವ. ೮೫. ಈ ಅಸತಿ (ಜಾರೆ)ಯರಲ್ಲಿ ರತಿಕಾಲದಲ್ಲಿ ಆಗುವ ನವಿರೆದ್ದ ತನು, ಹೊಮ್ಮುವ ನಿಟ್ಟುಸಿರು,

ಕಲ್ಲೆನ್ನದೆ ಮುಳ್ಳೆನ್ನದೆ
ಸಲ್ಲಲಿತಾಸ್ಥಾನಮೆನ್ನದಿರ್ದಿರ್ದೆಡೆಯೊಳ್ ।
ಪಲ್ಲವಿಸಿತು ಪೂತುದು ಫಲ
ವಲ್ಲರಿಯಂ ಪಡೆದುದರರೆ ಜಾರರ ಸುರತಂ ॥ ೮೬

ಒರ್ಬುಳಿಸಿದ ಸಮಸುಖದೊಳ
ಗುರ್ಬಿಸುತಂತೊಲಿದು ನಲಿದು ಪಲತೆಱದಿಂ ನಿಂ ।
ದುರ್ಬುತೆ ಕೊರ್ಬುತೆ ಪರ್ಬುತೆ
ಗರ್ಬಿಸಿತಭಿಸಾರಿಕಾನಿಕಾಯಂ ನಿಶಿಯೊಳ್ ॥ ೮೭

ವ॥ ಮತ್ತಮಲ್ಲದೆ

ಚಂ॥ ಇಳೆಯನಮರ್ಚಿ ಮುಚ್ಚಿ ಮುಸುಕರ್ದ ತಮಂಧಮನಳ್ಕಿಯಿಂದೆ ಕಂ
ಡಳಿಕುಳಮೆಂದು ಕಾಳಿಮತರಂಗಿಣಿಯೆಂದು ವಿನೀಳ ಮೇಘಮೆಂ ।
ದಳಕರದೊಳೊತ್ತುತುಂ ಸಲಿಲಕೇಳಿಯುಮಂ ನವಿಲಾಟದೇಳ್ಗೆಯಂ
ತಳೆದಭಿಸಾರಿಕಾನಿಕರಮೊಪ್ಪಿದುದಾತ್ತ ರತಾಂತಲೀಲೆಯೊಳ್ ॥ ೮೮

ಕ॥ ಅಂತೊಪ್ಪುತ್ತುಮಿರ್ಪ ಸಮಯದೊಳ್

ಕಂ॥ ಗಗನಂ ಪೂತುದೊ ತಮಮಂ
ಮಿಗೆ ನೋಡುವ ಭರದೊಳಂಬರಂ ತಾನಂತ ।
ಕ್ಷಿಗಳಂ ಪಡೆದುದೊ ಪೇಳೆನೆ
ಸೊಗಯಿಸಿದುವು ತೊಳಗಿ ಬೆಳಗಿ ತಾರಗೆ ನಭದೊಳ್ ॥ ೮೯

ಮುಂದುವರೆವ ರತ, ಬೆಮರುವ ಕಪೋಲ, ಇಳಿಯುತ್ತಿರುವ ಆನಂದಬಾಷ್ಪ, ಸುಖಿಸುವ ಮನಸ್ಸು, ನಡುಗುವ ಕೈ, ಕಳಕಳಿಸುವ ಕಂಠಸ್ವನಗಳು ಇವೆಲ್ಲ ಮಾತಿಗೆ ನಿಲುಕುವುವಲ್ಲ. ೮೬. ಇದು ಕಲ್ಲು, ಇದು ಮುಳ್ಳು, ಇದು ಆಸ್ಥಾನ ಎಂಬ ಭೇದವಿಲ್ಲದೆ ಅವರವರಿದ್ದೆಡೆಗಳಲ್ಲಿಯೇ ಆ ಜಾರರ ಸುರತ ಲತೆಯು ಚಿಗುರಿ ಹೂಬಿಟ್ಟು ಫಲಿಸಿತ್ತು. ೮೭. ತಮ್ಮ ತಮ್ಮ ಪ್ರಿಯರನ್ನು ಅರಸಿ ಹೊರಟ ಅಭಿಸಾರಿಕೆಯರು ಆ ರಾತ್ರಿಯಲ್ಲಿ ಅವರವರ ಪ್ರಿಯರೊಡಗೂಡಿ ಒಟ್ಟುಗೂಡಿದ ಸಮಸುಖದಲ್ಲಿ ಉಬ್ಬಿ, ಒಲಿದು ನಲಿದು ಪಲತೆರದಿಂದ ನಿಂದು ಉಬ್ಬುತ್ತ ಕೊಬ್ಬುತ್ತ ಹಬ್ಬುತ್ತ ನಲಿದರು. ೮೮. ಅಭಿಸಾರಿಕೆಯರು ತಮಗೆ ಲಭಿಸಿದ ರತಿಯ ಕಡೆಯಲ್ಲಿ ಇಳೆಯನ್ನು ಕವಿದ ಆಕಾಶ ಕಗ್ಗತ್ತಲೆಯನ್ನು ಅಳ್ತಿ (ಪ್ರೀತಿ)ಯಿಂದ ಕಂಡು ಇದು ದುಂಬಿ ಎಂದು, ಕಾಳಿಂದಿನದಿ, ನೀಲಮೇಘ ಎಂದು ತಮ್ಮ ಅಂಕಗಳಿಂದ ಒತ್ತುತ್ತ ಜಲಕ್ರೀಡೆ, ನವಿಲಾಟಗಳ ಲೀಲೆಯನ್ನು ತಳೆದರು. ೮೯. ಅಷ್ಟು ಹೊತ್ತಿಗೆ ನಭದಲ್ಲಿ ತಾರೆಗಳು ಮೂಡಿದವು. ಅದು ಗಗನವೇ ಹೂಬಿಟ್ಟಿತೋ, ಈ ಕಗ್ಗತ್ತಲನ್ನು ಚೆನ್ನಾಗಿ ನೋಡಬೇಕು ಎಂದು ಬಯಸಿದ ಅಂಬರವು ಅನೇಕ ಕಣ್ಣುಗಳನ್ನು ಪಡೆಯಿತೊ ಎಂಬಂತೆ ಇತ್ತು.

ದಿನಕರನೆಸೆವಾಕಾಶಾ
ವನಿಯೊಳ್ ದಶಶತಕರಾನುಕೂಲಂ ಮನದೊಂ ।
ದನುನಯದಿಂ ಬಿತ್ತಿದ ಬೆಳ
ಗಿನ ಬೀಜಾಂಕುರಮಿವೆನಿಸಿದುವು ತಾರಗೆಗಳ್ ॥ ೯೦

ಅಂಬುಜ ನಿಜಸಖನಸ್ತಮ
ಯಂಬರಮಂಬರದ ನಡುವೆ ಬಹುತರದಿಂ ನೆ ।
ಯ್ದಂಬರದೊಳ್ ಕೆಯ್ಗೊಳಿಸಿದ
ಚುಂಬಿತರತ್ನಂಗಳಂತೆ ತಾರಗೆ ಮೆಱೆಗುಂ ॥ ೯೧

ನೆಟ್ಟನೆ ಬಂದಪನೆನ್ನಯೆ
ನಿಟ್ಟಿಯ ನಿಧಿ ಚಂದ್ರನೆಂದು ರಾತ್ರೀವಧು ತಾ ।
ಕಟ್ಟಿದ ಬಹುರತ್ನದ ಮೇ
ಲ್ಕಟ್ಟೆನಿಸಿದುದಂಬರಂ ಸುತಾರಾಗಣದಿಂ ॥ ೯೨

ಅಂದಂಬರಗಂಗೆಯ ಮುಳಿ
ಸಿಂದಂ ಕಾಳಿಂದಿ ಕಲಕೆ ಕರ್ಪಾಗಲ್ಕ ।
ಲ್ಲೊಂದಿದ ಮುಕ್ತಾವಳಿಯೆಂ
ಬಂದದಿ ತಾರಗೆಗಳೆಸೆದುವಾ ನಭದೆಡೆಯೊಳ್ ॥ ೯೩

ವ॥ ಅಂತೆಸೆವ ನಕ್ಷತ್ರೋದಯ ಸಮನಂತರದೊಳ್

ಮ॥ ಇದು ಸಂಕ್ರಂದನ ದಿಗ್ವಧೂ ನಿಟಿಲ ಸಿಂಧೂರಾಂಶುವೊ ನೋಡು ನೋ
ಡಿದು ಪುಷ್ಪಾಯುಧ ಪದ್ಮರಾಗಮುಕುರ ಪ್ರದ್ಯೋತಮೋ ಪೇಳ್ವೊಡಿಂ ।
ತಿದು ವಿಸ್ತಾರಿತ ಕಾಮಹೋಮಹುತಭುಕ್ಕ್ರಜ್ವಾಲೆಯೋ ಎಂಬ ಸಂ
ಪದಮಂ ಬೀಱಿದುದಿಂದ್ರದಿಗ್ವಿವರದೊಳ್ ಚಂದ್ರದ್ಯುತಿಪ್ರಾಭವಂ ॥ ೯೪

೯೦. ಗಗನದಲ್ಲಿ ಮೂಡಿದ ಈ ತಾರೆಗಳನ್ನು ನೋಡಿದರೆ, ಸೂರ್ಯನು ಆಕಾಶವೆಂಬ ನೆಲದಲ್ಲಿ ತನ್ನ ಸಾವಿರ ಕಿರಣಗಳಿಗೆ ಅನುಗುಣವಾಗಿ ಮನಃಪೂರ್ವಕವಾಗಿ ಬಿತ್ತಿದ ಬೆಳಕಿನ ಬೀಜಗಳ ಮೊಳಕೆಗಳೋ ಎಂಬಂತೆ ಇತ್ತು. ೯೧. ನೀಲ ಗಗನತಲದಲ್ಲಿ ಮೂಡಿದ ಈ ನಕ್ಷತ್ರಗಳನ್ನು ನೋಡಿದರೆ ರವಿಯು ತಾನು ಮುಳುಗುವವರೆಗೆ ಆಕಾಶದ ಮಧ್ಯದಲ್ಲಿ ಬಹುತರವಾಗಿ ನೆಯ್ದ ನೀಲವಾದ ಅಂಬರ (ಬಟ್ಟೆ) ಮಧ್ಯದಲ್ಲಿ ಅಲ್ಲಲ್ಲಿ ಪೋಣಿಸಿದ ರತ್ನಗಳೊ ಎಂಬಂತೆ ಬೆಳಗುತ್ತಿವೆ. ೯೨. ಅನಂತ ನಕ್ಷತ್ರಗಳಿಂದ ರಂಜಿತವಾದ ಆಕಾಶವನ್ನು ನೋಡಿದರೆ ರಾತ್ರಿ ಎಂಬ ವಧುವು ತನ್ನ ನಿಷ್ಠೆಯ ನಿಧಿ ಚಂದ್ರಮನು ನೇರವಾಗಿ ಬರುವನೆಂಬ ಮಮತೆಯಿಂದ ಸಂತೋಷಾರ್ಥವಾಗಿ ಕಟ್ಟಿದ ಬಹುರತ್ನ ಖಚಿತವಾದ ಮೇಲ್ಕಟ್ಟೋ ಎಂಬಂತೆ ಇತ್ತು! ೯೩. ಹಿಂದೆ ಆಕಾಶಗಂಗೆಯು ಕೋಪಿಸಿಕೊಂಡಾಗ ಕಾಳಿಂದಿ (ಯಮುನೆ) ಕಲಕಿತು. ಆಗ ಅಲ್ಲಿ ಕಪ್ಪಾದ ಮುಕ್ತಾವಳಿಯೋ ಎಂಬಂತೆ ತಾರೆಗಳು ನೀಲಗಗನದಲ್ಲಿ ಎಸೆದುವು. ೯೪. ಹೀಗಿರುವಾಗ ಪೂರ್ವದಿಗಂತದಲ್ಲಿ ಚಂದ್ರನ ಬೆಳಕು ಮೂಡಿತು. ಅದನ್ನು ನೋಡಿದರೆ,

ವ॥ ಆಗಳ್

ಚಂ॥ ಕರಮೆಸೆದತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ
ತ್ಕರದ ವಿಪತ್ತು ತಾರೆಗಳ ತುತ್ತು ಸುಧಾಂಬುಧಿಯೊತ್ತು ಮತ್ತಮಂ ।
ಬರದ ಪುಳಿಂದಿ ತಾಳ್ದೆಸೆವ ಮೂಗಿನ ಮುತ್ತು ಮಗುಳ್ದು ನೋಡಲ
ಚ್ಚರಿಯೆನಿಸಿತ್ತು ಮೂಡದೆಸೆಯಿಂದೊಗೆತರ್ಪ ಹಿಮಾಂಶುಮಂಡಲಂ ॥ ೯೫

ಮ॥ಸ್ರ॥ ಮುದದಿಂ ತಂದಿರ್ಕೆ ಪೂರ್ವಾಂಗನೆ ಗಿರಿಶಿರದೊಳ್ ಪೀಠಮಂ ಸತ್ವಭಾಸಂ
ಪದಮಂ ಕೆಯ್ಗೊಟ್ಟು ಚೈತ್ರಂ ನಡೆತರೆ ವದನಂ ಪುಷ್ಪಬಾಣಂಗಳಂ ಹೂ ।
ಡಿದ ಬಿಲ್ಲಂ ಪೊತ್ತು ಪಿಂದಂ ಬರೆ ನವಕುಮುದಾಮೋದ ಮಾಧುರ್ಯದಿಂ ಪ
ಟ್ಟದ ಗಾನಂಬೊಣ್ಮಿಸುತ್ತುಂ ಶಶಿಯುದಯದೊಳೊಪ್ಪಿತ್ತು ರಾಜೋಪಚಾರಂ ॥ ೯೬

ವ॥ ಅಂತೊಪ್ಪುತ್ತುಮಿರೆ

ಮ॥ ಎದಳತ್ ಕೈರವರಾಜ ರಾಜಬಲದಿಂ ಸಂತೋಷಮಂ ಮುಟ್ಟೆ ಸಂ
ಮುದಮಂ ತಾವರೆಯೆತ್ತಿ ಕಟ್ಟೆ ತಮಮಂ ಶೀತಾಂಶುವೆಳ್ಚಟ್ಟೆ ಪೆ ।
ರ್ಚದಗುರ್ವಿಂ ವಿರಹಾಳಿಯಂ ಕುಸುಮಬಾಣಂ ಕಾಯ್ದು ಬೆನ್ನಟ್ಟೆ ಮೆ
ಟ್ಟಿದನಿಂದ್ರಾಚಲಚೂಡಮಂ ಕಿರಣವೀಥೀಸಾಂದ್ರಮಂ ಚಂದ್ರಮಂ ॥ ೯೭

ಇದೇನು ಪೂರ್ವದಿಕ್‌ವನಿತೆಯು ತನ್ನ ಹಣೆಯಲ್ಲಿ ಧರಿಸಿರುವ ಕುಂಕುಮದ ಅಂಶವೊ ಅಥವಾ ಕುಸುಮಾಯುಧನಾದ ಮನ್ಮಥನ ಪದ್ಮರಾಗಮಣಿ ಮುಕುರದ ಪ್ರಕಾಶವೊ, ಇಲ್ಲದಿದ್ದರೆ ಕಾಮವೆಂಬ ಹೋಮಾಗ್ನಿಯ ಜ್ವಾಲೆಯೊ ಎಂಬಂತೆ ಇತ್ತು. ೯೫. ಮೂಡಲು ದಿಕ್ಕಿನಿಂದ ಮೇಲೇಳುತ್ತಿರುವ ಚಂದ್ರಮಂಡಲವನ್ನು ನೋಡಿದರೆ ಅದು ಬೆಳದಿಂಗಳ ಬಿತ್ತು (ಬೀಜ) ಬೆಳದಿಂಗಳನ್ನೇ ಉಣ್ಣುವ ಚಕೋರಿಗಳ ಬಾಯಿತುತ್ತು, ತಾವರೆಗಳಿಗೆ ವಿಪತ್ತು, ಏಕೆಂದರೆ ರಾತ್ರಿಯು ಕಮಲಗಳಿಗೆ ಅನುಕೂಲವಲ್ಲ ಎಂದು ತಾತ್ಪರ್ಯ. ತಾರೆಗಳಿಗೆ ಆಶ್ರಯ, ಪಾಲ್ಗಡಲಿಗೆ ಒತ್ತು, ಅಂಬರವೆಂಬ ಬೇಡಿತಿಯು ಧರಿಸಿರುವ ಮೂಗುನತ್ತು ಎಂಬಂತೆ ಇತ್ತು. ೯೬. ಚಂದ್ರನ ಉದಯಕಾಲದಲ್ಲಿ ಅವನಿಗೆ ಎಲ್ಲ ರಾಜೋಪಚಾರವೂ ನಡೆದಿತ್ತು. ಚಂದ್ರನು ಉದಯಿಸಿದಾಗ ಪೂರ್ವಾಂಗನೆಯು ಗಿರಿಶಿಖರದಲ್ಲಿ ಅವನಿಗೆ ಪೀಠವನ್ನು ಕಲ್ಪಿಸಿದಳು. ಚೈತ್ರನು ಸತ್ವಭಾ ಸಂಪತ್ತಿನಿಂದ ಕೈಗೊಟ್ಟು ನಡೆತಂದನು, ಮದನನು ಹೂಬಾಣಗಳನ್ನು ಹೂಡಿದ ಬಿಲ್ಲನ್ನು ಹೊತ್ತು ಬೆಂಗಾವಲಾಗಿ ಬಂದನು, ಹೊಸ ನೈದಿಲೆಗಳು ಅರಳಿದ್ದರಿಂದ ಅವುಗಳ ಸುಗಂಧ ಮಿಶ್ರಿತ ಮಕರಂದಪಾನ ಮಾಡಿದ ದುಂಬಿಗಳು ಸುಮಧುರವಾದ ಸಂಗೀತ ಕಛೇರಿಯನ್ನು ನಡೆಸಿದವು ಎಂದ ಮೇಲೆ ಎಲ್ಲ ರಾಜೋಪಚಾರವೂ ಪೂರ್ಣ ವಾದಂತೆಯೇ ಆಯಿತು. ೯೭. ಚಂದ್ರಕಿರಣವೀಥೀಸಾಂದ್ರವಾದ ಇಂದ್ರಾಚಲ (ಪೂರ್ವಾಚಲ) ಶಿಖರವನ್ನು ಏರಿದನು ಎಂದರೆ ರಾಜನ ಅಭ್ಯುದಯದಲ್ಲಿ ಹೊಗಳು ಭಟ್ಟರು ಹರ್ಷಿಸುವಂತೆ ರಾಜ(ಚಂದ್ರ)ನ ಉದಯಕಾಲದಲ್ಲಿ ನೈದಿಲೆ ಅರಳಿದವು. ತಾವರೆಗಳು ಮಸಕಾದವು, ಚಂದ್ರನು ಕತ್ತಲೆಯನ್ನು ಓಡಿಸಲು, ವಿರಹಿಗಳನ್ನು

ವ।। ಮತ್ತಮಲ್ಲದೆ,

ಕಂ।। ಅದು ಪೊಸಪವಳದ ಬಂಧೂ
ಕದ ಕೆಂದಾವರೆಯ ದಾಸಣದ ಪೂವಿನ ವ ।
ರ್ಣದ ಸಂಪದದಿಂ ಮದದಿಂ
ಮುದದಿಂದೊಪ್ಪಿತ್ತು ಚಂದ್ರಬಿಂಬವಿಡಂಬಂ ।। ೯೮

ಇದು ವಿರಹವಾರ್ಧಿಮಧ್ಯ
ಪ್ರದೇಶದಿಂದೊಗೆದ ರಾಗವಡಬಾನಳ ಪಿಂ ।
ಡದವೋಲ್ ವಿರಹಿಗೆ ತೋಱೆದು
ದುದಯಾದ್ರಿಯ ಮೇಲೆ ಮೆಱೆವ ಹಿಮಕರಬಿಂಬಂ ।। ೯೯

ವ।। ಅನಂತರಂ

ಕಂ।। ಅದಿರದೆ ವಿರಹಿಗಳತಿಸಂ
ಮುದದಿಂ ಬರ್ಪಾಗಳೊಲ್ದು ಮಧು ಮದನಂಗೆ ।
ತ್ತಿದ ಮುತ್ತಿನ ಸತ್ತಿಗೆಯೆನಿ
ಸಿದುದಿಂದ್ರಾಶಾನಿವೇಶದೊಳ್ ಶಶಿಬಿಂಬಂ ।। ೧೦೦

ಉ।। ಮುಂದೆ ತಮಂಧಮಿಟ್ಟಣಿಸಿ ರಾಹುವಿನಂತಿರೆ ಪೂರ್ವವೈರಮಂ
ಮುಂದುಗೊಳುತ್ತೆ ಎನ್ನನಿದು ಮಾಡುವ ಮಾಳ್ಕೆಯನಿಂದು ಮಾಳ್ಪೆನಾ ।
ನೆಂದು ತದೀಯರೂಪನುಱಿ ನುಂಗೆ ತನುಚ್ಛವಿಯಿಂದೆ ತೋಱೆತೆಂ
ಬಂದದೊಳೊಪ್ಪುತಿರ್ದುದು ನಿಶಾಕರಮಂಡಲದಲ್ಲಿ ಲಾಂಛನಂ ।। ೧೦೧

ಮದನನು ದರ್ಪದಿಂದ ಬೆನ್ನಟ್ಟಿದನೋ ಎಂಬಂತೆ ಚಂದ್ರೋದಯವಾಯಿತು. ೯೮. ಉದಯಿಸಿದ ಚಂದ್ರಬಿಂಬವು ಹೊಸಹವಳ, ಹಿಪ್ಪಿಯ ಹೂ, ಕೆಂಪು ತಾವರೆ ಅಥವಾ ದಾಸವಾಳದ ಹೂವು ಇವುಗಳ ಕಾಂತಿಯನ್ನು ತಳೆದು ಸೊಗಸಿತ್ತು. ೯೯. ಉದಯಾದ್ರಿಯ ಮೇಲೆ ಪ್ರಕಾಶಿಸುವ ಹಿಮಕರಬಿಂಬವು ವಿರಹಿಗಳಿಗೆ ಹೀಗೆ ಕಂಡಿತು-ವಿರಹಸಮುದ್ರದ ಮಧ್ಯದಿಂದ ಒಗೆದ ರಾಗವೆಂಬ ಬಡಬಾಗ್ನಿಯೊ ಎಂಬಂತೆ ಚಂದ್ರಬಿಂಬವು ಕಾಣಿಸಿತು. ೧೦೦. ಇಂದ್ರದಿಕ್ಕಿನಲ್ಲಿ ಕಾಣುವ ಶಶಿಬಿಂಬವು ವಿರಹಿಗಳಿಗೆ ಸಂತಾಪವನ್ನು ಉಂಟುಮಾಡಿ ಸಮುದ್ರದಿಂದ ಬರುವ ಮನ್ಮಥನನ್ನು ನೋಡಿ ಮಧು ಪ್ರೀತಿಯಿಂದ ತನ್ನ ಒಡೆಯನಿಗೆ ಎತ್ತಿಹಿಡಿದ ಮುತ್ತಿನ ಕೊಡೆಯೊ ಎಂಬಂತೆ ಇತ್ತು. ೧೦೧. ಹಾಗೆ ಮೂಡಿದ ಚಂದ್ರಮಂಡಲದಲ್ಲಿ ಕಳಂಕವು ಕಾಣಿಸಿತು. ಅದನ್ನು ನೋಡಿದರೆ ಚಂದ್ರನ ಮುಂದೆ ಇಟ್ಟಣಿಸಿದ್ದ ತಮಂಧವು ರಾಹುವಿನಂತೆ ಇತ್ತು. ಅದನ್ನು ಕಂಡ ಚಂದ್ರನು ಪೂರ್ವವೈರವನ್ನು ನೆನೆದು, ಹೇಗಿದ್ದರೂ ಈ ರಾಹು ಮುಂದೆ ನನ್ನನ್ನು ನುಂಗುವನು, ಅದಕ್ಕಿಂತ ಮೊದಲು ನಾನೇ ಅವನನ್ನು ನುಂಗುವೆನು ಎಂದು ಚಂದ್ರನು ನುಂಗಿದನು. ಆಗ ಆ ರಾಹುಚ್ಛಾಯೆಯೇ ಹೊರಗೆ ಕಳಂಕವಾಗಿ ಕಾಣುತ್ತಿದೆಯೊ

ಕಂ॥ ಒಡವುಟ್ಟಿದ ಬಿಸಮಿದನಾಂ
ಕಡೆನೂಂಕಲದೇಕೆ ಕೂಡಿ ನ್ಗಡೆವೆನೆನುತ್ತಂ ।
ದೊಡಲೊಳಗಿಂಬಿಟ್ಟಯ್ದುವ
ಪಡಿಯೆನಲೊಪ್ಪಿದುದು ಲಾಂಛನಾಂಕಿತ ಚಂದ್ರಂ ॥ ೧೦೨

ವ॥ ಇಂತಾದ ಚಂದ್ರೋದಯಮಂ ಕಂಡು ಭೋಗಸಹಾಯರಪ್ಪ ನಾಗರಿಕ ವಿಟವಿದೂಷಕ ಪೀಠಮರ್ದಕರ್ ಭರದಿ ಪರಿತಂದು ಆಸ್ಥಾನದೊಳಿರ್ದ ಗೋತ್ರರಾಜಂಗೆ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ದೇವಾ, ಪತಂಗಂ ಪಶ್ಚಿಮಾಬ್ಧಿಯೊಳಿಳಿದಂ, ಸರಸಿರುಹಂ ಸುರುಳ್ದುವು, ಕುಮುದಕುಲಂ ರಮಣೀಯಮಾದುವು, ಕೋಕಂಗಳಗಲ್ದು ಶೋಕಮನೆಯ್ದಿದುವು, ಪಕ್ಕಿಗಳ್ ಪಕ್ಕೆಗೆ ಸಾರ್ದುವು, ಮೃಗಂಗಳ್ ನಗಮನೆತ್ತುಗೊಂಡುವು, ಇಳೆಯ ಜನಂ ನಿಳಯಮಂ ಪೊಕ್ಕುದು, ಕಳ್ತಲೆಯೊತ್ತರಿಸಿತ್ತು, ಜಾರೆಯರ್ ಹಾರಯ್ಸಿದರ್, ಗಗನದೊಳ್ ಭಗಣಂ ನೆಗೆದುದು, ಚಂದ್ರಂ ಶೈಲೇಂದ್ರಮನೇಱದಂ, ಬೆಳ್ದಿಂಗಳ್ ಬೀದಿವರಿದುದು, ಅಸತಿಯರ್ ದೆಸೆಗೆಟ್ಟೋಡಿದರ್, ಚಕೋರಮುಖಂ ವಿಕಸಿತಮಾದುದು, ಮನ್ಮಥಂ ನನೆಗಣೆಯಂ ಹೂಡಿದಂ, ವಿರಹಿಗಳ್ ವಿರಥರಾದರ್, ದೇವಾ ಇಂದಿನ ದಿನಂ ಬೆಳತಿಗೆ ಬೆಳ್ದಿಂಗಳೊಳ್ ಪುರವೀಥಿಯ ವಿಳಾಸಮಂ ಕೆಯ್ಕ್ಕು ನೋಡಿ ರಾತ್ರೀ ವಿಹಾರಮಂ ಮಾಡಲ್‌ವೇಳ್ಕುದೆಂದು ಬಿನ್ನಯ್ಸಿದ ಮನ್ನಣೆಯ ರಸಿಕರ್ಗೆ

ಎಂಬಂತಿತ್ತು. ೧೦೨. ಲಾಂಛನ (ಕಳಂಕ)ದಿಂದ ಅಂಕಿತವಾದ ಚಂದ್ರನನ್ನು ನೋಡಿದರೆ-ವಿಷವು ಚಂದ್ರನಿಗೆ ಒಡಹುಟ್ಟಿದ್ದು, ಆದ್ದರಿಂದ ಒಡಹುಟ್ಟಿದವನನ್ನು ಹೊರನೂಕುವುದು ಸರಿಯಲ್ಲ; ಜೊತೆಗೆ ಒಯ್ಯುವೆನು ಎಂದು ಚಂದ್ರ ತನ್ನ ಒಡಲಲ್ಲಿ ಅದನ್ನು ಇಟ್ಟು ಕೊಂಡಿರುವನೊ ಎಂಬಂತೆ ಇತ್ತು. ವ॥ ರಾಜನಿಗೆ ಭೋಗಸಹಾಯರಾದವರು ನಾಗರಿಕ ವಿಟ ವಿದೂಷಕ ಪೀಠಮರ್ದಕರು. ಅವರು ಚಂದ್ರೋದಯವಾದೊಡನೆಯೇ ಆಸ್ಥಾನಕ್ಕೆ ಬಂದು ಗಿರಿರಾಜನಿಗೆ ವಂದಿಸಿ ಬಿನ್ನೈಸಿದರು: ಸ್ವಾಮಿ, ಸೂರ್ಯ ಮುಳುಗಿದ, ತಾವರೆಗಳು ಮುಗಿದುವು, ನೈದಿಲೆ ಅರಳಿದುವು, ಚಕ್ರವಾಕಗಳು ವಿರಹಕ್ಕೆ ಸಿಕ್ಕಿದುವು, ಹಕ್ಕಿಗಳು ಗೂಡುಸೇರಿದವು, ಚಿಗರಿಗಳು ಕಾಡುಹೊಕ್ಕವು, ಜನ ಮನೆ ಸೇರಿತು, ಕತ್ತಲೆ ಕವಿಯಿತು, ಜಾರೆಯರು ಹರ್ಷಗೊಂಡರು, ಗಗನದಲ್ಲಿ ತಾರೆಗಳು ಮೂಡಿದವು, ಚಂದ್ರನುದಿಸಿದನು, ಬೆಳದಿಂಗಳು ಹಬ್ಬಿತು, ಪಾಣ್ಬೆಯರು ದಿಗಿಲುಗೊಂಡರು, ಜೊನ್ನವಕ್ಕಿಗಳು ಹರ್ಷಗೊಂಡವು, ಮನ್ಮಥ ಹೂಬಾಣ ಹಿಡಿದು ಯುದ್ಧಸನ್ನದ್ಧನಾದ, ವಿರಹಿಗಳು ವಿರಥರಾದರು (ಸೋತರು) ಈಗ ತಾವು ರಾತ್ರಿವಿಹಾರಕ್ಕೆ ಚಿತ್ತೈಸಬೇಕು ಎಂದು ಬಿನ್ನೈಸಿದರು. ರಾಜನು ಆ ರಸಿಕರಿಗೆ ಮೆಚ್ಚನಿತ್ತು ಓಲಗವನ್ನು ಮುಕ್ತಗೊಳಿಸಿ ನಾರದನೊಡನೆ ಕೈಕಾಲ್ತೊಳೆದು ಭಸ್ಮರುದ್ರಾಕ್ಷಗಳನ್ನು ಧರಿಸಿ, ಶಿವಾರ್ಚನೆಯೆಸಗಿ, ಪ್ರಸಾದವನ್ನು ಸ್ವೀಕರಿಸಿ, ತಾಂಬೂಲಚರ್ವಣವನ್ನು ಮಾಡಿ, ಮುಡಿತುಂಬಿ ಸುಗಂಧ ಪುಷ್ಪಮಾಲೆಗಳನ್ನು ಧರಿಸಿ, ಕಸ್ತೂರೀ ಪುನಗುಗಳನ್ನು ಲೇಪಿಸಿಕೊಂಡು ನೂತನ ವಸ್ತ್ರಾಭರಣಗಳನ್ನು ಸಿಂಗರಿಸಿ ಕೊಂಡು ದಕ್ಷಿಣ-ಅನುಕೂಲ-ದೃಷ್ಟ-ಶಠ- ನಾಯಕರೆಂಬ ರಾಜಪುತ್ರರಂ ಕೂಡಿಕೊಂಡು ರಸಿಕರು ಹಿಂಬಾಲಿಸುತ್ತಿರಲು ನಾರದಮುನಿಯೊಡನೆ ಅರಮನೆಯಿಂದ ಹೊರಟು

ಪ್ರಸಾಯನಮನಿತ್ತೋಲಗಮಂ ಪರೆಯಲ್ವೇಳ್ದು ನಾರದನೊಡಗೂಡಿ ನಗರಾಜಂ ನಿರ್ಮಳೀಕೃತ ಕರಚರಣನುಂ, ಭಸಿತಾವಯವನುಂ, ರುದ್ರಾಕ್ಷಮಾಲಾಲಂಕೃತನುಂ, ಶಿವಲಿಂಗೇಕ್ಷಣ ನಿತ್ಯನಿಯಮ ಸಂಪನ್ನನುಂ, ಪ್ರಸಾದಭರಿತ ಶರೀರನುಂ, ಸುಗಂಧಮಯ ತಾಂಬೂಲಮುಖನುಂ, ಕುಸುಮಾವಳೀ ಪರಿವೃತ ಕಬರೀಭರನುಂ, ಯಕ್ಷಕರ್ದಮ ಕಕ್ಷಪುಟನುಂ, ನವ್ಯವಸ್ತ್ರಪರಿವೃತನುಂ, ದಿವ್ಯಾಭರಣ ಸರ್ವಾಂಗನುಮಾಗಿ ದಕ್ಷಿಣಾನುಕೂಲ ಧೃಷ್ಟಶತನಾಯಕರೆಂಬ ರಾಜಪುತ್ರಂ ಕೂಡಿಕೊಂಡು ಸಕಲ ಸುಕುಮಾರ ಭೋಗನಿಯೋಗನಿರತರ್ ಪಿಂತೆಬರೆ ನಾರದಮುನೀಂದ್ರಸಹಿತಂ ಗಿರಿರಾಜಂ ತನ್ನರಮನೆಯಂ ಪೊಱಮಟ್ಟು ರಾಜವೀಥಿಯೊಳ್ ನಿಂದು ಪೂರ್ವದಿಶಾವಲೋಕನನಾಗಿ ಕಟ್ಟಿದಿರೊಳಿಟ್ಟಣಿಸಿದ ಬೆಳಗಿಂ ದಟ್ಟಯ್ಸಿ ತೋರ್ಪ ಚಂದ್ರಬಿಂಬಮಂ ನೋಳ್ಪಾಗಳ್.

ಕಂ॥ ಸರಸನೆನಿಸಿರ್ದ ಸಖ ನಾ
ಗರಿಕಂ ಕೆಲಸಾರ್ದು ನಿಂದು ಕೆಯ್ಮುಗಿಯುತ್ತುಂ ।
ಪರಿಪೂರ್ಣಚಂದ್ರಮಂಡಲ
ದಿರವಂ ಕಂಡಾಗಳವನಿಪಂಗಿಂತೆಂದಂ ॥ ೧೦೩

ಉ॥ ಇಂದು ಸುಧಾಂಶುರಾಜನತಿ ಶೀತಳಶೀಲನನೂನದಾನಿಯೇ
ಳ್ತಂದೊಡೆ ಕೈರವಕ್ಕೆ ಶಶಿಕಾಂತದ ಕಲ್ಗೆ ಚಕೋರಮಾಲೆಗಾ ।
ನಂದಮದಾಯ್ತು ಪಂಕಜಕೆ ಚಕ್ರಯುಗಕ್ಕಸತೀಕುಲಕ್ಕೆ ಪೋ
ದಂದುಗಮಾಯ್ತು ಸರ್ವಜನಸಮ್ಮತನಾವ ನಗಾಧಿನಾಯಕಾ ॥ ೧೦೪

ವ॥ ಮತ್ತಮದಲ್ಲದೆ,

ಕಂ॥ ಕಮಲಂಗಳೊಡನೆ ಧಾತ್ರೀ
ಕುಮುದಂ ಮುಗಿದಿರ್ದುವರಸ ಕುಮುದದೊಡನೆ ತತ್ ।
ಕಮಲಂ ಮಿಕ್ಕಲರ್ದುವು ಚಂ
ದ್ರಮನುದಯದೊಳೆಂದೊಡಿಳೆಗದೇಂ ಕೌತುಕಮೋ ॥ ೧೦೫

ರಾಜಬೀದಿಗೆ ಬಂದು ಪೂರ್ವದಿಕ್ಕಿನಲ್ಲಿ ಕಾಣುವ ಚಂದ್ರಬಿಂಬವನ್ನು ನೋಡುತ್ತಾ ೧೦೩. ಅವರಲ್ಲಿ ಸರಸಿಯೆನಿಸುವ ಒಬ್ಬ ಮಿತ್ರನಾಗರಿಕನು ರಾಜನ ಪಕ್ಕಕ್ಕೆ ಬಂದು ಕೈಮುಗಿದು ಪರಿಪೂರ್ಣ ಚಂದ್ರಮಂಡಳವನ್ನು ಕಂಡು ಅರಸನಿಗೆ ಬಿನ್ನೈಸಿದ. ೧೦೪. ಹೇ ನಗರಾಜ, ಈ ಸುಧಾಂಶುರಾಜನು ಅತಿಶೀತಲ ಶೀಲ, ಮೇಲಾಗಿ ಅನೂನ ದಾನಿ; ಇವನ ಉದಯದಿಂದ ನೈದಿಲೆಗೆ, ಚಂದ್ರಕಾಂತ ಶಿಲೆಗೆ, ಚಕೋರಗಳಿಗೆ ಆನಂದವಾದೀತು; ಆದರೆ ತಾವರೆಗೆ ಚಕ್ರವಾಕಗಳಿಗೆ ಅಸತಿಯರಿಗೆ ತೊಂದರೆಯೂ ಆಯಿತು. ಎಂದ ಮೇಲೆ ಲೋಕದಲ್ಲಿ ಸರ್ವಸಮ್ಮತನಾದವನು ಯಾವನಿದ್ದಾನೆ! ೧೦೫. ಚಂದ್ರೋದಯ ಕಾಲದಲ್ಲಿ ಕಮಲಗಳ ಜೊತೆಗೆ ಜಗತ್ತೆಂಬ ನೈದಿಲೆ(ಕುಮುದ)ಯೂ ಮುಚ್ಚಿಕೊಂಡಿತು. ಇನ್ನು ಕುಮುದದೊಡನೆ ಜಾರೆಯರ ನೇತ್ರಕಮಲಗಳು ಅರಳಿದವು ಎಂದರೆ ಏನು ಆಶ್ಚರ್ಯ!

ವ॥ ಮತ್ತಮಲ್ಲದೆ ದೇವಾ, ಪರ್ಬದ ಬೆಳ್ದಿಂಗಳಗುರ್ಬನೇನಂ ಬಣ್ಣಿಪೆಂ

ಕಂ॥ ಮುನ್ನಂ ಪಯೋಧಿ ಪಡೆದೊಡೆ
ತನ್ನಂ ಶಶಿ ಪಡೆದನಾ ಪಯೋಧಿಯನೆಂಬಂ ।
ತುನ್ನತಿವೆತ್ತುದು ರಾಜೋ
ತ್ಪನ್ನಮಭನ್ನಂ ಪ್ರಸನ್ನಮೊಪ್ಪುವ ಜೊನ್ನಂ ॥ ೧೦೬

ಮ॥ ಹರನುದ್ಭೂಳಿಸಿದತ್ಯನೂನಭಸಿತ ಪ್ರದ್ಯೋತಮೋ ಚಂದ್ರ ಶೇ
ಖರನಾನಂದಮಯಾಟ್ಟಹಾಸರುಚಿಯೋ ಸರ್ವೇಶ ಸತ್ಕೀರ್ತಿಯೋ ।
ಪರಮೋತ್ತುಂಗ ಮರುನ್ನದೀ ಪ್ರಬಳ ಗೌರಚ್ಛಾಯೆ ಭೂಭಾಗದೊಳ್
ಪರೆದತ್ತೋ ಎನೆ ಪರ್ವಿತುರ್ವಿಯನಗುರ್ವಿಂ ಸಾಂದ್ರಚಂದ್ರಾತಪಂ ॥ ೧೦೭

ಚಂ॥ ಮುಡಿವೊಡೆ ಮಲ್ಲಿಕಾಪ್ರತತಿ ಪೂಸುವೊಡುತ್ತಮ ನವ್ಯಚಂದನಂ
ತುಡುವೊಡೆ ಮೌಕ್ತಿಕಾಭರಣವೀಸುವೊಡಂತಮೃತಾಬ್ಧಿ ಪೊರ್ದು ಕೊ ।
ಳ್ವೊಡೆ ಧವಳೋತ್ತರೀಯಮೊಸೆದೀಂಟುವೊಡಾ ನವದುಗ್ಧಮೊಲ್ದು ನೋ
ಳ್ಪೊಡೆ ರಜತಾದ್ರಿಯೆಂದೆನಿಸಿ ತೋಱೆತು ಮೀಱೆದ ಚಂದ್ರಿಕೋಜ್ವಳಂ ॥ ೧೦೮

ಕಂ॥ ಸರಳಜನಂ ಕೌಮುದಿಯಿಂ
ದೆ ಕಡೆದು ಕಂಡರಿಸಿತೆಂಬ ನುಡಿ ಚತ್ರಮೆ ಕೌ ।
ತುಕಮರಸ ಚಂದ್ರಮಂ ಚಂ
ದ್ರಿಕೆ ಕವಿದ ಕಳಂಕ ಚಂದ್ರನಂತೆಸೆದಿರ್ದಂ ॥ ೧೦೯

೧೦೬. ಹಿಂದೆ ಕಡಲು ಚಂದ್ರನನ್ನು ಪಡೆಯಿತು. ಈಗ ಚಂದ್ರನೇ ಕಡಲನ್ನು ಪಡೆದನೋ ಎಂಬಂತೆ ರಾಜ(ಚಂದ್ರ)ನಿಂದ ಉದಿಸಿದ ಬೆಳದಿಂಗಳು ಪ್ರಸನ್ನ ಗಂಭೀರವಾದ ಕಡಲಿನಂತೆ ಬೆಳಗಿತು. ೧೦೭. ಆ ಬೆಳ್ದಿಂಗಳು-ಪರಶಿವನು (ಎಬ್ಬಿಸಿದ) ಉದ್ಭೂಳನವೆಸಗಿದ ಭಸಿತವೆಂಬ ಧೂಳಿನ ಬೆಳಕೋ, ಚಂದ್ರಶೇಖರನ ಆನಂದಮಯ ಅಟ್ಟಹಾಸ(ನಗೆ)ದ ರುಚಿ(ಬೆಳಕು)ಯೋ, ಸರ್ವೇಶ್ವರನಾದ ಶಿವನ ಸತ್ಕೀರ್ತಿಯೋ, ಅತಿಶ್ರೇಷ್ಠವಾದ ದೇವಗಂಗೆಯ ಗೌರಚ್ಛಾಯೆ (ಬಿಳುಪು) ಭೂಲೋಕದಲ್ಲಿ ಹರಡಿದೆಯೊ, ಎಂಬಂತೆ ದಟ್ಟವಾಗಿ ಹಬ್ಬಿತ್ತು. ೧೦೮. ಆ ಬೆಳದಿಂಗಳು ವಿವಿಧ ರೀತಿಯಾಗಿ ಕಂಡಿತು. ಮುಡಿಯುವವರಿಗೆ ಅದು ಮಲ್ಲಿಗೆಹೂ, ಲೇಪಿಸಿಕೊಳ್ಳುವವರಿಗೆ ನವ್ಯಚಂದನ, ತೊಡುವುದಕ್ಕೆ ಮುತ್ತಿನ ಆಭರಣ, ಈಜಬೇಕು ಎಂದರೆ ಹಾಲುಕಡಲು, ಹೊದ್ದುಕೊಳ್ಳೋಣ ಎಂದರೆ ಬಿಳಿಯ ಉತ್ತರೀಯ, ಕುಡಿಯೋಣ ಎಂದರೆ ಹೊಸಹಾಲು, ಒಲಿದು ನೋಡೋಣ ಎಂದರೆ ರಜತಾದ್ರಿ ಎಂಬಂತೆ ಕಂಡಿತು. ೧೦೯. ಸಕಲಜನವೂ ಕೌಮುದಿ(ಬೆಳದಿಂಗಳು)ಯಿಂದೆ ಕಡೆದ ರೂಪುಗೊಳಿಸಿತು ಎಂಬ ಮಾತು ಆಶ್ಚರ್ಯವೆ? ಎಲೈ ಅರಸನೆ, ಚಂದ್ರನು ಬೆಳದಿಂಗಳು ಮುಚ್ಚಿಕೊಂಡಿರುವ ಕಳಂಕಯುಕ್ತ ಚಂದ್ರನಂತೆ ಕಾಣುತ್ತಿದ್ದಾನೆ.

ಶಿವಕೀರ್ತಿರಸದೆ ಬೊಮ್ಮಂ
ತವೆ ತೊಳೆದನೊ ಜಗಮನಮ್ಯತವಾರ್ಧಿಯ ಬೆಳಗಿಂ ।
ಧವಳಿಸಿದನೊ ಪೇಳೆನೆ ಭೂ
ಭುವನಮನೆಡೆಗೊಂಡುದಚ್ಚ ಪೊಸವೆಳ್ದಿಂಗಳ್ ॥ ೧೧೦

ವ॥ ಇಂತೊಪ್ಪುವ ಸಾಂದ್ರಚಂದ್ರಿಕಾ ಸಂಪದಮಂ ನಗೇಶ್ವರಂಗೆ ನಾಗರಿಕಂ ನಲಿನಲಿದು ತೋಱುತ್ತುಂ ಮೀಱೆ ಬರೆವರೆ ಪಟ್ಟಣದ ದಟ್ಟಯ್ಸಿದ ಪಲವು ವೀಥಿಗಳ ವಿಚಿತ್ರ ವಿಭ್ರಮಮಂ ಶೈಲಪತಿಯಾಲೋಕಿಸುತ್ತುಂ ಕೇಳುತ್ತುಂ ಬಾಳುತ್ತುಂ ಕೇಳೀವನಮಂ ಪುಗುತರ್ಪಾಗಳ್,

ಕಂ॥ ಸುಗಿದಿವೆ ಕಮಳಂ ಕುಮುದಂ
ನಗುತಿವೆ ಕೋಕದ್ವಯಂ ರತೀಶ್ವರನೆಸುವಿಂ ।
ದುಗಿ ಬಗಿಯಾಗುತ್ತಿವೆ ಮಿಗೆ
ಬಗೆವೆರ್ಚುತ್ತಿವೆ ಸರಾಗಪೂರ ಚಕೋರಂ ॥ ೧೧೧

ಉ॥ ಚೂತಮನಪ್ಪಿ ಪುಷ್ಪವತಿಯಾದುದು ಮಲ್ಲಿಗೆ ಶೀತಕೃತ್ಕರ
ವ್ರಾತಮನಪ್ಪಿಯೊಪ್ಪೆ ಕರಗಿತ್ತು ಹಿಮೋಪಲಮೋತು ತುಂಬಿಯಂ ।
ಪ್ರೀತಿಯೊಳಪ್ಪಿ ಗರ್ಭಿಣಿಯದಾಯ್ತು ಸರೋರುಹಮುತ್ಪಲಂ ಪ್ರಸೂ
ತಾತುರೆಯಾಗಿ ಪೆತ್ತುದಳಿಯಂ ನವಚಂದ್ರಿಕೆಯೊಳ್ ನಗೇಶ್ವರಾ ॥ ೧೧೨

ವ॥ ಮತ್ತಮದಲ್ಲದೆ,

ಕಂ॥ ಎಳದಳಿರೊಳರಲೊಳಾಮ್ರದ
ನೆಳಲೊಳ್ ಪುಳಿನಂಗಳೊಳಗೆ ಶಶಿಕಾಂತ ಶಿಲಾ ।
ತಳದೊಳ್ ಕೊಳದೊಳ್ ವನದೊಳ್
ತಳರದ ವಿರಹಿಗಳ ವೀಥಿಯಿದೆ ಗಿರಿರಾಜಾ ॥ ೧೧೩

೧೧೦. ಸ್ವಚ್ಛವಾದ ಹೊಸ ಬೆಳದಿಂಗಳು ಭುವನವನ್ನೆಲ್ಲ ವ್ಯಾಪಿಸಿತ್ತು. ಅದನ್ನು ನೋಡಿದರೆ ಬ್ರಹ್ಮನು ಶಿವನ ಕೀರ್ತಿರಸದಿಂದ ಜಗತ್ತನ್ನು ತೊಳೆದನೋ, ಅಥವಾ ಅಮೃತಸಾಗರ ಬೆಳಗಿನಿಂದ ಬಿಳುಪು ಮಾಡಿದನೊ ಎಂಬಂತಿತ್ತು. ವ॥ ಹೀಗೆ ನಾಗರಿಕನು ಗಿರಿರಾಜನಿಗೆ ಬೆಳ್ದಿಂಗಳ ಸಂಪದವನ್ನು ಬಿನ್ನೈಸುತ್ತಿರುವಾಗ ರಾಜನು ಮುನ್ನಡೆದು ಪಟ್ಟಣದ ದಟ್ಟಯಿಸಿದ ಬೀದಿಗಳ ವೈಚಿತ್ಯಗಳನ್ನು ನೋಡುತ್ತಾ ಕೇಳೀವನವನ್ನು ಹೊಕ್ಕನು. ೧೧೧. ಕಮಲಗಳು ಸಂಕೋಚಗೊಂಡಿವೆ. ನೈದಿಲೆಗಳು ನಗುತ್ತಿವೆ. ಮನ್ಮಥನ ಬಾಣದ ಹೊಡೆತದಿಂದ ಪ್ರೇಮಪ್ರವಾಹದಿಂದ ಕೂಡಿದ ಕೋಕ (ಚಕೋರ)ಗಳ ಜೋಡಿ ಉತ್ಸಾಹಗೊಳ್ಳುತ್ತಿವೆ. ೧೧೨. ಎಲ್ಲೈ ನಗರಾಜನೆ, ನವಚಂದ್ರಿಕೆಯಲ್ಲಿ ಈ ಮಲ್ಲಿಗೆ ಚೂತವೃಕ್ಷವನ್ನು ಅಪ್ಪಿ ಪುಷ್ಪವತಿಯಾಯಿತು. ಚಂದ್ರಕಾಂತವು ಚಂದ್ರಕಿರಣಗಳನ್ನು ಅಪ್ಪಿ ಕರಗಿತು. ತಾವರೆಯು ತುಂಬಿಯನ್ನು ಪ್ರೀತಿಯಿಂದ ಆಲಿಂಗಿಸಿ ಗರ್ಭಿಣಿಯಾಯಿತು. ಈ ನೈದಿಲೆಯಾದರೂ ಪ್ರಸೂತಿಯ ಆತುರದಿಂದ ಅಳಿ (ದುಂಬಿ)ಯನ್ನು ಹೆತ್ತಿತು. ೧೧೩. ಎಲ್ಲೈ ನಗಾಧಿಪನೆ, ಎಳೆ ಚಿಗುರುಗಳಲ್ಲಿ, ಹೂವಿನ ಹಾಸಿಗೆಗಳಲ್ಲಿ, ಮಾವಿನಮರದಡಿಯಲ್ಲಿ, ಮರಳುದಿಬ್ಬಗಳಲ್ಲಿ, ಚಂದ್ರಕಾಂತಶಿಲಾತಳಗಳಲ್ಲಿ,

ಉ॥ ಒತ್ತುವ ಪದ್ಮಪತ್ರಕದಳೀದಳಸಂಕುಳಮೆಯ್ದೆ ಬೆಂದು ಸೀ
ಯುತ್ತಿವೆ ದೂರದಿಂದೆ ಸಖಿಯರ್ ತವೆ ಚೆಲ್ಲುವ ಶೀತವಾರಿಯು ।
ರ್ಕುತ್ತಿವೆ ಬೀಸುತಿರ್ಪ ಕುಸುಮೋಜ್ವಳ ವೀಜನ ವ್ಯಂದಮೋವ್ಪೋ ಪೊ
ತ್ತುತ್ತಿವೆ ತನ್ವಿಯೋ ವಿರಹವಹ್ನಿಗೆ ಪುಟ್ಟಿದದೊಂದು ಮೂರ್ತಿಯೋ ॥ ೧೧೪

ಕಂ॥ ಸಂದಣಿಸಿ ಮಾಣದಾಳೀ
ವ್ಯಂದಂ ಶಶಿರೋಪಚಾರಮಂ ಲಲನೆಗೆ ಮಾ ।
ಳ್ಪಂದಂ ಘೃತದಿಂ ಕರ್ಚಂ
ನಂದಿಪ ತೆಱನಾಗಿ ತೋಱುತಿದೆ ನೋಡರಸಾ ॥ ೧೧೫

ತಾಳ್ದಿದ ವಿರಹದೊಳೀಕೆಗೆ
ಬೆಳ್ದಿಂಗಳ್ ಬಿಳಿಯ ಕಿರ್ಚು ಸಸಿ ಬಿಸಿ ಕಾವಂ ।
ತೂಳ್ದುವ ದಾವಂ ಚೈತ್ರಂ
ಸೀಳ್ದಿಕ್ಕುವ ಕುಂಭ ಕದಳಿ ಕದಳೀಘಾತಂ ॥ ೧೧೬

ವ॥ ಎಂದಿಂತು ವಿರಹಾತಿಶಯಮಂ ಬಿನ್ನವಿಸುತ್ತುಂ ಬರೆವರೆ ಮುಂದೊಂದೆಡೆಯೊಳ್

ಕಂ॥ ಮಿಗೆ ಸೌಕುಮಾರ್ಯ ನವ ವ
ಸ್ತುಗಳಂ ಪೆಸರ್ಗೊಂಡೊಡುಳಿಯಳವಳೆನುತುಂ ಸು ।
ತ್ತುಗವಳಲುತ್ತುಂ ಸಂಜ್ಞೋ
ಕ್ತಿಗಳಂ ತೋಱುತ್ತುಮಿರ್ದುದಬಳಾನೀಕಂ ॥ ೧೧೭

ಚಂ॥ ಇದೆ ಪಿಕನೆಳ್ಬು ಹಂಸೆ ಬರುತಿರ್ದುದೆ ನೂಂಕು ಮಧುವ್ರತಾಳಿ ಮುಂ
ದಿದೆಯಿಡು ಚಂಪಕಪ್ರಸವದಿಂ ಗಿಳಿವಿಂಡಿದೆ ಸೋವು ಮಾರುತಂ ।
ಮದಮುಖದಿಂದೆ ತೀಡುತಿದೆಯೊಡ್ಡು ಸೆಱಂಗನೆನಿಪ್ಪ ತಮ್ಮ ಹ
ಸ್ತದ ನಿಜಸಂಜ್ಞೆಯಿಂ ಸುದತಿಯರ್ ನುಡಿದರ್ ಶಶಿರೋಪಚಾರದೊಳ್ ॥ ೧೧೮

ಕೊಳದಲ್ಲಿ ವನದಲ್ಲೆಲ್ಲ ಚಲಿಸಿ ವಿರಹಿಗಳನೇಕರು ತಾಪಶಮನ ಮಾಡಿಕೊಳ್ಳುತ್ತಿದ್ದಾರೆ. ೧೧೪. ತನ್ವಿಯ ವಿರಹ ತಾಪವನ್ನು ಉಪಶಮನಮಾಡಲು ಒತ್ತುವ ಕಮಲದ ಎಲೆ ಮತ್ತು ಕದಳೀದಳಗಳು ಬೆಂದು ಸೀದುಹೋದುವು, ಸಖಿಯರು ದೂರದಿಂದ ಚೆಲ್ಲುವ ತಣ್ಣೀರು ಉಕ್ಕುತ್ತಿವೆ. ಓಹೊ, ಗಾಳಿ ಬೀಸುವ ಹೂವಿನ ಬೀಸಣಿಗೆಗಳು ಹೊತ್ತಿ ಕೊಂಡವು! ಇದೇನು ಇವಳು ತನ್ವಿಯೋ ಅಥವಾ ವಿರಹಾಗ್ನಿಗೆ ಹುಟ್ಟಿದ ಒಂದು ಮೂರ್ತಿಯೋ ಏನೋ! ೧೧೫. ಎಲೈ ಅರಸನೆ, ಈ ಸಖಿಯರು ವಿರಹಸಂತಪ್ತಳಾದ ಈ ಲಲನೆಗೆ ಮಾಡುವ ಶೈತ್ಯೋಪಚಾರವು ತುಪ್ಪದಿಂದ ಬೆಂಕಿಯನ್ನು ಅಡಗಿಸ ಹೊರಟಂತೆ ಆಗಿದೆ. ೧೧೬. ವಿರಹಗೊಂಡ ಈಕೆಗೆ ಅನುಕೂಲ ವಸ್ತುಗಳೇ ವೈರಿ ಗಳಾಗಿವೆ. ಬೆಳಂದಿಗಳು ಬಿಳಿಯ ಕಿಚ್ಚು, ಶಶಿಯು ಬಿಸಿ, ಕಾಮನು ದಾಳಿಮಾಡುವ ಕಾಡ್ಗಿಚ್ಚು, ಚೈತ್ರವು ಸೀಳುವ ಮದ್ದಾನೆ, ಕದಳಿಯು ಕದಳೀಘಾತವಾದಂತಾಗಿದೆ. ವ॥ ಹೀಗೆ ಅವರ ಅತಿಶಯವಾದ ವಿರಹವೇದನೆಯನ್ನು ಬಿನ್ನವಿಸುತ್ತ ಬರುತ್ತಿರಲು ಮುಂದೆ ಒಂದು ಕಡೆಯಲ್ಲಿ ೧೧೭-೧೧೮. ಆ ವಿರಹಿಣಿಯರು ಪಕ್ಕದಲ್ಲಿ ಶೈತ್ಯೋಪಚಾರವನ್ನು ಮಾಡುತ್ತಿದ್ದ ಸಖಿಯರು ಹೇ ಸಖಿ, ಇದೊ ಇದು ಕೋಗಿಲೆ, ಇದನ್ನು ಎಬ್ಬಿಸು; ಹಂಸೆ

ವ।। ಮತ್ತಮೊಂದೆಡೆಯೊಳೊರ್ವ ತರುಣಿಗತ್ಯಧಿಕ ವಿರಹತಾಪಂ ಒಳಗಂ ಪೊಱಗಂ ತಕ್ಕನೆ ತೀವೆ ತಳತಳಿಸಿ ಕಾಯ್ದು ಘುಳುಘುಳಿಸುವಯಃಪಿಂಡವೆಂದು ಶಶಿಮಂಡಲಮಂ ನೋಡಲಂಜೆ ಕಣ್ಮುಚ್ಚಿ ಬೆದಱುತ್ತುಂ, ಬಿಸಿಯ ಬೆಳಗೆಂದು ಬೆಳ್ದಿಂಗಳ ಸೋಂಕಿಂಗೆ ಮೆಯ್ದೆಗೆದು ಸುಗಿಯುತ್ತುಂ ಬಾಳ ಬಾಯ್ದಾರೆಯ ಸೋಂಕೆಂದು ಕದಳೀದಳ ಸ್ಪರ್ಶನಕ್ಕೆ ದರ್ಪಂಗೆಟ್ಟೊಪ್ಪುಂ ಗುಂದುತ್ತುಂ, ವಸಂತನೆಂಬ ಕಮ್ಮಱಂ ಶಶಿಬಿಂಬದ ಪೊಸಸಾಣೆಯೊಳೊತ್ತಿ ಮಸೆವ ಕಾಮದೇವನ ಕೂರಲಗಿನ ದನಿಯೆಂದು ಕೋಕಿಲಧ್ವನಿಗಾಕಂಪನಂಗೊಳುತ್ತುಂ ಮಕರಧ್ವಜವೇತ್ರಧರ ಮುಖಜನಿತ ಮುಖರ ಗರ್ಜನಾರವಮೆಂದು ಚಪ್ಪರಿಪ ಗಿಳಿಗಳ ಬಳಗಕ್ಕೆ ಧರೆಗಿಳಿಯುತ್ತುಂ, ಬಿಡದಿಸುವ ಕುಸುಮಕೋದಂಡ ಚಂಡಪ್ರಸವ ಬಾಣಭೀಂಕಾರ ಘೋರಧ್ವನಿಯೆಂದುಱಿ ಝೀಂಕರಿಸುವ ತುಂಬಿಗಳ ಝೀಂಕಾರಕ್ಕೆ ಭೋಂಕನೆ ನಡುಗಿ ಶಂಕಿಸುತ್ತುಂ, ಚೈತ್ರರಾಜತೇಜಃ ಪ್ರತಾಪದುರಿಯ ಹಳವಿಗೆಯ ಹೊಯ್ಲೆಂದು ಬೀಸುವ ಪೊಂಬಾಳೆಯ ಚಾಮರದೆಲರ್ಗೆ ಕೊಱಗಿ ಕಳೆಗುಂದುತುಂ ಸಖೀಜನಂ ಕೆಯ್ಗೊಟ್ಟೆಯ್ತಂದು ಕೊಳನಂ ಪುಗಿಸೆ ಮೆಯ್ಯ ಬೆಂಕೆಯುಂ ಚುಯ್ಯೆಂದು ನೊರೆಗಟ್ಟಿ ಬಿಸಿಯ ತೆರೆ ತನುಮುಟ್ಟಿ ಸೆಕೆಯುಸಿರ್ ಭುಗಿಲನೊಗೆದು ಕಾದ ನೀರ್ ಕಾಯಮಂ ಸುಡೆ ಘಳಿಲನೆ ಪೊಱಮಟ್ಟು ಕೆಳದಿಯಂ ನೆಮ್ಮಿ ಹಮ್ಮದಂಬೋಗುತ್ತುಂ ಕಾಮಂಗೆ ಕನಲ್ದು ವಸಂತಂಗಳಲ್ದು ಎಳಲತೆಗೆ ಬಳಲ್ದು ಪಲ್ಲವಕ್ಕೆ ಕಳಲ್ದು ಕುಸುಮಕುಲಕ್ಕೆ ಬಸವಳಿದು ಮಂದಾನಿಳಂಗೆ ಮದವುಡುಗಿ ಕಾಮನ ಕಾರಾಗಾರದೊಳಿರ್ಪಂತೆ ಕೇಳೀವನದೊಳಿರ್ಪ ಬಾಲಕಗೆ ಚಂದ್ರನ ದಾಳಿ ಅಳಿಗಳ ದಳವುಳಂ ಬಸಂತನ ಬಂದಿ ಬಾಲಚೂತದ ಭಯಂ ಮಳಯಾನಿಳನ ಗಾಸಿ ಶಶಿರೋಪಚಾರದ ದಂಡನೆಯಖಂಡಿತಮಾಗೆ ಕೊಱಗಿ ಕರಗಿ ಕುಂದಿ ಕೋಡಿ ಬಾಡಿ ಸುರುಳ್ದುರುಳ್ದು ತೆರಳ್ದು ಒಳಗಾಱೆ ಬಸುಪೇಱೆ ಕಳೆಗುಂದಿಯಾಸೆಯಱೆತು ನೋಟಂ ಬಱಿತು

ಹತ್ತಿರ ಬರುತ್ತಿದೆ ಅದನ್ನು ದೂರ ನೂಕಿ; ದುಂಬಿವಿಂಡು ಮುಂದೆಯೇ ಇದೆ, ಅದಕ್ಕೆ ಸಂಪಿಗೆ ಹೂವಿನಿಂದ ಹೊಡೆ, ಈ ಗಿಳಿವಿಂಡನೂ ಸೋವು, ಬೀಸಿ ಬರುವ ಮಂದಮಾರುತಕ್ಕೆ ಸೆರಗನ್ನು ಅಡ್ಡಗಟ್ಟು, ಎಂದು ಅವರು ಕೈಸನ್ನೆಯಿಂದ ಶೈತ್ಯೋಪಚಾರವನ್ನು ನುಡಿಯುತ್ತಿದ್ದರು. ವ।। ಒಂದೆಡೆಯಲ್ಲಿ ಓರ್ವ ತರುಣಿ; ಅವಳಿಗೆ ವಿರಹ ತಾಪ ಅಧಿಕವಾಗಿದೆ. ಅವಳ ಒಳಗೆ ಮತ್ತು ಹೊರಗೆ ವಿರಹತಾಪದಿಂದ ಮೈ ಕಾಯ್ದಿದೆ; ಅದರಿಂದ ತಳಮಳಗೊಂಡ ಅವಳ ದೃಷ್ಟಿಗೆ ಚಂದ್ರಮಂಡಲವೂ ಘುಳುಕಾಯ್ದಿರುವ ಕಬ್ಬಿಣದ ಗುಂಡಿನಂತಿದೆ. ಅಂಥದನ್ನು ನೋಡುವುದಕ್ಕೂ ಅವಳಿಗೆ ಹೆದರಿಕೆ. ಇದರಿಂದಾಗಿ ಅವಳು ಕಣ್ಣು ಮುಚ್ಚಿದ್ದಾಳೆ. ಇನ್ನು ಬೆಳದಿಂಗಳೂ ಅವಳಿಗೆ ಬಿಸಿಯ ಬೆಳಗಿನಂತಾಗಿದೆ; ಇದಕ್ಕಾಗಿ ಅವಳು ಬೆಳ್ದಿಂಗಳಿಗೆ ಮೈಬಿಡಲು ಸುಗಿಯುತ್ತಿದ್ದಾಳೆ; ಇನ್ನು ಕಾಯ್ದ ಮೈ ತಂಪು ಮಾಡಲು ಬಾಳೆಎಲೆಯನ್ನು ಮೈಗೆ ಮುಚ್ಚೋಣವೆಂದರೆ ಅದು ಬಾಳ(ಖಡ್ಗ)ಧಾರೆಯಂತೆ ಇರುವುದರಿಂದ ಅದನ್ನು ನೋಡುವುದಕ್ಕೂ ಅವಳಿಗೆ ಸಂಕೋಚ. ದರ್ಪ ಕೆಟ್ಟು ಒಪ್ಪ ಕುಂದಿದೆ; ಕೋಗಿಲೆಗಳ ಧ್ವನಿ ಅವಳ ಪಾಲಿಗೆ ಕಾಮದೇವನ ಕ್ರೂರವಾದ ಅಲಗಿನ ದನಿಯಂತೆ ಕರ್ಕಶವಾಗಿದೆ; ಮೇಲಾಗಿ ಆ ಅಲಗುಗಳು ವಸಂತನೆಂಬ ಕಮ್ಮಾರನು ಶಶಿಬಿಂಬದ ಹೊಸಸಾಣೆಗೆ ಕೊಟ್ಟು ಮಸೆದಂತೆ ಹರಿತವಾಗಿವೆ. ಆದ್ದರಿಂದ ಅವಳು ಕೋಗಿಲೆಯ ಧ್ವನಿಗೆ ಹೆದರಿ ನಡುಗುತ್ತಿದ್ದಾಳೆ. ಇನ್ನು ಗಿಳಿಗಳ ಅಕ್ಕರೆಯ ಮಾತುಗಳೂ ಅವಳ ಪಾಲಿಗೆ ಇಲ್ಲವಾಗಿವೆ. ಏಕೆಂದರೆ ಮಕರಧ್ವಜ(ಕಾಮ)ನೆಂಬ ವೇತ್ರಧರ ಅವನ ಮುಖದಿಂದ ಹೊರಟ ಗರ್ಜನೆಯಂತೆ ಅವಳು ಗಿಳಿಗಳ ಶಬ್ದಕ್ಕೆ ಹೆದರಿ ಭೂಮಿಗಿಳಿದು ಹೋಗಿದ್ದಾಳೆ.

ವಿರಹಾಗ್ನಿಯೆತ್ತಿ ಮನಂ ಪೊತ್ತು ಬುದ್ಧಿ ಕವರ್ದು ಅಹಂಕಾರಂ ಹೊಗೆದು ಚಿತ್ತಂ ಬೆಂದು ಹರಣಮುರಿದು ಹಮ್ಮಿಯ್ಗು ಕಣ್ಮಚ್ಚಿ ವಿರಹದ ಕರುವಿನಂತೆ ಕರುಣದ ಹಾಹೆಯಂತೆ ದೈನ್ಯದ ಸೀಮೆಯಂತೆ ಕಾರ್ಪಣ್ಯದ ನೆಳಲಂತೆ ವಿಲಾಸದ ವಿರತೆ ವಿಭ್ರಮದಭ್ರಚ್ಚಾಯೆ ಲಾವಣ್ಯದ ಬಂಜೆ ಭೋಗದ ವಿಯೋಗಿಯೆನಿಸಿರ್ದ ತರುಣಿಯರ ವಿರಹಾತಿಶಯಮಂ ಗಿರಿರಾಜಂ ಕರುಣಿಸಿ ನೋಡಿ ಕೌತುಕಮನಾಳುತ್ತಾ ವನದೊಳ್ ಬೇಯುತ್ತುಮಿರ್ಪ ವಿರಹಿಗಳ್ಗವರವರ ನಲ್ಲರನಲ್ಲಲ್ಲಿ ತಂದು ಸಲ್ಲೀಲೆಯಿಂ ಕೂಡುವುದೆಂದು ಚರರಂ ಪರಿಕಲ್ಪಿಸುತ್ತುಂ ತಿರುಗಿ ನಡೆತಂದು ಪಣ್ಯಾಂಗನಾವೀಥಿಯಂ ಪುಗುತರ್ಪಾಗಳ್,

ಮ॥ಸ್ರ॥ ಯುವತಸಂತಾನ ನಾನಾಚಲದಳಕಲಸಲ್ಲಾಸ್ಯಲೀಲಾಪ್ರಬದ್ಧಂ
ವಿವಿಧಾಗಾರಾಂಗಣ ಪ್ರಸ್ಫುರಿತ ಕೃತಕಕಾಸಾರಪಾನೀಯಭಂಗೋ ।
ದ್ಭವ ಬಂದುವ್ರಾತ ಶೀತಾವರಣನೊಲವಿನಿಂ ತೀಡಿದಂ ಸ್ತ್ರೀಕುಲೋದ್ಯ
ನ್ನವಕಸ್ತೂರೀಹಿಮಪ್ರೋನ್ಮಲಯಜಘುಸೃಣಾಮೋದಭಾರಂ ಸಮೀರಂ ॥ ೧೧೯

ದುಂಬಿಗಳ ಝೇಂಕಾರದ ಬಗೆಗೂ ಅವಳಿಗೆ ಒಂದು ಶಂಕೆ ಇದ್ದೇ ಇದೆ. ಏನೆಂದರೆ ಅದು ಬಿಡದೆ ಪ್ರಯೋಗಿಸುವ ಪ್ರಚಂಡ ಕುಸುಮಬಾಣನ ಅಂಬುಗಳ ಧ್ವನಿಯಂತೆ ಭೀಕರವಾಗಿ ಕೇಳುತ್ತಿದೆ. ಇನ್ನು ತಾಪಶಮನಕ್ಕಾಗಿ ಹೊಂಬಾಳೆಯ ಚಾಮರದ ಗಾಳಿಯನ್ನೂ ಸಹ ಅವಳು ತಡೆಯಲಾರದವಳಾಗಿದ್ದಾಳೆ; ಏಕೆಂದರೆ ಅದು ಚಿತ್ರನೆಂಬ ರಾಜನ ಪ್ರತಾಪದುರಿಯ ಧ್ವಜಪಟದ ಹಬೆಯಂತೆ ತಾಪವನ್ನೇ ಉಂಟುಮಾಡುತ್ತದೆ. ಹೀಗಾಗಿ ಅವಳು ಕೊರಗಿ ಕಳೆಗುಂದಿದ್ದಾಳೆ. ಅವಳನ್ನು ಸಖಿಯರು ಕೈಗೊಟ್ಟು ಕರೆತಂದು ತಾಪಶಮನಕ್ಕಾಗಿ ಕೊಳವನ್ನು ಪುಗಿಸಿದರು. ಆದರೆ ಅವಳ ಮೈ ಬೆಂಕಿಯಾಗಿದ್ದುದರಿಂದ ನೀರು ಸೊಂಕಿದೊಡನೆಯೆ ಚುಯ್ಯೆಂದಿತು! ನೀರು ನೊರೆಗಟ್ಟಿತು! ತೆರೆ ತನುಮುಟ್ಟಿ ಸೆಕೆಯ ಉಸಿರು ಭುಗಿಲ್ ಎಂದು ಒಗೆಯಿತು. ಕಾಯ್ದ ನೀರು ಮೈಯನ್ನು ಸುಟ್ಟಿತು. ಇದರಿಂದ ಅವಳು ಅಲ್ಲಿಂದ ಕೂಡಲೆ ಹೊರಬಂದು ಸಖಿಯರ ಮಾತ ನಂಬಿ ಕೆಟ್ಟೆನೆಂದು ಹಲುಬಿದಳು. ಮದನನಿಗೆ ಕೋಪಿಸಿಕೊಂಡು, ವಸಂತನಿಗೆ ಅಳಲಿ, ಎಳಿಲತೆಗೆ ಬಳಲಿ, ಚಿಗುರಿಗೆ ಕದ್ದು, ಕುಸುಮಗಳಿಗೆ ಬಳಲಿ, ಮಂದಮಾರುತಕ್ಕೆ ಮದವಳಿದು, ಕಾಮನ ಕಾರಾಗೃಹದಲ್ಲಿದ್ದಂತೆ ಕೇಳೀವನದಲ್ಲಿದ್ದ ಆ ಬಾಲಕಿಗೆ ಚಂದ್ರ, ದುಂಬಿಗಳು, ವಸಂತ, ಎಳೆಮಾವು, ಮಂದಮಾರುತ, ಶಿಶಿರೋಪಚಾರಗಳೆಲ್ಲ ವಿರುದ್ಧವೇ ಆದವು. ಇದರಿಂದ ದಿಕ್ಕೆಟ್ಟ ಅವಳು ವಿರಹಾಗ್ನಿಪೀಡಿತಳಾಗಿ ವಿರಹದ ಕರುವಿನಂತೆ, ಕರುಣದ ಹಾಹೆ(ಕಣ್ಣಗುಡ್ಡೆ)ಯಂತೆ ದೈನ್ಯದ ಸೀಮೆಯಂತೆ ಕಾರ್ಪಣ್ಯದಿಂದ ವಿಲಾಸವೆಲ್ಲ ಉಡುಗಿ, ಲಾವಣ್ಯವಳಿದು, ಭೋಗವಿರಹಿತಳಾಗಿದ್ದಳು. ಇಂತಹ ಅನೇಕ ಯುವತಿಯರನ್ನು ನೋಡಿ ಗಿರಿರಾಜನಿಗೆ ಕರುಣೆಯುದಿಸಿತು. ಸೋಜಿಗಗೊಂಡನು. ಅವರವರ ನಲ್ಲರಲ್ಲಿಗೆ ಅವರವರನ್ನು ಸೇರಿಸಲು ಆಜ್ಞೆ ಮಾಡಿದನು. ಅದಕ್ಕೆ ಅನುಚರರನ್ನು ನೇಮಿಸಿದನು. ಮುಂದೆ ಗಿರಿರಾಜನು ಪಣ್ಯಾಂಗನಾವೀಥಿ(ಸೂಳೆಗೇರಿ)ಯ ಕಡೆ ಹೊರಟನು. ೧೧೯. ಮಂದಮಾರುತ ಬೀಸತೊಡಗಿತು. ಆ ಮಂದಮಾರುತವು ಅನೇಕ ಯುವತಿಯರ ಚಂಚಲ ಮುಂಗುರುಳುಗಳನ್ನು ಕುಣಿಸುವ ಲೀಲೆಯಲ್ಲಿ ತೊಡಗಿದ್ದುದು; ಅನೇಕ ಮನೆಗಳ

ಚಂ॥ ಸಕಳ ನಿಕೇತನಂಗಳೊಳೆ ದರ್ಪಕನುನ್ನತಿ ದರ್ಪಕಾಜ್ಞೆ ದ
ರ್ಪಕನ ಕಥಾಳಿ ದರ್ಪಕನ ವರ್ಣನೆ ದರ್ಪಕನ ಪ್ರಶಸ್ತಿ ದ ।
ರ್ಪಕನ ವಿಳಾಸ ವಿಭ್ರಮತೆ ದರ್ಪಕನುಜ್ವಳತೇಜದೇಳ್ಗೆ ದ
ರ್ಪಕನ ಸುಕೀರ್ತಿ ದರ್ಪಕನ ದಂಡನೆ ದರ್ಪಕನಾಣೆ ಸುತ್ತಲುಂ ॥ ೧೨೦

ರತಿಯ ವಿಲಾಸದಿಂ ರತಿಯ ವಿಭ್ರಮದಿಂ ರತಿಯರ್ಚನಾಳಿಯಿಂ
ರತಿಯತಿತೇಜದಿಂ ರತಿಯ ನೋಂಪಿಗಳಿಂ ರತಿಯಾಣೆಯೋಜೆಯಿಂ ।
ರತಿಯ ಸುಗೀತದಿಂ ರತಿಯ ನವ್ಯ ಸುಧಾರಸಪೂರಗೋಷ್ಠಿಯಿಂ
ರತಿಮಯವಾಯ್ತು ಪಣ್ಯವನಿತಾಪರಿವೀಥಿಯೊಳೆಲ್ಲಿ ನೋಳ್ಪೊಡಂ ॥ ೧೨೧

ವ॥ ಮತ್ತಮಲ್ಲಿ

ಚಂ॥ ಉಳಿ ಕಳೆ ನಿಃಸ್ವನಂ ಕರೆ ಸದರ್ಥನನಿಂಬಿಡು ತಂದ ಮಂಡನಂ
ಗಳನೊಸೆದಳ್ಕಲೆಂ ರತಿಯನರ್ಚಿಸು ಕಾಮನ ನೋಂಪಿಗಿಕ್ಕುಸಂ ॥
ಕುಳ ಫಳ ಪುಷ್ಪಮಂ ತರಿಸು ನವ್ಯದುಕೂಲ ಸುಗಂಧ ವ್ಯಂದಮಂ
ತಳಿ ನವನಂದನಕ್ಕೆ ನಡೆಯೆಂಬ ರವಂ ಸಲೆ ಗೇಹಗೇಹದೊಳ್ ॥ ೧೨೨

ವ॥ ಅಂತು ಸುಡಿವ ಮದನ ಪ್ರತಾಪವಿತತ ಚತುರೋಕ್ತಿಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳ್ ಕೆಲಬರ್ ಮುಗ್ಧೆಯರ್ಗೆ ವಿದಗ್ಧೆಯರ್ ಲಲಿತ ಚರಿತಮಂ ಕಲಿಸುತಿರ್ದರದೆಂತೆದೊಡೆ,

ಅಂಗಳಗಳಲ್ಲಿರುವ ಕೃತಕಮಡುಗಳ ನೀರನ್ನು ಚದುರಿಸುವುದರಿಂದ ಸಿಡಿದ ಜಲ ಬಿಂದುಗಳಿಂದ ತಣ್ಣಗಿದೆ, ಸ್ತ್ರೀಯರು ಲೇಪಿಸಿಕೊಂಡಿರುವ ಕಸ್ತೂರಿ ಶ್ರೀಗಂಧಗಳ ಸೌರಭದಿಂದ ಭಾರವಾಗಿ ಮೆಲ್ಲ ಮೆಲ್ಲನೆ ತೀಡುತ್ತಿದೆ. ಅಂಥ ಮಂದಮಾರುತಕ್ಕೆ ಮೈಗೊಟ್ಟು ಗಿರಿರಾಜ ಮುಂದೆ ಬಂದರೆ ೧೨೦. ಎಲ್ಲ ಮನೆಗಳಲ್ಲಿಯೂ ಮನ್ಮಥನ ವಿಷಯಕವಾದ ಕಥಾಲಾಪವೇ ನಡೆದಿತ್ತು. ಮನ್ಮಥನ ಉನ್ನತಿ, ಅವನ ಕಥೆಗಳು, ಅವನ ವರ್ಣನೆ, ಪ್ರಶಸ್ತಿ ವಿಳಾಸಗಳ ವಿಚಾರ ನಡೆದಿತ್ತು, ೧೨೧. ಅದರ ಜೊತೆಗೆ ರತಿಯ ವಿಲಾಸ, ವಿಭ್ರಮ, ಅವಳ ತೇಜಸ್ಸು, ನೋಂಪಿಗಳು, ರತಿಗೀತಗಳು ಆ ಸೂಳೆಗೇರಿಯಲ್ಲಿ ಎಲ್ಲೆಲ್ಲಿ ನೋಡಿದರೂ ರತಿಮನ್ಮಥರ ಪ್ರಸ್ತಾಪವೇ ನಡೆದಿತ್ತು. ೧೨೨. ಯಾವ ಮನೆಯಲ್ಲಿ ನೋಡಿದರೂ ಉಳಿ, (ಬಿಡು) ಕಳೆ, ತ್ಯಾಗವಾದ ದರಿದ್ರನನ್ನು. ಕರೆ, ಹಣವುಳ್ಳವನನ್ನು, ತಂದ ಭೂಷಣಗಳನ್ನು ಇಂಬಿಡು; ರತಿಯನ್ನು ಪ್ರೇಮದಿಂದ ಅರ್ಚಿಸು, ಕಾಮನ ವ್ರತಕ್ಕೊ ಪೂಜೆಗೆ ಇಕ್ಷುದಂಡ ಫಲಪುಷ್ಪಗಳನ್ನು ತರಿಸು, ಹೊಸದುಕೂಲ ಸುಗಂಧ ದ್ರವ್ಯಗಳನ್ನು ಧರಿಸಿಕೊ, ಉದ್ಯಾನಕ್ಕೆ ನಡೆ ಮುಂತಾದ ಮಾತುಕತೆಗಳೇ ನಡೆಯುತ್ತಿದ್ದವು. ವ॥ ಆ ಬಗೆಯ ಮನ್ಮಥ ಕಥಾಲಾಪಗಳನ್ನು ಕೇಳುತ್ತ, ಬರಲು ಮುಂದೆ ಒಂದು ಕಡೆ ಕೆಲವರು ವಿದಗ್ಧೆಯರು ಮುಗ್ಧೆಯರಿಗೆ ಲಲಿತಶಿಕ್ಷಣವನ್ನು ಕೊಡುತ್ತಿದ್ದರು.

ಕಂ॥ ಓದಿಸದಿರ್ ಗಿಳಿಯಂ ನಿ
ನ್ನೀ ದಂತಮನೆಸೆವ ದಾಡಿಮೀಬೀಜಂ ಗೆ ।
ತ್ತಾದರದಿಂ ಕರ್ದುಕುಗುಮೆಂ
ದೋದಿಸುತಿರ್ದಳ್ ವಿದಗ್ಧೆ ಮುಗ್ಧೆಯನೊಲವಿಂ ॥ ೧೨೩

ತಿಳಿವಿಲ್ಲದೆ ಶಶಿಕಾಂತದ
ಕಳಶಮನೇಕಾಂತೆ ಕಾಂತೆ ನಿನ್ನ ಮುಖಮೇಂದೂ ।
ಜ್ವಲ ಕೌಮುದಿಯಿಂದೊಸರ್ದಪು
ದಿಳಿಪಿಳಿಪೆಂದೊರ್ವ ಮುಗ್ಧೆಯಂ ಸಖಿ ನುಡಿದಳ್ ॥ ೧೨೪

ಕಂಜದಳೇಕ್ಷಣೆ ನಿನ್ನೀ
ಮಂಜುಳ ರವದಿಂದೆ ಪಾಡೆ ನವಪರಪುಷ್ಟ ।
ಪ್ರಾಂಜುಳ ಮಧುರಧ್ವನಿಯೆಂ
ದಂಜುವರೆಲೆ ಮಗಳೆ ಪಾಡದಿರ್ ವಿರಹಿಣಿಗಳ್ ॥ ೧೨೫

ತಿಳಕಮದಿಲ್ಲದೆ ಬೆಳ್ದಿಂ
ಗಳೊಳಗೆ ನಿಂದಿರದಿರಬಲೆ ಸಕಳಂಕಂ ನಿ ।
ನ್ನೊಳಸೂಯೆಗೊಂಡು ನೋಡುವ
ನೆಳೆಯಳೆ ಚಂದ್ರಮನ ದಿಟ್ಟಿ ತಾಗದೆ ನಿನ್ನಂ ॥ ೧೨೬

ವ॥ ಎಂದು ನುಡಿವ ವಿದಗ್ಧೆಯರ ಪ್ರೌಢವಚನಂಗಳಂ ಕೇಳುತಿರ್ಪ ಮುಗ್ಧೆಯರೊಳೊರ್ವಳ್ ಬೆಳ್ದಿಂಗಳೊಳ್ ನಿಂದು,

೧೨೩. ಪ್ರೌಢೆಯೊಬ್ಬಳು ಮುಗ್ಧೆಗೆ ಹೀಗೆ ಶಿಕ್ಷಣ ನೀಡುತ್ತಿದ್ದಾಳೆ. ಗಿಳಿಗೆ ಓದು ಕಲಿಸಬೇಡ. ಹಾಗೆ ಓದಿದರೆ ಆ ಗಿಳಿಯು ನಿನ್ನ ಈ ದಂತಪಂಕ್ತಿಯನ್ನು ದಾಳಿಂಬೆ ಬೀಜವೆಂದು ಭಾವಿಸಿ ಕುಕ್ಕುತ್ತದೆ! ೧೨೪. ಮತ್ತೊಬ್ಬ ಮುಗ್ಧೆಯನ್ನು ಕುರಿತು ವಿದಗ್ಧೆ ಹೀಗೆ ಹೇಳುತ್ತಿದ್ದಾಳೆ. "ಒಬ್ಬ ಮುಗ್ಧೆ ಚಂದ್ರಕಾಂತಮಣಿಯ ಕಳಶ ಹೊತ್ತಿದ್ದಳು. ಅವಳನ್ನು ಕಂಡ ವಿದಗ್ಧೆ "ಎಲೆ ಕಾಂತೆ, ನಿನ್ನ ಮುಖಚಂದ್ರನ ತಿಂಗಳಿಂದ ಆ ಚಂದ್ರಕಾಂತ ಕಳಶವು ಇನ್ನು ನೀರ್ಗರೆಯುತ್ತದೆ! ಬೇಗನೆ ಅದನ್ನು ಕೆಳಗಿಳಿಸು! ಇಳಿಸು!" ಎಂದು ಹೇಳುತ್ತಿದ್ದಾಳೆ. ೧೨೫. ಎಲೌ ಕಮಲನಯನೆ, ನೀನು ಹಾಡಬೇಡ! ಏಕೆಂದರೆ ನಿನ್ನ ಮಂಜುಳಧ್ವನಿಯನ್ನು ಕೋಗಿಲೆಯ ಮಧುರ ಧ್ವನಿಯೆಂದು ವಿರಹಿಗಳು ಅಂಜುತ್ತಾರೆ. ೧೨೬. ಎಲೆ ಅಬಲೆ, ಹಣೆಗೆ ತಿಳಕವನ್ನಿಡದೆ ಬೆಳದಿಂಗಳೊಳಗೆ ನಿಂತಿರಬೇಡ. ಏಕೆಂದರೆ ಕಳಂಕವುಳ್ಳವನು ಚಂದ್ರ, ಅವನು ನಿನ್ನನ್ನು ಕಂಡು ಅಸೂಯೆ ಪಡುವನು, ಅವನ ದೃಷ್ಟಿ ನಿನಗೆ ತಾಗುವುದಿಲ್ಲವೆ? ವ॥ ಹೀಗೆ ಹೇಳುತ್ತಿರುವ ಮಾತುಗಳನ್ನು ಕೇಳಿದ ಮುಗ್ಧೆಯೊಬ್ಬಳು ಬೆಳೆದಿಂಗಳಲ್ಲಿ ನಿಂತು

ಕಳಶೋದಕದೊಳ್ ಚಂದ್ರನ
ನೆಳಲಂ ಕಂಡೆಲೆ ಸಿಲ್ಕಿದಂ ಶಶಿಯೆನುತಂ ।
ದೊಳಪೊಕ್ಕು ನೋಡಿ ಕಾಣದೆ
ಗಳಿಲನೆ ತಡವರಿಸಿ ತರುಣಿ ತಳವೆಳಗಾದಳ್ ॥ ೧೨೭

ವ॥ ಮತ್ತಮೊರ್ವಳ್

ಕಂ॥ ಕರತಳ ಕಳಶೋದಕದೊಳ್
ಸುರುಚಿರ ಚಂದ್ರಮನ ನೆಳಲನೂನಂ ತೋಱು ।
ತ್ತಿರೆ ಬೆಳ್ಪಿವಟ್ಟಲೆಂದಾ
ತರುಣಿ ಕರಂ ತೆಗೆದು ತೆಗೆದು ಬೆಱಗಾಗಿರ್ದಳ್ ॥ ೧೨೮

ಮಿಗೆ ದಟ್ಟಯ್ಸಿದ ಚಂದ್ರಿಕೆ
ಸೊಗಯಿಸಿ ಕಂಡೋರ್ವ ಮುಗ್ಧೆ ದುಗ್ಧಮಿದೆಂದೆಂ ।
ದಗಲದೆ ಬದ್ಧಾಂಜಳಿಯಿಂ
ಮೊಗೆ ಮೊಗೆದಾ ಬಯಲನೀಂಟ ಬಳಲುತ್ತಿರ್ದಳ್ ॥ ೧೨೯

ವ॥ ಅದಲ್ಲದೆಯುಂ ಮತ್ತಮೊಂದೆಡೆಯೊಳೊರ್ವ ಮುಗ್ಧೆ ಮನೋವಲ್ಲಭಂ ಬನದದಿಂ ಬನಕ್ಕೆ ಪೋಗೆ ಸೈರಿಸಲಾಱದಿರ್ಪಲ್ಲಿ

ಕಂ॥ ಮುಗುಳೊಳ್ ಕಿಡಿ ಬೆಳ್ದಿಂಗಳೊ
ಳಗೆ ದಳ್ಳುರಿ ಪೂವಿನೊಳ್ ಪುಗುಳ್ ಮೂಡುವವೋಲ್ ।
ಮಿಗೆ ಮುಗ್ಧೆಯೊಳತಿವಿರಹಂ
ನೆಗೆದುದು ಮತ್ತೊರ್ವರಱಿಯರಂತಿಂತುಸುರಳ್ ॥ ೧೩೦

೧೨೭. ಕಲಶದ ನೀರಿನಲ್ಲಿ ಚಂದ್ರನ ನೆರಳನ್ನು ಕಂಡು, ವಿಸ್ಮಯಗೊಂಡು ಎಲೆಲೆ, ಚಂದ್ರ ನನ್ನ ಕೈಗೆ ಸಿಕ್ಕಿದ ಎಂದು ಭ್ರಮಿಸಿ, ಅವಳು ಕಲಶದ ಒಳಗನ್ನೆಲ್ಲ ತಡಕಿ ಚಂದ್ರನನ್ನು ಕಾಣದೆ ತಳಮಳಗೊಂಡಳು. ೧೨೮. ಮತ್ತೊಬ್ಬ ತರುಣಿ, ಅವಳ ಕೈಲಿರುವ ಕಲಶದ ನೀರಿನಲ್ಲಿ ಚಂದ್ರ ಪ್ರತಿಬಿಂಬಿಸಿದ್ದಾನೆ. ಅದರಿಂದ ಅವಳು ಅದನ್ನು ಬೆಳ್ಳಿಯ ಬಟ್ಟಲೆಂದು ಭ್ರಮಿಸಿ, ಬೆರಗಾದಳು, ೧೨೯. ಬೆಳದಿಂಗಳು ದಟ್ಟವಾಗಿ ಹಬ್ಬಿತ್ತು. ಅದನ್ನು ಕಂಡ ಒರ್ವ ಮುಗ್ಧೆ ಅದನ್ನು ಹಾಲು ಎಂದು ಭ್ರಮಿಸಿ, ಬೊಗಸೆ ಮಾಡಿ ಮೊಗೆಮೊಗೆದು ಬಯಲನ್ನೇ ಕುಡಿಯತೊಡಗಿದ್ದಳು. ವ॥ ಒಂದೆಡೆಯಲ್ಲಿ ಒಬ್ಬ ಮುಗ್ಧೆಯು ತನ್ನ ಪ್ರಿಯನು ವಿನೋದಕ್ಕಾಗಿ ವನಕ್ಕೆ ಹೋಗಿದ್ದ. ಆಗ ಆ ಮುಗ್ಧೆ ವಿರಹ ಕಾತರೆಯಾದಳು. ೧೩೦. ಅರಳುವ ಮೊಗ್ಗೆಯಲ್ಲಿ ಕಿಡಿ, ಬೆಳದಿಂಗಳಲ್ಲಿ ಕಾಡ್ಗಿಚ್ಚು, ಹೂವಿನಲ್ಲಿ ಬೊಕ್ಕೆ ಮೂಡುವಂತೆ ಆ ಮುಗ್ಧೆಯಲ್ಲಿ ವಿರಹ ಮೂಡಿತು. ಅದು ಯಾರಿಗೂ ಗೊತ್ತಾಗಲಿಲ್ಲ; ಅವಳೂ ಯಾರಿಗೂ ಏನೂ ಹೇಳಳು!

ಕಂ॥ ಒಳಗಣ್ಗಂ ಪೊಱಗಣ್ಗಂ
ಬಳಲುತ್ತೆಡೆಯಾಡುವಳ್ ಕರಂ ಬಸುಸುಯ್ವಳ್ ।
ಮುಳಿವಳ್ ತನ್ನೊಳ್ ತಾನೇ
ತಿಳಿವಳ್ ಕಳೆಗುಂದುವಳ್ ಕನಲ್ವಳ್ ಕಾಯ್ವಳ್ ॥ ೧೩೧

ಒಳಗೊಳಗೆ ಬಳೆ ಬಳೆದು ಘಟ
ದೊಳಗಣ ದೀಪ್ತಿಯವೊಲಿರ್ಪ ಘನವಿರಹಮನಂ ।
ತೊಳಕೊಂಡು ನುಡಿಯಲಱೆಯದೆ
ಕಳೆಗುಂದಿದ ಚಂದ್ರನಂತೆ ಕರಗುತ್ತಿರ್ದಳ್ ॥ ೧೩೨

ಇರೆ ಹರಣಂ ನಡೆತರ್ಪಂ
ತಿರೆ ವಲ್ಲಭನಲ್ಲಿ ಬರೆ ಸರಾಗೋತ್ಸವದಿಂ ।
ಕರೆದಿದಿರ್ಗೊಂಡಿರದದಿರ್ಗೊಂ
ಡೆರೆದಿದಿರ್ಗೊಂಡಪ್ಪಿಯಪ್ಪಿಯರಲುತ್ತಿರ್ದಳ್ ॥ ೧೩೩

ಭರದಿಂ ಬಂದಚ್ಚಳಿಯದೆ
ಸಿರಿಮಂಚದ ಮೇಲೆ ಲೀಲೆ ಮಿಕ್ಕಾದರದಿಂ ।
ತರದಿಂ ಪುಳಕಂ ನೆಗೆಯು
ತ್ತಿರೆ ಸುರತಾಂಬುಧಿಯ ಸುಧೆಯ ಸುಳಿಯೊಳಗಿರ್ದರ್ ॥ ೧೩೪

ಮನವಲರೆ ಮುಖವಲರೆ ಲೋ
ಚನವಲರೆ ಕಪೋಲವಲರೆ ಕಂಠವಲರೆ ಸು ।
ಯ್ಯನುವಲರೆ ತನುವಲರೆ ಮಿ
ಕ್ಕನುಭವಸುಖವಲರೆ ಸುರತಸುಖದೊಳಗಿರ್ದರ್ ॥ ೧೩೫

೧೩೧. ಒಳಗಡೆಗೂ ಹಾಗೂ ಹೊರಗಡೆಗೂ ಬಳಲುತ್ತ ಎಡೆಯಾಡುತ್ತಿದ್ದಾಳೆ. ನಿಟ್ಟುಸಿರು ಬಿಡುತ್ತಿದ್ದಾಳೆ, ಕೋಪಿಸಿಕೊಳ್ಳುತ್ತಾಳೆ, ತನ್ನಲ್ಲಿ ತಾನೆ ಪ್ರಿಯನಿಗಾಗಿ ಕಳೆಗುಂದುವಳು, ಪ್ರಸನ್ನಳಾಗುವಳು. ೧೩೨. ವಿರಹದ ಉರಿ ಒಳಗೊಳಗೆ ಬೆಳೆಯುತ್ತಿದೆ. ಘಟದಲ್ಲಿನ ದೀಪ್ತಿಯಂತೆ ಇರುವ ವಿರಹದಿಂದ ಅವಳು ಬಳಲಿದ್ದಾಳೆ. ಅದನ್ನು ಯಾರಿಗೂ ಹೇಳಲರಿಯದೆ ಅವಳು ಕೃಷ್ಣಪಕ್ಷದ ಚಂದ್ರನಂತೆ ಕೊರಗುತ್ತಿದ್ದಾಳೆ. ೧೩೩. ಹೀಗಿರುವಾಗ ಅವಳ ಪ್ರಾಣವೇ ಬರುವಂತೆ ಪ್ರಾಣವಲ್ಲಭ ಬಂದ. ಅವಳ ಉತ್ಸಾಹ ಉಕ್ಕಿತು. ಅವನನ್ನು ಕರೆದು ಇದಿರ್ಗೊಂಡಳು. ಇರದೆ ಇದಿರ್ಗೊಂಡು, ಎರೆದು ಇದಿರ್ಗೊಂಡು, ಅವನನ್ನು ಅಪ್ಪಿ ಅಪ್ಪಿ ಅರಳಿಹೋದಳು. ೧೩೪. ರಸಾವೇಶದಿಂದ ಪ್ರಿಯ ಪ್ರಿಯೆಯರು ಸಿರಿಮಂಚವನ್ನೇರಿ ಸಾತ್ವಿಕಭಾವಾದಿಗಳಿಂದ ಸ್ವೇದ, ಪುಳಕಗಳೇಳುತ್ತಿರಲು ಸುರತಾಂಬೋಧಿಯಲ್ಲಿ ಮುಳುಗಿ ತನ್ಮಯರಾಗಿದ್ದರು. ೧೩೫. ಸುರತಮಗ್ನವಾಗಿರುವ ಅವರ ಮನ, ಲೋಚನ, ಕಪೋಲ, ಕಂಠ, ಉಸಿರು,

ವ।। ಆ ಸಮಯದೊಳ್

ಕಂ।। ಪುದಿದಾಲಿಂಗನದೊಳಗಾ
ವುದನಾವುದು ಸೋಂಕಿತದೆ ಮುಖೋತ್ಸವಮದೆ ಕಾ ।
ಮದಮದೆ ಮದನವಿಲಾಸಾ
ಸ್ಪದಮದೆ ಸರ್ವಾಂಗ ಹರ್ಷಮದೆ ಸಮಯೋಗಂ ।। ೧೩೬

ವ।। ಇಂತು ಸಮಾನರಾಗಸಂಭೂತ ಸುಖಮುಖದೊಳಿರ್ದು ಭರಿತಮಾದ ಸುರತಶ್ರಾಂತಿಯಿಂ ಪೊಱಪೊಣ್ಮಿದ ಸುಖಸ್ವೇದಬಿಂದುಗಳನಾಱಿಸಲೆಂದು ಮೀಱಿ ಬಂದು ನಿಜನಿಳಯ ವೇದಿಕಾಮಧ್ಯದೊಳಿರ್ದ ಮುಗ್ಧೆಯರಂ ಗಿರಿಪತಿಗೆ ನಾಗರಿಕಂ ತೋಱುತ್ತುಂ ಬರೆವರೆ ಮುಂದೊಂದೆಡೆಯೊಳೊರ್ವ ಮುಗ್ಧೆ ವಲ್ಲಭನೊಳ್ ಮುಳಿದಂತೆ ಮಱೆದು ನುಡಿಯದಿರ್ಪಲ್ಲಿ ತತ್ಪ್ರಿಯನಿಂತೆಂದಂ

ಕಂ।। ಮುಗ್ಧೇ ಕೈರವನೇತ್ರೆ ವಿ
ದಗ್ಧೆಯವೋಲ್ ಮುಳಿಸನಾಂತೊಡಾನೆಂತಿರ್ಪೆಂ ।
ದಗ್ಧಾಂತರಂಗನಾದೆಂ
ದುಗ್ಧಂ ವಿಷಮಾದೊಡೇನನೆಂದಪೆನಿಳೆಯೊಳ್ ।। ೧೩೭

ವ।। ಎಂದು ನುಡಿದು ಸುಖದೊಳಿರೆ ಮತ್ತಮೊಂದೆಡೆಯೊಳ್

ಕಂ।। ಬಳೆದೊಡಿಸಲೆಂದು ಸುದತಿಯ
ಕೆಳೆಯನದೊರ್ವಂ ಕರಕ್ಕೆ ಕೆಯ್ನೀಡೆ ಸುಖೋ ।
ಜ್ಜ್ವಳೆಯ ಶಶಿಮುಖಿಯ ಚಿತ್ತಂ
ಗೊಳಿಸುವ ಸಖಿ ಬೇಡ ಬೇಡವೆನುತುಂ ನುಡಿದಳ್ ।। ೧೩೮

ತನುಗಳೆಲ್ಲ ವಿಕಾಸಹೊಂದಿರಲು ಅವರು ಸುರತಸುಖದಲ್ಲಿದ್ದರು. ೧೩೬. ಗಾಢಾಲಿಂಗನ ಸಮಯದಲ್ಲಿ ಯಾವ ಅಂಗವನ್ನು ಯಾವುದು ಸೋಂಕುವುದೋ ಆಯಾ ಅಂಗವು ಮದನೋತ್ಸಾಹದಿಂದ ಸರ್ವಾಂಗ ಹರ್ಷಸಮಯೋಗದಲ್ಲಿ ಮಗ್ನವಾಗಿತ್ತು. ವ।। ಹೀಗೆ ಸಮರತಿ ಸುಖವಿಶೇಷದಲ್ಲಿದ್ದು ಮೈಮೇಲೆ ಹೊಮ್ಮಿದ ಸುಖಸ್ವೇದ ಬಿಂದುಗಳನ್ನು ಆರಿಸಲು ಮನೆಯ ಅಂಗಳದ ವೇದಿಕೆಗೆ ಬಂದಿದ್ದ ಮುಗ್ಧೆಯರನ್ನು ನಾಗರಿಕನು ರಾಜನಿಗೆ ತೋರುತ್ತ ಮುಂದೆ ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಮುಗ್ಧೆ ತನ್ನ ವಲ್ಲಭನಲ್ಲಿ ಕೋಪಿಸಿಕೊಂಡು ನುಡಿಯದಿರುವಾಗ ಅವಳಿಗೆ ಪ್ರಿಯನು ಹೀಗೆ ಹೇಳಿದ. ೧೩೭. ಎಲೌ ಮುಗ್ಧೆ, ನೀನು ವಿದಗ್ಧೆ (ಪ್ರೌಢೆ)ಯಂತೆ ಕುಪಿತಳಾದರೆ ನಾನು ಇನ್ನೆಂತು ಇರಬಲ್ಲೆ! ಈಗಂತೂ ನನ್ನ ಅಂತರಂಗವೆಲ್ಲ ದಗ್ಧವಾಗಿದೆ. ಹಾಲು ವಿಷವಾಗುವುದಾದರೆ ಇನ್ನೇನು ಹೇಳುವುದಿದೆ?" ಎಂದನು. ೧೩೮. ಒಬ್ಬ ಕೆಳೆಯನು ಬಳೆ ತೊಡಿಸುವುದಕ್ಕಾಗಿ ಸುದತಿಯ ಹಸ್ತಕ್ಕೆ ಕೈಚಾಚಿದ. ಆಗ ಆ ಶಶಿಮುಖಿಯ ಸಖಿಯೋರ್ವಳು ಬೇಡ ಬೇಡವೆಂದು ಹೇಳಿ ಸಖಿಯ ಮನಸ್ಸನ್ನು

ಪರಿರಂಭಾರಂಭಣದಾ
ತುರಸಮಯದೊಳಂ ಮನೋಹರ ವ್ಯಾಜದೊಳಂ ।
ವಿರಹದೊಳಂ ತನ್ನಿನಿಯಂ
ಬರೆ ಸುಖದೊಳಗಬಲೆಗೆಂತು ನಿಲ್ವುವು ಬಳೆಗಳ್ ॥ ೧೩೯

ವ॥ ಎಂದಿಂತು ನುಡಿವ ಸರಸೋಕ್ತಿಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳೊರ್ವ ಮಧ್ಯಮನಾಯಕಿಯ ವಿರಹಾತಿಶಯಮಂ ಪ್ರೇಮಸಖಿ ತನ್ನ ಕೆಳದಿಗೆ ಪೇಳತ್ತುಮಿರ್ದಳದಂತೆಂದೊಡೆ –

ಕಂ॥ ಅಸವಸದಿಂದಿನನುಳಿದೊಡೆ
ದೆಸೆ ಕಾವುಳ ಮಸಗಿ ಮಾನಿನಿಗೆ ಮಧು ಮಱುಕಂ ।
ಸಸಿ ಬಿಸಿ ಕಾವಂ ದಾವಂ
ಬಿಸಜಂ ಬಿಸಮನಿಲನನಲನೆನಿಸಿತ್ತಾಗಳ್ ॥ ೧೪೦

ವ॥ ಮತ್ತಮಲ್ಲದೆ,

ಚಂ॥ ವಿರಹದೊಳೀಕೆಗಕ್ಕ ಬಿಸಜಂ ವಿಷಜಂ ಹಿಮರೋಚಿ ಸೂಚಿ ಪಾ
ದರಿ ದರಿ ಮಾವು ಪಾವು ಕುಮುದಂ ಕುಮುದಂ ತನಿಗರ್ಬು ಮರ್ಬು ಕ ।
ತ್ತುರಿಯುರಿ ಗಾಳಿ ದಾಳಿ ಕುಸುಮಂ ವಿಷಮಂ ಪೊಸಬಾಳೆ ಬಾಳ್ ವನೋ
ತ್ಕರವುರಿ ಹಂಸೆ ಹಿಂಸೆ ಮೊರೆವಾಱಡಿಯಾಱಡಿ ತಿಂಗಳಿಂಗಳಂ ॥ ೧೪೧

ವ॥ ಮತ್ತಮದಲ್ಲದೆ

ಅರಳಿಸಿದಳು. ೧೩೯. ಆಲಿಂಗಿಸುವ ಆತುರದಲ್ಲಿ, ಮನೋಹರವಾದ ವ್ಯಾಜದಲ್ಲಿ, ವಿರಹದಲ್ಲಿ ತನ್ನ ಇನಿಯನು ಬಂದನೆಂದರೆ ಬಳೆಗಳು ಹೇಗೆ ತಾನೆ ಉಳಿದಾವು! ವ॥ ಹೀಗೆ ನಡೆದಿರುವ ಸರಸಸಲ್ಲಾಪಗಳನ್ನು ಕೇಳುತ್ತಾ ಮುಂದೆ ಬಂದರೆ ಅಲ್ಲೊಂದು ಕಡೆಯಲ್ಲಿ ಒಬ್ಬ ಪ್ರೇಮಸಖಿಯು ಮಧ್ಯಮನಾಯಕಿಯ ವಿರಹಾತಿಶಯವನ್ನು ತನ್ನ ಕೆಳದಿಗೆ ಹೀಗೆ ಹೇಳುತ್ತಿದ್ದಾಳೆ. ೧೪೦. ರವಿ ಅವಸರವಸರವಾಗಿ ಮುಳುಗಿದ. ದೆಸೆದೆಸೆ ಕಾವುಳವು ಮಸಗಿತು. ಆಗ ಆ ಮಾನವತಿಗೆ ವಿರಹದ ದೆಸೆಯಿಂದ ಮಧುಮಾಸವು ಮರುಕವನ್ನು ಹುಟ್ಟಿಸಿತು, ಶಶಿ ಬೆಚ್ಚಗೆ ಕಂಡ, ಕಾಮನು ದಾವಾಗ್ನಿಯಾದ, ಕಮಲವು ವಿಷದಂತೆ ಅಸಹ್ಯವಾಯಿತು. ಗಾಳಿಯು ಬೆಂಕಿಯಂತಾಯಿತು. ವಿರಹಕಾಲದಲ್ಲಿ ಅನುಕೂಲವಾದ ವಸ್ತುಗಳೂ ಪ್ರತಿಕೂಲವಾಗುತ್ತವೆ. ೧೪೧. ಎಲೌ ಅಕ್ಕ! ವಿರಹ ಕಾಲದಲ್ಲಿ ಈಕೆಗೆ ಬಿಸಜಕಮಲವು ವಿಷಜವಾಗುತ್ತದೆ. ಹಿಮಕರನು ಸೂಚಿ, ಪಾದರಿ ಹೂವುದರಿ (ಕೊರಕಲು), ಮಾವು; ಹಾವು, ನೈದಿಲೆಯು ಕುತ್ಸಿತ ಮೋದಜನಕ, ತನಿಗರ್ಬು (ಕಬ್ಬು) ಮಬ್ಬು, ಕಸ್ತೂರಿಯ ಗಾಳಿಯೂ ಧಾಳಿಯೇ! ಕುಸುಮ-ವಿಷಮ, ಹೊಸಬಾಳೆ ಬಾಳ (ಖಡ್ಗ) ವನೋತ್ಕರ, ಹಂಸೆ, ದುಂಬಿಗಳು ಮುಂತಾದುವೆಲ್ಲ

ಕಂ॥ ಅತಿವಿರಹದೊಳೀ ಲಲನೆಗೆ
ಮತಿ ದುರ್ಮತಿ ವೀಣೆ ಸಾಣೆ ಸೋಮಂ ಭೀಮಂ ।
ಲತೆಯಸಿಲತೆ ಸಂಪಗೆ ಪಗೆ
ನುತಕೀರಂ ಘೋರಮನ್ಯಪುಷ್ಪಮನಿಷ್ಟಂ ॥ ೧೪೨

ವ॥ ಎಂದು ನುಡಿವಾಗಳ್

ಕಂ॥ ಬಿಸಿಲ ಚಕೋರಿಗೆ ಚಂದ್ರಂ
ಪಸಿದ ಶುಕಂಗಿದಿರೊಳಮೃತಫಳಮಿವಿರ್ವರ್ಪರ್ಗಂ ।
ತಸಮಾನ ಸುಧಾಶೀಲಂ
ರಸಮಯ ಸುಖಜಲಧಿ ವಲ್ಲಭಂ ನಡೆತಂದಂ ॥ ೧೪೩

ಚಂ॥ ನಡೆತರೆ ಕಂಡು ಜೀವಮಿದಿರ್ವಂದವೊಲೊರ್ವರನೊರ್ವರೀಕ್ಷಿಸು
ತ್ತಡಿಯಿಡುತೊಂದಿ ಮುಂದುವರಿವಿಂದ್ರಿಯದಿಂ ನಡೆ ಮುಂಚಿ ಮೀಱೆ ಬಂ ।
ದೆಡೆಗುಡದಪ್ಪಿಯಪ್ಪಿ ನಿರತಂ ಸುರತಾಬ್ಧಿಯೊಳಾಳುತೇಳುತುಂ
ಕಡೆಮೊದಲಿಲ್ಲದೆಳ್ತರದ ಕಾಮಿಗಳಿರ್ದರನೂನ ಸಂಗದೊಳ್ ॥ ೧೪೪

ಮ॥ಪ್ರ॥ ಘನಗಾಢಾಲಿಂಗನಂ ಚಾಪಳಗಳಮತಿದೈನ್ಯೋಕ್ತಿಯುಕ್ತಾಧರಂ ಚುಂ
ಬನಸೀತ್ಕಾರಂ ಸ್ಮಿತಾಸ್ಯಂ ಮುಕುಳಿತನಯನಂ ಲಾಸ್ಯನೀಲಾಳಕಂ ಕಂ ।
ಪನಹಸ್ತಂ ಸ್ವೇದಗಂಡಂ ಪುಳಕಭರಿತಗಾತ್ರಂ ಸುಖಶ್ವಾಸಮಾನಂ
ದನಿವಾಸಂ ಲೀನಚಿತ್ತಂ ಗುರುತರ ಸುರತಂ ಕೂಡೆ ಕೂಡುತ್ತುಮಿರ್ದರ್ ॥ ೧೪೫

ದುಃಖದಾಯಕಗಳೇ ಆಗಿವೆ. ೧೪೨. ಈ ಲಲನೆಗೆ ವಿರಹಕಾಲದಲ್ಲಿ ಮತಿ-ದುರ್ಮತಿ, ವೀಣೆ-ಸಾಣೆ, ಸೋಮ (ಚಂದ್ರ) ಭಯಂಕರ, ಲತೆ, ಅಸಿ(ಖಡ್ಗ)ಲತೆ, ಸಂಪಿಗೆಯು ಹಗೆ ಕೀರ (ಸಾರಿಕೆ) ಘೋರ, ಕೋಗಿಲೆ- ಅನಿಷ್ಟಕರವಾಗುತ್ತದೆ. ೧೪೩. ಅಷ್ಟು ಹೊತ್ತಿಗೆ ಅವಳ ವಲ್ಲಭ ಅಲ್ಲಿಗೆ ಬಂದ. ಆತ ಸುಧಾಶೀಲ ರಸಮಯ ಸುಖಜಲನಿಧಿಯಂತಿದ್ದ. ಅವನು ಬಂದುದು ಚಕೋರಿಗೆ ಚಂದ್ರ, ಹಸಿದ ಗಿಳಿಗೆ ಎದುರಿನಲ್ಲಿ ಅಮೃತ ಫಲ, ಎದುರಿಗೆ ಬರುವಂತೆ ಆಯಿತು. ೧೪೪. ಪ್ರಿಯನು ಬಂದುದು ಅವಳಿಗೆ ತನ್ನ ಜೀವವೇ ಎದುರಿಗೆ ಬಂದಂತಾಯಿತು. ಅವರು ಒಬ್ಬರನ್ನೊಬ್ಬರು ನೋಡಿ ಮುಂದಡಿಯಿಟ್ಟು ಆಲಿಂಗಿಸಿಕೊಂಡು, ಮುಂದುವರಿದ ಇಂದ್ರಿಯದಿಂದ ಪರಸ್ಪರ ಆಸೆ ತೀರೆ ಮತ್ತೆ ಮತ್ತೆ ಆಲಿಂಗಿಸಿ ಸುರತಾಬ್ಧಿಯಲ್ಲಿ ಮುಳುಗಿ ಕಡೆ ಮೊದಲಿಲ್ಲದ ಸಮಸುಖದಲ್ಲಿ ಆ ಕಾಮಿಗಳಿದ್ದರು. ೧೪೫. ಗಾಢಾಲಿಂಗನ, ಚಪಲಗಳ, ಅತಿ ದೈನ್ಯೋಕ್ತಿಯುಕ್ತವಾದ ತುಟಿ, ಚುಂಬನಕಾಲದ ಸೀತ್ಕಾರ, ನಗೆಮೊಗ, ಮುಚ್ಚಿದ ಕಣ್ಣು, ನರ್ತಿಸುವ ಮುಂಗುರುಳು, ನಡುಗುವ ಹಸ್ತ, ಬೆಮೆತ ಕಪೋಲ, ನವಿರೆದ್ದ ಶರೀರ, ಸುಖಕರವಾದ ನಿಟ್ಟುಸಿರು, ತನ್ಮಯವಾದ ಮನಸ್ಸುಳ್ಳವರಾಗಿ ಅವರು ಗಾಢ ಸುರತದಲ್ಲಿ ಮತ್ತೆ ಮತ್ತೆ

ಕಂ॥ ನಯನರುಷಾವಳಿಯಿಂದತಿ
ಶಯಾಧರೋದ್ಯತ್ ಪ್ರವಾಳದಿಂದಂ ದ್ವಿಜಸಂ ।
ಚಯ ಮೌಕ್ತಿಕದಿಂ ಸುರತಾ
ಬ್ಧಿಯದಂತಿರೆ ತೆರೆಗಳಂತೆ ಕಾದಲರಿರ್ದರ್ ॥ ೧೪೬

ವ॥ ಅಂತು ಸುರತಸುಖದಿಂ ನಲಿನಲಿದು ನರ್ತಿಸುತ್ತುಂ ಮತ್ತವಾರಣದ ಮೇಲಿರ್ಪ ಮಧ್ಯಮನಾಯಕಿಯರಂ ನಾಗರಿಕಂ ನಗರಾಜಂಗೆ ತೋಱುತ್ತುಂ ನಡೆತರೆ ಮುಂದೊಂದೆಡೆಯೊಳೊರ್ವ ವಿದಗ್ಧೆ ವಿರಹತಾಪದಿಂ ನಿಲಲಾಱದೆ ನಿಜಸಖಿಗೆ ಬಿಸುಸುಯ್ಯುತ್ತುಮಿಂತೆಂದಳ್

ಮ॥ ಸಕಳಂಕಂ ಶಶಿಕಾಮನೀಶನುರಿಗಣ್ಣಿಂ ಬೆಂದವಂ ವಾಯು ಸ
ರ್ಪಕದಂಬಾಶನಶೇಷವಂಗಜನ ಮಿತ್ರಂ ರಾಗಿ ಮತ್ತಾಳಿಗಳ್ ।
ವಿಕಳಂಗಳ್ ಪಿಕನನ್ಯಪುಷ್ಪನಿವಱೊಳ್ ಸೌಜನ್ಯಮಂ ಮಾಳ್ಪುದ
ಕ್ಕ ಕರಂ ಕಷ್ಟಮೆನುತ್ತೆ ಕಾಂತೆ ನುಡಿದಳ್ ಸಾಲಿಟ್ಟ ಸಂತಾಪದಿಂ ॥ ೧೪೬

ವ॥ ಎಂದು ನುಡಿದ ನಿರ್ವೇದೋಕ್ತಿಗಳಂ ಕೇಳಲಾಱದೆ ಪರಮಮಿತ್ರೆ ಪರಿದು ಪೋಗಿ ಮನೋವಲ್ಲಭನನೊಡಗೊಂಡು ಬರೆ ಬಂದು ನಿಂದು ಸಾಪರಾಧಿ ಸಮೀಪಸ್ಥನಾಗಿ ಕುಳ್ಳಿರ್ಪಲ್ಲಿ

ಚಂ॥ ಎಱಗುಗುಮೆಂದು ಮೇಲುದಿನೊಳಂಘ್ರಿಗಳಂ ಮಱೆಮಾಡುತುಂ ಸ್ಮಿತಂ
ಪೊಱಮಡೆ ಮತ್ತಮೊಂದು ನೆವದಿಂದಮೆ ಮುಚ್ಚುತುಮೆಯ್ದೆ ನೋಟಮಂ ।
ಮಱೆಯಿಸಿ ನೋಡುತುಂ ನುಡಿಯಲುತ್ತರಮಂ ಸಖಿಗೀಯುತಿಂತು ತ
ನ್ನೆಱೆಯನೊಳೊಲ್ದು ಕೋಪಿಸುವ ಕಾಮಿನಿಗೀ ಮುಳಿಸೊಂದು ಸಾಲದೇ ॥ ೧೪೮

ವ॥ ಇಂತು ಮುಳಿದ ವಿದಗ್ಧನಾಯಕಿಯ ಮುಳಿಸಂ ತಿಳಿಪಿ ಸಜ್ಜೆವನೆಯ ಸಿರಿಮಂಚದ

ಕೂಡುತ್ತಿದ್ದರು. ೧೪೬. ಆ ಪ್ರೇಮಿಗಳು ಸುರತವೆಂಬ ಕಡಲಿನ ತೆರೆಗಳಂತೆ ಇದ್ದರು. ಇಲ್ಲಿ ಕಡಲಿನಲ್ಲಿ ಇರಬೇಕಾದ ವಸ್ತುಗಳಿಲ್ಲವೂ ಇವೆ. ಇಲ್ಲಿ ಕಣ್ಣುಗಳೇ ಮೀನುಗಳು, ಅತಿಶಯವಾದ ಕೆಳತುಟಿಗಳೇ ಹವಳಗಳು, ಹಲ್ಲುಗಳೇ ಮುತ್ತುಗಳು. ವ॥ ಹೀಗೆ ಸುರತ ಸುಖದಿಂದ ನಲಿದು ನರ್ತಿಸುವ ಮಧ್ಯಮನಾಯಕಿಯರನ್ನು ನಾಗರಿಕನು ನಗರಾಜನಿಗೆ ತೋರಿಸುತ್ತಾ ನಡೆತಂದರೆ ಮುಂದೊಂದು ಕಡೆ ಒಬ್ಬ ವಿದಗ್ಧೆ ವಿರಹ ತಾಪವನ್ನು ತಡೆಯಲಾರದೆ ಬಿಸುಸುಯ್ಯುತ್ತ ತನ್ನ ಸಖಿಗೆ ಹೀಗೆ ಹೇಳಿದಳು. ೧೪೭. ಆ ವಿರಹಿಣಿಗೆ ಸಂತಾಪವು ಸಾಲಿಟ್ಟಂತೆ ಆಗಿದೆ. ಇದರಿಂದ ಹತಾಶಳಾಗಿ ಅವಳು ಒಳ್ಳೆಯ ವಸ್ತುಗಳಲ್ಲಿಯೂ ಒಂದೊಂದು ದೋಷವನ್ನು ಆರೋಪಿಸಿ, ಇಂಥವರಲ್ಲಿ ಸೌಜನ್ಯವನ್ನು ಹೇಗೆ ತಾನೆ ನಿರೀಕ್ಷಿಸುವುದು ಎನ್ನುತ್ತಾಳೆ. ಶಶಿಯು ಕಳಂಕವುಳ್ಳವ, ಕಾಮನು ಶಿವನ ಉರಿಗಣ್ಣಿನಿಂದ ಸುಟ್ಟವನು, ಗಾಳಿಯು ಹಾವುಗಳು ಕುಡಿದು ಉಳಿದದ್ದು, ದುಂಬಿಗಳು ಬುದ್ಧಿಗೇಡಿಗಳು, ಕೋಗಿಲೆ ಪರಪುಟ್ಟ; ವ॥ ಹೀಗೆ ವಿರಹಿಣಿ ನಾಯಕಿಯು ಹೇಳುವ ನಿರ್ವೇದೋಕ್ತಿಗಳನ್ನು ಕೇಳಲಾರದೆ ಅವಳ ಆಪ್ತಸಖಿಯು ಅವಳ ಮನೋವಲ್ಲಭನನ್ನು ಕರೆತಂದಳು. ಅಪರಾಧಿಯಂತಿರುವ ಅವನು ಒಂದು ಪಕ್ಕದಲ್ಲಿ ಕುಳಿತುಕೊಂಡನು. ಆಗ- ೧೪೮. ಅಪರಾಧಿಯಂತೆ ಬಂದ ಆ ಪ್ರಿಯನು ತನ್ನ ಕಾಲಿಗೆ ಎರಗುವನೆಂದು ತಿಳಿದು ಅವಳು ಸೆರಗಿನಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡಳು; ನಗೆಯು

ಹಂಸತೂಳದಡಕಿಲ್ವಾಸಿನೊಳ್ ಭರದಿಂ ನೆರೆವಾಗಳ್

ಕಂ॥ ಸೆಳೆಮಂಚದ ಕಳನಿನದಂ
ಬಳಸಿದ ಶಕುನಿಗಳ ನುಣ್ಬರಂ ನೇವುರದು ।
ಜ್ವಳನಾದಂ ಲಲನಾಗಳ
ಗಳಿತಧ್ವನಿ ಬೆರಸಿ ಬಳೆದು ನೆರಪಿದುದಾಗಳ್ ॥ ೧೪೯

ಮ॥ಸ್ರ॥ಕರಘಾತಂ ಸೌಖ್ಯಜಾತಂ ಕಳರಣಿತಸಮೇತಂ ಲಸತ್ಕರ್ಣಪೂತಂ
ಸ್ಮರಯಂತ್ರಂ ಸಾರತಂತ್ರಂ ಘನಗಳರವಮಂತ್ರಂ ಪ್ರಮೋದಸ್ವತಂತ್ರಂ ।
ಸ್ಫುರಿತಾಂಗಂ ಸ್ವೇದಸಂಗಂ ಸುರತರಸತರಂಗಂ ಪರೋಮಾಂಚಲಿಂಗಂ
ಗುರುನೇತ್ರಂ ಬಾಷ್ಪಪಾತ್ರಂ ಸುಖರವಮುದಿತಶ್ರೋತ್ರಮಾನಂದಗಾತ್ರಂ ॥ ೧೫೦

ವ॥ ಅಂತುಮಲ್ಲದೆ

ಕಂ॥ ಗಳರವದಿಂದಪ್ಪಿಂ ಕೋ
ಮಳರೂಪಿಂದಧರರಸದೆ ಸುಯ್ಗಂಪಿಂದಾ ।
ಗಳೆ ಕವಿ ಮೆಯ್ ಕಣ್ ನಾಲಗೆ
ವಿಳಸನ್ನಾಸಿಕಮನಲ್ಲಿ ತಣಿಪುತ್ತಿರ್ದಳ್ ॥ ೧೫೧

ವ॥ ಮತ್ತಮೊಂದೆಡೆಯೊಳೊರ್ವಳ್ ತನ್ನ ಮಗಳ ಸೌಭಾಗ್ಯಮಂ ಪ್ರೇಮಸಖಿಗೆ ಪೇಳುತ್ತುಮಿರ್ದಳದೆಂತೆಂದೊಡೆ,

ಹೊರಬಿದ್ದರೂ ಅದನ್ನು ಒಂದು ನೆಪಮಾಡಿ ಮರೆಮಾಡಿದಳು; ಅವನನ್ನು ಕದ್ದು ಕದ್ದು ನೋಡತೊಡಗಿದ್ದಾಳೆ. ಆತ ಪ್ರಶ್ನೆ ಹಾಕಿದರೆ ಅದರ ಉತ್ತರವನ್ನು ಸಖಿಗೆ ಕೊಡುತ್ತಾಳೆ. ಹೀಗೆಲ್ಲ ಆಡಿ ತನ್ನ ಪ್ರಿಯನಲ್ಲಿ ಒಲಿದು ಕೋಪಿಸುವ ಅವಳಿಗೆ ಆ ಹುಸಿಮುನಿಸು ಎಷ್ಟೋ ರಮ್ಯವಾಗಿದೆ. ವ॥ ಹೀಗೆ ಹುಸಿಮುನಿಸಿನ ವಿದಗ್ಧನಾಯಕಿಯು ತನ್ನ ಅಂತರಂಗವನ್ನು ತಿಳುಹಿಸಿ, ಸಿರಿಮಂಚದಲ್ಲಿ ಭರದಿಂದ ನೆರೆದಳು. ೧೪೯. ಸೆಳೆ ಮಂಚದ ಮಧುರದನಿ, ಅವರನ್ನು ಬಳಸಿದ ಹಕ್ಕಿಗಳ ನುಣ್ದನಿ, ನೂಪುರಗಳ ಮಧುರಸ್ವನ, ಲಲನೆಯ ಇಂಪಾದ ಗಳಗಳಿತ ನಾದ, ಇವೆಲ್ಲ ಬೆರೆತು ಇಂಪಾಗಿತ್ತು. ೧೫೦. ಸೌಖ್ಯವಾದ ಹಸ್ತತಾಡನ, ಅವ್ಯಕ್ತಮಧುರವಾದ ಕವಿಗಿಂಪಾದ ಮಾತುಗಳು, ಸ್ವಾರಸ್ಯಕರವಾದ ಸ್ಮರಯಂತ್ರ, ಸಾರತಂತ್ರಗಳ ಆನಂದತುಂದಿಲತೆ, ನಡುಗುವ ಅಂಗಗಳು, ಬೆವರಿದ ಮೈ, ಸುರತರಸತರಂಗಗಳು, ಆನಂದಬಾಷ್ಪ, ಆನಂದಮಯವಾದ ಶರೀರಗಳಿಂದ ರಮ್ಯವಾದ ಸುರತೋತ್ಸವದಲ್ಲಿ ಮಗ್ನರಾಗಿದ್ದರು. ೧೫೧. ಗಳರವದಿಂದ ಕವಿ, ಆಲಿಂಗನದಿಂದ ಮೆಯ್, ಕೋಮಲವಾದ ರೂಪಿಂದ ಕಣ್ಣು, ಅಧರರಸದಿಂದ ನಾಲಗೆ, ನಿಟ್ಟುಸಿರ ಕಂಪಿನಿಂದ ನಾಸಿಕ ಹೀಗೆ ಅವಳು ಸರ್ವೇಂದ್ರಿಯ ಸುಖಾಸ್ವಾದವನ್ನು ಅನುಭವಿಸುತ್ತಿದ್ದಾಳೆ. ವ॥ ಮತ್ತೊಂದೆಡೆಯಲ್ಲಿ ಒಬ್ಬಳು ತನ್ನ ಮಗಳ ಸೌಭಾಗ್ಯವನ್ನು ಪ್ರಿಯಸಖಿಗೆ ಹೇಳುತ್ತಿದ್ದಾಳೆ.

ಕಂ॥ ಮಾಳತಿಯೊಳ್ ಬಂಡುಂಡ ಮ
ದಾಳಿಯನಳಿಮಾಲೆ ಎಱಗಿ ಬಂಡುಣ್ಬವೊಲೀ ।
ನೀಳಾಳಕಿಯೊಳ್ ಬೆರೆಸಿದ
ಖೇಳನ ಎಟರೆಯ್ದಿ ಸೋಂಕಿ ಸುಖಿಯಾಗಿರ್ಪರ್ ॥ ೧೫೨

ವ॥ ಅಂತುಮಲ್ಲದೆ

ಮ॥ಸ್ರ॥ದರಹಾಸಶ್ರೀಗೆ ಬೆಳ್ದಿಂಗಳ ಸಿರಿ ಸರಿಯಲ್ಲಂ ಕಟಾಕ್ಷೇಕ್ಷಣಕ್ಕಾ
ಸ್ಮರಬಾಣಂ ಸಾಟಿಯಲ್ಲಂ ಮಿಱುಗುವ ಕುಡುವುರ್ವಿಂಗೆ ತಾನಿಕ್ಕುಚಾಪಂ ।
ದೊರೆಯಲ್ಲಂ ಚಕ್ರವಾಕಂ ನೆಲೆಮೊಲೆಗೆಣೆಯಲ್ಲಂ ಕಳಂಕಪ್ರಭೂತಂ
ಪರಿದಗ್ಗಂ ತದ್ವಿಯೋಗಾಕುಳನಬಲೆಯ ರೂಪಿಂಗದೆಂತೊಂದುಮಾಳ್ಪಂ ॥ ೧೫೩

ವ॥ ಎಂದು ಬಣ್ಣಿಸುತ್ತಿರ್ಪಿನಂ ಇತ್ತಲ್ ಮತ್ತೊಂದೆಡೆಯೊಳೊರ್ವ ವಿದಗ್ಧವಿಟಂ ವಿರಹ ಪರಿತಾಪದಿಂ ನಿಲಲಾಱದೆ ನಿಜಸಖಿಗಿಂತೆಂದಂ,

ಮ॥ ಎರೆವಂ ಮತ್ಸಖಿ ತಂದುಕೂಡು ಗುಣವೃಂದಾರಾಮೆಯಂ ರಾಮೆಯಂ
ವರಪುಷ್ಪಾಯುಧಚಾಪಸಂಯುತಮೆನಿಪ್ಪಾ ನಾರಿಯಂ ನಾರಿಯಂ ।
ಸ್ಮರನಾಳೋಚನೆಗಾಪ್ತೆಯಾಗಿ ನೆಲೆಸಿರ್ಪಾ ಕಾಂತೆಯಂ ಕಾಂತೆಯಂ
ತರುಣೀ ಸಂಘಶಿರೋಮಣಿ ಪ್ರಬಳ ಕೀರ್ತ್ಯಾಶಾಂತೆಯಂ ಶಾಂತೆಯಂ ॥ ೧೫೪

ವ॥ ಎಂದಿಂತು ಬಾಯಳಿವ ಮಿತ್ರನಂ ನಲ್ಲಳೊಳ್ ಕೂಡಿ ಸಮಸುಖದೊಳಿರಿಸಿ, ಮತ್ತಮೊಂದೆಡೆಯೊಳ್ ವಿಟಂಗತ್ಯಾಸಕ್ತೆಯಾದ ಮಗಳ್ಗೆ ಮಾತೆ ಬುದ್ಧಿವೇಳ್ವಲ್ಲಿ.

೧೫೨. ಮಾಲತಿಯ ಕುಸುಮದಲ್ಲಿ ಮಕರಂದ ಪಾನಮಾಡಿ ಮದಿಸಿದ ದುಂಬಿಗಳನ್ನು ಬೇರೆ ದುಂಬಿಗಳು ಎರಗಿ ಬಂಡುಣ್ಣುವಂತೆ ಈ ನೀಲಮುಂಗುರುಳುಳ್ಳ ನಾಯಕಿಯನ್ನು ಬೆರೆದ ಖೇಳ (ಖಿಲ)ನನ್ನು ಇತರರು ಮುಟ್ಟಿ ತಾವೂ ಸುಖಿಗಳೆಂದು ಭಾವಿಸಿಕೊಂಡರು. ೧೫೩. ಅವಳ ನಸುನಗೆಗೆ ಬೆಳ್ದಿಂಗಳ ಸಿರಿ ಸರಿಯಲ್ಲ. ಕಡೆಗಣ್ಣ ನೋಟಕ್ಕೆ ಮನ್ಮಥನ ಬಾಣವು ಸಮವಲ್ಲ, ಮೆರೆಯುವ ಕುಡಿಹುಬ್ಬಿಗೆ ಕಬ್ಬಿನ ಬಿಲ್ಲು ಹೋಲಿಕೆಯಾಗದು, ನೆಲೆಮೊಲೆಗೆ ಚಕ್ರವಾಕವು ಸಾಟಿಯಲ್ಲ, ಎಂದ ಮೇಲೆ ಚಂದ್ರ ಕಳಂಕವುಳ್ಳವ, ಮದನ ಸುಟ್ಟವನು, ಇಂಥವರು ವಿಯೋಗಾಕುಲೆಯಾದ ಅವಳ ರೂಪಿಗೆ ಹೇಗೆ ತಾನೆ ಹೋಲಿಕೆಯಾದಾರು! ವ॥ ಮತ್ತೊಂದು ಕಡೆ ಒಬ್ಬ ವಿದಗ್ಧ ವಿಟ, ಅವನು ವಿರಹ ತಾಪಕ್ಕೆ ತಾಳಲಾರದೆ ನಿಜಸಖಿಗೆ ಹೇಳಿದ. ೧೫೪. ಎಲೌ ಪ್ರಿಯಸಖಿ, ಗುಣವತಿಯೂ ಮನೋಹರೆಯೂ, ಮನ್ಮಥನ ಪುಷ್ಪಾಯುಧನ ಬಿಲ್ಲಿಗೆ ಹೆದೆಯೇರಿಸಿರುವ ನಾರಿನಂತಿರುವ ನಾರಿ, ಸ್ಮರನ ಆಪ್ತಾಲೋಚನೆಗೆ ತಕ್ಕವಳಾದ ಕಾಂತೆ, ತರುಣೀಸಮೂಹಕ್ಕೆ ಶಿರೋಮಣಿಯಾಗಿರುವ ಕಾಂತೆಯನ್ನು ಕರೆತಂದು ಕೊಡು, ನೀನು ಕೇಳಿದುದನ್ನು ನೀಡುವೆನು ಎಂದ. ವ॥ ಮತ್ತೊಂದು ಕಡೆ ವಿಟನಲ್ಲಿ ಆಸಕ್ತೆಯಾದ ಮಗಳಿಗೆ ತಾಯಿ ಹೇಳುವ ಬುದ್ಧಿವಾದ ಸಂವಾದ ರೂಪವಾಗಿದೆ.

ಚಂ॥ ಮಗಳೆ ಬಡಾತನಂ ಬಡೆನವಂ ಧನಮಂ ಪಿರಿದೀಯನಿತ್ತುದೇ
ಮಿಗೆ ಪಿರಿದೆಯ್ದದೆಯ್ದುವುದು ಸಾಲದು, ಸಾಲ್ದುದು ಬೇಡ ಬೇಳ್ದುದೊ ।
ತೆಗೆ ನಡೆ ಊಹು ಮೂರ್ಖತೆಯ ಮೂರ್ಖತೆ ಕೆಟ್ಪಪೆ ಕೆಟ್ಪಪೆಂ ಕೆಲಂ
ತೆಗಳ್ದೆಯ ಹೈ ಕರಂ ತೆಗಳ್ದೆಯೆಂದೆನೆ ಪುತ್ರಿಯನಟ್ಟಿ ಮೋದಿದಳ್ ॥ ೧೫೫

ವ॥ ಅಲ್ಲದೆಯುಂ ಮತ್ತಮೊಂದೆಡೆಯೊಳೊರ್ವ ವೃದ್ಧವೇಶ್ಯಾಂಗನೆ ತನ್ನ ನೆರೆಮನೆಯ ಬಾಲಮುಗ್ಧೆಯ ಸೊಬಗಂ ಕಂಡು ಅಸೂಯೆಗೊಂಡು ತನ್ನೊಳಿಂತೆಂದಳ್,

ಚಂ॥ ಮೊಲೆ ಮುಗುಳ್ತೊತ್ತವಕ್ಕಿ ಚಪಳತ್ವಮನೆಯ್ದವು ಬಾಸೆ ಬಾರದು
ಜ್ಜ್ವಳಿಸದು ಭಾಳಲೇಟಿ ವದನಂ ಮದವೇಱದು ನೋಡೆ ತಳ್ತು ಕರ್ಣ ।
ಗೊಳಿಸದು ಮೇಲುವಗಳಿಪ ನೋಟಮಗುರ್ವಿಪ ಮಧ್ಯಮೊಪ್ಪುವೀ
ತಿಳಕಮನೂನಗರ್ವಮೊಲವಿಂ ನೆಲಸಿಪ್ಪುದು ಚೋದ್ಯಮಲ್ಲವೇ ॥ ೧೫೬

ವ॥ ಎಂದು ತನ್ನೊಳ್ ತಾನೇ ಜಿನುಂಗಿ ನುಡಿವ ಮುದುಪಾಳೆಯಂ ನೋಡುತುಂ ನಗುತುಂ ಬರೆ ಮುಂದೊಂದೆಡೆಯೊಳೊರ್ವ ಲಲನೆ ತನ್ನೋಪನಿಂದಾದ ಬೇಸಱಂ ನಿಜಸಖಿಗೆ ಪೇಳುತ್ತಿರ್ದಳದೆಂತೆಂದೊಡೆ,

ಉ॥ ಆದರಿಪಂತೆ ಸಾರ್ವನುಪಚಾರಮನಾಡುವನಿತ್ತುದಂ ಸಮಂ
ತೋದುವನಾವಗಂ ಕಟಕಿಯಂ ನುಡಿವಂ ನಗುವಂತೆ ಕೋಪಿಪಂ ।
ಸಾಧಿಸುವಂ ದಿಟಂ ಪುರುಡಿಪಂತೆ ನೆಗಳ್ಚುವನಟ್ಟಿ ಪತ್ತುವಂ
ಪೋದೊಡೆ ಪೋಗನಿರ್ದೊಡಿರನೀ ಶನಿಯಂ ಸಖಿಯೆಂತು ನೀಗುವೆಂ ॥ ೧೫೭

೧೫೫. ಮಗಳೆ ಆತನನ್ನು ಬಿಡು; ನಾನು ಬಿಡುವುದಿಲ್ಲ. ಆತ ಹಣ ಹೆಚ್ಚಿಗೆ ಕೊಡುವುದಿಲ್ಲ; ಕೊಟ್ಟಷ್ಟೇ ಸಾಕು ಅದೇ ದೊಡ್ಡದು; ಸಾಲುವುದಿಲ್ಲ; ಸಾಲುತ್ತದೆ ಬೇಡ ನಡೆ, ಊಹು! ಇದು ಮೂರ್ಖತನ, ಕೆಟ್ಟುಹೋಗುವೆ; ಆಗಲಿ ಕೆಡುವೆನು! ನನ್ನ ಮಾತಿಗೆ ತೆಗಳಿ ಎದುರಾಡುವೆಯ? ಹೌದು ತೆಗಳಿದೆ ಎನ್ನಲು ವಾದಿಸುವ ಮಗಳನ್ನು ತಾಯಿ ಚನ್ನಾಗಿ ಹೊಡೆದಳು. ವ॥ ಅಲ್ಲೊಬ್ಬ ಮುದಿಸೂಳೆ ಅವಳ ನೆರೆಯಲ್ಲಿ ಒಬ್ಬ ಬಾಲ ಮುಗ್ಧೆ. ಅವಳ ಸೊಬಗನ್ನು ಕಂಡು ಇವಳಿಗೆ ಅಸೂಯೆ. ಅವಳ ಭಾವನೆಯಿದು, ೧೫೬. ಸ್ತನಗಳ ಚೂಚುಕ ಮಿದುವಾಯ್ತು, ಕಣ್ಣು ಚಪಳತ್ವ ತಳೆಯದು, ರೋಮರಾಜಿಯ ಮೆರುಗು ಅಳಿಯಿತು. ಹಣೆ ಸುಕ್ಕುಗಟ್ಟಿತು, ಮದವೇರದು, ಮೇಲುದವು ಕಂಗೊಳಿಸದು, ಅಗ್ಗಳಿಪ ನೋಟ, ದಪ್ಪವಾಗುತ್ತಿರುವ ಮಧ್ಯ, ಒಪ್ಪುವ ತಿಳಕ, ಹೀಗಿದ್ದೂ ಇನ್ನೂ ಒಲವು ನೆಲೆಸಿರುವುದು ಸೋಜಿಗವಲ್ಲವೆ? ವ॥ ಇಂಥ ಮುದಿಸೂಳೆಯನ್ನು ಕಂಡು ನಗುತ್ತಾ ಮುಂದೆ ಬಂದರೆ ಅಲ್ಲೊಬ್ಬ ಲಲನೆ, ತನ್ನ ಪ್ರಿಯನಿಂದ ಆದ ಬೇಸರವನ್ನು ತನ್ನ ಸಖಿಗೆ ಹೇಳುತ್ತಿದ್ದಾಳೆ. ೧೫೭. ಎಲೌ ಸಖಿ ಬಹಳ ಆದರಿಸುವ ಹಾಗೆ ನಟಿಸುತ್ತಾನೆ, ಉಪಚಾರದ ಮಾತುಗಳನ್ನಾಡುತ್ತಾನೆ, ಕೊಟ್ಟದ್ದನ್ನು ಚೆನ್ನಾಗಿ ಓದುತ್ತಾನೆ, ಯಾವಾಗಲೂ ಕಟಕಿಯನ್ನು ನುಡಿಯುತ್ತಾನೆ. ನಗುವಂತೆ ಕೋಪಗೊಳ್ಳುತ್ತಾನೆ, ಸುಳ್ಳನ್ನು ನಿಜದಂತೆ ಸಾಧಿಸುತ್ತಾನೆ. ಆಚೆಗೆ ಅಟ್ಟಿದರೆ ಮತ್ತೆ ಬರುತ್ತಾನೆ. ಇದ್ದರೆ ಇರ, ಇಂಥ ಶನಿಯನ್ನು ನೀಗುವುದು ಹೇಗೆ ಎಂಬುದೇ

ವ॥ ಎಂದು ನುಡಿದ ನಿರಾಶಾವಚನಂಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆ ಯೊಳನೇಕ ನವೀನರತ್ನಮಯದರ್ಪಣಕನಕಕಳಶವಿಚಿತ್ರಪತ್ರಪರಿಶೋಭಿತಮಾಗಿ ನವೀನಕ್ರೀಡೆ ತವಿಲಿಲ್ಲದ ನವಿಲುಯ್ಯಲ ಮುಂದೊರ್ವ ವಿದಗ್ಧವನಿತೆ ಸಖೀಜನಂಬೆರಸು ಬೆಳ್ದಿಂಗಳ ನಿದಿರ್ಗೊಂಡು ವಸಂತಂಗೆ ಪೊಸತಳಿರ್ಗಳ ಪಸೆಯಂ ತಂದಿಕ್ಕಿ ಕಾಮಂಗೆ ಸಣ್ಣನನೆಗಳ ಪುಷ್ಪಾಂಜಲಿಯನಿತ್ತು ರತಿದೇವಿಗೆ ಮೆಯ್ಯಿಕ್ಕಿ ಚಂದ್ರಂಗೆ ಕುಸುಮರಸದರ್ಘ್ಯಮಂ ಕೊಟ್ಟು ಗಿಳಿ ಹಂಸೆ ಕೋಗಿಲೆಗಳನುಚಿತಾಹಾರದಿಂ ತಣಿಪಿ ಮಂದಯ್ಸಿದ ಸತಿಯರ ಸಂದಣಿಯೊಳಾಂದೋಳ ಮನೇಱಿದಾಗಳ್

ಕಂ॥ ಏಱಿದ ಮಣಿಯುದಯನಗಂ
ತೋಱಿದ ಮುಖಬಿಂಬಮಿಂದುಬಿಂಬಮಪಾಂಗಂ ।
ಮೀಱಿದ ಚಂದ್ರಿಕೆಯೆನೆ ಕಳೆ
ಯೇಱಿದ ಪಡಿಚಂದ್ರನಂತೆ ಸೌಂದರಿಯೆಸೆದಳ್ ॥ ೧೫೮

ಉ॥ ನೋಡುವನೇಕ ಸದ್ವಿಟಜನಂಗಳ ಪೆಣ್ಗಳ ಕಣ್ಗಳಾಡೆ ಕೊಂ
ಡಾಡುವ ತತ್ಸಖೀಕುಲದ ಚಾಗದ ಭೋಗದ ರಾಗಮಾಡೆ ತೂ ।
ಗಾಡುವ ಬಾಲಕೀವ್ರಜದ ಕಂಕಣ ಝಂಕೃತಿ ಭೋಂಕನಾಡೆ ತಾ
ನಾಡಿದಳುಯ್ಯಲಂ ಮುಖಶಶಿಪ್ರಭೆ ಮುಚ್ಚೆ ಮುಸುಂಕೆ ಚಂದ್ರನಂ ॥ ೧೫೯

ವ॥ ಇಂತಾಡುವ ನವೀನಾಂದೋಳನಕ್ರೀಡೆ ಕಡೆಯಾದನೇಕಮದನ ಮಹೋತ್ಸಾಹಂಗಳಂ ನೋಡುತ್ತುಂ ಪಣ್ಯಾಂಗನಾವೀಥಿವಿರಸಮಂ ಕಳೆದು ಬಂದು ರಾಜನಿಳಯದ್ವಾರದ ಮುಂದೆ ನಿಂದಿರೆ ನಾಗರಿಕನಿಂತೆಂದಂ,

ತಿಳಿಯದಾಗಿದೆ! ವ॥ ಎಂಬ ನಿರಾಶಾವಚನಗಳನ್ನು ಕೇಳುತ್ತಾ ಮುಂದೆ ಬಂದರೆ ಅಲ್ಲಿ ಹೊಸ ರತ್ನಖಚಿತದರ್ಪಣ ಸುವರ್ಣದ ಕಳಶ ಶೋಭಿತೆಯಾದ ಒಬ್ಬ ವಿದಗ್ಧವನಿತೆ ಸಖಿಯರೊಡನೆ ಬೆಳ್ದಿಂಗಳಲ್ಲಿ ವಸಂತನಿಗೆ ಹೊಸತಳಿರುಗಳ ಹಸೆಯನ್ನಿಟ್ಟು, ಕಾಮನಿಗೆ ಸಣ್ಣನನೆಗಳ ಪುಷ್ಪಾಂಜಲಿಯನ್ನಿತ್ತು, ರತಿಗೆ ವಂದಿಸಿ, ಚಂದ್ರನಿಗೆ ಪುಷ್ಪರಸದ ಅರ್ಘ್ಯ ಕೊಟ್ಟು ಗಿಳಿ ಹಂಸೆ ಕೋಗಿಲೆಗಳನ್ನು ಉಚಿತ ಆಹಾರದಿಂದ ತೃಪ್ತಿಪಡಿಸಿ, ಸಖಿಯರ ಸಂದಣಿಯಲ್ಲಿ ತೂಗುಮಂಚವನ್ನೇರಿದಳು. ೧೫೮. ಅವಳು ಏರಿದ ಮಣಿಯೇ ಉದಯಾದ್ರಿ, ತೋರಿದ ಮುಖಬಿಂಬವೆ ಚಂದ್ರಬಿಂಬ, ಕಡೆಗಣ್ಣ ನೋಟವೆ ಬೆಳದಿಂಗಳು, ಹೀಗೆ ಅವಳು ಕಳೆಯೇರಿದ ಚಂದ್ರನಂತೆ ಕಂಡಳು. ೧೫೯. ಅವಳು ಉಯ್ಯಾಲೆಯಾಡುತ್ತಿರುವಾಗ ವಿಟರ ಹಾಗೂ ಇತರ ಹೆಣ್ಣುಗಳ ಕಣ್ಣುಗಳು ಅವಳ ಮೇಲೆ ಬಿದ್ದವು, ಅವಳ ಸಖಿಯರು ಅವಳ ಭೋಗವನ್ನು ಕುರಿತು ಹಾಡತೊಡಗಿದರು, ಕೆಲವರು ಕೊಂಡಾಡಿದರು. ತೂಗುತ್ತಿರುವ ಬಾಲಕಿಯರ ಕಂಕಣ ಝೇಂಕೃತಿ ಮೊಳಗಿತು, ಉಯ್ಯಾಲೆಯಲ್ಲಿ ತೂಗುವ ಅವಳ ಮುಖ ಶಶಿಪ್ರಭೆಯು ಚಂದ್ರನನ್ನು ಮುಸುಕಿತು. ವ॥ ಇಂತಹ ಸೋಜಿಗಗಳನ್ನೆಲ್ಲ ನೋಡುತ್ತಾ ರಾಜನು ಅರಮನೆಗೆ ಹಿಂದಿರುಗಿದನು; ಆಗ ನಾಗರಿಕನು ಹೇಳುತ್ತಾನೆ.

ಕಂ॥ ದೀಪ್ತಿಯನುಳಿದುವು ಭಗಣಂ
ಸುಪ್ತಜನಂ ನಿದ್ರೆದಿಳಿದುದಿದೆ ಕೋಕಂ ತ ।
ನ್ನಾಪ್ತನನಱಿಸುತ್ತಿರುಳ ಸ
ಮಾಪ್ತಿ ಕರಂ ಹತ್ತೆ ಸಾರ್ದುದಚಳಾಧೀಶಾ ॥ ೧೬೦

ಬರವಂ ಬಯಸುತೆ ಕುಳಿರೆಂ
ಬ ರವಂ ಮಿಗೆ ಪತ್ತೆ ಸಾರುತಿಂತಿವೆ ಚಕ್ರಂ ।
ಅರುಣೋದಯಮಂ ಸೂಚಿಸು
ತರುಣೋದಯಮಿತ್ತಲಾಗುತಿದೆ ಗಿರಿರಾಜಾ ॥ ೧೬೧

ವ॥ ಎಂದು ನುಡಿದ ನಾಗರಿಕನ ಬಿನ್ನಪಮಂ ಕೇಳ್ದು ಅರಮನೆಯಂ ಪೊಕ್ಕು ಗಿರಿರಾಜಂ ನಿರ್ಮಳೀಕೃತಕರಚರಣನುಂ ನವ್ಯವಸ್ತುಪರಿಶೋಭಿತನುಂ ವಿಭೂತಿವಿಳಸಿತಸರ್ವಾಂಗನುಂ ರುದ್ರಾಕ್ಷಾಲಂಕೃತಶರೀರನುಂ ಶಿವಲಿಂಗಪೂಜಾವಿರಚಿತಹಸ್ತಕಮಳನುಂ ತತ್ಪಾದವಂದನಾಸಕ್ತನುಂ ಪಾದೋದಕಪ್ರಸಾದಸಂತುಷ್ಟಹೃದಯನುಂ ಕರ್ಪೂರತಾಂಬೂಲಮುಖವಳಯನುಮಾಗಿ ಸಭಾನಿಳಯಕ್ಕೆ ನಡೆತಂದು ನಾರದಮುನಿಯಂ ನಾಕಲೋಕಕ್ಕೆ ಕಳುಪಿ, ಪೂರ್ವಾಚಳಮನೇಱಿದ ಭಾಸ್ಕರನಂತೆ ಸಿಂಹವಿಷ್ಟರೋಪವಿಷ್ಟನಾಗಿರ್ದನಾ ಪ್ರಸ್ತಾವದೊಳ್,

ಮ॥ ಪರಮ ಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೬೨

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಯವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಪಾರ್ವತೀಯೌವನ ರಾತ್ರಿವಿಹಾರ ವರ್ಣನಂ
ಚತುರ್ಥಾಶ್ವಾಸಂ

೧೬೦. ಎಲ್ಲೆ ಗಿರಿರಾಜ, ತಾರೆಗಳು ಮಸಕಾದುವು, ಮಲಗಿದವರು ಎದ್ದರು. ಕೋಕವು ತನ್ನ ಆಪ್ತನನ್ನು ಅರಸುತ್ತಿದೆ. ಇದು ಇರುಳು ಕಳೆದುದರ ಕುರುಹು ಎಂದನು. ೧೬೧. ಆಗಮನವನ್ನು ಬಯಸುತ್ತಾ ಚಳಿ ಎಂಬ ಶಬ್ದವು ಹೆಚ್ಚಾಗಿ ಸಾರುತ್ತಿವೆ ಚಕ್ರವಾಕಗಳು, ಎಲ್ಲೆ ಗಿರಿರಾಜನೆ ಮೂಡಲು ಕೆಂಪನ್ನು ಸೂಚಿಸುವ ಅರುಣೋದಯವಾಗುತ್ತಿದೆ. ವ॥ ಎಂದ ನಾಗರಿಕ ಬಿನ್ನಪವನ್ನು ಕೇಳಿ ಅರಮನೆ ಹೊಕ್ಕು ಗಿರಿರಾಜನು ಕೈಕಾಲು ತೊಳೆದು ಮಿಂದು, ಮಡಿವಸ್ತ್ರ ಧರಿಸಿ, ಭಸ್ಮರುದ್ರಾಕ್ಷಭೂಷಿತನಾಗಿ ಕರಕಮಲದಲ್ಲಿ ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸಿ, ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿ, ತಾಂಬೂಲ ಚರ್ವಣಮಾಡುತ್ತಾ ಸಭಾಂಗಣಕ್ಕೆ ಆಗಮಿಸಿ, ನಾರದಮುನಿಯನ್ನು ದೇವಲೋಕಕ್ಕೆ ಬೀಳ್ಕೊಟ್ಟು, ಪೂರ್ವಾದ್ರಿಯನ್ನು ಏರುವ ರವಿಯಂತೆ ಸಿಂಹಾಸನವನ್ನು ಅಲಂಕರಿಸಿದನು.

ಪಂಚಮಾಶ್ವಾಸಂ

ವಿರೂಪಾಕ್ಷದರ್ಶನ ಪುಷ್ಪಾಪಚಯ ಪೂಜಾವರ್ಣನಂ

ಕಂ॥ ಶ್ರೀ ಗಂಗಾಧರನಭವಂ
ಶ್ರೀ ಗೌರೀವರನುದಾರಪಾರಾವಾರಂ ।
ಶ್ರೀ ಗುರು ಹಂಪೆಯ ಶಂಕರ
ನೀಗೆಮಗೆ ಮನೋರಥಂಗಳಂ ಕೃಪೆಯಿಂದಂ ॥ ೧

ಮ॥ಸ್ರ॥ ಸರಸೀಸಂಜಾತಜಾತೋತನ್ನಿಶಿತ ನಿಶಿತ ಸೌರಂಭ ಸಂಪಾದನಾದಂ
ಧರಣೀ ದಿಗ್ವ್ಯೋಮಭಾಗಾವೃತಭರಿತ ಘನಧ್ವಾನಸಂಭೇದನಾದಂ ।
ಸುರತಾಸಕ್ತವ್ರಜಾಲಿಂಗನ ಚಲನಕರ ಪ್ರೌಢಿತಾನಾದನಾದಂ
ಪರೆದತ್ತಾದಂ ಪ್ರಮೋದಂ ಶಿವನಿಳಯಕುಳೋತ್ಪಾದಮಾ ಶಂಖನಾದಂ ॥ ೨

ಚಂ॥ ಮುಗಿಯಲೊಡರ್ಚ ನಿಂದ ಕುಮುದಾವಳಿಯಂ ಸರಸೀರುಹಂ ಮುಗುಳ್
ನಗೆ ನಗುವಂತಿರ್ದುವು ಚಕೋರಿಗಳಸ್ತಗಿರೀಂದ್ರದತ್ತಲು ।
ಬ್ಬೆಗದೊಳೆ ನೋಡುತಿರ್ದುವ್ವ ರಥಾಂಗಯುಗಕ್ಕೆ ಮನೋಜನೇಸು ಮೆ
ಲ್ಲಗೆ ತೊಲಗುತ್ತುಮಿರ್ದುದುದಯಾದ್ರಿಗೆ ಗೋಪತಿ ಬರ್ಪ ಪೊಳ್ತಿನೊಳ್ ॥ ೩

ಕಂ॥ ಕೆಂಪೇಱಿತು ಮೂಡಣದೆಸೆ
ಸೊಂಪೇಱಿತು ಚಕ್ರಮಿಥುನಮಬ್ಜಕದಂಬಂ ।
ಕಂಪೇಱಿತು ಸಕಳ ಜಗಂ
ಪೆಂಪೇಱಿತು ಪದ್ಮಮಿತ್ರನುದಯಿಸುವಾಗಳ್ ॥ ೪

೧-೨. ಹೇಮಕೂಟ(ಹಂಪೆ)ದಲ್ಲಿರುವ ಅನೇಕ ಶಿವಾಲಯಗಳಲ್ಲಿ ಬೆಳಗಿನ ಶಂಖಧ್ವನಿಯು ಹರಡಿತು-ಭೂಮಿ ದಿಕ್ಕು ಆಕಾಶ ಇವುಗಳನ್ನು ಆವರಿಸಿದ ಮೇಘಧ್ವನಿಯನ್ನು ಸಹ ಭೇದಿಸುವ ನಾದದಂತೆಯೂ, ರತಿಕೇಳಿಯಲ್ಲಿ ತೊಡಗಿದ ರಸಿಕರ ಆಲಿಂಗನಾಸಕ್ತವಾದಕರ ಪ್ರೌಢಿಮೆಯನ್ನು ಪಡೆದಂತೆಯೂ ಆ ಶಂಖನಾದವು ಇತ್ತು. ೩. ಸೂರ್ಯನು ಉದಯಾದ್ರಿಗೆ ಬರುವ ಸಮಯದಲ್ಲಿ ಸಂಕೋಚಗೊಳ್ಳಲು ಸಿದ್ಧವಾಗಿ ನಿಂತಿದ್ದ ಕನ್ನೈದಿಲೆಗಳನ್ನು ನೋಡಿ ತಾವರೆಯ ಮೊಗ್ಗುಗಳು ಮುಗುಳ್ನಗೆ ಬೀರುವಂತಿತ್ತು. ಚಕೋರಿಗಳು ಅಸ್ತಾಚಲದ ಕಡೆ ಉದ್ವೇಗದಿಂದ ನೋಡುತ್ತಿದ್ದವು. ಚಕ್ರವಾಕದಂಪತಿಗಳಿಗೆ ಮನ್ಮಥನ ಹೊಡೆತ ಮೆಲ್ಲಗೆ ತಪ್ಪುತ್ತಿತ್ತು. ೪. ಕಮಲಮಿತ್ರನಾದ ಸೂರ್ಯನು ಉದಯಿಸುವ ಸಮಯದಲ್ಲಿ ಪೂರ್ವದಿಕ್ಕು ಕೆಂಪೇರಿತು, ಚಕ್ರವಾಕ ದಂಪತಿಗಳಿಗೆ ಸೊಂಪೇರಿತು, ಕಮಲಗಳಿಗೆ ಕಂಪು ಏರಿತು, ಸಕಲ ಜಗತ್ತಿಗೆ ಪೆಂಪು

ಕಂ॥ ಉರ್ಕುಡುಗಲ್ ಕುಮುದಂಗಳ್
ಸೊರ್ಕೊಗೆಯಲ್ ಕಮಳ ಚಕ್ರಪಕ್ಷ್ಮುಗಂಗಳ್ ।
ತರ್ಕೈಸಲ್ ತಮಮಾಗಳ್
ಬರ್ಕಟ ಬಯಲಾದುದರ್ಕನುದಯಿಸುವಾಗಳ್ ॥ ೫

ಇಳೆಯ ಮುಸುಂಕಂ ಮೆಲ್ಲಗೆ
ಕಳೆಯುತ್ತೆಳ್ಚಪಿಸುತ್ತುಂ ರಥಾಂಗಮನಬ್ಜಂ ।
ಗಳನೆವೆದೆಱೆಯಿಸುತುಂ ದೆಸೆ
ಗಳನೆಳ್ಚಿಸುತೆಳ್ದುವಾಗಳಿನನ ಕರಂಗಳ್ ॥ ೬

ವ॥ ಮತ್ತಮಲ್ಲದೆ,

ಕಂ॥ ಕೊರಗಿಸಿ ಕುಮುದವನೆಳ್ಪಿಸಿ
ಯರವಿಂದಮನಂಘತಮುಮನೋಡಿಸಿ ದೋಷಾ ।
ಕರನಂ ಕಳೆಗುಂದಿಸಿ ಪರಿ
ವರಿದುವ್ ತರಣಿಯ ತಳಾಜರಂತಿರೆ ಕಿರಣಂ ॥ ೭

ವ॥ ಆ ಸಮಯದೊಳ್

ಕಂ॥ ಮುದುಡಿಸುತುಂ ಕೈರವಮಂ
ಬೆದಱಿಸುತುಂ ಕೌಶಿಕಂಗಳಂ ಘನಪಥದೊಳ್ ।
ಕೆದಱುತ್ತುಂ ಕಿರಣಾಳಿಯ
ನುದಯಾಚಳಚೂಡದಲ್ಲಿ ಮೂಡಿದನರ್ಕಂ ॥ ೮

ಕಂ॥ ಕಮಳಾಕರದಮಳ್ಕಿಗ
ಳ ಮನೋರಥಮಲರೆ ವಾಸವಾಶಾಮುಖದೊಳ್ ।
ತಮಮೆಂಬೆವೆದೆಗೆಯುತ್ತಿರೆ
ವಿಮಳ ಜಗಚ್ಚಕ್ಕು ತೊಳಗಿ ಬೆಳಗುತ್ತಿರ್ದಂ ॥ ೯

ಏರಿತು. ೫. ಸೂರ್ಯೋದಯವಾದಾಗ ನೈದಿಲೆಗಳು ಮುಚ್ಚಿಕೊಂಡವು, ಕಮಲಗಳು ಅರಳಿದವು, ಚಕ್ರವಾಕಮಿಥುನಗಳು ತಕ್ಕೈಸಿದವು, ಕತ್ತಲು ಮಾಯವಾಯಿತು. ೬. ರವಿಯ ಕಿರಣಗಳು ಎಲ್ಲೆಡೆಗೂ ಹಬ್ಬಿದವು. ಸೂರ್ಯನ ಕರಗಳು ಇಳೆಗೆ ಮುಸುಕಿದ್ದ ಕತ್ತಲೆಂಬ ಮುಸುಕನ್ನು ಮೆಲ್ಲಗೆ ಕಳೆಯುತ್ತ ಎಚ್ಚರಿಸಿ, ಚಕ್ರವಾಕ ಮತ್ತು ಕಮಲಗಳ ರೆಪ್ಪೆಗಳನ್ನು ತೆರೆಯಿಸಿ, ದಿಕ್ಕುಗಳನ್ನೆಲ್ಲ ಎಬ್ಬಿಸುತ್ತ ಎಲ್ಲೆಡೆ ಹರಡಿದವು, ೭. ಸೂರ್ಯನ ಕಿರಣಗಳು ತಳವಾರರಂತೆ ನೈದಿಲೆಗಳನ್ನು ಕೊರಗಿಸಿ, ಕಮಲಗಳನ್ನು ಎಬ್ಬಿಸಿ, ಕತ್ತಲನ್ನು ಓಡಿಸಿ, ದೋಷಾಕರ-ಚಂದ್ರನನ್ನು ಕಳೆಗುಂದಿಸಿ ಎಲ್ಲೆಡೆ ಹಬ್ಬಿದವು. ೮. ಪೂರ್ವಾದ್ರಿಯ ತುದಿಯಲ್ಲಿ ರವಿ ಉದಯಿಸಿದಾಗ ನೈದಿಲೆ ಮುಚ್ಚಿಕೊಂಡವು. ಗೂಗೆಗಳು ಹೆದರಿದವು, ಮೇಘಮಾರ್ಗದಲ್ಲಿ ಕಿರಣಗಳು ಹರಡಿದವು. ೯. ಕೊಳಗಳಲ್ಲಿರುವ ಚಕೋರ ಮಿಥುನಗಳ ಮನೋರಥವು ಅರಳಿತು. ಇಂದ್ರ ದಿಕ್ಕಿನಲ್ಲಿ ಕತ್ತಲೆಂಬ ರೆಪ್ಪೆ ತೆಗೆಯಿತು. ಜಗಚ್ಚಕ್ಕು ಸೂರ್ಯನು ಬೆಳಗುತ್ತಿದ್ದ.

ವ॥ ಅಂತಾವ ಸೂರ್ಯೋದಯದೊಳ್ ಸಕಳ ಶಿವಾಲಯಪ್ರೋದ್ಗತಮಪ್ಪ ಪಂಚಮಹಾಶಬ್ದಮುಂ ತಟಾಕತೀರಸ್ಥಿತ ಸಂಧ್ಯಾವಂದನಾಸಕ್ತ ಧರಾಮರಪ್ರಕರಮುಂ ಗಜಶಿಕ್ಷಾ ಪ್ರಾರಂಭಸಮಯ ಸಂರಂಭಸಂಯುಕ್ತ ಸುಭಟಾರೋಹನಿಕಾಯಮುಂ ಪ್ರಯುಕ್ತಾನೇಕ ವ್ಯೂಹ ಮುಖರ ಮುಖಜನಿತ ನಿಬಡನಿರ್ಘೋಷಮುಂ ಸೇವಾಭರಧರಾಧೀಶ್ವರ ಪ್ರಕರ ಸಂರಂಭಮುಂ ರಾಜನಿಳಯಾಗಮ ಲಂಪಟಲಲಿತ ಲಲಿತಾಂಗೀಎತಾನ ವಿಸ್ತಾರಹಸ್ತಕಟಕ ಮಂಜೀರ ಸಂಜನಿತ ಮಧುರಧ್ವನಿಯುಂ ನರ್ತಕ ನರ್ತಕೀನಿಕರ ವೈತಾಳಿಕಾದಿ ವಂದಿಮಾಗಧ ಸ್ತೋತ್ರಧರಾಮರ ಪರಮಾಶೀರ್ವಾದ ಕದಂಬಧ್ವನಿಯುಂ ಪುರದೊಳಂ ರಾಜಮಂದಿರದೊಳಂ ನೆಗಳೆ ಪರಮಹರ್ಷದಿಂ ಗಿರೀಶ್ವರಂ ಪ್ರಭಾತಸಮಯಸಮುಚಿತಸ್ಥಾನನಾಗಿ ಕುಳ್ಳಿರ್ದು ನೆನೆದು ನೋಡಿ ನಾರದಮುನೀಶ್ವರನಜೆಪಿ ಪೋದುದಂ ಕುರುಪುಗೊಂಡು ಹೈಮವತಿಯಂ ಹೇಮಕೂಟದೊಳಿರ್ಪ ಪರಂಜ್ಯೋತಿಃಸ್ವರೂಪನಪ್ಪ ಶ್ರೀ ವಿರೂಪಾಕ್ಷನಲ್ಲಿಗೆ ಕಳುಪಲೆಂದು ಮನದಂದೋಲಗಮಂ ಪರೆಯಲ್ವೇಳ್ದು.

ಮ॥ಸ್ರ॥ ಗಿರಿರಾಜಂ ನಾರದಂ ಪೇಳ್ದತಿಹಿತವಚಮಂ ಚಿಂತಿಸುತ್ತಲ್ಲಿ ನಾನಾ
ವರ ವಾರಸ್ತ್ರಿಯರೊಳ್ ತಾಂ ಜಯೆ ವಿಜಯೆಯೆನಿಪ್ಪರ್ವರಂ ಕೂಡಿಕೊಂಡೊ ।
ಪ್ಪಿರೆ ಮೂಱುಂ ಪುಷ್ಪಕಂಗಳ್ ಬರೆ ನಿಜಸುತೆಯಂ ಶಾಂತೆಯಂ ಸತ್ಯೆಯಂ ಶಾಂ
ಕರಿಯಂ ಶರ್ವಾಣಿಯಂ ಶಾಶ್ವತಗುಣನಿಧಿಯಂ ಬಾರೆನುತ್ತಿರ್ದನಾಗಳ್ ॥ ೧೦

ವ॥ ಸೂರ್ಯೋದಯದಲ್ಲಿ ಆ ಪುರದಲ್ಲಿ ಹಾಗೂ ರಾಜಮಂದಿರದಲ್ಲಿ ನಾನಾ ವಿಧ ಧ್ವನಿಗಳು ಮೊಳಗಿದವು. ಅವುಗಳಲ್ಲಿ ಮುಖ್ಯವಾದವು ಇವು: ಎಲ್ಲ ಶಿವಾಲಯಗಳಲ್ಲಿ ಪ್ರಾತಃಕಾಲ ಪೂಜೆಯಲ್ಲಿ ಬಾರಿಸುವ ಪಂಚಮಹಾಶಬ್ದಗಳು, ಕೆರೆಯ ತಡಿಯಲ್ಲಿ ಸಂಧ್ಯಾವಂದನಾಸಕ್ತರಾದ ಭೂಸುರರ ಸಮೂಹ, ಗಜಶಿಕ್ಷಣದ ಪ್ರಾರಂಭದಲ್ಲಿ ಉತ್ಸಾಹಶಾಲಿಗಳಾದ ಸುಭಟರ ಗುಂಪು, ಹಯ (ಕುದುರೆ) ಶಿಕ್ಷಕರು ಕುದುರೆ ಹತ್ತಿ ಕೂಗುವ ಶಬ್ದ, ಸೇವಾಸಕ್ತರಾದ ಅನೇಕ ಸಾಮಂತರಾಜರ ಆಸಕ್ತಿ, ರಾಜನಿಲಯಕ್ಕೆ ಆಗಮಿಸುತ್ತಿರುವ ಲಲಿತಾಂಗಿಯರ ಕೈಬಳೆಗಳ ಮಧುರ ಶಬ್ದ, ನರ್ತಕ-ನರ್ತಕಿಯರು, ವೈತಾಳಿಕರು, ಹೊಗಳುಭಟ್ಟರ ಸ್ತೋತ್ರ, ಬ್ರಾಹ್ಮಣಾಶೀರ್ವಾದಧ್ವನಿಗಳು ಆ ಪಟ್ಟಣ ಹಾಗೂ ಅರಮನೆಯಲ್ಲಿ ಮೊಳಗಿದವು. ಅರಸನು ಸಂತೋಷದಿಂದ ಪ್ರಾತಃಕಾಲದಲ್ಲಿ ಉಚಿತಾಸನದಲ್ಲಿ ಕುಳಿತು, ನಾರದಮುನಿಯು ಕೊಟ್ಟಿರುವ ಸೂಚನೆಯನ್ನು ನೆನೆದು ಹೈಮವತಿ(ಉಮಾ)ಯನ್ನು ಹೇಮಕೂಟದಲ್ಲಿರುವ ಪರಂಜ್ಯೋತಿಸ್ವರೂಪನಾದ ಶ್ರೀವಿರೂಪಾಕ್ಷನಲ್ಲಿಗೆ ಕಳುಹಿಸಬೇಕೆಂದು ಯೋಚಿಸಿ ಓಲಗವನ್ನು ಮುಗಿಯಿಸಿದನು. ೧೦. ಗಿರಿರಾಜನು ನಾರದಮುನಿಯು ಹೇಳಿದ ಹಿತವಚನವನ್ನು ಚಿಂತಿಸುತ್ತಿರುವಾಗ ಅಂತಃಪುರದಲ್ಲಿರುವ ಶ್ರೇಷ್ಠ ಸ್ತ್ರೀಯರಲ್ಲಿ ಜಯೆವಿಜಯೆ ಎಂಬವರಿಬ್ಬರನ್ನು ಕೂಡಿ ಕೊಂಡು ಹೊರಡಲು ಸಿದ್ಧನಾದಾಗ ಅಲ್ಲಿ ಮೂರು ಪುಷ್ಪಕಗಳು ಬಂದವು. ರಾಜನು ಶಾಂತಳೂ ಸತ್ಯಸ್ವರೂಪಳೂ ಶಾಶ್ವತಗುಣನಿಧಿಯೂ ಆದ ಶರ್ವಾಣಿಯನ್ನು ಕರೆದನು.

ಕಂ॥ ಗಿರಿಪತಿ ಕರೆದೊಡೆ ಪುಳಕಾ
ಭರಣೆ ಮಹಾದೇವಿ ಮಾನಿ ಶರ್ವಾಣಿ ಕೃಪಾ ।
ಕರೆ ಹಂಸಯಾನೆ ಬಂಬಾ
ಧರೆ ತಂದೆಯ ಮುಂದೆ ಬಂದು ನಿಂದಿರ್ದಾಗಳ್ ॥ ೧೧

ಮ॥ಸ್ರ॥ ಪದೆಪಿಂದಂ ಬಂದು ಮೇನಾಸತಿ ನಿಜಸುತೆಯಂ ನೋಡಿ ಮುಂಡಾಡಿ ದೇವೀ
ಸದಳಂಕಾರೈಕಪಾತ್ರೇ ಪುಲಿಕರಡಿಮಹಾಸರ್ಪನಮ್ಮೂವು ಸಿಂಹಂ ।
ಮದವನ್ಮಾತಂಗನುಗ್ರಗ್ರಹವಿಡಿದ ಬದಿರ್ ಬೆತ್ತವುಂಟಲ್ಲಿ ತಾಯೇ
ಪದುಳಂ ಪೋಗವ್ವ ಪೋಗೆಂದತಿಭಯರಸದಿಂ ಬುದ್ಧಿವೇಳುತ್ತುಮಿರ್ದಳ್ ॥ ೧೨

ವ॥ ಎಂದಿಂತು ಪೇಳಿ ಕೇಳ್ದು ಮನದೊಳ್ ನಸುನಗುತ್ತುಂ ಮಾತೆಯ ಮಾತಿಗೊಡಂಬಟ್ಟು ವಿನಯವಿನಮಿತೆಯಾದ ಪಾರ್ವತಿಯಂ ಪರ್ವತರಾಜಂ ಪುಷ್ಪಕದೊಳ್ ಬಿಜಯಂಗೈಸಿ ತಾನುಂ ಕುಳ್ಳಿರ್ದು ಪಿಂತಣ ವಿಮಾನಂಗಳೊಳ್ ಜಯೆವಿಜಯೆಗಳಂ ಬರಲ್ವೇಳ್ದು ಗಗನಕ್ಕೆ ನೆಗೆದು ಮೀಱೆ ಪಾಱೆ ತ್ಕ್ಷಣಂ ನೆನೆದು ದಕ್ಷಿಣಾಭಿಮುಖನಾಗಿ ನಡೆತರ್ಪಾಗಳ್,

ಮ॥ಸ್ರ॥ ಪಲವುಂ ದೇಶಂಗಳಂ ಭಾಸುರನಗರಿಗಳಂ ತತ್ತಟಾಕಂಗಳಂ ನಿ
ಶ್ಚಲಕೇದಾರಂಗಳಂ ಪರ್ವತವಿತತಿಗಳಂ ವಿಂಧ್ಯಸಂದೋಹಮಂ ನಿ ।
ರ್ಮಲಕಾಸಾರಂಗಳಂ ತಾವರೆಗಳನಳಿಯಂ ಹಂಸಮಾಲಾವಿಳಾಸೋ
ಜ್ವಲಮಂ ನೋಡುತ್ತೆ ತೋಱುತ್ತಗಜೆಗೆ ನಗನಾಥಂ ಬರುತ್ತಿರ್ದನಾಗಳ್ ॥ ೧೩

೧೧. ಗಿರಿಪತಿ ಕರೆದೊಡನೆಯೇ ಗಿರಿಜೆಗೆ ಮೈ ರೋಮಾಂಚಿತವಾಯಿತು. ಪುಳಕವೇ ಅವಳಿಗೆ ಆಭರಣವಾಯಿತು. ಅವಳು ತಂದೆಯ ಹತ್ತಿರ ಬಂದಳು. ೧೨. ತಾಯಿ ಮೇನಾದೇವಿ ಅಕ್ಕರೆಯಿಂದ ಅಲ್ಲಿಗೆ ಬಂದು ಮಗಳನ್ನು ಮುದ್ದಾಡಿ, ದೇವಿ, ಹೇಮಕೂಟವು ಭಯಂಕರವಾದ ಕಾಡು, ಅಲ್ಲಿ ಹುಲಿ, ಕರಡಿ, ಹೆಬ್ಬಾವು, ಸಿಂಹ ಮುಂತಾದ ಕ್ರೂರ ಮೃಗಗಳಿವೆ ಎಂದು ಮುಂತಾಗಿ ಕಾಡಿನ ಬಗೆಗೆ ಮಗಳಿಗೆ ಸೂಚನೆ ನೀಡಿ ಬುದ್ಧಿ ಹೇಳುತ್ತಿದ್ದಳು. ವ॥ ತಾಯಿ ಹೇಳಿದ ಮಾತುಗಳನ್ನು ಕೇಳಿ ಪಾರ್ವತಿ ಹುಸಿನಗೆ ಸೂಚಿಸಿ ವಿನಯದಿಂದ ಒಡಂಬಟ್ಟಳು. ಆದರೆ ಅಷ್ಟು ಹೊತ್ತಿಗೆ ತಂದೆಯ ಅಪ್ಪಣೆಯಂತೆ ಪುಷ್ಪಕವಿಮಾನವು ಅಲ್ಲಿಗೆ ಬಂತು. ಗಿರಿರಾಜನು ಜಯೆ ಮತ್ತು ವಿಜಯೆ ಎಂಬ ಸಖಿಯರನ್ನೂ ಕರೆಸಿದನು. ಗಿರಿಜೆಯನ್ನು ಪುಷ್ಪಕದಲ್ಲಿ ಕುಳ್ಳಿರಿಸಿ ತಾನೂ ಕುಳಿತು, ಬೇರೆ ವಿಮಾನಗಳಲ್ಲಿ ಆ ಸಖಿಯರನ್ನು ಬರಲು ಆಜ್ಞಾಪಿಸಿ ಶಿವನನ್ನು ನೆನೆದು ದಕ್ಷಿಣಾಭಿಮುಖನಾಗಿ ಹೊರಟನು. ೧೩. ವಿಮಾನದಲ್ಲಿ ಬರುತ್ತಿರುವಾಗ ಅವರು ಕಂಡ ದೃಶ್ಯಗಳು ಅನೇಕ. ಅವುಗಳಲ್ಲಿ ಅನೇಕ ದೇಶಗಳು, ನದಿಗಳು, ಕೆರೆಗಳು, ಹೊಲ-ಗದ್ದೆ-ತೋಟಗಳು, ಬೆಟ್ಟಗುಡ್ಡಗಳು, ವಿಂಧ್ಯ ಪರ್ವತಪಂಕ್ತಿ, ಕೊಳಗಳು, ತಾವರೆಗಳು, ಹಂಸೆಗಳ ಸಾಲುಗಳು, ಮುಂತಾದುವನ್ನು ರಾಜನು ಮಗಳಿಗೆ

ಕಂ|| ಇಂತಿಂತು ನೋಡುತುಂ ಬರೆ
ಮುಂತಿರ್ದುದು ತರಳತರಂಗಪ್ರಯುತಾ ।
ನಂತ ನವಫೇನಜಲಚರ
ಸಂತಾನಂ ತುಂಗಭದ್ರೆ ಗಂಗಾಪ್ರಾಯಂ ॥ ೧೪

ಇರೆ ಕಂಡು ಕೊಂಡು ಕೊನೆಯುತೆ
ಗಿರಿರಾಜಂ ನಿಜತನೂಜೆಗಱಿಪಿದನತ್ಯಾ ।
ದರದಿಂ ಭರದಿಂ ಪರಿದುದು
ಸುರುಚಿರನದಿ ತುಂಗಭದ್ರೆಯೆಂಬುದು ಪೆಸರಿಂ ॥ ೧೫

ಚಂ|| ತರಳತರಂಗಮುದ್ರೆಯನನೇಕಮುನೀಂದ್ರ ಮನಸ್ಸುಭದ್ರೆಯಂ
ಪರಮ ಸುಧಾರಸಾರ್ದ್ರೆಯನಪಾರಗಭೀರಸಮುದ್ರೆಯಂ ಪರಾ ।
ಪರಸುಖನಿದ್ರೆಯಂ ದುರಿತಮಾಲೆಗುಪದ್ರೆಯನತ್ಯನೂನವಿ
ಸ್ತರ ಸುಕೃತಾರ್ದ್ರೆಯಂ ನೆರೆ ನಿರೀಕ್ಷಿಸು ಪಾರ್ವತಿ ತುಂಗಭದ್ರೆಯಂ ॥ ೧೬

ತಡೆವಿಡಿದೊಪ್ಪುವಾಮ್ರವರನೇಱಿಲಶೋಕೆ ಕವುಂಗು ತೆಂಗು ಕ
ರ್ಪಿಡಿದ ತಮಾಲಮೀಳೆ ನವದಾಡಿಮವೀಥಿ ಲವಂಗಲುಂಗವಿಂ ।
ಪೊಡರಿಪ ಬಾಳೆ ಪಕ್ವಪನಸಾವಳಿ ನಿಂಬಕದಂಬಮಿಂಬುಗೊಂ
ಡಡಸಿದ ಮಾತುಳಂಗತತಿ ಪೂಗಕುಲಂ ಸಲೆ ತುಂಗಭದ್ರೆಯೊಳ್ ॥ ೧೭

ವ|| ಮತ್ತಮಲ್ಲದೆ,

ಕಂ|| ನೆನೆದನೆ ಧನ್ಯಂ ನೋಡಿದ
ನನಘಂ ಸೋಂಕಿದವನಮರನಘಮರ್ಷಣಮಿ ।
ರ್ದನೆ ಗಣನಾಥಂ ಸೇವಿಸಿ
ದನೆ ಮುಕ್ತಂ ಕೇಳ ತುಂಗಭದ್ರೆಯ ಜಳಮಂ ॥ ೧೮

ತೋರುತ್ತಾ ಬರುತ್ತಿದ್ದಾನೆ. ೧೪. ಮುಂದೆ ತುಂಗಭದ್ರಾನದಿ ಕಣ್ಣಿಗೆ ಬಿತ್ತು. ಅದು ಚಂಚಲವಾದ ಅಲೆಗಳು, ನೊರೆ, ಜಲಚರ ಪ್ರಾಣಿಗಳು ಮುಂತಾದವುಗಳಿಂದ ಕೂಡಿದ ತುಂಗಭದ್ರೆ, ಪವಿತ್ರ ಗಂಗಾನದಿಗೆ ಸಮಾನವಾದ ಈ ಪುಣ್ಯನದಿ ಕಾಣಿಸಿತು. ೧೫. ನದಿಯನ್ನು ನೋಡಿ ಗಿರಿರಾಜನಿಗೆ ಸಂತೋಷವಾಯಿತು. ಮಗಳಿಗೆ ಅದರ ಪರಿಚಯ ಮಾಡಿಸಿದ. ಸುರುಚಿರ ನದಿ ತುಂಗಭದ್ರೆ ಎಂದು ಅದರ ಹೆಸರು ತಿಳಿಸಿದ. ೧೬. "ಎಲ್ಲೆ ಮಗಳೆ, ತುಂಗಭದ್ರೆಯನ್ನು ಚೆನ್ನಾಗಿ ಗಮನಿಸು. ಈ ನದಿ ತರಲತರ ತರಂಗಗಳಿಂದ ಕೂಡಿದ್ದು, ಮುನಿಜನರಿಗೆ ಸೇವ್ಯವಾದದ್ದು, ಅಮೃತದಂತೆ ಆಪ್ಯಾಯ ಮಾನವಾದುದು, ಆಳ-ಅಗಲಗಳಿಂದ ಕೂಡಿದೆ, ಪಾಪಪರಿಹಾರಕವಾದುದು. ಪುಣ್ಯವಂತರಿಗೆ ಮಾತ್ರ ಇದರ ಸಾನ್ನಿಧ್ಯ" ಎಂದನು. ೧೭. ಈ ನದಿಯ ತಡಿಯಲ್ಲಿ ಒಪ್ಪುವ ಮಾವು, ಜಂಬುನೇರಿಳೆ, ಅಡಕೆ, ತೆಂಗು, ಕಪ್ಪಗಿನ ಹೊಂಗೆ ಮರಗಳು, ದಾಳಿಂಬೆ, ಲವಂಗ, ಸೊಂಪಾಗಿ ಬೆಳೆದಿರುವ ಬಾಳೆ, ಹಲಸು, ಬೇವು, ಈಚಲು, ಮಾತುಳುಂಗ ಮುಂತಾದ ಫಲವೃಕ್ಷಗಳು ಇಲ್ಲಿವೆ. ೧೮. ತುಂಗಭದ್ರೆಯನ್ನು ನೆನೆದವನು ಧನ್ಯ, ನೋಡಿದವನು ಪಾಪರಹಿತ, ಮುಟ್ಟಿದವನು ಅಮರ, ಅದರಲ್ಲಿ ಮುಳುಗಿ

ವ।। ಎಂದು ಪೇಳುತ್ತುಂ ತೋಱುತ್ತುಮಿರ್ಪಲ್ಲಿ

ಮ।।ಸ್ರ।। ತರದಿಂ ಕುಳ್ಳಿರ್ದ ಸಂಧ್ಯಾಸಮಯವಿಮಳಮಂತ್ರಾಕ್ಷರಸ್ತೋಮಶೋಭಾ
ಕರ ವಕ್ತ್ರಾನೀಕದಿಂದೊಪ್ಪುವ ಮುನಿತತಿಯಂ ಪರ್ಣಶಾಲಾಂತ್ಯದೊಳ್ ಭಾ ।
ಸುರ ಶಂಭುಧ್ಯಾನ ನಾನಾಜಪನಿಯಮ ಸದಾಹೋಮದಿಂದಿರ್ಪ ವಿಪ್ರೋ
ತ್ಕರದಿಂದಂ ತುಂಗಭದ್ರಾತಟಮೆಸೆದುದು ಹೇಮಾಚಳಪ್ರಾಂತಕಾಂತಂ ।। ೧೯

ವ।। ಮತ್ತಮಾ ತುಂಗಭದ್ರೆ ಶಿವನ ಕೀರ್ತಿಯಂತೆ ಭುವನಭರಿತಮುಂ ಪಾರ್ವತೀ ವಿಳಾಸದಂತೆ ತೀರದೊಪ್ಪಮುಂ ಅಮರಾವತಿಯಂತನಿಮಿಷಪ್ರಕರಮುಂ ಕಱೆಗೊರಲನಂತೆ ವಿಷಭಂಗಮುಂ ಗಗನತಳದಂತೆ ವಕ್ರಗತಿಯುಂ ದ್ವಿಜರಾಜಶೋಭಿತಮುಮೆನಿಸಿರ್ದುದಾ ನದಿಯುಭಯತಟವಿಳಸಿತವನಾವಳಿಯಲ್ಲಿ

ಚಂ।। ಪಱೆದೆಲೆಯಿಟ್ಟು ಪಲ್ಗಱೆದು ಹರ್ಷಿನುತುರ್ಬುತೆ ಪುರ್ಬನೇಱೆಸು
ತ್ತುಱುಗಿಸಿ ನೋಡಿ ದಾಂಟಲನುಗೆಯ್ಯುತೆ ತೂಗುತೆ ಝುಂಕಿಸುತ್ತೆ ಬಾ ।
ಯ್ದೆಱೆದೊಲೆಯುತ್ತೆ ಕೆಯ್ಗಳನೆ ಕೂನಿಸಿ ಕುರ್ಗುತೆ ವಿಡಿಸುತ್ತೆ ತಾಂ
ನೆಱೆ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು ಮರ್ಕಟಂ ।। ೨೦

ವ।। ಅಂತು ಪರಿಹಾಸರಸಮಂ ಮುನಿಗಳ ಮೊಗಕ್ಕೆ ಮೊಗೆದು ಚಿಲ್ಲುಪಂತೇಡಿಸುವ

ಮಿಂದವನಿಗೆ ಪಾಪ ಪರಿಹಾರ, ಗಣಪದವಿಗಳಿಗೇರುವನು ಜಲವನ್ನು ಸೇವಿಸಿದವನೆ ಮುಕ್ತ. ೧೯. ಮುನಿಗಳು ಸಂಧ್ಯಾಸಮಯದಲ್ಲಿ ನದಿಯ ದಡದಲ್ಲಿ ಕುಳಿತು ಮಂತ್ರಪಠನ ಮಾಡುತ್ತಿದ್ದಾರೆ. ಪರ್ಣಶಾಲೆಗಳ ಕಡೆಯಲ್ಲಿ ಶಂಭುಧ್ಯಾನ ಜಪನಿಯಮ ಹೋಮಗಳಲ್ಲಿ ತೊಡಗಿರುವ ವಿಪ್ರರು, ಹೇಮಕೂಟಪ್ರಾಂತದಲ್ಲಿ ಮನೋಹರ ವಾದದ್ದು ತುಂಗಭದ್ರೆಯ ದಡ ಎಂದನು. ವ।। ಈ ತುಂಗಭದ್ರೆ ಶಿವನ ಕೀರ್ತಿಯಂತೆ ಭುವನಭರಿತ; ಶಿವನ ಕೀರ್ತಿ ಭುವನ-ಪ್ರಪಂಚವೆಲ್ಲ ತುಂಬಿದೆ. ಅದರಂತೆ ತುಂಗಭದ್ರೆ ತುಂಬಿದೆ; ಪಾರ್ವತಿಯ ವಿಳಾಸದಂತೆ ತೀರದೊಪ್ಪಮುಂ-ಎಂದರೆ ಪಾರ್ವತಿಯ ವಿಲಾಸ ತೀರದ-ಮುಗಿಯದ ಒಪ್ಪ (ಓರಣ)ವುಳ್ಳದ್ದು. ಅದರಂತೆ ಈ ನದಿಯೂ ತೀರ-ದಡದಿಂದ ಒಪ್ಪವಾಗಿದೆ. ಅಮರಾವತಿ (ಇಂದ್ರರಾಜಧಾನಿ)ಯಂತೆ ಅನಿಮಿಷ-ಬಿಡುಗಣ್ಣರಾದ ದೇವತೆಗಳಿಂದ ತುಂಬಿದೆ; ಅದರಂತೆ ಈ ನದಿಯೂ ಸಹ ಅನಿಮಿಷ-ಮೀನುಗಳಿಂದ ತುಂಬಿದ್ದು, ಕಱೆಗೊರಲ(ವಿಷಕಂಠ-ಶಿವ)ನಂತೆ ವಿಷಭಂಗ (ನಂಜು)ವುಳ್ಳದ್ದು ಎಂದರೆ ವಿಷ-ನೀರಿನ ತರಂಗಗಳುಳ್ಳದ್ದು. ಗಗನತಳ (ಆಕಾಶ)ದಂತೆ ವಕ್ರಗತಿ-ವಾಯುವಿನಿಂದ ತುಂಬಿದ್ದು ಆಕಾಶ. ಅದರಂತೆ ನದಿಯೂ ವಕ್ರಗತಿ-ಡೊಂಕು ಡೊಂಕಾಗಿ ಹರಿದಿದೆ. ಮೇಲಾಗಿ ಗಗನತಳದ್ವಿಜರಾಜ (ರಾಜಹಂಸ) ಶೋಭಿತ. ಅದರಂತೆ ಈ ನದಿಯೂ ದ್ವಿಜ (ವಿಪ್ರ) ರಾಜ ಮೊದಲಾದವರಿಂದ ಶೋಭಿಸುತ್ತಿದೆ. ಇಂಥ ನದಿಯ ಎರಡೂ ದಡಗಳಲ್ಲಿ ವನಾವಳಿ ಶೋಭಿಸುತ್ತಿದೆ. ೨೦. ಅಲ್ಲೊಂದು ಕಪಿ, ಅದು ಎಲೆ ಹರಿದು ಹಲ್ಲುಕಿರಿದು, ಹರ್ ಹರ್ ಎಂದು ಕೂಗಿ, ಹುಬ್ಬು ಏರಿಸಿ, ಬಾಗಿ ನೋಡಿ, ಕೊಂಬೆಯಿಂದ ದಾಟುವಾಗ ತೂಗಿ, ಝುಂಕಿಸಿ, ಬಾಯ್ದೆರೆದು,

ಕೋಡಗಂಗಳಂ ನೋಡುತ್ತುಂ ಬರೆವರೆ ಮುಂತನಂತಗುಲ್ಮ ಲತಾವೃಕ್ಷ ಗುಹಾಗಹ್ವರಂಗಳೊಳ್ ಶಿವಧ್ಯಾನ ನಾನಾತಪೋಭರಭರಿತಮಾದ ಮನುಮುನಿಸ್ತೋಮದಿಂ ಹೇಮಕೂಟಾಚಳ ಪ್ರಾಂತಮಿರ್ದುದದೆಂತೆಂದೊಡೆ,

ಮ॥ಸ್ರ॥ ಪರಮಾರ್ಥಂ ಪುಣ್ಯತೀರ್ಥಂ ಮೃಗಪತಿನಿಕರ ಸ್ವಾರ್ಥಮದ್ಯತ್ ಸದರ್ಥಂ
ಸುರಭೂಜಂ ಶೈವತೇಜಂ ಏಮಳಮುನಿಸಮಾಜಂ ನಗವ್ರಾತರಾಜಂ ।
ಸ್ಥಿರಶೀಲಂ ದಂತಿಜಾಲಂ ಸುಕೃತಪರಿವೃತಸ್ಥೂಲಮೊಪ್ಪಿತ್ತು ಶೈಲಂ
ವರಕೂಟಂ ಶೃಂಗಮಾಟಂ ಮೃಗಧರಧರಜೂಟಂ ಕರಂ ಹೇಮಕೂಟಂ ॥ ೨೧

ವ॥ ಆ ಶೈಲದಲ್ಲಿ

ಕಂ॥ ತರುತರುಗಳೊಳಗನಾದಿಯ
ಹಿರಿಯರತಿವೃತಿಗಳಚಳರಾರೂಢರ್ ಭ ।
ಕ್ತರಸಾವಿಷ್ಟರ್ ನಿಯತರ್
ಪರಮ ತಪೋನಿಧಿಗಳಧಿಕರುನ್ನತರಿರ್ಪರ್ ॥ ೨೨

ವೇದಕರೀಶನ ಭಕ್ತಿಯ
ಬೋಧಕರುರುಸಾತ್ವಿಕರ್ ಸದರ್ಥರ್ ಸಿದ್ಧರ್ ।
ಸಾಧಕರುತ್ತಮರಭವಾ
ರಾಧಕರತಿಸಾಧುಗಳ್ ವಿರಾಜಿಸುತಿರ್ಪರ್ ॥ ೨೩

ನಿರತರ್ ಭರಿತರ್ ಚರಿತರ್
ಪರತತ್ಪರತರ್ ನುತರ್ ವಿಕರ್ತನ ತೇಜಃ ।
ಕಿರಣರ್ ಕರುಣರ್ ಶರಣರ್
ಕರುಣಾಳುಗಳರುಣಮಣಿನಿಭರ್ ನೆಲೆಸಿರ್ದರ್ ॥ ೨೪

ಒಲೆದು, ಬಗೆಬಗೆಯಾಗಿ ವಿಡಿಸು (ಹಂಗಿಸು)ತ್ತಾ ತಾಪಸಕುಮಾರರನ್ನು ನಗಿಸುತ್ತಿತ್ತು. ವ॥ ಹೀಗೆ ಪರಿಹಾಸರಸವನ್ನು ಉಕ್ಕಿಸುವ ಕೋತಿಗಳನ್ನು ನೋಡುತ್ತಾ ಮುಂದೆ ಬಂದರೆ ಪೊದೆ-ಬಳ್ಳಿ-ಮರ-ಗಿಡ-ಗುಹೆಗಳು, ಆ ಗವಿಗಳಲ್ಲಿ ತಪೋಮಗ್ನರಾದ ಮುನಿಗಳು, ಇವರಿಂದ ಹೇಮಕೂಟಪ್ರಾಂತವು ಶೋಭಿಸುತ್ತಿತ್ತು. ೨೧. ಈ ಹೇಮಕೂಟವು ಒಂದು ಪವಿತ್ರ ಪುಣ್ಯತೀರ್ಥ; ಸಿಂಹ ಶಾರ್ದೂಲಾದಿ ಮೃಗಗಳಿಂದ ಕೂಡಿದೆ, ಬೇಡಿದುದನ್ನು ನೀಡುವ ಮರಗಳು, ಶಿವಪ್ರಭಾವಿತವಾಗಿದೆ. ಪಾಪರಹಿತ ರಾದ ಮುನಿಜನಗಳು, ಆನೆಗಳು, ಸುಕೃತಪರಿವೃತವಾದ ಶೈಲವಿದು. ೨೨. ಆ ವನದ ಪ್ರತಿಯೊಂದು ಮರದ ಕೆಳಗೆ ಜ್ಞಾನವಯೋವೃದ್ಧರಾದ ಮುನಿಗಳು ನಿಶ್ಚಲ ಆಸನಾ ರೂಢರಾಗಿ, ಭಕ್ತಿರಸಾವಿಷ್ಟರಾಗಿ, ನಿಯಮದಿಂದ ಪರಮ ತಪೋಮಗ್ನರಾಗಿದ್ದರು. ೨೩. ವೇದಾಧ್ಯಯನಶೀಲರು, ಭಕ್ತಿಬೋಧಕರು, ಸಾತ್ವಿಕರು, ಸದರ್ಥಸಿದ್ಧರು, ಸಾಧಕರು, ಉತ್ತಮರು, ಶಿವಾರಾಧಕರು ಆದ ಸಾಧುಗಳು ವಿರಾಜಿಸುತ್ತಿದ್ದರು. ೨೪. ತಪೋನಿರತರೂ, ಗುಣಭರಿತರೂ, ಸಚ್ಚರಿತರೂ, ಪರತತ್ವರತರೂ ಸ್ತುತಿ ಪಾತ್ರರೂ, ಸೂರ್ಯನಂತೆ ತೇಜಸ್ವಿಗಳೂ ಕರುಣಾಳುಗಳೂ, ಶರಣರೂ ಆದ

ವ।। ಅಂತವರ ನಿಸ್ಸೀಮತಪಃಪ್ರಭಾವಮಂ ನೋಡುತ್ತುಂ ಬರ್ಪಾಗಳ್

ಕಂ।। ಕರೆಯವು ಕೋಗಿಲೆ ಮಧುಪಂ
ಮೊರೆಯವು ಗಿಳಿ ಗಳಪವನಿಲನಲ್ಲಾಡಂ ಪೆರ್ ।
ಮರನಂ ಗಿಡುವಂ ಲತೆಯಂ
ಗುರುಶರ್ವಸಮಾಧಿಭೀತಿಯಿಂದಾ ನಗದೊಳ್ ।। ೨೫

ವ।। ಅಂತವಱನೀಕ್ಷಿಸುತ್ತುಂ ಬರೆವರೆ ಮುಂತೆ,

ಸ್ರ।। ಭಾನುಪ್ರದ್ಯೋತಕಾಯಂ ನುತಸುಕೃತನಿಕಾಯಂ ವಿಮಾಯಂ ಮಹೇಶ
ಧ್ಯಾನಾರೂಢಂ ಸಗಾಢಂ ಸದಮಳಗುಣಚೂಡಂ ಶಿವಜ್ಞಾನಲೀಢಂ ।
ಶ್ರೀನಂದೀಶಂ ಸುವೇಶಂ ಸುರುಚಿರ ಸುಖಸಾಕಾರಸಾರಂ ಸುಧೀರಂ
ಸಾನಂದಂ ಕಾದು ನಿಂದಂ ಗಿರಿಶಿಖರಮುಖದ್ವಾರಮಂ ಭಕ್ತಿಯಿಂದಂ ।। ೨೬

ಕಂ।। ಅಂತಿರ್ದು ನಂದಿನಾಥಂ
ಮುಂತಿದಿರ್ವಂದಗಜೆಗೆಱಗಿ ಹೆಱಸಾರ್ದೊಲವಿಂ ।
ದಂ ತಾಯೆ ದೇವಿ ಶಾಂತೆಯ
ನಂತಗುಣಾಭರಣೆ ಕರುಣೆ ಶರಣೆನುತಿರ್ದಂ ।। ೨೭

ವ।। ಆಗಳ್

ಕಂ।। ತೊಳಗುವ ಶಾರದ ನೀರದ
ದೊಳಗಿಂ ಮಿಂಚಳಿವ ತೆಱದೆ ಗಿರಿಸುತೆ ಶಶಿಮಂ ।
ಡಳದಧಿದೇವತೆ ಧರಣೀ
ತಳಕ್ಕೆ ಬರ್ಪಂತೆ ಪುಷ್ಪಕದಿನಿಳಿತಂದಳ್ ।। ೨೮

ಮುನೀಶ್ವರರು ಅಲ್ಲಿ ನೆಲೆಸಿದ್ದರು. ವ।। ಹಾಗೆ ಅವರ ಮೇರೆಯರಿಯದ ತಪೋ ಮಹಿಮೆಯನ್ನು ನೋಡುತ್ತ ಬರುತ್ತಿರಲು ೨೫. ಪರಮೇಶ್ವರನು ಸಮಾಧಿಮಗ್ನ ನಾಗಿರುವುದೂ ಆ ವನದಲ್ಲಿಯೇ. ಇದರಿಂದಾಗಿ ಅಲ್ಲಿ ಕೋಗಿಲೆ ಕೂಗುವುದಿಲ್ಲ, ದುಂಬಿ ಮೊರೆಯವು, ಗಿಳಿ ಗಳಹುವುದಿಲ್ಲ, ಗಾಳಿ ಚಲಿಸದು, ಇದರಿಂದ ಮರ-ಗಿಡ-ಲತೆಗಳೂ ಚಲಿಸವು; ಎಲ್ಲವೂ ನಿಶ್ಶಬ್ದ! ಇದಕ್ಕೆಲ್ಲ ಶಿವನ ಸಮಾಧಿಭಂಗವಾಗ ಬಾರದೆಂಬ ಹೆದರಿಕೆಯೇ ಕಾರಣ. ೨೬. ಆ ವನದ ಬಾಗಿಲಲ್ಲಿ ಕಾದಿರುವವನು ನಂದಿಕೇಶ್ವರ. ಆತ ಸೂರ್ಯನಂತೆ ಮಹಾತೇಜಸ್ವಿ, ಪುಣ್ಯಪುಂಜ, ಮಾಯಾದೂರ, ಶಿವಧ್ಯಾನಾರೂಢ, ಶಿವಜ್ಞಾನಮಗ್ನ, ಸುರುಚಿರ ಸುಖಕಾಸಾರನೂ ಸುಧೀರನೂ ಆಗಿದ್ದಾನೆ. ೨೭. ನಂದಿಕೇಶ್ವರನು ಬಂದು ಅಗಜೆಗೆ ವಂದಿಸಿ ಪಕ್ಕಕ್ಕೆ ಸರಿದ. ತಾಯೆ, ದೇವಿ, ಅನಂತ ಗುಣಾಭರಣೆ, ಕರುಣೆ! ಶರಣು! ಎಂದ. ೨೮. ಗಿರಿಜಾದೇವಿ ವಿಮಾನದಿಂದ ಕೆಳಗಿಳಿಯುವಾಗ ಶರತ್ಕಾಲದ ಮೇಘದಿಂದ ಮಿಂಚು ಇಳಿಯುವಂತೆ

ಒಡನಿಳಿದಂ ಗಿರಿರಾಜಂ
ತಡವಿಲ್ಲದೆ ಭೋಂಕನಿಳಿದು ಜಯೆವಿಜಯೆಗಳಾ ।
ಗಡೆ ನವರತ್ನದ ಪಾವುಗೆ
ಯಿಡೆ ಮೆಟ್ಟಿದಳಗಜೆ ಮುಟ್ಟಿದಳ್ ಶಿವನೊಲವಂ ॥ ೨೯

ಗಿರಿರಾಜಂ ಕೆಯ್ಗುಡೆ ನೇ
ವುರದ ಕಳಧ್ವಾನಮೊಗೆದು ನಗಮಂ ಜಗಮಂ ।
ಪರಿವೇಷ್ಮಿಸೆ ಬರುತಿರ್ದಳ್
ಪರಮೇಶ್ವರಿ ಚಂದ್ರಧರನನೀಕ್ಷಿಪ ಭರದಿಂ ॥ ೩೦

ವ॥ ಅಂತು ಬರೆವರೆ

ಮ॥ ಇದು ವಿದ್ಯುತ್ಪ್ರಭವಪ್ರಭಾಪ್ರಸರಮೋ ಸಂಪೂರ್ಣಚಂದ್ರಾಂಶುಸಂ
ಪದಮೋ ಶಾಶ್ವತ ಸೂರ್ಯಕೋಟಿರುಚಿರಪ್ರದ್ಯೋತಮೋ ಮೀಱೆ ಪೊ ।
ಣ್ಮಿದ ಸರ್ವೇಶನಿಜಪ್ರಕಾಶನಿಧಿಯೋ ಪೇಳೆಂಬಿನಂ ತೋಱುತಿ
ರ್ದುದು ದಿಕ್ಸಂಕುಳನಿರ್ಮಳೀಕೃತ ಎರೂಪಾಕ್ಷ ಪ್ರಭಾಮಂಡಲಂ ॥ ೩೧

ವ॥ ಆ ಪ್ರಭಾಮಂಡಲದೊಳಗೆ

ಮ॥ಸ್ರ॥ ಎಳಸತ್ ಪದ್ಮಾಸನಂ ಭಾಸುರಭಸಿತವಪುರ್ವಲ್ಕಲಂ ಧ್ಯಾನಮುದ್ರಾಂ
ಗುಳಿ ರುದ್ರಾಕ್ಷಮಾಲಾರುಚ ನಳಿಗುಣವ್ರಾತಯಜ್ಞೋಪವೀತಂ ।
ಲಳಿತಾಸ್ಯಂ ಸ್ನಿಗ್ಧಗಂಡಂ ಮುಕುಳಿತನಯನಂ ಚಿತ್ತನಿಷ್ಕಂಪನಂ ಪಿಂ
ಗಳವರ್ಣೋದ್ಯಜ್ಜಟಾಮಂಡಳಮೆಸೆಯೆ ತಪೋವೇಷದಿಂದೀಶನಿರ್ದಂ ॥ ೩೨

ಇತ್ತು. ೨೯. ಕೂಡಲೆ ಗಿರಿರಾಜನೂ ವಿಮಾನದಿಂದ ಇಳಿದ. ಜಯೆವಿಜಯೆಗಳು ನವರತ್ನದ ಹಾವುಗೆಗಳನ್ನು ಮುಂದಿಡಲು ಅವಳು ಅವುಗಳನ್ನು ಮೆಟ್ಟಿದಳು. ಶಿವನ ಒಲವನ್ನು ಮುಟ್ಟಿದಳು. ೩೦. ಗಿರಿರಾಜನ ಕೈಹಿಡಿದುಕೊಂಡು ಗಿರಿಜೆ - ಅವಳ ನೂಪುರಗಳ ಮಂಜುಳಧ್ವನಿಯು ಹೇಮಕೂಟವನ್ನೂ ಜಗತ್ತನ್ನೂ ವ್ಯಾಪಿಸಿತ್ತು. ಪರಶಿವನನ್ನು ನೋಡುವ ತವಕದಿಂದ ಬರುತ್ತಿರಲು ೩೧. ಮುಂದೆ ಪರಮೇಶ್ವರನ ಪ್ರಭಾಮಂಡಲ ಕಂಗೊಳಿಸುತ್ತಿತ್ತು. ಅದು ವಿದ್ಯುತ್ತಿನ ಬೆಳಕಿನ ಪ್ರಸಾರವೋ, ಪೂರ್ಣಚಂದ್ರನ ಕಿರಣಸಂಪತ್ತೋ, ಕೋಟಿಸೂರ್ಯರ ಪ್ರಭೆಯೋ, ಸರ್ವೇಶ್ವರನ ನಿಜಪ್ರಕಾಶನಿಧಿಯೋ ಎಂಬಂತೆ ಆ ಪ್ರಭಾಪುಂಜ ದಿಗಂತಗಳವರೆಗೆ ಹಬ್ಬಿತ್ತು. ೩೨. ಪರಶಿವನ ತಪೋಮೂರ್ತಿವರ್ಣನ-ಪದ್ಮಾಸನ, ಭಸ್ಮಭೂಷಿತಶರೀರ, ನಾರುಡೆ, ಧ್ಯಾನಮುದ್ರೆ, ರುದ್ರಾಕ್ಷ-ಅಕ್ಷಮಾಲೆಗಳು, ಸದ್ಗುಣಗಳೇ ಯಜ್ಞೋಪವೀತ, ಲಲಿತಮುಖಕಮಲ, ನುಣುಪಾದ ಕಪೋಲಗಳು, ಮುಚ್ಚಿದ ಕಣ್ಣು, ನಿಶ್ಚಲಚಿತ್ತ, ಕೆಂಜಡೆಗಳು ಇವುಗಳಿಂದ ಪರಶಿವನು ತಪೋಮಗ್ನನಾಗಿದ್ದನು.

ಮ।।ಸ್ರ।। ಮನಮೆಂತು ಬುದ್ಧಿಯೊಳ್ ಬುದ್ಧಿಯ ನಿಲವದಹಂಕಾರದೊಳ್ ತಾನಹಂಕಾ
ರ ನಿಜಂ ಚಿತ್ತಾಂತದೊಳ್ ಚಿತ್ತದ ನೆಲೆ ವಿಲಸತ್ ಪ್ರಾಣದೊಳ್ ಪ್ರಾಣಮುಂ ಜೀ।
ವನೊಳಾದಂ ಕೂಡೆ ಜೀವಂ ಪರಮನೆನಿಸಿ ನಿರ್ಮಾಯ ನಿಷ್ಕಾಮಿ ನಿಷ್ಕಂ
ಪ ನಿವಾತಜ್ಯೋತಿರೂಪಂ ನಿರುಪಮನೆನಿಸಿರ್ದಂ ವಿರೂಪಾಕ್ಷಲಿಂಗಂ ।। ೩೩

ಕಂ।। ಭಿನ್ನಾಭಿನ್ನಂ ಜ್ಞಾನಮ
ಯಂ ನಿಜತೇಜೋವಿಲೀನ ಮಾನಸನಚಲಂ ।
ತನ್ನಂ ತಾನೇ ಜಾನಿಪ
ಬನ್ನಣದೊಳಗಿರ್ದನಭವನದ್ವಯರೂಪಂ ।। ೩೪

ಮ।।ಸ್ರ।। ಇದು ಸತ್ಯಾಕಾರಮೋ ಶಾಂತಿಯ ನೆಲೆವನೆಯೋ ಧರ್ಮವಿಸ್ತಾರಮೋ ಪು
ಣ್ಯದ ಜನ್ಮಸ್ಥಾನಮೋ ಜ್ಞಾನದ ನಿಜರುಚಿಯೋ ನಿತ್ಯನಿರ್ಮಾಯಮೋ ತ ।
ತ್ತ್ವದ ತೇಜಃಪುಂಜಮೋ ಮುಕ್ತಿಯ ಸುಖಮುಖಮೋ ಯೋಗಸಂಧಾನಮೋ ನೋ
ಡಿದು ತಾನೆಂಬಂತೆ ಮುಂತಿರ್ದುದು ಶಿವನ ನಿಜಧ್ಯಾನಮೂರ್ತಿಪ್ರಭಾವಂ ।। ೩೫

ವ।। ಅಂತುಮಲ್ಲದೆ,

ಕಂ।। ಮಾತಿನ ವೇಧೆಯ ಬೋಧೆಯ
ಭೂತಾದಿಯ ಪಂಚವಿಂಶತಿಗಳಂ ಮೀಱಿ ।
ಜ್ಞಾತೃಜ್ಞಾನಜ್ಞೇಯ
ವ್ಯಾತಮನಳಿದುಳಿದು ತಾನೆ ತಾನಾಗಿರ್ದಂ ।। ೩೬

ಮುನಿತತಿಗಳ ಮನವೆಯ್ದದ
ಮನುಗಳ ಬಗೆ ಪುಗದ ಶಾಸ್ತ್ರವಱೆಯದ ವೇದಂ ।
ಜಿನುಗುವ ಗಜಬಜೆ ನಿಳ್ಕದ
ಘನತೇಜೋರಾಶಿ ನಿಜ ನಿವೇಶದೊಳಿರ್ದಂ ।। ೩೭

೩೩. ಪರಮಶಿವವಿರೂಪಾಕ್ಷನ ತಪೋವರ್ಣನ-ಮನಸ್ಸು ಬುದ್ಧಿಯಲ್ಲಿ, ಬುದ್ಧಿಯ ನಿಲವು ಅಹಂಕಾರದಲ್ಲಿ, ಅಹಂಕಾರವು ಚಿತ್ತದಲ್ಲಿ, ಚಿತ್ತವು ಪ್ರಾಣದಲ್ಲಿ, ಪ್ರಾಣವು ಜೀವದಲ್ಲಿ, ಜೀವವು ಪರಮನಲ್ಲಿ, ಪರಮನೇ ಆಗಿ ನಿರ್ಮಾಯ-ನಿಷ್ಕಾಮ, ನಿಷ್ಕಂಪ, ನಿವಾತಜ್ಯೋತಿಯಂತೆ ನಿರುಪಮವಾಗಿತ್ತು. ೩೪. ಭಿನ್ನಾಭಿನ್ನನೂ, ಜ್ಞಾನಮಯನೂ, ತನ್ನ ತೇಜಸ್ಸಿನಲ್ಲಿ ಅಡಗಿದ ಮನಸ್ಸುಳ್ಳವನೂ ಅಚಲನೂ ಆಗಿ ಅದ್ವಯನಾದ ಅಭವನು ತನ್ನನ್ನು ತಾನೇ ನೆನೆವ ಬಿನ್ನಾಣದಲ್ಲಿದ್ದನು ('ಆತ್ಮಾನಮಾತ್ಮನ್ನವ ಲೋಕಯಂತಂ' ಎಂಬ ಮಹಾಕವಿಯ ಉಕ್ತಿಯನ್ನು ಇಲ್ಲಿ ನೆನೆಯಬಹುದು) ೩೫. ಇದು ಸತ್ಯಸ್ವರೂಪವೊ, ಶಾಂತಿಯ ನೆಲೆವೀಡೊ, ಧರ್ಮದ ವಿಸ್ತಾರವೊ, ಪುಣ್ಯದ ತೌರುಮನೆಯೊ, ಜ್ಞಾನದ ಪ್ರಕಾಶವೊ, ನಿತ್ಯನಿರ್ಮಾಯವೋ ತತ್ತ್ವದ ತೇಜಃಪುಂಜವೋ, ಮುಕ್ತಿಯ ಮುಖವೋ, ಯೋಗಸಂಧಾನವೋ ಎಂಬಂತೆ ಶಿವನ ನಿಜಧ್ಯಾನಮೂರ್ತಿ ಪ್ರಭಾವ ಬೆಳಗಿತ್ತು. ೩೬. ವಾಕ್ಕು, ಮನಸ್ಸು, ಬುದ್ಧಿ ಮುಂತಾದ ಪಂಚಭೂತಾದಿ ತತ್ತ್ವಗಳನ್ನು ದಾಟಿ, ಜ್ಞಾತೃ-ಜ್ಞಾನ-ಜ್ಞೇಯ ಎಂಬ ತ್ರಿಪುಟವನ್ನು ಮೀರಿ ಪರಶಿವನು ತಾನೇ ತಾನಾಗಿದ್ದನು. ೩೭. ಮನು ಮುನಿಗಳಿಗೆ ಗೋಚರವಾಗದ, ಶಾಸ್ತ್ರವೂ ತಿಳಿಯದ, ವೇದವೂ ಪುಗದ ನಿಷ್ಕಳ ಘನತೇಜೋರಾಶಿಯಾದ ಅಭವನು ನಿಜ

ಪೊಱಗಂ ಬಳಸದ ಮಾಯೆಗೆ
ತೆಱಹಂಗುಡದಚ್ಚಬಚ್ಚಬಱೆಯಱೆವಿನ ಸೈ ।
ವೆಱಗಿನ ಮಱಹಿನ ಕುಱುಹಿನ
ಕಱೆಗೊರಲಂ ನಿಜಸಮಾಧಿಯೊಳ್ ಸಂದಿರ್ದಂ ॥ ೩೮

ಇರೆ ಕಾಣುತೆ ಗಿರಿರಾಜಂ
ಪರಮಸುಖಂಬಡೆದು ಪಿಡಿದು ಮೆಲ್ಲಡಿಗಳನಾ ।
ದರದಿಂ ಹರ್ಷಂ ಮೂಡು
ತ್ತಿರೆ ಪುಳಕದ ಮೆಯ್ಯೊಳೊಲ್ದು ಮೆಯ್ಯಿಕ್ಕಿರ್ದಂ ॥ ೩೯

ಪ॥ ಅಂತು ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ಪಾರ್ವತಿಯಂ ಕರೆದು,

ಚಂ॥ ಅನುಪಮನಿರ್ದನಿರ್ದನೆ ಶರಣ್ಬುಗು ಶಾಶ್ವತಮೂರ್ತಿಯಿರ್ದನಿ
ರ್ದನೆ ನಡೆನೋಡು ಚಂದ್ರಧರನಿರ್ದನೆ ನಂಬು ನಿಜೇಶನಿರ್ದನಿ ।
ರ್ದನೆ ಪರಿಭಾವಿಸಪ್ರತಿಮನಿರ್ದನೆ ಕೀರ್ತಿಸು ಶಂಭುವಿರ್ದನಿ
ರ್ದನೆ ಪದೆದರ್ಚಿಸರ್ಚಿಸೊಲವಿಂದಮೆ ಪಾರ್ವತಿ ಹಂಪೆಯಾಳ್ದನಂ ॥ ೪೦

ಕಂ॥ ನಿಧಿಯಿದೆ ಭಕ್ತರ ಬಯ್ಕೆಯ
ನಿಧಾನವಿದೆಯಚ್ಚಶರಣರನುವಿದೆ ಕರುಣಾಂ ।
ಬುಧಿಯಿದೆ ಸುಧೆಯಿದೆ ಕೇಳ್ ನಿ
ನ್ನಧಿಪಂ ಶಶಿಮೌಳಿಯೆಂಬ ಕಲ್ಪಮಹೀಜಂ ॥ ೪೧

ಸದಮಳಮಿದೆ ಪರತತ್ತ್ವದ
ನಿಧಾನಮಿದೆಯಾದ್ಯರಱೆದು ಕುಱುಪಿಟ್ಟಾಸಂ ।
ದದ ಮೊದಲಿದೆ ಪರಮಾರ್ಥದ
ತುದಿಯಿದೆ ಗಿರಿಜಾತೆ ನೋಡು ನೆನೆ ಹೊಗಳೆಂದಂ ॥ ೪೨

ನಿವೇಶಸ್ಥಿತಿಯಲ್ಲಿದ್ದನು. ೩೮. ಹೊರಗಿನ ಪರಿವೆಯಿಲ್ಲದ, ಮಾಯೆಗೆ ಎಡೆಗೊಡದ, ಸ್ವಚ್ಛಜ್ಞಾನದ ತನ್ಮಯತೆಯ ನಿಜಸಮಾಧಿಯಲ್ಲಿ ಪರಶಿವನಿದ್ದನು. ೩೯. ಹೀಗಿರುವ ಶಿವನ ಸಮಾಧಿಸ್ಥಿತಿಯನ್ನು ಕಂಡು ಗಿರಿರಾಜನು ಮೆಲ್ಲಡಿಯಿಟ್ಟು ಮುಂದೆ ಬಂದು ಆನಂದಾಶ್ರುಗಳು ಕುಡಿವರಿಯೆ, ಮೈನವಿರೇಳುತ್ತಿರೆ ಸಾಷ್ಟಾಂಗವೆರಗಿದನು. ೪೦. ಅನುಪಮನಿಗೆ ಶರಣಾಗು, ಶಾಶ್ವತಮೂರ್ತಿಯನ್ನು ಚೆನ್ನಾಗಿ ನೋಡು, ಚಂದ್ರಧರನನ್ನು ನಂಬು, ನಿಜೇಶನನ್ನು ಪರಿಭಾವಿಸು, ಅಪ್ರತಿಮನನ್ನು ಸ್ತುತಿಸು, ಶಂಭುವನ್ನು ಭಕ್ತಿಯಿಂದ ಅರ್ಚಿಸು, ಎಂದು ಪಾರ್ವತಿಗೆ ಬೆಸಸಿದನು. ೪೧. ಇದು ಭಕ್ತರ ಬಯಕೆಯ ನಿಧಿ; ಅಚ್ಚಶರಣರ ನಿಧಾನವೇ ಇದು. ಇದು ಕರುಣೆಯ ಕಡಲು, ಇದೇ ಅಮೃತ, ನಿನ್ನ ಅಧಿಪನೆಂಬ ಕಲ್ಪವೃಕ್ಷವಿದೇ! ೪೨. ಇದು ಸದಮಳ ಪರತತ್ತ್ವನಿಧಾನ; ಆದ್ಯರು ಅರಿದು ಗುರ್ತಿಸಿದ್ದು. ಇದು ಆನಂದದ ಮೊದಲು, ಪರಮಾರ್ಥದ ತುದಿ ಇದೇಯೇ! ಹೇ ಗಿರಿಜೆ, ಇದನ್ನು ನೆನೆ, ಸ್ತುತಿಸು ಎಂದು

ವ।। ಎಂದು ಗಿರಿರಾಜಂ ಹರನ ಪರತತ್ತ್ವಮಯ ಸೌಂದರ್ಯರೂಪಮಂ ಗಿರಿಜೆಗೆ ತೋಱುತ್ತಂ ಪೊಡಮಡು ಪೊಡಮಡೆನೆ ಪಾರ್ವತೀದೇವಿಗೆ ಕೌತುಕರಸದೊಳಾನಂದಂ ಪುಟ್ಟಿ ಭಯರಸದೊಳ್ ಭಕ್ತಿಯುಣ್ಮಿ ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮೆ ಶೃಂಗಾರರಸದೊಳ್ ಲಜ್ಜೆಬೆರಸಿ ಕಲ್ಪತರುವಿನ ಬೀಳಲ್ ಮಹಾನಿಧಾನಕ್ಕೆಱಗುವಂತೆ ಮಂದಾನಿಳನ ಸೊಂಕಿಂದಂ ಪುಷ್ಪಮಾಲೆ ಬಳ್ಕುವಂತೆ ಕುಸುಮಚಾಪಂ ಕಾಲ್ಗೆಱಗುವಂತೆ ಪಂಚಬಾಣಂ ಹೊಡೆಗೆಡೆವಂತೆ ಮುಂದೆ ನಿನ್ನ ವಾಮಭಾಗಮಂ ಸೂಱೆಗೊಳ್ವುದರ್ಕೆದೆ ಕುಱುಪೆಂಬಂತೆ ಬಿಂಕದಿಂ ಕೊಂಕಿ ನಿಂದು ವಿಲಾಸದಿಂದೆಡದುಂಗುಟಮಂ ಲಲಾಟದಿಂ ಮುಟ್ಟಿ ಪೊಡೆಮಟ್ಟು ನಿಂದು,

ಶಾ।। ಆನಿರ್ದಂತಿರದೇಕೆ ಬೇಡ ತಪವೆಂದೆಂಬಂತಹಂಕಾರದಿಂ
ನೀನೇ ಸದ್ಗತಿ ದೇವ ದೇವ ದಯೆಗೆಯ್ಯೆಂಬಂತೆ ಕಾರ್ಪಣ್ಯದಿಂ ।
ಸಾನಂದಾತ್ಮಕನೆನ್ನನೇಕಱಿವನೆಂದೆಂಬಂತೆ ನಿರ್ವೇದದಿಂ
ನಾನಾ ಭೋಗದೊಳೆಂದು ಕೂಡಿದಪೆನೆಂಬಂತಾಸೆಯಿಂ ನೋಡಿದಳ್ ।। ೪೩

ಮ।। ಶಿವನೀತಂ ನಿಜವಲ್ಲಭಂ ಮಮಗುರು ಪ್ರಖ್ಯಾತನತ್ಯುರ್ಜಿತಂ
ಭವನೆನ್ನಾಳ್ದನೆನಿಪ್ಪುದಂ ತಿಳಿದೆನಾಂ ನೀಂ ಪೋಗು ನಿತ್ಯಾರ್ಚನೋ ।
ತ್ಸವದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ಪೆನೆಂ
ದು ವಿಳಾಸಾಬ್ಧಿ ಭವಾನಿ ನೋಡಿ ನುಡಿದಳ್ ಭೂಭೃತ್ಕುಲಾಧೀಶನೊಳ್ ।। ೪೪

ಗಿರಿರಾಜನು ಮಗಳಿಗೆ ಹೇಳಿದನು. ವ।। ಗಿರಿರಾಜನು ಶಿವನ ನಿಜಸೌಂದರ್ಯ ಸ್ವರೂಪವನ್ನು ಗಿರಿಜೆಗೆ ತೋರಿ 'ಪೊಡೆಮಡು, ಪೊಡೆಮಡು' ಎನ್ನಲು ಪಾರ್ವತಿಗೆ ರಸಮಯವಾದ ಕೌತುಕದಲ್ಲಿ ಆನಂದ, ಭಯದಲ್ಲಿ ಭಕ್ತಿ, ಸ್ನೇಹದಲ್ಲಿ ತಾತ್ಪರ್ಯ, ಶೃಂಗಾರದಲ್ಲಿ ಲಜ್ಜೆ ಬೆರೆದು, ಕಲ್ಪವೃಕ್ಷದ ಬಿಳಲು ಮಹಾನಿಧಾನಕ್ಕೆ ಎರಗುವಂತೆ, ಮಂದಮಾರುತದ ಸ್ಪರ್ಶಕ್ಕೆ ಕುಸುಮಮಾಲೆ ಬಳುಕುವಂತೆ, ಕುಸುಮಬಾಣನೇ ಕಾಲಿಗೆ ಬೀಳುವಂತೆ, ಪಂಚಬಾಣ ಮದನನೇ ಹೊಡೆಗೆಡೆದಂತೆ ಮುಂದೆ ನಿನ್ನ ಎಡಭಾಗವನ್ನೇ ಸೂರೆಗೊಳ್ಳುವುದಕ್ಕೆ ಇದೇ ಕುರುಹು ಎಂಬಂತೆ ಬಿಂಕದಿಂದ ಕೊಂಕಿ ನಿಂದು ವಯ್ಯಾರದಿಂದ ಎಡ ಅಂಗುಷ್ಟವನ್ನು ಹಣೆಮುಟ್ಟುವಂತೆ ಪೊಡಮಟ್ಟಳು. ೪೩. ಗಿರಿಜೆ ಪರಶಿವನನ್ನು ಆಸೆಯಿಂದ ಭಾವಪೂರ್ಣವಾಗಿ ನೋಡಿದಳು. ಆ ನೋಟವು ನಾನಿರ್ದಂತೆ ಇರದೆ ಹೀಗೇಕೆ ಬಂದೆ? ಎಂಬಂತೆ ತಪಸ್ಸು ಬೇಡ ಎಂಬಂತೆ ನೀನೇ ಸದ್ಗತಿ, ದೇವ ದೇವ, ದಯೆಮಾಡು ಎಂಬಂತೆ, ಸಾನಂದಾತ್ಮಾಕನು ಕಾರ್ಪಣ್ಯದಿಂದ ನನ್ನನ್ನು ಏಕೆ ಅರಿವನು ಎಂಬಂತೆ, ನಿರ್ವೇದ ಭಾವದಿಂದ ನಾನಾ ಭೋಗದಲ್ಲಿ ಎಂದು ಒಂದುಗೂಡುವೆನೋ ಎಂಬಂತೆ ಇತ್ತು. ೪೪. ನಿಜವಲ್ಲಭನಾದ ಶಿವನು ಈತನೇ, ನನ್ನ ಗುರು, ಪ್ರಖ್ಯಾತ, ಅತ್ಯುರ್ಜಿತ, ಎನ್ನಾಳ್ದ ಭವನು ಈತನೇ ಎಂಬುದನ್ನು ನಾನು ತಿಳಿದೆ. ಇನ್ನು ನೀನು ಹಿಂದಿರುಗು. ಪ್ರತಿನಿತ್ಯವೂ ಉತ್ಸಾಹದಿಂದ ಸಂತೋಷದಿಂದ, ಸದಾತುರತೆಯಿಂದ, ಆನಂದದಿಂದ ಇಲ್ಲಿರುತ್ತೇನೆ ಎಂದು ಗಿರಿಜೆ ತಂದೆಗೆ ಹೇಳಿದಳು.

ಕಂ॥ ನುಡಿಯೆ ಗಿರಿರಾಜನೊಲವಿಂ
ಮೃಡಾಣಿಯಂ ನೋಡಿ ಮಗಳೆ ಮಾತೆ ಕರಂ ನ ।
ಟ್ಟಡವಿ ಗುಹೆ ಗುಹ್ವರ ಮಡು
ಗಿಡುವವಱೊಳ್ ಪದುಳಮರ್ಚಿಸೆನುತುಂ ನುಡಿದಂ ॥ ೪೫

ಪತ್ತಡಿಯಿಟ್ಟತಿಮೋಹಂ
ಚಿತ್ತಮನಳ್ಳಿಱೆಯೆ ತಿರುಗಿ ಬಂದು ಗಿರಿಜೆ ಲೋ ।
ಕೋತ್ತಮೆ ಪೋದಪೆನೆನುತುಂ
ಮತ್ತಂ ಮತ್ತಪ್ಪಿ ಪರಸಿ ಗಿರಿಪತಿ ಪೋದಂ ॥ ೪೬

ವ॥ ಅಂತು ಪೋಗೆ ಚಿಂತಿಸಿ ನೋಡಿ ಮುಂತಿರ್ದ ವಿಪುಳ ವಿಭ್ರಮನಂ ತಪೋಮಯನಂ ವಿಳಾಸನಿಧಿಯಂ ವೈರಾಗ್ಯಯುಕ್ತನಂ ಸೌರಭ್ಯಸದನನಂ ಭಸಿತಕಾಯನಂ ಸೌಂದರ್ಯರೂಪನಂ ಜ್ಞಾನಪ್ರದೀಪನಂ ನಿಜಸುಖನಿವಾಸನಂ ಸ್ವಯಂಪ್ರಕಾಶನಂ ಕಂಡು ಶೃಂಗಾರರಸಕ್ಕೆ ಮನದಂದು ವೈರಾಗ್ಯರಸಕ್ಕೆ ಮೆಯ್ದೆಗೆದು ಸಹಚರಿಯರಪ್ಪ ಜಯೆವಿಜಯೆಗಳ್ಗೆ ನಗತನೂಜೆ ನಿರ್ವೇದದಿಂದಿಂತೆಂದಳ್,

ಚಂ॥ ಇದೆ ವಿಭು ಸಾರ್ದನೊಲ್ದು ಪರವಂ ಪರವಂ ಪರವಂಚನೋಕ್ತಿ ಕೊ
ಳ್ದು ತಪಮತ್ಯಸಾಧ್ಯ ವಿಷಯಂ ವಿಷಯಂ ವಿಷಯಂತ್ರದಂತೆ ಸು ।
ತ್ತಿದುದುಪತಾಪವೆಯ್ದಿ ತನುವಂ ತನುವಂ ತನುವಂ ಕಪರ್ದಿ ನೋ
ಡಿದೊಡೆನಗಾದುದೆಯ್ದೆ ಕುಮುದಂ ಕುಮುದಂ ಕುಮುದಂ ಮೃಗೇಕ್ಷಣೇ ॥ ೪೭

೪೫. ಹೀಗೆ ಪಾರ್ವತಿ ನುಡಿಯಲು ಪರ್ವತರಾಜ ವಾತ್ಸಲ್ಯದಿಂದ ಮಗಳನ್ನು ನೋಡಿ, ಮಗಳೆ! ತಾಯಿ, ಇದು ನಟ್ಟಡವಿ, ಗುಹೆ ಗಹ್ವರಗಳಿವೆ, ಮಡು-ಗಿಡಗಳಿವೆ ನೋಡಿಕೊಂಡು ಎಚ್ಚರದಿಂದಿದ್ದು ಶಿವನನ್ನು ಭಕ್ತಿಯಿಂದ ಪೂಜಿಸು ಎಂದು ನುಡಿದನು. ೪೬. ಹತ್ತು ಹೆಜ್ಜೆ ಮುಂದೆ ಹೋದ ಗಿರಿರಾಜನಿಗೆ ಮಗಳ ವ್ಯಾಮೋಹ ಅಳ್ಳಿರಿಯಿತು. ಮತ್ತೆ ಹಿಂದಕ್ಕೆ ಬಂದು ಗಿರಿಜೆ, ಲೋಕೋತ್ತಮೆ ಎಂದು ಮತ್ತೆಮತ್ತೆ ಮುದ್ದಿಸಿ ಹರಸಿ ಹಿಂದಿರುಗಿದನು. ವ॥ ತಂದೆ ಹೋದ ಮೇಲೆ ಗಿರಿಜೆಗೆ ಯೋಚನೆ, ಮುಂದೆ ತಪೋಮಯನೂ, ವಿಳಾಸನಿಧಿಯೂ, ವೈರಾಗ್ಯಯುಕ್ತನೂ, ಸೌರಭ್ಯಸದನನೂ, ಭಸಿತಕಾಯನೂ ಆದ ಪರಶಿವನನ್ನು ಕಂಡು ಶೃಂಗಾರರಸಕ್ಕೆ ಮನದಂದು ವೈರಾಗ್ಯರಸಕ್ಕೆ ಮೈಸೋತು ಜತೆಗಿದ್ದ ಸಖಿಯರಿಗೆ ಹೀಗೆ ಹೇಳಿದಳು. ೪೭. ಎಲೈ ಮೃಗಾಕ್ಷಿಯೆ, ಪರವನ್ನು ಒಲಿದು ವಿಭು ಸಾರ್ದದು ಇದೇ! ಪರವಂಚನೋಕ್ತಿಯು ಪರವನ್ನು ಸ್ವೀಕರಿಸಲಾರದು; ತಪವು ಅತಿ ಅಸಾಧ್ಯವಾದ ವಿಷಯ; ವಿಷಯವು ವಿಷಯಂತ್ರದಂತೆ ಸುತ್ತಿದುದು; ಉಪತಾಪವೆಯ್ದಿದತನು (ಕೃಶ)ವಾದ ತನುವನ್ನು ಕಪರ್ದಿ ನೋಡಿದಲ್ಲಿ ವಿಷಾದಗೊಳ್ಳುವನು, ಕುಮುದವುಂಟಾಗಲು, ಎನಗೆ ಕುಮುದದಂತೆ ಕುಮುದವುಂಟಾಯಿತು.

ಕಂ॥ ತಪಮಿಂತಿದು ಮದ್ವಿರಹಾ
ತಪಮತ್ಯಧಿಕಂ ತುಡುಂಕಬಾರದಪಾರಂ ।
ತಪನನ ತೇಜಕ್ಕಂ ವಿ
ತ್ತಪನಜೆವಿಂಗಂ ವಿಶೇಷಂ ಚೋದ್ಯಮಭೇದ್ಯಂ ॥ ೪೮

ನಿಗಮಂಗಳ್ ವಿಷ್ಣು ವಿರಿಂ
ಚಿಗಳಜೆಯದ ಶಿವನನಜೆವೊಡೆನ್ನಳವೇ ತಾಂ ।
ಬಗೆವೊಡೆ ಸಾತ್ತ್ವಿಕ ಶಿವಭ
ಕ್ತಿಗಲ್ಲದಭವನಂ ಸಮಂತು ಸಿಲ್ಕಂ ನಿಲ್ಕಂ ॥ ೪೯

ಅದುಕಾರಣದಿಂ ಭಕ್ತಿ
ಪ್ರದನಂ ವಿರೂಪಾಕ್ಷನಂಘ್ರಿಗಳನರ್ಚಿಸುವೆಂ
ಸದಮಳ ಶಿವಸುಖಮುಖಸಂ
ಪದದೊಳ್ ಬಳಿಕಿರ್ಪೆನಪ್ಪಿ ಶರ್ವನ ತನುವಂ ॥ ೫೦

ಎಂದಬಲೆಯರೊಳ್ ನುಡಿಯು
ತ್ತುಂ ದಟ್ಟಡಿಯಿಟ್ಟು ಭಕ್ತಿ ತನ್ನಯೆ ಮನಮಂ ।
ಬಂದಡರೆ ಭರಂಮಿಗೆ ಮುದ
ದಿಂದಂ ಪುಷ್ಪಾಪಚಯಕ್ಕೆ ಗಿರಿಸುತೆ ಬಂದಳ್ ॥ ೫೧

ನೇವುರದ ನುಣ್ಣನಿಗೆ ಮಿಗೆ
ಯಾವರಿಸುವ ಹಂಸೆವಿಂಡನೆಡಪುತ್ತುಂ ಸದ್ ।
ಭಾವಕಿ ಭಾಮಿನಿ ಭರ್ಗನ
ಜೀವಂ ಶೃಂಗಾರವಾರಿನಿಧಿ ನಡೆತಂದಳ್ ॥ ೫೨

೪೮. ಇದು ತಪಸ್ಸು, ನನ್ನ ವಿರಹಾತಾಪವೊ ಅತ್ಯಧಿಕವಾಗಿದೆ. ಅದು ಅಪಾರ. ಆದ್ದರಿಂದಲೇ ಅದನ್ನು ತುಡುಕುವಂತಿಲ್ಲ; ಇದು ತಪನನ (ಸೂರ್ಯ) ತೇಜಸ್ಸಿಗೂ, ವಿತ್ತಪ (ಕುಬೇರ)ನ ಅರಿವಿಗೂ ಮೀರಿದ್ದು. ಆದ್ದರಿಂದ ಇದು ಸೋಜಿಗ ಅಂತೆಯೇ ಅಭೇದ್ಯವೂ ಆಗಿದೆ. ೪೯. ವೇದ- ವಿಷ್ಣು-ವಿರಿಂಚಿಗಳು ಅರಿಯದ ಶಿವನನ್ನು ಅರಿಯುವುದು ನನಗೆ ಸಾಧ್ಯವೆ? ಸಾತ್ವಿಕ ಶಿವಭಕ್ತಿಗಲ್ಲದೆ ಆತ ಎಂದಿಗೂ ದೊರೆಯಲಾರ! ೫೦. ಆದ್ದರಿಂದ ಭಕ್ತಿಪ್ರದನಾದ ವಿರೂಪಾಕ್ಷನ ಪಾದಕಮಲಗಳನ್ನು ಅರ್ಚಿಸುತ್ತೇನೆ. ಆ ಶರ್ವನ ತನುವನ್ನು ಅಪ್ಪಿ ಸುಖಿಸುತ್ತೇನೆ. ೫೧. ಎಂದು ಸಖಿಯರೊಡನೆ ನುಡಿದು, ಭಕ್ತಿಯು ತನ್ನ ಮನಸ್ಸನ್ನು ವ್ಯಾಪಿಸುತ್ತಿರಲು ಗಿರಿಸುತೆ ಮುದದಿಂದ ಪುಷ್ಪಾಪಚಯಕ್ಕೆ ಬಂದಳು. ೫೨. ಅವಳ ನೂಪುರದ ನುಣ್ಣನಿಗೆ ಹಂಸೆಗಳು ಮುತ್ತಿ ಬಂದವು. ಅವುಗಳನ್ನು ಎಡವುತ್ತಾ ಭಾವಕಿಯಾದ ಭರ್ಗನ ಜೀವ ಗಿರಿಜೆ ಶೃಂಗಾರವಾರಿನಿಧಿಯಂತೆ ನಡೆತಂದಳು.

ವ॥ ಇಂತು ನಡೆತಂದು ಪೂದೋಂಟಮಂ ಪೊಕ್ಕು,

ಕಂ॥ ಅರರೆ ಸುಕುಮಾರೆ ಸೌರ
ಭ್ಯರತೆ ವಸಂತಾನುಕೂಲೆ ಮೆಲ್ಲಡಿಯಿಡುತುಂ ।
ಹರನ ಜಡೆಮುಡಿಗೆ ನಡೆತಂ
ದಿರವಂತಿಗೆಯರಲನಗಜೆ ಬಗೆ ಮಿಗೆ ತೆಗೆದಳ್ ॥ ೫೩

ತೊಳಗುವ ಚಂಪಕನಾಸಿಕೆ
ಬಳಸಿದ ಚಂಪಕ ಸುಗಂಧಿ ನಗನಂದನೆ ಬಂ ।
ದಳಿಮನವಲ್ಲದ ಭಕ್ತ್ಯ
ಜ್ವಳೆ ತಿಱೆದಳ್ ಕಂಪು ಸುರಿವ ಸಂಪಗೆಯಲರಂ ॥ ೫೪

ಎಸೆವ ರಜೋಗುಣ ಲಸಿತ
ಪ್ರಸನ್ನಮುಖರಾಗಯುಕ್ತೆ ಶಿವಪದಪೂಜಾ ।
ವ್ಯಸನೆ ಶಶಿವದನೆ ತಿಱೆದಳ್
ಪೊಸ ಹರಿಸಮನಾಂತು ಶಾಂತೆ ಸೇವಂತಿಗೆಯಂ ॥ ೫೫

ಪರಮೋತ್ಸವದಿಂ ನಡೆತಂ
ದುರುತರ ಮೃಗನಾಭಗಂಧಿ ನಿಂದು ಬಳಿಯ ಕ ।
ತ್ತುರಿ ತಾನೆನಿಸುವ ಪಡ್ಡಳಿ
ಯರಲಂ ತಿಱೆದಳ್ ಭವಾನಿ ಶಿವಪೂಜಾರ್ಥಂ ॥ ೫೬

ಎಳಸಿ ನಲಿನಲಿದು ನವಪಾ
ಟಳಗಂಧಿಕೆ ಪಾಟಳಾಂಗಿ ಮಿಗೆ ಕೊಯ್ದಳ್ ಪಾ ।
ಟಳರುಚಿರಾಧರೆ ಕಾಮನ
ಶಿಳೀಮುಖದ ಪರಿಯ ಪಾದರಿಯ ಪೊಸ ಪೂವಂ ॥ ೫೭

ವ॥ ಅವಂ ಕೊಂಡು ಮತ್ತೆ ನಡೆತಂದು ಕೊಳನಂ ಪೊಕ್ಕು,

ಕಂ॥ ಕಮಳಂದಿಱೆಯಲ್ ನಿಜಕರ
ಕಮಳಮುಮಂ ನೀಡಿ ಕೆಯ್ಯ ಕಂಪಿಂಗಮಮ ।
ಭ್ರಮರಾಳಿ ಮುತ್ತೆ ಕರಮಂ
ಕಮಳಂ ದಿಟಮೆಂದು ಬಗೆದು ನೋಡುತ್ತಿರ್ದಳ್ ॥ ೫೮

೫೩. ಸುಕುಮಾರೆಯಾದ ಅಗಜೆ ವಸಂತಾನುಕೂಲೆಯಾಗಿ ಮೆಲ್ಲಡಿಯಿಡುತ್ತ ಬಂದು ಹರನ ಜಡೆಗೆ ಇರವಂತಿಗೆ ಅರಲುಗಳನ್ನು ತಂದಳು. ೫೪. ಚಂಪಕನಾಸಿಕೆಯೂ ಚಂಪಕಸುಗಂಧಿಯೂ ಆದ ನಗನಂದನೆ ಗಿರಿಜೆ ಭಕ್ತಿ ಉದ್ರೇಕದಿಂದ ಶಿವಪೂಜೆಗಾಗಿ ಸಂಪಿಗೆ ಹೂಗಳನ್ನು ತಂದಳು. ೫೫. ಪ್ರಸನ್ನಮನಸ್ಕಳಾದ ಆ ಚಂದ್ರವದನೆ ಶಿವಾರ್ಚನೆಗಾಗಿ ಹೊಸ ಹರ್ಷದಿಂದ ಸೇವಂತಿಗೆ ಹೂವುಗಳನ್ನು ಸಂಗ್ರಹಿಸಿದಳು. ೫೬. ಭವಾನಿಯು ಶಿವಪೂಜೆಗಾಗಿ ಪಡ್ಡಳಿ (ಕಣಗಿಲೆ) ಹೂ ತಿರಿತಂದಳು. ೫೭. ಗಿರಿಜೆ ನಲಿನಲಿದು, ನವ ಪಾಟಳ ಗಂಧಿಕೆ ಪಾಟಳಾಂಗಿ ಪಾಟಳ ರುಚಿರಾಧರೆ ಕಾಮನ ಶಿಳೀಮುಖದಂತಿರುವ ಪಾದರಿಹೂಗಳನ್ನು ತಂದಳು. ೫೮. ಅಂತು ನೋಡಿ ತಿಳಿದು,

ವ।। ಅಂತು ನೋಡಿ ತಿಳಿದು

ಮಿಸುಪ ನವತರುಣ ತರಣಿಯ
ಪಸಿಯ ಬಿಸಿಲ್ ಮಸಗೆ ತನುವಿನರಿಸಿನವೊಲವಿಂ ।
ದೆಸೆವ ರಥಾಂಗಕುಚದ್ವಯೆ
ಪೊಸದಾವರೆವೂವನೋವಿ ಭಾವಿಸಿ ತಿಱೆದಳ್ ।। ೫೯

ಸದಮಳ ಮೃದುಮಯ ಹಸ್ತ
ಪ್ರದೇಶಮಂ ಸುತ್ತಿ ಮುತ್ತೆ ಮತ್ತಾಳಿಗಳಂ ।
ಬುದ ಕೋದಂಡ ಭ್ರೂಯುಗೆ
ಸುದೀರ್ಘನಖೆ ಕೊಯ್ದೊಲ್ದು ನುತಕೇತಕಿಯಂ ।। ೬೦

ಸೆಳ್ಳುಗುರ್ಗಳ ನಳನಳಿಸುವ
ಬಳ್ಳಿವೆಳಗು ಕರೆಯೆ ಕೌಮುದಿಯನುತ್ಸವದಿಂ ।
ದುಳ್ಳಲರ್ವ ಕುಮುದಕುಲದೊಳ
ಗೊಳ್ಪಿದುವಂ ತೆಗೆದಳಿಂದುಮುಖಿ ತಿಳಿಗೊಳನೊಳ್ ।। ೬೧

ಕಂ।। ಜಾತಿಸುಗಂಧಿನಿ ಮೇನಾ
ಜಾತೆ ಕುಸುಮಜಾತಿಯೊಳಗೆ ಜಾತಿಯಿದೆಂದಾ ।
ಜಾತಿ ಸ್ತ್ರೀ ಜಾತಿಯೊಳತಿ
ಜಾತೆ ಜಗನ್ಮಾತೆ ಜಾತಿಯರಲಂ ಕೊಯ್ದಳ್ ।। ೬೨

ಮಲ್ಲಿಗೆ ಶರ್ವನ ಜಡೆಮುಡಿ
ಯಲ್ಲಿಗೆ ಕೊಂಡೊಯ್ಯಲೆಂದು ಸಮ್ಮುದದಿಂ ನಿ ।
ಮ್ಮಲ್ಲಿಗೆ ಬಂದೆನೆನುತ್ತುಂ
ಮಲ್ಲಿಗೆಯಲರ್ದೊಂಗಲಂ ಮಹೇಶ್ವರಿ ಕೊಯ್ದಳ್ ।। ೬೩

ವ।। ಮತ್ತಂ ಪುಷ್ಪಜಾತಿಯಂ ಕೊಯ್ದು ಪತ್ರಜಾತಿಯಂ ಕೊಯ್ಯಲೆಂದು

೫೯. ಬಾಲ ಸೂರ್ಯನ ಎಳೆಬಿಸಿಲಿನಂತಿರುವ ಅರಿಸಿನ ಲೇಪಿಸಿದ ಆ ಚಕ್ರವಾಕಸ್ತನಿ, ಹೊಸತಾವರೆ ಹೂವುಗಳನ್ನು ಬಿಡಿಸಿ ತಂದಳು. ೬೦. ಮದಿಸಿದ ದುಂಬಿಗಳು ಅವಳ ಅಮಲ ಮೃದು ಹಸ್ತಗಳನ್ನು ಮುತ್ತುತ್ತಿರಲು, ಕಾಮನ ಬಿಲ್ಲಿನಂತೆ ಸುಂದರವಾದ ಹುಬ್ಬುಗಳುಳ್ಳ ಗಿರಿಜೆ ಸೆಳ್ಳಗುರುಗಳ ಕೈಯ್ಗಳಿಂದ ಒಳ್ಳೆಯ ಕೇದಗೆ ಹೂಗಳನ್ನು ಕೊಯ್ದು ತಂದಳು. ೬೧. ಚೂಪಾದ ತೆಳುಉಗುರುಗಳು ಪ್ರಭೆ ಬೀರುತ್ತಿರುವ ಕೈಗಳಿಂದ ಅರಳುವುದರಲ್ಲಿರುವ ನೈದಿಲೆಗಳಲ್ಲಿ ಒಳ್ಳೆಯವನ್ನು ಇಂದುಮುಖಿ ಅಗಜೆ ತಿಳಿ ಗೊಳಗಳಲ್ಲಿ ಆರಿಸಿ ತಂದಳು. ೬೨. ಸ್ತ್ರೀ ಜಾತಿಯಲ್ಲಿಯೇ ಅತಿಶ್ರೇಷ್ಠಳೆನಿಸಿದ ಆ ಜಗನ್ಮಾತೆ ಮೇನಾಜಾತೆ, ಕುಸುಮಜಾತಿಯಲ್ಲಿ ಅತಿಶ್ರೇಷ್ಠವಾದ ಜಾತಿ ಕುಸುಮಗಳನ್ನೇ ಆರಿಸಿದಳು. ೬೩. ಮಲ್ಲಿಗೆಯನ್ನು ಶರ್ವನ ಜಡೆಮುಡಿಯಲ್ಲಿ ಸಿಂಗರಿಸಲೆಂದು ನಿಮ್ಮಲ್ಲಿಗೆ ಬಂದೆ ಎಂದು ಹೇಳುವಳೊ ಎಂಬಂತೆ ಮಹೇಶ್ವರಿ ಮಲ್ಲಿಗೆ ಕುಸುಮಗೊಂಚಲನ್ನು ಕೊಯ್ದಳು. ವ।। ಪತ್ರಜಾತಿಯನ್ನು ಕೊಯ್ಯಲೆಂದು,

ಕಂ॥ ಸಹಜಾಮೋದೆ ಸುಗಂಧಾ
ಮಹಮೆನಿಸಿದ ಮರುಗದಲ್ಲಿ ಪರಿಮಳದೆಲೆಯಂ ।
ಬಹುಗುಣಭೂಷಣೆ ಭಕ್ತಿಯೊ
ಳಹಿನಿವಹಾಭರಣನರ್ಚನೆಗೆ ನೆರೆ ತಿಱೆದಳ್ ॥ ೬೪

ನಲವಿಂದಂ ಮುಡಿವಾಳದ
ನೆಲೆಗೆಯ್ತಂದಗತನೂಜೆ ಬೇರಂ ಬಲ್ಲ ।
ರ್ಗೆಲೆದೋಱಲೇಕೆ ನೀನೆನು
ತೊಲವಿಂ ಪರಿಮಳದ ಬೇರ್ಗಳಂ ಬರೆ ತೆಗೆದಳ್ ॥ ೬೫

ಇಂತಿಂತನಂತಕಾಂತಲ
ತಾಂತಂಗಳನಾಯ್ದು ಕೊಯ್ದು ಸಂತಸದಿಂದಂ ।
ಮುಂತೆ ನವಾಂಕುರಕಿಸಲಯ
ದಿಂ ತೀವಿದ ಬಾಲಚೂತದೆಡೆಗೆಯ್ತಂದಳ್ ॥ ೬೬

ಒಡನೆ ಜಯೆವಿಜಯೆಗಳ್ ಮೆ
ಲ್ಲಡಿಯಿಡುತುಂ ಬಂದು ಪುಷ್ಪಪುಟಕೆಗಳಂ ಸಂ ।
ಗಡಮಿಳುಹಿ ವಿಮಳತಳದೊಳ್
ಪೊಡೆಮಡುತುಂ ಗಿರಿತನೂಜೆಗತಿಮುದದಿಂದಂ ॥ ೬೭

ವ॥ ಅಂತು ಪೊಡೆಮಟ್ಟು ಬಾಲಸಹಕಾರತಳದೊಳ್ ಹರಿತ ಭೂಮಿಕೆಯೊಳ್ ಸುರುಚಿರ ಮರೀಚಿಗಳಂಕುರಿಸಿತೆಂಬಂತೆ ನಳನಳಿಸಿ ಬೆಳೆದು ಪೊಸ ಪಸಲೆಯ ಮೇಲೆ ಕದಳೀದಳಂಗಳಂ ಕಮಲಪತ್ರಂಗಳಂ ನುಣ್ಪೆಳಗಂ ಕಱಿವ ಪೊಂಬಾಳೆಯ ಪತ್ರಗಳನಿಂಬಿನಿಂ

೬೪. ಸಹಜ ಸುಗಂಧಾಮೋದೆಯಾದ ಗಿರಿಸುತೆ ಸರ್ಪಭೂಷಣನಾದ ಪರಶಿವನ ಅರ್ಚನೆಗಾಗಿ ಸುಗಂಧಯುತವಾದ ಮರುಗವನ್ನು ಬಿಡಿಸಿದಳು. ೬೫. ಮುಡಿವಾಳದ ಬೇರುಗಳುಳ್ಳ ಸ್ಥಳಕ್ಕೆ ವಿಶ್ವಾಸದಿಂದ ಬಂದ ಅಗಜೆ ಬೇರಿನ ಗುಟ್ಟನ್ನು ಅರಿದವರಿಗೆ ಎಲೆಯನ್ನು ಏಕೆ ತೋರಬೇಕು ಎಂಬಂತೆ ಒಲವಿನಿಂದ ಸುಗಂಧದ ಬೇರುಗಳನ್ನು ಸಂಗ್ರಹಿಸಿದಳು. ೬೬. ಹೀಗೆ ಅನೇಕ ಸುಂದರವಾದ ಲತಾದಿಗಳನ್ನು ಆಯ್ದು ಕೊಯ್ದು ಸಂತಸದಿಂದ ಮುನ್ನಡೆದು ಹೊಸ ಚಿಗುರಿಡಿದ ಎಳೆಮಾವಿನ ಮರದೆಡೆಗೆ ಬಂದಳು. ೬೭. ಕೂಡಲೆ ಸಖಿಯರಾದ ಜಯೆ-ವಿಜಯೆಯರು ಹೂವಿನ ಬುಟ್ಟಿಗಳನ್ನು ಮೆಲ್ಲಗೆ ತಂದು ಶುದ್ಧಸ್ಥಳದಲ್ಲಿ ಇಳಿಸಿ, ಸಂತಸದಿಂದ ಗಿರಿಜೆಗೆ ವಂದಿಸಿದರು. ವ॥ ಹಾಗೆ ವಂದಿಸಿ ಎಳೆಮಾವಿನ ಮರದ ಅಡಿಯಲ್ಲಿ ಹಸಿರುನೆಲದಲ್ಲಿ ಮನೋಹರವಾದ ಕಿರಣಗಳು ಅಂಕುರಿಸಿದಂತೆ ಹುಲುಸಾಗಿ ಬೆಳೆದ ಹೊಸ ಗರಿಕೆಯ ನೆಲದ ಮೇಲೆ ಬಾಳೆ ಎಲೆಗಳನ್ನು ಹರಡಿ, ತಾವರೆ ಎಲೆಗಳನ್ನು ಹೊಳೆಯುವ ಹೊಂಬಾಳೆಯ ಎಲೆಗಳನ್ನು ಹಾಸಿ, ಸುವಾಸನೆಗೆ ಮುತ್ತುವ ದುಂಬಿಗಳನ್ನು ಸೋವುತ್ತ, ಹೂವುಗಳನ್ನು ಎರಚಿ, ಬೆಳಗುವ ಸೀರೆಯನ್ನು ಹೊದಿಸಿ, ತಾವರೆಹೂವುಗಳನ್ನು ಪಕ್ಕದಲ್ಲಿರಿಸಿ, ದೇವಿಗೆ

ಪಾಸುತ್ತುಂ ಪಾಸಿಗೆ ಕವಿವ ಮತ್ತಾಳಿಗಳನೆತ್ತಂ ನಿವಾರಿಸುತ್ತುಂ ಕುಸುಮಕುಲಮನೆಸೆಯೆ ಸುರಿದು ಭಾಸುರದುಕೂಲದಿಂ ಬಾಸಣಿಸಿ ಶತಪತ್ರಸೂತ್ರಕುಲಮಂ ಕೆಲದೊಳಿರಿಸಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು ದೇವಿ ಜಗನ್ಮಾತೆ ಸರ್ವಕಳಾಕೋವಿದೆ ಸುಕುಮಾರಾಂಗಿ ಸೌಂದರ್ಯಮೂರ್ತಿ ಇತ್ತ ಬಿಜಯಂಗೆಯ್ವುದೆಂದು ಬಿನ್ನವಿಸಿ ಕೆಯ್ಗಡೆ ಮೃದುಪದನ್ಯಾಸದಿಂ ನಡೆತಂದಿಕ್ಕಿದ ಮಾಂದಳಿರ ಪೊಸ ಪಸೆಯ ಮೇಲೆ ಕಮನೀಯದಿಂ ಕುಳ್ಳಿರ್ದಾಗಳ್,

ಕಂ॥ ಪರಿಮಳದಧಿದೇವತೆಯೋ
ವರಕುಮುದದ ಕೂಡೆ ಬಂದ ಶಶಿಕಳೆಯೋ ವಾ ।
ರಿರುಹದ ನಡುವೆಯ್ತಂದಿಂ
ದಿರೆಯೋ ಎನೆ ದೇವಿ ಪೂವನೋವುತ್ತಿರ್ದಳ್ ॥ ೬೮

ವ॥ ಅಂತೋವುತ್ತುಮಿರ್ದು,

ಕಂ॥ ಮುಟ್ಟಿದೊಡಾಗಳೆ ಕಂದುವ
ನೆಟ್ಟನೆ ನೋಡಿದೊಡೆ ಕೋಡಿ ಬಾಡುವ ನೆನೆಯಲ್ ।
ತೊಟ್ಟನೆ ಕೊರಗುವ ಪೂವಂ
ಕಟ್ಟುವ ಪರಿಯೆಂತೆನುತ್ತೆ ಚಿಂತಿಸುತಿರ್ದಳ್ ॥ ೬೯

ವ॥ ಅಂತು ಚಿಂತಿಸಿ ನೋಡಿ ಭಕ್ತಿಯೊಳ್ ಕೂಡಿ ಪೂಜಿಸಲ್ದೇಡಿ ಪೂವಂ ಪೂ ಸೋಂಕೆ ಕೊರಗದೆಂಬಂತೆ ತನ್ನ ಕರಕಮಲಮಂ ನೀಡಿ,

ಕಂ॥ ಅತಿಸುಕುಮಾರೆ ಸುಖಾಕರೆ
ನುತ ಗುಣಗಣಯುಕ್ತೆ ಶಾಂತೆ ಸಾತ್ತ್ವಿಕರೂಪಾ ।
ನ್ವಿತೆ ಸರ್ವಕಳಾನಿಧಿ ಪಾ
ರ್ವತಿಸತಿ ಶತಪತ್ರಸೂತ್ರಮಂ ತೆಗೆಯುತ್ತುಂ ॥ ೭೦

ವದನಕ್ಕಂ ಕುಸುಮಕ್ಕಂ
ಪದೆದೆಱಗುವ ಮಧುಕರಂಗಳಂ ಸೋವುತ್ತುಂ ।
ಮೃದುತರ ಸರಳಾಂಗುಲಿಯಿಂ
ಸದಮಲೆಯಿರವಂತಿಯರಲನೊಲವಿಂ ಪಿಡಿದಳ್ ॥ ೭೧

ಕೈಮುಗಿದು, ಜಗನ್ಮಾತೆ ಸಕಲಕಲಾಕೋವಿದೆ, ಸುಕುಮಾರಾಂಗಿ, ಈ ಕಡೆ ಬಿಜಯಂಗೆಯ್ಯಬೇಕು ಎಂದು ವಿಜ್ಞಾಪಿಸಿ, ಕೈಯ್ಗುಡಲು ಮೆಲ್ಲನೆ ನಡೆತಂದು ಗಿರಿಜೆ ಮಾವಿನ ಚಿಗುರಿನ ಹಸೆಯ ಮೇಲೆ ಕುಳಿತುಕೊಂಡಳು. ೬೮. ಆಗ ಅಗಜೆಯು ಪರಿಮಳದ ಅಧಿದೇವತೆಯೊ, ಕನ್ನೈದಿಲೆಯ ಜೊತೆಗೆ ಬಂದ ಶಶಿಕಲೆಯೊ, ತಾವರೆಯ ನಡುವೆ ಬಂದ ಇಂದಿರೆ(ಲಕ್ಷ್ಮಿ)ಯೊ, ಎಂಬಂತೆ ಪ್ರಕಾಶಿಸಿದಳು. ೬೯. ಮುಟ್ಟಿದರೆ ಕೂಡಲೆ ಬಾಡುವಷ್ಟು ಸುಕುಮಾರವಾಗಿರುವ ಈ ಹೂವುಗಳು; ಕಣ್ಣ ದೃಷ್ಟಿ ತಾಕಿದೊಡನೆಯೆ ಕಂದುವುವು; ನೆನೆದರೆ ಕೊರಗುತ್ತವೆ; ಇಂಥವುಗಳನ್ನು ಕಟ್ಟುವುದು ಹೇಗೆ ಎಂಬುದು ಅವಳ ಚಿಂತೆಗೆ ಕಾರಣವಾಗಿತ್ತು. ವ॥ ಹೀಗೆ ಚಿಂತಿಸಿ ಭಕ್ತಿಯಿಂದ ಪೂಜಿಸುವ ಉದ್ದೇಶದಿಂದ ಕಟ್ಟಿದರೆ ಅವು ಕೊರಗುವುದಿಲ್ಲವೆಂದು ಭಾವಿಸಿದ ಅವಳು ಕೈಚಾಚಿದಳು. ೭೦. ಅತಿಸುಕುಮಾರೆ, ಸದ್ಗುಣಶೀಲೆ, ಶಾಂತೆ, ಸರ್ವಕಳಾನಿಧಿ ಪಾರ್ವತಿಯು ಕಮಲದ ದಂಟಿನಲ್ಲಿರುವ ಎಳೆಗಳನ್ನು ತೆಗೆದು ೭೧. ಮುಖಕ್ಕೆ ಮತ್ತು ಹೂವುಗಳಿಗೆ ಮುತ್ತುತ್ತಿರುವ ದುಂಬಿಗಳನ್ನು ಸೋವುತ್ತ ಗಿರಿಜೆಯು ತನ್ನ ಮೃದುವಾದ

ಪಿಡಿದೆತ್ತಿ ನಳಿನ ಗುಣದೊಳ್
ತೊಡರ್ಚುತುಂ ಮೆಲ್ಲ ಮೆಲ್ಲನಿರವಂತಿಯ ಪೂ ।
ದೊಡಿಗೆಗಳಂ ವಿರಚಿಸಿದಳ್
ಮೃಡಾಣಿ ಮೃಡನವಯವಕ್ಕೆ ಸಡಗರದಿಂದಂ ॥ ೭೨

ಕಂ॥ ಸರಸಿಜಬಂಧಂ ಕಮಲಾ
ಕರಬಂಧಂ ಮುರಜಬಂಧಮುತ್ಪಲಬಂಧಂ ।
ತರುಬಂಧಂ ಗಿರಿಬಂಧಂ
ವರಬಂಧಂ ಲಿಂಗಬಂಧಮಂ ವಿರಚಿಸಿದಳ್ ॥ ೭೩

ಸುರರ ಶಿರೋಮಾಲಾವಿ
ಸ್ತರಬಂಧ ನಾಗಬಂಧಮವನೀಬಂಧಂ ।
ದ್ವಿರದಾಜಿನಬಂಧಂ ವಿ
ಸ್ತರ ವಿಧುರವಿಬಿಂಬಬಂಧಮಂ ವಿರಚಿಸಿದಳ್ ॥ ೭೪

ಕರಕಮಲದ ಲೋಚನಸರ
ಸಿರುಹದೆ ವದನಾರವಿಂದದಾ ಪರಿಮಳದಿಂ ।
ಪೊರೆಯುತ್ತುಂ ಪೊಸಪೂವಂ
ಗಿರಿಜೆ ಸುಖಂ ಮುಟ್ಟಿ ಮುಟ್ಟಿ ಕಟ್ಟುತಿರ್ದಳ್ ॥ ೭೫

ಈ ತೆರದಿಂ ಕ್ಷಿತಿಧರವರ
ಜಾತೆ ಜಗನ್ಮಾತೆಯೆಸೆವ ಕುಸುಮಾವಳಿಯಿಂ ।
ದೋತು ಮನೋಹರಮಪ್ಪ ವಿ
ನೂತನ ಮಾಳಾವಿಳಾಸಮಂ ಮಿಗೆ ಸಮೆದಳ್ ॥ ೭೬

ಬೆರಳುಗಳಿಂದ ಇರವಂತಿ ಹೂವುಗಳನ್ನು ಹಿಡಿದಳು. ೭೨. ಮೃಡಾಣಿಯಾದ ಪಾರ್ವತಿಯು ತಾವರೆದಂಟಿನ ಎಳೆಗಳಲ್ಲಿ ಇರವಂತಿಯ ಹೂವುಗಳನ್ನು ಮಾಲೆಗಟ್ಟಿ, ಹೂವಿನ ತೊಡಿಗೆಗಳನ್ನು ಮೃಡನ ಅವಯವಗಳಿಗೆ ಸಡಗರದಿಂದ ಅಲಂಕರಿಸಿದಳು. ೭೩. ಪಾರ್ವತಿಯು ಹೂವಿನ ಮಾಲೆಗಳಲ್ಲಿ ಬಗೆಬಗೆಯ ಬಂಧಗಳನ್ನು ರಚಿಸಿದ್ದಳು. ಅವುಗಳಲ್ಲಿ ಸರಸಿಜಬಂಧ, ಕಮಲಾಕರಬಂಧ, ಮುರಜಬಂಧ, ಉತ್ಪಲಬಂಧ, ತರುಬಂಧ, ಗಿರಿಬಂಧ, ಲಿಂಗಬಂಧ ಮುಂತಾದವು ಮುಖ್ಯವಾದವು. ೭೪. ಅವುಗಳಲ್ಲಿ ದೇವತೆಗಳ ಶಿರೋಮಾಲೆಯಷ್ಟು ವಿಸ್ತಾರವಾದ ಬಂಧಗಳು, ನಾಗಬಂಧ, ಅವನೀಬಂಧ, ದ್ವಿರದಾಜಿನ ಬಂಧ, ಚಂದ್ರಬಿಂಬ ರವಿಬಿಂಬ ಬಂಧಗಳೂ ಇದ್ದವು. ೭೫. ಕರಕಮಲ, ನೇತ್ರಕಮಲ, ಮುಖಾರವಿಂದ ಇವುಗಳ ಪರಿಮಳದಿಂದ ಕೂಡಿದ ಗಿರಿಜೆ ಹೊಸ ಹೂವುಗಳನ್ನು ಮುಟ್ಟಿ ಮುಟ್ಟಿ ಮಾಲೆಗಳನ್ನು ಕಟ್ಟುತ್ತಿದ್ದಳು. ೭೬. ಹೀಗೆ ಗಿರಿರಾಜನಂದಿನಿಯಾದ ಪಾರ್ವತಿ ಜಗನ್ಮಾತೆ ಹೂವುಗಳಿಂದ ಮನೋಹರವಾದ ವಿನೂತನಮಾಲೆಗಳನ್ನು ಕಟ್ಟಿದಳು.

ವ॥ ಇಂತು ಪುಷ್ಪಾವಳಿಯಿಂ ಪಲವುಂ ತೆಱದ ಬಂಧಮಂ ಸಮೆದು ಬಳಲ್ದು ಸ್ವೇದಭರಿತ ಗಂಡಸ್ಥಳಿಯುಂ ಶಿಥಿಲೀಕೃತಕರತಳೆಯುಮಾಗಿರ್ದ ಪಾರ್ವತಿಯಂ ಕಂಡು ಸಹಚರಿಯರ್ ಬಂದು ಸೇವಂತಿಗೆಯ ಪನಿನೀರಂ ಮಜ್ಜನಕ್ಕೆಱೆದು ಪರಾಗದಂಗರಾಗ ಮನಮರ್ಚಿ ತಾವರೆಯ ನೂಲ ದುಕೂಲಮನುಡಿಸಿ ಕದಂಬಕುಸುಮಮಂ ಸಿರಿಮುಡಿಯೊಳ್ ತುಱುಂಬ ಕೇತಕಿಯ ಸಣ್ಣನಪ್ಪ ನುಣ್ಣೆಸಳ ಕರ್ಣಪತ್ರಮನಿಕ್ಕಿ ಮಕರಂದದ ತಿಲಕಮನಿಟ್ಟು ಪುಷ್ಪಮಂಜರಿಯ ಕರ್ಣಾವತಂಸಮನಳವಡಿಸಿ ಮಲ್ಲಿಗೆಯ ನನೆಯ ಏಕಾವಳಿಯಂ ಮುತ್ತಿನ ಹಾರದೊಳೊಡಗೂಡಿ ಮೊಲ್ಲೆಯ ಮುಗುಳ ಕಂಕಣಮಂ ಕೆಯ್ಗೊಳಿಸಿ ನಳಿನಕರ್ಣಿಕಾ ಮುದ್ರಿಕೆಗಳಂ ಭದ್ರಾಂಗುಲಿಗೆ ಹತ್ತೆ ಸಾರ್ಚಿ ನವಲತೆಯನಂಕುರದಿಂದಲಂಕರಿಸುವಂತೆ ಕಲ್ಪತರುವಂ ಕುಸುಮದಿಂದೆ ಮುಸುಂಕುವಂತೆ ಪಿನಾಕಿಯ ಮನೋರಥಮಂ ಪುಣ್ಯಫಲದಿಂ ಪಸದನಂಗೊಳ್ಪಂತೆ ಕುಸುಮಬಾಣಮಂ ಪೊಸಗಂಪಿಂ ಕೂರ್ಪಿಡುವಂತೆ ಸೌಂದರ್ಯಮಂ ಮೋಹದಿಂದೊಲ್ಪಂತೆ ಸೌಕುಮಾರ್ಯನಿಧಿಯಪ್ಪ ಶರ್ವಾಣಿಗೆ ಶೃಂಗಾರಂಗೆಯ್ದನುರಾಗದಿಂ ಕೆಯ್ಗೊಟ್ಟ ಕೆಳದಿಯರ ಕೈಯ್ಯೊಳ್ ಮೆಯ್ಯಂ ಮಲಂಗಿಸಿ ಮೆಲ್ಲ ಮೆಲ್ಲನಡಿಯಿಡುವಾಗಳ್ ಹೊನ್ನ ಹಾವುಗೆಯ ರನ್ನವೆಳಗಂ ಕೀಳ್ಮಾಡಿ ನಕ್ಷತ್ರಮಾಲೆಯಂತೆ ನುಣ್ಬೆಳಗನೀಂಬ ಪದನಖಪ್ರಭೆ ಪೂವಲಿಗೆದಱಿ ಮಂಜೀರದ ಮಧುರಧ್ವನಿಗೆ ಮಂಡಳಿಸುವ ಮರಾಳಕುಳಮಂ ಜಡಿವಂತೆ ಪಳಂಚುವ ಪಾದಮುದ್ರಿಕೆ ನುಣ್ಪಿನಿಯನುಗುಳೆ ಹರನ ಚಿತ್ತಮಂ ಗಿರಿಜೆ ನಿನ್ನ ಚರಣದೊಳ್ ಕೆಡಪುವೆನೆಂದು ಭಾಷೆಗುಡುವಂತೆ ಸೂಸುವ ಸುನಾದದಿಂ ನೇವುರಮುಲಿಯೆ ಕುಸುಮ ಕುಳವಿಳಸಿತ ಕಾಂಚೀದಾಮದ ಭಾರಮಂ ತಳೆದ ನಿತಂಬಬಿಂಬಮಂ ಸುತ್ತಿ ಮುತ್ತಿದ ದುಕೂಲದ ಧವಳದ್ಯುತಿ ದೆಸೆ ದೆಸೆಗೆ ಪಸರಿಸೆ ಲಾವಣ್ಯರಸಂ ತೀವಿ ನೆಲೆಗಾಣಲ್ ಬಾರದ ಗಂಭೀರನಾಭೀ

ವ॥ ಹೀಗೆ ಹೂಗಳಿಂದ ಬಗೆ ಬಗೆಯ ಬಂಧಗಳನ್ನು ಹೆಣೆದು, ಬಳಲಿದಳು; ಕಪೋಲಗಳಲ್ಲಿ ಬೆವರು ಹನಿ ಮೂಡಿತು, ಕೈಗಳು ಸೋತವು; ಹೀಗೆ ಆಯಾಸಗೊಂಡ ಪಾರ್ವತಿಯನ್ನು ಕಂಡ ಸಖಿಯರು ಅವಳಿಗೆ ಸೇವಂತಿಗೆಯ ಪನಿನೀರ ಮಜ್ಜನ ಮಾಡಿಸಿದರು. ಹೂವಿನ ಪರಾಗ(ಧೂಳಿ)ವನ್ನು ಮೈಗೆ ಲೇಪಿಸಿದರು, ತಾವರೆಯ ನೂಲಿನ ಸೀರೆಯುಡಿಸಿದರು, ಕದಂಬಕುಸುಮವನ್ನು ಅವಳ ಸಿರಿಮುಡಿಗೆ ಸಿಂಗರಿಸಿದರು, ಕೇದಗೆಯ ಸಣ್ಣ ನುಣ್ಣೆಸಳನ್ನು ಕರ್ಣಗಳಿಗೆ ಸಿಕ್ಕಿಸಿದರು, ಮಕರಂದ ತಿಲಕವಿಟ್ಟು, ಹೂಗೊಂಚಲನ್ನು ಕರ್ಣಾವತಂಸವಾಗಿಸಿದರು. ಮಲ್ಲಿಗೆಮೊಗ್ಗಿನ ಏಕಾವಳಿ ಮುತ್ತಿನ ಹಾರದೊಂದಿಗೆ ಮೊಲ್ಲೆಯ ಮೊಗ್ಗುಗಳ ಕಂಕಣವನ್ನು ಕಟ್ಟಿ, ತಾವರೆಯ ಕರ್ಣಿಕೆ (ಗೆಡ್ಡೆ)ಗಳ ಮುದ್ರಿಕೆಗಳನ್ನು ಬೆರಳುಗಳಿಗೆ ತೊಡಿಸಿ, ನವಲತೆಯನ್ನು ಚಿಗುರುಗಳಿಂದ ಅಲಂಕರಿಸುವ ಹಾಗೆ, ಕಲ್ಪವೃಕ್ಷವನ್ನು ಹೂಗಳು ಮುಸುಕುವಂತೆ, ಹರನ ಮನೋರಥವನ್ನು ಪುಣ್ಯಫಲದಿಂದ ಪ್ರಸಾದಗೊಳಿಸುವಂತೆ, ಕುಸುಮ ಬಾಣವನ್ನು ಹೊಸಕಂಪಿನಿಂದ ಹರಿತಗೊಳಿಸುವಂತೆ, ಸೌಂದರ್ಯವನ್ನು ಮೋಹದಿಂದ ಒಲಿಸುವಂತೆ, ಸುಕುಮಾರಿಯಾದ ಶರ್ವಾಣಿಗೆ ಶೃಂಗಾರ ಮಾಡಿದರು. ತರುವಾಯ ಅನುರಾಗದಿಂದ ಕೆಳದಿಯರು ಕೈಗೊಟ್ಟು ಮೆಲ್ಲಡಿಯಿಟ್ಟು ನಡೆಯುವಾಗ, ಹೊನ್ನ ಹಾವುಗೆಗಳ ರತ್ನಗಳ ಬೆಳಕನ್ನು ಕೀಳ್ಮಾಡಿ ನಕ್ಷತ್ರಮಾಲೆಯಂತೆ ನುಣ್ಬೆಳಗನ್ನು ಚೆಲ್ಲುವ ಕಾಲ ಉಗುರ ಕಾಂತಿ ರಂಗೋಲೆ ಚಿತ್ರ ತೆಗೆಯಲು, ಮಂಜೀರದ ಮಧುರ ಧ್ವನಿಗೆ ಗುಂಪುಗೆಟ್ಟ ಹಂಸೆಗಳನ್ನು ಬೆದರಿಸುವಂತೆ ಹೊಳೆಯುವ ಪಾದಮುದ್ರಿಕೆ ಇಂಪಾಗಿ

ಸರೋವರದೊಳಗೊಗೆದ ಮೃಣಾಳನಾಳದಂತಿರ್ದ ಬಾಸೆಯಂ ಮಱಿಗೊಂಡ ಬಡನಡುವಡಿಗಡಿಗೆ ಬಳುಂಕುತ್ತಿರೆ ವಿಭವಮಾದುಭಯಕಕ್ಷಮನಿಂಬುಗೊಂಡು ತುಂಬಿ ಬಳೆದು ಮುತ್ತಿನ ಮೇಲುದನೊತ್ತರಿಸಿ ಹೊತ್ತೆತ್ತಿ ಕೆಲಕ್ಕೆ ನೂಂಕುವ ಪೆರ್ಮೊಲೆಗಳ್ಗೆ ಹಾರಕಾಂತಿ ಹೊಸಮೇಲುದಂ ಪೊರಯ್ಸು ಕಲ್ಪತರುವಿನ ಶಾಖೆಗಳಂತೆ ಕೋಮಳದಿಂ ನೀಳ್ದು ನಳನಳಿಸಿ ಬೆಳಿಬೆಳಿದ ಬಾಹುಲತಾಪ್ರಸೂನಮಂ ಪೋಲ್ವ ಸೆಳ್ಳುಗುರ್ಗಳ್ ಬಳ್ಳಿವೆಳಗಂ ಕಱಿಯೆ ಕಬರೀಭರದ ಗುರುತ್ವಮನಾಂತ ಕಂಬುಗ್ರೀವಮಿಂಬುವಡೆಯೆ ಕಪೋಳಬಿಂಬದೊಳ್ ಪ್ರತಿಬಿಂಬಿಸುವ ಕರ್ಣಾವತಂಸಪ್ರಸವಮಂಜರಿಗಳ್ ಕರ್ಣಪಾಲಿಕೆಯೊಳಾಂದೋಳಮನಾಡೆ ನೆಱಿ ತೀವಿ ತೆರೆ ಮಸಗುವ ಮುಖರಸದೊಡನೆ ಕಡೆಗಣ್ಣ ಕಾಂತಿ ಕೋಡಿವರಿಯೆ ಕರ್ಪೂರದ ಮೂಕುತಿಗೆ ಕಂಪನಿರ್ಮಡಿಸುವ ನಿಡುಸುಯ್ಯ ಪರಿಮಳಕ್ಕೆ ಪರಿಮರಿಯಾಡುವ ಮಧುಕರನಿಕರಂ ಮಕರಂದ ತಿಲಕದ ತನಿಗಂಪಿಂಗಳಸಿ ಲಲಾಟಪಟ್ಟದೊಳಂಕುರಿಸಿ ನಲಿವ ನೀಳಾಳಕಮೆಂಬ ಮಱಿದುಂಬಿ ಗಳೊಳ್ ಕಾಳಿಗಂದೆಗೆಯೆ ತಾರಕಿತಮಾದ ನೀರದಮಂ ಮುಸುಂಕಿದ ತಾರೇಶಮರೀಚಿಗಳಂತೆ ಕದಂಬಕುಸುಮಗರ್ಭೀಕೃತಕಬರೀಭರಸಂಯುತಶಿರೋಭಾಗಮಂ ಬಾಸಣಿಸಿದ ನನೆಯ ಸೂಸಕದ ಕೊನೆಗಳಲುಗೆ ಶಿವನ ಮನೋರಥಂ ಮೂರ್ತಿಗೊಂಡಂತೆ ಹರನ ಮೆಚ್ಚು ಹರೆಯಂಬಡೆದಂತೆ ಶಂಕರನ ಬಿಂಕಂ ಬನ್ನಿಣಮಾದಂತೆ ಚಂದ್ರಕಳೆ ಕಳೆಕಣ್ದೆಱಿದಂತೆ ನೆಱಿ ಮೆಱಿದು ನಡೆತಂದು ನಗತನೂಜೆ ಚಂದ್ರಧರನ ಮುಂದೆ ನಿಂದು,

ಕೇಳುತ್ತಿರಲು, ಎಲೌ ಗಿರಿಜೆ ಹರನ ಚಿತ್ತವನ್ನು ನಿನ್ನ ಪಾದಕ್ಕೆ ಕೆಡಪುವೆನೆಂದು ಭಾಷೆಗೊಡುತ್ತಿದೆಯೊ ಎಂಬಂತೆ ನೂಪುರಗಳು ನುಡಿಯುತ್ತಿರಲು; ಹೂವುಗಳಿಂದ ಸುಂದರವಾದ ಒಡ್ಯಾಣದ ಭಾರವನ್ನು ತಳೆದ ನಿತಂಬವನ್ನು ಸುತ್ತಿರುವ ಸೀರೆಯ ಬಿಳುಪು ಸುತ್ತಲೂ ಹರಡುತ್ತಿರಲು, ಲಾವಣ್ಯರಸವು ವ್ಯಾಪಿಸಿ, ನೆಲೆಗಾಣದ ಗಂಭೀರನಾಭಿ ಎಂಬ ಸರೋವರದೊಳಗೆ ಒಗೆದ ತಾವರೆಯ ದಂಟೊ ಎಂಬಂತಿದೆ ಬಾಸೆ (ರೋಮರಾಜಿ), ಮರೆಯಲ್ಲಿರುವ ಬಡನಡು ಅಡಿಗಡಿಗೆ ನಡುಗುತ್ತಿದೆ, ಸುಂದರವಾದ ಎರಡೂ ಪಕ್ಕಗಳ ಆಸರೆ ಪಡೆದು ತುಂಬಿ ಬೆಳೆದ ಪೆರ್ಮೊಲೆಗಳು ಮೇಲುದವನ್ನು ಪಕ್ಕಕ್ಕೆ ಸರಿಸಿವೆ, ಅಂಥ ಪೆರ್ಮೊಲೆಗಳಿಗೆ ಹಾರಕಾಂತಿಯು ಹೊಸ ಮೇಲುದವನ್ನು ಹೊದಿಸಿದಂತೆ ಆಗಿದೆ, ಕಲ್ಪತರುವಿನ ಕೊಂಬೆಗಳಂತೆ ಕೋಮಲವಾಗಿ ಉದ್ದವಾಗಿ ನಳಿನಳಿಸಿ ಬೆಳೆದು ಲತೆಯಂತಿರುವ ಬಾಹುಗಳು, ಆ ಬಾಹುಲತೆಗಳಿಗೆ ಹೂಗಳಂತಿರುವ ತೆಳು ಉಗುರುಗಳು ಬಳ್ಳಿಬೆಳಗನ್ನು ಸೂಸುತ್ತಿವೆ, ಕಬರೀ (ಕೇಶಪಾಶ) ಭಾರದ ಹೊರೆಯನ್ನು ಹೊತ್ತ ಶಂಖಿಕಂಠವು ಇಂಬಾಗಿರಲು, ಕಪೋಲ(ಕೆನ್ನೆ)ಗಳಲ್ಲಿ ಪ್ರತಿಬಿಂಬಿಸಿರುವ ಕರ್ಣಾವತಂಸವಾಗಿರುವ ಹೂಗೊಂಚಲುಗಳು ತೂಗುತ್ತಿರಲು, ತೆರೆ ತೆರೆಯಾಗಿ ಸೂಸುವ ಮುಖರಸದೊಡನೆ ಅಪಾಂಗ (ಕಡೆಗಣ್ಣುನೋಟ) ಕಾಂತಿ ಕೋಡಿವರಿಯುತ್ತಿರಲು, ಕರ್ಪೂರದ ಮೂಗುತಿಗೆ ಕಂಪನ್ನು ಇಮ್ಮಡಿಸುವ ನಿಟ್ಟುಸಿರ ಸುವಾಸನೆಗೆ ಮುತ್ತಿ ಬರುವ ದುಂಬಿಗಳು-ಮಕರಂದ ತಿಲಕದ ವಾಸನೆ ಬಯಸಿ ಬಂದಂತಿವೆಯೊ ಎಂಬಂತೆ ಇರುವ ಕಪ್ಪು ಚೂರ್ಣಕುಂತಳಗಳೆಂಬ ಮರಿದುಂಬಿ ಗಳೊಡನೆ ಕಾದುತ್ತಿವೆ. ತಾರೆ ಮೂಡಿದ ಮೋಡವನ್ನು ಮುಸುಕಿದ ಚಂದ್ರಕಿರಣಗಳಂತೆ ಕದಂಬಕುಸುಮ ಧರಿಸಿದ ಕೇಶಪಾಶವು ಶಿರೋಭಾಗವನ್ನು (ಮಂಡೆಯನ್ನು) ಹೊದಿಸಿದ ಮೊಗ್ಗುಗಳ ಕೊನೆಗಳು ಅಲುಗುತ್ತಿರಲು, ಶಿವನ ಮನೋರಥವು ಮೂರ್ತಿಗೊಂಡಿವೆ,

ಕಂ॥ ಇರುಳುಂ ಪಗಲುಂ ಕಾಮಂ
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ ।
ಗಿರಿಶಂಗೆ ತೋರ್ಪ ತೆಱದಿಂ
ನೆರಪಿದಳಭವಾಂಘ್ರಿಗಳ್ಗೆ ಪುಷ್ಪಾಂಜಳಿಯಂ ॥ ೭೭

ವ॥ ಅಂತುಮಲ್ಲದೆ,

ಕಂ॥ ಸಂದಣಿಸುವ ನವನವ ಪುಳ
ಕಂ ದಟ್ಟಯ್ಸುತ್ತೆ ನೆಗೆಯೆ ಶಶಿಮೌಳಿಗೆ ಪೂ ।
ರ್ಣೇಂದುಮುಖಿ ಪೊಡೆಮಡುತ್ತಾ
ನಂದಾಶ್ರುಗಳಿಂದೆ ಚರಣತಳಮಂ ತೊಳೆದಳ್ ॥ ೭೮

ಪದೆಪಿಂ ಪೊಡೆಮಡುವಾಗಳ್
ಮೃದುತರಪದದುಪರಿಭಾಗಮಂ ಚಿಲ್ವಂ ಪ ।
ತ್ತಿದ ಮಕರಂದದ ತಿಳಕಂ
ಸದಮಳ ಚಂದನವಿಳಾಸಮೆನಿಸಿತ್ತಾಗಳ್ ॥ ೭೯

ಸದ್ಗಂಭೀರಾವೃತ ವಿಳ
ಸದ್ಗಮಕದೆ ನಿಂದು ಶಿವನ ಮೆಲ್ಲಡಿಗಳಿಗು ।
ದ್ಗದ್ಗುಣಭೂಷಣೆ ಸುರಿದಳ್
ಗದ್ಗದಿಸುತೆ ಪುಳಕಿಸುತ್ತೆ ಸರಸಿಜದಲರಂ ॥ ೮೦

ಕಂ॥ ಊರುದ್ವಯದೊಳ್ ಕರದೊಳ್
ಚಾರುಭುಜಾಗ್ರಂಗಳೊಳ್ ಸುಬಾಹುಗಳೊಳ್ ಪು ।
ಕ್ಕೋರಸ್ಥಳದೊಳ್ ಗಿರಿಸುತೆ
ಹಾರಯ್ಸುತೆ ಕುಸುಮಮಾಲೆಯಂ ಪಸರಿಸಿದಳ್ ॥ ೮೧

ಹರನ ಮೆಚ್ಚುಗೆಗೆ ಹರೆಯವು ಬಂದಂತೆ, ಹರನ ಬಿಂಕವು ಬಿನ್ನಣವಾದಂತೆ, ಚಂದ್ರಕಳೆ ಕಣ್ದೆರೆದಂತೆ ಪ್ರಕಾಶಿಸುವ ಅಗಜಾತೆ ತಿಂಗಳು ಸೂಡಿದವನ ಮುಂದೆ ಬಂದು ನಿಂತಳು. ೭೭. ಹಾಗೆ ಬಂದ ಪಾರ್ವತಿ ಗಿರೀಶನ ಪಾದ ಕಮಲಗಳಿಗೆ ಪುಷ್ಪಾಂಜಲಿ ಸಮರ್ಪಿಸಿದಳು. ಅದು ಮನ್ಮಥನು ಹಗಲಿರುಳೂ ಬಿಟ್ಟ ಹೂಬಾಣಗಳೊ ಎಂಬಂತಿತ್ತು. ೭೮. ನಮಿಸಲು ಬಂದ ಪಾರ್ವತಿಗೆ ಮೈ ರೋಮಾಂಚಿತವಾಗಿದೆ. ಹರ್ಷಾಶ್ರುಗಳು ಸುರಿಯುತ್ತಿವೆ. ಶಿವನ ಪಾದಕಮಲಗಳಿಗೆ ಪೊಡೆಮಟ್ಟು ಅವಳು ಆನಂದಾಶ್ರುಗಳಿಂದ ಚರಣತಳವನ್ನು ತೊಳೆದಳು. ೭೯. ಪಾರ್ವತಿಯು ಪರಶಿವನಿಗೆ ಪೊಡಮಟ್ಟಳು; ಆಗ ಅವಳು ಹಣೆಗೆ ಇಟ್ಟಿದ್ದ ಮಕರಂದ ತಿಲಕವು ಪರಶಿವನ ಮೃದುತರ ಪಾದಗಳ ಮೇಲೆ ಅಂಕಿತವಾಯಿತು; ಅದು ಪಾದಗಳಿಗೆ ಚಂದನದ ಬೊಟ್ಟು ಇಟ್ಟಂತೆ ಕಾಣುತ್ತಿತ್ತು. ೮೦. ಪಾರ್ವತಿಯು ಗಂಭೀರವಾದ ಭಂಗಿಯಲ್ಲಿ ನಿಂತುಕೊಂಡು ಪರಶಿವನ ಮೆಲ್ಲಡಿಗಳಿಗೆ ತಾವರೆ ಹೂಗಳನ್ನು ಸುರಿದಳು, ಆಗ ಅವಳಲ್ಲಿ ಗದ್ಗದ, ರೋಮಾಂಚ ಮುಂತಾದ ಸಾತ್ವಿಕ ಭಾವಗಳು ಮೂಡಿದವು. ೮೧. ಗಿರಿಸುತೆ ಪರಮೇಶ್ವರನ ತೊಡೆ, ಕರ, ಭುಜಗಳ ಮೂಲ ಬಾಹುಗಳು, ಉರಸ್ಥಳಗಳಲ್ಲಿ ಶುಭವನ್ನು ಕೋರಿ ಹೂವಿನ ಮಾಲೆಗಳನ್ನು

ವ॥ ಮತ್ತಮದಲ್ಲದೆಯುಂ,

ಕಂ॥ ತವ ತವಗೆ ಮುಂಚುವಿಂದ್ರಿಯ
ನಿವಹಮನೋವುತ್ತೆ ಗಿರಿಜೆ ಹರಕಂಧರದೊಳ್ ।
ನವಕುಸುಮಮಾಲೆಯಂ ಸಾ
ರ್ಚುವ ನೆವದಿಂ ಸೋಂಕಿ ಸೋಂಕಿ ಪುಳಕಿಸುತಿರ್ದಳ್ ॥ ೮೨

ವ॥ ಅಂತಿರ್ದು,

ಕಂ॥ ಭರದಿಂದಂ ನವಕುಸುಮಾ
ಭರಣಂಗಳನಭವನಂಗದೊಳ್ ಸಿಂಗರಿಸು ।
ತ್ತರಳುತ್ತುರ್ಬುತೆ ಕೊರ್ಬುತೆ
ಗಿರಿಸುತೆ ನಲುಸುಯ್ಯ ಧೂಪಮಂ ಪದೆದಿತ್ತಳ್ ॥ ೮೩

ಅಲರ್ದೊಂಗಲ ಪೊಸದುಡಿಗೆಯ
ನಲಂಪಿನಿಂ ಶಂಕರಂಗೆ ಕೆಯ್ಗೊಳಿಸುತ್ತ ।
ಗ್ಗಲಿಸುತ್ತೆತ್ತಿದಳಂಬಿಕೆ
ನಲವಿಂ ನಗೆಮೊಗದ ಕಾಂತಿಯೆಸೆವಾರತಿಯಂ ॥ ೮೪

ಉತ್ತಮ ಗುಣಗಣಭೂಷಣೆ
ಚಿತ್ತವಿಕಾಸಮನೆ ಪಡೆದು ಸಾತ್ವಿಕ ಭಾವೋ ।
ನ್ಮತ್ತೆ ನಗಪುತ್ರಿ ಮುದದಿಂ
ದಿತ್ತಳ್ ಶರ್ವಂಗೆ ಭಕ್ತಿಯಾರೋಗಣೆಯಂ ॥ ೮೫

ವ॥ ಇಂತು ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಮೌಳಿಗೊಲ್ದು

ಸಿಂಗರಿಸಿದಳು. ೮೨. ಶಿವನ ಕುತ್ತಿಗೆಯಲ್ಲಿ ಹೊಸ ಹೂವಿನ ಮಾಲೆಯನ್ನು ಹಾಕುವಾಗ ಅವಳ ಕೈ ಶಿವನ ಅಂಗಾಂಗಗಳನ್ನು ಸೋಂಕಿ ಸೋಂಕಿ ರೋಮಾಂಚಿತವಾಯಿತು. ಅವಳ ಇಂದ್ರಿಯಗಳು ತಾನು ಮುಂದು ತಾನು ಮುಂದು ಎಂದು ಶಿವಸಂಪರ್ಕಕ್ಕೆ ಎಳಸುತ್ತಿದ್ದವು. ಆದರೂ ಗಿರಿಜೆ ಅವುಗಳ ಆವೇಗವನ್ನು ತಡೆದು ಶಿವನ ಸೇವೆ ಎಸಗುತ್ತಿದ್ದಳು. ೮೩. ಅಭವನ ಅಂಗಾಂಗಗಳಲ್ಲಿ ನೂತನ ಕುಸುಮಗಳ ಆಭರಣಗಳನ್ನು ಆದರದಿಂದ ಸಿಂಗರಿಸುತ್ತಿರುವಾಗ ಅವಳು ಆನಂದದಿಂದ ಉಬ್ಬಿದಳು, ಕೊಬ್ಬಿದಳು (ಹೆಮ್ಮೆಪಡುತ್ತಿದ್ದಳು), ನಿಟ್ಟುಸಿರ ಧೂಪವನ್ನು ಹಾಕಿದಂತಾಗಿತ್ತು! ೮೪. ಹೂ ಗೊಂಚಲು, ಹೊಸ ಉಡಿಗೆಗಳನ್ನು ಪ್ರೇಮದಿಂದ ಶಂಕರನಿಗೆ ಅಲಂಕರಿಸಿ ಅಂಬಿಕೆ, ನಗೆಮೊಗದ ಕಾಂತಿಯೆಂಬ ಆರತಿ ಬೆಳಗಿದಳು. ೮೫. ಉತ್ತಮ ಗುಣಗಳಿಂದ ಭೂಷಿತಳಾದ ಗಿರಿಸುತೆಯ ಮನಸ್ಸು ಪ್ರಸನ್ನವಾಗಿತ್ತು, ಸಾತ್ವಿಕಭಾವಗಳು ಅವಳ ಮನಸ್ಸಿನಲ್ಲಿ ಉಕ್ಕಿ ಬರುತ್ತಿದ್ದುದರಿಂದ ಭಾವೋನ್ಮಾದಸ್ಥಿತಿಯನ್ನು ಅವಳು ಮುಟ್ಟಿದ್ದಳು ಇಂಥ ಸ್ಥಿತಿಯಲ್ಲಿ ಅವಳು ಶರ್ವನಿಗೆ ಭಕ್ತಿಯ ಆರೋಗಣೆ ಬಡಿಸಿದಳು. ವ॥ ಹೀಗೆ ಪಾರ್ವತಿಯು ಚಂದ್ರಮೌಳಿಗೆ ಒಲಿದು ಪೂಜೆಯ ನೆಪದಿಂದ ಅನೇಕ

ಪೂಜೆಯ ನೆವದಿಂ ನಿವೇದಿಸಿ ಸಂಪದಮನೋಲಗಿಪ ಸಿಂಗರದಂತೆ ಧರ್ಮಮಂ ಬಳೆಯಿಸುವ ಸಂಪದದಂತೆ ಪುಣ್ಯಮಂ ಸೇವಿಪ ಧರ್ಮದಂತೆ ಭಕ್ತಿಯಂ ಬಯಸುವ ಪುಣ್ಯದಂತೆ ಶಿವಜ್ಞಾನಮನೆಳಸುವ ಭಕ್ತಿಯಂತೆ ಮುಕ್ತಿಯಂ ನಿಶ್ಚಯಿಪ ಶಿವಜ್ಞಾನದಂತೆ ಶಿವಸಂಗಮಂ ಬಯಸಿ ಮನತ್ಪ್ರಥ ಮನೋರಥ ದುರ್ಲಭವಲ್ಲಭನಂ ನೋಡುವಾಗಳ್,

ಚಂ॥ ಪೊಸಜಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್
ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್ ।
ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್ ॥ ೮೬

ವ॥ ಇಂತು ಶರ್ವನ ಸರ್ವಾಂಗದೊಳ್ ನೋಟಂ ಮುಸುಂಕಿ ನೋಡಿ,

ಕಂ॥ ಬೆಮರ್ವಳ್ ಬೆರ್ಚುವಳುರ್ಬುವ
ಳ್ಕಮರ್ವಳ್ ಪೆಱಸಾರ್ವಳಂಜಿ ನಿಲ್ವಳ್ ಸೋಂಕಲ್ ।
ನಿಮಿರ್ವಳ್ ನೆನೆವಳ್ ಮುನಿವಳ್
ಸಮಸಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್ ॥ ೮೭

ಭೋಗಗಳನ್ನು ರಾಗದಿಂದ ಸಮರ್ಪಿಸಿ, ಸಂಪತ್ತನ್ನು ಓಲೈಸುವ ಶೃಂಗಾರದಂತೆ, ಧರ್ಮವನ್ನು ಬೆಳೆಸುವ ಸಂಪತ್ತಿನಂತೆ, ಪುಣ್ಯವನ್ನು ಸೇವಿಸುವ ಧರ್ಮದಂತೆ, ಭಕ್ತಿಯನ್ನು ಬಯಸುವ ಪುಣ್ಯದಂತೆ, ಶಿವಜ್ಞಾನವನ್ನು ಬಯಸುವ ಭಕ್ತಿಯಂತೆ, ಮುಕ್ತಿಯನ್ನು ನಿರ್ಧರಿಸುವ ಶಿವಜ್ಞಾನದಂತೆ ಶಿವಸಂಗವನ್ನು ಬಯಸಿ, ಮನತ್ಪ್ರಥನ ಮನೋರಥಕ್ಕೆ ದೊರೆಯದೆ ಇರುವ ತನ್ನ ವಲ್ಲಭನನ್ನು ನೋಡಿದಳು. ೮೬. ಶಿವನಲ್ಲಿ ಅಭಿಮಾನಿ ಎನಿಸಿರುವ ಭವಾನಿಯ ದೈನ್ಯ ದೃಷ್ಟಿಗಳು ಮೊದಲು ಶಿವನ ಜಡೆಯಲ್ಲಿ ತೊಡಕಿ, ಹಣೆಯಲ್ಲಿ ನಡೆದಾಡಿ, ಕೆನ್ನೆಯಲ್ಲಿ ಹರಡಿ, ಕಣ್ಣುಗಳಲ್ಲಿ ಕೀಲಿಸಿ, ಮುಖವನ್ನು ಹೊಂದಿ, ಕಂಠದಲ್ಲಿ ಮಿಸುಗಿ (ಪ್ರಕಾಶಿಸಿ) ಭುಜಮೂಲದಲ್ಲಿ ಬೆಳಗಿ, ವಕ್ಷಸ್ಥಳದಲ್ಲಿ ಓಲಾಡಿ, ಕರಗಳಲ್ಲಿ ವಿರಾಜಿಸಿ ಕಡೆಗೆ ಶಿವನ ಪಾದಗಳಲ್ಲಿ ಬಿದ್ದವು. "ಸ್ಥಿತಾಃಕ್ಷಣಂ ಪಕ್ಷ್ಮಸುತಾಡಿತಾಧರಾಃ ಪಯೋಧರೋತ್ಸೇಧನಿಪಾತಚೂರ್ಣಿತಾಃ । ವಲೀಷುತಸ್ಯಾಸ್ಥ ಲಿತಾಃಪ್ರಪೇದಿರೇ ಚಿರೇಣನಾಭಿಂ ಪ್ರಥಮೋದಬಿಂದವಃ ॥ (ಕು. ಸಂ. ಸರ್ಗ ೫-೨೪) ಎಂಬ ಮಹಾಕವಿಯ ಪದ್ಯದೊಡನೆ ಇದನ್ನು ಹೋಲಿಸಿರಿ. ಪಾರ್ವತಿಯು ತಪೋಮಗ್ನಳಾಗಿದ್ದಾಗ ಮೊದಲು ಮಳೆ ಹನಿಗಳು ಕಣ್ಣೆವೆಗಳ ಮೇಲೆ ಕ್ಷಣಕಾಲ ನಿಂತು, ತುಟಿಗೆ ಸೋಂಕಿ, ಸ್ತನಗಳ ಮೇಲೆ ಬಿದ್ದು ಹುಡಿಯಾಗಿ ತ್ರಿವಳಿಗಳಲ್ಲಿ ನುಸುಳಿ ನಿಧಾನವಾಗಿ ನಾಭಿ ಸೇರಿದವು-ಎಂಬುದು ಪದ್ಯದ ಭಾವ. ವ॥ ಶಿವನ ಸರ್ವಾಂಗಗಳಲ್ಲಿಯೂ ಅವಳ ನೋಟ ಮುತ್ತಿತ್ತು, ಇದರಿಂದಾಗಿ ಅವಳು ೮೭. ಬೆವರುವಳು, ಬೆಚ್ಚುವಳು, ಉಬ್ಬುವಳು, ಹೆದರಿ ಪಕ್ಕಕ್ಕೆ ಸರಿದು ನಿಲ್ಲುವಳು, ಸೋಂಕಲು ಸೆಟೆದು ನಿಲ್ಲುವಳು, ನೆನೆವಳು, ಮುನಿವಳು, ಸಮಸಂದು ಗಿರಿಜೆ ಸೆಡೆದು ಬಿಸುಸುಯ್ವಳು,

ಚಾರುತರ ಕಾಂತಿಮಯಸುಕು
ಮಾರಾವಯವಂಗಳಂ ನಿರೀಕ್ಷಿಸಿ ನಲಿವಳ್ ।
ತಾರಾಚಳನಾಥನ ಘನ
ವೈರಾಗ್ಯಕ್ಕಂಜಿ ನಡುಗಿ ಸಿಡಿಮಿಡಿಗೊಳ್ವಳ್ ॥ ೮೮

ವ॥ ಅಂತುಮಲ್ಲದೆ

ಮ॥ಸ್ರ॥ ಶಿವನಂ ನೋಡುತ್ತೆ ಮೇನಾಸುತೆ ಮದನಸುಖಾಸಕ್ತಿಯಿಂ ಸುತ್ತುವಳ್ ಸೋಂ
ಕುವಳಾನಂದಾಶ್ರುವಂ ಸೂಸುವಳನುವಿಸುವಳ್ ತತ್ತಪಕ್ಕಂಜಿ ಹಿಮ್ಮೆ ।
ಟ್ಟುವಳಂತಂತಳ್ಕುವಳ್ ಬಳ್ಕುವಳದಟಳಿವಳ್ ಕೋಡುವಳ್ ಬಾಡುವಳ್ ಕುಂ
ದುವಳಾರ್ತಂಗೆಟ್ಟು ನಿಲ್ವಳ್ ನೆನೆದುರವಣಿಪಳ್ ಮುಂದಳಲ್ವಳ್ ಬಳಲ್ವಳ್ ॥ ೮೯

ವ॥ ಮತ್ತಮಾಗಳ್

ಕಂ॥ ನಗುವಳ್ ನಗೆಯೊಳ್ ಕೌತುಕ
ಮೊಗೆಯೆ ನಿರೀಕ್ಷಿಸುವಳೀಕ್ಷಣದೊಳಗೆ ದೈನ್ಯಂ ।
ಮಿಗೆ ಭಾವಿಸುವಳ್ ಭಾವದೊ
ಳಗೆ ದೇವನ ಚೆಲ್ವನಬಲೆ ಸಲೆ ನಿಲೆ ನೆನೆವಳ್ ॥ ೯೦

ವ॥ ಇಂತು ನೋಳ್ಪರ ಕಣ್ಗೆ ಶೀತಳಮಯ ಸುಧಾರೋಚಿಗಳಂ ಬೀಱುವ ಚಂದ್ರಮನಂತೆ ಮುಟ್ಟುವರ ಮೆಯ್ಗೆ ತೀವ್ರಪ್ರತಾಪಮಂ ಕುಡುವ ಸೂರ್ಯನಂತೆ ಪೊಗಳ್ವರ ನಾಲಿಗೆಗಮೃತದಂತೆ ಕೇಳ್ವರ ಕಿವಿಗೆ ಮಧುರವಾಣಿಯಂತೆ ನೆನೆವರ ಮನಕ್ಕೆ ನಿರುಪಾಧಿಕ

ಕಾಯುವಳು. ೮೮. ಪರಮೇಶ್ವರನ ಮನೋಹರ ಕಾಂತಿಮಯ ಸುಕೋಮಲವಾದ ಅವಯವಗಳನ್ನು ನೋಡಿ ಗಿರಿಜೆ ನಲಿವಳು, ಆದರೆ ಆ ಶಿವನ ಘಸವೈರಾಗ್ಯಕ್ಕೆ ಹೆದರಿ ನಡುಗಿ ಸಿಡಿಮಿಡಿಗೊಳ್ಳುವಳು. ೮೯. ಮೇನಾದೇವಿಯ ಮಗಳಾದ ಪಾರ್ವತಿಯು ಶಿವನನ್ನು ನೋಡುತ್ತಾ ಮದನಸುಖಾಸಕ್ತಿಯಿಂದ ಪ್ರದಕ್ಷಿಣೆ ಮಾಡುವಳು. ಸೋಕುವಳು, ಆನಂದಬಾಷ್ಪಗಳನ್ನು ಸೂಸುವಳು, ಅನುವಿಸುವಳು, ಆ ತಪಸ್ಸಿಗೆ ಹೆದರಿ ಹಿಮ್ಮೆಟ್ಟುವಳು, ಹಾಗಾಗೇ ಅಳುಕುವಳು, ಬಳುಕುವಳು, ಅದಟು ಅಳಿವಳು, ಬಾಡಿ, ಕುಂದಿ, ಕಂಗೆಟ್ಟು ನಿಲ್ಲುವಳು, ನೆನೆದು ರಭಸಗೊಳ್ಳುವಳು, ಅಳಲುವಳು ಬಳಲುವಳು ೯೦. ಗಿರಿಜೆ ನಗುವಳು, ನಗೆಯಲ್ಲಿಯೆ ಕುತೂಹಲವು ಉಕ್ಕಿ ಶಿವನನ್ನು ನೆಟ್ಟ ನೋಟದಿಂದ ನಿರೀಕ್ಷಿಸುವಳು, ಅದೇ ಕ್ಷಣದಲ್ಲಿ ದೈನ್ಯವು ಹೆಚ್ಚಿ ಭಾವಿಸುವಳು, ಆ ಭಾವದಲ್ಲಿ ದೇವನ ಚೆ[illegible]ನ್ನು ನೆನೆವಳು. ವ॥ ರುದ್ರನ ಮನೋಹರ ಮೂರ್ತಿಯನ್ನು ಎಷ್ಟು ನೋಡಿದರೂ [illegible]ಗೆ ತಣಿವು ಹಿಂಗಲಿಲ್ಲ. ನೋಡುವರ ಕಣ್ಣಿಗೆ ಅದು ಚಂದ್ರನಂತೆ ಶೀತಳವಾದ ಸುಧಾರೋಚಿಗಳನ್ನು ಬೀರುತ್ತದೆ. ಮುಟ್ಟಿದರೆ ಸೂರ್ಯನಂತೆ ತೀವ್ರತಾಪವನ್ನುಂಟುಮಾಡುತ್ತದೆ. ಹೊಗಳುವರ ನಾಲಗೆಗೆ ಅಮೃತದಂತೆ ಆಪ್ಯಾಯಮಾನವಾಗಿದೆ, ಕೇಳುವರ ಕಿವಿಗೆ ಮಧುರವಾಣಿಯಂತೆ, ನೆನೆವರ ಮನಸ್ಸಿಗೆ ಉಪಾಧಿಯಿಲ್ಲದ ಜ್ಯೋತಿಯಂತೆ ಒಪ್ಪುತ್ತಿದೆ. ಅಂಥ ರುದ್ರನ ಮೂರ್ತಿಯನ್ನು ನೋಡಿ

ಜ್ಯೋತಿಯಂತೊಪ್ಪುತಿರ್ದ ರುದ್ರನ ಮನೋಹರಮೂರ್ತಿಯಂ ನೋಡಿ ನೋಡಿ ತಣಿಯದೆ ಸೋಂಕಿ ಸೋಂಕಿ ಸವೆಯದೆ ಪೊಗಳ್ದು ಪೊಗಳ್ದು ತೀಱದೆ ನೆನೆದು ನೆನೆದು ನೆಱೆಯದೆ ನಡೆತಂದು ಪಾರ್ವತೀದೇವಿ ಪೊಚ್ಚ ಪೊಸಪೂಗಳನಚ್ಚರಿ ಮಿಗೆ ತಂದು ತಂದಂದಂದಿಂಗೆ ಚಂದ್ರಧರನಂ ಕಳಾನಿಧಿಯಂ ವಿಳಾಸದಿಂದಾರ್ತದಿಂ ಹತ್ತೆ ಸಾರ್ದು ಮತ್ತೆ ಮತ್ತೆ ಮಾಣದೆ,

ಕಂ॥ ಹರನಂ ಶಿವನಂ ಮೃಗಧರ
ಧರನಂ ಸುಸ್ನೇಹಮಡರೆ ನವನವ ಕುಸುಮೋ ।
ತ್ಕರದಿಂದೆ ನಚ್ಚ ಮಚ್ಚಿಯೆ
ಗಿರಿಜಾವಧುವರ್ಚಿಸುತ್ತುಮಿರ್ದಿನಮತ್ತಲ್ ॥ ೯೧

ಮ॥ ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೯೨

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ವಿರೂಪಾಕ್ಷದರ್ಶನ ಪುಷ್ಪಾಪಚಯ ಪೂಜಾವರ್ಣನಂ
ಪಂಚಮಾಶ್ವಾಸಂ

ತಣಿಯಲಿಲ್ಲ, ಸೋಂಕಿ ಸೋಂಕಿ ಸವೆಯದೆ, ಹೊಗಳಿ ಹೊಗಳಿ ತೀರದೆ, ನೆನೆದು ನೆನೆದು ನೆರೆಯದೆ, ನಡೆತಂದು ಪಾರ್ವತಿ ಹೊಸ ಹೊಸ ಹೂಗಳನ್ನು ತಂದು ಪ್ರತಿದಿನವೂ ಶ್ರದ್ಧಾಭಕ್ತಿ ಪ್ರೇಮಗಳಿಂದ ಅರ್ಚಿಸುತ್ತಿದ್ದಳು. ೯೧. ಗಿರಿಜಾವಧುವು ಪರಶಿವನನ್ನು ಹೊಸಹೊಸ ಹೂಗಳನ್ನು ತಂದು ಅತ್ಯಂತ ಭಕ್ತಿಪ್ರೇಮಗಳಿಂದ ಆರಾಧಿಸುತ್ತಿರುವಾಗ ಆ ಕಡೆ-

ಷಷ್ಠಾಶ್ವಾಸಂ

ತಾರಕಾಸುರ ಯುದ್ಧವರ್ಣನಂ

ಕಂ॥ ಶ್ರೀಪತಿ ವಾಕ್ಪತಿ ಪೌಲೋ
ಮೀಪತಿ ಪೂಜಿತಪದದ್ವಯಂ ಸದ್ಭಕ್ತಿ ।
ಶ್ರೀಪದಮಂ ಕುಡುಗೆಮಗೆ ವಿ
ರೂಪಾಕ್ಷಂ ಭಾಸುರಂ ಭವಾನೀಭರ್ತಂ ॥ ೧

ಸಕಳೋರಗ ಸುರನರಮ
ಸ್ತಕಶೂಲನನಮಿತಲೋಕ ಪಾಲನ ತೀವ್ರ ।
ಪ್ರಕಟ ಯಶೋಲೋಲನ ತಾ
ರಕಾಸುರನ ಕೊರ್ವು ಪರ್ವಿತುರ್ವೀತಳಮಂ ॥ ೨

ವ॥ ಅಂತುಮಲ್ಲದೆ,

ಮ॥ಸ್ರ॥ ಉರಗಾನೀಕಾಬ್ಧಿಮರ್ತ್ಯವ್ರಜಗಹನ ಸುರವ್ರಾತ ಧಾರಾಧರ ಪ್ರ
ಸ್ಫುರಿತೌರ್ವಂ ಪಾವಕಂ ಮರುತನೆನಿಸಿ ಕರಂ ಶೋಷಿಸುತ್ತಾವಗಂ ಸು ।
ಟ್ಟುರಿಪುತ್ತೆಳ್ಚುತುಂ ಪೆರ್ಚಿದನಸುರನವಂ ತಾರಕಂ ತೀವ್ರ ಕೋಪಾ
ಕರರೂಪಂ ಪ್ರಾಯಕಾಯಂ ಪ್ರಬಳ ಬಳಯುತಂ ಚಂಡಶೀಲಂ ವಿಶಾಲಂ ॥ ೩

ಮು॥ ಅರರೇ ಆತ್ಮಬಲಾಕ್ಷಿಮಧ್ಯವಿಮಲಶ್ರೀತಾರಕಂ ತಾರಕಂ
ಪರಭೂಪಾಲ ತಮಂಧಭೇದನಕರೋದ್ಯತ್ತಾರಕಂ ತಾರಕಂ ॥
ಸುರಸಂಘಾತಪತಾಕಿನೀ ಪ್ರಬಳವಾರ್ಧ್ಯುತ್ತಾರಕಂ ತಾರಕಂ
ನರನಾಗಾಮರಲೋಕಶೋಕಸರಣೀ ವಿಸ್ತಾರಕಂ ತಾರಕಂ ॥ ೪

೧. ವಿಷ್ಣು-ಬ್ರಹ್ಮ ಮತ್ತು ರಾವಣ ಮುಂತಾದ ಸದ್ಭಕ್ತರಿಂದ ಪೂಜಿಸಿದ ಪಾದಕಮಲಗಳುಳ್ಳ ಭವಾನೀಪತಿಯಾದ ವಿರೂಪಾಕ್ಷನು ನಮಗೆ ಸದ್ಭಕ್ತಿಯನ್ನು ಅನುಗ್ರಹಿಸಲಿ. ೨. ಸ್ವರ್ಗ-ಮರ್ತ್ಯ-ಪಾತಾಳವಾಸಿಗಳಾದ ಸುರ-ನರ-ಉರಗ (ಸರ್ಪ)ರ ಮಸ್ತಕಕ್ಕೆ ಶೂಲದಂತಿರುವ, ಲೋಕಪಾಲರಿಂದ ವಂದಿಸಲ್ಪಟ್ಟು ಪ್ರಖ್ಯಾತನಾಗಿರುವ ತಾರಕಾಸುರನ ಹಮ್ಮು (ಅಹಂಕಾರ) ಮಿತಿಮೀರಿತ್ತು. ೩. ಉರಗ ಸಮೂಹವೆಂಬ ಅಬ್ಧಿ (ಸಮುದ್ರಕ್ಕೆ) ಔರ್ವ (ಬಡಬಾನಲ)ನಂತೆಯೂ, ಮರ್ತ್ಯ (ಮಾನವ)ರೆಂಬ ಕಾಡಿಗೆ ಕಿಚ್ಚಿನಂತೆಯೂ, ದೇವತಾಸಮೂಹವೆಂಬ ಮೇಘಕ್ಕೆ ಬಿರುಗಾಳಿಯಂತೆಯೂ ಇರುವ, ಕಡುಕೋಪಿಯೂ, ಯುವಕನೂ, ಬಲಿಷ್ಠನೂ ಆದ ತಾರಕನೆಂಬ ಅಸುರನು ಮೂರು ಲೋಕವನ್ನು ಯಾವಾಗಲೂ ಶೋಷಿಸಿ ಹಿಂಸಿಸುತ್ತಿದ್ದನು. ೪. ಓಹೋ! ಆ ತಾರಕಾಸುರನ ಪ್ರಭಾವವೆಂತಹುದು? ಅವನು ಆತ್ಮ ಬಲವೆಂಬ ಕಣ್ಣುಗಳ ಮಧ್ಯದಲ್ಲಿ ವಿಮಲ ಶ್ರೀತಾರಕೆ (ಕಣ್ಣುಗುಡ್ಡೆ) ಯಂತಿರುವವನು. ಶತ್ರುರಾಜರೆಂಬ ಕಗ್ಗತ್ತಲನ್ನು ಭೇದಿಸುವ ಕಿರಣಗಳುಳ್ಳವನು. ದೇವತಾ ಸಮೂಹಗಳೆಂಬ

ವ॥ ಎಂದು ಗಂಭೀರ ಪ್ರತಾಪಮಂ ತಳೆದು,

ಚಂ॥ ಧರಣಿಯನೊಕ್ಕಲಿಕ್ಕಿ ದಿಗಧೀಶರ ಗಂಟಲನೊತ್ತಿ ಮೆಟ್ಟಿ ಭೀ
ಕರ ಫಣಿಲೋಕಮಂ ಹಿಡಿದು ನಾಕಮನೋಡಿಸಿ ನಿಂದ ವೀರರಂ ।
ಧುರದೊಳೆ ತತ್ತರಿಂದಱೆದು ತಳ್ಕಿಸುತಪ್ರತಿಮ ಪ್ರತಾಪಭಂ
ಗುರು ಭುವನತ್ರಯಂ ನೆಗಳ್ದನಕ್ರಮಕಾರಿ ಜಿತಾರಿ ತಾರಕಂ ॥ ೫

ವ॥ ಇಂತು ಜಗತ್ರಯಮಂ ನಿಜಪ್ರತಾಪದಿಂ ಕುಕ್ಕುಳಂಗುದಿಸುವ ವಿಕ್ರಮಶೀಲನಪ್ಪ ತಾರಕಾಸುರನುರವಣೆಯಂ ಸೈರಿಸಲಾಱದೆ ನಾಗರ್ಕಳುಂ ನರರುಂ ನಿರ್ಜರರುಂ ಕಿನ್ನರಸ್ತೋಮಮುಂ ಕಿಂಪುರುಷವ್ರಜಮುಂ ನೆರೆದು ಪರಿತಂದು ಮೇರುವಿನ ತಳ್ಪಲೊಳಿರ್ಪ ನಾರಾಯಣ ವಾರಿಜಪುತ್ರ ಪುರಂದರರ ಸಭಾನಿಳಯದ್ವಾರವಳಯದ ಮುಂದೆ ಮಂದೈಸಿ ಮುದವಳಿದು ಮದವುಡುಗಿ ಮೆದೆಗೆಡೆದು ಮುಂದುಗೆಟ್ಟು ಸಂದಣಿಸಿ ನಿಂದು,

ಚಂ॥ ನರತತಿ ನೊಂದಳಲ್ದು ಮೊಱೆಯೋಮೊಱೆಯೋ ನೆರೆದಲ್ಲಿಗಲ್ಲಿಗೊ
ತ್ತರಿಸಿ ನಿಳಿಂಪವೀಥಿಯವಿಧಾಯವಿಧಾ ಉರಗಪ್ರತಾನಮಾ ।
ತುರಿಸಿ ಬಗುರ್ತು ನಿಂದು ಶಿವಧೋಶಿವಧೋ ಎನುತುಂ ಸುರುಳ್ದು ಸೂ
ಗುರಿಸಿ ತೆರಳ್ದು ತಲ್ಗಣಿಸಿ ಮಲ್ಗಳಿಗೊಂಡುದು ಮೇರುಭಾಗದೊಳ್ ॥ ೬

ಸೈನ್ಯಸಾಗರವನ್ನು ದಾಟತಕ್ಕವನು, ನರ-ನಾಗ ಮತ್ತು ಸುರರ ದುಃಖಿವನ್ನು ಹೆಚ್ಚಿಸತಕ್ಕವನು ಈ ತಾರಕಾಸುರ! ೫. ಈ ತಾರಕನು ಭೂಲೋಕದ ಜನರನ್ನು ಮಟ್ಟಹಾಕಿದ, ಅಷ್ಟದಿಕ್ಪಾಲಕರು ಉಸಿರೆತ್ತದಂತೆ ಅಂಕೆಯಲ್ಲಿಟ್ಟ, ಭಯಂಕರವಾದ ಸರ್ಪಗಳನ್ನೆಲ್ಲ ಹಿಂಡಿ ಹಿಪ್ಪೆ ಮಾಡಿದ. ಇವನ ಪ್ರತಾಪಕ್ಕೆ ಹೆದರಿ ದೇವತೆಗಳು ಓಡಿದರು, ಎದಿರುಬಿದ್ದ ವೀರರನ್ನು ಯುದ್ಧದಲ್ಲಿ ತತ್ತರಿಸುವಂತೆ ತರಿದು, ತನ್ನ ಎಣೆಯಿಲ್ಲದ ಪ್ರತಾಪದಿಂದ ಮೂರು ಲೋಕದವರನ್ನೂ ಭಂಗಗೊಳಿಸಿ ಶತ್ರು ಸಂಹಾರಕನಾದ ತಾರಕನು ಅಕ್ರಮಕಾರಿ ಎಂದು ಪ್ರಸಿದ್ಧನಾದನು. ವ॥ ಹೀಗೆ ಮೂರು ಲೋಕಗಳನ್ನು ತನ್ನ ಪ್ರತಾಪದಿಂದ ಕುದಿಸುತ್ತಿರುವ, ಮಹಾಪರಾಕ್ರಮಶಾಲಿಯಾದ ತಾರಕಾಸುರನ ಪೀಡೆಯನ್ನು ತಡೆಯಲಾರದೆ ನಾಗ-ನರ-ಸುರ-ಕಿನ್ನರ-ಕಿಂಪುರುಷರೆಂಬ ಎಲ್ಲ ಜನರೂ ಒಟ್ಟುಗೂಡಿ ಮೇರುಪರ್ವತದ ತಪ್ಪಲಲ್ಲಿರುವ ವಿಷ್ಣು-ಬ್ರಹ್ಮ ಮತ್ತು ದೇವೇಂದ್ರರ ಸಭಾದ್ವಾರಗಳ ಮುಂದೆ ಒಟ್ಟುಗೂಡಿ ದೀನವದನರಾಗಿ, ಸೊಕ್ಕು ಮುರಿದು, ದಿಕ್ಕೂ ತಿಳಿಯದೆ ಚಿಂತಾಕ್ರಾಂತರಾಗಿದ್ದರು. ೬. ಮೇರುಪರ್ವತದ ಸಾನು ಪ್ರದೇಶ (ಕಿಬ್ಬದಿ)ದಲ್ಲಿ ನರರು ನೊಂದು ದುಃಖಿತರಾಗಿ ಮೊರೆಯೋ! ಮೊರೆಯೋ! (ಕಾಪಾಡಿ!) ಎಂದು ಹುಯ್ಯಲಿಡುತ್ತಿದ್ದರು. ಅಲ್ಲಲ್ಲಿ ನೆರೆದ ದೇವತಾಸಮೂಹಗಳು ಅವಿಧಾ! ಅವಿಧಾ! (ರಕ್ಷಿಸಿರಿ) ಎಂದು ಬೊಬ್ಬೆ ಹಾಕುತ್ತಿದ್ದರು. ನಾಗರುಗಳು ಆತುರದಿಂದ ಬಿಗಿದು ನಿಂತು ಶಿವಧೋ! ಶಿವಧೋ! (ಆರ್ತಧ್ವನಿ) ಎಂದು

ಚಂ॥ ಮೊಱೆಯಿಡೆ ಕೇಳ್ದು ಚಕ್ರಧರನುಂ ಜಳಜೋದ್ಭವನುಂ ಬಲಾರಿಯುಂ
ಮಱುಗಿ ಸುರುಳ್ದಳಲ್ದು ಕರೆಯೆಲ್ಲಿಯದೀ ಘನಶೋಕವಾವನಿಂ ।
ತುಱುಗಿದುದಾವನಿಂದೊದವಿತಾವನಿನುರ್ವಿದುದಾವನಿಂದೆಯ
ಳ್ಕಱೆದುದಿದಾವನಿಂದಲರ್ದುದಾವನಿನೊತ್ತರಿಸಿತ್ತು ಕೌತುಕಂ ॥ ೭

ಕಂ॥ ಎಂದೆಂದು ನುಡಿಯುತಿರ್ಪಿನ
ಮಂದೆಯ್ತಂದೊಟ್ಟಿಯೊಱಲಿ ಮೆದೆಗೆಡೆಯುತ್ತುಂ ।
ಸಂದಣಿಸುತ್ತುರವಣಿಸು
ತ್ತುಂ ದಡದಡಿಸುತ್ತೆ ಸುರನರೋರಗನಿಕರಂ ॥ ೮

ಸುರಿತರ್ಪ ಕಣ್ಣ ನೀರಿಂ
ಕರಾಗ್ರದೊಳ್ ನೆಗೆದು ತೋರ್ಪ ಪುಲ್ಲಿಂ ಮುಖದೊಳ್ ।
ತರದಿಂ ಪೊಣ್ಮುವ ಮೊಱೆಯಿಂ
ನೆರೆದೊಱಲುತ್ತಳುರ್ವ ತಾಪದಿಂದಖಿಳಜನಂ ॥ ೯

ವ॥ ಅಂತು ಬಂದಳಲ್ದು ನಿಂದು

ಉ॥ ಕಾವುದು ವಿಷ್ಣು ಕಾವುದರವಿಂದತನೂಭವ ಕಾವುದಿಂದ್ರ ಸದ್
ಭಾವದೊಳೆಮ್ಮನೀಕ್ಷಿಪುದು ತಾರಕನಿಂದುಱೆ ನೊಂದು ಶೋಕದಿಂ ।
ತೀವಿದೆವಾವುದಿನ್ನೆಮಗೆ ಜೀವನಮಾವುದು ನಿಲ್ವ ತಾಣವಿ
ನ್ನಾವುದು ರಕ್ಷಣಾರ್ಥಕರವಾವುದು ಸತ್ಪಥವಾವುದಾಶ್ರಯಂ ॥ ೧೦

ವ॥ ಅಂತುಮಲ್ಲದೆ,

ತಲ್ಲಣಿಸಿದ್ದರು. ೭. ಹೀಗೆ ಸುರ-ನರ-ನಾಗಲೋಕದ ಜೀವಿಗಳು ಮೊರೆಯಿಡುತ್ತಿರಲು ಕೇಳಿ ವಿಷ್ಣು-ಬ್ರಹ್ಮ ಮತ್ತು ದೇವೇಂದ್ರರು ಮರುಗಿದರು. ಈ ಕೂಗು ಎಲ್ಲಿಯದು? ಈ ದುಃಖ ಯಾರಿಂದ ಒದಗಿತು? ಇದೆಲ್ಲ ಕೌತುಕಕ್ಕೆ ಕಾರಣರು ಯಾರು? ಎಂದು ಯೋಚಿಸುತ್ತಿರುವಾಗ ೮. ಹೀಗೆ ನುಡಿಯುತ್ತಿರುವಷ್ಟರಲ್ಲಿ ಸುರ-ನರ-ಉರಗ ಸಮೂಹವು ಮಂದೆ ಮಂದೆಯಾಗಿ ಒರಲುತ್ತಾ ಬಂದು ಆ ದೇವಸಭೆಯ ಮುಂದೆ ದಿಂಡುಗೆಡೆದು ಬಿತ್ತು. ೯. ಅವರ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿದೆ. ಕೈಯಲ್ಲಿ ಅಸಹಾಯಸೂಚಕವಾದ ಹುಲ್ಲುಕಡ್ಡಿ ಹಿಡಿದಿದ್ದಾರೆ. ಮುಖದಲ್ಲಿ ಮೊರೆಯಿಡುತ್ತಿದ್ದಾರೆ. ಹೀಗೆ ಎಲ್ಲರೂ ಅಲ್ಲಿ ನೆರೆದು ದುಃಖಾಕ್ರಾಂತರಾಗಿ ೧೦. ನಾರಾಯಣ, ಕಾಪಾಡು; ಕಮಲಜ, ಕಾಪಾಡು; ದೇವೇಂದ್ರನೆ ರಕ್ಷಿಸು; ಕರುಣೆಯ ಕಣ್ಣಿಂದ ನಮ್ಮನ್ನು ನೋಡಿರಿ; ತಾರಕಾಸುರನಿಂದ ಬಹಳವಾಗಿ ನೊಂದಿದ್ದೇವೆ. ಮುಂದೆ ನಮ್ಮ ಜೀವನವೇನು? ನಾವು ನಿಂತುಕೊಳ್ಳುವ ನೆಲೆ ಎಲ್ಲಿ? ನಮಗೆ ರಕ್ಷಣೆಯೆಲ್ಲಿ? ನಮಗೆ ಒಳ್ಳೆದಾರಿ ಯಾವುದು? ತೋರಿರಿ.

ಚಂ|| ಧರೆಗೆಸೆದತ್ತು ತಾರಕನ ದುರ್ಗತಿ ತಾರಕನೇಳ್ಗೆ ತಾರಕಾ
ಸುರನ ಪೊಡರ್ಪು ತಾರಕನ ಮತ್ತತೆ ತಾರಕನಾಜ್ಞೆ ತಾರಕಾ ।
ಸುರನ ತೆರಳ್ಕೆ ತಾರಕನ ತೀವ್ರತೆ ತಾರಕನುರ್ಕು ತಾರಕಾ
ಸುರನ ನಿಮಿರ್ಕೆ ತಾರಕನ ಮೂರ್ಖತೆ ತಾರನುತ್ಪಥಕ್ರಮಂ ॥ ೧೧

ಕಂ|| ತಾರಕನಂ ಗುರುತರ ಭೂ
ಭಾರಕನಂ ಸಕಳದುರಿತಪೂರಿತಪಾಪ ।
ಪ್ರೇರಕನಂ ದುರ್ಗುಣವಿ
ಸ್ತಾರಕನಂ ಬಾರಿಪನ್ನರಾರ್ ಧಾರಿಣಿಯೊಳ್ ॥ ೧೨

ವ|| ಎಂದು ಬಿನ್ನವಿಸಿದ ಪನ್ನಗನರಸುರರ ಸಂತಾಪಮನೆಂತಾನುಂ ಕೇಳಲಾಱದೆ ಸಂತೈಸಿ, ಮಂತ್ರಾಳೋಚನೆಯಂ ಮುಂದುಗೊಂಡು ಹರ್ಯಜ ಪುರಂಧರರ್ ಪರಿಮಿತಾಸ್ಥಾನರಾಗಿ

ಚಂ|| ಪುರಹರನಿರ್ದಪಂ ನಿರುಪಮಾನತಪೋಮಯನಾಗಿ ಲೋಕಮೊ
ತ್ತರಿಸಿ ತೆರಳ್ದು ಪುಯ್ಯಲಿಡುತಿರ್ದುದು ಸೈರಿಸಬಾರದಾತ್ತ ಸಂ ।
ಗರ ವಿಜಯೋರ್ಜಿತ ಪ್ರಮುಖರಿಲ್ಲ ವಿಚಾರಿಸೆ ವೀರತಾರಕಾ
ಸುರನತುಳಪ್ರತಾಪನಿಧಿ ಕಾಳೆಗಮೀ ಪದದೊಳ್ ನಿರರ್ಥಕಂ ॥ ೧೩

ಕಂ|| ಸುರಗುರುವಂ ಕಳಿಪುವುದಾ
ದರದಿಂ ಸಂಧಾನಮಂ ನಿಮಿರ್ಚುವುದವನಿ ।
ರ್ಪಿರವಂ ನೋಡುವುದಲ್ಲದೊ
ಡರವರಿಸದೆ ಕಾದುವುದು ದಿಟಕ್ಕಿದು ಮಂತ್ರಂ ॥ ೧೪

೧೧. ತಾರಕಾಸುರನ ದುರ್ಗತಿ, ಅವನ ಏಳ್ಗೆ, ಅವನ ಪರಾಕ್ರಮ, ಅವನ ಅಹಂಕಾರ, ಅವನ ಆಜ್ಞೆ, ಅವನ ಧಾಳಿ, ಅವನ ತೀಕ್ಷ್ಣತೆ, ಅವನ ಉತ್ಸಾಹ, ಅವನ ದೊಡ್ಡಸ್ತಿಕೆ, ಅವನ ಮೂರ್ಖತನ, ಅವನ ಮೇರೆ ಮೀರಿದ ನಡವಳಿಕೆಗಳಿಗೆ ಎದುರಿಲ್ಲ. ೧೨. ಆ ತಾರಕಾಸುರನ ಪಾಪಕೃತ್ಯಗಳು ಭೂಮಿಗೆ ಭಾರವಾಗಿವೆ. ಅವನು ಸಕಲದುರಿತ ಪೂರ್ಣನಾದ ಪಾಪಿಷ್ಠ, ಪಾಪಕಾರ್ಯ ಪ್ರೇರಕನು ಅವನೇ. ದುರ್ಗುಣಗಳನ್ನು ಹರಡುವ ಅವನನ್ನು ಎದುರಿಸುವರಾರು? ವ|| ಹೀಗೆ ವಿಜ್ಞಾಪಿಸಿದ ಸುರ-ನರ-ಪನ್ನಗರ ಸಂತಾಪವನ್ನು ಕೇಳಲಾರದೆ ಅವರನ್ನು ಸಂತೈಸಿ, ಹರಿ-ಅಜ-ಪುರಂದರರು ಏಕಾಂತದಲ್ಲಿ ಯೋಚಿಸಲು ಸೇರಿದರು. ೧೩. ಪರಮೇಶ್ವರನು ಅನುಪಮ ತಪೋಮಗ್ನನಾಗಿದ್ದಾನೆ. ಲೋಕಗಳ ಜನವೆಲ್ಲ ತಲ್ಲಣಗೊಂಡು ಹುಯ್ಯಲಿಡುತ್ತಿದೆ; ಅದು ಸೈರಿಸಲು ಸಾಧ್ಯವಿಲ್ಲವಾಗಿದೆ. ವೀರ ತಾರಕಾಸುರನು ಅತುಲಪ್ರತಾಪನಿಧಿ, ಅವನೊಡನೆ ಕಾದಿ ಗೆಲ್ಲುವರಾರೂ ಇಲ್ಲ, ಈ ಸ್ಥಿತಿಯಲ್ಲಿ ಅವನೊಡನೆ ಯುದ್ಧ ಮಾಡುವುದು ನಿರರ್ಥಕ. ೧೪. ದೇವಗುರುವಾದ ಬೃಹಸ್ಪತಿಯನ್ನು ಅವನಲ್ಲಿಗೆ ಕಳುಹಿಸಿ ಸಂಧಾನವನ್ನು ಏರ್ಪಡಿಸಬೇಕು, ಅವನ ಸ್ಥಿತಿ ಗತಿಗಳನ್ನು ಗಮನಿಸಬೇಕು. ಇಲ್ಲದಿದ್ದರೆ ಹಿಂದುಮುಂದು ನೋಡದೆ ಕಾದಬೇಕು. ಸದ್ಯಕ್ಕೆ ಇದಿಷ್ಟೆ ನಮಗಿರುವ ದಾರಿ.

ವ॥ ಎಂದು ನಾರಾಯಣ – ನೀರಜಭವ – ನಾಕಪತಿಗಳೇಕಚಿತ್ತರಾಗಿ

ಕಂ॥ ಶೌರ್ಯಮದೀ ಪೊಳ್ತಲ್ಲಂ
ವೀರ್ಯಾಧಿಪನೆನಿಪ ತಾರಕನ ಸಂಧಾನಂ ।
ಕಾರ್ಯಮಿದೆನುತಂ ತ್ರಿದಶಾ
ಚಾರ್ಯನ ಮುಖಮಂ ನಿರೀಕ್ಷಿಸುತ್ತಿಂತೆಂದರ್ ॥ ೧೫

ಸಕಳಕಳಾಪೂರಿತಮನ
ನಕಳಂಕಚರಿತ್ರನಮರಗುರು ನೀಂ ಘನಸಾ ।
ತ್ತಿಕನದು ಕಾರಣದಿಂ ತಾ
ರಕನಲ್ಲಿಗೆ ಪೋಪುದೊಲ್ದು ಮಾಳ್ಪುದು ನಯಮಂ ॥ ೧೬

ವಿನಯಮನಾಡುವುದಾಳೋ
ಚನೆಗೆಯ್ವುದು ಚಿತ್ತದೊಳಗನಾರಯ್ವುದು ನೀ ।
ನನುಕೂಲನಂತೆ ಪೊರ್ದುವು
ದನವದ್ಯಂ ಸಾಮದಿಂ ಮರಳ್ಚುವುದವನಂ ॥ ೧೭

ಕಂ॥ ಅದು ಸಲ್ದೊಡಾತನ ನೇ
ಹದ ಗೋತ್ರಸುಮಿತ್ರ ರಾಜಪುತ್ರ ಸಚಿವ ಸಂ ।
ಘದ ಕವಿಗೇನಾನುಮನೀ
ವುದನಾಡುತೆ ಭೇದದಿಂ ಕಳಲ್ಚುವುದವನಂ ॥ ೧೮

ಆ ನಯವಾಗದೊಡಸುರಂ
ಗಾನತವಚನಾಗಿ ಬಲ್ಮಗುಂದದೆ ಬಯಸಿ ।
ತ್ತೇನೆಂದುಮನನುಸರಿಸುವ
ದಾನದೊಳಂ ಸಂತವಡಿುವುದಾತನ ಮನಮಂ ॥ ೧೯

೧೫. ಶೌರ್ಯವನ್ನು ತೋರಿಸಲು ಇದು ಸಮಯವಲ್ಲ. ಪರಾಕ್ರಮಶಾಲಿಯಾದ ತಾರಕನೊಡನೆ ಸಂಧಾನ ನಡೆಸುವುದೇ ಸರಿ! ಎಂದು ಅವರೆಲ್ಲ ಬೃಹಸ್ಪತಿಯ ಮುಖವನ್ನು ನೋಡಿದರು. ೧೬. "ಎಲೈ ಬೃಹಸ್ಪತಿಯೆ, ಸಕಲಕಲಾಪೂರ್ಣನಾದವನು, ನಿರ್ಮಲ ಚಾರಿತ್ರವುಳ್ಳವನು, ಮೇಲಾಗಿ ದೇವಗುರು, ಸಾತ್ತ್ವಿಕ ಸ್ವಭಾವದವನು; ಆದ್ದರಿಂದ ನೀನು ತಾರಕಾಸುರನ ಬಳಿಗೆ ಹೋಗಿ ಸಂಧಾನ ಮಾಡು! ೧೭. ಶತ್ರುವಿನೊಡನೆ ರಾಜನೀತಿಯನ್ನು ಅನುಸರಿಸಿ ಸಂಧಾನ ನಡೆಸುವುದು. ಆಲೋಚಿಸಬೇಕು. ವಿಚಾರಮಾಡಬೇಕು. ಅನುಕೂಲನಂತೆ ಅವನನ್ನು ಸೇರಿ ಸಾಮೋಪಾಯದಿಂದ ಅವನು ಯುದ್ಧ ಕೈಬಿಡುವಂತೆ ಮಾಡಬೇಕು. ೧೮. ಹಾಗಿಲ್ಲದಿದ್ದರೆ ನಮಗೆ ಆಪ್ತರೂ, ವಂಶೀಯರೂ, ಒಳ್ಳೆಮಿತ್ರರೂ, ರಾಜಪುತ್ರ ಇಲ್ಲವೆ ಸಚಿವರಲ್ಲಿ ಏನಾದರೂ ಕೊಡುವುದಾಗಿ ಪ್ರಸ್ತಾಪಿಸುತ್ತಾ ಭೇದೋಪಾಯದಿಂದ ಅವನನ್ನು ಯುದ್ಧವಿಮುಖನನ್ನಾಗಿ ಮಾಡಬೇಕು. ೧೯. ಆ ನೀತಿಯನ್ನು ಅವನು ಒಪ್ಪದಿದ್ದಲ್ಲಿ ಮಾತಿನಲ್ಲಿ ಸಿಕ್ಕಿ ಬೀಳದೆ ಎದೆಗುಂದದೆ ಅವನ ಇಂಗಿತವೇನು? ಅವನು

ಈ ಪೇಳ್ದಂದಮನೊಲ್ಲದೆ
ಚಾಪಳವೃತ್ತಿಯೊಳೆ ಮೀಱೆ ನುಡಿದೊಡೆ ಸಮರ ।
ವ್ಯಾಪಾರದಲ್ಲಿ ಕಾಣ್ಬಂ
ಕೋಪಾವಿಷ್ಟಪ್ರಚಂಡಕ್ರಮಮಂ ॥ ೨೦

ವ॥ ಎಂದು ರಾಜೀವಸಂಭವಾದಿಗಳೋಜೆಯಂ ರಾಜನೀತಿಯಂ ಕಲ್ಪಿಸಿ ಕಳಿಪೆ,

ಮ॥ಸ್ರ॥ ಭರದಿಂ ಬೀಳ್ಕೊಂಡು ವಾಚಸ್ಪತಿ ಗಮನವಶಂ ಪುಷ್ಪಕಾರೂಢಕಾಯಂ
ಸ್ಥಿರಚಿತ್ತಂ ಸರ್ವಕಾರ್ಯಸ್ಥಿತಪರಿಣತ ಜ್ಞಾನಮೇಘಾನಿಳಂ ಭಾ ।
ಸುರತೇಜಂ ರಾಜಪೂಜ್ಯಂ ನುತಸಕಳಕಳಾಮಾರ್ಗಸಂಗಂ ಸುಖಾಂಗಂ
ಹರಪಾದಾರಾಧಕಂ ತಾರಕನ ನಗರಿಯಂ ಪೊಕ್ಕನುತ್ಸಾಹದಿಂದಂ ॥ ೨೧

ವ॥ ಅಂತು ಪೊಕ್ಕು ಪುರವೀಥಿಯಂ ನಿರೀಕ್ಷಿಸುತ್ತುಂ ನೂತನ ನಿಕೇತನಯೂಥಕ್ಕೆ ಕೌತುಕಚಿತ್ತನಾಗಿ

ಉ॥ ಬಂದು ವಿಮಾನದಿಂದಿಳಿದು ರಾಜಗೃಹಪ್ರತಿಹಾರದೇಶದೊಳ್
ನಿಂದು ಸುರೇಂದ್ರಮಂತ್ರಿ ನಡೆತಂದನೆನಿಪ್ಪುದನಂದು ಪೇಳೆ ಸಾ ।
ರ್ತಂದು ಕವಾಟಮಂ ತೆಱೆಯೆ ಕಂಡನನಂತಸಮುದ್ಭಟಾವಳೀ
ವಂದಿತಪಾದಪದ್ಮಯುಗರಾಜಿತನಂ ಘನತಾರಕಾಖ್ಯನಂ ॥ ೨೨

ಕಂ॥ ಕಂಡುಪಚರಿಸಿದೊಡಸುರಂ
ಕೊಂಡಾಡುತ್ತುನ್ನತಾಸನಮನೀಯುತ್ತಾ ।
ಖಂಡಲಮಂತ್ರಿಯನಸುಹೃ
ನ್ಮಂಡಲ ರವಿರಾಹುಸನ್ನಿಭಂ ಬೆಸಗೊಂಡಂ ॥ ೨೩

ಏನನ್ನು ಬಯಸುವನು ಎಂಬುದನ್ನು ಅರಿತು ದಾನೋಪಾಯದಿಂದ ಆತನ ಮನಸ್ಸನ್ನು ಸಮಾಧಾನಗೊಳಿಸಬೇಕು. ೨೦. ಈ ಮೇಲೆ ಹೇಳಿದ ಕ್ರಮವನ್ನು ಅವನು ಒಪ್ಪದೆ ಚಪಲವೃತ್ತಿಯಿಂದ ಮೀರಿ ನುಡಿದದ್ದಾದರೆ ಆಗ ಯುದ್ಧದಲ್ಲಿಯೇ ಅವನನ್ನು ಎದುರಿಸೋಣ. ವ॥ ಹೀಗೆ ಬ್ರಹ್ಮಮೊದಲಾದವರು ದಿಟ್ಟತನದಿಂದ ರಾಜನೀತಿಯನ್ನು ವಿವರಿಸಿ ದೇವಗುರುವನ್ನು ತಾರಕಾಸುರನಲ್ಲಿ ಕಳುಹಿಸಿದರು. ೨೧. ವಾಚಸ್ಪತಿಯು ದೇವಪ್ರಮುಖರನ್ನು ಬೀಳ್ಕೊಂಡು ಪುಷ್ಪಕವಿಮಾನವನ್ನೇರಿದನು. ಆತ ಕಾರ್ಯ ಸಾಧನೆಯಲ್ಲಿ ಪರಿಣತ, ಮಹಾತೇಜಸ್ವಿ, ರಾಜಪೂಜ್ಯ, ಸಕಲಕಲಾಮಾರ್ಗಗಳನ್ನು ಬಲ್ಲವ, ಮೇಲಾಗಿ ಪರಮ ಶಿವಭಕ್ತ. ಆದ್ದರಿಂದಲೇ ಅವನು ಉತ್ಸಾಹದಿಂದ ತಾರಕನ ರಾಜಧಾನಿಯನ್ನು ಸೇರಿದನು. ೨೨. ಬೃಹಸ್ಪತಿಯು ಅಲ್ಲಿಂದ ತಾರಕನ ರಾಜಧಾನಿಗೆ ಬಂದು ವಿಮಾನದಿಂದ ಇಳಿದನು, ಪ್ರತಿಹಾರ ಪ್ರದೇಶದಲ್ಲಿ ನಿಂತು "ಸುರೇಂದ್ರ ಮಂತ್ರಿಯು ಬಂದಿರುವ"ನೆಂದು ಹೇಳಿಕಳಿಸಿದನು. ರಾಜಸಭಾಭವನದ ಬಾಗಿಲು ತೆರೆಯಿತು. ಆಗ ಅವನು ಅನಂತ ಭಟರು ವಂದಿಸುತ್ತಿದ್ದ ಪಾದಕಮಲವುಳ್ಳ ತಾರಕನನ್ನು ಕಂಡನು. ೨೩. ಕಂಡು ಕುಶಲಪ್ರಶ್ನೆ ಮಾಡಿದ ಮೇಲೆ ಅಸುರನು ವಾಚಸ್ಪತಿಯನ್ನು ಕೊಂಡಾಡಿ ಉನ್ನತಾಸನವನ್ನು ಇತ್ತು, ಶತ್ರುಮಂಡಲವೆಂಬ ರವಿಗೆ ರಾಹುವಿನಂತಿರುವ

ಸುರಪತಿಗೆ ಕುಶಲಮೇ ಪಂ
ಕರುಹಭವಂ ಕ್ಷೇಮಿಯೇ ಸರೋರುಹನಾಭಂ ।
ಸ್ಥಿರನೇ ನೀವಿಂತಿಲ್ಲಿಗೆ
ಬರವೇನೆಂದಱಿಪುವರ್ಥವಾವುದು ಕಜ್ಜಂ ॥ ೨೪

ಎನೆ ಸುರುಗುರುವೆಂದಂ ನಾ
ಗನಿಕರಮುಂ ಮರ್ತ್ಯನಿಕರಮುಂ ತರದಿಂ ದೇ ।
ವನಿಕರಮುಂ ನಿಮ್ಮೊಳಿಗ
ಮನೆ ಭರದಿಂ ಪುಯ್ಯಲಿಕ್ಕೆ ಕಳುಪಿದರೆನ್ನಂ ॥ ೨೫

ಮ॥ಸ್ರ॥ ಬದಿಯುಂ ದೈತ್ಯಾರಿಯುಂ ವಜ್ರಧರನುಮೆನಿಪೀ ಮೂವರುಂ ಕೂಡಿ ಮೂಲೋ
ಕದ ಶೋಕಾನೀಕಮಂ ಕೇಳ್ದತಿಕೃಪೆ ಮನದೊಳ್ ಪುಟ್ಟ ನಿನ್ನಲ್ಲಿಗೆನ್ನಂ ।
ಪದೆಪಿಂದಂ ಪೋಗವೇಳ್ಪಟ್ಟದರಿದುವೆ ನಿಮಿತ್ತಂ ದಿಟಂ ಬಂದೆನೀ ಕಾ
ರ್ಯದ ಭಾರಂ ನಿನ್ನದೆಂತು ನಿನಗೆ ಧುರದೊಳಾರ್ ಪಾಟ ಪೇಳ್ ದೈತ್ಯರಾಜಾ ॥೨೬

ಕಂ॥ ವರಗಂಭೀರಂ ಧೀರಂ
ಪರಸೈನ್ಯಾರಣ್ಯದಾವನೆನಿಸಿದ ನಿನಗೊಂ ।
ದರಿದುಂಟೆ ಪೇಳೆನುತ್ತುಂ
ಸುರಗುರು ಮಿಗೆ ಪೊಗಳೆ ತಾರಕಂ ನಗುತೆಂದಂ ॥ ೨೭

ತಾರಕ ಬಂದ ಕಾರ್ಯವೇನೆಂದು ಬೆಸಗೊಂಡನು. ೨೪. ಸುರಪತಿಗೆ ಕುಶಲವೆ? ಕಮಲಭವ (ಬ್ರಹ್ಮ)ನಿಗೆ ಕ್ಷೇಮವೆ? ಕಮಲನಾಭ(ವಿಷ್ಣು) ಸ್ಥಿರವಾಗಿರುವನೆ? ನೀವು ಇಲ್ಲಿಗೆ ಬಂದ ಕಾರಣವೇನು? ಬಂದುದಕ್ಕೆ ಪ್ರಯೋಜನವಾವುದು? ಏನು ಕೆಲಸ ಎಂದು ತಾರಕ ಪ್ರಶ್ನಿಸಿದ. ೨೫. ತಾರಕನ ಪ್ರಶ್ನೆಗೆ ಬೃಹಸ್ಪತಿ ಹೀಗೆ ಉತ್ತರಿಸಿದ- ನಾಗನಿಕರ-ಮರ್ತ್ಯನಿಕರ ಮತ್ತು ದೇವನಿಕರವೆಲ್ಲವೂ ನಿಮ್ಮ ಉಪದ್ರವನ್ನು ತಡೆಯಲಾರದೆ ಮೊರೆಯಿಡಲಿಕ್ಕೆ ನನ್ನನ್ನು ಕಳುಹಿಸಿದರು. ೨೬. ಬ್ರಹ್ಮವಿಷ್ಣು ಮತ್ತು ದೇವೇಂದ್ರ ಈ ಮೂವರೂ ಒಂದೆಡೆ ಸೇರಿ ಮೂರುಲೋಕಗಳಿಗೆ ಪ್ರಾಪ್ತವಾಗಿರುವ ದುಃಖವನ್ನು ಕೇಳಿದರು. ಅವರ ಮನಸ್ಸು ಕರಗಿತು. ಕರುಣೆ ಹುಟ್ಟಿತು. ನನ್ನನ್ನು ಕರೆದು ಇದಕ್ಕೆ ಪರಿಹಾರವನ್ನು ಹುಡುಕಲು ನಿನ್ನ ಸಮೀಪಕ್ಕೆ ಕಳುಹಿಸಿದರು. ಅದಕ್ಕಾಗಿ ನಾನು ಬಂದದ್ದು ನಿಜ; ಈ ಕಾರ್ಯವನ್ನು ಮಾಡಿಕೊಡುವ ಭಾರ ನಿನ್ನದು. ಎಲೈ ದೈತ್ಯೇಂದ್ರನೆ, ಯುದ್ಧದಲ್ಲಿ ನಿನಗೆ ಸಮರು ಈ ಜಗತ್ತಿನಲ್ಲಿ ಯಾರಿದ್ದಾರೆ? ೨೭. ಬೃಹಸ್ಪತಿಯ ಪ್ರಶಂಸೆಯನ್ನು ಕೇಳಿ ತಾರಕನಿಗೆ ಸಂತೋಷವಾಯಿತು. "ಗಂಭೀರನೂ ಧೀರನೂ ಶತ್ರುಸೈನ್ಯವೆಂಬ ಕಾಡಿಗೆ ಕಿಚ್ಚಿನಂತಿರುವವನೂ ಆದ ನಿನಗೆ ಇದು ಯಾವ ಮಹಾ ಹೇಳು!" ಎಂದು ಸುರಗುರುವು ಮತ್ತೆ ಹೊಗಳುತ್ತಿರಲು ತಾರಕ ನಕ್ಕು ಹೇಳಿದನು.

ನಯಮಿಂತೇಕೆ ಬೃಹಸ್ಪತಿ
ಜಯಮಂ ಮುಂತಿಟ್ಟು ಬಂದವಂಗೆನಗತಿ ನಿ ।
ಶ್ಚಯಬುದ್ಧಿಯಿಂದೆ ಮೇಲತಿ
ಶಯಸಂಗರವಿಕ್ರಮಂಗಳುಳ್ಕೊಡೆ ಪೇಳಾ ॥ ೨೮

ವ॥ ಎಂದು ತಾರಕಂ ನಯಮನೊಲ್ಲದೆ ನಿರಾಕರಿಸಿ ನುಡಿಯೆ ಸುರುಗುರುವಿಂತೆಂದಂ,

ಮ॥ಸ್ರ॥ನಯಮಂ ನೀನೊಲ್ಲೆ ಬುದ್ಧಿಪ್ರಪ ಸಚಿವಕುಲಂ ನೋಡೆ ತಾನಿಲ್ಲ ನಿಸ್ಸಂ
ಶಯದಿಂದಂ ಮಂತ್ರಿಗಳ್ ಪೇಳ್ದತಿಹಿತವಚಮಂ ಕೇಳೆ ಮತ್ತಾರುಮಂ ಸಂ ।
ದೆಯದಿಂದಂ ನಂಬಿ ನಂಬಿರ್ದತಿಹಿತಜನಮಂ ಪೊರ್ದಿ ಮಾತಾಡೆ ಮೇಲ
ಪ್ಪ ಯಶೋವಿಸ್ತಾರಮಂ ಭಾವಿಸೆ ತನುಮದದಿಂ ತಾರಕಾ ಮೇರೆಗೆಟ್ಟಯ್ ॥ ೨೯

ವ॥ ಎಂದು ವಾಚಸ್ಪತಿ ಸಾಮಮಂ ಬಿಟ್ಟು ಭೇದಮಂ ನುಡಿಯೆ ತಾರಕಂ ದರಸ್ಮಿತಮುಖನಾಗಿ,

ಕಂ॥ ಎಂತೆಂತು ಗುರುವೆ ನೀನೆ
ನ್ನಂತರಮಂ ನೋಡದಿಂತು ನುಡಿವರೆ ಸಮರ ।
ಪ್ರಾಂತದೊಳೆನಗೆ ವಿಚಾರಮೆ
ಸಂತಮಿರತಿಮಥನಮೇಕೆ ತಾರಕನಿದಿರೊಳ್ ॥ ೩೦

ಹಿತರೆನಗಿನ್ನಾರ್ ವಾಚ
ಸ್ಪತಿ ನೀನೆಂದಂತಿರಹಹ ಹುಸಿಯಲ್ತಲ್ತು ।
ನ್ನತಸಂಗರದೊಳಗಱೆಯಯ್
ಹಿತರೆನ್ನ ನಿಶಾತಖಡ್ಗಮುಂ ನಿಜದೋಳಂ ॥ ೩೧

೨೮. ಎಲೈ ಬೃಹಸ್ಪತಿ, ಈ ನೀತಿಯೆಲ್ಲಾ ಏತಕ್ಕೆ? ಜಯವನ್ನು ಪಡೆಯಲು ಬಂದವನು ನೀನು! ನನಗೆ ಅತಿಶಯ ಬುದ್ಧಿವಂತಿಕೆಯ ಮಾತುಗಳನ್ನಾಡುತ್ತಿರುವೆ! ಅಂತಹ ಅತಿಶಯವಾದ ಯುದ್ಧಸಿದ್ಧತೆ ಏನಾದರೂ ಇದ್ದರೆ ಹೇಳಿಬಿಡು! ವ॥ ತಾರಕ ಬೃಹಸ್ಪತಿಯ ಮಧ್ಯಸ್ಥಿಕೆಯನ್ನು ತಿರಸ್ಕರಿಸಿದ. ಅದಕ್ಕೆ ಸುರಗುರು ಉತ್ತರಿಸಿದ-೨೯. ನಯ ನಿನಗೆ ಬೇಕಿಲ್ಲ, ರಾಜನೀತಿ ಬೋಧಿಸುವ ಸಚಿವರು ಮೊದಲೇ ಇಲ್ಲ! ಇರುವ ಮಂತ್ರಿಗಳು ಹೇಳುವ ಹಿತವಚನವನ್ನು ನೀನು ಕೇಳುವವನಲ್ಲ; ಸಂದೇಹದಿಂದ ಯಾರಲ್ಲಿಯೂ ನಿನಗೆ ನಂಬಿಕೆ ಇಲ್ಲ; ನಿನ್ನನ್ನು ನಂಬಿರುವ ಹಿತಚಿಂತಕರೊಡನೆ ನೀನು ಮಾತಾಡುವುದೂ ಇಲ್ಲ; ಮುಂದೆ ಆಗಲಿರುವ ಅಪಕೀರ್ತಿಯನ್ನು ಕುರಿತು ನೀನು ಯೋಚಿಸುವುದೂ ಇಲ್ಲ. ಒಟ್ಟಿನಲ್ಲಿ ಎಲೈ ತಾರಕನೆ, ಇದೆಲ್ಲಕ್ಕೂ ಮುಖ್ಯಕಾರಣ ನಿನ್ನ ತನುಮದ! ಅಂತು ನಿನ್ನ ಅನ್ಯಾಯ ಮೇರೆ ಮೀರಿತು! ವ॥ ದೇವಗುರು ಸಾಮೋಪಾಯವನ್ನು ಕೈಬಿಟ್ಟು ಭೇದೋಪಾಯಕ್ಕೆ ಇಳಿದು ಮಾತನಾಡಿದುದನ್ನು ಕೇಳಿ ತಾರಕ ನಸುನಕ್ಕು-೩೦. ಎಲೈ ಬೃಹಸ್ಪತಿ, ನೀನು ನನ್ನ ಅಂತರಂಗವನ್ನರಿಯದೆ ಹೀಗೆ ಮಾತನಾಡಬಹುದೇ? ಯುದ್ಧವಿಚಾರದಲ್ಲಿ ನನಗೆ ಬೇರೆ ಅಭಿಪ್ರಾಯವುಂಟೆ? ಸುಮ್ಮನಿರು! ಇನ್ನು ತಾರಕನ ಎದುರಿನಲ್ಲಿ ಘರ್ಷಣೆ ಬೇಡ! ೩೧. ಹೇ ವಾಚಸ್ಪತಿ, ನನಗಿನ್ನಾರು ಹಿತವರು! ನೀನು ಎಂದಂತೆ ಇರು, ಇದು ಸುಳ್ಳಲ್ಲ! ಮಹಾಯುದ್ಧಗಳಲ್ಲಿ

ಇಂತೆಂದು ನುಡಿದ ತಾರಕ
ನಂತಸ್ಥಮನಱೆದು ಸಾಮಭೇದಂಗಳುಮಂ ।
ಪಿಂತಿಕ್ಕಿ ನಿರ್ಜರಾಚಾ
ರ್ಯಂ ತಡೆಯದೆ ನುಡಿದನುಚಿತದಾನಕ್ರಮಮಂ ॥ ೩೨

ಉ॥ ಕೇಳೆಲೆ ತಾರಕಾಸುರ ಸರೋಜಭವಾದಿಗಳಾಜಿರಂಗದೊಳ್
ಕಾಳೆಗಮಂ ನಿಮಿರ್ಚಲಣಮಾಱದಿರರ್ ದಿಟಮೆಂಬ ಯುದ್ಧಸ ।
ಲ್ಲೀಳೆಯದಿರ್ಕೆ ನಿನ್ನ ಮನದೊಳ್ ಬಯಸಿರ್ದುದನೇನನಾದೊಡಂ
ಪೇಳದನಿತ್ತಪರ್ ಬಡವರೊಲ್ಲೊಡೆಯರ್ ಕನಕಾದ್ರಿಗಾವಗಂ ॥ ೩೩

ಕಂ॥ ನೀಡಾಗದೆ ರಣರಂಗ
ಕ್ರೀಡೆಯನುಳಿದೆಳಸಿದನಿತುಮಂ ದೇಶವನೀ ।
ಡಾಡಲ್ ಸಮರ್ಥರದಱಿಂ
ಬೇಡೊಲ್ದು ಸಮುದ್ರಮುದ್ರಿತಾವನಿಯೆಡೆಯೊಳ್ ॥ ೩೪

ಎನೆ ತಾರಕಂಗೆ ಕೋಪಂ
ಮನದೊಳ್ ಪುಟವೆಳ್ದು ಮುಖದೊಳವತರಿಸಿ ವಿಲೋ ।
ಚನದೊಳ್ ಪಸರಿಸಿ ಪುರ್ಬಿನ
ಕೊನೆಯೊಳ್ ಕುಡಿಗೊಂಡು ನಿಮಿರೆ ನಡುಗುತೆ ನುಡಿದಂ ॥ ೩೫

ಸಡಿಫಡ ಸುರೇಂದ್ರಮಂತ್ರಿಯೆ
ಬಿಡಂಗಿದೇಕೆನ್ನ ಕೂಡೆ ನೆನೆಯದ ಮುನ್ನಂ ।
ಪೊಡವಿಯನೆನ್ನಯ ಕೆಯ್ಯೊಳ
ಗಡಗಿರ್ದುದನೆನಗೆ ಕುಡುವೆನೆಂಬುದು ಚಿತ್ರಂ ॥ ೩೬

ನನಗೆ ಹಿತರೆಂದರೆ ಈ ಹರಿತವಾದ ಖಡ್ಗ, ಮತ್ತು ಸುದೃಢವಾದ ಉದ್ದವಾದ ತೋಳು ಇವೆರಡೇ, ತಿಳಿಯಿತೆ? ೩೨. ಹೀಗೆ ನುಡಿದ ತಾರಕನ ಅಂತರಂಗವನ್ನು ಅರಿತ ಸುರಗುರು ಸಾಮ ಮತ್ತು ಭೇದೋಪಾಯಗಳನ್ನು ಕೈಬಿಟ್ಟು ದಾನೋಪಾಯವನ್ನು ಅನುಸರಿಸಿ ಹೇಳಿದನು. ೩೩. ಎಲೈ ತಾರಕಾಸುರನೇ ಬ್ರಹ್ಮಮೊದಲಾದವರು ಯುದ್ಧಕ್ಕೆ ಹಿಂಜರಿಯುವರೆಂದು ಎಂದಿಗೂ ಭಾವಿಸಬೇಡ! ಆ ಯುದ್ಧದ ಪ್ರಸ್ತಾಪ ಈಗ ಬೇಡ. ನಿನ್ನ ಮನಸ್ಸಿನಲ್ಲಿ ಏನಾದರೂ ಬಯಕೆಗಳಿದ್ದರೆ ಹೇಳು. ಕನಕಾದ್ರಿಗೆ ಒಡೆಯರಾದ ಅವರು ನೀನು ಕೇಳಿದ್ದನೆಲ್ಲ ಕೊಡಬಲ್ಲರು. ೩೪. ಯುದ್ಧದ ಪ್ರಸಕ್ತಿ ಬೇಡ; ಪ್ರತಿಭಟಿಸುವುದನ್ನು ಕೈಬಿಟ್ಟು ನೀನು ಬಯಸಿದುದೆಲ್ಲವನ್ನೂ ಎಂದರೆ ಈ ದೇಶವನ್ನೇ ಆದರೂ ಅವರು ಕೊಡಲು ಸಮರ್ಥರು; ಆದ್ದರಿಂದ ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಈ ಭೂಲೋಕದಲ್ಲಿ ಯಾವ ಭಾಗವನ್ನಾದರೂ ನೀನು ಬೇಡಿ ಅವರಿಂದ ಪಡೆದುಕೊ! ೩೫. ಬೃಹಸ್ಪತಿಯ ಮಾತುಗಳನ್ನು ಕೇಳಿ ತಾರಕನ ಕೋಪ ನೆತ್ತಿಗೇರಿತು. ಕೋಪವು ಪುಟಿದು ಮುಖದಲ್ಲಿ ಹರಡಿ, ಕಣ್ಣಿನಲ್ಲಿ ಉಕ್ಕಿ ಹುಬ್ಬುಗಂಟಿಕ್ಕಿ

ಉ॥ ಎನ್ನೊಡನೇಕೆ ನಿನ್ನ ಮತಿ ನಿನ್ನ ಮದಾಂಧತೆ ನಿನ್ನ ಮತ್ಸರಂ
ನಿನ್ನ ನಯೋಕ್ತಿ ನಿನ್ನ ಹೃದಯೋಗ್ರತೆ ನಿನ್ನಯೆ ಬುದ್ಧಿ ನಿನ್ನ ಸಂ ।
ಪನ್ನತೆ ನಿನ್ನ ಮಂತ್ರಗತಿ ನಿನ್ನಯೆ ವಕ್ತೃತೆ ನಿನ್ನ ವಿಸ್ತರಂ
ನಿನ್ನಯೆ ನೀತಿ ನಿನ್ನ ಬಗೆ ನಿನ್ನ ತಿರಸ್ಕರಣಂ ಬೃಹಸ್ಪತೀ ॥ ೩೭

ಕಂ॥ ಧರೆಯೊಳಗೆ ತಾರಕಂಗೆನ
ಗರಿಮೇಘಮಹಾಬಲಂಗೆ ಸಮರಾಂಗಣದೊಳ್ ।
ಹರಿಗಿರಿ ರವಿಗಿವಿ ಶಿಖಿಗಿಖಿ
ಸುರಪತಿಗಿರಪತಿಯಜಂಗಿಜಂ ತೆಗೆ ಸರಿಯೇ ॥ ೩೮

ನೆಟ್ಟನೆ ಕಾಳಿಗಮನೊಡಂ
ಬಟ್ಟಿಂ ಕೇಳಮರಗುರುವೆ ಅಮರಾವತಿಯಂ ।
ಬಿಟ್ಟೋಡಿ ನಿಮ್ಮ ಬೆಳ್ಳಿಯ
ಬೆಟ್ಟದ ಗುಹೆಗುಹೆಗಳೊಳಗೆ ಮಾಡುವುದಿಂಬಂ ॥ ೩೯

ವ॥ ಎಂದು ನುಡಿದ ತಾರಕನ ವೀರಾಳಾಪಮಂ ವಾಚಸ್ಪತಿ ಕೇಳ್ದು ಕೌತುಕಮನಾಳ್ದು ನಿರ್ವೇದದೊಳ್ ಬಳ್ದು ಭಯರಸದೊಳಳ್ದು ಧೈರ್ಯದೊಳೆಳ್ದಿಂತಾನುಂ ಸಂತಯ್ಸಿ ಕೊಂಡು ಸಾಮ-ಭೇದ-ದಾನಂಗಳನುಲ್ಲಂಘಿಸಿದ ಕರ್ಕಶನಪ್ಪ ರಕ್ಕಸರರಸನೊಳ್ ದಂಡ

ತುಟಿಯದುರುತ್ತಿರಲು ಹೀಗೆಂದ- ೩೬. ಸಡಿಫಡ! ಎಲೈ ದೇವಮಂತ್ರಿ, ಈ ಬೆಡಗಿನ ಮಾತುಗಳೇತಕ್ಕೆ? ಈ ಭೂಲೋಕವೆಲ್ಲ ನನ್ನ ಕೈಯಲ್ಲಿಯೇ ಇರುವಾಗ ಅದನ್ನೇ ಮತ್ತೆ ನನಗೆ ಕೊಡುವೆನೆಂಬುದು ಎಂತಹ ಸೋಜಿಗ! ೩೭. ಎಲೈ ಬೃಹಸ್ಪತಿ, ನಿನ್ನ ಹತ್ತಿರ ಆಟ ನಡೆಯುವುದಿಲ್ಲ; ನಿನ್ನ ಬುದ್ಧಿವಂತಿಕೆ, ಮದಾಂಧತೆ, ನಿನ್ನ ಮತ್ಸರ, ನಯವಾದ ಮಾತು, ನಿನ್ನ ಮನಸ್ಸಿನ ಉಗ್ರತ್ವ, ನಿನ್ನ ಸಂಪನ್ನತನ, ಮಂತ್ರದ ಮಾಟ, ನಿನ್ನ ಮಾತುಗಾರಿಕೆ, ನಿನ್ನ ನೀತಿ, ಇವೆಲ್ಲ ನನ್ನ ಮುಂದೆ ತಿರಸ್ಕಾರ ಯೋಗ್ಯ! ೩೮. ಎಲೈ ಸುರಗುರು, ಅರಿಮೇಘ ಮಹಾಬಲ (ಬಿರುಗಾಳಿ) ನೆನಿಸಿರುವ ಈ ತಾರಕನಿಗೆ ತುಚ್ಛರಾದ ಹರಿ, ರವಿ, ಶಿಖಿ ಮತ್ತು ಸುರಪತಿಗಳು ಸಮವೆ? ೩೯. ಇಗೊ, ಯುದ್ಧಕ್ಕೆ ಸಿದ್ಧನಾಗಿದ್ದೇನೆ! ಹೇ ಅಮರಗುರು, ಇನ್ನು ನೀವೆಲ್ಲ ಅಮರಾವತಿಯನ್ನು ಬಿಟ್ಟು ಓಡಿಹೋಗಿ ಆ ರಜತಗಿರಿಯ ಗುಹೆಗಳನ್ನು ಆಶ್ರಯಿಸಿರಿ. ವ॥ ತಾರಕಾಸುರನ ವೀರಾಳಾಪವನ್ನು ಕೇಳಿದ ಸುರಗುರುವಿಗೆ ಸೋಜಿಗವಾಯಿತು. ಬಹು ದುಃಖವೂ ಆಯಿತು. ಹೇಗೋ ಕೊಂಚ ಧೈರ್ಯ ತೆಗೆದುಕೊಂಡು ಸಮಾಧಾನ ಮಾಡಿಕೊಂಡನು. ತಾರಕ ತಾನು ಒಡ್ಡಿದ ಸಾಮ-ದಾನ-ಭೇದ ಎಂಬ ಮೂರು ಉಪಾಯಗಳನ್ನು ಒಪ್ಪಲಿಲ್ಲ; ಇನ್ನು ದಂಡೋಪಾಯ ಅವನಲ್ಲಿ ನಡೆಯದು; ಆದರೆ ಅದನ್ನು ಹೊರಗೆ ತೋರಿಸುವಂತೆ ಇಲ್ಲ; ಆತ ಮಾತಿನಲ್ಲಿ ತನ್ನ ಬಿಂಕವನ್ನು ಬಿಟ್ಟು ಕೊಡದೆ ತಾರಕನನ್ನು ಬೀಳ್ಕೊಂಡನು. ೪೦. ಬೃಹಸ್ಪತಿಯು, ತನ್ನ ಸಂಧಾನವು ಮುರಿದು ಬಿದ್ದುದಕ್ಕಾಗಿ ಚಿಂತಾಭರಿತನಾಗಿ ಮೌನವಾಗಿ ಹಿಂದಿರುಗಿದ, ಆತನ ಮನಸ್ಸಿನಲ್ಲಿ ಅಭಿಮಾನ

ಮೆಂದುಂ ಹಸನಾಗದೆಂದು ಮನದೊಳಳ್ಕುತುಂ ಮೊತಿನೊಳ್ ಬಲ್ಪುಗಿಡದೆ ತಾರಕನಂ ಬೀಳ್ಕೊಂಡು,

ಕಂ॥ ಮೋನದೆ ನಡೆತಂದಂ ಸಂ
ಧಾನವಿಹೀನಪ್ರಧಾನ ಚಿಂತಾಭರಿತಂ ।
ಮಾನ ಮನಸ್ಸಂಗತವಿಧು
ರಾನನ ವಿಗತಪ್ರಧೈರ್ಯನಮರಾಚಾರ್ಯಂ ॥ ೪೦

ಬರೆವರೆ ಸರೋಜಭವನುಂ
ಹರಿಯುಂ ವಾಸವನುಮಮರರುಂ ನೆರೆದಿರ್ದಾ ।
ತುರದಿಂದೆ ಬರ್ಪ ಮಂತ್ರಿಯ
ಬರವಂ ನೆರೆ ಕಂಡು ತಮ್ಮೊಳಂದಿಂತೆಂದರ್ ॥ ೪೧

ಕೊರಗಿದುವು ಲೋಚನಂ ಭಾ
ಸುರಮುಡುಗಿತು ಭಾಳಲೇಖೆ ಕಂದಿತು ಗಂಡಂ ।
ವರವಕ್ತ್ರಂ ಕಳೆಗುಂದಿತು
ಗುರುತರಸಂಧಾನಮಿಲ್ಲ ಗುರುವಿನ ಮುಖದೊಳ್ ॥ ೪೨

ಎಂದಾಗಳ್ ನುಡಿಯುತ್ತಿರೆ
ಬಂದೆಲ್ಲರ್ ನಮಿಸಲಮರಗುರು ಕುಳ್ಳಿರ್ದಿಂ ।
ತೆಂದಂ ರಕ್ಕಸನೊಡನೆ
ಲ್ಲಂದದೊಳಂ ಪೇಳ್ದೆನಾವ ಮಂತ್ರಮನೊಲ್ಲಂ ॥ ೪೩

ಕ್ರಮದೊಳ್ ಸಲ್ಲಂ ಸಂಧಾ
ನಮನೊಲ್ಲಂ ಸಂಗರಾನುಸಂಧಾನಮೆ ತ ।
ನ್ನ ಮನಂ ತಾರಕನೊಡನೆ
ಶ್ರಮದಿಂ ಕಾದುವುದೆ ಮಂತ್ರಮಿಂತಿದೆ ಕಜ್ಜಂ ॥ ೪೪

ಹೆಡೆಯಾಡುತ್ತಿತ್ತು. ಮುಖ ಕಳೆಗೆಟ್ಟಿತ್ತು, ಧೈರ್ಯ ಧೃತಿಗೆಟ್ಟಿತ್ತು. ೪೧. ಸುರಗುರುವಿನ ಬರವನ್ನೇ ಕಾಯುತ್ತಿದ್ದವರು ಅಜ-ಹರಿ-ದೇವೇಂದ್ರರೇ ಮೊದಲಾದ ಅಮರರು; ಅವರು ಆತುರದಿಂದ ಬರುತ್ತಿರುವ ಮಂತ್ರಿ ಬೃಹಸ್ಪತಿಯ ಸ್ಥಿತಿಯನ್ನು ಕಂಡು ತಮ್ಮಲ್ಲೆ ಹೀಗೆಂದುಕೊಂಡರು. ೪೨. ಅಯ್ಯೋ! ಗುರುವಿನ ಕಣ್ಣು ಕೊರಗಿವೆ, ಮುಖ ಬಾಡಿದೆ, ಕಪೋಲ ಕಂದಿದೆ, ಇದೆಲ್ಲವನ್ನು ನೋಡಿದರೆ ಈ ಬೃಹಸ್ಪತಿಯ ಸಂಧಾನ ಫಲಿಸಿದಂತೆ ಕಾಣುತ್ತಿಲ್ಲ. ೪೩. ಹೀಗೆ ದೇವತೆಗಳು ಅಂದುಕೊಳ್ಳುತ್ತಿರುವಾಗ ಬೃಹಸ್ಪತಿ ಅಲ್ಲಿಗೆ ಬಂದ; ಎಲ್ಲರೂ ಗುರುವಿಗೆ ವಂದಿಸಿದರು. ಅಮರಗುರು ಕುಳಿತುಕೊಂಡು "ತಾರಕನೊಡನೆ ಎಲ್ಲ ವಿಧದಿಂದಲೂ ಮಾತನಾಡಿಯಾಯಿತು! ಆತ ಯಾವ ಸಂಧಾನವನ್ನೂ ಒಪ್ಪುವವನಲ್ಲ! ೪೪. ಸಾಮ-ದಾನಗಳು ಅವನಿಗೆ ಬೇಕಿಲ್ಲ, ಸಂಧಾನದ ಅಗತ್ಯವಿಲ್ಲ; ಯುದ್ಧವೊಂದೇ ಅವನ ಗುರಿ; ಆದ್ದರಿಂದ ನಾವು ಶ್ರಮವಹಿಸಿ

ಅತಿನಿಷ್ಕರುಣತಿನಿಷ್ಕೃಪ
ನತಿನೀರಸನತಿನಿರಾಶ್ರಯಂ ತಾರಕನಿಂ ।
ತತಿದುಷ್ಕರನತಿದುರ್ಜನ
ನತಿ ದುರ್ಗುಣನತಿ ದುರಾತ್ಮನತಿದುಶ್ಶೀಲಂ ॥ ೪೫

ವ॥ ಅಂತುಮಲ್ಲದೆ,

ಕಂ॥ ಅಪರಿಮಿತತುರಗಕುಲದಿಂ
ದಪರಿಮಿತೇಭಪ್ರತಾನದಿಂ ತಾರಕನಿಂ ।
ತಪರಿಮಿತ ಪತ್ತಿಯಿಂದ
ಶ್ವಪತಿಗೆ ಗಜಪತಿಗೆ ನರಪತಿಗೆ ಮಿಗಿಲೆನಿಪಂ ॥ ೪೬

ಸಿಡಿಲಿಂದರಣ್ಯಶಿಖಿಯಿಂ
ವಡಬಾನಳನಿಂ ಲಯಾಗ್ನಿಯಿಂ ತಾರಕನಿ ।
ರ್ಮಡಿ ಮೂವಡಿ ನಾಲ್ವಡಿಯ
ಯ್ದಡಿ ಭರದೊಳ್ ಬಲದೊಳುಷ್ಣದೊಳ್ ತೀವ್ರತೆಯೊಳ್ ॥ ೪೭

ವ॥ ಎಂದು ವಾಚಸ್ಪತಿ ತಾರಕಾಸುರನ ಪಟುತರಪ್ರತಾಪಮಂ ಪೇಳುತಿರ್ಪ ಸಮಯದೊಳೊರ್ವ ಗಂಧರ್ವನಾಯಕನತಿತ್ವರಿತಗತಿಯಿಂ ಪರಿತಂದು

ಉ॥ ಏತಱ ಮಾತಿದೇತಱ ವಿಚಾರತೆಯೇತಱ ಮಂತ್ರಶಕ್ತಿಯ
ನ್ನೇತಱ ಸತ್ವಮೇತಱ ಬಲೋನ್ನತಿಯೇತಱ ವೀರವೃತ್ತಿ ತಾ ।
ನೇತಱ ಬುದ್ಧಿಯೇತಱ ಪರಾಕ್ರಮದುತ್ಸವವೇತಱಾಜ್ಞೆ ವಿ
ಖ್ಯಾತನ ತಾರಕಾಸುರನ ಬೀಡು ಬೀಡುತ್ತಿದೆ ನೋಡಲದ್ಭುತಂ ॥ ೪೮

ಅವನೊಡನೆ ಕಾದುವುದೊಂದೇ ನಮಗಿರುವ ದಾರಿ! ೪೫. ಆ ತಾರಕ ಮಹಾದುಷ್ಟ! ಕೃಪಾಹೀನ, ನೀರಸಸ್ವಭಾವದವನು, ನಿರಾಶ್ರಯ; ಅವನು ಅತಿ ದುಷ್ಕರ, ದುರ್ಜನ, ದುರ್ಗುಣ, ದುರಾತ್ಮ ಎಲ್ಲಕ್ಕಿಂತ ಹೆಚ್ಚಾಗಿ ಅತ ಬಹುದುಶ್ಶೀಲ! ೪೬. ಅವನಲ್ಲಿ ಅಪರಿಮಿತ ಅಶ್ವಸೈನ್ಯವಿದೆ, ಅಪರಿಮಿತ ಗಜಗಳಿವೆ, ಅಸಂಖ್ಯ ಸೈನ್ಯವಿದೆ; ಇದರಿಂದ ತಾರಕನು ಅಶ್ವಪತಿ, ಗಜಪತಿ ಮತ್ತು ನರಪತಿಗಳೆಲ್ಲರನ್ನೂ ಮೀರಿದ್ದಾನೆ. ೪೭. ಲೋಕದಲ್ಲಿ ವೇಗದಲ್ಲಿ, ಬಲದಲ್ಲಿ, ಉಷ್ಣತೆಯಲ್ಲಿ ಮತ್ತು ತೀವ್ರತೆಯಲ್ಲಿ ಸಿಡಿಲು, ಕಾಡುಕಿಚ್ಚು, ಬಡಬಾಗ್ನಿ ಮತ್ತು ಪ್ರಳಯಾಗ್ನಿಗಳು ಒಂದಕ್ಕಿಂತ ಒಂದು ಹೆಚ್ಚು ಎನಿಸಿವೆ. ಆದರೆ ಈ ತಾರಕ ಅವೆಲ್ಲವುಗಳಿಗಿಂತಲೂ ಇಮ್ಮಡಿ, ಮುಮ್ಮಡಿ, ನಾಲ್ವಡಿ, ಇಲ್ಲವೆ ಐದರಷ್ಟು ಮಿಗಿಲೆನಿಸಿದ್ದಾನೆ. ವ॥ ಹೀಗೆ ಸುರಗುರು ತಾರಕನ ಪ್ರತಾಪವನ್ನು ಹೇಳುತ್ತಿರುವಾಗ ಒಬ್ಬ ಗಂಧರ್ವ ನಾಯಕನು ಅತುರದಿಂದ ಬಂದು ೪೮. ಓಹೊ! ಇದು ಏತರ ಮಾತು! ಯಾವ ವಿಚಾರತೆ! ಯಾವ ಮಂತ್ರಶಕ್ತಿ! ಇನ್ನೇತರ ಸತ್ವ! ಯಾವ ಬಲೋನ್ನತಿ! ಎಂಥ ವೀರವೃತ್ತಿ! ಇನ್ನು ಯಾವ ಬುದ್ಧಿವಂತಿಕೆ! ಪರಾಕ್ರಮ! ಏತರ ಆಜ್ಞೆ! ಎಲ್ಲ ನಿಷ್ಫಲ! ಏಕೆಂದರೆ ತಾರಕಾಸುರನ ಸೈನ್ಯವಾಗಲೆ ಬೀಡು ಬಿಡುತ್ತಿದೆ!

ಮ॥ಸ್ರ॥ ಧರೆಯಿಂಬಲ್ಲಬ್ಧಿಯಿಂಬಲ್ಲಚಲವಿತತಿಯಿಂಬಲ್ಲ ದಿಕ್ಚಕ್ರಮಿಂಬ
ಲ್ಲ ರಥವ್ರಾತಕ್ಕೆ ಘೋಟಪ್ರತತಿಗೆ ಗಜಯೂಥಕ್ಕೆ ಪಾದಾತಿವೃಂದ ।
ಕ್ಕರಿದಾರ್ಗಂ ರೇಣು ಪಂಕಂ ಶಿಥಿಲತೆ ದೆಸೆಗೆಟ್ಟತ್ತು ತಾನೆಂಬನಂ ಸಂ
ಗರಕಾಲಾಭೀಳಭೃತ್ತಾರಕನಖಿಳಬಳಂ ತೀವಿ ಪರ್ವಿತ್ತದೆತ್ತಂ ॥ ೪೯

ವ॥ ಎಂಬ ಸಂಭ್ರಮೋಕ್ತಿಯನಂಬುಜಾಕ್ಷಂ ಕೇಳ್ದು ಕೋಪಮಂ ತಾಳ್ದು

ಕಂ॥ ನಡೆ ಸುರಪತಿ ನಡೆ ಪಾವಕ
ನಡೆಯಂತಕ ನಡೆ ನೃವಾಹ ನಡೆ ಜಳಧೀಶಾ ।
ನಡೆ ಮಾರುತ ನಡೆ ವಿತ್ತಪ
ನಡೆ ವೃಷಭಾರೂಢ ಗಾಢತರವಿಕ್ರಮದಿಂ ॥ ೫೦

ಸುರರುಂ ಕಿನ್ನರರುಂ ಖೇ
ಚರರುಂ ಗಂಧರ್ವರುಂ ಗರುಡರುಂ ವಿದ್ಯಾ ।
ಧರರುಂ ರಾಕ್ಷಸರುಂ ಯ
ಕ್ಷರುಮೊಂದೊಂದೆಸೆಯೊಳೊಡ್ಡನೊಡ್ಡುಗೆ ರಣದೊಳ್ ॥ ೫೧

ಕಂ॥ ಎಂದು ಬೃಹಸ್ಪತಿಗತಿಭರ
ದಿಂದಂ ಬಿಸಸುತ್ತುಮಿರ್ಪ ಸಮಯದೊಳೊರ್ವಂ ।
ಸಂದಣಿಪ ನುಡಿಗಳೊಗುತಿರೆ
ನಿಂದುರ್ಬುತೆ ಭಾಷೆಗೊಟ್ಟನಚಳಿತವೀರಂ ॥ ೫೨

ಅದೆಂತಹ ಅದ್ಭುತ! ೪೯. ಆ ತಾರಕಾಸುರನ ರಥಸಮೂಹಕ್ಕೆ, ಕುದುರೆಗಳ ವೃಂದಕ್ಕೆ ಗಜಸೇನೆಗೆ, ಕಾಲಾಳ ಪಡೆಗೆ ನೆಲ ಸಾಲದು, ಸಮುದ್ರ ಹಿಡಿಸದು, ಬೆಟ್ಟಗಳು ಇಕ್ಕಟ್ಟಾಗಿವೆ, ದಿಕ್ಕುಗಳು ಸಾಲವು! ಅವುಗಳ ತುಳಿತಕ್ಕೆ ನೆಲ ಧೂಳೆದ್ದಿತು, ಕಡಲು ಕೆಸರಾಯಿತು, ಬೆಟ್ಟಗಳು ಪುಡಿ ಪುಡಿಯಾದವು, ದಿಕ್ಕುಗಳು ಕೆಟ್ಟವು; ಸಂಗ್ರಾಮ ಕಾಲನಂತೆ ಭಯಂಕರನಾದ ತಾರಕನ ಸೈನ್ಯವು ಎಲ್ಲೆಲ್ಲೂ ತುಂಬಿದೆ! ವ॥ ಎಂಬ ಸಂಭ್ರಮದ ಮಾತನ್ನು ವಿಷ್ಣು ಕೇಳಿ ಕುಪಿತನಾಗಿ ೫೦. ಇಂದ್ರ, ಅಗ್ನಿ, ಯಮ, ನೈರುತ್ಯ, ವರುಣ, ವಾಯು, ಕುಬೇರ ಮತ್ತು ಈಶಾನರೇ ನೀವೆಲ್ಲ ನಿಮ್ಮ ನಿಮ್ಮ ವಾಹನಗಳನ್ನು ಏರಿ ನಡೆಯಿರಿ. ಗಾಢ ವಿಕ್ರಮದಿಂದ ತಾರಕನನ್ನು ಎದುರಿಸೋಣ! ಎಂದನು. ೫೧. ಸುರರು ಕಿನ್ನರರು ಖೇಚರರು ಗಂಧರ್ವರು ಗರುಡರು ವಿದ್ಯಾಧರರು ರಾಕ್ಷಸರು ಯಕ್ಷರು ಮುಂತಾದವರೆಲ್ಲರು ಒಂದೊಂದು ದಿಕ್ಕಿನಲ್ಲಿ ವ್ಯೂಹಗಳನ್ನು ರಚಿಸಿಕೊಂಡು ಯುದ್ಧದಲ್ಲಿ ತಾರಕನ ಸೈನ್ಯವನ್ನು ಎದುರಿಸಿರಿ. ೫೨. ಹೀಗೆ ವಿಷ್ಣುವು ಬೃಹಸ್ಪತಿಗೆ ಭರದಿಂದ ಕಟ್ಟಪ್ಪಣೆ ಕೊಡುತ್ತಿರುವಾಗ ಒಬ್ಬಾನೊಬ್ಬ ವೀರನು ಯುದ್ಧ ಕೋಲಾಹಲವು ಮೊಳಗುತ್ತಿರುವಲ್ಲಿ ಹೆಮ್ಮೆಯಿಂದ ಎದೆ ತಟ್ಟಿ ಪ್ರತಿಜ್ಞೆ ಮಾಡಿದನು. ೫೩. ನನಗೆ ಇದಿರಾದ ತಾರಕನ

ಚಂ॥ ಎನಗಿದಿರಾದ ತಾರಕಬಳಂ ಕಬಳಂ ಕಬಳಂಬೊಲಿಂದು ಪೊ
ಕ್ಕನವಧಿಸಾಹಸಪ್ರಕರವಂ ಕರವಂ ಕರವಂತೆ ಪೊರ್ದಿ ಭೋಂ ।
ಕನೆ ಕರವಾಳ್ ಕಡಂಗಿದವನಂ ದವನಂ ದವನಂಜೆವೊಯ್ದು ಪೋ
ಳ್ದನಿಮಿಷರಾರೆ ವೈರಿಬಲವಂ ಬಲವಂ ಬಲವಂದು ಗೆಲ್ದಪೆಂ ॥ ೫೩

ವ॥ ಎಂದು ನಿಂದಾಸುರದಿಂ ಭಾಷೆಗುಡುತ್ತಿರ್ಪ ವೀರಾಳಾಪಮಂ ಕೇಳುತ್ತಮರಪತಿ ಸಮರೋತ್ಸಾಹಭೇರಿಯಂ ಪೊಡೆಯಿಸೆ,

ಮ॥ ಧರೆಯಲ್ಲಾಡೆ ಸಮುದ್ರಮುರ್ಕೆ ದಿಗಧೀಶರ್ ಬೆರ್ಚೆ ದಿಕ್ಕುಂಜರಂ
ಕರಮಳ್ಕುತ್ತಿರೆ ಸೀಳೆ ಶೈಳಮಹಿರಾಜಂ ಬಳ್ಕೆ ಕೂರ್ಮಂ ಭಯಾ ।
ತುರಫರ್ಮಾನನನಾಗೆ ಮೇಗಣುಡುವ್ಯಂದಂ ಬೀಳ್ಕೆ ಕೋಳಾಹಳೋ
ತ್ಕರನಿಸ್ಸಾಳಧಳಂಧಳಂಧಳರವಂ ಪರ್ಬಿತ್ತು ಮೂಲೋಕಮಂ ॥ ೫೪

ವ॥ ಅನಂತರದಲ್ಲಿ

ಮ॥ ಉರುನಿಸ್ಸಾಳಧಳಂಕೃತಂ ನೆಗೆದುದೇಳೇಳ್ ಭೀಕರಾಕಾರಮಾ
ಗಿರೆ ಪೆಣ್ಣಾನೆಯನಾರ್ದು ಹಲ್ಲಣಿಸು ವಾಹವ್ಯೂಹಮಂ ಕೂಡೆ ಪೂ ।
ಡು ರಥವ್ರಾತಮನೆಯ್ದೆ ಕೆಯ್ದುಗೊಳವೇಳ್ ಪಾದಾತಿಯಂ ಬೇಗಮೆಂ
ಬ ರವಂ ಪರ್ವಿತು ನಾಕಲೋಕದಿವಿಜಾನೀಕಪ್ರಧಾನಾಖ್ಯರೊಳ್ ॥ ೫೫

ವ॥ ಇಂತು ಕೊರ್ಬಿ ಪರ್ಬಿದ ಕೋಳಾಹಳದ ಸಂಭ್ರಮಮಿಂಬುವಡೆಯೆ, ಸುರಕುಲಂ ಸಡಗರಿಸಿ ಘುಡುಘುಡಿಸಿ ನಡೆ ನಡೆದು ಪರಿದು ನೆರೆದು ಮುಂಗುಡಿಗೆದಱೆ ಸಂಗರ

ಬಲವು ಒಂದು ಕಬಳ (ತುತ್ತು), ಮೇರೆ ಮೀರಿದ ಸಾಹಸ ಪ್ರಕರವನ್ನು ಕಬಳದಂತೆ ಹೊಕ್ಕು ಕರವನ್ನು ಕರೆವಂತೆ ಹೊಂದಿ ಭೋಂಕನೆ ಕರವಾಳ (ಖಡ್ಗ)ವನ್ನು, ಕಡಂಗಿದ ಅವನನ್ನು ಕಾಡ್ಗಿಚ್ಚು ಸುಡುವಂತೆ, ದೇವತೆಗಳು ಹೊಗಳುತ್ತಿರಲು ಶತ್ರುಸೈನ್ಯವನ್ನು ಸುತ್ತುಗಟ್ಟಿ ಗೆಲ್ಲುತ್ತೇನೆ. ವ॥ ಹೀಗೆ ಆವೇಶದಿಂದ ಭಾಷೆಕೊಡುತ್ತಿದ್ದ ವೀರಾಲಾಪಗಳನ್ನು ಕೇಳಿದ ದೇವೇಂದ್ರನು ಸಮರದ ಉತ್ಸಾಹವನ್ನು ಹೆಚ್ಚಿಸುವ ರಣಭೇರಿಯನ್ನು ಹೊಡೆಸಿದನು. ೫೪. ರಣಭೇರಿಯು ಧಳಂ ಧಳಂ ಧಳಂ ಎಂದು ಭೋರ್ಗರೆಯಿತು. ಅದರ ರಭಸಕ್ಕೆ ನೆಲ ನಡುಗಿತು, ಕಡಲು ಉಕ್ಕಿತು, ದಿಕ್ಪತಿಗಳು ಬೆಚ್ಚಿದರು, ದಿಗ್ಗಜಗಳು ಅಳುಕಿದವು, ಪರ್ವತಗಳು ಬಿರುಕು ಬಿಟ್ಟವು, ಆದಿ ಕೂರ್ಮವು ಬಳುಕಿತು ಮತ್ತು ಭಯದಿಂದ ಅದರ ಮುಖ ಬೆಮರಿತು, ತಾರೆಗಳು ಉದುರಿದವು:- ೫೫. ದೇವಲೋಕದ ಸೇನಾನಿ ಮುಖ್ಯದಲ್ಲಿ "ದೊಡ್ಡ ನಗಾರಿಗಳಿಂದ ಎದ್ದ ಧಣ್ ಎಂಬ ಶಬ್ದವೂ 'ಏಳು ೭' ಎಂಬ ಶಬ್ದವೂ ಭೀಕರಾಕಾರವಾಗಿರಲು ಹೆಣ್ಣಾನೆಯನ್ನು ಆರ್ದು ಹಲ್ಲಣಿಸಿ (ಸಿದ್ಧಪಡಿಸಿ) ರಥಸಮೂಹವನ್ನು ಹೂಡು, ಪದಾತಿಗಳನ್ನು ಆಯುಧ ಹಿಡಿವಂತೆ ಹೇಳು, ಎಂಬ ರವವು ಹಬ್ಬಿತ್ತು. ವ॥ ಹೀಗೆ ಕೊಬ್ಬಿ ಹಬ್ಬಿದ ಕೋಲಾಹಲದ ಸಂಭ್ರಮವು ಅಧಿಕವಾಯಿತು. ಸುರಸೈನ್ಯವು ಸಡಗರದಿಂದ ಘುಡುಗುಡಿಸಿತು. ಯುದ್ಧಭೂಮಿಯನ್ನು ಹೊಕ್ಕು ಎಲ್ಲರೂ ಒಟ್ಟುಗೂಡಿ

ಭೂಮಿಯೊಳೊಡ್ಡಿ ನಿಂದೆರ್ದಮಾಗಿ ಬಗ್ಗಿಸಿ ಮೊಗ್ಗರಿಸುತ್ತೊಗ್ಗುಗೆಡದೆ ನಡೆಗೋಂಟೆಯಂತೆ ನೆಲೆವೆರ್ಚ ನಿಂದು ತೊಲಗಿನ ಕಂಭದ ಹುಲಿಯ ಬಚ್ಚಣೆಯ ಗಜಮುಖದ ಭುಜಬಳಗರುಡನ ಗಜಕೇಸರಿಯ ಬರುದ ಶರಭನ ಗಂಡರ ಡಾವಣಿಯ ಭಂಡಣವಿಜಯನ ವೈರಿಜಗದ್ದಳನನ ವೀರಘಂಟೆಯ ಹೊನ್ನ ಗುಬ್ಬಿಯ ರನ್ನವಟ್ಟೆಯ ಬೆನ್ನ ಚಮ್ಮಟಿಗೆಯ ಬಳಿಯ ಚವರದ ವಿಳಸದ ಗೆಜ್ಜೆಯ ಅಭಯಹಸ್ತಗ ಉಭಯಸತ್ತಿಗೆಯ ಹಗಲ ಕೆಯ್ದೀವಿಗೆಯ ಘಟಸರ್ಪನ ಕಟಕಸೂಚಿಗಾಜಿನ ಅಸುರ ಕೋಳಾಹಳನ ದೈತ್ಯಮರ್ದನನ ದಾನವಾರಿಯ ರಕ್ಕಸಜೂಜಿನ ಪಚ್ಚೆಯ ಪರಿಗೆಯ ಪಸರದ ಪಾರಿಯದೊಯ್ಯಾರದ ಕೆಂದಟ್ಟಿನ ಪಂತಿಯ ಪೊಂಬಟ್ಟೆಯ ಹಾದಿಯ ಕಾಳಿಕೆಯ ಜಾಳದ ನೀಲದ ಸಾಲಶಂಖದ ತಟ್ಟನೊಟ್ಟಜೆಯ ಕಟ್ಟುಬಟ್ಟೆಯ ಬಿರುದಿನ ಹರಿಗೆಕಾಜಿರ ಪರಿವೀಥಿಯೊಳಂ ; ಮತ್ತಮಾ ಹರಿಗೆಕಾಜಿರಿಕ್ಕೆಲದೊಳ್ ಕೋಡಕೆಯ್ಯೊಳುಟ್ಟ ಮಲ್ಲಗಂಟಿನ ತೊಡರ್ಚದುಡೆಗಂಟೆಯ ಕಿರ್ಗಟ್ಟಿನ ಸುರಿಗೆಯ ಕಟ್ಟಿದ ಚಿಂದಿಯ ತೊಟ್ಟ ಕಂಚುಳಿಕೆಯ ಹಿಡಿದ ಬಿಲ್ಲ ಬಲಗೈಯ ಸರಳ ಬೆನ್ನ ಬತ್ತಳಿಕೆಯ ಸುತ್ತಿದ ಹೀಲಿಯ ಮುಡಿಗಟ್ಟಿನ ಪಟ್ಟಿಯ ಮಲಯಜದ ಮಂಗಳಬೊಟ್ಟಿನ ಕಟ್ಟಣಕದ ಸಿಂಗರಂ ಬೆರಸಿ ಬೀರಸಿರಿಯಂ ಬೀಱಿ ನಂಜಿನ ಪುಂಜದಂತೆ ಕುಳಿಕನ ಕುಲದಂತೆ ಜವನ ಜಂಗುಳಿಯಂತೆ ಬಯ್ದು ಕೊಲ್ವ ಬಕನ ಬಳಗದಂತೆ ನಿಂದ ಬಿಲ್ಲ ಬಲ್ಲಣಿಯ ಹಿಂಗಟ್ಟಿನೊಳ್ ಮುಂಕಣಿಸಿ ನೆಗೆಪಿದ ಸಬಳಂಗಳ ಮೊನೆಯ ಮೊತ್ತಮಿನಕಿರಣಂಗಳನೊತ್ತರಿಸಿ ಮಿಸುಗುವ ತಪನನ ಬಿಸಿಯ ಬಂಬದೊಳ್ ಮಾರ್ಪೊಳೆದು ತಳತಳಿಸಿ ಸಿಡಿಲ ಬಳಗಂ ತಳರ್ತಂತೆ ಗಗನತಳದೊಳ್ ತುಱುಂಗಿ ನೆರೆ

ಧೃತಿಗೆಡದೆ ಇರುವ ಬಿರುದಿನ ಹರಿಗೆ ಗುರಾಣಿಕಾರರ ವರ್ಣನೆ-ಅವರು ಬಗ್ಗಿಸಿ ಒಟ್ಟು ಗುಂಪು ಕೆಡದೆ ಚಲಿಸುವ ಕೋಟೆಯಂತೆ ಉಬ್ಬಿ ನಿಂತಿರುವ ಕಂಭದ ಹುಲಿಯ ಮುಖವಾಡದ, ಆನೆಮುಖ, ಗರುಡನ ಮುಖ ಮತ್ತು ಗಜಕೇಸರಿಯ ಬಿರುದುಳ್ಳ, ಶರಭನ ಗಂಡ- ಶರಭನಂಥ ಶೂರರ, ಸಾಲುಯುದ್ಧಗಳಲ್ಲಿ ವಿಜಯ ಗಳಿಸಿದವನು, ವೈರಿ ಜಗತ್ತನ್ನೇ ಸೀಳಿದವನು, ವೀರಘಂಟೆ ಧರಿಸಿದವನು, ಚಿನ್ನದ ಗುಬ್ಬಿ ಅಲಂಕಾರವುಳ್ಳ, ರತ್ನಪಟ್ಟಿಯ, ಬೆನ್ನಿಗೇರಿಸಿರುವ ಚಮ್ಮಟಿಗೆಯ, ಬಿಳಿಯ ಚಾಮರದ, ವಿಲಾಸದ ಗೆಜ್ಜೆಗಳಿಂದ ಕೂಡಿದ, ಅಭಯಹಸ್ತವುಳ್ಳ ಎರಡೂ ಕಡೆ ಛತ್ರಿ ಧರಿಸಿದ, ಹಗಲು ಕೈದೀವಿಗೆಯುಳ್ಳ, ಘಟಸರ್ಪ ಹಿಡಿದಿರುವ ಕಟಕ (ಸೈನ್ಯ)ಗಳನ್ನೇ ಸೂರೆ ಮಾಡುವ, ಅಸುರರನ್ನು ನಾಶಪಡಿಸುವ, ದೈತ್ಯರನ್ನು ಸದೆಬಡಿವ, ದಾನವಾರಿಯ, ದ್ಯೂತರಾಕ್ಷಸರಾಗಿರುವ, ಪಚ್ಚೆಯ ಹಲಗೆ ಅಂಗಡಿಯುಳ್ಳ, ಸೊಗಸಾದ ರಥಗಳಿಂದ ಕೂಡಿದ (?) ಕೆಂಪುನಡುಕಟ್ಟುಳ್ಳ, ಹೊನ್ನವಸ್ತ್ರ, ಹಳದಿ, ಕಪ್ಪು ಜಾಳ ಮತ್ತು ನೀಲ ವರ್ಣಸಾಲು ಶಂಖಿಗಳುಳ್ಳ ಸೈನ್ಯದ ಪರಾಕ್ರಮದ ವಿಶೇಷೋತ್ಸಾಹಿಗಳಾದ ಬಿರುದು ಧರಿಸಿದ ಗುರಾಣಿಯ ಸೈನಿಕರು; ಆ ಸೈನಿಕರ ಅಕ್ಕಪಕ್ಕಗಳಲ್ಲಿ ನಿಂತಿರುವ ಕಾಲಾಳುಪಡೆ ಯುದ್ಧಕ್ಕೆ ಸಿದ್ಧವಾಗಿದೆ-ಅವರಲ್ಲಿ ಕೆಲವರು ಕೈಯಲ್ಲಿ ಕೋಡು ಹಿಡಿಮಲ್ಲಗಂಟಿಕ್ಕಿದ್ದಾರೆ. ಅವರ ಉಡಿಗೆ ಗಂಟೆ ಕಟ್ಟಿದ. ಕಿಗ್ಗಟ್ಟಿಗೆ (ಸೊಂಟಕ್ಕೆ) ಸಿಕ್ಕಿಸಿದ ಕಠಾರಿಯುಳ್ಳವರು ಕೆಲವರು, ಚಿಂದಿಯನ್ನುಟ್ಟವರು, ಕವಚ ತೊಟ್ಟವರು, ಬಿಲ್ಲು ಹಿಡಿದವರು, ಬಲಗೈಯಲ್ಲಿ ಬಾಣ, ಬೆನ್ನಿಗೆ ಕಟ್ಟಿದ ಬತ್ತಳಿಕೆ, ನವಿಲುಗರಿ ಸುತ್ತಿದ್ದಾರೆ, ತಲೆಗೆ ಪಟ್ಟಿ ಕಟ್ಟಿದ್ದಾರೆ, ಶ್ರೀಗಂಧದ ತಿಲಕವಿಟ್ಟವರು, ಬಹಳ ಅಂದವಾದ ಶೃಂಗಾರಮಾಡಿಕೊಂಡು,

ಮೆಱೆಯೆ ನಭಕ್ಕೆ ಚಮ್ಮಿ ಕುರುಳ್ದಿ ಕೆಯ್ಮಾಡುವ ಕೊಂತಕಾಱರ ತಿಂತಿಣಿಯ ನಡುವೆ ಪಿಡಿದ ವಜ್ರಮುಷ್ಟಿಯ ಮಸೆದಿಟ್ಟಯೆಸೆವ ಗಂಡಗತ್ತಿಯ ಕೂರಲಗಿನ ಭಾರಿಸಂಕಲೆಯ ಪಟ್ಟೆಯದ ಪರಶುವಿನ ಚಕ್ರದ ಕಕ್ಕಡೆಯ ಕರವಾಳ ಕಠಾರಿಯ ಕತ್ತಿಯ ಕರಗಸದ ಗಂಡಗತ್ತರಿಯ ಶೂಲದ ಕಾಲ ತೊಡರ ರಕ್ಕಸರ ಹಾಹೆಯ ತಡೆಯದ ಲವುಡಿಯ ಚಾವುಡಿಯ ಬಾವುಲಿಯ ಬಲ್ಲಾಳ್ಗಳ ಮುಂದೆತ್ತಿದ ಪರಿಪರಿಯ ಪತಾಕಾವಳಿಯ ಸೂಳಜೆದು ಮಸಗಿ ದುವ್ವಾಳಿಸುವ ಗೋವಳಗಟ್ಟಿಗೆಯ ಗೊಂದಣಂಗೂಡಿ ಗಗನಂ ಕವಿದಂತೆ ದೆಸೆಗಳ್ ಉಗುಳ್ದಂತೆ ಭೂಮಿ ಬೆಸಲಾದಂತೆ ಭೂಚಕ್ರಮಂ ತೆಕ್ಕನೆ ತೀವಿದ ಪದಾತಿಬಲದೊಳಂ ; ಮತ್ತಮಾ ಪದಾತಿಬಲದ ಪೆಡೆಮೆಟ್ಟನೊಳ್ ಹೂಡಿದ ಕುದುರೆಯ ನೀಡಿ ನೆಗೆದ ಪಳವಿಗೆಯ ಕಟ್ಟಿದ ಚಮರದ ನೆಟ್ಟ ತಿಸುಳದ ಕೀಲಿಸಿದ ಕೀಲ್ಗಳ ತಿರುಗುವ ಚಕ್ರದ ಸುತ್ತಿ ಬಿಗಿದ ಲೋಹಬಂಧದ ತೆತ್ತಿಸಿದ ಸೂಲಿಗೆಯ ಹೇಜೆದ ಶಸ್ತ್ರವೇಜೆದ ಸಾರಥಿಯ ಮೀಜೆ ನಿಂದ ಜೋದರ ಭೀಕರರೂಪು ಲೋಕಕ್ಕೆ ಪೊಸತಾಗೆ ಚಕ್ರಚೇತ್ಯತಿಗೆ ದಿಕ್ಕರಿಗಳ್ ಬೆರ್ಚಿ ಸೂತರ ಕಳಕಳಕ್ಕೆ ಭೂತಳಂ ನಡುಗೆ ಜವನ ಜಕ್ಕಂದೊಳಲಿಯಂತೆ ಮಾರಿಯ ಮಸಕದಂತೆ ಪಸರಿಸಿ ನಿಂದ ರಥಿಕಪ್ರತಾನದೊಳಂ ; ಮತ್ತಮಾ ಸ್ಯಂದನವ್ಯೂದಮಂ ಮುಂದುಗೊಂಡ ಹೊನ್ನ ಹಲ್ಲಣದ ರನ್ನದ ಪಕ್ಕರಕ್ಕೆಯ ಕಟ್ಟಿದ ಗೆಜ್ಜೆಯ ಸೂಟಿಯ ರವದ ಪೊರ್ಕುಳಿಗಂಟೆಯ ಮೋಹಿಸುವ ಮೊಗವಡದ ರೂಹಿಸುವ ಸೊಸಲ ಕನ್ನಡಿಯ ಕಡುಚಿಲ್ವ ಕೊಡಂಕೆಯ ಲಂಬಿಸುವ ಚಮರದ ಚಾರುತರ ಭೂಷಣಂ ಭೀಷಣಮಾಗೆ ಕಂಬಿಯ ಕಡಿಯಣದ ಕೀಲಣದ ಹೋರಟೆಯ ಘಾರಾಘಾರಿಯೊಳ್ ಜೋಳಿಸುವ ಲಾಲಾಜಲಂ ಖುರಹತಿಯಿಂ ನೆಗೆವ ದೂಳ್ಗೆ ಚಳಿಯಂಗುಡೆ ಹರಿಣಚರಣಮಂ ಚಿಲ್ಲವಾಡುವ ಗರುಡನಂ

ವೀರಲಕ್ಷ್ಮಿಯು ಪ್ರಕಾಶಿಸುತ್ತಿರಲು, ನಂಜಿನ (ವಿಷದ) ಪುಂಜದಂತೆ, ಸರ್ಪಗಳ ಸಮೂಹದಂತೆ, ಯಮನ ಸೈನ್ಯದಂತೆ, ಬಯ್ದು ಕೊಲ್ಲುವ ಬಕಾಸುರನ ಬಳಗದಂತೆ, ಧನುರ್ವಿದ್ಯಾಪಾಂಡಿತ್ಯವುಳ್ಳವರು, ಮುಂದೆ ನೂಕಿ ಹಿಡಿದಿರುವ ಸಲಾಕೆಯುಳ್ಳವರು, ಹಿಡಿದ ಆಯುಧಗಳ ತುದಿಮೊತ್ತವು ರವಿಕಿರಣಗಳನ್ನು ಮೀರಿಸಿತ್ತು. ಆಯುಧಗಳ ಸೂರ್ಯಬಿಂಬ ಪ್ರಕಾಶಿಸುತ್ತಿರಲು, ಸಿಡಿಲ ಬಳಗವೆ ಚಿಗುರಿದಂತಿತ್ತು, ಆ ಪ್ರಕಾಶ ದಟ್ಟಗಗನದಲ್ಲಿ ಹಬ್ಬಿರಲು, ಕೈಮಾಡುವ ಭರ್ಜಿಹಿಡಿದವರು ಕೆಲವರು ಅವರ ಮಧ್ಯದಲ್ಲಿ ವಜ್ರಮುಷ್ಟಿ ಹಿಡಿದವರು, ಹರಿತಮಾಡಿದ ಈಟಿಯನ್ನು ಬೀಸಿ ಹೊಡೆಯುವವರು, ಗಂಡುಗತ್ತಿ, ಕೂರಲಗು, ಭಾರಿ ಸರಪಣಿ, ಪಟ್ಟೆಯ, ಗಂಡುಗೊಡಲಿಗಳ, ಚಕ್ರ, ಕೆಕ್ಕಾಡ, ಕತ್ತಿ, ಕಠಾರಿ, ಖಡ್ಗ, ಗರಗಸ, ಗಂಡಗತ್ತರಿ, ಶೂಲ, ಕಾಲಿಗೆ ತೊಡುವ, ರಕ್ಕಸರಂತಿರುವ ಕಣ್ಣುಳ್ಳ, ಲಗುಡಿ ಕಬ್ಬಿಣತುದಿಯ ಗದೆ (ದೊಣ್ಣೆ), ಚವುರಿಯ, ಬಾವುಲಿಯ, ಶೂರರ ಮುಂದೆ ಎತ್ತಿದ ಬಗೆಬಗೆಯ ಬಾವುಟಗಳು, ಸರದಿ ಪ್ರಕಾರ, ರಭಸದಿಂದ ಓಡುವ (ನುಗ್ಗುವ) ಲಾಠಿಗಳನ್ನು (ಕೈಬಡಿಗೆ) ಹಿಡಿದು, ಗುಂಪು ಕೂಡಿ, ಆಕಾಶವೇ ವ್ಯಾಪಿಸಿದಂತೆ, ದಿಕ್ಕುಗಳು ಉಗುಳಿದ ಹಾಗೆ, ನೆಲ ಪ್ರಸವಿಸಿದಂತೆ, ಭೂಮಂಡಲವನ್ನೇ ದಟ್ಟವಾಗಿ ತುಂಬಿದ ಕಾಲುಪಡೆ ಒಂದು ಕಡೆ; ಮತ್ತು ಆ ಕಾಲಾಳುಪಡೆಯ ಹೆಡಮೆಟ್ಟಿನಲ್ಲಿ ಹೂಡಿದ ಕುದುರೆಯ, ಎತ್ತಿ ಹಿಡಿದ ಧ್ವಜಪಟದ, ಕಟ್ಟಿದ ಚಮರದ, ನೆಟ್ಟ ತ್ರಿಶೂಲವುಳ್ಳ, ನೆಡಿಸಿದ ಕೀಲುಳ್ಳ, ತಿರುಗುವ ಚಕ್ರವುಳ್ಳ, ಸುತ್ತಿ ಬಿಗಿದ ಲೋಹಬಂಧವುಳ್ಳ, ತೆತ್ತಿಸಿದ ಶೂಲವುಳ್ಳ,

ಪರಿಹಾಸಂಗೆಯ್ವ ಪವನನಂ ಪರಿಭವಿಸುವ ಮನಮನನುಗೆಡಿಸುವ ದಿಟ್ಟಿಗಳನಿಟ್ಟಣಿಸಿ ದಾಂಟುವ ಕಡುವೇಗದಿಂ ಮೆಱೆದ ಚರ್ಮದಂಡದ ನೆಮ್ಮುಗೆಯಿಲ್ಲದೆ ದನಿದೋಱುವನುಮಾನಂ ಪೊರ್ದದೆ ಮಡಸನ್ನೆ ಮನದೊಳಂಕುರಿಸುವಲ್ಲಿಂ ಮುನ್ನಂ ಪರಿದು ಶರಧಿಯನೆಡಗಲಿಪ ಗಗನಮನಡರ್ವ ಜಾತ್ಯಶ್ವಂಗಳ ವಳಯಮಂ ಸೋಕದಂಕಣಿಯ ಹಂಗಿಲ್ಲದೆ ಭೋಂಕನೇಱೆ ಸುಳಿವ ಮಿಂಚಂ ಸೆಳೆದು ನಿರ್ಮಿರ್ಚಿ ಕರತಳದೊಳಮರ್ಚದಂತೆ ಮಿಗೆಮಿಡಿದು ಹೆಗಲೊಳಿಟ್ಟ ಪಟ್ಟಗಳ ಬೆಳಗಗೆಯೆಳ್ದು ಗಗನಮನಪ್ಪಿ ಗಾಡಿಕೆಯಿಂದೊಪ್ಪುವ ಭುಜಪೂಜೆಯ ವೀರನಿವಾಳಿಯ ಬರುದಿನೇಳ್ಗೆಯ ತರದ ದೌಡೆಯ ಹೀಲಿದಳಿಯ ಮಾಲೆಗೊಂಡೆಯ ಚಿಲ್ಲುವ ಚಾಮರದ ಸೂಸುವ ಸೀಗುರಿಯ ಸೂರ್ಯಸೋಮವಂಶದ ರಾಜಪುತ್ರರ ರಾಯರಾವುತರ ದಿವ್ಯವಾಹಕರ ರಾಫೆಗಿಂಬುಗೊಟ್ಟು ವಾಫೆಗಳವಟ್ಟು ಪ್ರಳಯಸಮಯದೊಳ್ ಮೇಱೆಯಂ ಮೀಱೆದ ವಾರಿನಿಧಿಯ ತರಂಗಕುಲದಂತಿರ್ದ ತುರಂಗಬಲದೊಳಂ; ಮತ್ತಮಾ ತುರಂಗಬಲದಪರ ಭಾಗದೊಳ್ ಹಮ್ಮಿದ ಗುಳದ ಹೂಡಿದ ಱೆಂಚೆಯದ ಕಾಲಕಂಭದ ದಂಡೆಯ ಬರಿಕೆಯ್ಯ ಪಟ್ಟೆಯದ ಕೋಡ ಮೊನೆಯ ಕೀರ್ತಿಮುಖದ ಅಗ್ರಪಲ್ಲವದ ಪತ್ತಿಗತಿಯ ತಲೆಯೊಳೊಟ್ಟಿದ ಕುಂಕುಮದ ಕಪೋಳದೊಳ್ ಸುರಿವ ಮದಜಲದ ಬಿನ್ನ ಮೇಲಿಳಿವ ಬಳಿಯ ಚವರದ ಮುಂತಣ ಮಾವಂತರ ಪಿಂತಣ ಬಡಿಗೆಕಾಱರ ಘಳುಘಳಿಸುವ ವೀರವ್ಯಂದದ ಘುಡುಘುಡಿಸುವ ದೌಡೆಯ ಕೋಳಾಹಳದಬ್ಬರಮಾಗೆ ಸೂರ್ಯಮಂಡಲಮಂ ಸೆಳೆವ ಸಿಡಿಲಂ

ಶಸ್ತ್ರವೇರಿದ ಸಾರಥಿಯುಳ್ಳ, ಮೀರಿ ನಿಂತ ಯೋಧರುಳ್ಳ ಸೈನ್ಯವು ಲೋಕಕ್ಕೆ ಹೊಸದೆನಿಸಿತ್ತು. ಚಕ್ರಗಳ ಚೀತ್ಕಾರಕ್ಕೆ ದಿಗ್ಗಜಗಳು ಹೆದರಿದವು, ಸೂತರ ಕಾಳಗಕ್ಕೆ ಭೂತಳವು ನಡುಗಿತು, ಯಮನ ಕೋಣದಂತೆ, ಮಾರಿಯ ರಭಸದಂತೆ, ಹರಡಿ ನಿಂತಿರುವ ರಥಿಕರ ಸಮೂಹವೊಂದು ಕಡೆ; ಮತ್ತು ರಥಗಳನ್ನು ಮುಂದುಮಾಡಿ ಕೊಂಡಿರುವ ಹೊನ್ನಿನ ಜೀನುಗಳುಳ್ಳ, ರತ್ನದ ಥಡಿಯುಳ್ಳ, ಕಟ್ಟಿದ ಗೆಜ್ಜೆಗಳುಳ್ಳ, ವೇಗದ ರವವುಳ್ಳ, ಹೊಕ್ಕುಳಗಂಟೆಯುಳ್ಳ, ಮೋಹಕವಾದ ಮೊಗವಾಡ ರೂಪಿಸಿರುವ, ನೊಸಲಿಗೆ ಕಟ್ಟಿದ ಕನ್ನಡಿಯುಳ್ಳ, ಚೆಲುವಾಗಿ ಕಾಣುವ ಕಿವಿಗಳುಳ್ಳ, ಜೋತಾಡುವ ಚಾಮರಗಳುಳ್ಳ, ಮನೋಹರವಾದ ಭೂಷಣಗಳು ಭೀಷಣವಾಗಿ ಕಾಣುತ್ತಿರಲು, ಕಂಬಿಯ ಕಡಿವಾಣವುಳ್ಳ, ಕೀಲಣಹೋರಾಟದ ಘಾರಾಘಾರಿಯಲ್ಲಿ, ಜೋಲುವ ಲಾಲಾಜಲವು, ಗೊರಸನ್ನು ಕುಟ್ಟುವುದರಿಂದ ಏಳುವ ಧೂಳಿಗೆ ಚಳಯ ಕೊಡುತ್ತಿರಲು, ವೇಗದಲ್ಲಿ ಹರಿಚರಣವನ್ನು ಚಲ್ಲವಾಡುವ, ಗರುಡನನ್ನು ಪರಿಹಾಸಮಾಡುವ, ಗಾಳಿಯನ್ನು ಪರಿಭವಗೊಳಿಸುವ, ಮನೋವೇಗ ವನ್ನೂ ಮೀರಿರುವ, ದೃಷ್ಟಿಗಳನ್ನು ಒಟ್ಟುಗೂಡಿಸಿ ದಾಟಲೆಳಸುವ, ಅತ್ಯಂತ ವೇಗದಿಂದ ಚಾಟಿ ಏಟನ್ನು ನಿರೀಕ್ಷಿಸದೆ ದನಿದೋರುವ ಅನುಮಾನವಿಲ್ಲದೆ ಹಿಮ್ಮಡಿಸನ್ನೆಯು ಮನಸ್ಸಿನಲ್ಲಿ ಮೊಳೆವ ಮೊದಲೆ ಮುನ್ನೆಗೆದು ಕಡಲನ್ನೂ ದಾಟುವ, ಆಕಾಶಕ್ಕೆ ನೆಗೆವ, ಜಾತಿ ಕುದುರೆಗಳ ಸಮೂಹವನ್ನು ಸೋಕದಿರುವ, ಸಂಜ್ಞೆಯ ಹಂಗಿಲ್ಲದೆ ಜಗ್ಗನೆದ್ದು ಸುಳಿವ, ಮಿಂಚನ್ನೇ ಎಳೆದು ನಿಮಿರಿಸಿ ಕರತಳದಲ್ಲಿ ಹಿಡಿದಂತೆ ಚನ್ನಾಗಿ ಹಿಡಿದು ಹೆಗಲಿಗೇರಿಸಿದ ಪಟ್ಟಿಗಳ ಬೆಳಗು ಸಸಿಯಾಗಿ ಗಗನವನ್ನು ಅಪ್ಪಿ, ಓಜೆಯುಳ್ಳ ಭುಜಬಲದ ಬಿರುದಾಂತ ವೀರಪಡೆಯ, ತರದ ದೌಡೆ, ನವಿಲು ಗರಿಯ ಛತ್ರಿ, ಮಾಲೆಗೊಂಡೆಯ,

ಪಿಡಿವ ದಿಕ್ಕರಿಗಳನೆಳ್ಪುವ ಕಡುಗಾಯ್ದಂ ತಳೆದು ನೀಲಾಚಳಂ ಸಾಲಿಟ್ಟಂತೆ ಅಂಜನಗಿರಿ ಯೊಯ್ಯಾರಂ ಬಡೆದಂತೆ ಕಾಲಮೇಘಂಗಳ್ ಕವಿದಂತೆ ನಿಂದ ಗಜಘಟಾಪಟಲದೊಳಂ; ಇಂತೊಡ್ಡಿ ನಿಂದ ಹಸ್ತ್ಯಶ್ವರಥಪದಾತಿಯೆನಿಪ ದೇವರ್ಕಳ ಚಾತುರಂಗಬಲದ ಕಟ್ಟದಿರೊಳೊಡ್ಡಿ ನಿಂದ ತಾರಕಾಸುರನ ಚಾತುರಂಗಬಲವೆಂತಿರ್ದುದೆಂತೆಂದೊಡೆ ಪೆರ್ಬುಲಿಯೊರ್ಬುಳಿಯಂತೆ ಸಿಂಗದ ಸಂಗರದಂತೆ ಶರಭಂಗಳ ನೆರವಿಯಂತೆ ಭೇರುಂಡನ ಹಿಂಡಿನಂತೆ ಕುಳಿಕನ ಕುಳದಂತೆ ನಂಜಿನ ಪುಂಜದಂತೆ ಸಿಡಿಲ ಗಡಣದಂತೆ ಕಾಳ್ಕಿರ್ಚಿನ ಗೂಳಿಯಂತೆ ವಡಬಾನಲನ ಪಡೆಯಂತೆ ಕಾಲಾಗ್ನಿಯ ಮಾಲೆಯಂತೆ ಮಾರಿಯ ಮೂರಿಯಂತೆ ಮೃತ್ಯುವಿನ ಕೊತ್ತಳಿಯಂತೆ ಅಂತಕನ ಸಂತತಿಯಂತೆ ಭೈರವನ ಬಳಗದಂತೆ ಮುಂತಿರ್ದ ರಕ್ಕಸವಡೆಯ ನಡುವೆ ನಿಂದ ವೀರ ತಾರಕಾಸುರಂ ತನ್ನ ಬಲಕ್ಕಿದಿರಾದ ನಿರ್ಜರಬಲಮಂ ನಿರೀಕ್ಷಿಸಿ ರಾಕ್ಷಸಗುರುವಪ್ಪ ಭಾರ್ಗವನ ಮುಖಮಂ ನೋಡಿ,

ಬೀಸುವ ಚಾಮರಗಳ, ಸೂಸುವ ನವಿಲುಗರಿಯಿಂದ ಮಾಡಿದ ಚಾಮರವುಳ್ಳ, ಸೂರ್ಯ-ಚಂದ್ರವಂಶದ ರಾಜಪುತ್ರರುಳ್ಳ, ರಾಯ-ರಾವುತರು, ದಿವ್ಯ ಅಶ್ವಾರೋಹಕರು, ತೊಡೆಗೆ ಇಂಬುಗೊಟ್ಟು, ಲಗಾಮು ಅಳವಡಿಸಿ, ಪ್ರಳಯಕಾಲದಲ್ಲಿ ಎಲ್ಲೆ ಮೀರಿದ ಕಡಲ ಅಲೆಯ ಮಾಲೆಗಳಂತೆ ಇರುವ ಅಶ್ವಬಲದಿಂಲೂ ಮತ್ತು ಆ ಅಶ್ವಪಡೆಯ ಮತ್ತೊಂದು ಮಗ್ಗುಲಲ್ಲಿ ಆನೆಗಳ ಬೆನ್ನ ಮೇಲೆ ಕಟ್ಟಿದ ತೊಟ್ಟಲುಗಳುಳ್ಳ, ಹೂಡಿದ ರೆಂಚೆ (ಥಡಿ), ಕಂಬದಂತಿರುವ ಕಾಲುಗಳುಳ್ಳ, ಸೊಂಡಿಲಿಗೆ ಅಳವಡಿಸಿದ ಕಿರುಗತ್ತಿಯುಳ್ಳ, ಚೂಪಾದ ಕೊಂಬುಳ್ಳ, ಕೀರ್ತಿಮುಖವೂ, ಅಗ್ರಪಲ್ಲವವೂ, ಪತ್ರಗತಿಯೂ ತಲೆಯಲ್ಲಿ ಅಲಂಕರಿಸಿದ ಕುಂಕುಮವೂ ಉಳ್ಳ, ಕಪೋಲದಲ್ಲಿ ಸುರಿವ ಮದಜಲವುಳ್ಳ, ಬೆನ್ನ ಮೇಲೆ ಇಳಿಬಿಟ್ಟ ಬಿಳಿಚಾಮರಗಳುಳ್ಳ, ಮುಂದುಗಡೆ ಮಾವುತರೂ, ಹಿಂದೆ ಬಡಿಗೆಕಾರರೂ, ಇರುವ ನಡುವೆ ವೀರಯೋಧರು, ಮುಗಿಲನ್ನೇ ಅಳ್ಳಿರಿದು ಕದಳಿಯ ಕಂಬದ ಬೊಬ್ಬೆಗುಡುವ ಗುಲ್ಲೆಬ್ಬಿಸುವವರುಳ್ಳ, ಘಳುಘಳಿಸುವ ವೀರರ ವೃಂದದ ಘುಡುಘುಡಿಸುವ ದೌಡೆಯುಳ್ಳ ಕೋಳಾಹಳವು ಅಬ್ಬರವಾಗಲು, ಸೂರ್ಯಮಂಡಲವನ್ನು ಸೆಳೆಯುವ, ಸಿಡಿಲನ್ನು ಹಿಡಿಯುವ, ದಿಗ್ಗಜಗಳನ್ನು ಎಬ್ಬಿಸಿ ಓಡಿಸುವ, ಚನ್ನಾಗಿ ಕಾಯ್ದ ನೀಲಾಚಲವು ಸಾಲಿಟ್ಟಂತೆಯೂ, ಅಂಜನಗಿರಿಯೇ ಒಯ್ಯಾರವನ್ನು ಪಡೆದಂತೆ, ಕಾಲಮೇಘಗಳು ಕವಿದಂತೆ, ಆನೆಯ ಪಡೆಯೊಂದೆಡೆ ನಿಂತಿವೆ; ಹೀಗೆ ಮುಂದೊಡ್ಡಿರುವ ದೇವಸೈನ್ಯದ ಆನೆ-ಕುದುರೆ-ರಥ ಮತ್ತು ಕಾಲಾಳುಗಳ ಚತುರಂಗಬಲದ ಕಟ್ಟಿದಿರಿನಲ್ಲಿಯೇ ಒಡ್ಡಿ ನಿಲ್ಲಿಸಿರುವ ತಾರಕಾಸುರನ ಚತುರಂಗಬಲವು ಹೇಗಿರುವುದೆಂದರೆ-ಹೆಬ್ಬುಲಿಗಳ ಹಿಂಡಿನಂತೆ, ಸಿಂಹಗಳ ಯುದ್ಧದಂತೆ, ಶರಭಗಳ ಸಮೂಹದಂತೆ, ಭೇರುಂಡನ ಹಿಂಡಿನಂತೆ, ಕುಳಿಕ (ಒಂದು ಜಾತಿಸರ್ಪ)ನ ಸಮೂಹದಂತೆ, ನಂಜು (ವಿಷ) ಪುಂಜದಂತೆ, ಕಾಡುಕಿಚ್ಚಿನ ಪಯಣದಂತೆ, ಬಡಬಾಗ್ನಿಯ ಪಡೆಯಂತೆ, ಕಾಲಾಗ್ನಿಯ ಮಾಲೆಯಂತೆ, ಮಾರಿಯ ಮೂರಿಯಂತೆ, ಮೃತ್ಯುವಿನ ಸಮೂಹದಂತೆ, ಅಂತಕ (ಯಮ)ನ ಸಂತಾನದಂತೆ, ಭೈರವನ ಬಳಗದಂತೆ, ಮುಂದೆ ನಿಂತಿರುವ ರಾಕ್ಷಸ ಪಡೆಯ ಮಧ್ಯಭಾಗದಲ್ಲಿ ನಿಂತಿರುವ ವೀರತಾರಕಾಸುರನು ತನ್ನ ಸೈನ್ಯದ ಎದುರಿಗಿರುವ ದೇವ ಸೈನ್ಯವನ್ನು ನೋಡಿ ರಾಕ್ಷಸಗುರು ಶುಕ್ರಾಚಾರ್ಯನ ಮುಖವನ್ನು ನೋಡಿ, ಹೀಗೆಂದನು-

ಕಂ|| ಒಟ್ಟಿದ ನಿರ್ಜರ ಬಲದೊಳ್
ಕಟ್ಟಿದಿರಾಗಿರ್ದು ನಿಂದರಾರಾರವರಂ ।
ನೆಟ್ಟನೆನಗಱಿಪವೇಳ್ಕೆನೆ
ನಿಟ್ಟಯಿಸಿಯೆ ನುಡಿದನಸುರಕುಲಗುರು ಭರದಿಂ ॥ ೫೬

ಮ|| ನಡೆತಂದುನ್ನತವಕ್ತ್ರನಾಗಿ ಸುರರಂ ಗಂಧರ್ವರಂ ಯಕ್ಷರಂ
ಎಡೆಗೊಂಡೊಪ್ಪುವ ರತ್ನಕೋಟಿ ರುಚಿರ ಪ್ರಖ್ಯಾತಕೋಟೀರಮಿ ।
ರ್ಮಡಿ ದಿವ್ಯಪ್ರಭೆಯೊಯೆ ಬೆಳ್ಗೊಡೆಯ ವೀರಚ್ಛಾಯೆಯೊಳ್ ವಜ್ರಮಂ
ಪಿಡಿದೈರಾವತಮೇಱಿ ನಿಂದನವನಿಂದ್ರಂ ಕೇಳ್ ದನುಪ್ರೋದ್ಧವಾ ॥ ೫೭

ಕಂ|| ಆತನ ಕೆಲದೊಳ್ ಚಂಡ
ವ್ಯಾತಂ ಸಿಡಿಲೇಳ್ಗೆಯೇಳ್ವ ಬಲ್ದಗರೇಱಿ ।
ರ್ದಾತಂ ಸಕಳಜಗದ್ವಿ
ಖ್ಯಾತಂ ಹುತವಹನೆನಿಪ್ಪನವಧರಿಸಸುರಾ ॥ ೫೮

ಉರುತರ ಭೀಕರವಕ್ತ್ರಂ
ಕರತಳದಿಂ ಕಾಲದಂಡಮಂ ಕಡುಪಿಂದಂ ।
ತಿರಿಪುತ್ತಿರ್ಪವನಂತಕ
ನರಿದೆನಿಪ ಲುಲಾಯವಾಹನಂ ದನುಜೇಂದ್ರಾ ॥ ೫೯

ಅಸಮಬಳನತುಳವಿಕ್ರಮ
ನಸುರಕುಲೋತ್ತಂಸನಾಜಿಮುಖಹಸನಂ ಮಾ ।
ನಸನಂ ಪಾಯ್ದೇಱಿದ ರ
ಕ್ಕಸರರಸಂ ನಿರ್ಋತಿ ನಿರುತವೆಲೆ ದನುಜೇಂದ್ರ ॥ ೬೦

೫೬. ತನ್ನನ್ನು ಪ್ರತಿಭಟಿಸಿದ ಸುರಸೈನ್ಯದಲ್ಲಿ ನೇರವಾಗಿ ಯಾರು ಯಾರು ಎದುರಾಗುವರೊ ಅವರನ್ನು ನನಗೆ ಪರಿಚಯಮಾಡಿಕೊಡು ಎಂದು ತಾರಕನು ಶುಕ್ರಾಚಾರ್ಯರನ್ನು ಪ್ರಾರ್ಥಿಸಲು ಅಸುರಗುರು ಹೇಳತೊಡಗಿದನು. ೫೭. ಎಲೈ ದನುಜೇಶ್ವರನೆ, ಅಗೋ ನೋಡು! ಈಗ ಸುರ, ಗಂಧರ್ವ, ಯಕ್ಷರ ಮಧ್ಯದಲ್ಲಿ ಬೆಳ್ಗೊಡೆ ಕಾಣುತ್ತಿದೆಯಲ್ಲವೆ? ಅದರ ವಿವಿಧ ರತ್ನಪ್ರಭೆಯಿಂದ ಅವನ ಉನ್ನತ ಮುಖಕಾಂತಿ ಇಮ್ಮಡಿಸಿದೆ; ಅದರ ವೀರಚ್ಛಾಯೆಯಲ್ಲಿ ವಜ್ರಾಯುಧವನ್ನು ಹಿಡಿದು ಐರಾವತವನ್ನು ಏರಿ ಕುಳಿತಿರುವವನೇ ದೇವೇಂದ್ರ! ೫೮. ಎಲೈ ಅಸುರಾಧಿಪನೆ, ಆ ದೇವೇಂದ್ರನ ಪಕ್ಕದಲ್ಲಿ ಭಯಂಕರವಾದ ಸಿಡಿಲ ಮುದ್ದೆಯಂತಿರುವ ಬಲಿಷ್ಠವಾದ ಟಗರನ್ನು ಹತ್ತಿರುವವನೇ ಜಗತ್ಪ್ರಸಿದ್ಧನಾದ ಅಗ್ನಿ! ೫೯. ಎಲೈ ದನುಜೇಂದ್ರನೆ, ಭೀಕರವಾದ ಮುಖ, ಕೈಯಲ್ಲಿ ಕಾಲದಂಡ ಅದನ್ನು ದರ್ಪದಿಂದ ತಿರುಗಿಸುತ್ತಾ ಕೋಣವನ್ನೇರಿರುವವನೇ ಯಮಧರ್ಮ! ೬೦. ಹೇ ದನುಜೇಶ, ಅಸಮಬಳ, ಅತುಲವಿಕ್ರಮ, ಅಸುರಕುಲಶ್ರೇಷ್ಠ, ಅಸುರಾಧಿಪತಿ, ಯುದ್ಧಕುಶಲನಾದ ನಿರ್ಋತಿ;

ಅವಧರಿಸೆಲೆ ತಾರಕ ಮಕ
ರವನೇಱೆ ವಿಶಾಲಪಾಶಮಂ ಪಿಡಿದತ್ಯು ।
ತ್ಸವದಿಂದಂ ನಿಂದಾತಂ
ನವರತ್ನಾಭರಣನಿಕರಕಿರಣಂ ವರುಣಂ ॥ ೬೧

ಸಂದಣಿಪ ಕುರುಳ ಕುಂತದ
ಮುಂದಣ ಸಾಮಂತರಾಜ ಪುತ್ರೋತ್ಸರದಿಂ ।
ಗೊಂದಣಿಸಿ ಪರ್ವಿ ರಣದೊಳ್
ನಿಂದಿರ್ಪವನೇಣವಾಹನಂ ಪವಮಾನಂ ॥ ೬೨

ತುರಗವನೇಱೆ ಮಯೂಖಾ
ವರಣ ಸಿತಚ್ಛತ್ರಮೆಸೆಯೆ ಗರುಡರ ಗಂಧ ।
ರ್ವರ ಯಕ್ಷರ ಸಂದಣಿಯೊಳ್
ಬರುತೊಪ್ಪುವ ಭೀಕರಂ ಕುಬೇರಂ ದನುಜಾ ॥ ೬೩

ನಂದಿಯನೇಱೆ ಗಣಂಗಳ
ಮುಂದೆ ವೃಷಭಧ್ವಜಮನೆತ್ತಿ ಸಮರೋತ್ಸಾಹಾ ।
ನಂದದೊಳೆ ಬಂದು ಮುಂದಂ
ನಿಂದವನೀಶಾನನೆಂಬನೊರ್ವ ಗಣೇಶಂ ॥ ೬೪

ವರಚಕ್ರಂ ಶಾರ್ಙ್ಗ ಗದೆ
ಯುರುತರಭೀಕರಮನೀಯೆ ಸಂಗರರಂಗ ।
ಕ್ಕುರವಣಿಸುತ್ತುಂ ಬರ್ಪಂ
ಗರುಡಧ್ವಜನಸುರಮರ್ದನಂ ಕೇಳರಸಾ ॥ ೬೫

ನರವಾಹನನಾಗಿ ನಿಂತಿದ್ದಾನೆ! ೬೧. ಎಲೈ ತಾರಕನೆ, ಮೊಸಳೆಯನ್ನೇರಿ, ವಿಶಾಲಪಾಶವನ್ನು ಹಿಡಿದು ರತ್ನಾಭರಣಕಿರಣಗಳಿಂದ ಭೂಷಿತನಾಗಿ ಉತ್ಸಾಹಿಯಾಗಿ ನಿಂತಿರುವವನೇ ವರುಣ! ೬೨. ಮುಖದ ಮೇಲೆ ಕೆದರಿರುವ ಮುಂಗುರುಳು, ಕುಂತಾಯುಧ ಹಿಡಿದು ಸಾಮಂತ ರಾಜಪುತ್ರರು ಸುತ್ತುವರಿದಿರುವ ವಾಯುದೇವನು ಚಿಗರೆಯನ್ನೇರಿ ರಣಮಧ್ಯದಲ್ಲಿ ನಿಂತಿದ್ದಾನೆ. ೬೩. ಎಲೈ ದನುಜೇಶ್ವರ, ಕುದುರೆಯನ್ನೇರಿ, ರತ್ನಗಳ ಕಿರಣಗಳಿಂದ ಹೊಳೆಯುವ ಬಿಳಿಕೊಡೆ ಹಿಡಿದು, ಗರುಡ ಗಂಧರ್ವ ಯಕ್ಷರ ಸಂದಣಿಯಲ್ಲಿ ಬರುತ್ತಿರುವ ರಣಭೀಕರನೇ ಕುಬೇರ! ೬೪. ಬಸವನ ಮೇಲೆ ಕುಳಿತು ಪ್ರಮಥಗಣಗಳ ಮಧ್ಯದಲ್ಲಿ ಬಸವ ಬಾವುಟವು ಹಾರಾಡುತ್ತಿರಲು ಸಮರೋತ್ಸಾಹದಿಂದ ಬಂದಿರುವವನೇ ಈಶಾನನೆಂಬ ದಿಕ್ಪಾಲಕ! ೬೫. ಎಲೈ ಅಸುರಾಧಿಪತಿ, ಬೆಳಗುತ್ತಿರುವ ಸುದರ್ಶನಚಕ್ರ, ಶಾರ್ಙ್ಗಧನುಸ್ಸು, ಗದೆ, ಇವುಗಳು ಭಯೋತ್ಪಾದಕವಾಗಿ ಕಾಣುತ್ತಿರಲು ರಣರಂಗಕ್ಕೆ ದರ್ಪದಿಂದ

ಸುತ್ತಿರ್ದ ತಳೆಯ ದಿವಿಜರ
ಮೊತ್ತದ ಗಂಧರ್ವಕುಲದ ನಡುವೆ ವಿಳಾಸಂ ।
ಬೆತ್ತತಿಸಂಭ್ರಮದಿಂದೆ ಬ
ರುತ್ತಿರ್ಪಂ ಹಂಸವಾಹನಂ ಚತುರಾಸ್ಯಂ ॥ ೬೬

ವ॥ ಎಂದು ತಾರಕಾಸುರಂಗೆ ಭಾರ್ಗವಂ ಬೀಱಿವೀಱಿ ಮಾಱೊಡ್ಡಿ ಮೀಱೆ ನಿಂದ ಗೀರ್ವಾಣಮುಖ್ಯರಂ ತೋಱುತ್ತಿರ್ಪ ಸಮಯದೊಳಮರಪತಿ ಸಮರಕ್ಕೆ ಸನ್ನದ್ಧಮಾದ ತನ್ನ ಬಲಕ್ಕೆ ಸನ್ನೆದೋಱಿ ಹೊಯ್ವ ನಿಸ್ಸಾಳದ ಭೇರಿಯ ತಂಬಟದ ಚಂಬಕದ ವೀರವ್ಯಂದದ ದೌಡೆಯ ಪಟಹದ ಢಕ್ಕೆಯ ಧವಳ ಶಂಖದ ಜವಳಿಗಾಳಿಯ ತಿತ್ತಿರಿಯ ಕಿನ್ನರಿಯ ಹೊನ್ನ ಬೊಂಬುಳಿಯ ರನ್ನದ ಕೊಂಬಿನ ಕೋಳಾಹಳಂ ನೆಗಳೆ, ಮಸಗಿ ಬೊಬ್ಬಟ್ಟು ದೆಸೆದೆಸೆಗೆ ಪರಿದು ಮೂದಲಿಸಿ ಮುಂಗುಡಿಗೆದಱೆ ಮೊಗ್ಗರಂಬೊಯ್ದಗ್ಗಲಿಸಿ ನಡೆದು ಬಗ್ಗಿಸಿ ಬಯ್ದೊಗ್ಗುಗೆಡದೆ ಮುಂಕಣಿಸಿ ಭೋಂಕನೆ ನೂಂಕಿ ಪದಾತಿಬಲಂ ಪಡಿತಳಿಸಿ ರಥವ್ರಾತಮಂ ತುರಂಗಸಂಘಮಂ ಗಜಘಟಾ ಪಟಳಮಂ ಸಂಗಡಿಸಿ ಪಿಂಗದೊತ್ತರಿಸಿ ತನಗಿದಿರಂ ಬರ್ಪ ಚತುರಂಗಬಲದ ಭಾರದುರವಣೆಯ ತಾರಕಾಸುರಂ ಕಂಡು ಕೋಪಮನೆಡೆಗೊಂಡಾಸ್ಫೋಟಿಸಿ ಬಾಹಾಸ್ಫಾಲನಂಗೆಯ್ದು ಗಜರಿ ಗರ್ಜಿಸಿ ಗದ್ದುಗೆವೊಯ್ದರ್ದು ಪೊರ್ದಿ ನಿಂದು ಮಿಕ್ಕು ಮೀಱುವ ರಕ್ಕಸವಡೆಗೆ ಕಾಯ್ದು ಕಡುಕೆಯ್ದು ಮೆಯ್ದೋಱೆ ಕೆಯ್ದೀಸಿದಾಗಳ್

ಚಂ॥ ಚರಣದ ಧೂಳಿ ಬಾಂದೊಱಿಗೆ ಬಾಸಣಮಾಗಿರೆ ಹೇಷಿತಂ ದಿಶಾ
ಕರಿಗಳನೆಳ್ದೆ ಬ್ಯಂಹಿತಮಜಾಂಡಮನಾಂತಿರೆ ಚೀತ್ಕೃತಂ ಧರಾ ।
ಧರಮನದಿರ್ಪೆ ತಾಗಿದು ಪದಾತಿ ಪದಾತಿಯೊಳಶ್ವಮಶ್ವದೊಳ್
ಕರಿ ಕರಿಯೊಳ್ ರಥಂ ರಥದೊಳದ್ಭುತಮಾಹವಭೂಮಿಗಪ್ಪಿನಂ ॥ ೬೭

ಬರುತ್ತಿರುವವನೇ ಅಸುರಾರಿ ವಿಷ್ಣು! ೬೬. ಸುತ್ತುವರಿದಿರುವ ಪ್ರಭಾಮಂಡಲದ ಮಧ್ಯದಲ್ಲಿ ದಿವಿಜ-ಗಂಧರ್ವ ಕುಲದ ನಡುವೆ ವಿಲಾಸ-ಸಂಭ್ರಮಗಳಿಂದ ಬರುತ್ತಿರುವವನೇ ಚತುರ್ಮುಖ. ವ॥ ಹೀಗೆ ತಾರಕಾಸುರನಿಗೆ ಭಾರ್ಗ (ಶುಕ್ರಾಚಾರ್ಯ)ನು ಬೇರೆ ಬೇರೆ ಪ್ರತಿವ್ಯೂಹ ರಚಿಸಿ ಮೀರಿರುವ ದೇವತೆಗಳನ್ನು ತೋರುತ್ತಿರುವ ಸಮಯದಲ್ಲಿ ದೇವೇಂದ್ರನು ಯುದ್ಧಕ್ಕೆ ಸಿದ್ಧವಾದ ತನ್ನ ಸೈನ್ಯಕ್ಕೆ ಸಂಜ್ಞೆ ಮಾಡಿದನು. ಭೇರಿ, ತಮಟೆ, ಚಂಬಕ (ಭೇರಿವಿಶೇಷ)ವುಳ್ಳ ವೀರರು ತಮ್ಮ ತಮ್ಮ ವಾದ್ಯ ಬಾರಿಸಿದರು, ಡೌಡೆ, ಪಟಹ, ಢಕ್ಕೆ, ಧವಳಶಂಖ, ಅವಳಿಕಹಳೆ, ತಿತ್ತಿರಿ, ಕಿನ್ನರಿ, ಹೊನ್ನಬೊಂಬುಳಿ, ರನ್ನದ ಕೊಂಬು ಇವುಗಳ ಕೋಲಾಹಲ ಮೊಳಗಿತು, ಕೂಡಲೆ ಪದಾತಿಬಲ ದಿಕ್ಕು ದಿಕ್ಕಿಗೆ ಪರಿದು ಮೂದಲಿಸಿ, ಮುಂಗುಡಿಗೆದರಿ, ಒಟ್ಟುಗೂಡಿ, ಅಗ್ಗಲಿಸಿ, ನಡೆದು ಒಯ್ದು ಒಗ್ಗುಗೆಡದೆ ಮುನ್ನುಗ್ಗಿ, ತಕ್ಷಣ ನೂಂಕಿ ಪದಾತಿಬಲ ಪ್ರವೃತ್ತವಾಯಿತು, ರಥಗಳು, ಅಶ್ವಗಳು, ಗಜಬಲಗಳು ತನತನಗೆ ಇದಿರಾದ ಚತುರಂಗಬಲದ ಕ್ರೌರ್ಯವನ್ನು ತಾರಕಾಸುರನು ಕಂಡು ಕ್ರುದ್ಧನಾಗಿ ಗದರಿ ಗರ್ಜಿಸಿ, ಭುಜ ತಟ್ಟಿ ದಿಗ್ಗನೆದ್ದು ತನ್ನ ರಕ್ಕಸಪಡೆಗೆ ಬಿಸಿಯೇರಿಸಿ ಕೈಬೀಸಿ ಸೂಚನೆ ಕೊಟ್ಟನು. ೬೭. ಕಾಲ್ತುಳಿತದಿಂದ ಎದ್ದ ಧೂಳು ಗಗನಾಂಗಣವನ್ನು ವ್ಯಾಪಿಸಿತು; ಕುದುರೆಗಳ ಹೇಷಾರವ ದಿಗ್ಗಜಗಳನ್ನು ಎಚ್ಚರಿಸಿತು, ಆನೆಗಳ ಬೃಂಹಿತ ಬ್ರಹ್ಮಾಂಡವನ್ನು

ಎಂಬ ಪದ್ಯಂ ತಾಗಿದಾಗಳ್

ಚಂ॥ ಬೆರಸಿ ಪದಾತಿ ನೆಕ್ಕು ನೆರಿಲೆಂಬ ನಳಿಲ್‌ನೆಳಿಲೆಂಬ ಘಾರು ಘ
ರ್ಘರ ಘರಿಲೆಂಬ ದೊಪ್ಪುಧಡಲೆಂಬ ಬುದಿಲ್ ಬುದಿಲೆಂಬ ಸಂಭ್ರಮಂ ।
ನೆರೆದು ಖಣಿಲ್ ಖಣಿಲ್ ದೊಗಹು ಧೊಕ್ಕು ದುಡುಮ್ಮು ತಟಲ್ ನಿಟಲ್ ಪಟಲ್
ಗರಿಗರಿಲೆಂಬ ನಿಷ್ಠುರರವಂ ಮಿಗೆ ತಟ್ಟಜೆದತ್ತು ಯುದ್ಧದೊಳ್ ॥ ೬೮

ವ॥ ಅನಂತರದಲ್ಲಿ

ಚಂ॥ ಗಿರಿಗಿರಿಯೊಳ್ ಪಳಂಚುವವೊಲೆಯ್ದೆ ರಥಂ ರಥದೊಳ್ ಪಳಂಚಿ ಸೂ
ತರ ರಥಚಕ್ರಸಂಚಯದ ಕಾರ್ಮುಕವೀಥಿಯ ಮುಕ್ತಮಾರ್ಗಣೋ ।
ತ್ಕರದ ವಿಶಾಲಹುಂಕೃತಿ ಸಮುದ್ಧತ ಚೇತ್ಕೃತಿ ಚಾರು ಟಂಕೃತಿ
ಸ್ಫುರಿತ ನವೀನ ಭೀಂಕೃತಿ ಚಮತ್ಕೃತಿಯಾಯ್ತು ಮಹಾಜಿರಂಗದೊಳ್ ॥ ೬೯

ವ॥ ಅಂತು ತಾಗಿದ ರಥಪ್ರತಾನದ ಕಾಳೆಗಮಂ ಕಂಡು,

ಚಂ॥ ಜಳಧಿತರಂಗಸನ್ನಿಭತುರಂಗಬಲಂ ಮುಳಿದೇಱಿ ವಾಹಕಾ
ವಳಿಯ ನಿಶಾತಖಡ್ಗದ ಖಣಿಲ್ ಖಟಿಲೆಂಬ ಮಹಾರವಂ ಮುಖೋ ।
ಚ್ಚಳಿತರವಂ ಖುರೋದ್ಗತರವಂ ಕಳಿಕೋಚ್ಚರವಂ ಕಶಾರವಂ
ಬಳಸಿ ನಭಃಸ್ಥಲಕ್ಕೆ ಬಳೆಯುತ್ತಿರೆ ತಾಗಿದುದಾಜಿರಂಗದೊಳ್ ॥ ೭೦

ತುಂಬಿತು, ಚೇತ್ಕಾರ ಪರ್ವತಗಳನ್ನು ಕದಲಿಸಿತು, ಕಾಲಾಳು ಕಾಲಾಳುಗಳೊಡನೆ, ಅಶ್ವಗಳು ಅಶ್ವಗಳೊಡನೆ, ಕರಿ ಕರಿಗಳೊಡನೆ, ರಥ ರಥಗಳೊಡನೆ ಯುದ್ಧವನ್ನು ಆರಂಭಿಸಿದವು. ೬೮. ಆ ಯುದ್ಧಪ್ರದೇಶದಲ್ಲಿ ಕಾಲಾಳು ಮೊದಲಾದ ಸೈನ್ಯ ಪರಸ್ಪರ ರಭಸದಿಂದ ಹೋರಾಡುತ್ತಿರುವಾಗ ಎಲ್ಲಿ ನೋಡಿದರೂ ನೆಕ್ಕುನೆರಿಲ್, ನೆಳಿಲ್ ನೆಳಿಲ್, ಘಾರು ಘರ್ಘರ ಘರಿಲ್, ಧೊಪ್ಪಧಡಲ್ ಮುಂತಾದ ಅನುಕರಣ ಶಬ್ದ ತುಂಬಿಹೋಗಿತ್ತು. ೬೯. ಒಂದು ಗಿರಿ ಮತ್ತೊಂದು ಗಿರಿಯಲ್ಲಿ ತಾಗುವಂತೆ ರಥವು ರಥವನ್ನು ತಾಗಿತು, ಸೂತರ ರಥಚಕ್ರಗಳ ಸಮೂಹ, ಬಿಲ್ಲುಗಳ ಬೀದಿ, ಬಿಟ್ಟ ಬಾಣಗಳ ಸಂದಣಿ, ವಿಶಾಲಹುಂಕಾರ, ಚೇತ್ಕಾರಗಳು, ಟಂಕಾರಗಳು ಇವೆಲ್ಲವು ಗಳಿಂದ ಭಯಂಕರ ಸನ್ನಿವೇಶವು ಆ ರಣರಂಗದಲ್ಲಿ ಒಂದು ಚಮತ್ಕೃತಿಯೆನಿಸಿತು. ೭೦. ಆ ರಣರಂಗದಲ್ಲಿ ಒಂದೆಡೆ ಕುದುರೆಕಾಳಗ; ಅದು ಸಾಗರ ತರಂಗಗಳಂತೆ ತೆರೆ ತೆರೆಯಂತೆ ಅನೇಕ ಪಟಲಗಳಿಂದ, ಕ್ರುದ್ಧರಾದ ಭಟರು ಕುದುರೆ ಏರಿ ಹೋರಾಡುವಾಗ ಅವರ ತೀಕ್ಷ್ಣ ಖಡ್ಗಗಳ ಖಣಿಲ್ ಖಟಿಲೆಂಬ ಶಬ್ದ, ಅವರ ಬಾಯಿಂದ ಹೊರಡುವ ವೀರಾಲಾಪಗಳ ಶಬ್ದ, ಕುದುರೆ ಗೊರಸುಗಳ ಶಬ್ದ,

ಚಂ॥ ನೆರೆದುಬುಬೆಂಬ ಕಟ್ಟಿದಿರ ತಟ್ಟನ ರಾವುತರೊಳ್ ಕಡಂಗಿ ಮ –
ಚ್ಚರಿಸಿ ಮರಳ್ದು ಮೂದಲಿಸಿ ಕೂರಸಿಯಿಂ ತಲೆ ಪಾಱೆ ಬೀಳ್ವಿನಂ ।
ಸರಿಬೆಸನಾಗಿ ಪೊಯ್ಯೆ ತಲೆ ಮಾರ್ತಲೆಯೊಳ್ ನಿಮಿರ್ದಟ್ಟೆಯಿಟ್ಟೆಯೊಳ್
ಹರಿಹರಿಯೊಳ್ ಪಳಂಚೆ ಪೊಸತಾದುದು ಸಂಗರರಂಗಭೂಮಿಯೊಳ್ ॥ ೭೧

ವ॥ ಆ ಕಾಳಿಗದ ಕಡುಪಂ ಚಂಡ ಗಜಾರೋಹಕರ್ ಕಂಡು,

ಉ॥ ಮುಂಕಣಿಸುತ್ತೆ ಚಪ್ಪರಿಸುತುಂಗುಟದಿಂದೊದೆದಾರ್ದು ಸಾರ್ದು ಕೂ
ರಂಕುಸಮಿಟ್ಟು ಭೈ ಭಲರೆ ಭೈಯೆನುತುಂ ಕಡುಪಿಂದೆ ನೂಂಕೆ ನಿ ।
ಶ್ಯಂಕತೆಯಿಂದ ತೂಳ್ದು ಘಟೆಯೊಳ್ ಘಟೆ ಜೋಡಿಸಿ ದಂತಜಾಲದೊಳ್
ಭೋಂಕನೆ ಪೊಣ್ಮಿ ತೋರಕಿಡಿ ಸೂಸೆ ಕಱುತ್ತುಱಿ ತಾಗಿತಾಜಿಯೊಳ್ ॥ ೭೨

ವ॥ ಆಗಳ್

ಕಂ॥ ಭರಿಕೆಯ್ ಭರಿಕೆಯ್ಯೊಳ್ ನಿ
ಷ್ಠುರದಂತಂ ದಂತದೊಳ್ ಮುಖಂ ಮದಮುಖದೊಳ್ ।
ವರಜೋದರ್ ಜೋದರೊಳೊ
ತ್ತರಿಸಿದರಾರೋಹಕರ್ಕಳಾರೋಹಕರೊಳ್ ॥ ೭೩

ಮುಂತಿದಿರೊಳ್ ನೂಂಕಿದ ಮಾ
ವಂತರ ಗಳಗರ್ಜನಕ್ಕೆ ಕಡುಮುಳಿಯುತ್ತ ।
ತ್ಯಂತಂ ಪೊಣ್ಮಿತ್ತು ದಂತಾ
ದಂತಿ ನಖಾನಖಿಯೆನಿಪ್ಪ ಕಾಳಿಗಮಾಗಳ್ ॥ ೭೪

ತೀಕ್ಷ್ಣವಾದ ಚಾಟಿಯ ಶಬ್ದ ಇದೆಲ್ಲವೂ ಏಕವಾಗಿ ಗಗನತಳದವರೆಗೆ ವ್ಯಾಪಿಸಿತ್ತು. ೭೧. ಆ ಯುದ್ಧಭೂಮಿಯಲ್ಲಿ ಕಟ್ಟಾಳುಗಳಾದ ರಾವುತರು ಎದುರಾಳಿಗಳೊಡನೆ ಕುಪಿತರಾಗಿ, ಮತ್ಸರಿಸಿ, ಮತ್ತೆ ಮತ್ತೆ ಮೂದಲಿಸಿ, ತಮ್ಮ ಕ್ರೂರವಾದ ಖಡ್ಗಗಳಿಂದ ಅವರ ತಲೆಗಳನ್ನು ಚೆಂಡಾಡಿದಾಗ ಆ ತಲೆಗಳು ಕೆಳಕ್ಕೆ ಬೀಳುವಾಗ ಇತರ ತಲೆಗಳನ್ನು ತಾಗಿದವು; ತಲೆ ಹೋದ ಅಟ್ಟೆ (ರುಂಡಗಳು) ಅಟ್ಟೆಗಳೊಡನೆ, ಹರಿ ಹರಿಯಲ್ಲಿ ತಾಗುತ್ತಿದ್ದುದು ಹೊಸ ಬಗೆಯಾಗಿತ್ತು. ವ॥ ಆ ಯುದ್ಧದ ತೀವ್ರತೆಯನ್ನು ಆನೆ ಏರಿದವರು ನೋಡಿದರು. ೭೨. ಆನೆಪಡೆ ಮುಂದುವರಿಯಿತು. ಅವುಗಳ ಮೇಲೆ ಕುಳಿತ ಭಟರು ಗಜವನ್ನು ಬೆನ್ನುತಟ್ಟಿ ಅಂಗುಷ್ಠ ದಿಂದ ಒದೆದು, ಆವೇಶದಿಂದ ಮುನ್ನುಗ್ಗಿ, ತೀಕ್ಷ್ಣವಾದ ಅಂಕುಶವಿಟ್ಟು, ಭೈ ಭಲರೆ ಮುಂತಾಗಿ ಧ್ವನಿಮಾಡುತ್ತಾ ಕೋಪ ದಿಂದ ನೂಂಕಲು ಆನೆಗಳು ಒಂದಕ್ಕೊಂದು ತಾಗಿ ಅವುಗಳ ದಂತಗಳ ಘರ್ಷಣೆಯಿಂದ ಕಿಡಿಗಳು ಸೂಸುತ್ತಿರಲು ಗಜಕಾಳಗ ಭಯಂಕರವಾಗಿತ್ತು. ೭೩. ಆನೆಗಳ ಸೊಂಡಿಲು ಸೊಂಡಿಲಿಗೆ, ಕಠಿನ ದಂತಗಳು ದಂತಗಳಿಗೆ, ಮುಖಗಳು ಮದ ಮತ್ತು ಮುಖಗಳಿಗೆ, ಯೋಧರು ಯೋಧರಿಗೆ, ಗಜಾರೂಢರು ಗಜಾರೂಢರಿಗೆ ಮುಖಾಮುಖಿ ಸಮರ ನಡೆದಿತ್ತು! ೭೪. ಎದುರೆದುರಿನಲ್ಲಿ ಆನೆಪಡೆಯನ್ನು ತಾಗಿಸಿದ ಮಾವಟಿಗರ ಗರ್ಜನೆಗೆ

ವ॥ ಅಂತು ಪೋಗದೆ ನಿಂದು ತಾಗಿ ತಳ್ತಿಪಿದು ರಕ್ಕಸವಡೆಯೊಳ್ ಮಿಕ್ಕು ಮೀಱುವ ದೇವರ್ಕಳ ದೆಖ್ಖಾದೆಖ್ಖಿಯ ಕಾಳೆಗಮಂ ಕಂಡು ಕಡುಮುಳಿದು ತಾರಕಾಸುರಂ ವಾರಣಾರೂಢನಾಗಿ ತನ್ನ ಕೆಲಬಲದ ಪಿಂತಣ ಮುಂತಣ ಚತುರಂಗಬಲಂ ಬೆರಸಿ ಬಿಲ್ಲನುಗಿದು ನಿಲ್ಲದೆ ನೂಂಕಿದಾಗಳ್,

ಚಂ॥ ಅರರೆ ಚತುರ್ಬಲಂಬೆರಸು ಭೋಂಕನೆ ನೂಂಕಿದ ವೀರತಾರಕಾ
ಸುರನೊಳದಾವನೇಱುವನದಾವನಮರ್ಚುವನಾವನೆಯ್ದಿ ಮ ।
ಱ್ಚಿಸುವನಾವನೊಡ್ಡುವನದಾವನೊಡರ್ಚುವನಾವನಾಂತು ನಿ
ತ್ತರಿಸುವನಾವನಣ್ಮೆ ತಲೆದೋರ್ಪನದಾವನಿದಿರ್ಚ ತಾಗುವಂ ॥ ೭೫

ವ॥ ಎಂಬ ಸಂಭ್ರಮಮಂತರಿಕ್ಷದೊಳೀಕ್ಷಿಪ ಯಕ್ಷಕುಲದೊಳ್ ನೆಗಳೆ,

ಚಂ॥ ಕುಳಿಕನ ಕೂರ್ಪೊ ಬಾಡಬನ ತೀವ್ರತೆಯೊ ಸಿಡಿಲೇಳ್ಗೆಯೋ ದವಾ
ನಳನ ಪೊಡರ್ಪೊ ಭೈರವನಳುರ್ಕೆಯೊ ಕಾಲನ ಕಾಯ್ಪೊ ತದ್ದಿಶಾ ।
ನಿಳನತಿವೇಗಮೋ ಪರಿವ ಮೃತ್ಯುವಿನುಗ್ರತೆಯೋ ಮಹಾಲಯ
ಜ್ವಲನನ ದಾಳಿಯೊ ತಿಳಿಯೆ ಪೇಳೆನೆ ನೂಂಕಿದನುಗ್ರತಾರಕಂ ॥ ೭೬

ವ॥ ಅಂತು ನೂಂಕಿದತುಳಬಳವೀರತಾರಕನ ಚತುರಂಗಬಲದುರವಣೆಗಿರಲಾಱದೆ ಸುರರ ಪದಾತಿಬಲಂ ಪರಿಭವಂಬಡೆದು ರಥಾನೀಕಂ ವಿರಥಮಾಗಿ ತುರಂಗಕುಲಂ ತರಹರಿಸಲಾಱದೆ, ಗಜದೊಡ್ಡು ಗಂಡುಗೆಟ್ಟು ಬೆಂಗೊಟ್ಟು ನಿಲ್ಲದೋಡಿ ಕಲೆಯುಂ ಕವಿಯುಮಾಗೆ

ಕೋಪಗೊಂಡ ಆನೆಗಳು ಒಂದನ್ನೊಂದು ತಾಗಿದಾಗ ದಂತಾದಂತಿ, ನಖಾನಖಿ ಎಂಬ ಕಾಳಗ ಆರಂಭವಾಗಿತ್ತು. ವ॥ ಹೀಗೆ ಹೋಗದೆ ನಿಂತು ತಾಗಿ ಜೋರಿನಿಂದ ತಿವಿದಾಗ ರಕ್ಕಸ ಪಡೆಗೆ ಮೀರಿದ ದೃಷ್ಟಿಯುದ್ಧವನ್ನು ಕಂಡು ಬಹುವಾಗಿ ಕೋಪಿಸಿಕೊಂಡ ತಾರಕಾಸುರನು ಆನೆಯನ್ನೇರಿ ತನ್ನ ಸುತ್ತುಮುತ್ತಿನ ಹಿಂದಿನ ಮುಂದಿನ ಚತುರಂಗ ಬಲವನ್ನು ಕೂಡಿಸಿ ಬಿಲ್ಲನ್ನು ಜಗ್ಗಿ ಮುನ್ನಡೆಸಿದಾಗ, ೭೫. ಓಹೋ! ಚತುರ್ಬಲ ದೊಡನೆ ಮುನ್ನುಗ್ಗಿದ ವೀರ ತಾರಕಾಸುರನ ಮೇಲೆ ಯಾರು ಎದುರಾದಾರು? ಯಾರು ಅಮರ್ಚುವರು, ಯಾವನು ಮತ್ಸರಿಸುವನು? ಯಾವನೊಡ್ಡುವನು? ಯಾವನು ಒಡರ್ಚುವನು? ಎದುರಿಸಿ ನಿತ್ತರಿಸುವನಾರು? ಪರಾಕ್ರಮದಿಂದ ಅವನಿಗೆ ತಲೆದೋರುವನಾರು? ೭೬. ಉಗ್ರನಾದ ತಾರಕನು ಯುದ್ಧಕ್ಕೆ ನುಗ್ಗಿದುದನ್ನು ನೋಡಿದರೆ ಇದೇನು ಕುಳಿಕನೆಂಬ ವಿಷಸರ್ಪನ ತೀವ್ರತೆಯೋ, ಬಡಬಾಗ್ನಿಯ ತೀಕ್ಷ್ಣತೆಯೋ, ಸಿಡಿಲ ಏಳ್ಗೆಯೊ, ಕಾಡ್ಗಿಚ್ಚಿನ ಪರಾಕ್ರಮವೊ, ಭೈರವನ ಭೀಕರತೆಯೊ, ಕಾಲಯಮನ ಬಿಸಿಯೊ, ಮೃತ್ಯುವಿನ ಉಗ್ರತೆಯೊ, ಕಾಲಾಗ್ನಿಯ ಧಾಳಿಯೋ ಎಂಬಂತೆ ಇತ್ತು. ವ॥ ಹೀಗೆ ತಾರಕನು ಅತುಲ ಬಲಪರಾಕ್ರಮದಿಂದ ನುಗ್ಗಿ ಬರಲು ಅವನ ಚತುರಂಗ ಬಲದ ರಭಸಕ್ಕೆ ತಡೆಯಲಾರದೆ ಸುರರ ಕಾಲಾಳು ಸೈನ್ಯ ಸೋತಿತು, ರಥಗಳು ವಿರಥವಾದವು, ಕುದುರೆ ಸೈನ್ಯ ತತ್ತರಿಸಿತು, ಗಜಪಡೆ ಧೃತಿಗೆಟ್ಟಿತು, ಸುರಸೈನ್ಯವೆಲ್ಲ ಯುದ್ಧವಿಮುಖವಾಗಿ ಚೆಲ್ಲಾಪಿಲ್ಲಿಯಾಗಿ ಹಿಮ್ಮೆಟ್ಟಿತು.

ಉ॥ ಕಂಡತಿವೀರತಾರಕನಣಂ ಪರಿಹಾಸಮನಾಳ್ದು ಮೀಜೆ ಬೆಂ
ಕೊಂಡು ಭಯಾಕುಳವ್ರಜದ ಬೆಂಬಳಿಯಂ ನೆಱಿಬಟ್ಟು ನಿಂದು ವೇ ।
ದಂಡಮನೋಜೆಯಿಂ ತಿರುಪಿ ನೂಂಕಿ ಮರುಳ್ದು ರಣಾಗ್ರರಂಗಭೂ
ಮಂಡಳಮಂ ನಿರೀಕ್ಷಿಸುತೆ ಪೋದನಪಾರಗಭೀರವಿಕ್ರಮಂ ॥ ೭೭

ವ॥ ಅಂತು ಪೋಗೆ,

ಉ॥ ಇತ್ತಲನಂತರಂ ತ್ರಿದಶರೋಡಿ ಸುರಾದ್ರಿಹರಾದ್ರಿಯೊಳ್ ಭಯಂ
ಬೆತ್ತು ಮಹಾಗುಹಾವಳಿಗಳಂ ಘನಗಹ್ವರಘೋರವೀಥಿಯಂ ।
ಸುತ್ತಿದರಣ್ಯದಂಧತಮಮಂ ತವಕಂ ಮಿಗೆ ಸಾರ್ದು ಪೊಕ್ಕು ಶೌ
ರ್ಯೋತ್ತರರಿರ್ದರಪ್ರತಿಮತಾರಕಸಂಗರರಂಗಭಂಗಿತರ್ ॥ ೭೮

ಕಂ॥ ಓಡಿದರಡಗಿದರಗಿದರ್
ಕೋಡಿದರನುಗೆಟ್ಟರಳ್ಕಿದರ್ ಸೊರ್ಕಳಿದರ್ ।
ಬಾಡಿದರಂಜಿದರಮರರ್
ಪಾಡಳಿದರ್ ಮಣಿದರಳ್ದರಳಿದರ್ ಕಳಿದರ್ ॥ ೭೯

ವ॥ ಇಂತು ಭಯಾಕುಳರಾಗಿ ಮೇರುಗಿರಿಯ ರಜತಾದ್ರಿಯ ಗುಹೆ ಗಹ್ವರಂಗಳಂ ಪೊಕ್ಕು ಗಾಡಿಗೆಟ್ಟು ಗಂಡುಡುಗಿರ್ದ ದೇವರ್ಕಳನಲ್ಲಲ್ಲಿ ಕರೆದು ಮೆಲ್ಲಮೆಲ್ಲನೆ ನೆರಪಿ ಸುರಕುಲಂಬೆರಸು ಹಿರಣ್ಯಗರ್ಭನುಂ ಜಿಷ್ಣುವುಂ ವಿಷ್ಣುವಿರ್ದ ತಾಣಕ್ಕೆ ಜಾಣಿಂ ಬಂದು ಕಂಡು ಕುಳ್ಳಿರ್ದು ಕಾಳೆಗದಿಂ ನೊಂದಾಳೋಚನಂಗೆಯ್ವಲ್ಲಿ ಮುನ್ನಿನಂತಲ್ಲದಿನ್ನೊರ್ಮೆ ಸಂಗರಮಂ ಸಮಕಟ್ಟಲ್ವೇಳ್ಕುಮಾನಿರ್ದಪೆಂ ನೀವಿರ್ದಪಿರಜನಿರ್ದಪನಂಜಲೇತಕರ್ಕೆಂದು ಶಕ್ರಂ ಮಿಕ್ಕು ನುಡಿಯೆ,

ಕಂ॥ ನೆನೆದು ವಿಚಾರಿಸಿ ನಿಶ್ಚಯ
ಮನನತುಳೋಪಾಯಕೋವಿದಂ ಸ್ಥಿತಿಕರ್ತಂ ।
ವನಜಾಕ್ಷಂ ಘನನಿರ್ಮಲ
ನನಾಗತಜ್ಞಾನಿ ಶಕ್ರನೊಡನಿಂತೆಂದಂ ॥ ೮೦

೭೭. ಅದನ್ನು ಕಂಡ ವೀರತಾರಕಾಸುರನು ನಸುನಕ್ಕು ಅವರನ್ನು ಬೆನ್ನಟ್ಟಿ ಭಯಗ್ರಸ್ತವಾಗಿ ಓಡುತ್ತಿರುವ ಸೈನ್ಯದ ಬೆಂಬಳಿಯನ್ನು ಕೈಬಿಟ್ಟು, ಆನೆಗಳನ್ನು ಗರಗರ ತಿರುಗಿಸಿ, ಅಲ್ಲಿಂದ ಮರಳಿ ರಣರಂಗವನ್ನೆಲ್ಲ ನೋಡುತ್ತಾ ಹೋದನು. ೭೯. ದೇವತೆಗಳು ಓಡಿದರು, ಅಡಗಿಕೊಂಡರು, ಹುಲ್ಲು ಕಚ್ಚಿದರು, ದಿಕ್ಕೆಟ್ಟರು, ಅಳುಕಿದರು, ಸೊರಗಿದರು, ಬಾಡಿದರು, ಅಂಜಿದರು, ಮುಂದುಗಾಣದೆ ಶರಣಾದರು. ವ॥ ಹೀಗೆ ಭಯವಿಹ್ವಲರಾದ ದೇವತೆಗಳು ರಕ್ಷಣೆಗಾಗಿ ಮೇರುಗಿರಿ ಮತ್ತು ರಜತಗಿರಿಗಳ ಗುಹೆಗರ್ತಗಳನ್ನು ಆಶ್ರಯಿಸಿದರು. ಶೌರ್ಯವಡಗಿದ ದೇವತೆಗಳೆಲ್ಲ ಗುಟ್ಟಾಗಿ ವಿಷ್ಣುವಿನ ಹತ್ತಿರ ಬಂದು ಯೋಚಿಸಿದರು. ವಿಷ್ಣು ಅವರಿಗೆ ಧೈರ್ಯವಿತ್ತನು. ಮತ್ತೊಮ್ಮೆ ಯುದ್ಧ ಹೂಡೋಣ! ನಾನಿರುತ್ತೇನೆ, ನೀವಿದ್ದೀರಿ, ಬ್ರಹ್ಮನಿದ್ದಾನೆ ಅಂಜುವುದು ಬೇಡ ಎಂದು ಇಂದ್ರನು ಮತ್ತೆ ಹುರಿದುಂಬಿಸಿದ. ೮೦. ಅದನ್ನೆಲ್ಲ ಪರ್ಯಾಲೋಚಿಸಿದ ವಿಷ್ಣು. ಆತ ಅತುಲ

ಆನಿರ್ದುಂ ತಾನಿರ್ದುಂ
ನೀನಿರ್ದುಂ ಮೂವರಿರ್ದುಮೇನಾದುದು ಪೇಳ್ ।
ನಾನಾನಿಷ್ಠುರತಾರಕ
ಸೇನಾಮುಖನಿಖಿಳಭುವನವಿಧ್ವಂಸನದೊಳ್ ॥ ೮೧

ವ॥ ಅಂತುಮಲ್ಲದೆ

ಕಂ॥ ಅಯ್ದುಂ ಮುಖದ ಭವಂಗೀ
ರಯ್ದುಂ ಭುಜದೀಶ್ವರಂಗೆ ಷಣ್ಮುಖನುದಯಂ ।
ಗೆಯ್ದೇಳನೆಯ ದಿನಂ ಬಂ
ದೆಯ್ದುದೊಡತ್ಯುಗ್ರತಾರಕಾಸುರನಳಿವಂ ॥ ೮೨

ಎಂದಬ್ಜಜನಿತ್ತಾದೇ
ಶಂ ದಿಟಮದುಕಾರಣಂ ಕಪರ್ದಿಯ ತಪಮಂ ।
ಛಂದಂಗೆಡಿಸುವ ವೀರನ
ನಿಂದೆ ವಿಚಾರಿಸಲೆ ವೇಳ್ದುದಿಂತಿದೆ ಕಜ್ಜಂ ॥ ೮೩

ಕಾಳೆಗದ ಮಾತನಾಡಿದಿ
ರಾಳಾಪಂಗೊಳ್ಳನಸುರನತಿಬಳನದಜೆಂ ।
ಸೂಳಿಯ ತಪಮಂ ಚಲಿಯಿಸು
ವಾಳಾಪಂಗೆಯ್ವುದುಚಿತಕಾರ್ಯಂ ಶೌರ್ಯಂ ॥ ೮೪

ಉಪಾಯ ಕೋವಿದ, ಸ್ಥಿತಿಕರ್ತ, ಹಿಂದು ಮುಂದುಗಳನ್ನೆಲ್ಲ ಅರಿಯಬಲ್ಲ ಅಪರೋಕ್ಷ ಜ್ಞಾನಿ; ಆದ್ದರಿಂದಲೇ ಆತ ಇಂದ್ರನಿಗೆ ಹೇಳಿದ. ೮೧. "ಮಹಾವೀರನಾದ ತಾರಕನು ಸೇನಾಮುಖದಲ್ಲಿ ನಿಂತು ಅಖಿಲಭುವನ ವಿಧ್ವಂಸಮಾಡುತ್ತಿರುವಾಗ ನಾನಿರಲಿಲ್ಲವೆ? ಬ್ರಹ್ಮನಿರಲಿಲ್ಲವೆ? ನೀನಿರಲಿಲ್ಲವೆ? ನಾವೆಲ್ಲ ಇದ್ದು ಏನು ಮಾಡಿದೆವು" ಎಂದನು. ೮೨. ಐದುಮುಖ, ದಶಭುಜಗಳೊಡನೆ ಶೋಭಿಸುವ ಜಗದೀಶ್ವರನಿಗೆ ಷಣ್ಮುಖನು ಉದಿಸಿದರೆ, ಅವನು ಹುಟ್ಟಿದ ಏಳನೆಯ ದಿನದಲ್ಲಿಯೇ ತಾರಕನನ್ನು ಕೊಲ್ಲುವನು. ೮೩. ಎಂದು ಹೇಳಿದ ವಿಷ್ಣುವು ಹಿಂದೆ ಬ್ರಹ್ಮನು ತಾರಕನಿಗೆ ವರವನ್ನು ಕೊಟ್ಟಿದ್ದಾನೆ. ಆದ್ದರಿಂದ ಈಗ ನಾವು ಮಾಡಬೇಕಾದದ್ದು ಇಷ್ಟು-ಏನೆಂದರೆ-ಪರಶಿವನು ತಪೋಮಗ್ನನಾಗಿದ್ದಾನೆ. ಅವನ ತಪಸ್ಸನ್ನು ಕೆಡಿಸುವ ವೀರನೊಬ್ಬನನ್ನು ಸಿದ್ಧ ಪಡಿಸತಕ್ಕದ್ದು. ೮೪. ಯುದ್ಧದ ಮಾತು ಸಾಕು; ಅದಕ್ಕೆ ಅಸುರತಾರಕ ಜಗ್ಗುವುದಿಲ್ಲ; ಏಕೆಂದರೆ ಅವನು ಎಲ್ಲರನ್ನೂ ಮೀರಿಸಿದ ಬಲಶಾಲಿ; ಆದ್ದರಿಂದ ಶೂಲಿ ಪರಶಿವನ ತಪೋಭಂಗ ಮಾಡುವುದೇ ಸರಿ! ಅದೇ ನಮ್ಮ ಶೌರ್ಯ ಹಾಗೂ ಕಾರ್ಯ.

ವ|| ಎಂದು ಚಕ್ರಧರಂ ಶಕ್ರನೊಳ್ ತಕ್ಕಳಿದು ನುಡಿಯೆ ತಮ್ಮೊಳ್ಕೊಂದಾಗಿ ವಚನನಿಚಯದಿಂ ವಿಚಾರಿಸಿ ನೋಡಿ ಸಕಳ ಜಗಜ್ಜನ ವಶೀಕರಣ ಪಟುತರಕುಸುಮಕೋದಂಡ ಟಂಕಾರಪ್ರತಾಪಮುಖಂ ಮಕರಪತಾಕನೆಂದಚ್ಚರಿ ಮಿಗೆ ನಿಶ್ಚಯಿಸಿ ಪಂಚೇಶುವಿಂದಲ್ಲದೆ ಪಂಚಮುಖನ ತಪಂ ಸಂಚಲಿಸದೆಂಬ ಸಂಚಮನಱೆದು ಕಾಮನಂ ಕರೆಯಿಸಲ್ವೇಡಿ ಸರಸಿಜಾಕ್ಷಂ ಪುರಂದರನ ಮುಖಮಂ ನೀಡಾಗದೆ ನೋಡಿದಾ ಪ್ರಸ್ತಾವದೊಳ್,

ಪರಮಸ್ವಾಮಿ ಜಟಾಧರಂ ಗಂಗಾಧರಂ ಕಾಲಿಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೮೫

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ತಾರಕಾಸುರ ಯುದ್ಧವರ್ಣನಂ
ಷಷ್ಠಾಶ್ವಾಸಂ

ವ|| ಎಂದು ವಿಷ್ಣುವು ದೇವೇಂದ್ರನಿಗೆ ತಿಳಿಸಿದನು. ಎಲ್ಲರೂ ಒಂದಾಗಿ ಯೋಚಿಸಿದರು. ಇದಕ್ಕೆ ಸಕಲ ಜಗಜ್ಜನವಶೀಕರಣ ಪಟುವೂ ಕುಸುಮಾಯುಧನೂ ಮಕರಕೇತನನೂ ಆದ ಮನ್ಮಥನಲ್ಲದೆ ಇತರರಿಗೆ ಸಾಧ್ಯವಿಲ್ಲ ಎಂದು ಎಲ್ಲರೂ ಒಪ್ಪಿದರು. ಈ ಸಂದರ್ಭದಲ್ಲಿ ಮನ್ಮಥನನ್ನು ಕರೆಯಿಸಬೇಕೆಂದು ಬಯಸಿ ನಾರಾಯಣನು ದೇವೇಂದ್ರನ ಕಡೆ ದೃಷ್ಟಿ ಹೊರಳಿಸಿದನು.

ಸಪ್ತಮಾಶ್ವಾಸಂ

ವಸಂತೋದ್ಯಾನ ಮದನಪ್ರಯಾಣ ಪ್ರಾರಂಭ ವರ್ಣನಂ

ಕಂ॥ ವರಸುರನರೋರಗವ್ರಜ –
ಕಿರೀಟಪದಯುಗನತಿಸ್ವತಂತ್ರಂ ಶರ್ವಂ ।
ಹರಿನಧಿಕಾಕ್ಷಂ ಸಲೆ ಭ –
ಕ್ತರಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ॥ ೧

ಪುರುಹೂತಂ ಹರಿ ನೋಡಿದ
ಪರಿಯರಿ ತಾನಜೆದು ಮಂತ್ರಿವಾಚಸ್ಪತಿಯಂ ।
ಕರೆದೀಗಳೆ ಕಾಮನನತಿ–
ಭರದಿಂದೊಡಗೊಂಡು ಬರ್ಪುದೆಂದಿಂತೆಂದಂ ॥ ೨

ಇರ್ದೀ ತೆಱನಿದು ನೀನಜೆ–
ದಿರ್ದುದೆ ನಿನಗಱಿಪಲಿಲ್ಲ ಕಾರ್ಯಸ್ಥಿತಿಯಿಂ ।
ಸಾರ್ದತಿವೇಗದೆ ಶೂರ್ಪಕ
ಮರ್ದನನಂ ತರ್ಪುದಾವ ತೆಱದಿಂ ಜೀವಾ ॥ ೩

ಎಂದು ಬೆಸಸತ್ತುಮಿಱಿ ನಡೆ
ತಂದಂ ಗುರು ಮದನನಲ್ಲಿಗಮಲಿನದೇಹಂ ।
ಸಂದ ಕಳಾವ್ಯೂಹಂ ಗುಣ
ಸಂದೋಹಂ ಗಗನಗಮನಪುಷ್ಪಕವಾಹಂ ॥ ೪

೧. ಶ್ರೇಷ್ಠರಾದ ಸುರರು, ನರರು ಮತ್ತು ಉರಗ (ನಾಗ)ರು ಇವರಿಂದ ನಮಸ್ಕರಿಸಲ್ಪಟ್ಟ ಪದಯುಗವುಳ್ಳ ಸ್ವತಂತ್ರನೂ, ಶರ್ವನೂ, ಮುಕ್ಕಣ್ಣನೂ ಆದ ಹರನೆನಿಸಿದ ಹಂಪೆಯ ವಿರೂಪಾಕ್ಷನು ನಮಗೆ ಸದ್ಭಕ್ತಿಯನ್ನು ಕರುಣಿಸಲಿ. ೨. ವಿಷ್ಣು ತನ್ನ ಕಡೆ ನೋಡಿದುದರ ಇಂಗಿತವನ್ನು ಇಂದ್ರನು ಅರಿತನು. ಆತ ಮಂತ್ರಿಮುಖ್ಯನಾದ ಬೃಹಸ್ಪತಿಯನ್ನು ಕರೆದು "ಈ ಕೂಡಲೆ ಕಾಮನನ್ನು ಕರೆದು ತರಬೇಕು" ಎಂದು ಸೂಚಿಸಿದನು. ೩. ಎಲೈ ದೇವಗುರುವೆ, ಇರುವ ವಿಷಯ ಇದಿಷ್ಟು! ಇವೆಲ್ಲವೂ ನಿನಗೆ ತಿಳಿದೇ ಇದೆ! ಈ ಬಗೆಗೆ ಹೆಚ್ಚು ಹೇಳಬೇಕಾದುದೇನೂ ಇಲ್ಲ! ಈಗ ಅತಿತ್ವರೆಯಿಂದ ಮನ್ಮಥನನ್ನು ಹೇಗಾದರೂ ಮಾಡಿ ಕರೆತರಬೇಕು! ೪. ಇಂದ್ರನ ಮಾತಿನಂತೆ ನಿರ್ಮಲಾತ್ಮನಾದ ಗುರುಮನ್ಮಥನಲ್ಲಿಗೆ ಬಂದನು. ಆತ ಸಕಲಕಲಾಪ್ರವೀಣ, ಸದ್ಗುಣಶಾಲಿ; ಪುಷ್ಪಕವಿಮಾನದಲ್ಲಿ ಗಗನಮಾರ್ಗದಿಂದ ಆಗಮನಿಸಿದನು.

ಕಂ॥ ನಡೆತಂದು ಮುಂದೆ ಚೆಲ್ವಿಂ
ದಿಡಿದ ರತೀಶ್ವರನ ರಾಜಧಾನಿಯನೊಳಪೊ ।
ಕ್ಕೆಡೆಯುಡುಗದೆ ನೆರೆದರಮನೆ
ಗೆಡೆಯಾಡುವ ಲಲನೆಯರ್ಕಳಂ ನೋಳ್ಪಾಗಳ್ ॥ ೫

ತೆಗೆದೆಸುವ ಪುಷ್ಪಚಾಪನ
ಮುಗುಳಂಬಿಂಗೆಣೆಯೆನಿಪ್ಪ ವಧುಪೂರ್ವಳ್ ಮೆ ।
ಲ್ಲಗೆ ಬಂದಳ್ ಮನಸ್ಥನೋ
ಲಗಕ್ಕೆ ಶತಪತ್ರದಾತಪತ್ರದ ನೆಳಲೊಳ್ ॥ ೬

ನೇವುರದ ಮುದ್ರಿಕೆಯ ಮಧು
ರಾವರಣಧ್ವನಿ ಬೃಹಸ್ಪತಿಯ ಕಿವಿವುಗೆ ಸದ್ ।
ಭಾವಕಿಯೊರ್ವಳ್ ಬಂದಳ್
ಕಾಮನ ಸಭೆಗೆಸೆವ ರತ್ನಮುಕುರದ ತೆಱದಿಂ ॥ ೭

ಬಸರುಹದಳದೊಳ್ ಚಂದನ
ರಸಮಂ ನೆಱೆ ತೀವಿಕೊಂಡು ಮೆಲ್ಲಡಿಯಿಡುತುಂ ।
ಪೊಸಜವ್ವನೆ ನಡೆತಂದಳ್
ಕುಸುಮಾಸ್ತ್ರನ ಗಟ್ಟಿವಳ್ತಿಯೊರ್ವಳ್ ಬನದಿಂ ॥ ೮

ಇಂಬಾಗಿರೆ ವರಹಿಮಕರ
ಬಿಂಬದ ಬೆಂಬಳಿಯೊಳಿಳಿವ ತಣ್ಣಿದಿರ್ಗಳಿನಲ್ ।
ಪೊಂಬಾಳೆಯ ಚಮರಮದಾ
ಲಂಬಿಸೆ ಪಿಡಿದೊರ್ವ ಚಂದ್ರಮುಖಿ ನಡೆತಂದಳ್ ॥ ೯

೫. ಬಂದ ಬೃಹಸ್ಪತಿ ಚೆಲುವುವೆತ್ತ ರತೀಶ್ವರ ರಾಜಧಾನಿಯನ್ನು ಪ್ರವೇಶಿಸಿದನು. ಅಲ್ಲಿಯ ಅರಮನೆಯಲ್ಲಿ ಚೆಲುವೆಯರಾದ ಲಲನೆಯರು! ಎವೆಯುಡುಗದೆ ಅವರನ್ನು ಕಂಡನು! ೬. ಅವರಲ್ಲಿ ಒಬ್ಬಳು ವಧು; ಅವಳು ಕುಸುಮಾಯುಧನ ಮೊಗ್ಗೆಯ ಅಂಬಿನಂತೆ ಬೆಳಗುತ್ತಿದ್ದಾಳೆ. ಆಕೆ ಕಮಲದ ಕೊಡೆಯ ನೆರಳಿನಲ್ಲಿ ಮೆಲ್ಲಗೆ ಕಾಮನ ಓಲಗಶಾಲೆಗೆ ಬಂದಳು. ೭. ಮತ್ತೊರ್ವ ಭಾವಕಿ; ಆಕೆಯ ನೂಪುರ ಮುದ್ರಿಕೆಯ ಮಧುರನುಣ್ಣರ ದೇವಗುರುವಿನ ಕಿವಿಗೆ ಕೇಳುತ್ತಿರಲು ಆಕೆ ರತ್ನ ದರ್ಪಣದಂತೆ ಕಾಮನ ಸಭೆಗೆ ಬಂದಳು. ೮. ಮತ್ತೊಬ್ಬಳು ಹೊಸಯೌವನದ ಗಟ್ಟಿಗಾರ್ತಿ. ಅವಳು ಕಮಲದೆಲೆಯಲ್ಲಿ ಚಂದನರಸವನ್ನು ತುಂಬಿಕೊಂಡು ಮೆಲ್ಲಡಿಯಿಡುತ್ತಾ ಬನದಿಂದ ಪುಷ್ಪಚಾಪನ ಓಲಗಕ್ಕೆ ನಡೆತಂದಳು. ೯. ಮತ್ತೊಬ್ಬಳು ಇಂದುಮುಖಿ; ಅವಳು ಚಂದ್ರಬಿಂಬದಿಂದ ಇಳಿವ ತಣ್ಣನೆಯ ಕಿರಣಗಳೊ ಎಂಬಂತೆ ಇರುವ ಹೊಂಬಾಳೆಯ ಚಾಮರವನ್ನು ಹಿಡಿದು ನಡೆತಂದಳು.

ಕಂ॥ ಪ್ರಬಳನವರತ್ನರೋಚಿಃ
ಶಬಳಿತ ದರ್ಪಣಮನಾಂತು ಮುಂದೆಯ್ತಂದಳ್ ।
ನಿಬಿಡತರ ಸುಕರ ಪುಷ್ಪ-
ಸ್ತಬಕದ ಬೆಳ್ಗೊಡೆಯ ನೆಳಲೊಳಂಗನೆಯೊರ್ವಳ್ ॥ ೧೦

ವ॥ ಅಂತವರ ನಿರತಿಶಯ ಸ್ವಭಾವ ಸೌಂದರ್ಯಸೌಕುಮಾರ್ಯಂಗಳಂ ಕಂಡು ಬೃಹಸ್ಪತಿ ಮನದೊಳಳಿಪುತ್ತಂ ಬುದ್ಧಿಯಳ್ ಬೆದರುತ್ತಂ ಚಿತ್ತದೊಳ್ ಕೌತುಕಂಬಡುತ್ತುಂ ನಡೆತಂದರ ಮನೆಯ ಮುಂದೆ ಪುಷ್ಪಕಮನಿಳಿದೊಪ್ಪುವ ದರ್ಪಭೂಷಣಮೆನಿಸಿದ ದರ್ಪಕಾಸ್ಥಾನಮಂ ಪುಗುತರ್ಪಲ್ಲಿ,

ಸ್ರ॥ ಮುಂತಿರ್ದಂ ಪುಷ್ಪಮಾಲಾನಿಚಯರಚಿತ ಸೌರಭ್ಯಲೋಲುಪ್ತಭೃಂಗೀ -
ಸಂತಾನಾಬದ್ಧಧಾರಾನಿಳಯವಳಯ ಮಧ್ಯ ಪ್ರದೇಶಪ್ರರತ್ನಾ ।
ನಂತಪ್ರದ್ಯೋತವೀಧೀಪ್ರಯುತನಿಯತ ಸಿಂಹಾಸನಾರೂಢತಾನಿ-
ಶ್ಚಿಂತಂ ಶೃಂಗಾರಕಾಂತಂ ಜನವಿನುತರತೀನಾಥನಾನಂದಯೂಥಂ ॥ ೧೧

ವ॥ ಅಂತಿರ್ದು ಮದನಭೂಭುಜನಂ ತ್ರಿದಶಾಚಾರ್ಯಂ ದೂರದಿಂ ನಿರೀಕ್ಷಿಸುತ್ತುಂ ಬರ್ಪಾಗಳ್ ಮುಂತೆ ಮಗಮಗಿಪ ಕದಂಬಕುಸುಮದ ಪೊಸಗಂಪಿಂ ಪೊರೆದು ಸಾರ್ವರ್ತುಕಮೆನಿಸಿ ಕೊರ್ಬಿ ಬೆಳೆದ ಕೇಳೀವನದ ನಡುವೆ ನಿಂದ ನೀಲದ ನೆಲೆಗಟ್ಟಿಂಗೆ ನೆಲೆಯಾದ ಮುತ್ತಿನ ಬೆಳಗಿನ ಬೆಳ್ದಿಂಗಳ ಭಿತ್ತಿಗಳ ಮೇಲೆ ತರತರದಿಂ ಪರಪಿದ ಕೈರವದ ನುಣ್ಗೆಸಳ ಸಣ್ಣ ಜಂತೆಗಳನಾಂತ ಕೇತಕಿಯ ನೀಳ್ದ ದಳದ ಪೆಟ್ಟಗೆಗಳೊಟ್ಟಜೆಗಳಿಂ ಮತ್ತುಂ ಮುತ್ತಿ ಮತ್ತವಾರಣಮಂ ನವೀನಗ್ರಂಥದಿಂ ತವೆ ಪೊರೆದ ದವನದ ದಾರವಂದದೊಳಚ್ಚೊತ್ತಿ

೧೦. ಮತ್ತೊಬ್ಬಳು ಅಂಗನೆ; ಆಕೆ ನವರತ್ನಖಚಿತವಾದ ದರ್ಪಣವನ್ನು ಹಿಡಿದು, ದಟ್ಟವಾದ ಶ್ರೇಷ್ಠ ಕುಸುಮಗಳ ಗೊಂಚಲುಗಳುಳ್ಳ ಬೆಳ್ಗೊಡೆಯ ನೆಳಲಿನಲ್ಲಿ ಬರುತ್ತಿದ್ದಾಳೆ. ವ॥ ಹೀಗೆ ಅವರ ಸ್ವಭಾವ ಸೌಂದರ್ಯಗಳನ್ನು ಕಂಡು ಬೃಹಸ್ಪತಿಯೂ ಅಳುಕಿದನು; ಆತ ಪುಷ್ಪಕದಿಂದ ಇಳಿದು ಕಾಮನ ಆಸ್ಥಾನವನ್ನು ಪ್ರವೇಶಿಸುವಾಗ-

೧೧. ಮುಂದೆ ನೋಡಿದರೆ ಮನ್ಮಥ! ಆತ ಓಲಗದಲ್ಲಿ ಸಿಂಹಾಸನಾರೂಢನಾಗಿದ್ದಾನೆ; ಅಲ್ಲಿ ಅಲಂಕರಿಸಿರುವ ಪುಷ್ಪಮಾಲೆಗಳ ಸುಗಂಧಕ್ಕೆ ಮುತ್ತಿರುವ ದುಂಬಿಗಳ ಮೊತ್ತಗಳು, ಶ್ರೇಷ್ಠರತ್ನಗಳ ಪ್ರಭೆಗಳಿಂದ ದೇದೀಪ್ಯಮಾನವಾದ ಸಿಂಹಾಸನ; ಅದರ ಮೇಲೆ ಜನಸ್ತುತ್ಯನೂ, ಸ್ವತಂತ್ರನೂ, ಆನಂದಮೂರ್ತಿಯೂ ಆದ ಶೃಂಗಾರಕಾಂತ ಮನ್ಮಥನು ನಿಶ್ಚಿಂತನಾಗಿ ಕುಳಿತಿದ್ದಾನೆ. ವ॥ ಮನ್ಮಥನು ಬಂದಾಗ ಆದ ವಿಚಿತ್ರಗಳ ವರ್ಣನೆ- ಹಾಗಿದ್ದ ಮನ್ಮಥರಾಜನನ್ನು ದೇವಗುರು ದೂರದಿಂದ ನಿರೀಕ್ಷಿಸುತ್ತ ಬರುತ್ತಿರುವಾಗ ಮುಂದೆ ಗಮಗಮಿಪ ನೀಪಕುಸುಮಗಳ ಹೊಸಕಂಪು ಹಬ್ಬಿದೆ, ಎಲ್ಲ ಋತುಗಳಲ್ಲಿಯೂ ಕೊಬ್ಬಿ ಬೆಳೆದ ಕದಳೀವನ, ಅದರ ನಡುವಿನಿಂದ ನೀಲದ ನೆಲೆಗಟ್ಟಿಗೆ ನೆಲೆಯಾದ ಮುತ್ತಿನ ಬೆಳ್ದಿಂಗಳ ಭಿತ್ತಿಗಳು, ಅವುಗಳ ಮೇಲೆ ವಿಧವಿಧದಿಂದ ಹರಡಿದ ನೈದಿಲೆಯ ನುಣ್ಗೆಸಳ ಸಣ್ಣ ಜಂತೆಗಳು, ಅವುಗಳನ್ನು ಹೊಂದಿದ ಕೇದಿಗೆಯ

ಬೆಚ್ಚಂತಿರ್ದು ಲಾಮಂಚದ ಮುಚ್ಚಳಮಂ ನೆಮ್ಮಿ ನಿಂತಿರ್ದ ಪಡಿಯರಗೋಗಿಲೆಗಳಿಂ, ಮತ್ತಂ ರವಿಕರಕೆಡೆಗುಡದಿಡಿದು ಸುತ್ತಿ ಮುತ್ತಿ ಕವಲಿಜೆದು ಕವಿದ ಲತಾಂತಜಾಳದ ತಳ್ಳ ನೆಳಲಿಂ ಕಳ್ತಲಿಸುವ ಓಲಗಸಾಲೆಯೊಳ್ ಬಂದುಗೆಯ ಬಣ್ಣದ ತಿಣ್ಣವೆಳಗುಂ ಕಣ್ಣ ಬೆಳಗುಂ ತಮ್ಮೊಳಿರ್ಮಡಿ ಮೆಯ್ದೋಜೆ ಕೆಯ್ದೀವಿಗೆವಿಡಿದಿರ್ಪ ಖೇಚರಾಂಗನೆಯರಿಂ, ಕಾಮನ ರತಿಯ ನನೆಯ ಸಿಂಹಾಸನದಿರ್ಕೆಲದೊಳ್ ನಿಂದು ಮರುಗದ ಪೊಂಬಾಳೆಯ ಸೀಗುರಿಯ ಚಾಮರಗಳಂ ಪಿಡಿದಿರ್ಪ ಹಸ್ತಿನಿಯರಿಂ, ನೆರೆದು ನಿಂದ ಕೀರಾಳಗೆ ಕಾಮಾದ್ಯೈತ ಶಾಸ್ತ್ರ ಸೂತ್ರಮಂ ಪಾಠವ್ಯೋದಿಪ ಪರಿಜ್ಞಾನದಿಂ ಮೆಱೆವ ಚಿತ್ತಿನಿಯರಿಂ, ಮೇಲೆ ಬೀೞ್ದ ಕಾಮದೇವನ ಕಟಾಕ್ಷಕಂಜಿ ರತಿದೇವಿಗಡಿಗಡಿಗೆ ಕೆಯ್ ಮುಗಿದು ಕೆಲಸಾರ್ದಿರ್ಪ ಶಂಖಿನಿಯರಿಂ, ಮತ್ತಂ ಶತಪತ್ರದೊಳಮೃತರಸಮನೋವಿ ತೀವಿ ಮುದದಿಂ ಪಿಡಿದರ್ಪ ಪದ್ಮಿನೀನಾಯಕಿಯರಿಂ, ಹಂಸೆವಿಂಡಿಂಗೆ ನಡೆಗಲಿಪ ಮದಕರಿಯಾನೆಯರಿಂ, ನವಿಲನಾಡಿಪ ನರ್ತಕಿಯರಿಂ, ಮತ್ತಂ ಮಧುಕರಮಂಡಳಿಗೆ ಮಾರಭೂಪನ ಬಿರುದಿನೇೞ್ಗೆಗಳ ಗೀತಗೋಷ್ಠಿಯನೀವ ನೂತನ ಗಾಯಕಿಯರಿಂ, ಶತಪತ್ರವೀಜನಸಮಾಜದಿಂ ರಥಾಂಗಮಿಥುನದ ಸುರತಶ್ರಾಂತಿಯ ನಾದರದಿಂದಾದರಿಸುವ ಚಕ್ರಕುಚೆಯರಿಂ, ಹರಿಣಗಳ ಮುಳಿಸಂ ತಿಳಿಪಿ ಹರಿಣಂಗಳ ನೊಡಗೂಡುವ ಹರಿಣಾಕ್ಷಿಯರಿಂ, ಅಶೋಕೆಯನೊದೆದಂಕುರಮಂ ಪುಟ್ಟಿಪ ಪದ್ಮಮುಖಿಯರಿಂ, ಕುರುವಕಮಂ ಪರಿರಂಭಣದಿಂ ಪೊಱೆಯೇರಿಸುವ ತರುಣಿಯರಿಂ, ಕುಸುಮರಸಗಂಡೂಷದಿಂ ವಕುಳಕುಳಮಂ ಕೋರಕಿತಮಂಮಾಳ್ಪ ಸಾರಮುಖಿಯರಿಂ, ಹೂವಿನ ಬಿಲ್ಲನೊಚ್ಚತಂ ಗೊಂಡರ್ಚಿಸುತ್ತಿರ್ಪ ನಿಡುಪುರ್ವಿನ ನೀೞಿಯರಿಂ, ನನೆಯಂಬಂ ಕೆಯ್ಗೊಳ್ವ ಸವಿನೋಟದ

ಉದ್ದದಳಗಳ ಪೆಟ್ಟಿಗೆಗಳ ಸಮೂಹಗಳಿಂದಲೂ, ಮದ್ದಾನೆಯನ್ನು ಮುತ್ತಿ ನೂತನಗ್ರಂಥದಿಂದ ತುಂಬಿದ ದವನದ ಬಾಗಿಲ ಕದದಲ್ಲಿ ಅಚ್ಚೊತ್ತಿ ಬೆಚ್ಚಿರುವ ಲಾಮಂಚದ ಮುಚ್ಚುಳಗಳು, ಅವುಗಳನ್ನು ಆಶ್ರಯಿಸಿರುವ ರಾಜಕೋಗಿಲೆಗಳಿಂದಲೂ; ಮತ್ತು ರವಿಕಿರಣಗಳಿಗೆ ಅವಕಾಶ ಕೊಡದೆ ಹಬ್ಬಿರುವ ಪೊದೆಗಳು, ಅವುಗಳ ನೆಳಲಿನಿಂದ ಕತ್ತಲಾಗಿರುವ ಓಲಗಶಾಲೆಗಳಲ್ಲಿ ಬಂದುಗೆಯ ಬಣ್ಣದ ಬೆಳಕು ಮತ್ತು ಕಣ್ಣ ಕಾಂತಿಯೂ ಸೇರಿದ್ದರಿಂದ ಮೈದೋರಿದಂತೆ ಕೈದೀವಿಗೆ ಹಿಡಿದಿದ್ದ ಖೇಚರಿಯ ರಿಂದಲೂ; ಕಾಮನ ಪತ್ನಿ ರತಿ, ಅವಳ ಮೊಗ್ಗಿನ ಸಿಂಹಾಸನ, ಅದರ ಎರಡೂ ಕಡೆ ನಿಂತು ಮರುಗಹೊಂಬಾಳೆಯ ಚಾಮರಗಳನ್ನು ಹಿಡಿದಿರುವ ಹಸ್ತಿನಿ ಜಾತಿಯ ಸ್ತ್ರೀಯರಿಂದಲೂ, ನೆರೆದಿರುವ ಕೀರಪಕ್ಷಿಗಳಿಗೆ ಕಾಮಾದ್ವೈತ ಶಾಸ್ತ್ರಸೂತ್ರವನ್ನು ಪಾಠ ಓದಿಸುವ ಪ್ರಜ್ಞೆಯುಳ್ಳ ಚಿತ್ತಿನಿಯರಿಂದಲೂ, ತಮ್ಮ ಮೇಲೆ ಬೀಳುವ ಕಾಮದೇವನ ಕಟಾಕ್ಷಕ್ಕೆ ಹೆದರಿ ರತಿದೇವಿಯ ಅಡಿಗೆ ಮಣಿದು ಪಕ್ಕಕ್ಕೆ ಸರಿದಿರುವ ಶಂಖಿನಿಯರಿಂದಲೂ, ಮತ್ತು ಕಮಲಗಳಲ್ಲಿ ಅಮೃತರಸ ತುಂಬಿ ಹಿಡಿದಿರುವ ಪದ್ಮಿನೀಸ್ತ್ರೀಯರಿಂದಲೂ, ಹಂಸಗಳಿಗೆ ನಡೆಗಲಿಸುವ ಗಜಗಮನೆಯರಿಂದಲೂ, ನವಿಲನ್ನು ಶಿಕ್ಷಿಸುವ ನರ್ತಕಿಯರಿಂದಲೂ, ದುಂಬಿಯ ಹಿಂಡಿಗೆ ಮದನನ ಬಿರುದಿನ ಗೀತಗೋಷ್ಠಿಯನ್ನು ಏರ್ಪಡಿಸುವ ಗಾಯಕಿಯರಿಂದಲೂ, ಕಮಲಗಳನ್ನು ಬೀಸುವವ ರಿಂದಲೂ, ಚಕ್ರವಾಕಗಳ ಸುರತಶ್ರಮವನ್ನು ಆದರದಿಂದ ಆರಿಸುವ ಚಕ್ರಕುಚೆಯ ರಿಂದಲೂ, ಹೆಣ್ಣುಚಿಗರಿಗಳ ಹುಸಿಮುನಿಸನ್ನು ತಿಳಿಸಿ ಹರಿಣಗಳನ್ನು ಒಡಗೂಡವಂತೆ

ಸಾಧಾರಣೆಯರಿಂ, ಮತ್ತಂ ಮಕರಕೇತನನ ಕೇತಕಿಯಲಗಂ ಪರಾಗದ ಸಾರಣೆಯೊಳ್ ಪರಿಮಳದ ಹೊರಗೆತ್ತುವಳಿಕುಂತಳೆಯರಿಂ, ನನೆಯ ಕಠಾರಿಯಂ ಸಿಂಗರಿಪ ಸಂಗಡದ ಮುಗ್ಧೆಯರಿಂ, ತಳಿರ ತೋಮರಮಂ ತಿರ್ದುವ ಕಳಕಂಠನಿನಾದೆಯರಿಂ, ಕೈರವದ ಸಬಳಮನೊಪ್ಪವಿಡಿವ ಕುಮುದಾಕ್ಷಿಯರಿಂ, ಚಕೋರಿಯ ಕುಳಕ್ಕೆ ಬೆಳ್ದಿಂಗಳನೂಡುವ ರೋಹಿಣೀವಿಳಾಸಿನಿಯರಿಂ, ಪೂಗೊಳನಂ ಸಾಗಿಪ ಭೋಗವತಿಯರಿಂ, ಬನಮಂ ಬಳಿಯಿಸುವ ವನಲಕ್ಷ್ಮಿಯರಿಂ, ಮತ್ತಂ ವಿರಿಂಚಿಯ ಹಾಹೆ ಕಾಲೊಳಿಳಲಿನಿಂದಿರ್ಪ ನಾಯಕಿಯರಿಂ, ಇಂದ್ರನ ಮೆಯ್ಗಣ್ಣ ಬಾವುಲಿಯ ದರ್ಪಾಯಿತಿಯರಿಂ, ಕುಬೇರನ ರೂಪು ನೇವುರದೊಳಿಳಿಲ್ಕ ಚಾಪಳೆಯರಿಂ, ಜಿತೇಂದ್ರಿಯರಂ ಗೆಲ್ವ ವಿಜಯಧ್ವಜದ ವೀರೆಯರಿಂ, ತಳಿರ ಗದ್ದುಗೆಯೊಳ್ ಕೆಳಗೆ ಕುಳ್ಳಿರ್ಪ ವಸಂತರಾಜನಿಂ, ಬೆಳ್ದಿಂಗಳ ಹಸೆಯೊಳ್ ಬಳಸಿ ಕುಳ್ಳಿರ್ಪ ಕಳಾಮಾಳೆಯರಿಂ, ಅರಸಾಳ್ ಬೆಸನಂ ಸಾರ್ದಿರ್ಪ ಮಳಯಾನಿಳನಿಂ, ಕೆಲದೊಳ್ ನಿಲಿಸಿದಿಕ್ಕುಚಾಪದಿಂ, ಮಲಂಗಿಸಿದ ಪುಷ್ಪಬಾಣಂಗಳಿಂ, ಸಮಸ್ತ ವಸ್ತುವಿಸ್ತಾರ ವಿಳಸದ್‌ವಿಲಾಸವಿಭ್ರಮಮಂ ಪಡೆದು ಪರಾಗಮಂ ಪಸರಿಸುವ ಸರಸೀರುಹದೆಸಳ ತುಱುಂಗಲ ಸಿಂಹಾಸವದೊಳ್ ಸುರತರುವಂ ಮಲಂಗಿ ವಸಂತನ ಮೇಲೆ ಕಾಲಂ ನೀಡಿ ಶೀತಕರನಿಂ ಶ್ರೀಹಸ್ತಮನೊತ್ತಿಸಿಕೊಳುತ್ತುಂ ನಳನಗುಣದುಕೂಲದ ಮಲ್ಲಗಂಟುಂ ಮೊಲ್ಲೆಯ ಮುಗುಳ ಕಂಕಣಮುಂ ಮಲ್ಲಿಗೆಯ ನನೆಯ ಹಾರಮುಂ ಬಂದುಗೆಯ ಬಾಹುಪೂರಮುಂ ದಾಡಿಮೀ ಬೀಜದ ಕರ್ಣಾವತಂಸಮುಂ ಚಂದನತಿಲಕಮುಂ ಶ್ಯಾಮವರ್ಣಮುಂ ಕೋಮಲಾಂಗಮುಂ ಕಣ್ಣ ಬೆಳಗುಂ ಮುಖದ ಕಾಂತಿಯುಂ ಮಿಗೆ ಸೊಗಸಂ ಮೂಪವಡಿಸೆ

ಮಾಡುವ ಹರಿಣಾಕ್ಷಿಯರಿಂದಲೂ, ಅಶೋಕೆಯನ್ನು ಒದ್ದು ಚಿಗುರಿಸುವ ಪದ್ಮಮುಖಿಯರಿಂದಲೂ, ಗೋರಂಟಿ (ಮದರಂಗಿ)ಯನ್ನು ಆಲಿಂಗಿಸಿ ಮೈಯುಬ್ಬಿಸುವ ಯುವತಿಯರಿಂದಲೂ, ಪುಷ್ಪರಸ ಮುಕ್ಕಳಿಸುವುದರಿಂದ ಬಕುಳವೃಕ್ಷವನ್ನು ಮೊಗ್ಗು ಬಿಡುವಂತೆ ಮಾಡುವ ಕಮಲಮುಖಿಯರಿಂದಲೂ, ಕುಸುಮಾಯುಧನನ್ನು ಅರ್ಚಿಸುವ ಸುಭ್ರು (ಒಳ್ಳೆಯ ಹುಬ್ಬುಳ್ಳ)ಗಳಿಂದಲೂ, ಹೂಬಾಣನನ್ನು ಆರಾಧಿಸುವ ರಮ್ಯ ದೃಷ್ಟಿಯ ಸಾಧಾರಣಸ್ತ್ರೀಯರಿಂದಲೂ, ಮತ್ತು ಮೀನಕೇತನನ ಕೇತಕಿಯ ಬಾಣವನ್ನು ಕುಸುಮಧೂಲಿಯ ಸಾರಣೆಯಿಂದ ಪರಿಮಳಗೊಳಿಸುವ ಅಳಿಕುಂತಳೆ ಯರಿಂದಲೂ, ಹೂವಿನ ಕಠಾರಿಯನ್ನು ಶೃಂಗರಿಸುವ ಸುಂದರಿಯರಿಂದಲೂ, ಚಿಗುರು ಎಂಬ ತೋಮರ (ಆಯುಧ ವಿಶೇಷ)ವನ್ನು ತಿದ್ದುವ ಕಲಕಂಠ ನಿನಾದೆಯರಿಂದಲೂ, ನೈದಿಲೆಯೆಂಬ ಬರ್ಜಿ (ಸಬಳ)ಯನ್ನು ಒಪ್ಪವಾಗಿ ಹಿಡಿವ ಕುಮುದಾಕ್ಷಿಯರಿಂದಲೂ, ಚಕೋರಿಗಳಿಗೆ ಬೆಳ್ದಿಂಗಳನ್ನು ಉಣ್ಣಿಸುವ ರೋಹಿಣೀ ವಿಳಾಸಿನಿಯರಿಂದಲೂ, ಹೂವಿನ ಕೊಳಗಳನ್ನು ಸಾಗಿಸುವ ಭೋಗವತಿಯರಿಂದಲೂ, ವನವನ್ನು ಬೆಳೆಸುವ ವನಲಕ್ಷ್ಮಿಯರಿಂದಲೂ ಮತ್ತು ವಿರಿಂಚಿಯ ಗೊಂಬೆ ಕಾಲಿನಲ್ಲಿ ಧರಿಸಿದ ನಾಯಕಿಯರು, ಇಂದ್ರನ ಮೈಯ್ಗಣ್ಣ ಬಾವುಲಿಯನ್ನುಳ್ಳ ದರ್ಪಗಾತಿಯರು, ಕುಬೇರನ ರೂಪವನ್ನು ನೂಪುರದಲ್ಲಿ ಎಳೆವ ಚಪಲೆಯರು, ಜಿತೇಂದ್ರಿಯರನ್ನು ಗೆಲ್ಲುವ ವಿಜಯಧ್ವಜದ ವೀರೆಯರು, ಚಿಗುರಿನ ಗದ್ದುಗೆಯ ಕೆಳಗೆ ಕುಳಿತಿದ್ದ ವಸಂತರಾಜ ನಿಂದಲೂ, ಬೆಳ್ದಿಂಗಳ ಹಸೆಯಲ್ಲಿ ಬಳಸಿ ಕುಳಿತಿರುವ ಕಲಾಮಾಲೆಯರಿಂದಲೂ, ಅರಸಾಳುಗಳ ವ್ಯಸನವರಿಯದ ಮಲಯಾನಿಲನಿಂದಲೂ, ಪಕ್ಕದಲ್ಲಿ ನಿಲಿಸಿದ ಕಬ್ಬಿನ

ಮೂಱುಂಜಗಮಂ ಮೀರಿ ಗೆಲಲೆಂದು ಸಂಗಡಿಸಿ ಶೃಂಗಾರರಸಮಂಗಂಬಡೆದಂತೆ ಸುಕುಮಾರತೆ ಸಾಕಾರಂ ಗೊಂಡಂತೆ ಸೊಬಗು ಸಂದಣಿಸಿದಂತೆ ನಳನಳಿಕೆ ಬಳೆದಂತೆ ಕಣ್ಗಳ ಭಾಗ್ಯಂ ಕಪಲ್ತಂತೆ ಮನೋರಥಂ ಮದವೇಱಿದಂತೆ ಪುಟವಿಟ್ಟ ಪುಣ್ಯಂ ಪುರುಷಾಕಾರಮಾದಂತಿರ್ದ ಕಂದರ್ಪರಾಜನ ಕಮನೀಯ ರೂಪಂ ಬೃಹಸ್ಪತಿಯ ಕಣ್ಗಳೊಳಪೊಕ್ಕು ಮನಮನಲ್ಲಾಡಿಸೆ ಬುದ್ಧಿ ಬೆದಱಿಯಹಂಕಾರವಳಿದು ಚಿತ್ತಂ ಸೂಸಿ ಮದನವಿಕಾರದ ಜಮ್ಮು ಜಕ್ಕುಲಿಸಿ ಹಮ್ಮಡಂ ಬೋಗಿ ಜೀವಂ ಸುಖದ ಜೀವಕಳೆಯ ಕಳಾಸದ ಕುಣಿಕೆ ಕಳಲ್ದಿ ತನ್ನನಱಿಯದಿದಿರನಱಿಯದೆ ಬಂದುದಂ ಮಱೆದು ಕಜ್ಜಮಂ ತೊಱೆದಿನಿತುಂ ಬೇಗಂ ಸುಖದ ಸೋಂಕಿದುರ್ಕುವ ಕಾಮರಸದ ತೆರೆಯೊಳ್ ತೇಂಕಾಡುತಿರ್ದೆಂತಾನುಮೆಳ್ತು ಸಂತೈಸಿಕೊಂಡು,

ಕಂ॥ ಮಱೆಯುತ್ತೆಳ್ಚಲುತುಂ ಕುಱು –
ಕುಱುಮೆಟ್ಟುತ್ತಡಿಯನೆತ್ತಿ ತಾನೆಂದಿದಿರೆಂ ।
ದಱಿಯದೆ ಕಾಮವಿಕಾರಂ
ನೆಱೆಪತ್ತಿ ಸುರೇಂದ್ರಮಂತ್ರಿ ದಡದಡಿಸುತ್ತುಂ ॥ ೧೨

ಬಿಲ್ಲಿನಿಂದಲೂ, ಮಲಗಿಸಿದ ಹೂಬಾಣಗಳಿಂದಲೂ, ಸಮಸ್ತ ವಿಲಾಸ ವಿಭ್ರಮವನ್ನು ಪಡೆದು ಪರಾಗವನ್ನು ಹರಡುವ ಕಮಲದೆಸಳುಗಳ ಸಿಂಹಾಸನದಲ್ಲಿ ಸುರತರುವನ್ನು ಮಲಗಿಸಿ, ವಸಂತನ ಮೇಲೆ ಕಾಲು ನೀಡಿ, ಚಂದ್ರನಿಂದ ಶ್ರೀಹಸ್ತವನ್ನು ಒತ್ತಿಸಿಕೊಳ್ಳುತ್ತಿರುವ; ಕಮಲದಂಟಿನಲ್ಲಿ ಎಳೆಗಳಿಂದ ಮಾಡಿದ ಬಟ್ಟೆಯ ಮಲ್ಲಗಂಟು ಮತ್ತು ಮಲ್ಲಿಗೆಮೊಗ್ಗಿನ ಕಂಕಣವೂ, ಮಲ್ಲಿಗೆ ಹೂವಿನ ಹಾರವೂ, ಬಂದುಗೆಯ ಬಾಹುಪೂರವೂ, ದಾಡಿಮಬೀಜಗಳ ಕರ್ಣಾಭರಣವೂ, ಶ್ರೀಗಂಧದ ತಿಲಕವೂ, ಶ್ಯಾಮಲವರ್ಣವೂ ಕೋಮಲಾಂಗವೂ, ಕಣ್ಣ ಕಾಂತಿಯೂ ಹೆಚ್ಚುಸೌಂದರ್ಯವನ್ನು ಮೂಡಿಸಲು, ಮೂರುಲೋಕಗಳನ್ನು ಜಯಿಸಲೆಂದು ಶೃಂಗಾರರಸವೇ ದೇಹ ಧರಿಸಿದಂತೆ, ಸೌಕುಮಾರ್ಯವೇ ಆಕಾರ ಪಡೆದಂತೆ, ಸೊಬಗು ಒಟ್ಟುಗೂಡಿದಂತೆ ಕೋಮಲತೆ (ನಳನಳಿಕೆ) ಬೆಳೆದಂತೆ, ಕಣ್ಣುಗಳ ಭಾಗ್ಯವು ಕವಲೊಡೆದಂತೆ, ಮನೋರಥವು ಮದವೇರಿದಂತೆ, ಪುಟವಿಟ್ಟ ಪುಣ್ಯವು ಪುರುಷಾಕಾರವನ್ನು ತಳೆದಂತಿದ್ದ ಕಂದರ್ಪರಾಜನ ಕಮನೀಯರೂಪವು ಬೃಹಸ್ಪತಿಯ ಕಣ್ಣ ಒಳಹೊಕ್ಕು ಮನಸ್ಸನ್ನು ಅಲ್ಲಾಡಿಸಲು, ಬುದ್ಧಿಯು ಬೆದರಿ, ಅಹಂಕಾರವು ಅಳಿದು, ಚಿತ್ತವು ಸೂಸಿ, ಮದನಾಕಾರದ ಜಮ್ಮು ಜಕ್ಕುಲಿಸಿ, ಮೈಮರೆದು (ಹಮ್ಮಡಂಬೋಗು), ಜೀವವು ಸುಖದ ಜೀವಕಳೆಯ ಕುಣಿಕೆ ಸಡಲಿ, ತನ್ನನ್ನೂ ಇದಿರನ್ನೂ ಅರಿಯದೆ ತಾನು ಬಂದ ಕಾರ್ಯವನ್ನೇ ಮರೆತು, ತನ್ನ ಕೆಲಸವನ್ನು ಕೈಬಿಟ್ಟು, ಆದಷ್ಟು ಬೇಗ ಸುಖದ ಸೊಕ್ಕಿನಿಂದ ಉಕ್ಕುವ ಕಾಮರಸದ ತೆರೆಗಳಲ್ಲಿ ಓಲಾಡುತ್ತಿದ್ದೂ, ಎಚ್ಚತ್ತು ಅವನು ಸ್ವಲ್ಪ ಸಂತೈಸಿಕೊಂಡನು. ೧೨. ಮದನರಾಜನ ಸಂದರ್ಶನದಿಂದ ಬೃಹಸ್ಪತಿಗೆ ಕಾಮವಿಕಾರ ಹೆಡೆಯಾಡತೊಡಗಿತ್ತು; ಆತ ಮರೆವು-ಎಚ್ಚರಗಳಲ್ಲಿ ಮುಳುಗಿದ್ದುದರಿಂದ ತಾನು ಯಾರು, ಎದಿರು ಯಾರು ಎಂಬುದರ ಅರಿವೇ ಅವನಿಗಿರಲಿಲ್ಲ; ಈ ಸ್ಥಿತಿಯಲ್ಲಿ

ಮೆಲ್ಲನೆ ಮೆತ್ತನೆ ನಡೆತರು
ತಲ್ಲಲ್ಲಿ ಕುಸುಂಗಿ ಕುರ್ಗಿ ಪಂಚಶರಂಗು ।
ತ್ಫುಲ್ಲನವಕುಸುಮಸಂಕುಳ
ವಲ್ಲರಿಯಂ ಕಾಣ್ಕೆಯಿತ್ತನಮರಾಚಾರ್ಯಂ ॥ ೧೩

ವ॥ ಮತ್ತಮನಂತರಂ

ಕಂ॥ ಕಂಪಂ ಕೆಯ್ಕೊಳುತುಂ ಮೆಯ್
ಜೊಂಪಿಸಿ ಬೀಳ್ದಳಿನಿಕಾಯಸಹಿತಂ ಜೀವಂ ।
ಪೆಂಪಿನ ಸೊಂಪಿನಲಂಪಿನ
ಸಂಪಗೆಯಲರ್ದೊಂಗಲಂ ರತೀಶಂಗಿತ್ತಂ ॥ ೧೪

ವ॥ ಅಂತು ಕಾಣ್ಕೆಯಿತ್ತು ಕುಳ್ಳಿರ್ದ ವಾಚಸ್ಪತಿಯ ಮುಖಮಂ ಮಕರಧ್ವಜಂ ನೋಡಿ,

ಕಂ॥ ಸುರಪತಿ ಸರಸಿಜಭವ ಪಂ
ಕರುಹಾಕ್ಷರ್ ಸುಖದೊಳಿರ್ದಪರೆ ತಾರಕಸಂ ।
ಗರಮೇನಾದುದು ಸುರಕುಲ
ಗುರುವೇ ನೀಂ ಬಂದ ಕಜ್ಜಮೇನೀ ಪದದೊಳ್ ॥ ೧೫

ಎನೆ ಗುರುವೆಂದಂ ತಾರಕ
ನನುವರಮಂ ಮಾಣ್ದು ಮೇರುಗಿರಿತಟದೊಳ್ ಶ ।
ಕ್ರನುಮಜನುಂ ಸರಸಿಜನಾ
ಭನುಮೇಕಾಂತದೊಳಗಿರ್ದು ಕಳುಪಿದರೆನ್ನಂ ॥ ೧೬

ಸುರೇಂದ್ರಮಂತ್ರಿ ತಳಮಳಗೊಂಡಿದ್ದನು. ೧೩. ಅಮರಾಚಾರ್ಯನು ಮೆಲ್ಲಮೆಲ್ಲನೆ ಅಡಿಯಿಡುತ್ತಾ ನಡೆತಂದು ಅಲ್ಲಲ್ಲಿ ವಿಶ್ರಮಿಸಿಕೊಂಡು ಮುಂದೆ ಬಂದು ಕುಗ್ಗಿ ನಿಂತು ಪಂಚಶರನಿಗೆ ನವಕುಸುಮವಲ್ಲರಿ (ಹೊಸ ಹೂವಿನ ಗೊಂಚಲು)ಯನ್ನು ಕಾಣಿಕೆಯಾಗಿ ಒಪ್ಪಿಸಿದನು. ೧೪. ಜೀವನು (ಬೃಹಸ್ಪತಿ) ರತೀಶನಿಗೆ ಸೊಗಸಾದ ಸಂಪಿಗೆ ಹೂವುಗಳ ಗೊಂಚಲನ್ನು ಒಪ್ಪಿಸಿದನು. ದುಂಬಿಗಳು ಅದರ ಕಂಪನ್ನು ಹೀರಿ, ಮೈಜೊಂಪಿಸಿ ಕೆಳಕ್ಕೆ ಬೀಳುತ್ತಿದ್ದವು. ವ॥ ಬೃಹಸ್ಪತಿಯನ್ನು ಕುರಿತು ಮನ್ಮಥ ಹೀಗೆಂದನು. ೧೫. ದೇವರಾಜ (ಇಂದ್ರ), ಕಮಲಾಸನ (ಬ್ರಹ್ಮ) ಮತ್ತು ಕಮಲಾಕ್ಷರು (ವಿಷ್ಣು) ಸುಖವಾಗಿರುವರೆ" ತಾರಕನೊಂದಿಗೆ ಪ್ರಾರಂಭಿಸಿದ ಯುದ್ಧ ಎಲ್ಲಿಗೆ ಬಂತು? ಹೇ ಗುರು, ನೀನು ಇಲ್ಲಿಗೆ ಬಂದ ಕಾರಣವೇನು? ೧೬. ಅದಕ್ಕೆ ಗುರು ಹೇಳಿದನು; - ತಾರಕನೊಡನೆ ಆರಂಭಿಸಿದ ಯುದ್ಧ ಮುಗಿದಿಲ್ಲ; ಇಂದ್ರ, ಬ್ರಹ್ಮ ವಿಷ್ಣುಗಳು ಯುದ್ಧವನ್ನು ಕೈಬಿಟ್ಟು ಮೇರುಗಿರಿಯ ತಪ್ಪಲಲ್ಲಿ ಮಂತ್ರಾಲೋಚನೆಯಲ್ಲಿ ತೊಡಗಿ ನನ್ನನ್ನು ಇಲ್ಲಿಗೆ ಕಳುಹಿಸಿದರು.

ಶ್ರುತಿಗಳ್ ಕಾಣದ ಮನುಗಳ
ಮತಿಯೆಯ್ದದ ಮುನಿಗಳಱಿವು ನಿಲ್ಕದ ಶಾಸ್ತ್ರ ।
ಪ್ರತಿತಿ ನೆಱೆಯಱೆಯದಪ್ರತಿ
ಹತರೂಪನನೆಂತು ಕಾಣ್ಕೆನೆಂತಾನೆಸುವೆಂ ॥ ೨೭

ಕಂ॥ ಇಸುವೆನ್ನೀ ಮನಮಂ ಪ್ರೇ
ರಿಸುವೀತನನಖಿಳಲೋಕಗುರುವಂ ಭರದಿಂ ।
ದಸಮಾಕ್ಷನನಿರದಾರ್ದಿಸು
ವಸಮಾಸ್ತ್ರರ್ ಜಲಧಿವಸನ ವಸುಧೆಯೊಳುಂಟೇ ॥ ೨೮

ತಿಳಿಯದೆ ಶೂಲಿಯ ತಪಮಂ
ಚಲಯಿಸು ನೀನೆಂಬುದಹಿತಮೆನಗೆ ಹೆಱರ ಮ ।
ಕ್ಕಳನಿಕ್ಕಿ ನೆಲೆಯನರಿವುದ
ನಿಳೆಯೊಳಗೆನ್ನಲ್ಲಿ ಮಾಳ್ಪರೇ ಕಮಲಾಕ್ಷಾ ॥ ೨೯

ವ॥ ಅಂತುಮಲ್ಲದೆ

ಕಂ॥ ಹರಿಯಲ್ಲಿಗೆ ತಮಮಂ ಕೇ
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ ।
ಳುರಗನನಟ್ಟುವ ತೆಱದಿಂ
ಹರನಲ್ಲಿಗೆ ತಂದೆ ಕಳಿಪುವರೆ ನೀವೆನ್ನಂ ॥ ೩೦

ಮಗ್ನನಾಗುವಂತೆ ಮಾಡು! ೨೭. ಎಂದ ಹರಿಯ ಮಾತಿಗೆ ಮದನ, ತನ್ನ ತಂದೆ ವಿಷ್ಣುವಿಗೇ ಹೀಗೆಂದನು: ಆಗಲಾಗಲಿ! ಒಳ್ಳೆಯ ಮಾತನ್ನೇ ಆಡಿದಿರಿ! ಸರ್ವೇಶ್ವರನೂ, ಅಪಾರಗುಣನಿಧಿಯೂ ಆದ ಶರ್ವನಿಗೇ ಗುರಿಯಿಡುವ ಕೆಲಸವನ್ನು ಬೆಸಸುವುದು ನಿನಗೆ ಉಚಿತವೆ? ೨೮. ಆ ಪರಶಿವನನ್ನು ಶ್ರುತಿಗಳು ಕಾಣವು, ಮನುಗಳ ಮತಿ ಅವನನ್ನು ಹೊಂದದು, ಮುನಿಗಳ ಅರಿವು ಅರಿಯದು, ಶಾಸ್ತ್ರಗಳು ಕಾಣವು, ಅಂತಹ ಹರನನ್ನು ನಾನು ಹೇಗೆ ಕಾಣಲಿ, ಹೇಗೆ ಗುರಿಯಿಟ್ಟು ಹೊಡೆಯಲಿ. ೨೮. ಬಾಣ ಬಿಡುವ ನನ್ನ ಮನಸ್ಸನ್ನು ಪ್ರೇರಿಸುವವನೇ ಈ ಲೋಕ ಗುರು, ಇಂತಹ ಮುಕ್ಕಣ್ಣನನ್ನು ಗುರಿಯಿಟ್ಟು ಹೊಡೆಯವ ಅಸಮಾಸ್ತ್ರರು ಈ ಜಗತ್ತಿನಲ್ಲಿದ್ದಾರೆಯೆ? ೨೯. ಎಲೈ ಕಮಲನಯನ, "ಶೂಲಿಯ ತಪಸ್ಸನ್ನು ಚಲಿಸುವಂತೆ ಮಾಡು ಎಂದು

ಹರನತ್ಯಧಿಕತಪೋವಿ
ಸ್ತರಮನನಾಗಿರ್ದಪಂ ಮದನ ತತ್ತಪಮಂ ।
ಕೊರಗಿಸಿ ವರಗಿರಿಸುತೆಯೊಳ್
ನೆರೆಪಲ್ಲಿಗೆ ನೀನೆ ಬಲ್ಲೆ ನೀನೆ ಸಮರ್ಥಂ ॥ ೨೨

ತಪಮಂ ಕೆಡಿಪುದು ಮಾಡುವ
ಜಪದಕ್ಷರದೊಳಗೆ ನಿನ್ನ ನನೆಯಂಬಂ ಕೀ ।
ಲಿಪುದಾ ಗಿರಿಜಾವಧುಸೌ
ಖ್ಯಪದಾವರಣಾತ್ಮನೆನಿಸುವುದು ಶಶಿಧರನಂ ॥ ೨೩

ವ॥ ಅಂತುಮಲ್ಲದೆ,

ಕಂ॥ ಪುರುಷರ್ ವಧುಗಳ್ಗೆ ವಧೂ
ತ್ಕರಮಾ ಪುರುಷರ್ಗೆ ಸೋಲ್ವುದುಚಿತಮದಿಲ್ಲೀ ।
ಧರೆಯೊಳ್ ಮದನ ವರಸ್ತ್ರೀ
ಪುರುಷರ್ ನೆರೆ ನಿನಗೆ ಸೋಲ್ವುದೆನಗಿದು ಚಿತ್ರಂ ॥ ೨೪

ಇಂತಪ್ಪ ನಿನಗೆ ಮನ್ಮಥ
ಮುಂತಿದಿರಪ್ಪವರದಾರೊ ಶಶಿಚೂಡನ ತ ।
ಚ್ಛಾಂತಿಯನುಡುಗಿಸಿ ಗಿರಿಜಾ
ಕಾಂತೆಯ ಸಮಸುಖಸಮುದ್ರಮಧ್ಯದೊಳಿರಿಸೈ ॥ ೨೫

ಎನೆ ಮದನಂ ನುಡಿದಂ ನಿಜ
ಜನಕನೊಳಕ್ಕಿದಪ್ಪದಪ್ಪದು ಸರ್ವೇ ।
ಶನನನವಧಿಗುಣನಂ ಶ
ರ್ವನನೆನಿಸುವುದೆನಗೆ ಬೆಸಸುವುದು ನಿಮಗರಿದೇ ॥ ೨೬

ಕೇವಲ ವೀರಾಲಾಪಗಳನ್ನು ಆಡುವನಲ್ಲ. ಏಕೆಂದರೆ ಅವನು ಅಧಿಕಬಲಶಾಲಿ. ೨೨. ಅದರಿಂದ ಅವನಿಗೆ ಸಾವಿಲ್ಲ; ಪರಶಿವನಿಗೆ ಹುಟ್ಟಿದ ಕುಮಾರನಿಂದಲ್ಲದೆ ಅವನಿಗೆ ಬೇರೆ ಮರಣವೇ ಇಲ್ಲ. ಆದ್ದರಿಂದ ಈ ದಿಸೆಯಲ್ಲಿ ನಾವು ಮಾಡಬೇಕಾದ ಕಾರ್ಯವೊಂದುಂಟು! ೨೩. ಪರಮೇಶ್ವರನು ಅತ್ಯಧಿಕ ತಪಸ್ಸಿನಲ್ಲಿ ತನ್ಮಯನಾಗಿದ್ದಾನೆ. ಎಲೆ ಮನ್ಮಥ, ಆ ತಪವನ್ನು ಕರಗಿಸಿ ಗಿರಿಸುತೆಯಲ್ಲಿ ಅವನ ಮನಸ್ಸು ನೆಲೆಸುವಂತೆ ಮಾಡುವುದಕ್ಕೆ ನೀನೊಬ್ಬನೇ ಸಮರ್ಥ! ೨೪. ಪರಶಿವನ ತಪಸ್ಸನ್ನು ಕೆಡಿಸಬೇಕು. ಆತ ಮಾಡುವ ಜಪಾಕ್ಷರಗಳಿಗೆ ನಿನ್ನ ಕುಸುಮಾಸ್ತ್ರಗಳನ್ನು ಬಿಡಬೇಕು. ಶಿವನು ಗಿರಿಜೆಯ ಸುಖಲೋಲನಾಗುವಂತೆ ನೀನು ಮಾಡಬೇಕು. ೨೫. ಪುರುಷರು ವಧುಗಳಿಗೆ ಮತ್ತು ವಧುಗಳು ಪುರುಷರಿಗೆ ಸೋಲುವುದು ಉಚಿತ; ಆದರೆ ಎಲೆ ಮದನ, ನಿನಗೆ ಸ್ತ್ರೀಪುರುಷರೆಲ್ಲರೂ ಸೋಲುವರೆಂಬುದು ಅತಿವಿಚಿತ್ರವಾಗಿದೆ. ೨೬. ಎಲೈ ಮನ್ಮಥ, ಇಂತಹ ಅಸಹಾಯಶೂರ ನೀನು! ನಿನ್ನ ಎದುರಿಗೆ ನಿಲ್ಲುವರು ಯಾರು? ಅದಕ್ಕಾಗಿ ನೀನು ಆ ಚಂದ್ರಮೌಳಿಯ ತಪಸ್ಸನ್ನು ಕೆಡಿಸಿ ಅವನು ಗಿರಿಜೆಯೊಡನೆ ಸುಖಸಾಗರದಲ್ಲಿ

ಶ್ರುತಿಗಳ್ ಕಾಣದ ಮನುಗಳ
ಮತಿಯೆಯ್ದದ ಮುನಿಗಳಱಿವು ನಿಲ್ಕದ ಶಾಸ್ತ್ರ ।
ಪ್ರತತಿ ನೆಱಿಯಱಿಯದಪ್ರತಿ
ಹತರೂಪನನೆಂತು ಕಾಣ್ಬೆನೆಂತಾನೆಸುವೆಂ ॥ ೨೭

ಕಂ॥ ಇಸುವೆನ್ನೀ ಮನಮಂ ಪ್ರೇ
ರಿಸುವೀತನನಖಿಳಲೋಕಗುರುವಂ ಭರದಿಂ ।
ದಸಮಾಕ್ಷನನಿರದಾರ್ದಿಸು
ವಸಮಾಸ್ತರ್ ಜಲಧಿವಸನ ವಸುಧೆಯೊಳುಂಟೇ ॥ ೨೮

ತಿಳಿಯದೆ ಶೂಲಿಯ ತಪಮಂ
ಚಲಯಿಸು ನೀನೆಂಬುದಹಿತಮೆನಗೆ ಹೆಱರ ಮ ।
ಕ್ಕಳನಿಕ್ಕಿ ನೆಲೆಯನರಿವುದ
ನಿಳೆಯೊಳಗೆನ್ನಲ್ಲಿ ಮಾಳ್ಪರೇ ಕಮಲಾಕ್ಷಾ ॥ ೨೯

ವ॥ ಅಂತುಮಲ್ಲದೆ

ಕಂ॥ ಹರಿಯಲ್ಲಿಗೆ ತಮಮಂ ಕೇ
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ ।
ಳುರಗನನಟ್ಟುವ ತೆಱದಿಂ
ಹರನಲ್ಲಿಗೆ ತಂದೆ ಕಳಿಪುವರೆ ನೀವೆನ್ನಂ ॥ ೩೦

ಮಗ್ನನಾಗುವಂತೆ ಮಾಡು! ೨೭. ಎಂದ ಹರಿಯ ಮಾತಿಗೆ ಮದನ, ತನ್ನ ತಂದೆ ವಿಷ್ಣುವಿಗೇ ಹೀಗೆಂದನು: ಆಗಲಾಗಲಿ! ಒಳ್ಳೆಯ ಮಾತನ್ನೇ ಆಡಿದಿರಿ! ಸರ್ವೇಶ್ವರನೂ, ಅಪಾರಗುಣನಿಧಿಯೂ ಆದ ಶರ್ವನಿಗೇ ಗುರಿಯಿಡುವ ಕೆಲಸವನ್ನು ಬೆಸಸುವುದು ನಿನಗೆ ಉಚಿತವೆ? ೨೮. ಆ ಪರಶಿವನನ್ನು ಶ್ರುತಿಗಳು ಕಾಣವು, ಮನುಗಳ ಮತಿ ಅವನನ್ನು ಹೊಂದದು, ಮುನಿಗಳ ಅರಿವು ಅರಿಯದು, ಶಾಸ್ತ್ರಗಳು ಕಾಣವು, ಅಂತಹ ಹರನನ್ನು ನಾನು ಹೇಗೆ ಕಾಣಲಿ, ಹೇಗೆ ಗುರಿಯಿಟ್ಟು ಹೊಡೆಯಲಿ. ೨೮. ಬಾಣ ಬಿಡುವ ನನ್ನ ಮನಸ್ಸನ್ನು ಪ್ರೇರಿಸುವವನೇ ಈ ಲೋಕ ಗುರು, ಇಂತಹ ಮುಕ್ಕಣ್ಣನನ್ನು ಗುರಿಯಿಟ್ಟು ಹೊಡೆಯವ ಅಸಮಾಸ್ತರು ಈ ಜಗತ್ತಿನಲ್ಲಿದ್ದಾರೆಯೆ? ೨೯. ಎಲೈ ಕಮಲನಯನ, "ಶೂಲಿಯ ತಪಸ್ಸನ್ನು ಚಲಿಸುವಂತೆ ಮಾಡು ಎಂದು ನೀನು ಹೇಳಿದ್ದು ತಿಳಿವಳಿಕೆಯಿಲ್ಲದ ಮಾತು! ಇದು ಹೆರರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವಂತೆ ಇದೆಯಲ್ಲವೆ? ೩೦. ಎಲೈ ತಂದೆಯೆ, ನೀವು ನನ್ನನ್ನು ಹರನಲ್ಲಿಗೆ ಕಳಿಸುವುದು ಸೂರ್ಯನ ಹತ್ತಿರಕ್ಕೆ ಕತ್ತಲನ್ನೂ, ಸಿಂಹದ ಹತ್ತಿರಕ್ಕೆ ಆನೆಯನ್ನೂ ನವಿಲಿನ ಹತ್ತಿರಕ್ಕೆ ಸರ್ಪವನ್ನೂ ಕಳುಹಿಸಿದಂತೆ ಇರುವಾಗ ನೀವು ಹೀಗೆ ಮಾಡಬಹುದೆ?

ಎಂದೊಡೆ ಮುಕುಂದನೆಂದಂ
ಕಂದರ್ಪ ಬಹೂಕ್ತಿಯಿಂದಮೇನಪ್ಪುದು ನಿ ।
ನ್ನಿಂದಂ ಸಕಳಜಗಂ ಸುಖ
ದಿಂದಿರ್ಪೊಡೆ ಹರಣದೊಂದು ಹುರುಳಱಸುವರೇ ॥ ೩೧

ಕಂ॥ ಎನೆ ಕಂದರ್ಪಂ ಸಕಳ ಭು
ವನಮೆನ್ನಿಂ ಪರಮಸುಖದೊಳಿರ್ಪುದು ಗಡಮಾ ।
ನೆನಿತಱವನೆನ್ನ ಹರಣಂ
ಘನವೇ ತೆಗೆಯಿಂದೆ ನೂಱು ತೀವಿತ್ತೆಂದಂ ॥ ೩೨

ವ॥ ಎಂದು ಮೀಱೆ ನುಡಿಯುತ್ತೊಡಂಬಟ್ಟು ಬೀಳ್ಕೊಂಡು ನಡೆತಂದು ಪೊಱಗಿಕ್ಕಿದ ಸಿಂಹವಿಷ್ಟರಮನವಷ್ಟಂಭಸುತುನ್ನತಚಿತ್ತಂ ಪುಷ್ಪಧನ್ವಂ ತನ್ನೊಳಿಂತೆಂದಂ

ಚಂ॥ ಪೊಡವಿಯೊಳುಳ್ಳ ಮುಖ್ಯಮುನಿಗಳ್ ಮನುಗಳ್ ಜಿತಕಾಮರುಂ ಸಮಂ-
ತೆಡೆಗುಡದೆನ್ನ ಕಾರ್ಮುಕದ ಟಂಕೃತಿಮಾತ್ರದೊಳತ್ತಲಿತ್ತಲುಂ ।
ಸೆಡೆದು ಸುರುಳ್ದುರುಳ್ದು ರತಿಯುನ್ನತಿಯಿಂ ರತರಪ್ಪರೆಂದೊಡೀ
ಸಡಿಫಡ ಶೂಲಿಗೀಲಿಯ ತಪಂಗಿಪಮೊಡ್ಡಿಪುದೇ ರತೀಶನೊಳ್ ॥ ೩೩

ವ॥ ಎಂದು ಕಂದರ್ಪಕಂ ತನ್ನೊಳ್ ತಾನೆ ಗಜಜೆ ಗರ್ಜಿಸಿ ಮಧುದೂತಿ ಯೆನಿಪ್ಪಿದಿರ್ಗಂತಿಯಂ ಕರೆದು ವಸಂತಾದಿ ಚತುರಂಗಬಲಮಂ ಬರಲ್ವೇಳೆಂದು ಕಳಿಪುವ ಸಮಯಮೇ ವಸಂತಸಮಯಮಾಗೆ

೩೧. ಅದಕ್ಕೆ ಮುಕುಂದ ಹೀಗೆಂದನು- "ಅಪ್ಪ ಮನ್ಮಥ, ಹೆಚ್ಚು ಮಾತನಾಡಿದುದರಿಂದ ಏನು ಪ್ರಯೋಜನ! ನಿನ್ನಿಂದ ಎಲ್ಲ ಜಗತ್ತುಗಳಿಗೂ ಸುಖವಾಗುತ್ತದೆ ಎಂದ ಮೇಲೆ ಒಂದು ಜೀವದ ಹುರುಳನ್ನು ಅರಸಬಹುದೆ? ೩೨. ಅದಕ್ಕೆ ಕಂದರ್ಪನು ಹೇಳಿದನು: -ನನ್ನಿಂದ ಎಲ್ಲ ಜಗತ್ತುಗಳಿಗೂ ಸುಖವಾಗುವುದಾದರೆ ನಾನು ಎಷ್ಟರವನು! ನನ್ನ ಪ್ರಾಣವು ಅದೆಷ್ಟರದು? ಬಿಡಿ, ನನಗೆ ಈಗಾಗಲೇ ನೂರುವರ್ಷ ತುಂಬಿತೆಂದು ಕೊಳ್ಳುವೆನು ವ॥ ಎಂದು ಮನ್ಮಥನು ಮೀರಿ ನುಡಿದು, ಒಡಂಬಟ್ಟು, ಅಲ್ಲಿಂದ ಬೀಳ್ಕೊಂಡು ಹೊರಗಡೆಯ ಸಿಂಹಾಸನಕ್ಕೆ ಒರಗಿಕೊಂಡು ಮನಸ್ಸಿನಲ್ಲಿ ಹೀಗೆ ಯೋಚಿಸಿದನು, ೩೩. ಈ ಜಗತ್ತನಲ್ಲಿರುವ ಮುಖ್ಯಮುನಿಗಳು, ಮನುಗಳು, ಜಿತೇಂದ್ರಿಯರು, ಮೊದಲಾದವರೆಲ್ಲರೂ ನನ್ನ ಬಿಲ್ಲಿನ ಟಂಕಾರಕ್ಕೆ ತತ್ತರಿಸುತ್ತಾರೆ, ತಬ್ಬಿಬ್ಬಾಗಿ ರತಾಸಕ್ತರಾಗುತ್ತಾರೆ ಎಂದ ಮೇಲೆ ಈ ಶೂಲಿಯ ತಪಸ್ಸು ಈ ರತೀಶನಿಗೆ ಯಾವ ಲೆಕ್ಕ? ವ॥ ಹೀಗೆ ದರ್ಪಕನು ಯೋಚಿಸಿ ಮಧುದೂತಿ ಎಂಬ ದೂತಿಯನ್ನು ಕರೆದು ವಸಂತನೇ ಮೊದಲಾದ ತನ್ನ ಚತುರಂಗಬಲವನ್ನು ಬರಹೇಳಿದನು. ಆ

ಕಂ॥ ಶಿಶಿರದ ತವುದಲೆಯುಂ ನವ
ವಸಂತಸಮಯಪ್ರವೇಶಮುಂ ತಮ್ಮೊಳ್ ಸಂ ।
ದಿಸೆ ಬಣ್ಣಿಸಲರಿದಾದೊಡ
ಮೆಸೆವಾ ಋತುಸಂಧಿಯಂ ವಿಭಾಗಿಸಿ ಪೇಳ್ದೆಂ ॥ ೩೪

ವ॥ ಅದೆಂತೆಂದೊಡೆ

ಚಂ॥ ಪೊಳೆವದಿರ್ಗಂತಿಯುಣ್ಮೆ ಮಧುಮಾಸಮೊಡರ್ಚಿದುದನ್ಯಪುಷ್ಪಸಂ
ಕಳರುತಿ ಹತ್ತೆಸಾರ್ದುದು ನವಾಮ್ರಕುಳಂಗಳೊಳಂಕುರಸ್ಥಳಂ ।
ತಳೆದುವು ತಂಬೆಲರ್ ಜನಿಯಿಸಿರ್ದುದು ಬಾಲ್ಯದೊಳತ್ತ ಮಾರನ
ಗ್ಗಳಿಸುವ ಮಾರ್ಗಣಂಗಳೆನೆ ಚಿಂತಿಸುತಿರ್ದನದಾವ ಕಾಲಮೋ ॥ ೩೫

ವ॥ ಆ ಸಮಯದೊಳ್

ನನೆಯಂ ಪೆತ್ತುದು ಮಾಧವಿ
ಮೊನೆಸಿದುವಂಕುರಿಪ ತಾಣಮಿಮ್ಮಾವುಗಳೊಳ್ ।
ಜನುಗಿದುವು ಕೊರಲೊಳಗೆ ಪಿಕ
ನನಂತರಂ ಬಿಲ್ಗೆ ಮದನನನುಮಾನಿಸಿದಂ ॥ ೩೬

ಮ॥ ಮುಗುಳೊತ್ತಿತ್ತದಿರ್ಗಂತಿಯಂಕುರಿಸಿತಾಮ್ರಂ ಬಂದು ಮಂದಾನಿಳಂ
ಪುಗುತೊಂದೊಂದಡಿಯಿಟ್ಟನನ್ಯಭೃತನತೋರೊರ್ಮೆ ಕೂಗಿತ್ತು ಮೆ ।
ಲ್ಲಗೆ ಬಿಲ್ಲಂ ಗೊಲೆಗೆತ್ತಿ ಹೂಡಿದನಮೋಘಾಸ್ತ್ರಂಗಳಂ ದರ್ಪಕಂ
ದಿಗಿಲೆಂದಿತ್ತು ವಿಯೋಗಿವೃಂದಹೃದಯಂ ವಾಸಂತಿಕಾಮಾಸದೊಳ್ ॥ ೩೭

ಸಮಯವು ವಸಂತಋತುವೇ ಆಗಿತ್ತು! ೩೪. ಶಿಶಿರಋತುವಿನ ಕಡೆಯ ದಿನಗಳು ಮತ್ತು ನವವಸಂತಋತುವಿನ ಪ್ರವೇಶ ಇವೆರಡು ಕೂಡಿದ ಸಮಯದ ಬೆಡಗನ್ನು ವರ್ಣಿಸಲು ಅಸಾಧ್ಯ ಆದರೂ ಆ ಋತುಸಂಧಿಯನ್ನು ಬಿಡಿಸಿ ಹೇಳುವೆನು. ೩೫. ಹೊಳೆಯುವ ಮಾಧವಿ ಪುಷ್ಪಗಳು ಕಾಣಿಸಿಕೊಂಡವು, ವಸಂತಋತು ಅಡಿಯಿಟ್ಟಿತು. ಕೋಗಿಲೆಯ ಧ್ವನಿ ಕೇಳತೊಡಗಿತು, ಮಾವಿನ ಮರ ಚಿಗುರಿದವು. ತಂಗಾಳಿ ತೀಡಿತು, ವಸಂತೋದಯದ ಪ್ರಾರಂಭದಲ್ಲಿ ಅಗ್ಗಳಿಸುವ ಮಾರನ ಬಾಣಗಳೊ ಎಂಬಂತೆ ತೋರುವ ಈ ಚಿಹ್ನೆಗಳನ್ನು ಸ್ವಯಂ ಮಾರನೇ ನೋಡಿ ಇದು ಯಾವ ಕಾಲ ಎಂದು ಚಿಂತಿಸುವಂತೆ ಇತ್ತು. ೩೬. ಮಾಲತಿ ನನೆಯಿಟ್ಟಿತು. ರಸಪುರಿ ಮಾವಿನ ಮರಗಳು ಚಿಗುರಿದವು. ಕೋಗಿಲೆಯ ಕಂಠದಲ್ಲಿ ಸ್ವರ ಬದಲಾಯಿತು, ಆಗ ಮನ್ಮಥನು ಬಿಲ್ಲೆತ್ತಲು ಅನುಮಾನಿಸಿದನು. ೩೭. ಆ ವಸಂತಮಾಸದಲ್ಲಿ ಅದಿರ್ಗಂತಿ (ಮಾಧವೀಲತೆ) ಮೊಗ್ಗು ಬಿಟ್ಟಿತು, ಮಾವು ಚಿಗುರಿತು, ಮಂದಮಾರುತ ತೀಡಿತು. ಕೋಗಿಲೆ ಒಮ್ಮೊಮ್ಮೆ ಕೂಗತೊಡಗಿತು, ದರ್ಪಕನು ಬಿಲ್ಲಿಗೆ ಸಿಂಜಿನಿ ಬಿಗಿದು ಅಮೋಘಾಸ್ತ್ರಗಳನ್ನು ಹೂಡಿದನು. ವಿರಹಿಗಳ ಹೃದಯಗಳು ಝಲ್ಲೆಂದವು.

ಚಂ॥ ಕಳಿದುದು ಮಾಗಿ ಕೂಗಿದುದು ಕೋಗಿಲೆ ಪಲ್ಲವಿಸಿತ್ತು ಮಾಮರಂ
ತಳವೆಳಗಾಯ್ತು ಪಾಂಥಜನಮೊಲ್ವವರೊಳ್ ನವಭೋಗದುಜ್ಜುಗಂ ।
ಮೊಳೆತುವು ಕಾಮನೇಸು ಗುಱಿಗಂಡುದು ತಂಡದೆ ನಿಂದ ನಂದನಂ
ತಳೆದುವು ಕೂಡೆ ಕೆಂಪಿನ ಪಸುರ್ಪಿನ ಕರ್ಪಿನ ಬೆಳ್ಪಿನಂದಮಂ ॥ ೩೮

ವ॥ ಆ ಸಮಯದೊಳ್,

ಚಂ॥ ಜನಮನುರಾಗಮೇಱೆ ಲಲನಾಜನಮಂ ತೆಗೆದಪ್ಪಿ ಮೀಱೆ ಸ
ನ್ನುನ್ನಿನಿಕರಂ ಜಪಂ ತಪಮನೋವದೆ ಬಿಟ್ಟತಿದೈನ್ಯದಿಂ ವಧೂ ।
ಸ್ತನತಟವಕ್ಷರಾಗೆ ಮೃಗವೀಧಿಮೃಗೀಕುಲದತ್ತ ಸಾರ್ದು ಬೆ
ನ್ನನೆ ಮಿಗೆ ಪೋಗೆ ಪರ್ಬತಿಳೆಯಲ್ಲಿ ವಸಂತವಿಶಾಲಸಂಪದಂ ॥ ೩೯

ವ॥ ಆಗಳ್

ಮ॥ ಮುದದಿಂದಂ ಮಧುದೂತಿಯಂ ಮೊಗಮಲರ್ಚುತ್ತುಂ ವಿರಾಜಿಪ್ಪ ಚೂ
ತದೆ ಮೆಯ್ಯೊಳ್ ಪುಳಕಂಗಳಂ ನೆಗೆಪುತುಂ ಸಾರ್ದನ್ಯಪುಷ್ಟಕ್ಕೆ ಕಂ ।
ಥದ ಕಾಕಂ ನೆಲೆವೆರ್ಚಿಸುತ್ತೆ ವನಮಂ ವೈವರ್ಣಮಂ ಮಾಡುತು
ರ್ವಿದಲಂಪಿಂದೆ ವಸಂತರಾಜನೊಸೆದೇಳ್ತಂದಂ ಜಗದ್ವಲ್ಲಭಂ ॥ ೪೦

ಚಂ॥ ನಡುಗಿ ವಿಯೋಗಿಗಳ್ ಸೆಡೆದು ಜೀವಮೊಪ್ಪಿಸೆ ದರ್ಪಕಂಗೆ ಮುಂ
ತಡಿಯಿಡಲಾರದೊತ್ತರಿಸೆ ಪಾಂಥಜನಂ ಕಳೆಗುಂದಿ ನಿಂದು ಪಾ
ವಡರ್ದವೊಲಾಗುತುಂ ಬೆದಱೆ ನಲ್ಲರ ಮೆಯ್ಸಿರಿ ನವ್ಯಭೋಗದೊಳ್
ತೊಡರ್ದಿರೆ ಬಂದನಿಂದುಕಳೆಯಂ ದಳವೇಱಿಸುತುಂ ವಸಂತಕಂ ॥ ೪೧

೩೮. ಮಾಗಿ ಕಳೆಯಿತು, ಕೋಗಿಲೆ ಕೂಗಿತು, ಮಾವು ಚಿಗುರಿತು, ದಾರಿಗರಿಗೆ ತಾವು ಒಲಿದವರಲ್ಲಿ ನೆರೆಯುವ ಬಯಕೆಯಾಯಿತು. ಕಾಮನು ಬಿಟ್ಟ ಬಾಣ ಗುರಿ ಮುಟ್ಟಿದವು, ನಂದನವನದಲ್ಲಿ ಕೆಂಪು, ಹಸುರು, ಕಪ್ಪು, ಬಿಳುಪುಗಳ ಅಂದವೇರ್ಪಟ್ಟಿತು. ೩೯. ಜನ ಅನುರಾಗವೇರಿ ಲಲನೆಯರನ್ನು ಬಿಗಿದಪ್ಪಿದರು. ಮುನಿಗಳು ಜಪತಪಗಳನ್ನು ಕೈಬಿಟ್ಟು, ದೈನ್ಯದಿಂದ ವಧುಗಳನ್ನು ಆಲಿಂಗಿಸಿದರು. ಚಿಗರಿಗಳು ಹೆಣ್ಣು ಜಿಂಕೆಗಳನ್ನು ಬೆನ್ನಟ್ಟಿದವು, ವಸಂತವೈಭವವು ಜಗತ್ತಿನಲ್ಲೆಲ್ಲ ಹರಡಿತು. ೪೦. ಮುದದಿಂದ ಮಧುದೂತಿಯ ಮುಖವನ್ನು ಅರಳಿಸುತ್ತಾ, ಬೆಳಗುವ ಮಾವಿನ ಮೈಯಲ್ಲಿ ನವಿರೇರಿಸುತ್ತಾ, ಕೋಗಿಲೆಯ ಕಂಠಕ್ಕೆ ಇಂಪುಧ್ವನಿಯನ್ನುಂಟುಮಾಡುತ್ತಾ, ವನವನ್ನು ವಿವರ್ಣಗೊಳಿಸುತ್ತಾ ಹೆಚ್ಚಿದ ಸೊಗಸಿನಿಂದ ಜಗದ್ವಲ್ಲಭನಾದ ವಸಂತರಾಜನು ಆಗಮಿಸಿದನು. ೪೧. ವಸಂತಮಾಸವು ಅಡಿಯಿಟ್ಟ ಆ ಸಮಯದಲ್ಲಿ ವಿಯೋಗಿಗಳು ನಡುಗಿ ಸೆಡೆದು ಕಾಮನಿಗೆ ಜೀವವನ್ನು ಒಪ್ಪಿಸಿದರು. ದಾರಿಗರು ಮುಂದೆ ಅಡಿಯಿಡಲಾರದೆ ಕಳೆಗುಂದಿ, ಹಾವು ಮೇಲೆ ಬಿದ್ದವರಂತೆ ಹೆದರಿ, ನಲ್ಲರ ಮೆಯ್ಸಿರಿ ನವ್ಯಭೋಗದಲ್ಲಿ ತೊಡಗಿತ್ತು,

ವ॥ ಇಂತು ವಸುಮತಿಯ ಪೆಂಪಿನ ಸಂಪದಮಂ ಸೊಂಪೇಱಿಸುತುಂ ನವ್ಯವನಂಗಳ್ಗೆ ನಳನಳಿಕೆಯನೀಯುತುಂ ಚೂತದ ಮೆಯ್ಯೊಳಂಕುರಮನಾಗಿಸಿ ಕೋಗಿಲೆಗಳ ಕೊರಲಂ ಕೆಳೆಯೇಱಿಸುತುಂ ಅಶೋಕೆಯೊಳ್ ಪಲ್ಲವಮಂ ಪಡೆದು ಕಾಂತಾಜನದ ಕಣ್ಣ ಪುಣ್ಯಮಂ ಕವಲ್ದರಿಯಿಸುತುಂ ಲತಾವಿಸರದೊಳ್ ಕುಸುಮಕುಲಮಂ ಪಸರಿಸಿ ಮಧುಕರಂಗಳ ಮನೋರಥಂಗಳಂ ಪಡೆಯುತುಂ ತರುನಿಕರಕ್ಕೆ ನವೀನಫಲಮಂ ಕೊಟ್ಟು ಶುಕಂಗಳ ಜಿಹ್ವೆಯ ವಿಕಸನಮಂ ಮಾಡುತ್ತುಂ ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಸುತ್ತುಂ ರವಿಕಿರಣಂಗಳಂ ಪುಟವಿಟ್ಟು ರಥಾಂಗಮಂ ನಲವೇಱಿಸುತ್ತುಂ ನಳನಕುಲಮನಲರ್ಚ ಕಲಹಂಸಂಗಳಂ ತಣಿಪುತ್ತುಂ ನದೀಜಳಮಂ ನಿರ್ಮಳಮಂ ಮಾಡಿ ಮೃಗಪಕ್ಷಿಕುಳಮಂ ಮಿಗೆ ತುಷ್ಟಿವಡಿಸುತ್ತುಂ ಚಂದ್ರಕಳೆಯಂ ದಳವೇಱಿಸಿ ಚಕೋರಮಾಲೆಗೆ ಸುಖಮಂ ಕೂಡುತ್ತುಂ ಇಳೆಯೊಳ್ ಬೆಳ್ದಿಂಗಳ್ಗಂ ಪಸರಿಸಿ ವಿರಹಿಗಳಂ ವಿರಥರಂ ಮಾಡುತ್ತುಂ ಕಾಮಬಾಣಕ್ಕೆ ಕಂಪನಿತ್ತುಂ ಕಾಮಿಗಳನಿರ್ಮಯ್ಯಾಣಿಸುತ್ತುಂ ಮಳಯಾನಿಳಂಗೆ ಶೈತ್ಯಸೌರಭ್ಯಮಾಂದ್ಯಮನಿತ್ತು ಸುಖಮಿಥುನದ ಸುರತಶ್ರಾಂತಿಯನಾಱಿಸುತ್ತುಂ ಮುನಿಗಳ ಮನಮನನನ್ನಿತಂ ಮಾಡಿ ವನಿತಾಜನದ ವದನಮನಲರ್ಚುತ್ತುಂ ಸಕಳಭುವನಕ್ಕೆ ರಾಗಾಂಧತೆಯನಿತ್ತು ಸತೀಜನಮನೇಪೊಳ್ತುಂ ನೆರೆಪುತ್ತುಂ ಇಂತು ತನ್ನ ಬರವಿನುರವಣೆಯನುರಾಗಕ್ಕೆ ಅನುರಾಗವೇಱಿ ಮನ್ಮಥರಾಜಂ ರತಿಯನಾಲಿಂಗಿಸಲನುಗೆಯ್ಯುತ್ತಿರೆ ವಸಂತಂ ಸಂತಸದಿಂ ನಡೆತಂದೆಳಗೆಂಪಂ ಪಸರಿಪ ಕಿಸಲಯ ವಿಸರಮಂ ಕಂಪಂ ಕವಲ್ದರಿಯಿಸುವ ಕುಸುಮಮಂಜರಿಯಂ ಮಧುರರಸಮಂ ತೆರೆಮಸಗಿಪ ನವ್ಯಫಲಂಗಳಂ ಮಕರಪತಾಕಂಗೆ ಕಾಣ್ಕೆಯಿಕ್ಕಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು ನಿಂದು

ವ॥ ಹೀಗೆ ಭೂಮಿಯ ಸಂಪತ್ತನ್ನು ಸೊಂಪೇರಿಸುತ್ತಾ, ನವವನಗಳಿಗೆ ಕೋಮಲತೆಯನ್ನು ಕೊಡುತ್ತಾ, ಚೂತದ ಮೈಯಲ್ಲಿ ಅಂಕುರವನ್ನು ಹುಟ್ಟಿಸಿ, ಕೋಗಿಲೆಯ ಕೊರಲದನಿಗೆ ಕಳೆಯೇರಿಸುತ್ತಾ, ಅಶೋಕೆಯಲ್ಲಿ ಚಿಗುರಾಗಿಸಿ ಕಾಂತೆಯರ ಕಣ್ಣ ಪುಣ್ಯವನ್ನು ಕವಲುಗೊಳಿಸುತ್ತಾ, ಬಳ್ಳಿಗಳಲ್ಲಿ ಹೂ ಬಿಡುವಂತೆ ಮಾಡಿ ದುಂಬಿಗಳ ಮನೋರಥಗಳನ್ನು ಪಡೆಯುತ್ತಾ, ತರುಗಳಿಗೆ ಹೊಸಫಲವನ್ನು ಇತ್ತು ಗಿಳಿಗಳ ನಾಲಗೆಯ ರುಚಿಯನ್ನು ಅರಳಿಸುತ್ತಾ, ಹೂಕೊಳಗಳನ್ನು ತಿಳಿಯಾಗುವಂತೆ ಮಾಡಿ ನೀರುಹಕ್ಕಿಗಳನ್ನು ಆನಂದಗೊಳಿಸುತ್ತಾ ರವಿಕಿರಣಗಳನ್ನು ಪುಟಗೊಳಿಸಿ ಚಕ್ರವಾಕಗಳನ್ನು ಹರ್ಷಗೊಳಿಸುತ್ತಲೂ, ಕಮಲಗಳನ್ನು ಅರಳಿಸಿ ಕಲಹಂಸಗಳನ್ನು ತಣಿಸುತ್ತಲೂ, ನದಿಗಳ ನೀರನ್ನು ತಿಳಿಗೊಳಿಸಿ ಮೃಗಪಕ್ಷಿಕುಲವನ್ನು ತುಷ್ಟಿಪಡಿಸುತ್ತಾ, ಚಂದ್ರಕಳೆಯನ್ನು ಹೆಚ್ಚಿಸಿ ಚಕೋರಪಕ್ಷಿಗಳಿಗೆ ಸುಖವನ್ನು ಕೊಡುತ್ತಲೂ ಇಳೆಯಲ್ಲಿ ಬೆಳುದಿಂಗಳನ್ನು ಹರಡಿ ವಿರಹಿಗಳನ್ನು ವಿಫಲಮನೋರಥರನ್ನು ಮಾಡಿಸುತ್ತಾ, ಕಾಮನ ಬಾಣಕ್ಕೆ ವಾಸನೆ ಕೊಟ್ಟು ಕಾಮಿಗಳನ್ನು ಮೈಎರಡು ಮಾಡಿಸುತ್ತಾ, ಮಲಯಾನಿಲನಿಗೆ ತಂಪು-ಕಂಪು-ಮಾಂದ್ಯತೆಗಳನ್ನಿತ್ತು ದಂಪತಿಗಳ ಸುರತಶ್ರಾಂತಿಯನ್ನು ಆರಿಸುತ್ತಾ, ಮುನಿಗಳ ಮನಸ್ಸನ್ನು ಚಲನಗೊಳಿಸಿ, ವನಿತೆಯರ ಮನಸ್ಸನ್ನು ಅರಳಿಸುತ್ತಾ, ಎಲ್ಲ ಲೋಕಗಳಿಗೆ ಅನುರಾಗದ ಮೋಹವನ್ನು ಇತ್ತು ಸತಿಯರನ್ನು ಯಾವಾಗಲೂ ಆದರಿಸುತ್ತಾ ಹೀಗೆ ಆಗಮನದ ವೈಭವದ ಅನುರಾಗಕ್ಕೆ ಮತ್ತಷ್ಟು ಅನುರಾಗವೇರಿಸಿ ಮನ್ಮಥರಾಜನು ರತಿಯನ್ನು ಆಲಿಂಗಿಸಲು ಯತ್ನಿಸುತ್ತಿರಲು,

ಕಂ॥ ಇದೆ ಚತುರಂಗಬಲಂ ಬಂ
ದುದು ಮನ್ಮಥಭೂಪ ನೋಡು ಚತ್ತವಿಸೆನುತುಂ ।
ಸದಮಳಮೋಹನಜನಕಾ
ಸ್ಪದಸೇವೆಯನೊಲ್ದು ತೋಱುತಿರ್ದಂ ಚೈತ್ರಂ ॥ ೪೨

ವ॥ ಅದೆಂತೆಂದೊಡೆ,

ಕಂ॥ ಮಿಳಿ ಲತೆ ಗುಳಮೇ ಪತ್ರಂ
ಫಳರಸಮೆ ಮದಾಂಬು ನೀಳ್ದ ಕೊಂಬೆ ಕರಂ ಪೂ ।
ತೆಳಗೊಂಬುಗಳೇ ದಂತಂ
ಕಳಕಂಠನಿನಾದಮೆಸೆವ ಬೃಂಹಿತನಾದಂ ॥ ೪೩

ವಿಪುಳೋನ್ನತಪಲ್ಲವಮ
ಗ್ರಪಲ್ಲವಂ ಡಿಂಡಿಮಸ್ವನಂ ಮತ್ತಾಳೀ ।
ಚಪಳಸ್ವನಮೆನೆ ಚೂತ
ದ್ವಿಪಘಟೆಯಂ ತೋಱೆದಂ ಸಮಂತು ವಸಂತಂ ॥ ೪೪

ವರಮುಖರಾಗದ ಮೊಗವಡ
ದುರುಕಾಂತಿಯ ವಾಘೆ ಚರಣದಂಕಣಿಯಿಂ ಭಾ ।
ಸುರಪಕ್ಷದ ಪಚ್ಚೆಯ ಪ
ಕ್ಕರಿಯೆಸೆವ ಶುಕಾಶ್ವವೀಧಿಯಂ ಕಾಣಿಸಿದಂ ॥ ೪೫

ವಸಂತನು ಸಂತಸದಿಂದ ಬಂದು, ಎಳೆಕೆಂಪು ಹರಡುವ ಚಿಗುರನ್ನು, ಸುವಾಸನೆಯನ್ನು ಹೆಚ್ಚಿಸುವ ಕುಸುಮಗಳನ್ನು, ಮಧುರರಸವನ್ನು ಹೆಚ್ಚುಗೊಳಿಸುವ ನವಫಲಗಳನ್ನು ಮೀನಕೇತನನಿಗೆ ಕಾಣಿಕೆಯಾಗಿ ಕೊಟ್ಟು, ಅಡ್ಡಬಿದ್ದು ಕೈಮುಗಿದು ನಿಂತುಕೊಂಡನು. ೪೨. ಚೈತ್ರನು ಮನ್ಮಥಭೂಪನನ್ನು ಕುರಿತು "ಇಗೋ, ಚತುರಂಗಬಲ ಬಂದಿದೆ; ಪರಾಂಬರಿಸು!" ಎಂದು ಮೋಹಜನಕವಾದ ತನ್ನ ಸದಮಲ ಸೇನೆಯನ್ನು ನಿವೇದಿಸುತ್ತಿದ್ದಾನೆ. ೪೩. ಇಲ್ಲಿ ಯುದ್ಧಸಾಮಗ್ರಿಗಳು ಇವು-ಲತೆ (ಬಳ್ಳಿ) ಮಿಣಿ, ಪತ್ರ (ಎಲೆ)ವೇ ಗುಳ (ಆನೆಗಳ ಬೆನ್ನ ಮೇಲೆ ಕಟ್ಟುವ ತೊಟ್ಟಿಲು), ಹಣ್ಣುಗಳ ರಸವೇ ಮದೋದಕ, ಉದ್ದವಾದ ಕೊಂಬುಗಳೇ (ಕರಂ) ಸೊಂಡಿಲು, ಹೂ ಬಿಟ್ಟ ಎಳೆಗೊಂಬುಗಳೇ ಆನೆಯ ದಂತಗಳು, ಅವ್ಯಕ್ತಮಧುರವಾದ ಕಂಠಧ್ವನಿಗಳೇ ಆನೆಗಳ ಬೃಂಹಿತ; ೪೪. ಮಾವಿನ ಮರಗಳನ್ನು ಆನೆಪಡೆಗೆ ಹೋಲಿಸಿರುವ ವರ್ಣನವಿದು-ಎತ್ತರದಲ್ಲಿರುವ ಅಗಲವಾದ ಎಲೆಗಳೇ ಬಾವುಟಗಳು, ದುಂಬಿಗಳ ಮೊರೆಯೇ ಡಿಂಡಿಮಸ್ವನ (ನಗಾರಿಧ್ವನಿ) ಎಂಬಂತೆ ಇರುವ ಮಾವಿನ ಮರಗಳೆಂಬ ಆನೆಪಡೆಯನ್ನು ವಸಂತನು ಮದನನಿಗೆ ಪರಿಚಯ ಮಾಡಿಕೊಟ್ಟನು. ೪೫. ಈ ಸೈನ್ಯದಲ್ಲಿ ಗಿಳಿಗಳೇ ಕುದುರೆಪಡೆ. ಅದರ ವರ್ಣನವಿದು-ಗಿಳಿಗಳ ಕೊಕ್ಕಿನ ಕೆಂಪು, ಕುದುರೆಮುಖವಾಡ, ಶ್ರೇಷ್ಠಕಾಂತಿಯೇ (ವಾಘೆ) ಲಗಾಮು, ಚರಣದಂಕಣಿಯಿಂದ-ಪ್ರಕಾಶಮಾನವಾದ

ಎರಡುಂ ಪಕ್ಷಂ ಚಕ್ರಂ
ಪೊರೆದಾಲಿಂಗನೆಯಚ್ಚು ಚಂಚುಪುಟಂ ಪೊ ।
ತ್ತರಿಸುವ ಮುಂಕಣಿಯಾಗಿರೆ
ನೆರೆದಿರ್ದ ರಥಾಂಗರಥಮನೊಪ್ಪಿರೆ ತಂದಂ ॥ ೪೬

ವ॥ ಇಂತು ವಸಂತಂ ಹಸ್ತಶ್ವರಥಂಗಳಂ ತೋಱಿದ ಸಮನಂತರದೊಳ್ ಪದಾತಿಬಲಂ ಬರುತಿರ್ದುದದೆಂತೆನೆ

ಕಂ॥ ಪಾಡುವ ತುಂಬಿಯ ತಲೆಯ
ಲ್ಲಾಡುತ್ತಿರೆ ಬಂದಳಮಮ ಕೃಷ್ಣನ ಮನಮಂ ।
ಷೋಡಶಸಹಸ್ರಭಾಗಂ
ಮಾಡಿದ ಮನ್ಮಥನ ಮೊನೆಯ ನಾಯಕಿಯೊರ್ವಳ್ ॥ ೪೭

ಅನವದ್ಯಕಳಾಕೋವಿದ
ನೆನಿಸಿಯುಮಾತ್ಮಜೆಯೊಳೊಲ್ದು ಬೆರಸಿದ ಚತುರಾ ।
ಸ್ಯನ ರೂಪು ಕಾಲ ಪೊಸಪೂ
ವಿನ ಹಾಹೆಯೊಳಿಳಲೆ ಬಂದಳಂಗನೆಯೊರ್ವಳ್ ॥ ೪೮

ಭಾಸುರತರಸುಕುಮಾರೆ ವಿ –
ಲಾಸದೆ ನಡೆತಂದಳಂದಹಲ್ಯೆಯ ಕತದಿಂ ।
ಸಾಸಿರ ಕಣ್ಣಂ ಮಾಡಿದ
ವಾಸವವಿಜಯಧ್ವಜಪ್ರತಾಪದಿನೊರ್ವಳ್ ॥ ೪೯

ರೆಕ್ಕೆಗಳೇ ಪಚ್ಚೆಯ ಥಡಿ; ಹೀಗಿರುವ ಶುಕಗಳೆಂಬ ಕುದುರೆಯ ಸಾಲುಗಳನ್ನು ವಸಂತನು ಕಾಮನಿಗೆ ತೋರಿಸಿದನು. ೪೬. ಚಕ್ರವಾಕ ಪಕ್ಷಿದಳವೇ ಸೈನ್ಯಕ್ಕೆ ಅಂಗವಾದ ರಥಗಳು, ಚಕ್ರವಾಕಗಳ ಎರಡು ರೆಕ್ಕೆಗಳೇ ರಥದ ಎರಡು ಚಕ್ರಗಳು, ಸ್ತ್ರೀಪುರುಷ ಚಕ್ರವಾಕಗಳ ಆಲಿಂಗನವೇ ರಥದ ಅಚ್ಚು, ಮುಂದುವರಿದ ಚಂಚುಪುಟವೇ ರಥದ ಮುಂಕಣಿ (ಮೂಗುಮರ) ಈ ಬಗೆಯ ರಥಗಳ ಪಡೆಯನ್ನು ತೋರಿಸಿದನು. ವ॥ ವಸಂತನು ಮನ್ಮಥನಿಗೆ ಆನೆ-ಕುದುರೆ-ರಥಗಳ ಪಡೆಗಳನ್ನು ತೋರಿದ ಮೇಲೆ ಅವನ ಕಾಲ್ಬಡೆ ಬರುತ್ತಿರುವ ಬೆಡಗು ಇದು-೪೭. ಅಗೋ! ಆ ಪಡೆಯಲ್ಲಿ ಒಬ್ಬ ಅಗ್ರಗಾಮಿನಾಯಕಿ ಅವಳು; ಶ್ರೀಕೃಷ್ಣನ ಮನಸ್ಸನ್ನು ಹದಿನಾರು ಸಾವಿರ ಭಾಗವಾಗಿ ಮಾಡಿದ ಮೊನೆಯ ನಾಯಕಿ ಇವಳೇ! ದುಂಬಿಗಳು ತಲೆಯಲ್ಲಾಡಿಸಿ ಹಾಡುತ್ತಿರುವಾಗ ಅವಳು ಅಲ್ಲಿಗೆ ಬಂದಳು. ೪೮. ಮತ್ತೊರ್ವ ಅಂಗನೆ ಅಲ್ಲಿಗೆ ಬಂದಳು. ಅವಳ ಪವಾಡವೆಂತಹುದು? ಅನವದ್ಯ (ಶ್ರೇಷ್ಠ) ಕಲಾಕುಶಲನಾದರೂ ಚತುರ್ಮುಖನು ತಾನು ಹುಟ್ಟಿಸಿದ ಮಗಳ (ಶಾರದೆ)ಲ್ಲಿಯೇ ಒಲಿದು ಬೆರೆವಂತೆ ಮಾಡಿದ ಕಲಾಕೋವಿದೆ ಅವಳು. ೪೯. ಮತ್ತೊರ್ವಳು ಮನೋಹರ ಸುಕುಮಾರೆ; ಅವಳು ಅಲ್ಲಿಗೆ ನಡೆತಂದಳು. ಅಹಲ್ಯೆಯ ನಿಮಿತ್ತವಾಗಿ ದೇವಲೋಕದಿಂದ ಇಳಿದ ಸಾವಿರ (ಮೈಗಣ್ಣು) ಕಣ್ಣನಾದ ದೇವೇಂದ್ರನನ್ನು ಗೆದ್ದ (ವಾಸವ ವಿಜಯ) ಪತಾಕೆಯ ಪ್ರತಾಪವೊ

ವ।। ಮತ್ತಮಲ್ಲದೆ,

ಕಂ।। ನೆರೆದು ಪಳಂಚುವ ಕಾಲುಂ
ಗುರದ ರವಂ ಮುಂದೆ ಡೌಡೆವಱಿಯಂ ಪೊಯ್ದು ।
ತ್ತಿರೆ ಕುಸುಮಾಸ್ತ್ರನ ಮದವತ್
ಕರಿಯಂತೆ ಕರೀಂದ್ರಯಾನೆ ಬಂದಳದೊರ್ವಳ್ ।। ೫೦

ವ।। ಮತ್ತಂ ವಸಂತಂ ಪದಾತಿಬಲಮುಂ ತೋಱಿಸುತಿರ್ದನದೆಂತೆಂದೊಡೆ -

ಕಂ।। ಅದೆ ನನೆಯ ಕಠಾರಿಯ ಮರು
ಗದ ಹಱೆಗೆಯ ತಾಮರಸದ ಘಂಟೆಯ ಮುಡಿವಾ ।
ಳದ ಚಮರಿಯ ಕುಮುದದ ಕೊಂ
ತದ ಕೇತಕಿಯೆಸಳ ಸುರಗಿಯಬಳಾನೀಕಂ ।। ೫೧

ತಳಿರ್ಗಳ ಚಕ್ರದ ಕದಳೀ
ದಳಫಲಕದ ಸುರಗಿಯರಲ ಕೌಕ್ಷೇಯದ ಪ ।
ಡ್ಡಳಿಗಳ ಸಬಳದ ಬಂದುಗೆ
ಗಳ ತಿಸುಳದ ಮೊಲ್ಲೆಯಿಟ್ಟಗಳ ಕಾಮಿನಿಯರ್ ।। ೫೨

ಸುರಹೊನ್ನೆಯ ಮುಗುಳ್ಗಳ ತೋ
ಮರ ಲತಾವಳಿಯ ಸೆಲ್ಲೆಹಂಗಳ ಪೊಸಪಾ ।
ದರಿಗಳ ಬಲ್ಲೆಹದೆಸವಂ
ಕುರವೀಧಿಯ ವಜ್ರಮುಷ್ಟಿಯಂಗನೆರ್ಕಳ್ ।। ೫೩

ಎಂಬಂತೆ ಅವಳು ಬಂದಳು. ೫೦. ಮತ್ತೊಬ್ಬಳು ಗಜಗಮನೆ, ಅವಳು ನಡೆತರುವಾಗ ಅವಳ ಮಿಂಚುವ ಕಾಲುಂಗುರದ ಶಬ್ದವು ಮುಂದೆ ಡೌಡೇ (ವಾದ್ಯವಿಶೇಷ) ಹರೆ (ತಮಟೆ) ಬಾರಿಸುವಂತೆ ಇತ್ತು; ಅವಳು ಹೂಬಾಣ (ಕಾಮ)ನ ಮದಗಜದಂತೆ ಬಂದಳು. ವ।। ವಸಂತನು ಈ ಕಾಲ್ಪಡೆಯನ್ನು ಕಾಮನಿಗೆ ಪರಿಚಯ ಮಾಡುತ್ತಿದ್ದಾನೆ- ೫೧. ಅಗೊ! ಮೊಗ್ಗುಗಳೇ ಕಠಾರಿ, ಮರುಗವೇ (ಪತ್ರವಿಶೇಷ) ಡಾಲು, ಕಮಲದ ಘಂಟೆ, ಮುಡಿವಾಳ (ಬೇರು)ವೇ ಚಾಮರ, ನೈದಿಲೆಯೇ ಕೊಂತಾಯುಧ, ಕೇದಗೆಯ ಎಸಳೇ ಸುರಗಿ ಭರ್ಜಿಗಳು, ಅಬಲೆಯರೇ ಕಾಲ್ಪಡೆ. ೫೨. ತಳಿರೇ ಚಕ್ರ, ಬಾಳೆ ಎಲೆಗಳೇ ಫಲಕ (ಹಲಗೆ)ಗಳು, ಸುರಗಿ ಹೂವುಗಳೇ ಖಿಡ್ಗಗಳು, ಪಡ್ಡಳಿ (ಕಣಗಿಲೆ) ಗಳೇ ಸಬಳ (ಭರ್ಜಿ), ಬಂದುಗೆ (ಬಂಧೂಕ)ಗಳೇ ತ್ರಿಶೂಲ (ತಿಸುಳ), ಮಲ್ಲಿಗೆಯೇ ಈಟಿಯಾಗಿರುವ ಕಾಮಿನಿಯರು, ೫೩. ಸುರಹೊನ್ನೆಯ ಮೊಗ್ಗುಗಳೇ ಕಬ್ಬಿಣದ ಒನಕೆಗಳು (ತೋಮರ), ಬಳ್ಳಿಗಳೇ ಚುಚ್ಚುವ ಆಯುಧಗಳು (ಸೆಲ್ಲೆಹ), ಹೊಸಪಾದರಿಹೂವುಗಳೇ ಬಲ್ಲೆಹಗಳು, ಅಂಕುರಗಳೇ ವಜ್ರಮುಷ್ಟಿಗಳು,

ದವನದ ಸೀಗುರಿಗಳ ಪೊ
ಣ್ಮುವ ಪೊಂಬಾಳೆಗಳ ಚಾಮರಂಗಳ ಕಂಪೇ ।
ಱುವ ಸಂಪಗೆಗಳ ಸತ್ತಿಗೆ
ಯ ವಿಚಕಿಲನಿಕಾಯ ಕೇತುದಂಡದ ಸತಿಯರ್ ॥ ೫೪

ತರದಿಂದಂ ಕ್ಷೀರಾಬ್ಧಿಯ
ತರಂಗದಂತೆಸೆವ ಶಶಿಯ ಹಾದಿಯವೋಲ್ ಸುಂ- ।
ದರಿಯರ ಮೋಹರಮಿಂತೊ
ತ್ತರಿಸೆ ನಿರೀಕ್ಷಿಸುತೆ ದರ್ಪಕಂ ಬೆಱಗಾದಂ ॥ ೫೫

ವ॥ ಇಂತು ಬೆಱಗಾಗುತ್ತುಮಿರೆಯಿರೆ ಮತ್ತಂ ಕಂದರ್ಪರಾಜನ ಮುಂದೆ,

ಚಂ॥ ನಳನಳಿಪಿಕ್ಕುದಂಡದ ಧನುವ್ರಜದಿಂ ಶತಪತ್ರಸೂತ್ರದಿಂ
ತೊಳಗುವ ನಾರಿಯಿಂ ತಳಿರ ಕೆಯ್ವೊಡೆಯಿಂ ಕುಸುಮಾಸ್ತ್ರಮಾಲೆಯಿಂ ।
ದಳವೆಡೆ ನಿಂದು ನೀಡಡಿಗೆ ನೀಡಡಿ ಸೇರ್ದಿರೆ ಸಾರ್ದು ಬೊಬ್ಬಿಗೂ
ಟ್ಟೆಳೆ ಬೆಱಗಾಗೆ ನಾರಿಯರ ಬಿಲ್ವಡೆ ತೋಱಿತು ಮೀಱಿ ಲೋಕಮಂ ॥ ೫೬

ಮ॥ ಅಂತುಮಲ್ಲದೆ

ಕಂ॥ ತೊಳತೊಳಪಮೃತಮಯೂಖಂ
ಗಳನೊಸೆದೆಱ್ಪೆಸೆಗೆ ಪಸರಿಸುತ್ತೆ ಚಕೋರಾ ।
ವಳಿ ಬಳಸೆ ನೆರೆದ ಕೈರವ
ಕುಳದೊಳ್ ನಡೆತಂದನಮಮ ತಾರಾಧೀಶಂ ॥ ೫೭

೫೪. ಅಲ್ಲಿರುವ ಸತಿಯರಲ್ಲಿ ಕೆಲವರು ದವನದ ಸೀಗುರಿ (ನವಿಲುಗರಿಯಿಂದ ಮಾಡಿದ ಚವರಿ) ಹಿಡಿದಿದ್ದಾರೆ. ಕೆಲವರು ಹುಟ್ಟಿಬರುತ್ತಿರುವ ಹೊಂಬಾಳೆಗಳ ಚಾಮರ ಹಿಡಿದಿದ್ದಾರೆ. ಕೆಂಪೇರುವ ಸಂಪಿಗೆ ಛತ್ರಿ ಹಿಡಿದಿದ್ದಾರೆ. ಮತ್ತೆ ಕೆಲವರು ಮಲ್ಲಿಗೆ ಮೊತ್ತದ ಕೇತು (ಬಾವುಟ) ದಂಡ ಹಿಡಿದಿದ್ದಾರೆ. ೫೫. ಹಾಲು ಕಡಲಿನ ಸಾಲುಗಳಂತೆ, ಚಂದ್ರವೀಥಿಯಂತೆ ಬಗೆ ಬಗೆಯಾಗಿ ಕಿಕ್ಕಿರಿದು ಬರುವ ಸುಂದರ ಸ್ತ್ರೀಯರ ಸೈನ್ಯವನ್ನು ನೋಡಿ ದರ್ಪಕನೇ ಬೆರಗಾದನು. ವ॥ ಹೀಗಿರುವಾಗ ಆ ಕಾಮನ ಮುಂದೆ, ೫೬. ನಾರಿಯರ ಬಿಲ್ಲ ಪಡೆ ಲೋಕವನ್ನು ಮೀರಿ ತೋರಿತು- ಅದರ ಸ್ವರೂಪವಿದು. ಅವರ ಕೈಗಳಲ್ಲಿ ನಳನಳಿಸುವ ಕಬ್ಬಿನ ಬಿಲ್ಲುಗಳು, ತಾವರೆದಂಟಿನೊಳಗಣ ಎಳೆಗಳೇ ಆ ಬಿಲ್ಲಿಗೆ ಏರಿಸಿದ ದಾರಗಳು (ಸಿಂಜಿನಿ), ತಳಿರುಗಳೇ ಕೈಯಿಂದ ಬಾರಿಸುವ ದುಮ್ಮಟ, ಹೂವಿನ ಬಾಣಗಳು, ಹೀಗೆ ಅವರು ನೀಡಡಿ ಸೇರಿಸಿ ನಿಂತಿರಲು ಲೋಕ ಬೊಬ್ಬೆ ಹಾಕಿತು. ೫೭. ಅಷ್ಟರಲ್ಲಿ ತಾರಾಧೀಶ (ಚಂದ್ರ)ನ ಅದ್ಭುತ ಉದಯವಾಯಿತು! ಆತ ತೊಳತೊಳಗುವ ತನ್ನ ಅಮೃತಕಿರಣಗಳನ್ನು ಎಂಟು ದಿಕ್ಕುಗಳಿಗೂ ಹರಡುತ್ತಿದ್ದಾನೆ. ಚಕೋರ ಪಕ್ಷಿಗಳು ಅವನನ್ನು ಬಳಸಿವೆ. ಹೀಗೆ ಆತನು ಕನ್ನೈದಿಲೆ ಕುಲದೊಡನೆ

ಕ್ರಮದಿಂದೆ ಶೈತ್ಯಸೌರ
ಭ್ಯಮಾಂದ್ಯಮೆಂದೆಂಬ ತನ್ನ ಗುಣದೊಳ್ಪು ರತೀ ।
ರಮಣನನಲ್ಲಾಡಿಸೆ ಮಂ
ದಮಾರುತಂ ಮೋಹಿಸುತ್ತೆ ಮುಂದೆಯ್ತಂದಂ ॥ ೫೮

ವ॥ ಇಂತು ಸಹಕಾರಸಾಮಜಸಮಾಜಮಂ ಕೀರಕದಂಬ ತುರಂಗಸಂಘಮಂ
ರಥಾಂಗರಥವ್ರಾತಮಂ ಸುದತೀಸಮೂಹ ಪದಾತಿಕುಲಮಂ ನಿರೀಕ್ಷಿಸುತ್ತುಂ
ಪರಮಾನುರಾಗದಿಂ ಕಂತುರಾಜಂ ಸಂತಸಮನೆಯ್ದುವಾಗಳ್
ವಸಂತನಿರ್ದಿತ್ತಲವಧರಿಸೆಂದು ನವೀನವಚೋವಿಳಾಸೋನ್ಮತ್ತತೆಯಿಂದಿಂತೆಂದಂ,

ಕಂ॥ ಕಿಸಲಯದ ಕುಸುಮವಿತತಿಯ
ಪೆಸರೇಕಾ ಸ್ಥಾಣುವಿನ ವಿನಿಶ್ಚಲಮನಮಂ ।
ಬಿಸುಗೆಗಳೆದೊಡೆದು ಮೂಡಲ್
ಮಿಸುಪಂಕುರವೊಂದೆ ಸಾಲದೇ ಮದನನೃಪಾ ॥ ೫೯

ಕಂ॥ ಎಸೆವ ನವಾಂಕುರರಸದಿಂ
ಮಸೆದೀ ಕೋಕಿಲನ ಕೊರಲ ಮಧುರಧ್ವನಿಯೊಂ ।
ದೆ ಸಮರ್ಥಂ ಶೂಲಿಯ ತಪ
ದೆಸಕಮನುಡುಗಿಸುವೊಡುಳಿದ ಪರಿಕರಮೇಕಯ್ ॥ ೬೦

ಇಳೆಯೊಳ್ ಸರ್ವೇಶನ ನಿ
ಶ್ಚಳತಪದುರವಣೆಯ ತೇಜಮಂ ದೊರೆಗೆಡಿಸಲ್
ಕಳರವದಿಂ ಬಗ್ಗಿಸುವರ
ಗಿಳಿಗಳ ಚಪ್ಪರಣೆಯೊಂದೆ ಸಾಲದೆ ಮದನಾ ॥ ೬೧

ನಡೆತಂದನು. ೫೮. ಆಗ ತಂಗಾಳಿ ತೀಡಿತು. ಅದರಲ್ಲಿದ್ದ ಶೈತ್ಯ (ತಂಪು) ಸೌರಭ್ಯ (ಕಂಪು) ಮಾಂದ್ಯ (ಮಂದತೆ)ಗಳು ರತಿಪತಿಯನ್ನೇ ಅಲುಗಾಡಿಸಿದವು. ಹೀಗೆ ಜಗತ್ತನ್ನೇ ಮೋಹಗೊಳಿಸುತ್ತಾ ಮಂದಮಾರುತನು ಆಗಮಿಸಿದನು. ವ॥ ಹೀಗೆ ಮಾವುಗಳ ಅನೆಪಡೆ, ಗಿಳಿಗಳ ಅಶ್ವಸೈನ್ಯ, ಚಕ್ರವಾಕ ರಥದಳ, ಸುದತಿಯರ ಕಾಲಾಳು ಕುಲ, ಇದೆಲ್ಲವನ್ನು ನೋಡಿದ ಕಂತುರಾಜನಿಗೆ ಪರಮಾನಂದವಾಯಿತು. ಆಗ ವಸಂತನು 'ಇತ್ತ ಅವಧರಿಸು' ಎಂದು ಕಾಮನ ಮನಸ್ಸನ್ನು ಮತ್ತೊಂದೆಡೆ ತಿರುಗಿಸಿ ನವೀನ ವಚೋವಿಳಾಸವನ್ನು ವಿಸ್ತರಿಸಿ ಹೇಳಿದನು. ೫೯. ಎಲ್ಲೆ ಮದನನೃಪನೆ, ಸ್ಥಾಣುವೆನಿಸಿದ ಆ ಪರಶಿವನ ನಿಶ್ಚಲವಾದ ಮನಸ್ಸಿನ ಬೆಸುಗೆಯನ್ನು ಸಡಲಿಸಿ ಒಡೆಯಲು ನಮ್ಮ ಪಡೆಯಲ್ಲಿರುವ ಕಿಸಲಯ (ಚಿಗುರು)ಗಳು, ಬೆಳಗುವ ಇವುಗಳ ಅಂಕುರವೊಂದೊಂದೇ ಸಾಲದೆ? ಎಂದನು. ೬೦. ಸ್ವಾಮಿ, ಪ್ರಕಾಶಿಸುವ ಹೊಸ ಚಿಗುರುಗಳ ರಸದಿಂದ ಮಸೆದ ಈ ಕೋಗಿಲೆಗಳ ಕೊರಲ ನುಣ್ಣನಿಯೊಂದೇ ಆ ಶೂಲಿಯ ತಪಸ್ಸನ್ನು ಕೆಡಿಸಬಲ್ಲದು ಎಂದ ಮೇಲೆ ಉಳಿದ ಸಿದ್ಧತೆಯೆಲ್ಲ ಮತ್ತೇತಕ್ಕೆ? ಎಂದನು. ೬೧. ಎಲೆ ಮದನ! ಸರ್ವೇಶ್ವರನ ನಿಶ್ಚಲ ತಪಸ್ಸಿನ ತೇಜಸ್ಸನ್ನು ಕೆಡಿಸಬೇಕಾದ ಪಕ್ಷದಲ್ಲಿ ಅರಗಿಳಿಗಳ ಅವ್ಯಕ್ತಮಧುರವಾದ ಗಿಳಿಗಳ ಕೂಗು (ಚಪ್ಪರಣೆ) ಸಾಲದೆ! ಎಂದನು.

ವ॥ ಇಂತಿವರ್ಕೆ ಸೆಡೆಯದೆ ಕಡುಪಿಂದಿಂದುಧರಂ ನಿಂದನಪ್ಪೊಡೆ

ಕಂ॥ ಆರಗಿಳಿಗಳ ಪವಮಾನನ
ತರುಣೀನಿವಹದ ಫಳಪ್ರತಾನದ ಪುಷ್ಪೋ ।
ತ್ಕರದನುಪಮ ಶಬ್ದಸ್ಪ
ರ್ಶರೂಪ ರಸಗಂಧದಿಂದೆ ಶಿವನಂ ಗೆಲ್ವೆಂ ॥ ೬೨

ವ॥ ಅಂತು ಸಕಲ ಜಗಜ್ಜನ ಮನೋನುರಾಗ ಜನನಕಾರಣ ಕರ್ತೃವಪ್ಪ ವಸಂತಂ ಭಾಷೆಗೊಟ್ಟ ಸಮನಂತರದಲ್ಲಿ

ಕಂ॥ ಭರದಿಂದೆ ಬಂದು ನುಡಿದಂ
ವರಹಿಮಕರನೆಸೆವ ಚಂದ್ರಕಾಂತದ ಕಲ್ಲಂ ।
ಕರಗಿಸುವೆನ್ನ ಸುಧಾಮಯ
ಕರಂಗಳಿಂ ಹರನ ಚಿತ್ತಮಂ ಕರಗಿಸುಗುಂ ॥ ೬೩

ವ॥ ಆ ಸಮಯದೊಳುರವಣಿಸಿ ನಡೆತಂದು ಮುಂದೆ ನಿಂದ ಚಂದ್ರಮುಖಿಯರೊಳೊರ್ವಳ್,

ಕಂ॥ ತ್ರಿಣಯನ ತಪಮಂ ಕಿಡಿಸಲ್
ಕ್ಷಣವೇಧಿಗಳೆನಿಸುವೆನ್ನ ತರಳಕಟಾಕ್ಷೇ ।
ಕ್ಷಣಯುಗಮಿರ್ದಂತೀ ನನೆ
ಗಣೆಗಳ್ ಪರ್ಯಂತವೇಕೆ ಮಕರಪತಾಕಾ ॥ ೬೪

ವ॥ ಮತ್ತಮೊರ್ವಳ್,

ಕಂ॥ ಮಾರನೃಪ ನಿಜಧನುಷ್ಟಂ
ಕಾರಮನಾರಾಂಪರಂತದಿರ್ಕೆನ್ನೆಯೆ ಮಂ ।
ಜೀರದ ಮಧುರಧ್ವನಿಯಿಂ
ಘೋರತಪೋಮಯನನಭವನಂ ಪರಿಭವಿಪೆಂ ॥ ೬೫

ವ॥ ಇನ್ನು ಇದಕ್ಕೂ ಚಂದ್ರಮೌಳಿಯು ಜಗ್ಗದಿದ್ದರೆ- ೬೨. ಅರಗಿಳಿಗಳು, ಮಂದ ಮಾರುತ, ತರುಣಿಯರು, ಫಲಗಳು, ಹೂವು ಇವುಗಳ ಕ್ರಮವಾದ ಶಬ್ದ, ಸ್ಪರ್ಶ, ರೂಪು, ರಸ, ಗಂಧ ಎಂಬ ವಿಷಯಗಳಿಂದ ಶಿವನನ್ನು ಗೆಲ್ಲುವೆನು. ವ॥ ಹೀಗೆ ಸಕಲ ಜಗತ್ತಿನ ಜನರ ಮನೋನುರಾಗಕ್ಕೆ ಕಾರಣನಾದ ವಸಂತನು ಭಾಷೆ ಕೊಟ್ಟ ಮೇಲೆ ೬೩. ಅಷ್ಟರಲ್ಲಿ ಅಮೃತಕಿರಣನೆನಿಸಿದ ಚಂದ್ರನು ಪ್ರವೇಶಿಸಿ ಹೇಳಿದನು- ಚಂದ್ರಕಾಂತ ಶಿಲೆಯನ್ನೇ ಕರಗಿಸುವ ನನ್ನ ಸುಧಾಮಯಕಿರಣಗಳಿಂದ ಹರನ ಮನಸ್ಸನ್ನು ಕರಗಿಸಬಲ್ಲೆ ಎಂದು. ವ॥ ಅಷ್ಟರಲ್ಲಿ ಸಡಗರದಿಂದ ಬಂದು ಮುಂದೆ ನಿಂದ ಇಂದುಮುಖಿಯರಲ್ಲಿ ಒಬ್ಬಳು, ೬೪. ಎಲೈ ಮಕರಧ್ವಜನೆ, ಮುಕ್ಕಣ್ಣನ ತಪಸ್ಸನ್ನು ಕೆಡಿಸುವುದಕ್ಕೆ ಕ್ಷಣವೇಧಿ (ಕ್ಷಣದಲ್ಲಿಯೇ ಭೇದಿಸುವ)ಗಳು ಎನಿಸಿರುವ ನನ್ನ ಚಂಚಲ ಕಡೆಗಣ್ಣ ನೋಟಗಳಿರುವಾಗ ಹೂಬಾಣಗಳವರೆಗೂ ಹೋಗುವ ಪ್ರಯಾಸವೇತಕ್ಕೆ? ಎಂದಳು. ೬೫. ಎಲೈ ಮಾರನೃಪನೆ, ನಿನ್ನ ಧನುಷ್ಟಂಕಾರ (ಬಿಲ್ಲನ್ನು ಜೇಗೈದ ಧ್ವನಿ)ವನ್ನು ಯಾರು ತಾನೆ ಎದುರಿಸಬಲ್ಲರು! ಆ ಮಾತು ಹಾಗಿರಲಿ, ಆದರೆ ನನ್ನ ನೂಪುರಗಳ

ವ।। ಎಂದು ಮೀಱೆ ನುಡಿವ ನೀಱಿಯರ ನಡುವಣ ಭಾಮಿನಿಯೋರ್ವಳ್ ಭಾಷೆಗುಡುತ್ತುಮಿರ್ದಳದೆಂತೆಂದೊಡೆ,

ಚಂ।। ಮದನನೃಪಾಲ ಕೇಳ ಭುವನತ್ರಯಮಂ ಕ್ಷಣದಿಂದೆ ಗೆಲ್ದು ಸಿಂ
ಗದ ಘನಕೀರ್ತಿಯಿಂ ತೊಳಗುವಿಕ್ಕುವ ಚಾಪದ ಪುಷ್ಪಬಾಣದ ।
ಗ್ಗದ ನುಡಿಯಿಲ್ಲಿಗೇಕೆ ಮಿಸುಪೆನ್ನಯೆ ಪೌರ್ವಿನ ಕರ್ವುವಿಲ್ಲ ನೋ
ಟದ ನನೆಗೋಲ ಲೀಲೆಯೊಳೆ ಸೋಲಿಸುವೆಂ ಜಿತಕಾಲಶೂಲಿಯಂ ।। ೬೬

ವ।। ಎಂದಿಂತು ಸಂದಣಿಸಿ ಭಾಷೆಗೊಟ್ಟ ವಸಂತಾದಿ ಸಂಮೋಹನ ಬಲಮುಖ್ಯರ ಸುಧಾರಸಪೂರಿತ ಚಾರುವಚನರಚನೆಗಳಂ ಕೇಳ್ದು ಕುಸುಮಾಯುಧಂ ವಿಳಸನ ವಿಜಯಿಗಳಪ್ಪ ನಿಜಭುಜದಂಡಯುಗಳಮಂ ನೀಡಿ ಮದೋನ್ಮತ್ತ ವೀರಾಳಾಪಮುಖರಮುಖನಾಗಿ

ಕಂ।। ಇನ್ನಿರ್ಪನಿರ್ಪನಭವಂ
ಸನ್ನುತತಪದಿಂದಮಿರದೆ ಮಾಣ್ಪಂ ಕಾಣ್ಪಂ ।
ತನ್ನಗ್ಗದ ವೈರಾಗ್ಯದ
ಬಿನ್ನಣಮುಮನೆನ್ನ ಪಂಚಬಾಣದ ಬಲಮಂ ।। ೬೭

ಚಂ।। ಗಣಿದಮದೇವುದಿಕ್ಕುಧನುವುಂ ಕುಸುಮಾಸ್ತ್ರಮುಮೆನ್ನ ಕೆಯ್ಗೆ ಸಂ
ದಣಿಸೆ ಬಳಿಕ್ಕಮೆತ್ತಣ ತಪೋಮಯರೆತ್ತಣ ಶಾಂತಿಭೂಷರೆ ।
ತ್ತಣ ಜಿತಕಾಮರೆತ್ತಣ ದಿಗಂಬರರೆತ್ತಣ ಕರ್ಮನಿಷ್ಠರೆ
ತ್ತಣ ಬುಧರೆತ್ತಣಾತ್ಮವಿದರೆತ್ತಣ ನಿಸ್ಪೃಹರೆತ್ತಣುತ್ತಮರ್ ।। ೬೮

ನುಣ್ದನಿಯಿಂದ ಅಭವನ ಘೋರತಪಸ್ಸನ್ನು ಸುಲಭವಾಗಿ ಕೆಡಿಸಬಲ್ಲೆ ಎಂದಳು. ವ।। ಹೀಗೆ ಮೀರಿ ನುಡಿವ ನೀರೆಯರಲ್ಲಿ ಒಬ್ಬಳು ಹೀಗೆ ಭಾಷೆ ಕೊಟ್ಟಳು. ೬೬. ಎಲೈ ಮದನರಾಜನೆ, ಮೂರುಲೋಕಗಳನ್ನು ಕ್ಷಣಮಾತ್ರದಲ್ಲಿ ಗೆದ್ದು ಅಪಾರ ಕೀರ್ತಿಯನ್ನು ಗಳಿಸಿದ ಕಬ್ಬಿನ ಬಿಲ್ಲು ಮತ್ತು ಹೂಬಾಣಗಳ ಮಾತು ಇಲ್ಲಿ ಅನವಸರ! ಏಕೆಂದರೆ ಮೃತ್ಯುವನ್ನು ಗೆದ್ದ ಆ ಶೂಲಿಯನ್ನು ನನ್ನ ಕಣ್ಣ ಹುಬ್ಬು ಎಂಬ ಕಬ್ಬಿನ ಬಿಲ್ಲಿನ ಕುಡಿನೋಟವೆಂಬ ಹೂಬಾಣದ ಚಳಕದಿಂದಲೆ ಗೆಲ್ಲಬಲ್ಲೆ! ಎಂದಳು. ವ।। ಹೀಗೆ ಪ್ರತಿಜ್ಞೆ ಮಾಡಿದ ವಸಂತ ಸಮ್ಮೋಹನ ಮುಂತಾದ ಪ್ರಮುಖರ ಅಮೃತಮಯವಾದ ಮಧುರ ವಚನಗಳನ್ನು ಕೇಳಿ ಮನ್ಮಥನು ಯುದ್ಧವಿಜಯಿಗಳೆನಿಸಿದ ಭುಜದಂಡಗಳನ್ನು ನೋಡಿ ಮದೋನ್ಮತ್ತನಾಗಿ ಹೇಳಿದನು-೬೭. ಓಹೋ! ಇನ್ನು ಮೇಲೆ ಆ ಅಭವನು ತಪಸ್ಸಿನಲ್ಲಿರುತ್ತಾನೆ! ಇರುತ್ತಾನೆ! ತನ್ನ ತಪಸ್ಸನ್ನು ಬಿಡಲೇಬೇಕು. ಅವನು ತನ್ನ ಅದ್ಭುತ ವೈರಾಗ್ಯವನ್ನೂ ನನ್ನ ಪಂಚಬಾಣಗಳ ಬಲವನ್ನು ಕಾಣುವನು! ೬೮. ಕಬ್ಬಿನ ಬಿಲ್ಲು ಮತ್ತು ಹೂವಿನ ಬಾಣಗಳು ನನ್ನ ಕೈಸೇರಿದಾಗ ನನಗೆ ಈ ತಪಸ್ವಿಗಳು, ಶಾಂತಿಭೂಷಣರು, ಜಿತಕಾಮರು, ದಿಗಂಬರರು, ಕರ್ಮನಿಷ್ಠರು, ಬುಧ (ವಿದ್ವಾಂಸ)ರು, ಆತ್ಮಜ್ಞಾನಿಗಳು ಮತ್ತು ನಿಸ್ಪೃಹರು ಇವರೆಲ್ಲ ಯಾವ ಲೆಕ್ಕ!

ವ॥ ಅಂತುಮಲ್ಲದೆ

ಕಂ॥ ಪರಿಮಳಮನೆಣ್ದೆಸೆಗೆ ಬ
ತ್ತರಿಸುವ ನನೆಗಣೆಗಳಿಂದೆ ಗಿರಿಪತಿತನಯಾ ।
ವಿರಹಾತಪಮೊಗೆಯಲ್ ಶಂ
ಕರನ ತಪಶ್ಛತ್ರದಂಡಮಂ ಖಂಡಿಸುವೆಂ ॥ ೬೯

ಅತಿಭೀಮರ್ ಜಿತಕಾಮರ್
ನುತನಾಮರ್ ಮದನನಿದಿರೊಳಿಲ್ಲೆನೆ ಹೋಹೋ ।
ಸತಿ ಕಾಮಿತಮನದಿಂ ಪಾ
ರ್ವತಿ ಬಳೆವನ್ನೆವರಮಿರ್ಪ ತಪಮೊಡ್ಡಿಪುದೇ ॥ ೭೦

ವ॥ ಅಂತುಮಲ್ಲದೆ

ಕಂ॥ ಸೊಂಪಿಂ ಮುದದಿಂ ಮೋಹನ
ದಿಂಪಿಂ ಸಂತಾಪದಿಂ ವಶೀಕರಣೋದ್ಯತ್ ।
ಸಂಪದದಿಂ ನೆಱೆ ತೋ
ರ್ಪೆಂ ಪಂಚಮುಖಂಗೆ ಪಂಚಬಾಣದ ಸವಿಯಂ ॥ ೭೧

ವ॥ ಎಂದಿಂತು ನಿಜಭುಜಪ್ರತಾಪಾಲಂಕೃತ ವೀರಾಳಾಪಮಂ ಮಾರನೃಪಂ ನುಡಿಯುತ್ತಂ ನಳಿನಗುಣವಿರಚಿತ ನವ್ಯಮುಕೂಲಮಂ ತೆಗೆದು ಬಿಗಿದುಟ್ಟು ದಿವ್ಯಚಂದನಮನುದ್ವರ್ತನಂಗೆಯ್ದು ಪರಾಗದ ತಿಲಕಮನಿಟ್ಟು ಕೇತಕೀದಳದ ಕೂರಲಗಂ ಕಿಗ್ಗಟ್ಟನೊಳಗಡಿಸಿ ವಸಂತಂ ಪೊಸಮಲ್ಲಿಗೆಯ ಸುಣ್ಣನಪ್ಪ ಸಣ್ಣನನೆಯ ವೀರಸೇಸೆಯಂ ಸೂಸೆ ವನಲಕ್ಷ್ಮಿ ಪಳಿಕಿನ ಪರಿಯಾಣದೊಳ್ ಬಂದುಗೆಯ ಕುಸುಮದ ವಿಜಯಾರತಿಯನೆತ್ತೆ ಮಜ್ಜಯ್ಯ ಪೂತುರೆ ಎಂದು ಸರಸಿಜಾಕ್ಷಂ ಪರಸೆ ಲಕ್ಷ್ಮೀದೇವಿಯರ್ ಮೊದಲಾದ ಲಲನಾಜನಂ "ವೀರವಿಭ್ರಮ ವಿಜಯೀಭವ"

೬೯. ಪರಿಮಳವನ್ನು ಎಂಟು ದಿಕ್ಕಿಗೂ ಬೀರುವ ಹೂವಿನ ಬಾಣಗಳಿಂದ ಗಿರಿಜೆಗೆ ವಿರಹತಾಪವು ಉಂಟಾಗುವಂತೆ, ಶಂಕರನ ತಪಸ್ಸೆಂಬ ಛತ್ರದ ದಂಡವನ್ನು ಕತ್ತರಿಸುವೆನು. ೭೦. ಮದನನ ಎದುರಿನಲ್ಲಿ ಅತಿಧೀರರು, ಜಿತೇಂದ್ರಿಯರು, ಸುಪ್ರಸಿದ್ಧರು ಯಾರೂ ನಿಲ್ಲಲಾರರು ಎಂದ ಮೇಲೆ ಒಹೋ! ಸತಿಯನ್ನು ಬಯಸಿದ ಮನಸ್ಸುಳ್ಳ, ಪಾರ್ವತಿ ದೊಡ್ಡವಳಾಗುವವರೆಗೆ ಇರುವ ಶಿವನ ತಪಸ್ಸು ಉಳಿಯ ಬಲ್ಲುದೆ? ೭೧. ಸೊಂಪಿನಿಂದ ಸಂತೋಷದಿಂದ ಮೋಹಕತೆಯಿಂದ ಸಂತಾಪದಿಂದ ವಶೀಕರಣದ ಸಂಪತ್ತಿನಿಂದ ನಾನು ಪಂಚಮುಖನಿಗೆ ನನ್ನ ಪಂಚಬಾಣಗಳ ಸವಿಯನ್ನು ತೋರಿಸುತ್ತೇನೆ. ವ॥ ಹೀಗೆ ತನ್ನ ಭುಜಬಲಕ್ಕೆ ಅಲಂಕಾರವಾದ ವೀರಾಲಾಪವನ್ನು ನುಡಿದ ಮನ್ಮಥನು ತಾವರೆ ದಂಟಿನೊಳಗಣ ಎಳೆಗಳಿಂದ ನೆಯ್ದ ವಸ್ತ್ರವನ್ನು ಉಟ್ಟು, ಸುಗಂಧದ್ರವ್ಯವನ್ನು ಲೇಪಿಸಿಕೊಂಡು ಹೂವಿನ ಧೂಳಿಪರಾಗದ ತಿಲಕವಿಟ್ಟು, ಕೇದಗೆದಳದ ಹರಿತ ಖಡ್ಗವನ್ನು ಕಿರಿಯ ಕಟ್ಟುಗಳಲ್ಲಿ ಅಳವಡಿಸಿ ಸಿದ್ಧನಾದನು. ಆಗ ವಸಂತನು ಹೊಸ ಮಲ್ಲಿಗೆಯ ಮೃದುವಾದ ಸಣ್ಣ ಹೂವುಗಳ ವೀರಸೇಸೆಯನ್ನು ಸೂಸಿದನು; ವನಲಕ್ಷ್ಮಿಯು ಸ್ಫಟಿಕದ ಹರಿವಾಣದಲ್ಲಿ ಬಂದುಗೆ ಹೂವಿನ ವಿಜಯಾರತಿ ಬೆಳಗಿದಳು; ಕಮಲಾಕ್ಷ (ವಿಷ್ಣು)ನು ಮಜ್ಜಯ್ಯ ಪೂತುರೆ ಎಂದು ಹರಸಿದನು,

ಎಂದು ಗೆಲ್ವನೀಯೆ ಚತುರಾಸ್ಯನುಮಿಂದ್ರಾದಿ ದಿಗ್ಪರರುಂ ಮುಂದೆ ಉರಾವುರೇ ಎಂದು ಮೆಯ್ಯಾಂತು ಕೆಯ್ವಾರಿಸೆ ಕಳಾಮಾಳಿ ಕೆಯ್ಗುಡೆ ಗರ್ವಪರ್ವತಮನೇರುವಂತೆ ಮುಂದೆ ನಿಂದ ಮಾಕಂದ ಮತ್ತಮಾತಂಗಮಂ ಭೋಂಕನೇಱೆ ಪಶ್ಚಿಮಾಸನದೊಳ್ ರತೀದೇವಿಯನಿರಿಸಿ ಹೊಳೆಹೊಳೆವ ಚಂದ್ರಮನ ಬೆಳ್ಗೊಡೆ ಮೇಲಲರೆ ಗಂಧವಹಂ ಸುಗಂಧದ ಸೀಗುರಿ ಚಾಮರವನಿಕ್ಕೆ ಕರ್ಬಿನ ಬಿಲ್ಲುಮನಲರ ಸರಲುಮಂ ರೋಹಿಣೀದೇವಿ ಪಿಡಿದಿರೆ ಕೆಲಬಲದೊಳ್ ಶುಕಾವಳೀ ತುರಂಗಸಂಘಂ ಸಂದಣಿಸೆ ರಥಾಂಗ ಘನರಥಂ ಮೇಳಯ್ಸೆ ಚೂತಗಜಂ ವೀಥಿಗೊಳೆ ಮುಂದೆ ಸುದತೀಕುಲ ಪದಾತಿಬಲಂ ಮುಂದಯ್ಸೆ ನೆಗಪಿದ ಮಕರಧ್ವಜಂ ಗಗನಮಂ ಚುಂಬಿಸೆ ದರ್ಪಂ ಕೆಯ್ಮಿಕ್ಕು ದರ್ಪಕ ಭೂಭುಜಂ ಶೂರ್ಪಕಮರ್ದನಂ ಶಂಬರಸೂದನಂ ನತ ಜಿತೇಂದ್ರಿಯಏತಾನಂ ಮುನಿಜನಮನೋಹಾರಿ ಯತಿವ್ರಜವಾರಣ ಪಂಚಾನನಂ ಕಾಂತಾಕುಲ ಚಕ್ರವರ್ತಿ ಅಪ್ರತಿಹತವಿಕ್ರಮಂ ಕಾಮದೇವಂ ಹೇಮಕೂಟಾಭಮುಖನಾಗಿ ನಡೆತರ್ಪಾಗಳ್.

ಮ॥ ಪರಮಸ್ವಾಮಿ ಜಟಾಧರಂ ಗಂಗಾಧರಂ ಕಾಲಿಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿಶ್ವಚತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ವಸಂತೋದಯ ಮದನಪ್ರಯಾಣ ಪ್ರಾರಂಭ ವರ್ಣನಂ
ಸಪ್ತಮಾಶ್ವಾಸಂ

ಲಕ್ಷ್ಮಿದೇವಿ, ಮುಂತಾದ ಸತಿಯರು "ವೀರವಿಭ್ರಮ ವಿಜಯೀಭವ" ಎಂದು ಗೆಲುವನ್ನು ನೀಡಿದರು, ಬ್ರಹ್ಮ ಮತ್ತು ಇಂದ್ರಾದಿ ದಿಕ್ಪತಿಗಳು ಮುಂದೆ ಉರಾವುರೇ ಎಂದು ಕೈಯ್ವಾರಿಸಿದರು, ಕಳಾಮಾಳಿ ಕೈಗೊಟ್ಟಳು. ಆಗ ಮದನ ಗರ್ವಪರ್ವತವನ್ನು ಏರುವಂತೆ ಮುಂದಿದ್ದ ಮಾವು ಎಂಬ ಮತ್ತಗಜವನ್ನು ಭೋಂಕನೇರಿದನು, ಹಿಂಬದಿಯಲ್ಲಿ ರತೀದೇವಿ ಕುಳಿತಳು; ಹೊಳೆವ ಚಂದ್ರಮನೇ ಬೆಳ್ಗೊಡೆಯಾದನು, ಮಂದಮಾರುತ ಸುಗಂಧದ ನವಿಲುಗರಿ ಚಾಮರವಿಕ್ಕಿದನು, ಕಬ್ಬಿನ ಬಿಲ್ಲು, ಹೂ ಬಾಣಗಳನ್ನು ರೋಹಿಣೀದೇವಿ ಹಿಡಿದಿದ್ದಳು. ಅಕ್ಕಪಕ್ಕಗಳಲ್ಲಿ ಗಿಳಿಗಳೆಂಬ ಅಶ್ವಸೇನೆ ಕಿಕ್ಕಿರಿದು ನಿಂತಿತು. ಚಕ್ರವಾಕ ರಥಗಳು ಬಂದು ಸೇರಿದವು, ಚೂತ (ಮಾವು)ಗಜವು ಸಾಲುಗಟ್ಟಿತು. ಮುಂದುಗಡೆ ಮಹಿಳಾಪಡೆ ಮುನ್ನಡೆಯಿತು, ಮಕರಧ್ವಜ ಹಾರಿತು, ಹೆಮ್ಮೆಯಿಂದ ದರ್ಪಕ ರಾಜ, ಶೂರ್ಪಕಾರಿ, ಶಂಬರಹಂತಕ, ಜಿತೇಂದ್ರಿಯರು ಶರಣಾದವ, ಮುನಿಜನರ ಮನಸ್ಸನ್ನು ಸೂರೆಗೊಂಡವ, ಯತಿಗಳೆಂಬ ಗಜಗಳಿಗೆ ಸಿಂಹಪ್ರಾಯ, ಕಾಂತೆಯ ಸಾರ್ವಭೌಮ, ಅಜೇಯ, ಕಾಮದೇವನು ಹೇಮ ಕೂಟದೆಡೆಗೆ ನಡೆದನು.

ಅಷ್ಟಮಾಶ್ವಾಸಂ

ಕಾಮದಹನವರ್ಣನಂ

ಕಂ॥ ಗರಳಧರನುರಗಭೂಷಂ
ಸರಸಿಜಭವ ಮಸ್ತಕ ಪ್ರಯುಕ್ತಕರಂ ಭೀ
ಕರಭಾಳಲೋಚನಂ ಭ
ಕ್ತರಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ೧

ಉ॥ ಕೀರತುರಗ ಸಂಘಮಯಮೀಧರೆ ಪುಷ್ಪಚಯಾಸ್ತ್ರ ಶಸ್ತ್ರ ವಿ
ಸ್ತಾರ ಸುಗಂಧ ವ್ಯಂದಮಯಮಿಾ ಕಕುಭಂ ಮಕರಂಧ ಸಾಂದ್ರಂ ಸಂ
ಚಾರ ರಜೋನಿಕಾಯಮಿಾ ನಭಮೆಂದೆನೆ ಕೌತುಕಪ್ರದಂ
ಮಾರನೃಪಾಲಸೇನೆ ನಡೆದಿತ್ತು ಜಿತೇಂದ್ರಿಯಚಿತ್ತಶೋಷಣಂ ॥ ೨

ವ॥ ಇಂದು ನೆರೆದು ನಡೆವ ಕುಸುಮಕೋದಂಡನ ಕಮನೀಯಬಲದ ಹಿಂದೆ,

ಕಂ॥ ಘಳಿಲೆನೆ ಕಂಪನದಿಂ ಮುನಿ
ಗಳ ಕರತಳದಕ್ಷಮಾಲೆ ಬೀಳುತ್ತಿರೆ ಕೋ
ಕಿಳಕುಳ ನಿಸ್ಸಾಳಧ್ವಳಂ
ಧಳಂ ಧಳಂ ಧಳನಿನಾದಮುಣ್ಮೈತ್ತಾಗಳ್ ೩

ವ॥ ಅನಂತರದಲ್ಲಿ

ಮ॥ ಮುನಿಚಿತ್ತಾಕರ್ಷನೀ ಬಂದನೆ ಋಷಿವಿಮಳಾಚಾರಸಂಹಾರಿಯೀ ಬಂ
ದನೆ ಧರ್ಮಜ್ಞಾರಿಯೀ ಬಂದನೆ ಜಿತವಿಷಯವ್ರಾತ ವಿಧ್ವಂಸಿಯೀ ಬಂ
ದನೆ ಶಾಂತಾರಾತಿಯೀ ಬಂದನೆ ಯತಿಹರನೀ ಬಂದನೀ ಬಂದನೀ ಬಂ
ದನೆಯೆಂದಲ್ಲಲ್ಲಿ ಭೃಂಗೀ ಬಹುವಿಧ ಕಹಳಾನಾದಮುಣ್ಮೈತ್ತುದೆತ್ತಂ ೪

೧. ವಿಷಕಂಠ, ಸರ್ಪಭೂಷಣ, ಬ್ರಹ್ಮನ ಮಸ್ತಕದ ಮೇಲೆ ಹಸ್ತವನ್ನಿಟ್ಟು ಅನುಗ್ರಹಿಸಿದವನು, ಭಯಂಕರವಾದ ಹಣೆಗಣ್ಣುಳ್ಳವನು, ಅಂತಹ ಹಂಪೆಯ ವಿರೂಪಾಕ್ಷನು ನಮಗೆ ಭಕ್ತಿರಸವನ್ನು ಕರುಣಿಸಲಿ. ೨. ಜಿತೇಂದ್ರಿಯರ ಮನಸ್ಸನ್ನು ಬಲಗೆಡಿಸುವ ಆಶ್ಚರ್ಯಕರವಾದ ಮಾರನೃಪಾಲಸೇನೆ ನಡೆದಿತ್ತು. ಅದರ ಪರಿ ಹೀಗೆ- ನೆಲವೆಲ್ಲ ಗಿಳಿಗಳೆಂಬ ಅಶ್ವಸೇನೆಯಿಂದ ತುಂಬಿದೆಯೊ ಎಂಬಂತೆ, ಹತ್ತುದಿಕ್ಕುಗಳು ಕುಸುಮಾಸ್ತ್ರಗಳ ಸುಗಂಧಮಯವೊ ಎಂಬಂತೆ, ಸಾಂದ್ರಸಂಚಾರದಿಂದ ಎದ್ದ ಮಕರಂದಧೂಳಿನಿಂದ ಗಗನ ತುಂಬಿದೆಯೊ ಎಂಬಂತೆ, ಕೌತುಕಪ್ರದವಾದ ಕಾಮ ಸೈನ್ಯ ಮುನ್ನಡೆಯುತ್ತಿತ್ತು. ವ॥ ಕುಸುಮಾಯುಧನ ಕಮನೀಯಸೇನೆಯ ಹಿಂದೆ ೩. ಕೋಗಿಲೆಗಳ ಧ್ವನಿಯೆಂಬ ರಣಭೇರಿನಿನಾದ ಆ ಕೂಡಲೆ ಧಳಂಧಳಂಧಳಂ ಎಂದು ಮೊಳಗಿತು. ಅದರ ರಭಸಕ್ಕೆ ಮುನಿಗಳ ಕೈ ನಡುಗಿ, ಅವರ ಕೈಯಲ್ಲಿದ್ದ ಜಪಸರಗಳು ಕೆಳಗೆ ಬಿದ್ದವು. ೪. ಅಗೊ! ಮುನಿಗಳ ಚಿತ್ತವನ್ನು ಅಪಹರಿಸುವವ ಬಂದ! ಋಷಿಗಳ ವಿಮಲ ಆಚಾರ ಶತ್ರು ಬಂದ! ಧರ್ಮಜ್ಞರ ವೈರಿ ಬಂದ! ಜಿತೇಂದ್ರಿಯರನ್ನು

ಕಂ॥ ತೊಲಗೆಲೆ ಸಹಸ್ರಲೋಚನ
ತೊಲಗೆಲೆ ವಾಣೀಶ ತೊಲಗೆಲೇ ಪಾವಕ ನೀಂ
ತೊಲಗು ಬೃಹಸ್ಪತಿ ಕೃಷ್ಣನೆ
ತೊಲಗೆನುತುನ್ಮೆದುವು ಬಹಳ ಕಹಳಾನಾದಂ ೫

ವ॥ ಇಂತು ಬರುದೆತ್ತಿ ಕರೆವ ಬಹಳ ಕಹಳಾನಾದಂಗಳ ನಡುವೆ,

ಚಂ॥ ನಡೆದುದು ಸೈನ್ಯಮೊಲ್ವವರನನ್ಯವಗಲ್ದರ ಜೀವಶೂನ್ಯ ವಾ
ರ್ದಡಿಸಿತು ಕೂಡೆ ಕಾಮಿನಿಯರಾಡೆ ಜಿತೇಂದ್ರಿಯರೋಡೆ ನೋಡೆ ಬಿ
ಲ್ವಿಡಿದ ರತೀಶನಪ್ರತಿಮವೇಷನನೂನವರಪ್ರಕಾಶನು
ರ್ಕುಡುಗೆ ನಿಯೋಗಿಗಳ್ ವಿಗತಭೋಗಿಗಳುದ್ಧನಿರೋಧಯೋಗಿಗಳ್ ೬

ಮುನಿಗಳ ಧೈರ್ಯಭೂಮಿ ರಜಮಪ್ಪಿನೆಗಂ ಮನುಚೇತನಾದ್ರಿ ಭೋಂ
ಕನೆ ಪುಡಿಯಪ್ಪಿನಂ ಯತಿಚರಿತ್ರತರಂಗಿಣಿ ಪಂಕಮಪ್ಪಿನಂ
ಘನವಿಮಳ ವ್ರತೀಂದ್ರರ ತಪೋವಿಪಿನಂ ಬಯಲಪ್ಪಿನಂ ರತೀ
ಶನ ಚತುರಂಗಸೇನೆ ನಡೆದತ್ತು ಧರಿತ್ರಿಗೆ ಚಿತ್ರಮಪ್ಪಿನಂ ೭

ಕಂ॥ ಕೊರಗಿದರಾ ಯತಿಪತಿಗಳ್
ಹರಣಂಗಳೆದರ್ ವಿಯೋಗಿಗಳ್ ಮನು ಮುನಿಗಳ್
ಶರಣೆಂದರ್ ಜಿತಕಾಮರ್
ಮರುಳಾದರ್ ಪುಷ್ಪಶರನ ಪಡೆ ನಡೆವಾಗಳ್ ೮

ಸಂಹರಿಸುವವ ಬಂದ! ಶಾಂತಿಯ ಶತ್ರು! ಯತಿಹರ! ಇಗೋ ಬಂದ! ಬಂದ! ಎಂದು ಅಲ್ಲಲ್ಲಿ ದುಂಬಿಗಳ ಬಹುವಿಧವಾದ ಕಹಳೆನಾದ ಹೊಮ್ಮಿತು. ೫. ಎಲೆ ದೇವೇಂದ್ರ ತೊಲಗು! ಚತುರ್ಮುಖನೆ ತೊಲತೊಲಗು! ಅಗ್ನಿ, ಬೃಹಸ್ಪತಿ, ಕೃಷ್ಣರೆ ತೊಲಗಿರಿ! ಎಂದು ಅನೇಕ ಕೊಂಬುಗಳು ಮೊರೆದವು. ೬. ಅಪ್ರತಿಮವೇಷನೂ ಅನೂನವರ ಪ್ರಕಾಶನೂ ಆದ ಬಿಲ್ಲು ಹಿಡಿದ ರತೀಶನ ಸೇನೆ ಮುನ್ನಡೆಯುತ್ತಿರುವಾಗ ಅದು ಪರಸ್ಪರ ಒಲಿದವರು ಮತ್ತು ಅಗಲಿದ್ದವರ ಜೀವವನ್ನು ಶೂನ್ಯವಾಗಿಸಿತು. ಕೂಡಲೆ ಕಾಮಿನಿಯರು ನಲಿಯತೊಡಗಿದರು, ಜಿತೇಂದ್ರಿಯರು ಓಡಿದರು, ವಿಯೋಗಿಗಳ ಉತ್ಸಾಹ ಅಡಗಿತು, ಭೋಗವನ್ನು ತ್ಯಜಿಸಿದ ಯೋಗಿಗಳಲ್ಲಿಯೂ ಭೋಗೇಚ್ಛೆ ಮೊಳೆಯಿತು. ಮನ್ಮಥ ಸೈನ್ಯದ ಪ್ರಭಾವದಿಂದ ಜಗತ್ತಿನಲ್ಲಿ ನವಚೈತನ್ಯ ಮೂಡಿತು. ೭. ಮುನಿಗಳ ಧೈರ್ಯವೆಂಬ ಧರೆ ಧೂಳಿದ್ದಿತು, ಮಾನವನ ಮನಸ್ಸೆಂಬ ಬೆಟ್ಟಗಳು ಪುಡಿಯಾದವು, ಯತಿಗಳ ನಡತೆಯೆಂಬ ನದಿ ಕೆಸರಾಯಿತು, ನಿರ್ಮಲಚಾರಿತ್ರ್ಯವುಳ್ಳ ವ್ರತಿಗಳ ತಪಸ್ಸೆಂಬ ವನ ಬಯಲಾಯಿತು, ರತಿಪತಿ ಮನ್ಮಥನ ಚತುರಂಗಬಲ ಹೋಗುವಾಗ ಇಳೆ ಕೌತುಕಗೊಂಡಿತು. ೮. ಕುಸುಮಾಯುಧ ಕಾಮನ ಪಡೆ ನಡೆಯುತ್ತಿರುವಾಗ ಯತಿಶ್ರೇಷ್ಠರು ಖಿನ್ನರಾದರು, ವಿರಹಿಗಳು ಅಸು ನೀಗಿದರು, ಮನುಮುನಿಗಳು ಶರಣಾದರು, ಜಿತಕಾಮರು ಹುಚ್ಚೆದ್ದರು.

ವ॥ ಇಂತು ಸಕಳಭುವನಮಂ ಭಂಗಿಸುವ ಚತುರಂಗಸೇನೆಯ ನಡುವೆ ಕಡುಪಿಂ ನಡೆತಂದು ಭೂಮಿಗೆ ಮೆಱಿವ ಸೋಮಧರನಿರ್ಪ ಹೇಮಕೂಟಪ್ರಾಂತದೊಳ್ ನಿಂದು ನಗಾಗ್ರಮಂ ನೋಡಿ ಕಡುಮುಳಿದು ಕಾಮಭೂಪಂ ಉನ್ನತಮಪ್ಪ ತನ್ನ ಸೇನೆಗೆ ಕೆಯ್ಯೀಸಿದ ಸಮಯದೊಳ್ ಗಿಳಿಗಳ್ ಚಪ್ಪರಿಸೆ ತುಂಬಿಗಳ್ ಮೊರೆಯೆ ಕೋಗಿಲೆಗಳ್ ಕರೆಯೆ ಮಂದಾನಿಳಂ ಮೇರೆವರಿಯೆ ಚಂದ್ರಂ ಬೆಳ್ದಿಂಗಳಂ ಬೀರೆ ಚಕೋರಿಗಳ್ ನಲಿದುಲಿಯೆ ಕುಸಮ ಕುಲಂ ಕಂಪನೊತ್ತರಿಸೆ ಸಹಕಾರಂ ಸಂದಣಿಸೆ ಕಾಮಿನಿಯರ್ ಜಡಿಯೆ ರಥಾಂಗಂ ಸಂಗಡಿಸಿರೆ ನೂಂಕೆ ಮಕರಧ್ವಜಂ ಗಗನದೊಳ್ ಕುಣಿಯೆ ಮತ್ಸ್ಯ ಪತಾಕೆಯಚ್ಚರಿಯೊಳಾಡೆ ಮಾಕಂದಗಜ ಪೂತ್ಕಾರ ರಥಾಂಗರಥ ಚೀತ್ಕಾರಂ ಶಿಳೀಮುಖರ್ಝೀಂಕಾರಂ ಹಂಸಕುಲಕ್ರೀಂಕಾರಂ ಝಷಕೇತನ ಘಟತ್ಕಾರಂ ತರುಣೀಚರಣಮುದ್ರಿಕಾಠಣತ್ಕಾರಂ ತತ್ಕಟಕ ಮಂಜೀರ ಝಣತ್ಕಾರಂ ಕಳಕಂಠವೀಥಿಧಿಕ್ಕಾರಂ ಬೆರಸಿ ಬಳಿದಾಗಸಮಂ ಮುಸುಂಕೆ ಸರ್ವಬಲಮೊರ್ಬುಳಿಸಿ ಬೊಬ್ಬಿಟ್ಟಬ್ಬರಿಸಿ ಪರ್ಬಿ ಪರೆದು ಶರ್ವನ ಸಮಾಧಿ ಪರ್ವತಮನೊತ್ತರಿಸಿ ಪತ್ತಿ ಬಿಡದೆ ಸುತ್ತಿ ಮುತ್ತುತಿರೆ ಮುಂದಣ ಕಾಪಿನ ನಂದೀಶ್ವರಂ ಮೋಹನಬಲದ ಸುಧಾರಸಮಯ ಸುನಾದಮಂ ಭೋಂಕನೆ ಕೇಳ್ದಂತಂತೆ ಕಂಪಿಸಿ ಕರಣಂ ಕಲಂಕಿ ಕಿಂಚಿತ್ ಸಂಚಲಮನನಾಗಿ ಚೆಲ್ಲಿದ ಚಿತ್ತಮಂ ಮೆಲ್ಲ ಮೆಲ್ಲನೆ ಸಂತಯ್ಸಿಕೊಂಡು ಶಿವಜ್ಞಾನದಿಂದೆಳ್ತು ಕಣ್ದೆಱೆದು ಮುಂದಿರ್ದ ಬಲವಂ ಕಂಡು,

ವ॥ ಹೀಗೆ ಮನ್ಮಥನು ಎಲ್ಲ ಭುವನಗಳನ್ನೂ ಭಂಗಗೊಳಿಸುವ ಸಾಮರ್ಥ್ಯವುಳ್ಳ ಚತುರಂಗಬಲದ ನಡುವೆ ದರ್ಪದಿಂದ ನಡೆತಂದು ಪರಶಿವನು ತಪಸ್ಸು ಮಾಡುತ್ತಿದ್ದ ಹೇಮಕೂಟಕ್ಕೆ ಬಂದನು, ಗಿರಿಶಿಖರವನ್ನು ಕಂಡು ಕೋಪೋದ್ರೇಕನಾಗಿ ಕಾಮರಾಜನು ತನ್ನ ಸೈನ್ಯಕ್ಕೆ ಕೈಬೀಸಿ ಸೂಚನೆ ಕೊಟ್ಟನು; ಆಗ ಗಿಳಿಗಳು ಚಪ್ಪರಿಸಿದವು (ಬೆದರಿಸಿದವು); ದುಂಬಿಗಳು ಮೊರೆದವು, ಕೋಗಿಲೆಗಳು ಕರೆನೀಡಿದವು, ತಂಗಾಳಿಬೀಸಿತು, ಇಂದು ತಿಂಗಳು ಬೀರಿದನು, ಚಕ್ರವಾಕಗಳು ನಲಿದು ಉಲಿದವು, ಕುಸುಮಗಳು ಕಂಪು ಬೀರಿದವು, ಸಹಕಾರ (ಮಾವು) ಗಳು ದಟ್ಟವಾದವು, ಕಾಮಿನಿಯರು ವಿಜೃಂಭಿಸಿದರು, ರಥಾಂಗಗಳು ಸಂದಣಿ ನೂಕಿದವು, ಮಕರಧ್ವಜನು ಗಗನದಲ್ಲಿ ನರ್ತಿಸಿದನು, ಮೀನಧ್ವಜ ಅಚ್ಚಗೊಳಿಸುವಂತೆ ಚಡಪಡಿಸಿತು, ಮಾವು ಎಂಬ ಗಜಗಳ ಪೂತ್ಕಾರ, ರಥಾಂಗಗಳ ಚೀತ್ಕಾರ, ದುಂಬಿಗಳ ಝೀಂಕಾರ, ಹಂಸೆಗಳ ಕ್ರೀಂಕಾರ, ಮೀನಕೇತನ ಘಟತ್ಕಾರ, ತರುಣಿಯರ ಕಾಲುಂಗುರ (ಮುದ್ರಿಕೆ)ಗಳ ಠಣತ್ಕಾರ, ಅವರ ಕೈಬಳೆಗಳ ಝಣತ್ಕಾರ, ಕೋಗಿಲೆಗಳ ಧಿಕ್ಕಾರ ಇವೆಲ್ಲ ಬೆರೆದು ಗಗನವನ್ನು ತುಂಬಿದವು; ಕಾಮನು ಎಲ್ಲ ಬಲವನ್ನು ಒಟ್ಟುಗೂಡಿಸಿ ಬೊಬ್ಬಿಟ್ಟು ಅಬ್ಬರಿಸಿ (ಆರ್ಭಟಿಸಿ) ಮುನ್ನುಗ್ಗಲು ಶರ್ವನ ಸಮಾಧಿ ಎಂಬ ಪರ್ವತವನ್ನು ಹತ್ತಿ ಬಿಡದೆ ಮುತ್ತಿಗೆ ಹಾಕಿದನು; ಮುಂದೆ ನಿಂತಿದ್ದ ನಂದಿಕೇಶ್ವರ ಕಾಮನ ಬಲದ ಅಮೃತಮಯವಾದ ನಾದವನ್ನು ಕೇಳಿ ಕೊಂಚ ಕಂಪಿಸಿದ; ಕರಣಗಳು ಕಲಕಿದವು, ಮನಸ್ಸು ಕದಲಿತು, ಆತ ಚದುರಿದ ಚಿತ್ತವನ್ನು ಮೆಲ್ಲಮೆಲ್ಲನೆ ಸಂಯಮ (ತಡೆದು) ಮಾಡಿಕೊಂಡು ಶಿವಜ್ಞಾನ ದಿಂದ ಎಚ್ಚರಗೊಂಡು ಕಣ್ದೆರೆದು ಮುಂದೆ ಇದ್ದ ಸೈನ್ಯವನ್ನು ನೋಡಿ,

ಚಂ॥ ಹರನ ಸಮಾಧಿಗಿಂತಿದನುಕೂಲತೆಯಲ್ಲ ವಿರೋಧವೃತ್ತಿಯಂ
ನೆರಪುವರಾರಿದಾರ ಬಲವಾರ ಮದೋನ್ನತಿ ಯಾರ ಲೋಕಭೀ
ಕರರವವಾರ ಸಂಭ್ರಮಮಿದಾರ ಮರುಳ್ತನಮೆಂದು ನಂದಿಕೇ
ಶ್ವರನತಿ ಕೋಪದಿಂ ಮದನಸೇನೆಯನೀಕ್ಷಿಸಿದಾ ಕ್ಷಣಾರ್ಧದೊಳ್ ೯

ಕಂ॥ ಅಳಿ ಮಲ್ಲಳಿಗೊಂಡವು ಕೋ
ಕಿಳನಿಕರಂ ವ್ಯಾಕುಳಾಂಗಮಾದುವು ಚಂದ್ರಂ
ಕಳೆಗುಂದಿ ಕಂದಿದಂ ಕೋ
ಮಳೆಯರ್ ವಿಹ್ವಳ ವಿಧಾನ ಮಾನಸರಾದರ್ ॥ ೧೦

ವ॥ ಮತ್ತಮಲ್ಲದೆ,

ಉ॥ ಕೀರತರಂಗಮೋದಿದುವು ಚೂತಗಜಾವಳಿ ಘೀಳಿಡುತ್ತೆ ಕಾಂ
ತಾರದೊಳೆಯ್ದೆ ಬಳ್ಕುವು ಸಮೀರನಡಂಗಿದನಾ ವಸಂತಕಂ
ಘೋರವನಂಗಳೊಳ್ ಪುಗುತೆ ಮೆಯ್ಗರೆದಂ ಕಳಹಂಸಮಾಲೆ ಕಾ
ಸಾರದೊಳಂಜೆ ಪೊಕ್ಕುವು ರಥಾಂಗರಥಂ ನಡೆಗೆಟ್ಟುವದ್ಭುತಂ ॥ ೧೧

ವ॥ ಇಂತು ಕಂತುರಾಜನ ಚತುರಂಗಬಲಂ ದಿವಸೇಂದ್ರನ ಮುಂದಣ ತಮಃಪಟಲದಂತೆ ನಂದೀಶ್ವರನ ಕೋಪದ ಕಡುಗಾಯ್ಪಿಂ ನೋಡೆ ನೋಡೆ ಮಾಯವಾಗೆ,

ಕಂ॥ ನುಡಿದಂ ಮದನಂ ತನ್ನೊಳ್
ಬೆಡಂಗಿದೇನೀ ಗಣೇಶನೀ ತೆಱನಿನ್ನಾ
ಮೃಡನಂ ನಡೆದೆಸುವೊಡೆ ಸಂ
ಗಡವಾರಾರಳವದಾರ ಶಕ್ಯಮಶಕ್ಯಂ ೧೨

೯. ಪರಮೇಶ್ವರನ ಸಮಾಧಿಗೆ ಇದು ಅನುಕೂಲವಲ್ಲ, ಇದಕ್ಕೆ ವಿರೋಧವಾದುದನ್ನು ಮಾಡುವರು ಯಾರು? ಇದು ಯಾರ ಸೈನ್ಯ? ಯಾರ ಸೊಕ್ಕು? ಲೋಕಭೀಕರವಾದ ಈ ಗಲಾಟೆ ಯಾರದು? ಈ ಸಡಗರವಾರದು? ಇದೆಲ್ಲ ಮರುಳುತನ! ಎಂದು ನಂದಿಕೇಶ್ವರನು ಕಡುಕೋಪಗೊಂಡು ಮದನ ಸೈನ್ಯವನ್ನು ದೃಷ್ಟಿಸಿದ ಮಾತ್ರಕ್ಕೆ ೧೦. ದುಂಬಿಗಳು ಭ್ರಾಂತಿಹೊಂದಿದವು; ಕೋಗಿಲೆಗಳು ವ್ಯಾಕುಲಗೊಂಡವು, ಚಂದ್ರ ಕಳೆಗುಂದಿ ಕಂದಿದ, ಕೋಮಲೆಯರು ವಿಹ್ವಲಮಾನಸೆಯರಾದರು! ೧೧. ಅರಗಿಳಿಗಳು ಓಡಿದವು, ಚೂತಗಜಗಳ ಪಡೆ ಘೀಂಕರಿಸಿ ಕಾಡುಬಿತ್ತು, ಮಂದಾನಿಲ ಅಡಗಿಹೋಯಿತು, ವಸಂತನು ಕಗ್ಗಾಡು ಹೊಕ್ಕು ತಲೆಮರೆಸಿಕೊಂಡನು, ಕಲಹಂಸಗಳು ಹೆದರಿ ಸರಸ್ಸಿನಲ್ಲಿ ಬಚ್ಚಿಟ್ಟುಕೊಂಡವು, ಚಕ್ರವಾಕ ರಥಗಳು ನಡೆಗೆಟ್ಟವು; ಇದು ಎಂತಹ ಅದ್ಭುತ! ವ॥ ಕಾಮದೇವನ ಚತುರಂಗಬಲವು ರವಿಯ ಮುಂದಣ ಕತ್ತಲೆಯಂತೆ ನಂದಿಕೇಶ್ವರನ ಕೋಪದ ಧಗೆಗೆ ನೋಡು ನೋಡುತ್ತಿದ್ದಂತೆಯೇ ಮಾಯವಾಯಿತು; ೧೨. ಮದನ ಮನಸ್ಸಿನಲ್ಲಿಯೇ ಯೋಚಿಸಿದ; ಈ ಗಣೇಶ್ವರನ ಜಾಣ್ಮೆಯೇನಿರಬಹುದು? ಈತನು ನೋಡಿದ ಮಾತ್ರದಿಂದಲೇ ನಮ್ಮ ಸೇನೆ ಈ ಗತಿಗೆ ಇಳಿದಮೇಲೆ ಆ ಮೃಡನಿಗೆ ನಾನು ಬಾಣಬಿಡುವುದಕ್ಕೆ ಇನ್ನು ಯಾರಿಗೆ ಸಾಧ್ಯ? ಇದು

ವ॥ ಇಂತೆನುತುಂ ಕಂತುರಾಜಂ ಸಂತಾಪದಿಂ ಚಿಂತಿಸುತ್ತಿರ್ಪನಮಿತ್ತಲ್,

ಮ॥ಸ್ರ॥ ಬರುತಿರ್ದಳ್ ಮುಂದೆ ಕಾಂತಿಪ್ರದೆ ಸದಮಳೆ ಸತ್ಸುಷ್ಪಕಾರೂಢೆ ಸತ್ಯಾ
ಕರೆ ನಿತ್ಯಾನಂದೆ ಚಂದ್ರಾಭರಣನ ಸುಖಸಂಪತ್ತಿ ರುದ್ರಾರ್ಚನಾವಿ
ಸ್ತರೆ ವಿಶ್ವಾರಾಧ್ಯೆ ಕಾರುಣ್ಯದ ನೆಲೆವನೆ ಶರ್ವಾಣಿ ಗೀರ್ವಾಣಮೌಳೀ
ವರರತ್ನ ವ್ರಾತ ಸಂಘಟ್ಟಿತಪದೆ ನಗಸಂಭೂತೆ ಸಂಪ್ರೀತೆಯಿಂದಂ ೧೩

ಬರೆ ಕಣ್ ಬಂದಂತುಸಿರ್ ಬಂದವೊಲತಿ ಮುದಮಂ ತಾಳ್ದಿ ಬಾಳ್ದರ್ದು ಶೋಭಾ
ಕರಸಪ್ತಾಂಗಪ್ರಣಾಮಂಬೆರಸು ಗಿರಿಜೆ ಗೌರೀ ಜಗನ್ಮಾತೆ ಸರ್ವೇ
ಶ್ವರಿ ದಿವ್ಯಜ್ಞಾನಿ ನಾನಾಗಮನವಿದೆ ಸದಲಂಕಾರೆ ಸಾರಾಂಗಿ ವಿಶ್ವೋ
ದರೆಯೆನ್ನಂ ರಕ್ಷಿಸೆಂದೀಕ್ಷಿಸಿ ಮಿಗೆ ಪೊಗಳ್ದಂ ಬಾಷ್ಪದೃಕ್‌ಪುಷ್ಪಚಾಪಂ ೧೪

ವ॥ ಅಂತು ದರ್ಪಕಂ ಶೂರ್ಪಕಮರ್ದನನಾರ್ಪ್ಪುಗುಂದಿ ಕಾರ್ಪಣ್ಯದಿಂ ನಗತನೂಜೆಯಂ ಪೊಗಳುತ್ತುಂ ಮತ್ತಮಿಂತೆಂದಂ

ಕಂ॥ ಗಿರಿಶನ ತಪಮಂ ಕೆಡಿಸಲ್
ಮುರರಿಪು ಕಳುಪಿದೊಡೆ ಬಂದು ಹೇಮಾಚಳಮಂ ।
ಭರದಿಂದೆ ಮುತ್ತೆ ನಂದೀ
ಶ್ವರನಿಂದಂ ಸಕಲಸೇನೆಯಳಿದಾನುಳಿದೆಂ ॥ ೧೫

ಅಸಾಧ್ಯ! ವ॥ ಹೀಗೆ ಕಾಮನು ದುಃಖದಿಂದ ಚಿಂತಿಸುತ್ತಿರುವಾಗ ಈ ಕಡೆ - ೧೩. ಇಷ್ಟರಲ್ಲಿ ಪಾರ್ವತೀದೇವಿ ಮುಂದೆ ಬರುತ್ತಿದ್ದುದು ಕಾಣಿಸಿತು, ಆಕೆಯ ಸೌಂದರ್ಯವರ್ಣನೆಯಿದು-ಆಕೆ ಕಾಂತಿಪ್ರದಳು, ನಿರ್ಮಲಳು ಎಂದರೆ ಆಣವ-ಮಾಯಾ-ಕಾರ್ಮ ಎಂಬ ಮಲವಿಲ್ಲದವಳು; ಪುಷ್ಪಕವಿಮಾನದಲ್ಲಿ ಕುಳಿತಿದ್ದಾಳೆ, ಸತ್ಯಾಕರಳು, ನಿತ್ಯಾನಂದವುಳ್ಳವಳು, ಚಂದ್ರಶೇಖರನ ಸುಖಸಂಪತ್ತು, ರುದ್ರಾರ್ಚನೆಯಲ್ಲಿ ಆಸಕ್ತಳು, ವಿಶ್ವಪೂಜ್ಯಳು, ಕರುಣೆಯ ಮಡು, ಇಂಥ ಶರ್ವಾಣಿ, ಎಲ್ಲ ದೇವತೆಗಳಿಂದ ವಂದಿಸಲ್ಪಡುವ ಪಾದಕಮಲವುಳ್ಳವಳು; ೧೪. ಗಿರಿಜೆ ಬಂದದ್ದು ಕಾಮನಿಗೆ ಉಸಿರು ಬಂದಂತಾಯಿತು. ಆತ ಮುದವಾಂತು ದೇವಿಗೆ ಸಾಷ್ಟಾಂಗ ಪ್ರಣಾಮವೆಸಗಿದ. ಸರ್ವೇಶ್ವರಿ, ದಿವ್ಯಜ್ಞಾನಿ, ಆಗಮಸಿದ್ಧೆ, ಸದಲಂಕೃತೆ, ವಿಶ್ವೋದರಿ, ತಾಯೆ ನನ್ನನ್ನು ನೋಡಿ ಕಾಪಾಡು! ಎಂದು ಸ್ತುತಿಸಿ ಪುಷ್ಪಚಾಪನು ಕಣ್ಣಲ್ಲಿ ನೀರು ತಂದುಕೊಂಡನು! ಹೀಗೆ ಶೂರ್ಪಕಾಸುರನನ್ನು ಕೊಂದ ದರ್ಪಕನು ಕಳೆಗುಂದಿ ದೀನವದನನಾಗಿ ಅಗಜೆಯನ್ನು ಹೊಗಳಿ ಮತ್ತೆ ಹೇಳಿದನು. ೧೫. ಪರಶಿವನ ತಪಸ್ಸನ್ನು ಭಂಗಮಾಡಲು ವಿಷ್ಣುವು ಕಳುಹಿಸಿದ್ದರಿಂದ ನಾನು ಇಲ್ಲಿಗೆ ಬಂದು ಹೇಮಕೂಟಕ್ಕೆ ಮುತ್ತಿಗೆ ಹಾಕಿದೆನು. ಆದರೆ ಈ ನಂದೀಶ್ವರನ ದೃಷ್ಟಿಮಾತ್ರಕ್ಕೆ ನನ್ನ ಸಕಲ ಸೈನ್ಯ ಅಳಿದು

ತಾಯೆ ತವರೇ ಕೇಳೆ
ನ್ಯಾಯುವೆಯೆನ್ನಸುವೆ ಕಾವುದೆಂದೊಱಲುತ್ತುಂ ।
ಬಾಯಳಿವ ಮದನನಂ ಕಾ
ತ್ಯಾಯನಿ ದಯೆಯಿಂದೆ ನೋಡಿ ನಯದಿಂ ನುಡಿದಳ್ ॥ ೧೬

ಆಱೆದೆಂ ನಿನ್ನಯೆ ಬರವಂ
ಕಱುಗೊರಲನ ತೀವ್ರ ತಪಮನೆಳ್ಚಟ್ಟುವುದೀ ।
ತೆಱದಿಂದೆನ್ನಿಷ್ಟಮದೆ
ನ್ನರಕೆಯದೆನ್ನಿಚ್ಛೆಯೆನ್ನಲಾಭಂ ಲೋಭಂ ॥ ೧೭

ನಾನಾ ವಿಧದಿಂ ರುದ್ರನ
ನೂನತಪೋಭರದ ಬೆಸುಗೆಯಂ ಬಿಡಿಸೊಲವಿಂ ।
ಶ್ರೀನಂದನ ನೀನಂಜದಿ
ರಾನಿರ್ದಪೆನಾನೆ ರಕ್ಷೆಯಾನೆ ಸಹಾಯಂ ॥ ೧೮

ಕಂ॥ ಎಂದಗಜೆ ಬೆಸಸೆ ಕಾಮಂ
ಪಿಂದಣ ಪರಿಭವಮನುಡುಗಿ ತಳೆದತಿಮುದಮಂ ।
ಸಂದಣಿಸುತೊಡನೊಡನೆ ನಡೆ
ತಂದಂ ಪುಷ್ಪಕದ ನೆಳಲ ಕರ್ಪಿನ ಮಱೆಯೊಳ್ ॥ ೧೯

ವ॥ ಆ ಸಮಯದೊಳ್,

ಕಂ॥ ಮುಗಿದ ಮನಂ, ಮುಗಿದ ಕರಂ
ಮಿಗಿದಕ್ಷಿಗಳಲರ್ವ ಪುಳಕಮಲರ್ವಾನಂದಾ ।
ಶ್ರುಗಳಲರ್ವ ಭಕ್ತಿ ತನ್ನೊಳ್
ಸೊಗಯಿಸೆ ನಂದೀಶನಿರ್ದನುತ್ತಮಭಕ್ತಂ ॥ ೨೦

ನಾನು ಮಾತ್ರ ಉಳಿದಿದ್ದೇನೆ. ೧೬. "ತಾಯೆ, ನೀನೆ ನನ್ನ ತವರು, ನನ್ನ ಆಯಸ್ಸು ನಿನ್ನ ಅಧೀನ, ನನ್ನ ಪ್ರಾಣವು ನಿನ್ನ ಕೃಪೆಯನ್ನು ಆಶ್ರಯಿಸಿದೆ, ನನ್ನನ್ನು ಕಾಪಾಡುವ ಭಾರ ನಿನ್ನದು." ಎಂದು ಹಲುಬುತ್ತಿರುವ ಮದನನನ್ನು ಕರುಣೆಯಿಂದ ನೋಡಿ ಕಾತ್ಯಾಯಿನಿಯು ಹೀಗೆದಳು. ೧೭. ನಿನ್ನ ಆಗಮನದ ಉದ್ದೇಶ ಅರ್ಥವಾಯಿತು. ಆ ನಂಜುಗೊರಳನ ತೀವ್ರ ತಪಸ್ಸನ್ನು ಈ ಬಗೆಯಿಂದ ಓಡಿಸುವುದೇ ನನ್ನ ಇಷ್ಟವೂ ಕೂಡ! ಅದೆ ನನ್ನ ಬಯಕೆ, ನನ್ನ ಆಶಯ, ಅದೇ ನನ್ನ ಆಶೆ, ಅದರಿಂದ ಜಗತ್ತಿಗೆ ಲಾಭ! ಹಾಗೂ ಲೋಭ! ೧೮. ಬಗೆ ಬಗೆಯ ಉಪಾಯಗಳಿಂದ ರುದ್ರನ ಅನುಪಮ ಉಗ್ರ ತಪಸ್ಸಿನ ಕೊಂಡಿಯನ್ನು ಬಿಡಿಸು; ಶ್ರೀ ವಿಷ್ಣು ಪುತ್ರನೇ, ನೀನು ಹೆದರಬೇಡ, ನಾನಿದ್ದೇನೆ, ನಾನೇ ನಿನಗೆ ಸಹಾಯ ಹಾಗೂ ರಕ್ಷಕಳು. ೧೯. ಎಂದು ಗಿರಿಜೆ ಆಜ್ಞಾಪಿಸಲು ಕಾಮನು ಹಿಂದಿನ ದೈನ್ಯವನ್ನು ಬಿಟ್ಟು ಗೆಲುವಾದನು; ಆತ ಮುದದಿಂದ ಅವಳ ಹಿಂದೆ ಹೊರಡಲು ಸಿದ್ಧನಾಗಿ ಪುಷ್ಪಕವಿಮಾನದ ನೆಳಲ ಮರೆಯಲ್ಲಿ ನಡೆದುಬಂದನು. ೨೦. ಭಕ್ತಿ ನಮ್ರವಾದ ಮನಸ್ಸು, ಮುಗಿದ ಕೈ, ಮುಚ್ಚಿದ ಕಣ್ಣು ನವಿರೇರಿದ ಮೈ, ಕೋಡಿವರಿವ ಆನಂದಬಾಷ್ಪಗಳು, ಇವುಗಳಿಂದ ಉತ್ತಮ ಭಕ್ತನಾದ

ವ॥ ಅಂತಿರ್ದ ನಂದೀಶನಂ ಚಂದ್ರಾನನೆ ಕೃಪೆಯಿಂದಂ ನೋಡುತ್ತುಂ ಶಿವಾರ್ಚನಾ ತತ್ಪರೆ ಪುಷ್ಪೋಪಚಯಕ್ಕೆ ಬಿಜಯಂಗೆಯ್ದಳಿತ್ತಲ್ ಪುಷ್ಪಚಾಪಂ ನಂದೀಶನ ಕಾಪಿನ ಸೀಮೆಯಂ ಕಳೆದು

ಉ॥ ಬಂದು ಮಂತಗಪರ್ವತಮನೇಱೆ ಮಹೇಶನ ವಾಮಭಾಗದೊಳ್
ನಿಂದು ವಿರಾಜಿಸಿರ್ಪ ರತಿಯಂ ಕೆಲದೊಳ್ ನಿಲವೇಳ್ದು ಶೌರ್ಯವೀ ।
ರ್ಯಂ ದಳವೇಱಿ ಮೀಱಿ ನಭದೊಳ್ ಸುರಸಂತತಿ ನೋಡಿ ಭಾಪು ಭಾ
ಪೆಂದೆನೆ ಮುಂದೆ ಪುಷ್ಪಶರನೀಕ್ಷಿಸಿದಂ ನಿಟಲಾಕ್ಷಲಕ್ಷ್ಯಮಂ ॥ ೨೧

ವ॥ ಅಂತು ನೋಡಿ

ಕಂ॥ ಅತುಳಬಲನಪ್ರತಿಮನೂ
ರ್ಜಿತಶೌರ್ಯಂ ಕರ್ವ್ವಿವಿಲ್ಲನೆಡಗೆಯ್ಕೊಳ್ ಮಂ ।
ಡಿತಮನೆ ಪಿಡಿದಾಹಾ ರತಿ
ಪತಿ ನಾರಿಯನೋವಿ ನೀವಿ ಜೀವೊಡೆವಾಗಳ್ ॥ ೨೨

ವ್ರತಿಗಳ್ ಮನುಗಳ್ ಮುನಿಗಳ್
ಯತಿಗಳ್ ಸೆಡೆದಳ್ಕಿ ಬಳ್ಕಿ ಸುಗಿದಗಿದು ಕರಂ ।
ಮತಿಗೆಟ್ಟರ್ ಧೃತಿಗೆಟ್ಟರ್
ಗತಿಗೆಟ್ಟರ್ ಬುದ್ಧಿಗೆಟ್ಟರುನ್ನತಿಗೆಟ್ಟರ್ ॥ ೨೩

ವ॥ ಅಂತಿಕ್ಕು ಧನುಷ್ಟಂಕಾರರವದಿಂದಧಿಗತ ಪರಮಾರ್ಥರೆನಿಪ ಜಿತೇಂದ್ರಿಯರ್ ವಿಕಾರಚಿತ್ತರಾಗುತ್ತಮಿರಲಿತ್ತಲ್ ಕುಸುಮಾಯುಧಂ ವಿಷಮಾಕ್ಷನನಿಸಲೆಂದು ಸಾಹಸ ಚಿತ್ತನುತ್ಸಾಹಿಸುತಿರ್ಪಾಗಳ್,

ನಂದಿಕೇಶ್ವರನು ತನ್ಮಯನಾಗಿದ್ದಾನೆ. ವ॥ ಪಾರ್ವತಿ ನಂದೀಶ್ವರನನ್ನು ಕೃಪೆಯಿಂದ ಅನುಗ್ರಹಿಸಿ, ಶಿವಾರ್ಚನೆಗಾಗಿ ಹೂ ಬಿಡಿಸಿ ತರಲು ಬಿಜಯಂಗೈದಳು. ಕುಸುಮಶರನು ನಂದೀಶ್ವರ ರಕ್ಷಣೆಯ ಎಲ್ಲೆಯನ್ನು ದಾಟಿ, ೨೧. ಮತಂಗಪರ್ವತದ ಹತ್ತಿರ ಬಂದು ಅದನ್ನು ಏರಿದನು, ಮಹೇಶ್ವರನ ಎಡಗಡೆ ನಿಂತುಕೊಂಡು, ರತಿಯನ್ನು ಪಕ್ಕದಲ್ಲಿ ನಿಲ್ಲಲು ಹೇಳಿ ಮಹಾಶೂರನಾದ ಮನ್ಮಥ ಪುಳಕಿತನಾಗಿರುವಾಗ ಗಗನದಲ್ಲಿ ದೇವತೆಗಳು ಭಾಪು! ಎಂದು ಹೊಗಳುತ್ತಿದ್ದರು. ಆಗ ಕಾಮನು ಹಣೆಗಣ್ಣನ ಲಕ್ಷ್ಯವನ್ನು ಕಂಡನು. ೨೨. ಅನುಪಮ ಶೂರ, ಅಪ್ರತಿಮ ಶೌರ್ಯನಾದ ಮನ್ಮಥನು ತನ್ನ ಕಬ್ಬಿನ ಬಿಲ್ಲನ್ನು ಎಡಗೈಯಲ್ಲಿ ಹಿಡಿದು ಬಿಲ್ಲಿಗೆ ಹೆದೆಯೇರಿಸಿ ಟಂಕಾರ ಮಾಡಿದನು. ೨೩. ಅದನ್ನು ಕೇಳುವುದೇ ತಡ ವ್ರತನಿಷ್ಠರು, ಮನುಗಳು, ಮುನಿಗಳು, ಯತಿಗಳು ಅಳುಕಿದರು, ನಿಟ್ಟುಸಿರುಬಿಟ್ಟರು, ಮತಿಗೆಟ್ಟರು, ಧೈರ್ಯ ಕಳೆದುಕೊಂಡರು, ಗತಿಗೆಟ್ಟರು, ಬುದ್ಧಿಗೆಟ್ಟು ಕಳವಳಗೊಂಡರು. ವ॥ ಹೀಗೆ ಕಬ್ಬಿನ ಬಿಲ್ಲಿನ ಟಂಕಾರಕ್ಕೆ ಮಹಾ ಮಹಾ ಯತಿಗಳ ಮನಸ್ಸೂ ಕೂಡ ಚಲಿಸುತ್ತಿರುವ ಸಮಯದಲ್ಲಿ ಮನ್ಮಥನು ಮುಕ್ಕಣ್ಣನನ್ನು ಗುರಿಯಿಡಲು ಉತ್ಸಾಹಗೊಂಡಿರುವಾಗ

ಕಂ॥ ಪಸರಿಸಿ ಪರ್ಬಿದ ನೀಡಡಿ
ಕುಸಿದಂಗಂ ನೀಳ್ದ ದಂಡೆ ನೆಗೆದ ಭುಜಾಗ್ರಂ ।
ಕುಸುಮಶರಾಕುಂಚಿತಕರ
ಮೆಸೆದಿರ್ದುವು ದೃಷ್ಟಿ ಮುಷ್ಟಿ ಶರಸಂಧಾನಂ ॥ ೨೪

ವ॥ ಆ ಸಮಯದೊಳ್

ಕಂ॥ ಶೃಂಗಾರಂ ಕೋಡಿಟ್ಟುದೊ
ಜಂಗಮಲತೆ ವೃತ್ತಮಾಯ್ತೊ ಲಾವಣ್ಯಂ ಶೌ ।
ರ್ಯಾಂಗಬಡೆದುದೊ ಪೇಳೆನೆ
ಪಿಂಗದೆ ನೆಱೆ ತೆಗೆದು ಪುಷ್ಪಚಾಪಂ ನಿಂದಂ ॥ ೨೫

ಹರಿಯಜರರಿದರಿದೆನೆಯಂ
ಬರತಳದೊಳ್ ಕಲಹಲಂಪಟಂ ನಾರದನಾ ।
ರ್ದಿರೆ ಕಾಮಂ ಸಾಯಲ್ ಬ
ಲ್ಲರ ದೇವಂ ತೊಟ್ಟನೊಂದು ಸರಲಂ ತೊಟ್ಟಂ ॥ ೨೬

ವ॥ ಅಂತು ನನೆಗಣೆಯಂ ತೊಟ್ಟು ವಿಕ್ರಮಮುಮಂ ಮುಂತಿಟ್ಟು ಕೇಣಮನಿಂಬಿಟ್ಟು ಕಲಹಮನೊಡಂಬಟ್ಟು ಭಾಳಾಕ್ಷನಂ ಲಕ್ಷಿಸಿ ನೋಡಿ,

ಕಂ॥ ಅಜ್ಞತೆಯಿಂ ಸಕಳಕಳಾ
ಭಿಜ್ಞನನಖಿಳೈಕ ಶಾತನಂ ಮದನಂ ದಿ ।
ವ್ಯಜ್ಞಾನಿಯನಿರದುಱೆ ಸ
ರ್ವಜ್ಞನನುನ್ಮದನಬಾಣದಿಂ ತೆಗೆದೆಚ್ಚಂ ॥ ೨೭

೨೪. ಮನ್ಮಥನು ಶಿವನಿಗೆ ಗುರಿಯಿಟ್ಟು ಬಾಣಪ್ರಯೋಗ ಮಾಡುವ ಬಗೆ ಹರಡಿಸಿ ಬಾಚಿ ನೀಡಿದ ಅಡಿಗಳು, ಕುಗ್ಗಿಸಿದ ಶರೀರ, ಬಾಚಿದ ತೋಳು, ಮೇಲೇರಿದ ಭುಜಾಗ್ರ, ಹೂಬಾಣಗಳನ್ನು ಹಿಡಿದ ಪಳಗಿದ ಕೈ ಲಕ್ಷ್ಯದಲ್ಲಿ ದೃಷ್ಟಿ, ಧನುಸ್ಸಿನಲ್ಲಿ ಮುಷ್ಟಿ ಇವುಗಳಿಂದ ಶರಸಂಧಾನ ನಡೆದಿತ್ತು. ೨೫. ಶೃಂಗಾರರಸಕ್ಕೆ ಕೋಡು ಮೂಡಿತೊ, ಸಂಚರಿಸುವ ಬಳ್ಳಿ ಸುತ್ತಿದೆಯೊ, ಲಾವಣ್ಯವು ಶೌರ್ಯಾಂಗವನ್ನು ಪಡೆಯಿತೊ ಎಂಬಂತೆ, ಕುಸುಮಶರನು ಬಾಣಬಿಡಲು ಸಿದ್ಧತೆ ನಡೆಸಿದ್ದಾನೆ. ೨೬. ಗಗನತಳದಲ್ಲಿ ಹರಿ-ಅಜರು ಸೋಜಿಗಪಡುತ್ತಿರಲು, ಕಲಹಪ್ರಿಯನಾದ ನಾರದನು ಕುತೂಹಲಿಯಾಗಿರಲು, ಕಾಮನು ಕೂಡಲೇ ಒಂದು ಬಾಣವನ್ನು ತೊಟ್ಟನು. ವ॥ ಕಾಮನು ಸುಮಬಾಣಗಳನ್ನು ಹೂಡಿ, ಪರಾಕ್ರಮವನ್ನು ಮುಂದುಮಾಡಿ, ಸಿಟ್ಟನ್ನು ಹಿಂದೆ ಸರಿಸಿ, ಜಗಳಕ್ಕೆ ಪಣತೊಟ್ಟು ಮುಕ್ಕಣ್ಣನನ್ನು ಲಕ್ಷಿಸಿ ಕಂಡು, ೨೭. ಅಜ್ಞನಾದ ಮದನನು ಸಕಲ ಕಲೆಗಳನ್ನು ಬಲ್ಲವನೂ ಸಕಲಕ್ಕೆ ಒಡೆಯನೂ ದಿವ್ಯಜ್ಞಾನಿಯೂ ಆದ ಸರ್ವಜ್ಞ ಶಿವನನ್ನು

ಎಚ್ಚೊಡೆ ತಪೋಮರೀಚಿಯ
ನುಚ್ಚಳಿಸಲ್ಕಾಱದಿತ್ತ ತಿರುಗಿದ ಶರಮಂ ।
ಚಿಚ್ಚಿರದೀಕ್ಷಿಸಿ ಛಲದಿಂ
ದೆಚ್ಚಂ ಪಂಚೇಷು ಮದನಶರೀರದಿಂದಾಗಳ್ ॥ ೨೮

ನೀಡಾಗದೆ ಮದನ ಶರಂ
ನಾಡೆಯುಮಿರದೆಯ್ದಿ ಹರನ ಹತ್ತಿರ ಬೀಳು ।
ತ್ತೋಡಿ ಬರೆ ಕಂಡು ಕಾಮಂ
ಹೂಡಿದನುಣ್ಮೈನುತ್ತೆ ಮೋಹನಶರಮಂ ॥ ೨೯

ಇದು ಹರಿಯಜ ಸುರಪತಿಗಳ
ಮದಮುಡುಗಿಸಿತೀ ಶರಂ ಕರಂ ಮೂಱಂ ಲೋ ।
ಕದ ಚಿತ್ತಮನಲ್ಲಾಡಿಸಿ
ತಿದೆ ಕೊಳ್ಳಿದೆ ಕೊಳ್ಳೆನುತ್ತೆ ಮನ್ಮಥನೆಚ್ಚಂ ॥ ೩೦

ಅಂತೆಸೆ ಮೋಹನಶರವಾ
ರ್ಪಿಂ ತಡೆಯದೆ ಶೂಲಧರನ ಬಹಿರಂಗಮನೆಂ ।
ತಂತೆ ನಸು ಸೋಂಕಿ ಬರುತಿರೆ
ಸಂತಾಪನಬಾಣದಿಂದೆ ರತಿಪತಿಯೆಚ್ಚಂ ॥ ೩೧

ತೆಗೆದೆಚ್ಚೊಡೆ ಸಂತಾಪನ
ಮಗಲದೆ ಪರಿತಂದು ಹರನ ಮನದೊಳಗಂ ಮೆ ।
ಲ್ಲಗೆ ಮುಟ್ಟಿ ಮುಟ್ಟಲಣ್ಮದೆ
ಮಗುಳ್ದುಱಿ ಬರೆ ಕಂಡು ಮನ್ಮಥಂ ಮುಳಿದಾಗಳ್ ॥ ೩೨

ಉನ್ಮದನ ಬಾಣದಿಂದ ಹೊಡೆದನು. ೨೮. ಕಾಮನು ಬಿಟ್ಟ ಉನ್ಮದ ಬಾಣವು ಶಿವನ ತಪಸ್ಸಿನ ಕಿರಣಗಳನ್ನು ಎದುರಿಸಲಾರದೆ ಹಿಂದಿರುಗಿತು. ಅದನ್ನು ಗಮನಿಸಿದ ಪಂಚಬಾಣನು ಛಲದಿಂದ ಮದನಶರವನ್ನು ಬಿಟ್ಟನು. ೨೯. ಮದನಶರವೂ ಗುರಿಮುಟ್ಟಲಿಲ್ಲ. ಅದು ಹರನ ಹತ್ತಿರ ಹೋಗಿ ಹಿಂದಕ್ಕೆ ಓಡಿಬಂತು. ಅದನ್ನು ಕಂಡ ಕಾಮ ಮೋಹನಾಸ್ತ್ರವನ್ನು ಹೊರ ತೆಗೆದು ೩೦. ಈ ಮೋಹನಾಸ್ತ್ರವು ಹರಿ-ಅಜ-ಸುರಪತಿಗಳ ಮದವನ್ನು ಅಡಗಿಸಿತು. ಮೂರು ಲೋಕಗಳಲ್ಲಿರುವ ಸಂಯಮಿಗಳ ಚಿತ್ತವನ್ನು ಅಲುಗಾಡಿಸಿತು. ಇಗೊ ತೆಗೆದುಕೊ, ತೆಗೆದುಕೊ! ಎಂದು ಮನ್ಮಥನು ಮೋಹನಾಸ್ತ್ರವನ್ನು ಬಿಟ್ಟನು. ೩೧. ಮನ್ಮಥನು ಬಿಟ್ಟ ಮೋಹನಾಸ್ತ್ರವು ಅಮಿತ ಸಾಮರ್ಥ್ಯದಿಂದ ಶೂಲಪಾಣಿಯ ಬಹಿರಂಗವನ್ನು ತುಸು ಸೋಂಕಿ ಹಿಂದಿರುಗಿತು. ಅದನ್ನು ಕಂಡ ರತಿಪತಿ ಸಂತಾಪನಾಸ್ತ್ರವನ್ನು ತೆಗೆದುಬಿಟ್ಟನು. ೩೨. ಶಿವನ ಮೇಲೆ ಪ್ರಯೋಗಿಸಿದ ಸಂತಾಪನಾಸ್ತ್ರವು ಗುರಿತಪ್ಪದೆ ಮುನ್ನಡೆದು ಹರನ ಒಳಮನವನ್ನು ಮುಟ್ಟಿಯೂ ಮುಟ್ಟಲಾರದೆ ಹಿಂದಿರುಗಿದುದನ್ನು ಕಂಡು ಮನ್ಮಥನಿಗೆ ತುಂಬಾ ಕೋಪ

ಲೋಕಕ್ಕದ್ಭುತಮೆಲೆಲೆ ಪಿ
ನಾಕಿಯ ತಪಮಿನ್ನುಮೆನ್ನಿದಿರೊಳಿರ್ದಪುದೆಂ ।
ದಾರ್ಕಣ್ಂಬರೆ ತೆಗೆದು ವ
ಶೀಕರಣಾಸ್ತ್ರದಿನನೂನ ವಿಕ್ರಮನೆಚ್ಚಂ ॥ ೩೩

ಕಂ॥ ಇಸೆ ಬಂದು ವಶೀಕರಣಂ
ಸಸಿಯಂ ಸೂಡಿದನ ಕಮಲವಿಮಲಜ್ಞಾನಾ ।
ವಸಥ ಪರಂಜ್ಯೋತಿಯ ಕಾ
ಲ್ದೆಸೆಯಂ ಕಾಣದೆ ಮರಳ್ದು ಬರೆ ಬೆಜಗಾದಂ ॥ ೩೪

ಓಹೋ ! ಉನ್ಮದದ ಮದನ
ಮೋಹನ ಸಂತಾಪನಂ ವಶೀಕರಣಾಸ್ತ್ರ ।
ವ್ಯೂಹಂ ವ್ಯರ್ಥಮಿದೆಂದು
ತ್ಸಾಹಂಗುಂದುತ್ತೆ ಮದನನಂದಿಂತೆಂದಂ ॥ ೩೫

ಟಂಕಾರಾಲ್ಪಧ್ವನಿಯಿಂ
ಕಿಂಕುರ್ವಾಣತೆಯನೆಯ್ದುವರ್ ಮುನಿಗಳ್ ನಿಃ ।
ಶಂಕನನಚಲಿತನಂ ಹರ
ನಂ ಕಂಡೆಂ ಧರೆಗೆ ಚಿತ್ರಮತುಳಚರಿತ್ರಂ ॥ ೩೬

ತೆಱಹುಗುಡನಚಳನನ್ಯಮ
ನಚಿಯಂ ನಿರುಪಮಸಮಾಧಿಯುಕ್ತನಭೇದ್ಯಂ ।
ಕುಱುಹಿಲ್ಲೆನುತುಂ ಬಿಲ್ಲಂ
ಬೆಜಗಾಗಿರ್ದಂ ರತೀಶನಸ್ತವಿಳಾಸಂ ॥ ೩೭

ಬಂತು! ಆಗ ೩೩. 'ಎಲೆಲೆ ಲೋಕಕ್ಕೆ ಇದು ಅದ್ಭುತ!' ಎಂದು ಮದನನು ಮನಸ್ಸಿನಲ್ಲಿ 'ಪಿನಾಕಿಯ ತಪಸ್ಸು ಇನ್ನೂ ನನ್ನ ಎದುರಿನಲ್ಲಿಯೇ ಇದೆಯಲ್ಲವೆ?' ಎಂದುಕೊಂಡು ವಶೀಕರಣಾಸ್ತ್ರದಿಂದ ಜೋರಾಗಿ ಪ್ರಯೋಗಿಸಿದನು. ೩೪. ಮದನನು ಬಿಟ್ಟ ವಶೀಕರಣಾಸ್ತ್ರವು ಚಂದ್ರಚೂಡನೂ ವಿಮಲಜ್ಞಾನನಿಧಿ ಪರಂಜ್ಯೋತಿಯೂ ಆದ ಪರಶಿವನ ಕಾಲಿನ ನೆಲೆಯನ್ನೂ ಕಾಣಲಾರದೆ ಹಿಂದಿರುಗಿತು. ಅದನ್ನು ಕಂಡ ಕಾಮ ಬೆರಗಾದನು! ೩೫. ಓಹೋ! ಇದು ಅತ್ಯಾಶ್ಚರ್ಯ. ಉನ್ಮದನಾಸ್ತ್ರ ಮದನಾಸ್ತ್ರ, ಮೋಹನಾಸ್ತ್ರ, ಸಂತಾಪನಾಸ್ತ್ರ, ವಶೀಕರಣಾಸ್ತ್ರ ಮುಂತಾದ ನನ್ನ ಮುಖ್ಯ ಶರಗಳೆಲ್ಲ ವ್ಯರ್ಥವಾದುವಲ್ಲಾ! ಎಂದು ಉತ್ಸಾಹಕುಂದಿದ ಮದನ ಮನಸ್ಸಿನಲ್ಲಿಯೇ ಹೀಗೆ ಯೋಚಿಸಿದನು. ೩೬. ಕೇವಲ ಧನುಷ್ಟಂಕಾರದ ಅಲ್ಪ ಧ್ವನಿಯಿಂದಲೇ ಮುನಿಗಳು ದಿಕ್ಕು ತೋಚದೆ ವಿಹ್ವಲರಾಗುತ್ತಾರೆ! ಆದರೆ ಪರಶಿವನು ನಿಶ್ಶಂಕನೂ, ಅಚಲಿತನೂ ಆಗಿರುವನೆಂದಮೇಲೆ ಅವನ ಅನುಪಮವಾದ ಚಾರಿತ್ರ ಲೋಕವಿಲಕ್ಷಣ! ೩೭. ನನ್ನ ಬಾಣಗಳಿಗೆ ಕೊಂಚವೂ ಅವಕಾಶವೇ ಕೊಡದಿರುವ, ಅಚಲನೂ ನಿರುಪಮ ಸಮಾಧಿಯುಕ್ತನಾದ ಶಿವನು ಅನ್ಯವನ್ನು ಅರಿಯ. ಆದ್ದರಿಂದಲೇ ಅವನು ಅಭೇದ್ಯ

ಈ ತೆಱದಿಂ ಬೆಱಗಾಗಿ ನಿ
ಶಾತ ತಪೋಗಾತ್ರಧರನನೆಸಲಾಱಿದ ಮಾ ।
ಜಾತನನೀಕ್ಷಿಸಿ ಗಗನದೊ
ಳಾತುರಿಸುವ ಹರಿಯುಜರ್ಗೆ ನಾರದನೆಂದಂ ॥ ೩೮

ಜಲದೊಳಗಣ ಜಲಜದವೋಲ್
ತಿಲದೊಳಗಣ ತೈಲದಂತೆ ಕಾಷ್ಠದ ನಡುವು ।
ಜ್ವಲಿಸುವ ಶಿಖಿಯಂತೊಪ್ಪುವ
ಚಲಶಿವನಂ ಕಾಮನೆಸುಗೆ ಕೆಯ್ಕೊಂಡಪುದೇ ॥ ೩೯

ತ್ರಿಣಯನನಂ ಹರನಂ ನಿ
ರ್ಗುಣನಂ ಸಡಿಫಡ ರತೀಶನಿಸುವನೆ ಹೋ ಬೇ ।
ಡಣಕದ ಮಾತೆಲ್ಲಿಯದೆ
ತ್ತಣ ಕಾಮನದೆತ್ತಣಭವನೆತ್ತಣ ಬಾಣಂ ॥ ೪೦

ವ॥ ಎಂದು ಗಗನಾಂಕಣದೊಳ್ ಕುಣಿವ ಸಂಗ್ರಾಮಲಂಪಟನಪ್ಪ ನಾರದಮುನೀಂದ್ರಂ ನಾರಾಯಣ ನೀರಜಸಂಭವರ್ಗೆ ನಲಿನಲಿದು ಪೇಳುತ್ತಿರ್ಪಿನಮಿತ್ತಲ್,

ಮ॥ ನಡೆತಂದಳ್ ಶಿವಪೂಜೆಗೆಂದಗಜೆ ಪುಷ್ಪವ್ರಾತಮಂ ಕೊಂಡು ಸಂ
ಗಡದೊಳ್ ಬರ್ಪ ವಿಲಾಸಿನೀನಿಕರದಿಂ ಸೌರಭ್ಯಲೋಲುಪ್ತಿಯಿಂ ।
ಗಡಣಂಗೊಂಡ ಶಿಳೀಮುಖಪ್ರಕರದಿಂ ಸುಯ್ಗಂಪಿನೊಳ್ ಸಾರ್ದು ಮುಂ
ಗುಡಿಯೊಳ್ ತೀಡುವ ದಕ್ಷಿಣಾನಿಲನಿನೊಪ್ಪಂಬೆತ್ತ ವಿಸ್ತಾರದೊಳ್ ॥ ೪೧

ಕುರುಹೇ ಇಲ್ಲದವನು ಅವನು ಎಂದು ರತೀಶನು ಕಾಂತಿಗುಂದಿ ಬೆರಗಾದ. ೩೮. ಹೀಗೆ ಬೆರಗಾಗಿ ತೀಕ್ಷ್ಣವಾದ ಉಗ್ರತಪೋಮಗ್ನನಾದ ಪರಶಿವನ ಮನಸ್ಸನ್ನು ಕದಲಿಸಲಾರದೆ ಖಿನ್ನನಾದ ಲಕ್ಷ್ಮೀಸುತ ಕಾಮನ ಸ್ಥಿತಿಯನ್ನು ಕಂಡು ಗಗನದಲ್ಲಿ ಆತುರಗೊಂಡಿದ್ದ ಹರಿಯಜರಿಗೆ ನಾರದನು ಹೀಗೆಂದನು. ೩೯. ನೀರಿನಲ್ಲಿರುವ ಕಮಲದಂತೆ, ಎಳ್ಳಿನೊಳಗಣ ಎಣ್ಣೆಯಂತೆ, ಕಾಷ್ಠದಲ್ಲಿನ ಬೆಂಕಿಯಂತೆ ಇರುವ ಶಿವನನ್ನು ಕಾಮನ ಅಸ್ತ್ರಗಳು ಸೋಂಕಬಲ್ಲವೆ? ೪೦. ಮುಕ್ಕಣ್ಣನೂ ನಿರ್ಗುಣನೂ ಆದ ಹರನನ್ನು ರತೀಶನು ಬಾಣಗಳಿಂದ ಹೊಡೆವುದೆಂದರೇನು? ಛೆ! ಛೆ! ಇಂತಹ ಅಣಕದ ಮಾತುಗಳಿಂದ ಏನು ಪ್ರಯೋಜನ? ಕಾಮ ಎಂದರೇನು? ಭವ ಎಂದರೆ ಏನು? ವ॥ ಹೀಗೆ ಗಗನದಲ್ಲಿ ನರ್ತಿಸುತ್ತಿರುವ ಕಲಹಪ್ರಿಯ ನಾರದನು ಹರಿಯಜರಿಗೆ ಹೇಳುತ್ತಿರುವಾಗ ೪೧. ಆ ಸಮಯಕ್ಕೆ ಸರಿಯಾಗಿ ಅಗಜೆ ಬಗೆ ಬಗೆಯ ಹೂವುಗಳನ್ನು ತೆಗೆದುಕೊಂಡು ಬರುತ್ತಿದ್ದಾಳೆ. ಅವಳ ಜೊತೆ ಅನೇಕ ವಿಲಾಸಿನಿಯರಿದ್ದಾರೆ; ಹೂವುಗಳ ಸುಗಂಧಕ್ಕೆ ಎಳಸಿ ಬಂದ ದುಂಬಿಗಳು, ಜೊತೆಗೆ ಮಂದಮಾರುತ

ಉ॥ ಬಂದು ನವೀನ ಪುಷ್ಪಕುಲಮಂಡನಮಂ ಜಡೆಯೊಳ್ ಭುಜಂಗಳೊಳ್
ಸಂದ ಕರಂಗಳೊಳ್ ಶಿವನ ತೋಳುರಃಸ್ಥಳದೊಳ್ ಪದಂಗಳೊಳ್
ನಿಂದು ವಿಳಾಸದಿಂದಗಜೆ ಸಿಂಗರಿಸುತ್ತೆ ಕಟಾಕ್ಷಕಾಂತಿಯೊಳ್
ಸಂದಣಿಗೊಳ್ವ ಕಾಮಕುಲಮಂದೊಗೆಯುತ್ತಿರೆ ನಾಡೆ ನೋಡಿದಳ್ ॥ ೪೨

ವ॥ ಅಂತು ನೋಟದೊಳ್ ಕೋಟ್ಯನುಕೋಟ ಕುಸುಮಾಯುಧರ್ ಪುಟ್ಟುತ್ತಿರೆ ಪುಷ್ಪಾಂಜಲಿಯಂ ಪಿಡಿದು ಕಪರ್ದಿಯ ತಪಮೆಂಬ ಶಶಿಕಾಂತಶಿಳಾತಳದೊಳ್ ಬಳ್ದ ಚಂದ್ರಕರಂಗಳಂತೆಯುಂ ಶಂಭುವಿನನೆಳ್ಚಱೆಕೆ ಯೆಂಬ ಚಂದ್ರೋದಯಮಪ್ಪನ್ನಂ ಸೈರಿಸದೆ ಪರಿದು ಮುತ್ತುವ ಚಕೋರಿಗಳಂತೆಯುಂ ಹರನ ಕರಣಂಗಳೆಂಬ ಬಲ್ನನೆಗಳಲರ್ವನ್ನಮಿರಲಾಱದೆ ಪರಿದೆಱಗಿ ಸುತ್ತಿ ಮುತ್ತುವ ಮಧುಕರಂಗಳಂತೆಯುಂ ಬೇಗಮೀಗಳೆ ನಿನ್ನ ಪಕ್ಷತರಮಂ ಮಾಳ್ಪೆನೆಂಬ ಭೀಂಕೃತಿಯಂ ನುಡಿದು ಪರಿದು ಬೆರಸುವ ಕುಸುಮಶರಂಗಳಂತೆಯುಮಿರ್ದು ತನ್ನ ಸರಸದೃಷ್ಟಿಗಳಿಂ ಹರನಂ ನೋಡುತುಂ ತಪೋಭರಮಂ ಬಿಡಿಸಲಿರ್ದ ಮೃಡಾನಿಯಂ ಕುಸುಮ ಕೋದಂಡಂ ಕಂಡು,

ಕಂ॥ ಇನ್ನಂಜೆನಂಜೆನಾಹಾ
ಉನ್ನತಬಲವಾಯ್ತೆನುತ್ತೆ ವಿಭ್ರಮ ಬಳಸಂ ।
ಪನ್ನಂ ಕಾಮಂ ತೆಗೆದಂ
ತನ್ನಗ್ಗದುದಂಚ ಪಂಚಬಾಣಮನಾಗಳ್ ॥ ೪೩

ಬೀಸತೊಡಗಿತು. ೪೨. ಆಗಮಿಸಿದ ಅಗಜೆ ಪೊಸ ಪೊಸ ಬಗೆಯ ಪುಷ್ಪಾಲಂಕಾರಗಳನ್ನು ಶಿವನ ಜಡೆ, ಭುಜಗಳು, ಕೈಗಳು, ತೋಳು, ಉರಃಸ್ಥಳ, ಪಾದಗಳು, ಮುಂತಾದೆಡೆಗಳಲ್ಲಿ ವಿಲಾಸದಿಂದ ಅಲಂಕರಿಸಿ ತನ್ನ ಕಡೆಗಣ್ಣ ನೋಟದಲ್ಲಿಯೆ ಅನಂತ ಕಾಮರು ಉಗಮಿಸುವಂತೆ ಶಿವನನ್ನು ನೋಡಿದಳು. ವ॥ ಹಾಗೆ ನೋಡಿದ ಆ ನೋಟದಲ್ಲಿ ಕೋಟ್ಯನುಕೋಟಿ ಕುಸುಮಾಯಧರು ಹುಟ್ಟುವಂತಿದ್ದರು, ಅವಳು ಪುಷ್ಪಾಂಜಲಿಯನ್ನು ಹಿಡಿದು ಸರಸದೃಷ್ಟಿಯಿಂದ ಶಿವನನ್ನು ನೋಡುತ್ತಿದ್ದರೆ ಆ ನೋಟಗಳು ಕಪರ್ದಿ(ಶಿವ)ಯ ತಪಸ್ಸೆಂಬ ಚಂದ್ರಕಾಂತ ಶಿಲಾತಲದಲ್ಲಿ ಬಿದ್ದ ಚಂದ್ರಕಿರಣಗಳಂತೆಯೂ, ಶಂಭುವಿನ ಎಚ್ಚರವೆಂಬ ಚಂದ್ರೋದಯವಾಗುವವರೆಗೆ ಸೈರಿಸಲಾರದೆ ಮುನ್ನಡೆದು ಮುತ್ತುವ ಚಕೋರಿಗಳಂತೆಯೂ ಹರನ ಕರಣ (ಇಂದ್ರಿಯ)ಗಳೆಂಬ ಹೂಗಳು ಅರಳುವವರೆಗೆ ತಡೆಯಲಾರದೆ ಬಂದು ಕವಿದು ಮುತ್ತುವ ದುಂಬಿಗಳಂತೆಯೂ, ಕೂಡಲೇ ನಿನ್ನ ತಪಸ್ಸನ್ನು ಹದಗೊಳಿಸುವನೆಂಬ ಭೀಕರತೆಯನ್ನು ನುಡಿದು ಬರುವ ಹೂವಿನ ಬಾಣಗಳಂತೆಯೂ ಇದ್ದವು. ಹೀಗೆ ಮೃಡಾಣಿಯು ಹರನ ದೃಢ ತಪಸ್ಸನ್ನು ಬಿಡಿಸಲಿರುವುದನ್ನು ಕಂಡ ಮನ್ಮಥನು- ೪೩. ಇಂತಹ ಸುಯೋಗವು ಬರುವುದನ್ನೇ ಕಾಯುತ್ತಿದ್ದ ಕಾಮ "ಇನ್ನು ನಾನು ಅಂಜುವುದಿಲ್ಲ; ಅಂಜುವುದಿಲ್ಲ! ಎಂಥ ಸುಸಮಯವಿದು! ಎಂದು ಬಗೆದು ತನ್ನ ಶ್ರೇಷ್ಠವಾದ ಪಂಚಬಾಣಗಳನ್ನು ಒಮ್ಮೆಗೇ

ಕಂ।। ನಳನಳಿಸುವಿಕ್ಷುಚಾಪದೊ
ಳಳವಡೆ ನಡೆನೋಡಿ ಹೂಡುತೈದಂಬಂ ಸಂ ।
ಚಳಿಸದೆ ಶಂಕರನ ಮನಂ
ಚಳಿಯಿಪುದಂ ಸಾರ್ದು ಪಾರ್ದು ತೆಗೆನೆಱೆದಿರ್ದಂ ।। ೪೪

ಮ।।ಸ್ರ।। ತೆಗೆದನಾಕರ್ಣಂಬರಂ ಶಂಬರರಿಪು ನೆಱೆ ಹೂಡಿರ್ದ ಪುಷ್ಪಾಸ್ತ್ರದೊಂದು
ಜ್ವಗಮಾಕಾಶಸ್ಥನಾಕೌಕರೊಳೊದವಿದನೂನಾರ್ತಿ ಕೂರ್ತೆಯ್ದೆ ನಿಂದಿ ।
ರ್ಪಗಜಾಚತ್ತಾಭಿಲಾಷಾವಿತತಿ ನೆರೆದು ಭೂತೇಶ ಚತ್ತಾಂತದೊಳ್ ಪೊ
ಕ್ಕು ಗಭೀರೋದ್ಯತ್ ತಪೋಬೀಜಮನತಿಭರದಿಂದೊತ್ತಿ ಮುತ್ತಿತ್ತು ಸುತ್ತಂ ।। ೪೫

ವ।। ಇಂತು ಸಕಲಜಗದ್ಧಿತಾರ್ಥಮಪ್ಪ ಹರಿವಿರಿಂಚಗಳ ಮನದ ಬಯಕೆಯುಂ ಕಂದರ್ಪನ ಪಂಚಬಾಣಾನುಸಂಧಾನಮುಂ ಪಾರ್ವತಿಯ ಮನೋರಥಮುಂ ಮುಪ್ಪುರಿಗೊಂಡು ಶಿವನ ನಿಷ್ಕ್ರಿಯಾತ್ಮಕ ನಿರುಪಾಧಿಕ ನಿರಾವರಣ ಸ್ವಾನುಭವ ಸಂವೇದ್ಯ ಸ್ವಯಂಪ್ರಕಾಶಮಂ ಸುತ್ತಿ ಮುತ್ತಿ ಪತ್ತಿ ಚಿಗಿಲ್ತು ಬಡದಿರೆ ನಿರ್ವಿಕಾರಸ್ವರೂಪನಪ್ಪ ಪರಮಂಗೆ ಸ್ವಪ್ನೋಪಮಾಹಂ ಮಮತೆ ತಲೆಯೇಱೆ ಜೀವನಾಗಿ ಜೀವನಿಂ ಪ್ರಾಣಾನಿಲಂ ಪ್ರಾಣಾನಿಲನಿಂ ಚಿತ್ತಂ ಚಿತ್ತದಿಂದಹಂಕಾರಂ ಅಹಂಕಾರದಿಂ ಬುದ್ಧಿ ಬುದ್ಧಿಯಿಂ ಮನಂ ಜನಿಯಿಸಿತ್ತಂತರಂಗಬಹಿರಂಗಭಾವಮಂ ನೆನೆಯೆ ನೆನೆವಲ್ಲಿಂ ಮುನ್ನಂ ಮದನನ ಪಂಚಬಾಣಂ ಪರಿತಂದು ನೆರೆದಡಿಪಿ ಬೆರಸಿ ಕವಿದು ಮನಮನಿರ್ಮಯ್ಗಂಡು ಸಹಸ್ರಮುಖದಿಂ ಸಂಚಳಮನೀಯೆ ನಿಲಲ್ ಬಾರದೆ ತಪೋಭರದ ಬೆಸುಗೆ ಬಡುವಂತೆ ಮೆಯ್ಯ ಸಂಪುಟಂ ಬರ್ಚಲೊಡಂ ನೋಡಿ ನೋಡಿ ನೋಡಲಣ್ಮದೆ

ಹೊರತೆಗೆದನು. ೪೪. ಆತ ಹೊಳೆಯುವ ತನ್ನ ಧನುಸ್ಸಿಗೆ ಪಂಚಬಾಣಗಳನ್ನು ಅಳವಡಿಸಿ, ಶಂಕರನನ್ನು ಚೆನ್ನಾಗಿ ನೋಡಿ ಅವನ ಮನಸ್ಸು ಚಲಿಸುವಂತೆ ಮಾಡಲು ೪೫. ಮನ್ಮಥನು ಕಿವಿಯವರೆಗೆ ಎಳೆದು ಹೂಡಿದ್ದ ಪುಷ್ಪಾಸ್ತ್ರ ಪ್ರಯೋಗೋದ್ಯಮವು ನಾಕಿಗರ ಕುತೂಹಲವನ್ನು ಕೆರಳಿಸಿತು. ಜೊತೆಗೆ, ಎದುರಿಗೆ ನಿಂತಿದ್ದ ಅಗಜೆಯ ಮನೋಭಿಲಾಷೆಯು ಭೂತಪತಿ ಪರಶಿವನ ಮನಸ್ಸಿನ ಒಳಹೊಕ್ಕು ಆಳದಲ್ಲಿ ಬೇರೂರಿದ್ದ ತಪೋಬೀಜವನ್ನು ಒತ್ತಿ, ಅದರ ಸುತ್ತಲೂ ಮುತ್ತಿತ್ತು; ವ।। ಹೀಗೆ ಸಕಲ ಲೋಕಹಿತಕ್ಕಾಗಿರುವ ಹರಿ-ವಿರಿಂಚಿಗಳ ಮನದ ಬಯಕೆ, ಕಂದರ್ಪನ ಪಂಚಬಾಣಗಳ ಅನುಸಂಧಾನ, ಪಾರ್ವತಿಯ ಮನೋರಥ ಈ ಮೂರೂ ಮುಪ್ಪುರಿಗೊಂಡುವು; ಇದರಿಂದ ನಿಷ್ಕ್ರಿಯಾತ್ಮಕ-ನಿರುಪಾಧಿಕ-ನಿರಾವರಣ-ಸ್ವಾನುಭಾವ-ಸಂವೇದ್ಯವಾದ ಶಿವನ ಸ್ವಯಂಪ್ರಕಾಶವನ್ನು ಸುತ್ತಿ ಮುತ್ತಿ ಪತ್ತಿ ಚಿಗುರಿಸಿತು. ಅದರಿಂದ ನಿರ್ವಿಕಾರಸ್ವರೂಪನಾದ ಪರಶಿವನಲ್ಲಿ ಕನಸಿನಲ್ಲಿಯೊ ಎಂಬಂತೆ ಅಹಂ-ಮಮತೆಗಳು ತಲೆಯೇರಲು ಜೀವನಾಗಿ, ಜೀವನಿಂದ ಪ್ರಾಣಾನಿಲ, ಪ್ರಾಣಾನಿಲನಿಂದ ಚಿತ್ತ, ಚಿತ್ತದಿಂದ ಅಹಂಕಾರ, ಅಹಂಕಾರದಿಂದ ಬುದ್ಧಿ, ಬುದ್ಧಿಯಿಂದ ಮನಸ್ಸು ಜನಿಸಿತು, ಅಂತರಂಗವು ಬಹಿರಂಗವನ್ನು ನೆನೆಯಿತು, ಹಾಗೆ ನೆನೆವ ಮೊದಲೇ ಮದನನ ಪಂಚಬಾಣಗಳು ಹೊರಬಿದ್ದು ಬಂದು ಪರಶಿವನನ್ನು ಕವಿದವು. ಮನವು ಒಡೆಯಿತು, ಸಹಸ್ರಮುಖದಿಂದ ಅವು ಮನಸ್ಸನ್ನು

ಪುಷ್ಪಶರಮಂ ನೂರ್ಮಡಿಸುವಂತೆ ಪುಷ್ಪಾಂಜಲಿಯಂ ಕೊಟ್ಟಂತೆ ಕಂಪಿಸಿ ಮುಂತೆ ಮೈಯ್ಯಿಕ್ಕಿರ್ದ ಗಿರಿಜಾತೆಯಂ ಭೂತೇಶ್ವರಂ ಕಂಡಾನೇಕೆಯೀ ಮಾನಿನಿಯೇಕೀ ತಪದೊಳಿಲ್ಲಿಯದೆತ್ತಣಿಂ ಬಂದು ದಾರಿಂದಾದುದೆಂದು ಕಾಮನಿರ್ಪ ವಾಮಭಾಗಮಂ ನಿಟಲಾಕ್ಷಂ ನಸುಗೋಪದಿಂ ನೋಡಿದಾಗಳ್,

ಕಂ॥ ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದು ನಿಟಿಲೇಕ್ಷಣದೊಳ್ ।
ಕೂಡೆ ಬಳೆಬಳೆದು ಸುಳಿಸುಳಿ
ದೀಡಿಱೆದೊಳಗೊಳಗೆ ಘುಳುಘುಳಿಸಿ ಕುದಿದಾಗಳ್ ॥ ೪೬

ಚಂ॥ ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱೆದತ್ತು ಬಾನ್
ಗೊಗೆದುದು ನಿಂದು ಪೊಂಬೆಳಗುಮಂ ಪರಪುತ್ತದು ಧಂಧಗಿಲ್ ಧಗಿಲ್ ।
ಧಗಿಲೆನುತಟ್ಟಿ ತಟ್ಟದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ ॥ ೪೭

ಕಂ॥ ಇಟ್ಟಣಿಸಿ ಘುಡುಘುಡಿಸಿ ಕಿಡಿ
ಗುಟ್ಟಿ ಕನಲ್ದಡಸಿ ಸಿಡಿಲ ಬಳಗದ ಮುಳಿಸಂ ।
ತೊಟ್ಟುದು ಬಿಸುಗಣ್ಣುರಿ ಪೊಱ
ಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ ॥ ೪೮

ಕಂ॥ ಗಗನದೆ ಹರಿಸುರಪತಿಗಳ್
ಜಗದ್ಧಿತಾರ್ಥಂ ಮಹೇಶ ಕರುಣಿಪುದೆಂಬ ।
ನ್ನೆಗಮಿತ್ತಲ್ ಘಟೆ ಘಟೆ ಭುಗಿ
ಭುಗಿಲೆನೆ ನೆಱೆ ಕಾಮನುರಿದು ಕರಿಮುಱೆವೋದಂ ॥ ೪೯

ಚಂಚಲಗೊಳಿಸಿದವು; ಇದರಿಂದ ತಪೋಭರದ ಬೆಸುಗೆ ಸಡಲಿತು, ಮೈಯ್ಯ ಸಂಪುಟ ಬಿಚ್ಚಿತು; ಅಷ್ಟರಲ್ಲಿ ಆಗಜೆಯು ಶಿವನನ್ನು ನೋಡಿನೋಡಿ ನೋಡಲಾರದೆ ಅವಳು ಕುಸುಮಶರವನ್ನು ನೂರ್ಮಡಿಸುವಂತೆ ಪುಷ್ಪಾಂಜಳಿಯನ್ನಿತ್ತು ಕಂಪಿಸಿ ಅಡ್ಡಬಿದ್ದಳು. ಶಿವನು ಮೈಯ್ಯಿಕ್ಕಿದ ಅವಳನ್ನು ಕಂಡು ನಾನೇಕೆ? ಈ ಮಾನಿನಿಯೇಕೆ? ಈ ತಪಸ್ಸಿನಲ್ಲಿ ಇದೆಲ್ಲಿಯದು? ಈ ತಪೋಭಂಗಕ್ಕೆ ಕಾರಣರು ಯಾರು?" ಎಂದು ಕಾಮನಿದ್ದ ಎಡಭಾಗವನ್ನು ನಸುಕೋಪದಿಂದ ನೋಡಿದಾಗ, ೪೬. ಹಾಗೆ ನೋಡದ ಮೊದಲೇ ಕೋಪವು, ಶಿವನ ಹಣೆಗಣ್ಣಿನಲ್ಲಿ ಮೊಳೆತು ಬೆಳೆ ಬೆಳೆದು ಸುಳಿದು ಒಳಗೊಳಗೆ ಘುಳುಘುಳಿಸಿ ಕುದಿಯುತ್ತಿತ್ತು. ೪೭. ಪರಶಿವನ ಕಣ್ಣಿಂದ ಉರಿ ಒಗೆಯಿತು, ಹೊತ್ತಿಕೊಂಡಿತು, ಕಿಡಿಯಿಟ್ಟಿತು, ನಾಲ್ಕು ದಿಕ್ಕುಗಳಿಗೂ ಹಬ್ಬಿತು, ಗಗನಕ್ಕೆ ಒಗೆಯಿತು, ಅದು ಹೊಂಬೆಳಗನ್ನು ಹರಡುತ್ತ ಧಂಧಗಿಲ್ ಧಗಿಲ್ ಧಗಿಲೆನುತ ಅಟ್ಟಿತಟ್ಟಿ ಮುಟ್ಟಿತು, ಸುಟ್ಟಿತು; ಅಗಿಯದೆಯೇ ಕಾಮನನ್ನು ತಿಂದು ತೇಗಿತು, ೪೮. ಆ ಹಣೆಗಣ್ಣುರಿ ಘುಡುಘುಡಿಸಿ ಕಿಡಿಹಾರಿಸಿ ಕನಲಿ ಆವರಿಸಿ ಸಿಡಿಲುಗಳ ಬಳಗವೇ ಭೋರ್ಗರೆವಂತೆ ಅಬ್ಬರಿಸಿ ರತಿಪತಿಯನ್ನು ಅರೆನಿಮಿಷದಲ್ಲಿ ಸುಟ್ಟುಬಿಟ್ಟಿತು. ೪೯. ಗಗನದಲ್ಲಿ ಹರಿಸುರಪತಿಗಳು ಮಹೇಶ! ಕರುಣಿಸು, ಇದು ಜಗತ್ತಿನ ಹಿತಕ್ಕಾಗಿ ಎಸಗಿದ್ದು!" ಎಂದು ಮೊರೆಯಿಡುತ್ತಿರುವಷ್ಟರಲ್ಲಿಯೇ ಫರಿಫರಿ ಭುಗಿಲೆಂಬ ಉರಿಯಲ್ಲಿ ಕಾಮ

ತೊಟ್ಟನೆ ಭಾಳಾನಲನಿರ
ದೊಟ್ಟಯಿಸಿಯೆ ಕುಸುಮಶರನನುರುಪಿದ ಪದದೊಳ್ ।
ಪುಟ್ಟಿತುಮಂ ಪೋದುದುಮಂ
ಸುಟ್ಟುದುಮಂ ಕಾಣಬಾರದಾಯ್ತಾ ಕ್ಷಣದೊಳ್ ॥ ೫೦

ವ॥ ಅಂತುಮಲ್ಲದೆ

ಮ॥ ಅರರೇ ಭುರ್ಭುಗು ಭಾಪುರೇ ಭುಗು ಭುಗು ಪ್ರಜ್ವಾಲೆ ಮಜ್ಜಯ್ಯ ದೇ
ವುರೆಮೇಘಾನಲ ವಿಸ್ಫುಲಿಂಗಮಮಮ ಪ್ರದ್ಯೋತವಯ್ಯಯ್ಯ ಭೀ ।
ಕರವಾಹಾ ಫಣಿಫಿಳಿಲ್ ಫಿಟಲ್ ಭಲರೆ ಭಾಳಾಭೀಳಮೆಂದೆಂದು ನಿ
ರ್ಜರಲೋಕಂ ಬೆಱಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ ॥ ೫೧

ಕಂ॥ ಸಂದಣಿಸಿ ಪತ್ತಿದುರಿ ಫರಿ
ಲೆಂದುರುಪಿಡೆ ಬೇಗದಿಂದೆ ಉರಿದಾಕ್ಷಣದೊಳ್ ।
ಬೆಂದ ನುಲಿಯಂತೆ ಮದನಂ
ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ ॥ ೫೨

ಕಂ॥ ಜಯಶೀಲಂ ಪ್ರಭು ಪಾವಕ
ನಯನಂ ವಿಷಕಂಠನಹಿವಿಭೂಷಂ ಕೋಪೋ ।
ದಯನಭವಂ ಸ್ಮರಭಸ್ಮಾ
ವಯವಂ ತಾನಾದನತುಳನಪ್ರತಿಮಂ ॥ ೫೩

ವ॥ ಇಂತತಿ ಸ್ವತಂತ್ರ ಶತಪತ್ರನೇತ್ರಪೂಜಿತಪಾದಂ ಹೇಮಕೂಟಾಗ್ರದ ಮತಂಗಪರ್ವತದೊಳ್ ಮದನನಂ ಸುಟ್ಟುರುಪುತ್ತನಂಗಭಸ್ಮೋದ್ಧೂಳಿತಗಾತ್ರನಾಗಿ

ಉರಿದು ಇದ್ದಿಲಾದನು! ೫೦. ಹಣೆಗಣ್ಣಿನ ಉರಿ ಕುಸುಮಶರನನ್ನು ಕೂಡಲೇ ಆವರಿಸಿ ಸುಟ್ಟ ಆ ಕ್ಷಣದಲ್ಲಿ ಅದು ಹುಟ್ಟಿದ್ದು, ಹೋದದ್ದು ಹಾಗೂ ಸುಟ್ಟಿದ್ದು ಎಂಬುದು ಯಾವುದೂ ಕಾಣದಾಯ್ತು. ೫೧. ಈ ಅದ್ಭುತವನ್ನು ಕಂಡ ದೇವತಾಗಣ "ಅರರೆ! ಭುರ್ಭುಗು! ಭಾಪುರೇ, ಭುಗು ಭುಗು! ಪ್ರಜ್ವಾಲೆ ಮಜ್ಜಯ್ಯ, ದೇವುರೆಕೋಪಾನಲ! ಅಮಮ ಕಿಡಿಗಳು! ಅಯ್ಯಯ್ಯ, ಪ್ರದ್ಯೋತ? ಭೀಕರ! ಆಹಾಹಾ! ಮುಂತಾಗಿ ಬೆರಗಾಗಿ ಮೊರೆಯಿಡುತ್ತಿರುವಾಗ ವಿರೂಪಾಕ್ಷಾಕ್ಷಿ ಕಾಮನನ್ನು ಸುಟ್ಟಿತು. ೫೨. ಗುಂಪು ಗೂಡಿ ಹೊತ್ತಿದ ಆ ಉರಿ ಫರಿಲ್ ಫರಿಲೆಂದು ಉರಿದೊಡನೆಯೇ ಮದನ ಬೆಂದ ನುಲಿ (ಹಗ್ಗ)ಯಂತೆ ಆದ. ಅದನ್ನು ಕಂಡ ಅಭವ ಕಡುಕುಪಿತನಾಗಿ ಅದನ್ನು ತುಳಿದ. ೫೩. ಜಯಶಾಲಿಯಾದ ಆ ಪ್ರಭು, ಬೆಂಕಿಗಣ್ಣ, ನಂಜುಗೊರಳ, ನಾಗಭೂಷಣ ಶಿವನು ಕೋಪಗೊಂಡು ಮದನಭಸ್ಮವನ್ನು ಅಂಗಾಂಗಗಳಿಗೆ ಲೇಪಿಸಿಕೊಂಡು ಅಪ್ರತಿಮನೆನಿಸಿದ. ವ॥ ಹೀಗೆ ಸರ್ವಸ್ವತಂತ್ರನೂ ಕಮಲಾಕ್ಷ (ವಿಷ್ಣು) ಪೂಜಿತಪಾದಾರವಿಂದನೂ ಆದ ಶಿವಮತಂಗ ಪರ್ವತದಲ್ಲಿ ಕಾಮನನ್ನು ಸುಟ್ಟು ಅನಂಗಭಸ್ಮವನ್ನು

ಕಂ॥ ಮುಂತಿರ್ದೊಪ್ಪುವ ಗಿರಿಜಾ
ಕಾಂತೆಯನೀಕ್ಷಿಸದೆ ನುಡಿಯಿಸದೆ ಸೋಂಕದೆ ನಿ ।
ಶ್ಚಿಂತಂ ಸ್ವತಂತ್ರನಹಿಧರ
ನಂತರ್ಧಾನಕ್ಕೆ ಸಂದನಲ್ಲಿಂ ಬಳಿಯಿಂ ॥ ೫೪

ಶಿವನಧಿಕಾಕ್ಷಕ್ರೋಧೋ
ದ್ಧವಶಿಖಿಯಿಂ ಮದನನುರಿಯೆ ರತಿಗತಿಶೋಕಂ ।
ಕವಿದಳ್ಕಿದಳಿಂದುಗುಪ
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ ॥ ೫೫

ವ॥ ಇಂತು ಮನಮಳ್ಕಿ ತನು ಬಳ್ಕಿ ಕೋಡಿ ಕರಣಂ ಬಾಡಿ ಮತಿ ಕೆಟ್ಟು ರತಿದೇವಿಗತಿ ದುಃಖಂ ಪುಟ್ಟಿ ನಿಲಲಾಱದೆ ಕೊರಗುತುಂ ಪರಿದು ಬಂದು

ಕಂ॥ ಬೆಂದಿರ್ದ ಕಾಮನಂ ಕಂ
ಡಂದಳಲೊಳಗೇಱಿ ನುಡಿಯಲಱೆಯದೆ ನಿಲೆ ಶೋ ।
ಕಂ ದಳಮೇಱುತೆ ಮೀಱುತೆ
ಸಂದಣಿಸುತ್ತಳಿತಸ್ತರತಿಯಂ ರತಿಯಂ ॥ ೫೬

ವ॥ ಅದೆಂತೊಡೆ

ಕಂ॥ ಎತ್ತಣ ಹರನೆತ್ತಣ ತಪ
ಮೆತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್ ।
ಎತ್ತಣುರಿ ಎತ್ತಣಿರವಿದು
ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ ॥ ೫೭

ಮೈಗೆಲ್ಲ ಬಳಿದುಕೊಂಡು ೫೪. ನಿಶ್ಚಿಂತನೂ ನಾಗಾಭರಣನೂ ಆದ ಶಿವನು ಎದುರಿಗೇ ನಿಂತಿದ್ದ ಅಗಜೆಯನ್ನು ಕಣ್ಣೆತ್ತಿ ನೋಡಲಿಲ್ಲ, ಮಾತನಾಡಿಸಲಿಲ್ಲ, ಮುಟ್ಟಲೂಇಲ್ಲ; ಕೂಡಲೇ ಅಲ್ಲಿ ಮರೆಯಾದ! ಆ ಬಳಿಕ ೫೫. ಪರಮೇಶ್ವರನ ಕ್ರೋಧದಿಂದ ಅವನ ಹಣೆಗಣ್ಣಿನಿಂದ ಒಗೆದ ಉರಿಯಿಂದ ಮದನ ದಗ್ಧನಾದ. ಇದರಿಂದ ರತಿಗೆ ಶೋಕ ಕವಿಯಿತು; ಅವಳು ಚಂದ್ರನಿಗೆ ಗ್ರಹಣ ಹಿಡಿದಾಗ (ಕೇವಲ ಬೆಳದಿಂಗಳಿಂದಲೇ ಜೀವಿಸುವ) ಚಕೋರಿಯು ಕರಗಿ ಕೊರಗುವ ಸ್ಥಿತಿ ರತಿಗೂ ಒದಗಿತು. ವ॥ ಹೀಗೆ ರತಿಯ ಮನ ಅಳುಕಿತು, ತನು ಬಳುಕಿತು, ಕರಣಗಳು ಬಾಡಿದವು, ಬುದ್ಧಿ ವಿಕಲವಾಯಿತು, ಅವಳು ಅತಿ ದುಃಖಿತಳಾಗಿ ನಿಲ್ಲಲಾರದೆ ಓಡಿ ಬಂದು, ೫೬. ಬೆಂದಿರುವ ಕಾಮನನ್ನು ಕಂಡು, ರತಿಯು ದುಃಖಾತಿರೇಕದಿಂದ ಏನೂ ಮಾತನಾಡಲಾರದೆ ಇರಲು, ಅವಳ ಶೋಕವು ಚಿಗುರಿ, ಮಿತಿಮೀರಿ, ಒಟ್ಟುಗೂಡಿ, ಮುದವಡಗಿದ ರತಿಯನ್ನು ಅಳುವಂತೆ ಮಾಡಿತು! ೫೭. ಎಲೈ ಮದನಾ! ಯಾವ ಹರ, ಅದಾವ ತಪಸ್ಸು, ಅದೆಂತಹ ತಾರಕನ ಬಾಧೆ, ಎಂಥ ಹಣೆಗಣ್ಣು, ಎಲ್ಲಿಯ ಉರಿ, ಎಂಥ ಸ್ಥಿತಿ, ನೀನು ಅದೆಂತಹ ಕೋಟಲೆಯನ್ನು ನನಗೆ ತಂದೊಡ್ಡಿದೆ!

ಎಳೆಯನೆ ಸುಕುಮಾರನೆ ಸದ
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತತ್ ।
ಫಳಮೆ ಸುಧಾರಸಮೇ ನಿ
ನ್ನಳವಱೆಯದೆ ನೊಸಲ ಕಣ್ಣ ಮುಸುಕಂ ತೆಱೆದಯ್ ॥ ೫೮

ಅಸ್ಖಲ್ಪನರನತಿಘೋರ ತ
ಪಸ್ವಿಗಳನಪಾರಮಹಿಮರಂ ವಿಮಳಾಚಾ ।
ರಾಸ್ಪಾದಿಗಳಂ ಗೆಲ್ದ ಮ
ನಸ್ವಿ ಲಲಾಟಾಗ್ನಿಗೆಂತು ಸವಿದುತ್ತಾದಯ್ ॥ ೫೯

ಕಂತುವೆ ನೀನಿಂತಾದೊಡ
ದೆಂತುಳಿವೆನದೆಂತು ನಿಲ್ವೆನೆಂತೊಪ್ಪುವೆನಿ ।
ನ್ನೆಂತುಸಿರ್ವೆನೆಂತು ಬಾಳ್ವೆನ
ದೆಂತೀಕ್ಷಿಪೆನೆಂತು ಪೋಪೆನೆಂತಾನಿರ್ಪೆಂ ॥ ೬೦

ಭಾವಿಸಿ ಭವನಂ ಕುಸುಮಾ
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂದಿರ್ದೆನಿದಿಂ ।
ತೋವ್ಪೋ ನಿಟಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆನಲರ್ವಿಲ್ಲರಸಾ ॥ ೬೧

ಶಾ॥ ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತಕ್ಕಟಾ
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾಳಾಯ್ತು ಕಂದರ್ಪ ಸದ್ ।
ಭಾವಂ ಭಸ್ಮಮದಾಯ್ತು ಮೆಯ್ಮೆ ಮಡಿಯಿತ್ತುತ್ಸಾಹವಿಂಗಿತ್ತದಿ
ನ್ನೇವೇಳ್ದೆಂ ನಡೆದೆತ್ತ ಸಾರ್ವೆನಿಳೆಗಿನ್ನೇನಪ್ಪೆನೆಂತಿರ್ಪೆನೋ ॥ ೬೨

೫೮. ಎಳೆಯನೆ, ಸುಕುಮಾರನೆ, ಸದಮಳನೆ, ಸುಖಿದಾಯಕನೆ, ಸೊಬಗೇ ಕಲ್ಪವೃಕ್ಷವೆ, ಕಲ್ಪತರು ಫಲವೆ, ಅಮೃತರಸವೆ, ನೀನು ನನ್ನ ಶಕ್ತಿಯನ್ನು ಅರಿಯದೆ ಹಣೆಗಣ್ಣು ತೆರೆಯಲು ಅವಕಾಶ ಕೊಡಬಹುದೆ? ೫೯. ನೀನು, ದೇವತೆಗಳನ್ನು, ಮಹಾತಪಸ್ವಿಗಳನ್ನು, ಅಪಾರ ಮಹಿಮಾಶಾಲಿಗಳನ್ನು, ನಿರ್ಮಲಚಾರಿತ್ರರನ್ನು ಗೆದ್ದ ಮಹಾವೀರ! ಆದರೆ ಇಂಥವನು ಈ ಹಣೆಗಣ್ಣಿಗೆ ಹೇಗೆ ತುತ್ತಾದೆ! ೬೦. ಎಲೈ ಕಂತುವೆ, ನೀನು ಹೀಗಾದ ಮೇಲೆ ನಾನು ಇನ್ನು ಹೇಗೆ ಉಳಿಯಲಿ, ಹೇಗೆ ನಿಲ್ಲಲಿ, ಹೇಗೆ ಒಪ್ಪಲಿ, ಹೇಗೆ ಬಾಳಲಿ, ಏನು ಹೇಳಲಿ, ಹೇಗೆ ನೋಡಲಿ, ಎಲ್ಲಿಗೆ ಹೋಗಲಿ, ಅಯ್ಯೋ! ೬೧. ನೀನು ಭವನನ್ನು ಭಾವಿಸಿ ಹೂಬಾಣವನ್ನು ಬಿಟ್ಟು ಗೆಲ್ಲುವೆ ಎಂದು ನಾನು ಭಾವಿಸಿದ್ದೆ; ಆದರೆ ಅಯ್ಯೋ! ನೀನು ಆ ಉರಿಗಣ್ಣಿಗೆ ಬೆಂದು ಹೋಗುವೆ ಎಂದು ಎಲೆ ಅರಸಾ! ನಾನೆಲ್ಲಿ ಬಲ್ಲೆ! ೬೨. ನೀನು ಭಸ್ಮವಾದ ಮೇಲೆ ಲಾವಣ್ಯವೇ ಲಯವಾಯಿತು, ವಿಭ್ರಮ ವಿಲಾಸಗಳು ಮಾಯವಾದವು, ಅಕ್ಕಟಾ! ಚೆಲುವು ಬೆಂದು ಹೋಯಿತು, ಸುಖವು ಸತ್ತಿತು, ಹೇ ಕಂದರ್ಪ, ಸದ್ಭಾವವು ಹಾಳಾಯಿತು, ಮಹಿಮೆ ಭಸ್ಮವಾಯಿತು. ಉತ್ಸಾಹ ಇಂಗಿತು, ಅಯ್ಯೋ, ಇನ್ನು ಏನು ಹೇಳಲಿ, ಎಲ್ಲಿ ಹೋಗಲಿ!

ಕಂ॥ ಎಲ್ಲಿತ್ತೋ ಶಶಿಯ ಬೆಳ್ಗೊಡೆ
ಎಲ್ಲಿತ್ತೋ ಪೂತ ನೂತ್ನ ಚೂತಗಜಂ ತಾ ।
ನೆಲ್ಲಿತ್ತೊ ಪಂಚಬಾಣಮ
ದೆಲ್ಲಿತ್ತೋ ಕುಸುಮಚಾಪವಿಭ್ರಮಮೀಗಳ್ ॥ ೬೩

ಎಲೆ ಸುರತಕಾಮಧೇನುವೆ
ಎಲೆ ಸುರತಾಂಬೋಧಿಚಂದ್ರ ಎಲೆ ಸುರತಮಹೋ ।
ತ್ವಲ ಸೂರ್ಯ ಎಲೆ ಸುರತಸಂ
ಕುಲಪರಮಾರಾಧ್ಯ ಎತ್ತಡಂಗಿದೆ ಮದನಾ ॥

ಕಂ॥ ಲಕ್ಷ್ಮೀ ನೆಱೆ ಪುಟ್ಟಿರ್ದಖಿ
ಲಕ್ಷ್ಮಾ ಪತಿಯೆನಿಸಿ ಬಾಳ್ದು ಪುರಹರನ ಲಸತ್ ।
ಪಕ್ಷ್ಮ ಪ್ರಭುತಾಗ್ರಂ ಬಿರ್ದಿದ
ಸೂಕ್ಷ್ಮ ದ ಕಾಲದೊಳೆ ಫಳಿಲನುಳಿದಯ್ ಮದನಾ ॥ ೬೪

ಕೇಳೆಲೆ ಮನ್ಮಥ ಹಂಸೆಯ
ತೂಳದ ತಳ್ಪಂ ಕರಂ ಕಠಿನಮೆಂದೀಗಳ್ ।
ಭಾಳಾಕ್ಷಿಯರಮನೆಯೊಳಾ
ಭೀಳದ ದಳ್ಳುರಿಯ ಮಂಚದೊಳ್ ಪವಡಿಸಿದಯ್ ॥ ೬೬

ವ॥ ಅಂತುಮಲ್ಲದೆ

ಕಂ॥ ಹಾ ಮದನ ಹಾ ಮನೋಹರ
ಹಾ ಮಕರಪತಾಕ ಹಾ ಮಹಾವಿಭ್ರಮ ಹಾ ।
ಹಾ ಮನ್ಮಥ ಹಾ ಸಮ್ಮದ
ಹಾ ಮತ್ಕಾಣೇಶ ಹಾ ವಿಳಾಸ ವಿನೋದಾ ॥ ೬೭

ಇನ್ನು ಈ ನೆಲದ ಮೇಲೆ ಹೇಗಿರಲಿ! ಈ ಜಗತ್ತಿಗೆ ನಾನು ಏನಾಗಲಿ? ೬೩. ನೀನೇ ಅಳಿದ ಮೇಲೆ ಈಗ ಆ ಶಶಿಯೆಲ್ಲಿ, ಬೆಳ್ಗೊಡೆಯಲ್ಲಿ, ಹೂ ಬಿಟ್ಟ ನೂತನ ಚೂತಗಜವೆಲ್ಲಿ, ಆ ಪಂಚಬಾಣಗಳೆಲ್ಲಿ, ಕುಸುಮಚಾಪ ಮುಂತಾದ ಆ ವಿಲಾಸಗಳು ಇನ್ನೆಲ್ಲಿ! ೬೪. ಎಲೈ ಸುರತಕಾಮಧೇನುವೆ, ಸುರತವೆಂಬ ಕಡಲಿಗೆ ಚಂದ್ರನಂತಿದ್ದವನೆ, ಸುರತಕಮಲಕ್ಕೆ ಸೂರ್ಯನಂತಿದ್ದವನೆ, ಸುರತ ರಸಿಕರಿಗೆ ಆರಾಧ್ಯಮೂರ್ತಿಯಾಗಿದ್ದವನೆ, ಮದನಾ, ಎಲ್ಲಿ ಅಡಗಿದೆ! ೬೫. ಎಲೆ ಮದನನೆ, ನೀನು ಲಕ್ಷ್ಮೀದೇವಿಯ ನಚ್ಚಿನ ಮಗನಾಗಿ ಹುಟ್ಟಿ, ಅಖಿಲಲೋಕಾಧಿಪತಿಯೆನಿಸಿ ಬಾಳಿದೆ; ಇಂಥ ನೀನು ಪುರಹರನ ಬೆಳಗುವ ಕಣ್ಣುರೆಪ್ಪೆ ಬಿಚ್ಚಿದ ಕ್ಷಣಾರ್ಧದಲ್ಲಿ ಉರಿದು ಹೋದೆಯಲ್ಲವೆ? ೬೬. ಎಲೆ ಮನ್ಮಥಾ, ನೀನು ಹಂಸಗಳ ತುಪ್ಪುಳಿನ ಹಾಸಿಗೆಯೇ ಬಹುಕಠಿನ ಎಂದು ಹೇಳುತ್ತಿದ್ದೆ; ಅಂಥ ನೀನು ಇಂದು ಹಣೆಗಣ್ಣ ಅರಮನೆಯಲ್ಲಿ ಭಯಂಕರವಾದ ದಳ್ಳುರಿಯ ಮಂಚದಲ್ಲಿ ಮಲಗಿದೆಯಲ್ಲವೆ? ೬೭-೬೮. ಹೇ ಕಂದರ್ಪ, ಹೂವಿನ ಒಡವೆಗಳೆ, ಸರಿಯಲ್ಲ, ಅವೆಲ್ಲ ಹೊರೆ, ಎನ್ನುವಷ್ಟು

ಕುಸುಮಾಭರಣಾವಳಿಗಳ್
ಬಸಮಲ್ಲಂ ಪೊಱೆಯಿವೆಂಬ ಸುಕುಮಾರತೆಯೊಳ್ ।
ಬಿಸುಗಣ್ಣ ಮಿಸುಪ ಕೋಪದ
ಪೊಸ ತುಡಿಗೆಯನೆಂತು ಸೈರಿಸಿದೆ ಕಂದರ್ಪಾ ॥ ೬೮

ವ॥ ಮತ್ತಮಲ್ಲದೆ ಪಂಚಬಾಣನ ಸರ್ವಗುಣಂಗಳಂ ನೆನೆನೆನೆದು ಸೈರಿಸಲಾಱದೆ ಮತ್ತೆ ಮತ್ತೆ ಶೋಕಂಗೆಯ್ದು

ಕಂ॥ ಪಸಿವಱೆಯದೆ ತೃಷೆಯಱೆಯದೆ
ದೆಸೆಯಱೆಯದೆ ಮದನ ಮದನ ಫಲವುಂ ಕಾಲಂ ।
ಕುಸುಮದೆ ಲಿಂಗಮನೊಸೆದ
ರ್ಚಿಸಿದ ಫಲಂ ಕಿರ್ಚಿನೊಳಗೆ ಬೇವಂತಾಯ್ತೇ ॥ ೬೯

ಸುರತ ಶ್ರಾಂತಿಯೊಳೀಷತ್
ಪರಿಸುಪ್ತಿಯನೆಯ್ದಿ ಸುಖದೊಳಾನಿರೆ ನೀಂ ಮೆಯ್ ।
ಗರೆದೆನ್ನನಂದು ನೋಯಿಪ
ಪರಿ ತಾಂ ದಿಟಮಾದುದಿಂದು ಮನ್ಮಥಭೂಪಾ ॥ ೭೦

ಬೆಳಗಾಯ್ತುಷ್ಪವಡಿಸು ಬೆಳ
ಬೆಳಗುವ ಮಣಿಮುಕುರಮಂ ನಿರೀಕ್ಷಿಸು ಹಂಸಾ ।
ವಳಿಯಂ ನಡೆಪಾಡಿಸು ಕೋ
ಕಿಳನಾದಮನಾಲಿಸುಸಿರದಿರ್ಪರೆ ಮದನಾ ॥ ೭೧

ಎಂದುಂ ಮುಳಿದೊಡೆ ತಿಳಿವಂ
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ ।
ಯಂದಂ ಪೊಸತಿಂದಿನ ಮುಳಿ
ಸೆಂದಿನ ಮುಳಿಸಿನವೊಲಲ್ತು ಮದನನೃಪಾಲಾ ॥ ೭೨

ಸುಕುಮಾರನೆನಿಸಿದ್ದ ನೀನು, ಬಿಸುಗಣ್ಣಿನ ಹೊಳಿವ ಕೋಪದ ಆ ಹೊಸ ತೊಡಿಗೆಯನ್ನು ಹೇಗೆ ಸಹಿಸಿದೆ? ವ॥ ರತಿಯು ಮದನನ ಒಂದೊಂದು ಗುಣವನ್ನೂ ನೆನೆದು ತಾಳಲಾರದೆ ಮತ್ತೆ ಮತ್ತೆ ಶೋಕಿಸಿ, ೬೯. ಹೇ ಮದನ, ಹಸಿವೆನ್ನದೆ, ಬಾಯಾರಿಕೆಯೆನ್ನದೆ, ದಿಕ್ಕೆನ್ನದೆ, ಹಲವು ಕಾಲ ಹೂಗಳಿಂದ ಲಿಂಗವನ್ನು ಭಕ್ತಿಯಿಂದ ಪೂಜಿಸಿದ ಫಲ ಕಿಚ್ಚಿನಲ್ಲಿ ಬೇಯುವಂತಾಯಿತಲ್ಲವೆ? ೭೦. ಸುರತಾಂತ್ಯದಲ್ಲಿ ನಾನು ಒಂದಿಷ್ಟು ನಿದ್ದೆ ಹೋಗಿ ಸುಖಿಸುತ್ತಿರುವಾಗ ನೀನು ಮರೆಯಾಗಿ ನನ್ನನ್ನು ಹಿಂದೆ ನೋಯಿಸುತ್ತಿದ್ದುದು ಇಂದು ನಿಜವೇ ಆಯಿತಲ್ಲವೆ? ಅಯ್ಯೋ ಮನ್ಮಥಭೂಪಾ! ೭೧. ಬೆಳಗಾಯಿತು ಏಳು, ತೊಳಗುವ ಮಣಿ (ಕನ್ನಡಿ) ಮುಕುರವನ್ನು ನೋಡು, ಹಂಸೆಗಳನ್ನು ಆಡಿಸು, ಕೋಗಿಲೆಯ ನಾದವನ್ನು ಕೇಳು, ಹೇ ಮದನಾ, ಮಾತನಾಡದೆ ಸುಮ್ಮನಿರುವುದೇ! ೭೨. ಹೇ ಮದೀಶ, ಹಿಂದೆ ನೀನು ಮುನಿದಾಗ ಇದ್ದ ವಿಷಯವನ್ನು ಮುಂದಿಡದೆ ನೀನು ಮುನಿಸು ಅಳಿಯುತ್ತಿರಲಿಲ್ಲ; ಅದರೆ ಇಂದಿನ ಮುನಿಸು

ಪನ್ನಗಭೂಷಣ ವಿಷಸಂ
ಪನ್ನನ ನಿಷ್ಠುರ ಗುಣಂಗಳುರಿಪುವುದುಚಿತಂ ।
ನಿನ್ನಂ ನಿನ್ನೀ ಸದ್ಗುಣ
ಮೆನ್ನಂ ನೆರೆದುರಿಪಲೇಕೆ ಮನ್ಮಥರಾಜಾ ॥ ೭೩

ವ॥ ಎಂದು ಕುಸುಮಕೋದಂಡನ ಸುಧಾಮಯ ಸದ್ಗುಣಂಗಳನೆನೆಪಿಯೆನೆಪಿ ಪಲುಂಬ ಪಂಬಲಿಪಿ ಮತ್ತೆ ಮತ್ತೆ ಮಾಣದೆ

ಚಂ॥ ಮದಕರಿ ಎತ್ತ ಪೋದೆ ವರಮೂರ್ತಿ ಆದೆತ್ತಲದೃಶ್ಯಮಾದೆ ಮದ್
ವದನಸರೋಜಭೃಂಗನೆ ಆದೆತ್ತಲಡಂಗಿದೆ ನೀನದೆತ್ತ ಮ
ಳ್ಗಿದೆ ಮಧುಮಿತ್ರ ಎತ್ತ ಲಯವಾದೆ ಮದೀಶ್ವರ ಎತ್ತಣ ಕ್ರಮ
ಕ್ಕೊದವಿದೆ ಎತ್ತ ಸಾರ್ದೆ ಕಳಿದೆತ್ತಲಣಂ ತವಿಲಾದೆ ಮನ್ಮಥಾ ॥ ೭೪

ವ॥ ಎಂದಿಂತು ಶೋಕಿಸುತ್ತಂ ವ್ಯಾಕುಲಚಿತ್ತೆ ವಲ್ಲಭರಹಿತೆ ಸಕಳಸುಖವಿರಹಿತೆಯಪ್ಪ ರತಿದೇವಿ ನಿಂದಿರ್ದು ಬಸುಸುಯ್ದು ಬಸಿಱಂ ಹೊಸೆದು ಕೆಯ್ಮೆತ್ತಿ ದೆಸೆ ದೆಸೆಯಂ ನೋಡಿ,

ಕಂ॥ ಮೊಱೆಯೋ ಮೊಱೆಯೋ ಶಿವಧೋ
ಕಱೆಗೊರಲನ ಕಣ್ಣ ದಾಳಿ ಕುಸುಮಾಯುಧನಂ ।
ನೆಱೆ ಮುತ್ತಿತ್ತಯ್ಯೋ ಇದ
ನಱೆವವರಿಲ್ಲಕ್ಕಟಾ ಕೃಪಾಳುಗಳಿಲ್ಲಾ ॥ ೭೫

ಅಂತಹುದಲ್ಲ; ಇದು ಹೊಸ ಬಗೆಯ ಮುನಿಸಲ್ಲವೆ ಮದನಭೂಪಾಲಾ! ೭೩. ಸರ್ಪಭೂಷಣ, ವಿಷಕಂಠ, ಅಂತಹ ಶಿವನ ನಿಷ್ಠುರಗುಣಗಳು ನಿನ್ನನ್ನು ಉರಿಸಿದ್ದು ಸರಿ! ಆದರೆ ಹೇ ಮದನರಾಜಾ! ನಿನ್ನ ಸದ್ಗುಣಗಳು ನನ್ನನ್ನು ಹೀಗೇಕೆ ಉರಿಸುತ್ತಿವೆ? ವ॥ ಹೀಗೆ ಕುಸುಮಾಯುಧನ ಅಮೃತಮಯವಾದ ಸದ್ಗುಣಗಳನ್ನು ನೆನೆನೆನೆದು ಹಲುಬಿ ಹಂಬಲಿಸಿ ಮತ್ತೆ ಮತ್ತೆ ದಿಕ್ಕುಗಾಣದೆ-೭೪. ಹೇ ಮದಕರಿಯಂತಿದ್ದ ನೀನು ಅದೆಲ್ಲಿಗೆ ಹೋದೆ, ವರಮೂರ್ತಿ ಎಲ್ಲಿ ಮಾಯವಾದೆ, ನನ್ನ ಮುಖಕಮಲಕ್ಕೆ ದುಂಬಿಯದ್ದಂತಿವನೆ ಎಲ್ಲಿ ಅಡಗಿದೆ? ಮಧುಮಿತ್ರ ಎಲ್ಲಿ ಅಡಗಿದೆ, ಎನ್ನೊಡೆಯ ಎಲ್ಲಿ ಲಯವಾದೆ, ಇದು ಅಕ್ರಮವಲ್ಲವೆ? ಎಲ್ಲಿ ಹೋದೆ? ಎಲ್ಲಿ ಲಯವಾದೆ? ಮನ್ಮಥ! ವ॥ ಹೀಗೆ ವ್ಯಾಕುಲಚಿತ್ತಳೂ ಪತಿಯಿಲ್ಲದವಳೂ ಆದ ರತೀದೇವಿ ಬಹುವಾಗಿ ಶೋಕಿಸುತ್ತಾ ನಿಟ್ಟುಸಿರು ಬಿಟ್ಟು ಹೊಟ್ಟೆಯನ್ನು ಹೊಡೆದುಕೊಳ್ಳುತ್ತ ಕೈಯೆತ್ತಿ ದಿಕ್ಕು ದಿಕ್ಕುಗಳನ್ನು ನೋಡಿ ೭೫. ಅಯ್ಯೋ! ನಂಜು ಗೊರಲನ ಕೆಂಗಣ್ಣ ಧಾಳಿಯು ಕುಸುಮಶರನನ್ನು ಆವರಿಸಿತಲ್ಲಾ! ಇದನ್ನು ವಿಚಾರಿಸುವ ದಯಾಳುಗಳೇ ಇಲ್ಲವಾಯಿತಲ್ಲಾ! ಅಯ್ಯೋ! ಶಿವಧೋ! ನನಗಿನ್ನಾರು ದಿಕ್ಕು?

ನೆಲನೇ ನಭವೇ ಶಿಖಿಯೇ
ಜಲವೇ ರವಿಯೇ ಶಶಾಂಕನೇ ಮಾರುತನೇ ।
ಬಲವಳಿದವಳನನಾಥೆಯ
ನಲಘುತರಾಘೌಘೆಯಂ ನಿರೀಕ್ಷಿಸಿರೆನ್ನಂ ॥ ೭೬

ವನದೇವತೆಯರಿರಾ ನಂ
ದನದೇವತೆಯರಿರ ದೆಶೆಯ ದೇವತೆಯರಿರಾ ।
ಘನಪಾಪಂ ಪುದಿದಿರ್ದೀ
ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ ॥ ೭೭

ವ॥ ಎಂದಿಂತು ದೆಸೆದೆಸೆಗೆ ಕರೆಕರೆದು ಬಾಯಾಱೆ ಬಲ್ಲಳಿದು ನಿಂದಿರಲಾಱದೆ ಕಾಲ್ ಕುಪ್ಪಳಿಸಿ ಭೋಂಕನೆ ಕುಳ್ಳಿರ್ದು ತನ್ನೊಳಗೆ ತೆಕ್ಕನೆ ತೀವಿ ತೆರೆಮಸಗುವ ಶೋಕರಸಮುರ್ಕಿ ಪೊಱಪೊಣ್ಮಿದುದೆಂಬಂತೆ ಕಣ್ಣ ನೀರ್ ಕಱಿದೊತ್ತರಿಸಿ ಪರಿಯೆ ಮತ್ತೆಮತ್ತಳುತ್ತಂ ಗಂಟಲುರ್ಬಿ ಸೆರೆಗಬಗಿದು ಕಕ್ ಕೆಂಪೇರಿ ಮಿಕ್ಕು ನೆಗೆವ ಬಿಕ್ಕನೊಳ್ ಬೆರೆಸಿ ನಾನಾವಿಧದಿಂ ನಾಲಗೆಯೊಳ್ ಪೊಱಮಡುವ ಶಿಥಿಲಾಕ್ಷರಂ ಶೋಕಾಗ್ನಿಯೊಳ್ ಬೆಂದುಗಿದು ಸೀದು ಸೀಕರಿವೋಗಿ ಪೊರಳ್ದುರುಳ್ದು ಬರೆ ನೆಲೆಗೊಂಡ ಗದ್ಗದದಿಂ ಪಲುಂಬ ಪಳಯಿಸುತುಂ ಮತ್ತಂ ಮನಶ್ಚಲನುರಿದ ದುಃಖಾನಳನಿಂ ಚಿತ್ತಂ ಹೊತ್ತಿಯಹಂಕಾರಂ ಹೊಗೆದು ಬುದ್ಧಿಯುರಿದು ಮನಂ ಬೆಂದುರಿಯುಸುರನುಸುರಿಕ್ಕೆ ಕೆಲಬಲದ ಮುಂದಣ ಗುಲ್ಮಲತೆಗಳ್ ಫಳಿಲನೆ ಫಱಿಫಱಿಲನುರಿಯೆ ವಶಮಲ್ಲದೆ ದುಃಖದಿಂ ಬಸುಸುಯ್ಯುತ್ತುಂ ಮತ್ತಂ ಗ್ರಹಣಕ್ಕಂಜಿ

೭೬. ಅಯ್ಯೋ, ನೆಲವೇ, ಗಗನವೇ, ಬೆಂಕಿಯೇ, ಜಲವೇ, ರವಿ-ಶಶಿಗಳೇ ವಾಯುವೇ ಬಲವಳಿದು ಅನಾಥೆಯಾದ ಪಾಪಿಷ್ಠಳಾದ ನನ್ನನ್ನು ನೋಡಿ, ರಕ್ಷಿಸಿರಿ! ೭೭. ಎಲೌ ವನದೇವತೆಗಳೆ, ನಂದನವನದೇವತೆಗಳೇ, ದಿಗ್ದೇವತೆಗಳೆ, ಮಹಾಪಾಪಿಷ್ಠೆಯೂ ಅನಾಥೆಯೂ ಆದ ನನ್ನನ್ನು ರಕ್ಷಿಸಿರಿ. ವ॥ ಹೀಗೆ ರತಿದೇವಿಯು ದಿಕ್ಕು ದಿಕ್ಕಿಗೆ ಕರೆ ಕರೆದು ಬಾಯಾರಿ ಬಸವಳಿದಳು, ಬಲವಳಿದು ಅವಳು ನಿಂತಿರಲಾರದೆ ಕಾಲುಸೋತು ಕುಳಿತಳು; ತನ್ನೊಳಗೆ ಉಕ್ಕಿಬರುವ ಶೋಕರಸವು ಹೊರಹೊಮ್ಮಿತೋ ಎಂಬಂತೆ ಕಣ್ಣೀರು ಕೋಡಿವರಿಯಿತು; ಮತ್ತೆ ಮತ್ತೆ ಅಳುತ್ತ ಅವಳ ಗಂಟಲು ಬಿಗಿಯಿತು; ಅತ್ತು ಅತ್ತು ಕಣ್ಣು ಕೆಂಪೇರಿತು; ಬಿಕ್ಕಿ ಬಿಕ್ಕಿ ಅಳುವಾಗ ಹೊರಬರುವ ಶಿಥಿಲಾಕ್ಷರಗಳು ಶೋಕಾಗ್ನಿಯಲ್ಲಿ ಬೆಂದು ಸೀದು ಸೀಕರಿವೋದುವೊ ಎಂಬಂತೆ ತಡೆತಡೆದು ಬರುತ್ತಿದ್ದುದರಿಂದ ಕಂಠ ಗದ್ಗದವಾಗಿತ್ತು; ಮನಶ್ಚಲವಿಯೋಗ ದಿಂದುಂಟಾದ ದುಃಖಾಗ್ನಿಯಿಂದ ಅವಳ ಮನಸ್ಸು ಹೊತ್ತಿತ್ತು; ಅಹಂಕಾರಕ್ಕೆ ಹೊಗೆ ಹತ್ತಿತು, ಬುದ್ಧಿ ಉರಿದಿತ್ತು, ಅವಳ ಮನಸ್ಸಿನ ಧಗೆಗೆ ಅಕ್ಕಪಕ್ಕದ ಪೊದೆಬಳ್ಳಿಗಳು ಒಣಗಿ ಉರಿದು ಬಿದ್ದವು; ಮೇರೆ ಮೀರಿದ ದುಃಖದಿಂದ ಅವಳು ಬಿಸುಸುಯ್ದಳು; ಗ್ರಹಣಕ್ಕೆ ಹೆದರಿದ ಚಂದ್ರಬಿಂಬವು ಗಗನದಿಂದ ನೆಲಕ್ಕೆ ಬೀಳಲು ರಾಹುಮಂಡಲವು (ವೇಗದಿಂದ) ಅದರ ಬೆಂಬತ್ತಿ ನೆಲಕ್ಕಿಳಿದು ಅದನ್ನು ಸರ್ವಗ್ರಾಸವಾಗಿಸಿ ಕೊಂಡಂತೆ ಅವಳ ಮುಡಿಯು ಕೆದರಿ ಮುಖಮಂಡಲವನ್ನು ಮುತ್ತಿತ್ತು. ಅವಳು ತನ್ನ ಹಣೆಯನ್ನು

ಗಗನತಳದ ಮೃಗಧರಬಿಂಬಂ ಪೊಡವಿಯೊಳ್ ಬಿಳ್ದೊಡನೊಡನೆ ಬಡದೆ ಬೆಂಬತ್ತಿ ಕಡುವೇಗದಿಂ ಬಂದುರ್ವಿಯೊಳ್ ಸರ್ವಗ್ರಾಸಂಗೊಂಡು ನೆಲದೊಳಿಟ್ಟೊರಸುವ ರಾಹುಮಂಡಲದಂತೆ ಕೆದಱಿದ ಮುದಿಕಟ್ಟು ಪಚ್ಚುವರೆದು ಮುಚ್ಚಿ ಮುಸುಂಕಿ ಭೂತಳಮಂ ಭೂತಳದೊಳಿಟ್ಟಾದ ನೋವಿಂ ತೇದುಕೊಳುತ್ತುಂ ಇಂತು ಕೇಳ್ದ ಪಶುಪಕ್ಷಿಮೃಗಗುಲ್ಮಲತೆವೃಕ್ಷಾವಳಿಗಳ್ಗೆ ಕರುಣಂ ಪುಟ್ಟುವಂತೆ ರತಿಯತಿಶೋಕಂಗೆಯ್ದು ದುಃಖಪ್ರಳಾಪಂಗೆಯ್ದು ಮೆಯ್ಯಿಕ್ಕಿ ಬಸಿಱಿಂ ಪೊಸೆದು ಚೇತನಂಗೆಟ್ಟು ಭೂತಳದೊಳ್ಬಿೞ್ದು ಕೆಚ್ಚುಗಟ್ಟಿದಳಲಿಂ ಮೂರ್ಛೆವೋಗಿ ಕೊರಲೊಳ್ ಹರಣಂ ಕಣ್ಣೊಳ್ ಕಾರ್ಪಣ್ಯಮಂ ಪಡಿಮೊಗದೊಳ್ ನಿಡುಸುಯ್ಯಂ ನಾಲಗೆಯೊಳ್ ವಿಕಳತೆಯಂ ಮನದೊಳ್ ಪರವಶತೆಯಿಂ ತನುವಿನೊಳ್ ಚೇತನಮಂ ಪಿಡಿದು ಗಗನದಿಂ ಬಿೞ್ದಂತೆ ದುಃಖದೊಳಳ್ದಂತೆ ದೈನ್ಯದೊಳಿೞ್ದಂತೆ ಶೋಕಂ ಹೊಸೆದು ಬಸುಟಂತೆ ದುಃಖಂ ರೂಪುಗೊಂಡಂತೆ ಮೞ್ಕಿದೊಱಗಿರ್ದಾಗಳ್,

ಚಂ॥ ಗಿರಿಸುತೆ ಬಂದು ಕಂಡು ಬೆರಗಾಗಿ ಕೃಪಾಕರಚಿತ್ತೆ ಹತ್ತೆ ಸಾ
ರ್ದು ರತಿಯ ಮೆಯ್ಯುಮಂ ಮೊಗಮುಮಂ ತಡವುತ್ತಿರೆ ಸೋಂಕಿನಿಂದೆ ಚೇ
ತರಿಸುತೆ ಕಣ್ಗಳಂ ತೆಱೆದು ಪಾರ್ವತಿಯಂ ನಡೆ ನೋಡುತಂ ದಯಾ
ಪರೆ ಭುವನೈಕಮಾತೆ ಪದೆದೀಕ್ಷಿಪುದೆನ್ನೆಯೆ ದುಃಖದೊಪ್ಪಮಂ ॥ ೭೮

ವ॥ ಎಂತು ನುಡಿದು ನಿಲಲಾಱದೆ

ಕಂ॥ ಗಿರಿಜೆಯ ಪದಯುಗದೊಳ್ ರತಿ
ಪೊರಳ್ದು ಪುಯ್ಯಲ್ಬಿ ಪೆರ್ಚದಳಲಿಮ್ಮಡಿಸು ।
ತ್ತಿರೆ ಪಳಯಿಸುತುಂ ದುಃಖಾ
ತುರೆ ಶೋಕಂಗೆಯ್ದು ಸುಯ್ದು ಪೊಯ್ದಳಲುತ್ತುಂ ॥ ೭೯

ನೆಲಕ್ಕೆ ಹಾಕಿ ಬಿದ್ದು ಹೊರಳಾಡುತ್ತಿದ್ದಳು ಎಂದು ಭಾವ. ಸುತ್ತಮುತ್ತಲಿನ ಪಶುಪಕ್ಷಿ ಮೃಗಗಳು, ಮತ್ತು ಬಳ್ಳಿಪೊದೆಗಳಿಗೂ ಕೂಡ ರತಿಯ ದುಃಖವನ್ನು ಕಂಡು ಕರುಣೆ ಉಕ್ಕುವಂತಾಗಿತ್ತು, ಅತಿ ಉದ್ವೇಗದಿಂದ ರತಿಯು ರೋದಿಸುತ್ತಾ ಮೈಯಿಕ್ಕಿ ಹೊಟ್ಟೆ ಹೊಡೆದುಕೊಂಡು ಎಚ್ಚರತಪ್ಪಿ ನೆಲದಲ್ಲಿ ಬಿದ್ದು ಉತ್ಕಟದುಃಖದಿಂದ ಮೂರ್ಛೆ ಹೋದಳು. ಕಡೆಗೆ ಅವಳು ಕೊರಳಲ್ಲಿ ಪ್ರಾಣವನ್ನು ಕಣ್ಣಲ್ಲಿ ಕಾರ್ಪಣ್ಯವನ್ನು ಮುಖದಲ್ಲಿ ನಿಟ್ಟುಸಿರನ್ನು ನಾಲಗೆಯಲ್ಲಿ ವಿಕಳತೆಯನ್ನು ಮನಸ್ಸಿನಲ್ಲಿ ಪರವಶತೆಯನ್ನು ತನುವಿನಲ್ಲಿ ಚೈತನ್ಯವನ್ನು ಹಿಡಿದು ಮುಗಿಲಿನಿಂದ ಬಿದ್ದಂತೆ, ದುಃಖದಲ್ಲಿ ಮುಳುಗಿದಂತೆ, ದೈನ್ಯದಲ್ಲಿ ತೊಯ್ದಂತೆ ಶೋಕವು ಕವಿದು ಎಸೆದಂತೆ ದುಃಖವೇ ಮೈವೆತ್ತಂತೆ ನಿಃಶ್ಚೇಷ್ಟಿತಳಾದಳು. ೭೮. ಅಷ್ಟರಲ್ಲಿ ಕೃಪಾಳುವಾದ ಅಗಜೆ ಅಲ್ಲಿಗೆ ಬಂದು ರತಿಯ ಸ್ಥಿತಿಯನ್ನು ಕಂಡು ಬೆರಗಾದಳು. ಆಕೆ ರತಿಯ ಬಳಿ ಬಂದು ಅವಳ ಮೈಯ್ಯನ್ನು ತಡವಿ ಮುಖ ಸವರುವಷ್ಟರಲ್ಲಿ ಆ ಅಮೃತಸ್ಪರ್ಶನಕ್ಕೆ ರತಿಗೆ ಎಚ್ಚರವಾಯಿತು. ಕಣ್ಣು ತೆರೆದು ಪಾರ್ವತಿಯನ್ನು ಕಂಬನಿ ತುಂಬಿದ ಕಣ್ಣುಗಳಿಂದ ದೀನವಾಗಿ ನೋಡಿದಳು. ಹೇ ಲೋಕಮಾತೆ ದಯಾವತಿದೇವಿ ನನ್ನ ಈ ದುಃಸ್ಥಿತಿಯನ್ನು ಅವಲೋಕಿಸು, ೭೯. ಎಂದು ರತೀದೇವಿ ಗಿರಿಜೆಯ ಪಾದಗಳ ಮೇಲೆ ಬಿದ್ದು ಹೊರಳಾಡಿದಳು. ದುಃಖವು ಇಮ್ಮಡಿಸಿ ಉಕ್ಕಿ ಉಕ್ಕಿ ಬರುತ್ತಿತ್ತು. ದುಃಖಾತುರೆಯಾದ ಅವಳು

ಕರುಣಿಸು ತಾಯೇ ತವರೇ
ಪರಿರಕ್ಷಿಸು ದಯೆಯೊಳೀಕ್ಷಿಸುಡುಗಿಸು ನೋವಂ ।
ಪರಿಹರಿಸು ದುಃಖಮಂ ವರ
ಗಿರಿರಾಜತನೂಜೆ ಕಾದುಕೊಳ್ಳೆನ್ನಸುವಂ ॥ ೮೦

ವ॥ ಎಂದಳಲ್ವ ರತಿಯಂ ಕಂಡು ಮನಂಗೊಂಡು,

ಕಂ॥ ಬೇಡುಡುಗು ಶೋಕರಸಮಂ
ನೀಡಾಗದೆ ನಿನ್ನ ವಲ್ಲಭನನೀಶ್ವರನಂ ।
ಬೇಡುವೆನಾವರ್ಥದೊಳಂ
ಮಾಡುವೆನೆಲೆ ಪರಮಹರ್ಷಮಂ ನಿನಗೆ ರತೀ ॥ ೮೧

ಎಂದಗಜೆ ಬೆಸಸೆ ಶೋಕಮ
ನಂದುಡುಗುತಡಂಗಿಸುತ್ತುಮಳಲಂ ಮನದೊಳ್ ।
ಸಂದಣಿಪ ದುಃಖಮಂ ಮಱೆ
ದೊಂದಿದಳಾ ರತಿ ಭವಾನಿಯುಜ್ಜ್ವಳವಚಮಂ ॥ ೮೨

ವ॥ ಆ ಸಮಯದೊಳ್,

ಕಂ॥ ಇಂತು ರತಿಗಭಯಮಂ ಕೊ
ಟ್ಟಂತಕಹರನಿರದೆ ಪೋದ ಪರಿಯಂ ಭರದಿಂ ।
ಚಿಂತಿಸಿ ಜಯವಿಜಯೆಗಳೊಡ
ನಿಂತೆಂದಳ್ ಗಿರಿಜೆ ಮನದ ಮುನಿಸಿಂದಾಗಳ್ ॥ ೮೩

ಸ್ರ॥ ಆನಿಂತಿಂತರ್ಚಿಸುತ್ತುಂ ಗತಿ ಮತಿ ಪತಿಯೆನ್ನಾಯುವೆನ್ನಾತ್ಮತತ್ತ್ವಂ
ತಾನೆಂದುತ್ಸಾಹದಿಂದಿರ್ದಚಳಪತಿಯ ಮೇನಾಖ್ಯೆಯೊಂದಳ್ಕಿಂ ಬ ।
ಟ್ಟಾನಂದಂಗೂಡಿ ಕಾರುಣ್ಯಮನನವರತಂ ಪಾರುತಿರ್ಪಲ್ಲಿ ಕೇಳಿಂ
ತೇನೆಂದುಗ್ರಂ ಸಮಗ್ರಂ ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ ॥ ೮೪

ಅಗಜೆಯಲ್ಲಿ ಬಗೆಬಗೆಯಾಗಿ ಹುಯ್ಯಲಿಟ್ಟಳು. ೮೦. ತಾಯೆ, ಕರುಣಿಸು; ಕಾಪಾಡು! ದಯೆಯಿಂದ ನೋಡು! ನನ್ನ ನೋವನ್ನು ಹೋಗಲಾಡಿಸು! ದುಃಖವನ್ನು ಪರಿಹರಿಸು! ನನ್ನನ್ನು ಕಾದುಕೊ! ಎಂದು ಮೊರೆಯಿಟ್ಟಳು. ವ॥ ಹೀಗೆ ಮೊರೆಯಿಟ್ಟ ರತಿಗೆ ಪಾರ್ವತಿ-೮೧. ಎಲೌ ರತೀದೇವಿ, ದುಃಖವನ್ನು ಬಿಡು, ನಿನ್ನ ವಲ್ಲಭನು ಮತ್ತೆ ಜೀವಿಸುವಂತೆ ಶಿವನನ್ನು ಬೇಡುವೆನು. ಹೇಗಾದರೂ ನಿನಗೆ ಸಂತೋಷವಾಗುವಂತೆ ಮಾಡುವೆನು! ೮೨. ಎಂದ ಭವಾನಿಯ ಉಜ್ವಲವಾದ ಅಭಯವಚನವನ್ನು ಕೇಳಿದ ರತೀದೇವಿಗೆ ದುಃಖವು ಅಡಗಿತು. ಅಳಲು ಮರೆಯಿತು. ಮನಸ್ಸಿಗೆ ನೆಮ್ಮದಿಯಾಯಿತು, ೮೩. ಹೀಗೆ ರತಿಗೆ ಅಭಯವನ್ನು ಕೊಟ್ಟು ಪಾರ್ವತಿಯು ಶಿವನು ತನ್ನ ಸೇವೆಯನ್ನು ಲೆಕ್ಕಿಸದೆ ಮದನನನ್ನು ಸುಟ್ಟು ಮರೆಯಾದ ಬಗೆಯನ್ನು ಗಾಢವಾಗಿ ಯೋಚಿಸಿದಳು; ಅವಳು ಮುನಿಸಿನಿಂದ ಜಯೆ ವಿಜಯೆಯರೊಡನೆ ಹೀಗೆ ಹೇಳಿದಳು. ೮೪. ಪರಮೇಶ್ವರನನ್ನು ನಾನು ಪ್ರತಿದಿನವೂ ಹೀಗೆ ಅರ್ಚಿಸುತ್ತಾ ಅವನೇ ನನಗೆ ಗತಿ ಮತಿ ಪತಿಯೆಂದೂ ಎನ್ನ ಆಯುಸ್ಸು, ಎನ್ನ ಆತ್ಮತತ್ತ್ವವೆಂದೂ ಉತ್ಸಾಹದಿಂದ ಇದ್ದೆನು. ತಂದೆ-ತಾಯಿಯರ ವಾತ್ಸಲ್ಯವನ್ನು ಬಿಟ್ಟು ಇಲ್ಲಿ ಬಂದು ಆನಂದದಿಂದ

ವ।। ಅಂತುಮಲ್ಲದೆ,

ಕಂ।। ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ನುಡಿಯಿಸದಂತ ।
ರ್ಧಾನಕ್ಕೆ ಸಂದನದಱಿಂ
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ ।। ೮೫

ಉ।। ಉಗ್ರತಪೋಭರಾಕೃತಿಯನಾಂತು ಜಗಂ ಬೆಱಗಾಗೆ ನಿಶ್ಚಲಾ
ವ್ಯಗ್ರಮನೋಪ್ರಬಲೆಯಾಗಿ ಬಿಸಿಲ್ ಮಳೆಸೀತದೊಳ್ ನಗ ।
ಪ್ರಾಗ್ರದೊಳಂ ಕುಜಪ್ರತತಿಯೊಳ್ ಸರಸೀಕುಳದೊಳ್ ವಿರಾಜಿಸು
ತ್ತಗ್ರನನೀಶನಂ ವಿಪುಳನಿಶ್ಚಳನಂ ಚಲದಿಂದೆ ತಂದಪೆಂ ।। ೮೬

ವ।। ಎಂದಿಂತು ಸಖೀಜನದೊಡನೆ ತನ್ನ ಸಾಮರ್ಥ್ಯದೊಂದುನ್ನತಿಯಂ ನುಡಿಯುತ್ತುಂ ಮೃಡಾನಿ ಮಾಹಾಮಾಯೆ ಸಕಳಜಗಜ್ಜನನಿ ನಿಖಿಳಾರಾಧ್ಯೆ ಅಕಳಂಕೆಚರಿತ್ರೆ ದಿವ್ಯಜ್ಞಾನಿ ಸರ್ವಬ್ರಹ್ಮಾಂಡಾಭರಣೆ ಹರನ ಮನೋಹರೆ ಸದಾಶಿವನ ಸುಖಮುಖಂ ಮಹಾದೇವನ ಮನೋರಥಂ ಚಲದ ಲಲನೆ ಬಲ್ಲಿನ ಭಾವಕಿ ಏಕನಿಷ್ಠಾನಿಧಿ ಪಶುಪತಿಯ ಪಟ್ಟದ ಮಹಾದೇವಿಯೆನಿಪ್ಪ ಶ್ರೀ ಪಾರ್ವತೀದೇವಿಯುಗ್ರತಪೋಭರನಿವೇಶನಾಭಮುಖಿಯಾಗಿ

ಚಂ।। ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗಪಾತ್ರೆಯ
ತ್ಕುರುತರಮಾನಿ ನಿರ್ಮಳಭವಾನಿ ನಿರಂತರದಾನಿ ನವ್ಯಸುಂ ।
ದರವರಮೂರ್ತಿ ಶರ್ವ ನಸುಕೀರ್ತಿ ಮಹೇಶ್ವರನಾರ್ತಿ ಬಂದೆಲೊ
ಪ್ಪಿರೆ ಗಿರಿಜಾತೆ ಲೋಕಚಯಮಾತೆ ಜಗಕ್ಕೆ ವಿನೂತೆಯಳ್ಕಿಱಿಂ ।। ೮೭

ಇದ್ದೆನು. ನನ್ನಲ್ಲಿ ಕಾರುಣ್ಯವನ್ನು ಮಾಡಬೇಕಾಗಿತ್ತು. ಹೀಗಿದ್ದರೂ ಇಂಥ ನನ್ನ ಭಕ್ತಿಯನ್ನು ಅಲ್ಲಗಳೆದು ಉಗ್ರನಾಗಿ ಶಿವನು ರಜತಗಿರಿಗೆ ಹೋಗಿ ನಿಕೃಷ್ಟಾತ್ಮನಾದ! ೮೫. ತಾನಿರುವಲ್ಲಿಗೆ ನಾನು ಹೋಗಿ ಪೂಜಿಸಿದೆ. ಆದರೆ ಕಾಮವೈರಿಯು ನನ್ನನ್ನು ಮಾತೂ ಆಡಿಸದೆ ಮರೆಯಾದ; ಅದಕ್ಕಾಗಿ ಈಗ ನಾನಿರುವಲ್ಲಿಗೇ ಅವನು ಬರುವಂತೆ ಮಾಡುವೆನು, ೮೬. ಉಗ್ರತಪಸ್ಸನ್ನು ಕೈಗೊಂಡು ಲೋಕವೇ ಆಶ್ಚರ್ಯಪಡುವಂತೆ ನಿಶ್ಚಲ ಮನಸ್ಸಿನಿಂದ ಬಿಸಿಲು, ಮಳೆ, ಶೀತಗಳಿಗೆ ಹೆದರದೆ ಬೆಟ್ಟದ ತುದಿಯಲ್ಲಿ ಕಾಡುಗಳ ನಡುವೆ ಮಡುವುಗಳ ಮಡಿಲಲ್ಲಿ ಕುಳಿತು ನಿಶ್ಚಲ ಶಿವನನ್ನು ಚಲದಿಂದ ತರುತ್ತೇನೆ. ವ।। ಹೀಗೆ ಪಾರ್ವತಿ ಸಖಿಯರೊಡನೆ ತನ್ನ ಮನಸ್ಸಿನ ಸ್ಥೈರ್ಯವನ್ನು ತಿಳಿಸಿ ಮೃಡಾನಿಯೂ, ಲೋಕಮಾತೆಯೂ ನಿಖಿಳಾರಾಧ್ಯೆ ಮುಂತಾದ ಗುಣಗಳಿಂದ ಕೂಡಿದವಳೂ ಆದ ಪಾರ್ವತೀದೇವಿ ಉಗ್ರತಪೋಭಿಮುಖಿಯಾದಳು. ೮೭. ಕಮಲಾಯತ

ಮ॥ ಪರಮಸ್ವಾಮಿ ಜಟಾಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಕಾಮದಹನವರ್ಣನಂ
ಅಷ್ಟಮಾಶ್ವಾಸಂ

ನೇತ್ರೆಯೂ, ಪುಣ್ಯಗಾತ್ರಳೂ, ಸದಾಶಿವಸಂಗತೆಯೂ, ಮಹಾಮಾನಿ, ನಿರ್ಮಲ ಭವಾನಿಯೂ ಅದ ಪಾರ್ವತಿಯು ತಪಸ್ಸಿಗೆ ಹೊರಡಲು ಸಿದ್ಧಳಾದಳು.

ನವಮಾಶ್ವಾಸಂ

ಪಾರ್ವತೀ ತಪೋವರ್ಣನಂ ವಿರೂಪಾಕ್ಷ ಪ್ರತ್ಯಕ್ಷೀಕರಣ ವರ್ಣನಂ

ಕಂ॥ ಕಾರುಣ್ಯಾಕರನಭವಂ
ಘೋರತಪೋಮಯ ತಪಃ ಪ್ರಮೋದಾವೃತ ವಿ ।
ಸ್ತಾರಫಲಪ್ರದನೆಮಗೀ
ಗೌರಂತತಿ ಭಕ್ತಿಯಂ ವಿರೂಪಾಕ್ಷ ಶಿವಂ ॥ ೧

ಉ॥ ಬಂದು ತಪೋನಿವೇಶನಮನೀಕ್ಷಿಸಿ ಬರ್ಪ ನಿದಾಘಕಾಲದೊಳ್
ಸಂದ ನಗಾಗ್ರದಲ್ಲಿ ನಿಲವೇಳ್ಕುಮೆನುತ್ತಮೆ ನಿಂದು ಮೇನಕಾ ।
ನಂದನೆ ತದ್ವಿಳಾಸಿನಿಯರಾನನಮಂ ನಡೆನೋಡೆ ಕಾಣುತುಂ
ಸೌಂದರಿಯರ್ ಜಟಾರಚನೆಯಂ ತರದಿಂ ಭರದಿಂದೊಡರ್ಚಿದರ್ ॥ ೨

ಕಂ॥ ವಿರಚಿಸಿದರ್ ಜಡೆಗಳನಾ
ದರದಿಂ ದರಹಸಿತಬಸರುಹಾನನೆಯರ್ ಶಂ ।
ಕರನರಸಿಗೆ ಗಿರಿಜಾತೆಗೆ
ವರಭಸಿತಮನಂಗತತಿಯೊಳುದ್ಧೂಳಿಸಿದರ್ ॥ ೩

ವರಭಸಿತೋದ್ಧೂಳನಮಂ
ಗಿರಿಜೆಗೆ ಸುರಸತಿಯರೊಲ್ದು ಮಾಳ್ಪೆಡೆಯೊಳ್ ಕ ।
ಪ್ಪುರದ ರಜದಿಂದೆ ಪುಷ್ಪೋ
ತ್ಕರಮಾಲೆಯನೊಸೆದು ಪೊರೆವ ತೆಱನಾಯ್ತಾಗಳ್ ॥ ೪

ವ॥ ಅಂತುಮಲ್ಲದೆ,

೧. ಕರುಣಾಳುವೂ ಘೋರತಪಸ್ಸಿಗೆ ಒಲಿದು ಇಷ್ಟಾರ್ಥವನ್ನು ನೀಡುವವನೂ ಆದ ವಿರೂಪಾಕ್ಷನು ನಮಗೆ ಸದ್‌ಭಕ್ತಿಯನ್ನು ನೀಡಲಿ. ೨. ಗಿರಿಜೆಯು ತಪೋವನದಲ್ಲಿ ತಪೋಯೋಗ್ಯವಾದ ಸಸ್ಯವನ್ನು ಆರಿಸಿದಳು. ಮುಂದಿನ ಬೇಸಗೆಯಲ್ಲಿ ಬೆಟ್ಟದ ತುದಿಯಲ್ಲಿ ನಿಂತು ಉಗ್ರತಪಸ್ಸನ್ನು ಆರಂಭಿಸಬೇಕೆಂದು ಅವಳು ನಿರ್ಧರಿಸಿದಳು. ಅದನ್ನು ಕೇಳಿದ ಜಯವಿಜಯೆಯರು ಅವಳಿಗೆ ತಪೋಯೋಗ್ಯವಾದ ಜಟಾರಚನೆ ಮುಂತಾದುದನ್ನು ಸಿದ್ಧಪಡಿಸಿದರು. ೩. ಕಮಲಮುಖಿಯರಾದ ಸಖಿಯರು ನಗೆ ಮೊಗದಿಂದ ಶಂಕರನ ಅರಸಿ ಗಿರಿಜಾತೆಗೆ ಜಡೆಗಳನ್ನು ವಿರಚಿಸಿ, ಅವಳ ಅಂಗಗಳಲ್ಲಿ ಭಸ್ಮೋದ್ಧೂಳನವನ್ನು ಮಾಡಿದರು. ೪. ಸುರಸತಿಯರು ಪ್ರೇಮದಿಂದ ಗಿರಿಜೆಗೆ ಭಸ್ಮೋದ್ಧೂಳನವನ್ನು ಮಾಡಿದ್ದು ಆಕೆಗೆ ಕರ್ಪೂರಧೂಳಿಯಿಂದ ಕೂಡಿದ ಪುಷ್ಪಮಾಲೆ

ಕಂ।। ವಾರಿಜಮುಖಿಯರ್ ಸಖಿಯರ್
ತಾರಾಚಲನಾಥನರಸಿಗನುನಯದಿಂದಂ ।
ಸಾರಮ್ಯದುತರವಿಮಳವಿ
ಸ್ತಾರಿತವಲ್ಕಲಮನೊಪ್ಪಲುಡಿಸುತ್ತಿರ್ದರ್ ।। ೫

ವ।। ಅಂತುಮಲ್ಲದೆ,

ಕಂ।। ಸಾಕ್ಷಾಚ್ಛಂಕರವಕ್ತ್ರಮಿ
ವಕ್ಷಯಸುಖಮೀವ ಸುಕೃತಫಲಮಿವು ಸತ್ಯಂ ।
ರಕ್ಷೆಯಿವೆನುತಗಜೆಗೆ ರು
ದ್ರಾಕ್ಷಿಗಳಂ ಕೂಡೆ ತೊಡಿಸಿದರ್ ಮಾನಿನಿಯರ್ ।। ೬

ವ।। ಇಂತು ಭಕ್ತಿಜ್ಞಾನವೈರಾಗ್ಯಯುಕ್ತಮಪ್ಪ ತಪೋಮಂಡನಂಗಳಂ ಸಂಗಡಮಿರ್ದಂಗನೆಯರ್ ಶೃಂಗರಿಸೆ ಮಂಗಳಮುಖಿ ಹೊಂಗಿ ಹೊರೆಯೇಱಿ

ಕಂ।। ಸಂದಣಿಸುವ ಜಡೆ ಬೆನ್ನಂ
ಮಂದಯಿಸಿ ಮುಸುಂಕುತಿಳಿಯೆ ನೀಲಾಂಬುದಮಂ ।
ಪಿಂದಿಕ್ಕಿ ಮುಂದೆ ಬೆಳಗುತೆ
ನಿಂದೆಳಮಿಂಚಿನವೊಲಗಜೆ ನೆಱಿ ಮೆಱೆದಿರ್ದಳ್ ।। ೭

ಅಳವಡೆ ಮುನ್ನಂ ಪತ್ತಿದ
ಕಳಂಕಮಂ ಪೊರ್ದದಂತೆ ನಭದಿಂದಿಳಿತಂ ।
ದಿಳೆಯೊಳ್ ಶಂಭುಗೆ ಮಿಗೆ ಶಶಿ
ಕಳೆ ತಪಮಿರ್ಪಂತೆ ಗಿರಿಜೆ ತಪದೊಳ್ ನಿಂದಳ್ ।। ೮

ಗಳನ್ನು ಸೂಡಿದಂತಿತ್ತು. ೫. ತಾವರೆಮುಖದ ಸಖಿಯರು ಹೇಮಕೂಟದ ಒಡೆಯ ಪರಶಿವನ ಅರಸಿಗೆ ಪ್ರೇಮದಿಂದ ತಪೋಯೋಗ್ಯವಾದ ನಾರುಮಡಿಯುಡಿಸಿದರು. ೬. ಅಲ್ಲಿರುವ ಮಾನಿನಿಯರು ಅಗಜೆಗೆ ರುದ್ರಾಕ್ಷಿಗಳನ್ನು ತೊಡಿಸಿದರು. ರುದ್ರಾಕ್ಷಿಗಳು ಸಾಕ್ಷಾತ್ ಶಿವನ ಮುಖವುಳ್ಳವುಗಳು, ಇವುಗಳನ್ನು ಧರಿಸಿದವರಿಗೆ ಅವು ಅಕ್ಷಯಸುಖವನ್ನು ಕೊಡುತ್ತವೆ. ಪುಣ್ಯಫಲವಾಗಿ ಇವು ಲಭಿಸಿವೆ. ಇವು ಧರಿಸಿದವರಿಗೆ ರಕ್ಷೆಗಳು ಎಂದು ಅವರು ರುದ್ರಾಕ್ಷಿಗಳನ್ನು ಪ್ರಶಂಸಿಸಿ ಧರಿಸುತ್ತಿದ್ದರು. ವ।। ಹೀಗೆ ಭಕ್ತಿಜ್ಞಾನ ವೈರಾಗ್ಯಯುಕ್ತವಾದ ತಪೋಮಂಡನಗಳನ್ನು ಜೊತೆಗಿದ್ದ ಸ್ತ್ರೀಯರು ಅಗಜೆಗೆ ಸಿಂಗರಿಸಿದರು. ೭. ದಟ್ಟವಾದ ಜಡೆಗಳು ಗಿರಿಜೆಯ ಬೆನ್ನನ್ನು ಮುಸುಕಿವೆ; ಈ ಹಿನ್ನೆಲೆಯಲ್ಲಿ ಕಾಣುವ ಮುಸುಕುತೆರೆದ ಪಾರ್ವತಿಯ ದೃಶ್ಯ ಕಾಲಮೇಘದ ಹಿನ್ನೆಲೆಯಲ್ಲಿ ಬೆಳಗುವ ಸೆಳೆಮಿಂಚಿನಂತೆ ಇತ್ತು. ೮. ಗಿರಿಜೆ ತಪೋಮಗ್ನೆಯಾಗಿ ನಿಂತಿದ್ದಾಳೆ; ಅದನ್ನು ನೋಡಿದರೆ ತನಗೆ ಕಳಂಕವು ಸೋಂಕುವ ಮೊದಲೇ ಶಶಿಕಳೆ ನಭದಿಂದ ಕೆಳಗಿಳಿದು ಶಂಭುವನ್ನು ಕುರಿತು ತನಗೆ ಕಳಂಕ ಬಾರದಿರುವಂತೆ ತಪಸ್ಸನ್ನು ಗೈಯುತ್ತಿದೆಯೊ ಎಂಬಂತಿತ್ತು.

ಭಗ್ನಮನಮಲ್ಲದಚಲಿತೆ
ಲಗ್ನವ್ರತೆಯಾಗಿ ಶಂಕರಪ್ರೇಮ ಮನೋ ।
ನ್ಮಗ್ನಾಂಗಿ ಧೈರ್ಯನಿಧಿ ಪಂ
ಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್ ॥ ೯

ವ॥ ಅದೆಂತೆಂದೊಡೆ,

ಮ॥ ಮಿಗೆ ಸುತ್ತಿರ್ದ ದವಾಗ್ನಿ ಕಾಯ್ವ ರವಿಕಾಂತಚ್ಛಾಗ್ನಿಯತ್ಯುಷ್ಣಮಂ
ನೆಗಪುತ್ತಿರ್ಪುದರಾಗ್ನಿ ಮೇಗೆ ಕವಿತರ್ಪಾದಿತ್ಯತೀವ್ರಾಗ್ನಿ ಬಂ ।
ದೊಗೆದಾ ಬೇಸಗೆಯಗ್ನಿಯೆಂದೆನಿಸಿ ತೋಱುತ್ತಿರ್ಪ ಪಂಚಾಗ್ನಿ ಮ
ಧ್ಯಗತಾಂಘ್ರಿಪ್ರಭೆ ನಿಂದಳುಗ್ರತಪದೊಳ್ ಶರ್ವಾಣಿಯವ್ಯಗ್ರದಿಂ ॥ ೧೦

ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾಪು ನಿ
ಶ್ಚಲನಂ ನಿರ್ಮಳನಂ ನಿರಾವರಣನಂ ನಿರ್ಮಾಯನಂ ನಿತ್ಯನಂ ।
ನಿಲಿಸುತ್ತುನ್ನತವಕ್ತ್ರೆ ಸನ್ನುತತಪೋವಿಸ್ತಾರೆ ಮಾರ್ತಂಡ ಸಂ
ಕುಲತೇಜೋನಿಧಿ ನಿಂದಳುಗ್ರತಪದೊಳ್ ಲೋಕಕ್ಕಗುರ್ವಪ್ಪಿನಂ ॥ ೧೧

ವ॥ ಅಂತುಮಲ್ಲದೆ,

ಚಂ॥ ನೆನೆಯುತೆ ದೇವಿ ನಿಷ್ಪ್ರವರನಂ ವರನಂ ವರನಂ ಮಹೇಶನಂ
ಘನನಿಟಲಾಗ್ನಿಯಿರ್ಪ ಶಿವನಂ ಶಿವನಂ ಶಿವನಂ ನಗೇಶ ನಂ ।
ದನೆ ಸಾರದೀ ಭುವನಮಂ ವನಮಂ ವನಮಂ ಭವಾನಿ ಭೋಂ
ಕನೆ ತಪಮಿರ್ದಳುಗ್ರತಪಮಂ ತಪಮಂ ತಪಮಂ ವಿಭಂಗಿಸಲ್ ॥ ೧೨

೯. ದೃಢಮನಸ್ಸಿನ ಅಗಜೆ ಶಿವನಲ್ಲಿ ಮನಸ್ಸನ್ನು ಅಚಲವಾಗಿ ನಿಲ್ಲಿಸಿ, ಧೈರ್ಯನಿಧಿಯಾದ ಅವಳು ಪಂಚಾಗ್ನಿಯ ನಡುವೆ ತಪಸ್ಸು ಮಾಡತೊಡಗಿದ್ದಾಳೆ. ೧೦. ಅವಳನ್ನು ಸುತ್ತಿರುವ ಪಂಚಾಗ್ನಿಗಳು ಇವು- ಅವಳನ್ನು ಬಳಸಿರುವ ದಾವಾಗ್ನಿ, ಬಿಸಿಲಿಗೆ ಕಾಯ್ದ ಸೂರ್ಯಕಾಂತ ಶಿಲೆಗಳ ಬೆಂಕಿ, ಅತಿ ಉಷ್ಣವನ್ನುಂಟುಮಾಡುತ್ತಿದ್ದ ಉದರಾ (ಜಠರಾ)ಗ್ನಿ, ನೆತ್ತಿಯ ಮೇಲೆ ಏರಿಬರುತ್ತಿರುವ ಸೂರ್ಯನ ಉರಿಬಿಸಿಲು, ಸಮೀಪಿಸಿದ ಬೇಸಗೆಯ ಬಿಸಿ ಹೀಗೆ ಅವಳನ್ನು ಆವರಿಸಿರುವ ಪಂಚಾಗ್ನಿಗಳ ಮಧ್ಯದಲ್ಲಿ ನಿಂತು ಶರ್ವಾಣಿ ಉಗ್ರತಪಸ್ಸಿನಲ್ಲಿ ತೊಡಗಿದ್ದಾಳೆ. ೧೧. ಆ ನಗರಾಜಪುತ್ರಿಯು ತನ್ನ ಹೃದಯಕಮಲದಲ್ಲಿ ನಿಶ್ಚಲನೂ ನಿರ್ಮಲನೂ ನಿರಾವರಣನೂ ನಿರ್ಮಾಯನೂ ನಿತ್ಯನೂ ಆದ ಪರಶಿವನನ್ನು ನಿಲ್ಲಿಸಿಕೊಂಡು ಮಹಾತಪಸ್ವಿನಿಯಾದ ಅವಳು ಮುಖವನ್ನು ಮೇಲೆತ್ತಿ ಅನೇಕ ಸೂರ್ಯರ ಪ್ರಕಾಶವುಳ್ಳವಳಾಗಿ ಲೋಕವು ಅಚ್ಚರಿಪಡುವಂತೆ ಉಗ್ರತಪಸ್ಸಿನಲ್ಲಿ ತೊಡಗಿದ್ದಾಳೆ. ೧೨. ಆ ದೇವಿಯು, ತನಗೆ ಹಿಂದೆ ಯಾವ ವಂಶದ ಪ್ರವರವೂ ಇಲ್ಲದ, ಶ್ರೇಷ್ಠನೂ, ತನಗೆ ಅನುರೂಪವರನೂ, ಮಹೇಶನೂ, ಹಣೆಗಣ್ಣಿನ ಉಗ್ರ ಅಗ್ನಿಯುಳ್ಳವನೂ ಮಂಗಳಕರನೂ ಆದ ಪರಶಿವನನ್ನು ನಗರಾಜಪುತ್ರಿಯಾದ ತಾನೂ ಎಂದಿಗೂ ಸಾರವಾದ ಈ ಭುವನದ

ವರನುತಧೈರ್ಯೆ ಪುಣ್ಯಮಯವೀರ್ಯೆ ಸಮಗ್ರತಪಃಪ್ರಶೌರ್ಯೆ ಶಂ
ಕರನ ಸುಖೈಕಭಾರ್ಯೆ ಪರಮಾಗಮಕಾರ್ಯೆ ಜಗದ್ಧಿತಾರ್ಯೆ ವಿ ।
ಸ್ತರಘನತೂರ್ಯೆ ಶಂಭುಸುಖಪೂರ್ವೆ ವಧೂಜನವರ್ಯೆ ರುದ್ರಬಂ
ಧುರನಿಜಧಾರ್ಯೆ ಸೂರ್ಯಶಿಲೆಯಂ ಬಲದಿಂ ಛಲದಿಂದೆ ಮೆಟ್ಟಿದಳ್ ॥ ೧೩

ವ॥ ಇಂತು ಸೋಮಧರನರಸಿ ಹೇಮಕೂಟಾಗ್ರದ ಮೇಲವ್ಯಗ್ರಂದಿಂದುಗ್ರತಪದೊಳ್ ನೆಲಸಿ ನಿಲೆ ತಪಸ್ತೇಜಂ ಮೂಜಗಮಂ ಪರ್ಬದಾಗಳ್,

ಕಂ॥ ಮೃಗತತಿ ಸುಳಿಯುವು ಮಿಗೆ ಪ
ಕ್ಷಿಗಳೆಳ್ದೆಱಗವು ಸಮೀಕರಣಂ ಸಂಚಲಿಸಂ ।
ಗಗನದ ಖೇಚರರಾ ಬ
ಟ್ಟೆಗೆ ಸಾರರ್ ನಗಜೆಯತುಳತಪದಾತಪದೊಳ್ ॥ ೧೪

ಕಂ॥ ಅಸುರದ ಗಿರಿಜೆಯಗ್ರವಿ
ಭಾಸುರತಪಕಂಜಿ ನಭದ ತಪನಂ ನಡೆಯು ।
ತ್ತಾ ಸರಿಸಮಂ ಕರಂ ಬಿ
ಟ್ಟೋಸರಿಸಿಯೆ ನಡೆವನೆಂದೊಡೇವಣ್ಣಿಪೆನೋ ॥ ೧೫

ಅಸಮಾನಚಲಮದ್ಭುತ
ವಿಸರಮನೂನಪ್ರಭಂ ಶುಭಂ ಘನವಿಭವಂ ।
ಪೆಸರಿಡಬಾರದು ಮಿಗೆ ನಿ
ಟ್ಟಿಸಬಾರದು ನೋಡಬಾರದಂಬಿಕೆಯ ತಪಂ ॥ ೧೬

ವನಕ್ಕೆ ಆಗಮಿಸಿ ಇತರ ಮುನಿಗಳ ತಪಸ್ಸನ್ನು ಮೀರಿ ಉಗ್ರತಪಸ್ಸಿನಲ್ಲಿ ತೊಡಗಿದ್ದಾಳೆ, ೧೩. ಆ ಪಾರ್ವತಿಯ ಧೈರ್ಯ ಅಸದೃಶ; ಆಕೆ ಪುಣ್ಯಮಯಿ, ಅನುಪಮ ತಪೋಮಗ್ನೆ, ಶಂಕರನ ಸುಖಿಕ್ಕೆ ಮುಖ್ಯ ಆಶ್ರಯಳು; ಪರಮ ಆಗಮಸ್ವರೂಪಿಣಿ, ಅವಳು ಜಗತ್ತಿನ ಹಿತಕ್ಕಾಗಿ ತಪಸ್ಸು ಮಾಡುತ್ತಿದ್ದಾಳೆ; ವಧೂಜನಶಿರೋಮಣಿ ಅವಳು; ರುದ್ರನ ಹೃದಯವನ್ನು ಬಲ್ಲವಳು; ಇಂತಹ ಮಹಿಮಾನ್ವಿತೆ ಪಾರ್ವತಿ ಜಲದಿಂದಲೂ ಛಲದಿಂದಲೂ ಸೂರ್ಯಕಾಂತಶಿಲೆಯನ್ನು ಮೆಟ್ಟಿದಳು. ವ॥ ಹೀಗೆ ಸೋಮಶೇಖರ ಪರಮಶಿವನ ಮಡದಿಯಾದ ಗಿರಿಜೆ ಹೇಮಕೂಟಪರ್ವತದ ಮೇಲೆ ಉಗ್ರತಪಸ್ಸಿನಲ್ಲಿ ನಿಂತಿರಲು ಅವಳ ತಪೋಜ್ವಾಲೆ ಮೂರು ಲೋಕಗಳನ್ನೂ ವ್ಯಾಪಿಸಿತು. ೧೪. ಅಗಜೆಯ ಅನುಪಮವಾದ ಉಗ್ರತಪೋಜ್ವಾಲೆ ಎಲ್ಲೆಲ್ಲಿಯೂ ಹಬ್ಬಿರುವಾಗ ಮೃಗಪಕ್ಷಿಗಳ ಸುಳಿವು ನಿಂತು ಹೋಯಿತು. ಗಾಳಿಯ ಚಲನೆ ನಿಂತಿತು, ಖೇಚರರು ಆ ದಾರಿಯಲ್ಲಿ ಬರುವುದನ್ನು ನಿಲ್ಲಿಸಿದರು. ೧೫. ಭಯಂಕರವಾದ ಗಿರಿಜೆಯ ಉಗ್ರತಪಸ್ಸಿಗೆ ಹೆದರಿ ರವಿಯು ಅವಳು ತಪೋಮಗ್ನೆಯಾಗಿರುವ ಪ್ರದೇಶವನ್ನೇ ಬಿಟ್ಟು ದೂರಸರಿದು ಹೋಗತೊಡಗಿದನು ಎಂದ ಮೇಲೆ ಅದನ್ನು ಬಣ್ಣಿಸುವುದು ಹೇಗೆ? ೧೬. ಅಂಬಿಕೆಯ ತಪಸ್ಸು ಅನುಪಮ, ಅಚಲ, ಅದ್ಭುತ ಪ್ರಭೆಯುಳ್ಳದ್ದು; ಲೋಕಕ್ಕೆ ಶುಭಪ್ರದವಾದದ್ದು, ವೈಭವೋಪೇತವಾದದ್ದು, ಆದರೆ ಅದನ್ನು ಹೆಸರಿಸುವಂತಿಲ್ಲ,

ವ।। ಎಂಬ ಸಾಮರ್ಥ್ಯಮನೊಳಕೊಂಡು ಜಡೆಗಳ ಬೆಡಂಗಿ ಭಸಿತದ ಭಾಳಲೋಚನೆ, ರುದ್ರಾಕ್ಷಿಯ ಭದ್ರಾಂಗಿ, ನಾರ ಸೀಱೆಯ ಧೀರೆ, ಗಿರಿಶಿಖರದ ಗರುವೆ, ಉಗ್ರತಪದ ವ್ಯಗ್ರೆಯೆನಿಪ ಪಾರ್ವತೀದೇವಿ ಪ್ರಚಂಡತರಪ್ರತಾಪತಪೋವೇಷದಿಂದಿರೆಯಿರೆ,

ಮ।।ಸ್ರ।। ದಿಸೆಯಂ ಕಾಹೇಱಿಸುತ್ತುಂ ತೃಣಕುಲಲತೆಯಂ ಸೀದು ಕರ್ಪೇಱಿಸುತ್ತುಂ
ರಸೆಯಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿಸುತ್ತುಂ ।
ಸಸಿಯಂ ವ್ಯಕ್ಷಾಳಿಯಂ ಸುಟ್ಟುರಿಪುತೆ ಮೃಗಮಂ ಬೇಯಿಸುತ್ತದ್ರಿಯಂ ದ
ಳ್ಪಿಸಿ ಸೀಳುತ್ತುಂ ವಿಶಾಳಂ ದವಶಿಖಿಯವೊಲಳ್ದತ್ತಮೋಘಂ ನಿದಾಘಂ ।। ೧೭

ವ।। ಅಂತು ತೋಱಿದ ನಿದಾಘದಲ್ಲಿ

ಕಂ।। ಪೊಸಬೇಸಗೆಯೊಳ್ ಮೃಗತತಿ
ಯಸುವೆರಸಿರವೇಳ್ಕುಮೆಂದು ಕರುಣಿಸಿ ಮಿತ್ರಂ ।
ಬಿಸಿಲಂ ಹಿಳಿದೊಡೆ ಬೆನ್ನೀ
ರೊಸರ್ವಂತಿರ್ದುದು ಮರೀಚಿಕಾಜಲಮೆತ್ತಂ ।। ೧೮

ತರದಿಂದಂ ತೆರೆಮಸಗುವ
ಮರೀಚಿಕಾಜಲಮನಿಳೆಯ ಜಳಮೆಂದು ಕರಂ ।
ಹರಿಣಂಗಳ್ ಪರಿತಂದಾ
ತುರಿಸುತ್ತುಂ ಬಿಸಿಲ ಬಯಲನೀಂಟ ಬಳಲ್ದುಂ ।। ೧೯

ನೋಡುವಂತಿಲ್ಲ, ನಿರೀಕ್ಷಿಸುವಂತಿಲ್ಲ ಎಂಬಷ್ಟುಮಟ್ಟಿಗೆ ಕಟೂಗ್ರವಾಗಿತ್ತು. ವ।। ಹೀಗೆ ಮಹಾಸಾಮರ್ಥ್ಯಶಾಲಿನಿಯೂ, ಜಡೆಗಳ ಬೆಡಗನ್ನು ಹೊಂದಿದವಳೂ, ಭಸ್ಮಭೂಷಿತ ಗಾತ್ರಳೂ, ರುದ್ರಾಕ್ಷಭೂಷಿತೆಯೂ, ನಾರುಸೀರೆ ಧರಿಸಿದವಳೂ ಆದ ಅಗಜೆಯು ಗಿರಿಶಿಖರದಲ್ಲಿ ಉಗ್ರತಪಸ್ಸಿನಲ್ಲಿರುವಾಗ ೧೭. ಪಾರ್ವತಿಯ ತಪೋಜ್ವಾಲೆಯಿಂದ ದಿಕ್ಕುಗಳಿಗೆ ಕಾವು ಏರಿದವು, ತೃಣಲತೆಗಳು ಸೀದು ಕಪ್ಪಾದವು, ಭೂಲೋಕ ಸಂತಾಪಗೊಂಡಿತು, ನೀರು ತುಂಬಿದ್ದ ಕೆರೆಗಳು ಒಣಗಿದವು, ಮರಗಿಡಬಳ್ಳಿಗಳು ಸುಟ್ಟು ಉರಿದವು, ಮೃಗತತಿ ಬೆಂದು ಹೋಯಿತು, ಬೆಟ್ಟಗಳು ಆ ಕಾವಿಗೆ ಸೀಳಿದವು, ಹೀಗೆ ಎಲ್ಲೆಲ್ಲಿಯೂ ಕಾಡ್ಗಿಚ್ಚಿನಂತೆ ಉಷ್ಣತೆ ಮಿತಿಮೀರಿತು. ೧೮. ಕಡು ಬೇಸಗೆಯಲ್ಲಿ ಎಲ್ಲೆಲ್ಲಿಯೂ ಬಿಸಿಲ್ಗುದುರೆ (ಮರುಮರೀಚಿಕೆ) ಬಾಯಾರಿದ ಮೃಗಗಳಿಗೆ ನೀರಿನ ಭ್ರಾಂತಿಯನ್ನು ಉಂಟುಮಾಡುತ್ತಿತ್ತು. ಇದನ್ನು ಕವಿ ಹೀಗೆ ವರ್ಣಿಸಿದ್ದಾನೆ. ಈ ಹೊಸಬಗೆಯ ಬೇಸಗೆಯಲ್ಲಿ ಮೃಗಗಳು ಬಾಯಾರಿ ಪರಿತಪಿಸುತ್ತಿವೆ ಎಂದು ಸೂರ್ಯನು ಯೋಚಿಸಿ ಕರುಣೆಯಿಂದ ಬಿಸಿಲನ್ನು ಹಿಂಡಿ ಬಿಸಿನೀರನ್ನು ಒಸರಿಸಿದನೋ ಎಂಬಂತೆ ಮರೀಚಿಕಾಜಲ (ಝಳ) ಬೆಳಗುತ್ತಿತ್ತು. ೧೯. ಬಗೆಬಗೆಯ ತೆರೆಗಳೇಳುವಂತೆ ತೋರುತ್ತಿದ್ದ ಆ ಮರೀಚಿಕಾಜಲವನ್ನೇ ನಿಜವಾದ ನೀರೆಂದು ಭ್ರಮಿಸಿದ ಚಿಗರಿಗಳು ಓಡಿಬಂದು ಆತುರದಿಂದ ಆ ಬಿಸಿಲ ಬಯಲನ್ನು ಹೀರಿ ಬಳಲುತ್ತಿದ್ದವು.

ವಹ್ನಿ ಧರೆಯೊಳಗೆ ತೀವಿದ
ಚಿಹ್ನಮಿದೆಂಬಂತೆ ಬಿಸಿಲ ಬೇಗೆ ಕರಂ ಮ ।
ಧ್ಯಾಹ್ನದೊಳಳುರ್ದೊಡೆ ಮೃಗತತಿ
ಜಾಹ್ನವಿಯೊಳ್ ಪುಗಲೆ ಬಯಸಿದುವು ಬೇಸಗೆಯೊಳ್ ॥ ೨೦

ವ॥ ಆ ಸಮಯದೊಳ್,

ಚಂ॥ ಫರಿಫರಿಲೆಂದು ಸೀದುವು ವಿಹಂಗಕುಲಂ ಕೆಱೆ ಭೂವಿ ಬೆಂಚೆಗಳ್
ಪುರಿದರಳೆಳ್ದುವೀ ಮನುಜರಾತಪತಾಪದೊಳಳ್ಕಿ ಬಳ್ಕಿದರ್ ।
ಕರಿಮುರಿವೋಯ್ತರಣ್ಯಮುಱೆ ಬೆಂದು ಮೃಗಾವಳಿ ಪೊಂದಿದತ್ತು ನಿಂ
ದುರಿದುವು ಬೆಟ್ಟಮಿಂಗಿದುವು ವಾರಿಧಿ ಕಾಯ್ದುದು ಭೂರಿಭೂತಳಂ ॥ ೨೧

ಕ॥ ಮೃಗಶಿಶುಗಳ್ ಕರಿಮುರಿ ಕಣ್
ಗೊಗೆದ ಮರಂ ಫರಿಫರಿಲ್ ಗಜಂ ಚಿಮಿಚಿಮಿಯೆಂ ।
ದಗನಿಕರಂ ಛಿಳಿಛಿಟಿಲೆನೆ
ಮಿಗೆ ಸೀದುವು ಬೆಂದುವುರಿದುವೊಡೆದುವು ಬಿಸಿಲೊಳ್ ॥ ೨೨

ಮರದಡಿಯೊಳ್ ಕಾನನದೊಳ್
ಗಿರಿತಟದೊಳ್ ಬಟ್ಟ ಬಯಲೊಳಂಬರತಳದೊಳ್ ।
ಕರಿಯ ಬಿಸಿಲುರಿಯ ಬಿಸಿಲ
ಚ್ಚರಿಯ ಬಿಸಿಲ್ ಪಿರಿಯ ಬಿಸಿಲಖಂಡಿತದ ಬಿಸಿಲ್ ॥ ೨೩

ವ॥ ಮತ್ತಮಲ್ಲದೆ,

೨೦. ಬೆಂಕಿಯ ನೆಲದಲ್ಲಿ ವ್ಯಾಪಿಸಿರುವ ಚಿಹ್ನೆಯೇ ಇದು ಎಂಬಂತೆ ಬಿಸಿಲಿನ ಬೇಗೆಯು ಮಧ್ಯಾಹ್ನದಲ್ಲಿ ತುಂಬಿರುವಾಗ ಆ ಬಿಸಿಲಲ್ಲಿ ಮೃಗಗಳು ಗಂಗೆಯಲ್ಲಿಯೋ ಎಂಬಂತೆ ಮುಳುಗಲು ಬಯಸಿದವು! ೨೧. ಹಕ್ಕಿಗಳು ಫರಿಫರಿಲೆಂದು ಸೀದವು. ಕೆರೆಭಾವಿಕೊಳಗಳು ಒಣಗಿದವು, ಮಾನವರು ಆ ಉರಿ ಬಿಸಿಲಿನಲ್ಲಿ ಅಳುಕಿದರು, ಕಾಡುಗಳು ಕಮರಿ ಸೀದು ಹೋದವು, ಮೃಗಗಳು ಬೆಂದವು, ಬೆಟ್ಟಗಳು ಉರಿದವು, ಕಡಲು ಇಂಗಿತು, ನೆಲ ಕಾಯ್ದಿತು. ೨೨. ಮೃಗಶಿಶುಗಳು ಕಮರಿದವು, ಕಂಡ ಮರಗಳು ಫರಿಲ್ ಫರಿಲೆಂದವು, ಆನೆಗಳು ಚಿಮಿಚಿಮಿಯೆಂದು ಕುದಿದವು, ಬೆಟ್ಟಗಳು ಛಿಳಿಛಿಟಿಯೆಂದು ಸೀಳಿ ಸೀದವು, ಬೆಂದವು ಮತ್ತು ಆ ಬಿಸಿಲಲ್ಲಿ ಒಡೆದವು. ೨೩. ಮರದ ಕೆಳಗೆ, ಕಾಡಿನಲ್ಲಿ, ಬೆಟ್ಟದ ತಪ್ಪಲಲ್ಲಿ, ಬಯಲಿನಲ್ಲಿ, ಗಗನದಲ್ಲಿ ಕ್ರಮವಾಗಿ ಕರಿಯ ಬಿಸಿಲು, ಉರಿಯಬಿಸಿಲು, ಅಚ್ಚರಿಬಿಸಿಲು, ಪಿರಿಯ ಬಿಸಿಲು ಮತ್ತು ಅಖಂಡವಾದ ಬಿಸಿಲು ಹೀಗೆ ಎಲ್ಲೆಲ್ಲಿಯೂ ಬಿಸಿಲೇಬಿಸಿಲು!

ಮ॥ ನಡೆಯಲ್ಮೊಂದಡಿಯಿಟ್ಟು ಕಾಯ್ದ ನೆಲನಂ ಕಾಲ್ ಮುಟ್ಟಿ ಚುಯ್ಯೆಂದು ಬೆಂ
ದೊಡೆ ಮತ್ತೊಂದಡಿಯೆತ್ತಲಾಱದಳಲಿಂ ಕಣ್ಮುಚ್ಚಿ ಹಸ್ತಾಗ್ರಮಂ ।
ಕಡೆವಾಯೊಳ್ ಸೆಱೆಯಿಟ್ಟು ನೆತ್ತಿ ಬಿರಿದೆತ್ತಲ್ ಮುತ್ತುಗಳ್ ಸುತ್ತಲುಂ
ಸಿಡಿಯುತ್ತಿರ್ಪಿನಮಿರ್ದುದೊಂದತಿ ಮದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ ॥ ೨೪

ವ॥ ಅಂತುಮಲ್ಲದೆ ಮತ್ತೊಂದೆಡೆಯೊಳ್,

ಚಂ॥ ಎಲೆಲೆಲೆ ನೋಡನೋಡೆ ಕೆಲನುಂ ಬಲನುಂ ನೆಲನುಂ ದವಾಗ್ನಿ ಸು
ಟ್ಟೊಲೆಯವೊಲಾಗೆ ಮೆಟ್ಟದಡಿಯೆತ್ತಿದ ಕಾಲುಱಿ ಸೀಯೆ ನಿಂದಿರಲ್ ।
ಚಲಿಯಿಸಲಾಱದಾತಪದೆ ಹಸ್ತಮನೆತ್ತುತೆ ಘೀಳಿಡುತ್ತೆ ತಾ
ನೊಲೆದುದು ಚೇಷ್ಟೆಗುಂದಿದುದು ಜೋಲ್ದುದು ಬಳ್ದುದು ಬೆಂದುದೊಂದಿಭಂ ॥೨೫

ವ॥ ಮತ್ತಮಲ್ಲದೆ,

ಕಂ॥ ಜಳಜಸಖನನಿಲಸಖನೆಂ
ದಿಳೆಯೊಳ್ ರಸವೆಸರನಾನದಿರ್ದೊಡೆ ಸೂರ್ಯಾ ।
ನಳರೋವೊ ಸಂತಮಿರ್ಪರೆ
ಘಳಿಲನೆ ನಿಂದುರಿದು ಹೋಗರೇ ಬೇಸಗೆಯೊಳ್ ॥ ೨೬

ತಪನನ ಮೆಯ್ಯೊಳ್ ಪುಗುಳಸ
ಮಪಾವಕನ ತನುವಿನೊಳ್ ಮಹಾ ಸ್ಫೋಟಕವಾ ।
ತಪದ ಕಡುಪಿಂದೆ ನೆಗೆತಂ
ದಪುವೆನೆ ಬೇಸಗೆಯ ಬಿಸಿಲ ನಾಲಗೆಯೊಳ್ಪಂ ॥ ೨೭

೨೪. ಅಲ್ಲೊಂದು ಮದ್ದಾನೆ; ಅದು ನಡೆಯಲೆಂದು ಕಾಯ್ದ ನೆಲದ ಮೇಲೆ ಒಂದು ಅಡಿಯಿಟ್ಟಿತು; ಅದು ಚುಯ್ಯೆಂದು ಬೆಂದುಹೋಯಿತು! ಆಗ ಅದು ಮತ್ತೊಂದು ಅಡಿಯನ್ನು ಎತ್ತಲಾರದೆ ದುಃಖದಿಂದ ಕಣ್ಣುಮುಚ್ಚಿ, ತನ್ನ ಸೊಂಡಿಲನ್ನು ಕಡೆಬಾಯಿಯಲ್ಲಿ ಸೆರೆಯಿಟ್ಟಿತು; ಅಷ್ಟರಲ್ಲಿ ಅದರ ನೆತ್ತಿ ಬಿರಿದು ಮುತ್ತುಗಳು ಸುತ್ತಲೂ ಸಿಡಿಯುತ್ತಿರಲು ಅದು ಆ ಗ್ರೀಷ್ಮದಲ್ಲಿ ಭಯಂಕರವಾಗಿ ನಿಮಿರಿ ನಿಂತಿತ್ತು!
೨೫. ಮತ್ತೊಂದು ಆನೆ, ಅದರ ಸ್ಥಿತಿಯಂತೂ ಅತ್ಯಾಶ್ಚರ್ಯಕರ! ಅರರೆ, ಅದು ನೋಡುತ್ತಿದ್ದಂತೆಯೆ ಅಲ್ಲಿಯ ಸುತ್ತುಮುತ್ತಿನ ನೆಲವೆಲ್ಲ ದಾವಾಗ್ನಿಯು ಸುಟ್ಟ ಒಲೆಯಂತೆ ಆಗಿತ್ತು; ಅದು ಮೆಟ್ಟಿ ಅಡಿ ಎತ್ತಿತು; ಕಾಲು ಉರಿದು ಸೀದು ಹೋಯಿತು! ನಿಂತಿತ್ತು. ಮುಂದೆ ಚಲಿಸಲಾರದೆ ಬಿಸಿಲಿನಲ್ಲಿ ತನ್ನ ಸೊಂಡಿಲನ್ನು ಎತ್ತಿ ಘೀಂಕರಿಸಿ ಒಲೆದಾಡಿತು, ಚೇಷ್ಟೆಗುಂದಿತು, ಜೋಲುಮುಖಹಾಕಿ ಬೆಂದು ಬಿದ್ದಿತು!
೨೬. ಜಲಜಸಖ ಸೂರ್ಯ, (ಕಮಲ) ಅನಿಲಸಖ ಅಗ್ನಿ; (ಗಾಳಿ) ಎಂದು ಬೇರೆಬೇರೆ ಹೆಸರು ಪಡೆಯದಿದ್ದ ಪಕ್ಷದಲ್ಲಿ ಓಹೋ! ಈ ಸೂರ್ಯ ಮತ್ತು ಅನಲ (ಬೆಂಕಿ)ರು ಇಂಥ ಕಡು ಬೇಸಗೆಯಲ್ಲಿ ತಕ್ಷಣ ಉರಿದೇ ಹೋಗುತ್ತಿದ್ದರೋ ಏನೊ? (ಅಷ್ಟುತೀಕ್ಷ್ಣವಾದ ಬೇಸಗೆ ಎಂದು ಅರ್ಥ) ೨೭. ಆ ಬೇಸಗೆಯ ಉಗ್ರತೆ ಎಷ್ಟೆಂದು ವರ್ಣಿಸಲಳವಲ್ಲ! ಏಕೆಂದರೆ ಆ ಕಾಲ ಅತಿಉಷ್ಣತೆಯಿಂದ ಸೂರ್ಯನ ಮೈಯಲ್ಲಿ

ವ॥ ಮತ್ತಮಾ ನಿದಾಘಂ ಕಡುಗಾಯ್ದ ತೀವ್ರ ಖರಕರಪ್ರಕರಮಂ ಚುರ್ಚುರ್ಚನೆ ಸುಡೆ ಕಾಯ್ದುರ್ಕಿ ಬಿಸಿಯ ತೆರೆ ತಾರ್ಮುಟ್ಟೆ ನೊರೆಗಟ್ಟಿ ಕುಕ್ಕುಳಂಗುದಿವ ಬಿಸಿನೀರೊಳ್ ನಿಲಲಾಱದೆ ನೆಱೆ ಮಱುಗಿ ಪೊಱಪೊಣ್ಮಿ ಬೆದಬೆದನೆ ಬೆಂದು ಬೆಂಡೆಳ್ದು ಬಱಬಱಂಬತ್ತಿ ಹೊತ್ತಿ ಹೊಗೆದು ಜೀವನವಿಂಗೆ ಜೀವನವಿಂಗುವಂತಾಗೆ ಕಱುವೆಂಚೆಯೊಳ್ ಕೋಟಲೆಗೊಳುತಿರ್ಪ ಪಾಠೀನಕುಲದಿಂ ಮತ್ತಂ ಮಸಗುವ ತಪನನ ಬಿಸಿಯ ಬಂಬದಿಂದೊಗೆತರ್ಪ ಬಿಸಿಲ ಬೆಂಕಯಿಂ ಹೊಗೆದೆಯ್ದೆ ತರುನಿಕರವ್ರುರಿದು ಕರಿಗೊಳ್ಳಿಯಂತೆ ಕಾಯ್ವೋಱೆ ಕರ್ಬೊಗೆಯಂ ನೆಗಪುವ ಕೊಂಬುಗಳ ಕಡುಬಿಸುಪು ಕಾಲ್ಗಳಂ ಸುಡೆ ಬಳ್ಗಿಗೊಂಡ ಬೇಗೆಯಿಂ ಕುಳ್ಗಿರಲಾಱದೆ ಮೀಱೆ ನೆಗೆದು ಪಾಱುವಾಗಳ್ ಬಿಸಿಲುರಿ ಪೊಡೆದು ಪಕ್ಕಂ ಸೀದು ನೆಲಕ್ಕೆ ಬಿಳ್ದು ಕಣ್ಮುಚ್ಚಿ ಹಮ್ಮಯ್ಸಿ ಹರಣಂಗಳೆದು ಮಳಲೊಳ್ ಪುರಿದಂತಾಗೆ ಪರೆದಿರ್ದ ಬಹುವಿಧದ ವಿಹಂಗಾವಳಿಯಿಂ ಮತ್ತಂ ತಪನಪ್ರದ್ಯೋತಹತಿಯಿಂ ಬೆನ್ನೊಡೆದು ಬಾಯಾರಿ ತಾಳಿಗೆ ಬತ್ತಿ ನೆತ್ತಿ ಹೊತ್ತಿ ಕಣ್ಣೊಳ್ ನೆತ್ತರೆಚ್ಚು ಪಾಯೆ ಪರಿವರಿದು ಮರೀಚಿಕಾಜಲದೊಳ್ ಮೊಗವಿಟ್ಟು ಬಗೆಗೆಟ್ಟು ಮರವಟ್ಟು ಧರೆಯೊಳ್ ಕೆಡೆದಿರ್ಪ ನಾನಾಮೃಗನಿಕಾಯದಿಂ ಮತ್ತಂ ಮಾರ್ತಾಂಡಮರೀಚಿ ಸುತ್ತಿ ಮುತ್ತೆ ಕುಂಭಸ್ಥಳಂ ಹೊತ್ತಿ ಹೊಗೆದು ಬಿರಿದ ನೆತ್ತಿಯಿಂ ಮುತ್ತೊಡೆದು ಸಿಡಿದು ಪಾಱೆ ಬೆನ್ನೊಣಗಿ ತರ್ಮಂ ಹೊಪ್ಪಳಿಸಿ ಸೀಳ್ದು ಬೀಡೆ ನಾಡೆ ನೋಯಿಸಿ ನೀರಡಿಕೆ ನೆರೆದೊಳಗುದೋಱೆ ಬಾಯೊಳ್ ಭರಿಕೆಯ್ಯನಿಟ್ಟೊಡಲೊಳಗೆ ಪುಡಿ ಪಾಱೆ ಬೆಂದ ಪುಷ್ಕರಮಂ ಭೋಂಕನೆ ತೆಗೆದು ಕಾಯ್ದ ಕೋಡೊಳ್ ಪೊಱಲಣ್ಮದೆ ಮೀಱೆದ ದಱೆಯ ತಟದೊಳ್ ನೀಡಿ ಕೆಡಪಿ ಕಣ್ಮುಚ್ಚಿ ನೆಮ್ಮಿ ಹಮ್ಮದಂಬೋಗಿ ಕಿಡಿಸೂಸಿ ಸುಯ್ದು ಗಾಸಿಯಾಗಿ ಮೆದೆಗೆಡೆದು ಮದವಳಿದಿರ್ಪ ಮಾತಂಗವ್ರಾತದಿಂ ಮತ್ತಂ ಶತಧಾರಾಸಹಸ್ರದಂತೆ ಸಹಸ್ರಕರಮರೀಚಿಗಳುಱೆದೆಱಗಿ ನಟ್ಟು ಕಾಯೆ

ಬೊಕ್ಕೆಗಳಾದವು; ಪಾವಕ (ಬೆಂಕಿ)ನ ಮೈಯಲ್ಲಿಯೂ ಮಹಾಸ್ಫೋಟಕ (ದೊಡ್ಡ ಬೊಕ್ಕೆಗಳು)ಗಳು ಎದ್ದವು ಎಂದಮೇಲೆ ಬೇಸಗೆಯ ತಾಪವನ್ನು ಎಷ್ಟು ವರ್ಣಿಸಲಾದೀತು! ವ॥ ಮತ್ತು ಆ ಬೇಸಗೆಯ ಕಡುಬೇಗೆ ರವಿಯ ಕಿರಣಗಳನ್ನೇ ಚುರ್‌ಚುರ್ ಎಂದು ಸುಡಲು, ಕಾಯ್ದುಉಕ್ಕಿದ ಬಿಸಿಯ ತೆರೆಒಣಗಿ ನೊರೆಗಟ್ಟಿ ಕತಕತ ಕುದಿಯುವ ಬಿಸಿನೀರಿನಲ್ಲಿ ನಿಲ್ಲಲಾರದೆ ನೆರೆಮರುಗಿ ಬೆದಬೆದನೆ ಬೆಂದು, ಚನ್ನಾಗಿ ಬತ್ತಿ, ಹೊತ್ತಿ ನೀರು ಇಂಗಿ ಜೀವನವೇ ಇಂಗುವಂತಾಗಲು, ಸಣ್ಣ ಮಡುವಿನಲ್ಲಿ ಕೊರಗುತ್ತಿರುವ ಮೊಸಳೆ(ಪಾಠೀನ)ಗಳಿಂದಲೂ ಮತ್ತು ಅಲ್ಲಿರುವ ಹಕ್ಕಿಗಳ ಸ್ಥಿತಿ ನೋಡಿ-ಬಿಸಿಯ ಬಿಂಬದಿಂದ ಬರುವ ಬಿಸಿಲ ಬೆಂಕಿಯಿಂದ ಹೊಗೆಯೆದ್ದು ಮರಗಳು ಉರಿದು ಕರಿಯ ಕೊಳ್ಳಿಯಂತೆ ಬಿಸಿಯೇರಲು, ಕಪ್ಪು ಹೊಗೆಯನ್ನು ಚಿಮ್ಮುವ ಕೊಂಬುಗಳ ಬಿಸಿಯ ಹಕ್ಕಿಗಳ ಕಾಲುಗಳನ್ನು ಸುಡಲು ಬಳ್ಗಿಗೊಂಡ ಬೇಗೆಯಿಂದ ಅಲ್ಲಿ ಕುಳಿತಿರಲಾರದೆ ಅಲ್ಲಿಂದ ನೆಗೆದು ಹಾರುವಾಗ ಬಿಸಿಲ ಉರಿ ಹೊಡೆಯಲು, ಪುಕ್ಕಗಳು ಸೀದು, ನೆಲಕ್ಕೆ ಬಿದ್ದು, ಕಣ್ಣುಮುಚ್ಚಿ ಅಸುನೀಗಿ, ಮರಳಿನಲ್ಲಿ ಹುರಿದಂತಾಗಲು, ಹರಡಿದ್ದ ಹಲವು ಬಗೆಯ ಹಕ್ಕಿಗಳಿಂದಲೂ, ಮತ್ತು ಸೂರ್ಯನ ಬೇಗೆಯಿಂದ ಬೆನ್ನೊಡೆದು ಬಾಯಾರಿ; ಬಾಯಿ ಅಂಗಳವು ಬತ್ತಿ, ಹೊತ್ತಿ, ಕಣ್ಣಲ್ಲಿ ರಕ್ತವು ಚಿಮ್ಮಿ ಸೋರಿ, ಮರೀಚಿಕಾ (ಬಿಸಿಲ್ಗುದುರೆ) ಜಲದಲ್ಲಿ ಮುಖವಿಟ್ಟು, ಬಗೆಗೆಟ್ಟು ಮರವಟ್ಟು (ನಿಶ್ಚೇಷ್ಟವಾಗಿ) ನೆಲದ ಮೇಲೆ ಬಿದ್ದಿರುವ ಹಲವು ಮೃಗಗಳಿಂದಲೂ ಮತ್ತು

ಗಳಗಳನರಳ್ದು ಪಳಪಳನೆ ಸೀಳ್ದು ಸಿಡಿದೊಡೆದು ಹಿಗ್ಗಿ ತಗ್ಗಿ ಕುಗ್ಗಿ ಕುಪ್ಪಳಿಸಿರ್ಪ ಪರ್ವತ ಪ್ರತಾನದಿಂದತ್ಯುಗ್ರತೆಯನತಿ ಪ್ರಚಂಡತೆಯನತ್ಯುಷ್ಣತೆಯನತ್ಯಾಭೀಳತೆಯನತಿ ಪ್ರತಾಪಮನು ಗುಳುತ್ತಿರ್ದುದಂತುಮಲ್ಲದೆಯುಂ,

ಮ॥ಸ್ರ॥ ಪಸಿವಿಂ ದಾವಾನಳಂ ಸುಟ್ಟುರಿಪೆ ತರುಗಿರಿವ್ರಾತಮಿಲ್ಲಾದುದೋ ನಾ
ಲ್ಟೆಸೆಯೊಳ್ ಸೂರ್ಯಂ ಕ್ಷುಧಾಪೀಡಿತನಱಿಸುತೆ ಕೆಯ್ನೀಡೆ ನಿಸ್ಸಾರಕಾಷ್ಠ ।
ಪ್ರಸರಂ ಕೌಱಿಳ್ದುದೋ ನಿಂದನುಪಮತ್ಯಪಿತಂ ವಾಡಬಂ ಪೀಱಿತಾಂಶೋ
ಷಿಸಿತೋವಾರಾಶಿಯೆಂಬುಷ್ಣಮನೊದವಿಸಿತತ್ಯುಗ್ರಯೋಗ ನಿದಾಘಂ ॥ ೨೮

ವ॥ ಆ ನಿದಾಘದಲ್ಲಿ,

ಮ॥ಸ್ರ॥ ರವಿಕಾಂತೋಗ್ರಸ್ಫುಲಿಂಗಪ್ರತತಿ ನೆಗೆದು ಪಾದಂಗಳೊಳ್ ಬಳ್ವೊಡಂ ಪೊ
ಣ್ಮುವ ದಾವಪ್ರೋದ್ಭವ ಪ್ರಸ್ಫುರಿತವಿಲಸದುಷ್ಣಂ ತನೂಭಾಗಮಂ ಪ ।
ತ್ತುವೊಡಂ ತದ್ದೇಹದಗ್ನಿಪ್ರಭೆಯೊದವುವೊಡಂ ಸೂರ್ಯತಿಗ್ಮಾಂಶುಗಳ್ ತಾ
ಗುವೊಡಂ ಮಾಧ್ಯಂ ನಿದಾಘಂ ಕವಿದೊಡಮನಿತಕ್ಕಳ್ಕದಂತಾರ್ಯೆ ನಿಂದಳ್ ॥ ೨೯

ಸೂರ್ಯಕಿರಣಗಳು ಸುತ್ತಿ ಮುತ್ತಲು, ಕುಂಭಸ್ಥಳವು ಹೊತ್ತಿಕೊಂಡು ಒಡೆದ ನೆತ್ತಿಯಿಂದ ಮುತ್ತುಗಳು ಒಡೆದು ಸಿಡಿದು ಹಾರಿ, ಬೆನ್ನು ಒಣಗಿ, ಚರ್ಮವು ಕಾಯಿಕಟ್ಟಿ, ಬಿರುಕುಬಿಟ್ಟು, ಹೆಚ್ಚು ನೋಯಿಸಿ, ನೀರಡಿಕೆಯು ಮಿತಿಮೀರಲು, ಬಾಯೊಳಗೆ ಸೊಂಡಿಲನ್ನು ಇಟ್ಟು, ಒಡಲೊಳಗೆ ಪುಡಿಹಾರಲು, ಬೆಂದ ಸೊಂಡಿಲನ್ನು ತಕ್ಷಣ ತೆಗೆದು, ಕಾಯ್ದಕೋಡಿನಲ್ಲಿ ಹೊರಲಾರದೆ. ಮೀರಿದ ದರಿ (ಗುಹೆ)ಯ ತಟದಲ್ಲಿ ನೀಡಿ ಕೆಡಪಿ ಕಣ್ಣುಮುಚ್ಚಲು, ಮೈಮರೆದು, ಕಿಡಿಸೂಸಿ, ಬಿಸುಸುಯ್ದು ಗಾಸಿಯಾಗಿ ಮೆದೆಯಂತೆ ಬಿದ್ದು ಮದವಳಿದಿರುವ ಆನೆಗಳಿಂದಲೂ, ಮತ್ತು ಸಾವಿರಾರು ಮೋಡಗಳಂತೆ ಸೂರ್ಯಕಿರಣಗಳು ಎರಗಿ ಕಾಯುತ್ತಿರಲು ಗಳಗಳನೆ ನರಳಿ, ಪಳಪಳನೆ ಸೀಳ್ದು, ಸಿಡಿದೊಡೆದು ಹಿಗ್ಗಿ ತಗ್ಗಿ ಕುಗ್ಗಿ ಕುಪ್ಪಳಿಸುತ್ತಿರುವ ಪರ್ವತಗಳ ಸಮೂಹದಿಂದ ಅತಿ ಉಗ್ರತೆಯನ್ನು, ಅತ್ಯುಷ್ಣವನ್ನು, ಭಯಂಕರತೆ (ಆಭೀಳತೆ)ಯನ್ನು ಅತಿ ಪ್ರತಾಪವನ್ನು ಆ ಬೇಸಗೆ ಉಗುಳುತ್ತಿತ್ತು. ೨೮. ದಾವಾನಲಕ್ಕೆ ಹಸಿವಾಗಿ ಎಲ್ಲವನ್ನೂ ಸುಟ್ಟು ಉರಿಸಿದುದರಿಂದ ತರುಗಿರಿಗಳು ಇಲ್ಲವಾದವೊ! ನಾಲ್ಕು ದಿಕ್ಕುಗಳಲ್ಲಿಯೂ ಸೂರ್ಯನು ಕ್ಷುಧಾಪೀಡಿತನಾಗಿ ಆಹಾರಕ್ಕಾಗಿ ಕೈನೀಡಲು ಸೌದೆಗಳೆಲ್ಲ ಕಮರಿ ಹೋಯಿತೋ! ವಡಬಾಗ್ನಿಯು ಬಾಯಾರಿಕೆಯಿಂದ ನೀರಿನ ಅಂಶವನ್ನೆಲ್ಲ ಹೀರಲು ಸಮುದ್ರವೆಲ್ಲ ಒಣಗಿಹೋಯಿತೋ ಎಂಬಂತೆ ಆ ಬೇಸಗೆಯು ಅತ್ಯುಗ್ರ ಉಷ್ಣವನ್ನು ಒದಗಿಸಿತು. ೨೯. ಸೂರ್ಯಕಾಂತಶಿಲೆಗಳ ಪ್ರಜ್ವಲಿಸುವ ಕಿಡಿಗಳು ಸಿಡಿದು ನೆಗೆದು ಅವಳ ಪಾದಗಳ ಮೇಲೆ ಬೀಳುತ್ತಿವೆ, ದಾವಾಗ್ನಿಯ ಉಗ್ರವಾದ ಉಷ್ಣವು ಅವಳ ಶರೀರವನ್ನು ಸುಡುತ್ತಿದೆ; ಅವಳ ಒಳಗಿನ ಜಠರಾಗ್ನಿ ಪ್ರಭೆಗಳು ಚಿಮ್ಮುತ್ತಿವೆ; ಮೇಲಾಗಿ ಮಧ್ಯಾಹ್ನದ ಚಂಡ ಸೂರ್ಯನ ತೀಕ್ಷ್ಣವಾದ ಕಿರಣಗಳು ಅವಳಿಗೆ ತಾಗುತ್ತಿವೆ. ಇಷ್ಟಾದರೂ ಪೂಜ್ಯಳಾದ ಅಗಜೆಯು ಕೊಂಚವೂ ಅಳುಕದೆ

ವ॥ ಅಂತು ನಿಂದು,

ಕಂ॥ ದಶಭುಜನ ಮನೋವಲ್ಲಭೆ
ದಿಶಾವಳೀಭರಿತ ಕೀರ್ತಿಯುತೆ ಘೋರತಪೋ ।
ವಶೆ ನೆಱೆ ಗಂಗಾಧರನಂ
ಶಶಿಧರನಂ ನೆನೆದು ಕಳೆದಳಾ ಬೇಸಗೆಯಂ ॥ ೩೦

ವ॥ ಆ ಸಮಯದೊಳ್ ಸಕಳಕಳಾಕೋವಿದೆಯರಪ್ಪ ಜಯೆವಿಜಯೆಗಳ್ ಮೆಯ್ಯಿಕ್ಕಿ ಕೈಯಂ ಮುಗಿದು,

ಚಂ॥ ಮದವುಡುಗಿತ್ತು ಬೇಸಗೆ ಕರಂ ನಸುದೋಱೆದುವಲ್ಲಿಗಲ್ಲಿಗಂ
ಬುದನಿಕರಂ ಸುರುಳ್ದುದು ಬಿಸಿಲ್ ನೆಗೆದತ್ತು ತಟಲ್ಲತಾಂಕುರಂ ।
ಬೆದಱೆದುವಂಚಿಯಾಡಲಡಿಯಿಟ್ಟುವು ಸೋಗೆಗಳೆಯ್ದೆ ಪಲ್ಲವಂ
ಪುದಿದ ಕದಂಬದೊಳ್ ಮುಗಿಲನೆಳ್ಗಸಲಿರ್ದ್ದುದು ಪಶ್ಚಿಮಾನಿಳಂ ॥ ೩೧

ವ॥ ಅನಂತರಮಾಗಳ್,

ಕಂ॥ ಕಡವಿನ ಸೊವಡಿಂದೊಂದೆರ
ದಡಿಯಿಡುತಿರ್ದಪುದು ಗಾಳಿ ನಲಿದು ನವಿಲ್ಗಳ್ ।
ನಡೆನಟಣೆಗೊಳುತ್ತಿರ್ದಪು
ವೆಡೆಯಱಸುತ್ತಿರ್ಪುವಂಚೆ ಸುಳಿದುವು ಮುಗಿಲ್ಗಳ್ ॥ ೩೨

ವ॥ ಎಂದು ಬಿನ್ನಯ್ಸುತ್ತುಂ ಮತ್ತಮಿಂತೆಂದರ್

ನಿಂತಿದ್ದಾಳೆ! ೩೦. ದಶಭುಜಪರಶಿವನ ಮನೋವಲ್ಲಭೆಯೂ, ದಿಗಂತವಿಶ್ರಾಂತ ಕೀರ್ತಿಶಾಲಿನಿಯೂ, ಘೋರ ತಪೋಮಗ್ನೆಯೂ ಆದ ಪಾರ್ವತಿ ಗಂಗಾಧರನೂ ಶಶಿಧರನೂ ಆದ ಪರಶಿವನನ್ನು ನೆನೆಯುತ್ತಾ ಬೇಸಗೆಯನ್ನು ಕಳೆದಳು. ವ॥ ಆಗ ಸಕಲಕಲಾನಿಪುಣೆಯರಾದ ಸಖಿಯರು ಭಕ್ತಿಯಿಂದ ಕೈಮುಗಿದು ೩೧. ಬರಬರುತ್ತಾ ಬೇಸಗೆಯ ತೀವ್ರತಾಪ ಕಡಮೆಯಾಯಿತು; ಅಲ್ಲಲ್ಲಿ ಮೇಘಗಳು ಸುರುಳಿ ಸುರುಳಿಯಾಗಿ ಸರಿದು, ಬಿಸಿಲು ಬಿಡಿಬಿಡಿಯಾಗತೊಡಗಿತು. ಮಿಂಚು ಹೊಳೆಯಿತು, ಹಂಸಗಳು ಬೆದರಿದವು, ನವಿಲುಗಳು ಕುಣಿಯತೊಡಗಿದವು, ನೀಪವೃಕ್ಷಗಳು ಚಿಗುರಿಟ್ಟವು, ಪಶ್ಚಿಮದ ಗಾಳಿಯು ಬೀಸಿ ಮುಗಿಲುಗಳನ್ನು ಚದುರಿಸ ತೊಡಗಿತು. ೩೨. ನೀಪ ಕಡವು (ಕದಂಬ) ವೃಕ್ಷಗಳ ಸುವಾಸನೆಯಿಂದ ಗಾಳಿ ಒಂದೆರಡಡಿ ಯಿಡುತ್ತಿದೆ (ಮಂದವಾಗಿ ಬೀಸುತ್ತಿದೆ), ನವಿಲುಗಳು ಮೇಘೋದಯವನ್ನು ಕಂಡು ನಲಿಯುತ್ತಿವೆ. ಹಂಸಗಳು ನಡೆ ನಟನೆಗೊಳ್ಳುತ್ತಿವೆ ಮತ್ತು ಮಳೆಗಾಲ ಬಂದುದಕ್ಕಾಗಿ ಅವು ನೆಲೆಗಳನ್ನು ಅರಸುತ್ತಿವೆ. ಮುಗಿಲುಗಳು ಸುಳಿಯತೊಡಗಿದವು,

ಕಂ।। ಪೋದುದು ಬೇಸಗೆ ಕಾರ್ ಮೊಗ
ವಾದುದು ತರುತಳದ ನೆಳಲ ತಣ್ಪಿನೊಳಿರ್ದ ।
ತ್ಯಾದರದಿಂ ಮಾಳ್ಪುದು ಪು
ಣ್ಯೋದಯ ನಿಷ್ಕಪಟ ವಿಪುಳತಪಮಂ ಗಿರಿಜೇ ।। ೩೩

ಎನೆ ಕೇಳ್ದು ಮನಂಗೊಂಡ
ತ್ಯನುಪಮ ಶೈವಪ್ರತಾಪ ತೇಜೋನಿಧಿ ಭೋಂ ।
ಕನೆ ಗಿರಿಸುತೆ ನಡೆತಂದಳ್
ವಿನಯವಿಭೂಷಣೆ ವಿಲಾಸವಿಭ್ರಮದಿಂದಂ ।। ೩೪

ಮ।।ಸ್ರ।। ಭರದಿಂದೆಯ್ತಂದು ಭರ್ಗಪ್ರಿಯೆ ಭವನ ಮನೋಮೂರ್ತಿ ಭಾಳಾಕ್ಷಭಕ್ತ್ಯಾ
ತುರೆ ಮುಕ್ತಿವ್ರಾತೆ ಭೂತೇಶನ ಸಕಳಸುಖಾಕಾರೆ ಶರ್ವಾಣಿ ಸರ್ವೇ ।
ಶ್ವರ್ಯೇರ್ವೀಮಾತೆ ಮೂಲೋಕದ ಸುಕೃತಫಲಂ ಸತ್ಯವಿಸ್ತಾರೆಯುದ್ಯತ್
ಗಿರಿರಾಜಾಪತ್ಯೆ ನಿಂದಳ್ ಘನವಟವಿಟಪಿಚ್ಛಾಯೆಯೊಳ್ ಪ್ರೀತಿಯಿಂದಂ ।। ೩೫

ವ।। ಇಂತಘಟಿತಘಟಿತೆ ಪಟುತರಚಿತ್ತೆ ನಿಟಲಲೋಚನೆ ವಟವೃಕ್ಷದ ಕೆಳಗೆ ವಾರಿಕುಲಕ್ಕೆ ಸೋಲದೆ ಧೀರೋದಾತ್ತೆ ಘೋರತಪದಳ್ ನಿಂದಳನ್ನೆಗಮಿತ್ತಲ್,

ಚಂ।। ನಲಿದುದು ಸೋಗೆ ನುಣ್ಪನೆಡೆಗೊಂಡುದು ಚಾದಗೆವಕ್ಕಿ ಮಿಕ್ಕುಪೂ
ತಲರ್ದುದು ಸೊಂಪಿನಿಂ ಕಡವು ತಣ್ಪನೆ ಹೇಱಿದುವೆಯ್ದೆ ಬೆಟ್ಟು ಬಂ ।
ದಲೆದುದು ಪಶ್ಚಿಮಾನಿಳನಮರ್ಚಿತು ಕೇತಕಿ ಪೂದೊಡಂಬೆಯಂ
ಬಲದೊಳೆ ಪೊಕ್ಕುವಂಚೆ ಮುಗಿಲೊಡ್ಡಣೆಯೊಡ್ಡಿತು ಕಾರ ಕೊರ್ವಿನೊಳ್ ।। ೩೬

೩೩. ಬೇಸಗೆ ಕಳೆಯಿತು, ಮುಂಗಾರು ಮುಖವಾಯಿತು, ಇನ್ನು ಮೇಲೆ ನೀನು ಮರದ ನೆರಳಿನ ತಂಪು ನೆಲದಲ್ಲಿ ಕುಳಿತು ಆದರದಿಂದ ತಪಸ್ಸನ್ನು ಮಾಡಬಹುದು. ೩೪. ಸಖಿಯರ ಮಾತನ್ನು ಕೇಳಿದ ಅನುಪಮ ಶೈವತೇಜೋನಿಧಿಯಾದ ಅಗಜೆ ವಿನಯದಿಂದ ನಡೆತಂದಳು, ೩೫. ಗಿರಿಜೆ ಅಲ್ಲಿಂದ ನಡೆತಂದು ದಟ್ಟವಾದ ಆಲದ ಮರದ ನೆರಳಿನಲ್ಲಿ ಪ್ರೀತಿಯಿಂದ ನಿಂತು ತಪೋಮಗ್ನೆಯಾದಳು; ಅವಳನ್ನು ಕವಿ ಬಣ್ಣಿಸುವ ಕ್ರಮವಿದು. ಆಕೆ ಭರ್ಗನಿಗೆ ಪ್ರಿಯಳಾದವಳು, ಭವನಮನೋಮೂರ್ತಿ, ಫಾಲಾಕ್ಷನ ಭಕ್ತಿಯಲ್ಲಿ ಆತುರವುಳ್ಳವಳು, ಭೂತೇಶನ ಸುಖಸ್ವರೂಪಳು, ಸರ್ವೇಶ್ವರಿ, ಪ್ರಪಂಚಮಾತೆ, ಮೂರುಲೋಕದ ಪುಣ್ಯಫಲ, ಸತ್ಯಸ್ವರೂಪೆ ಇತ್ಯಾದಿ. ವ।। ಅಘಟಿತಘಟಿತೆಯೂ ದೃಢಚಿತ್ತಳೂ ಆದ ಗಿರಿಜೆ ಆಲದ ಮರದ ಕೆಳಗೆ ನಿಂತು ಮಳೆಗೆ ಹೆದರದೆ ಘೋರತಪೋಮಗ್ನಳಾದಳು. ೩೬. ಆ ಮುಂಗಾರಿನಲ್ಲಿ ನವಿಲು ನಲಿಯಿತು, ಚಾತಕಹಕ್ಕಿ ಮೇಘದ ನೀರಿನ ಆಹಾರ ಸವಿದು ನುಣ್ಣಗಾಯಿತು, ಕಡವು (ಕದಂಬವೃಕ್ಷ)ಗಳು ಸೊಂಪಾಗಿ ಬೆಳೆದು ಹೂಬಿಟ್ಟುವು ಪಶ್ಚಿಮಾನಿಲವು ತಣ್ಪನ್ನು ಬೀರಿತು, ಕೇತಕಿ ಹೂಬಿಟ್ಟಿತು, ಹಂಸೆಗಳು ಗೂಡುಹೊಕ್ಕವು, ಮೇಘಗಳು ಮುತ್ತಿ

ವ॥ ಅಯತಮಲ್ಲದೆಯುಂ,

ಕಂ॥ ಹರಿಸಂ ಮಿಗೆ ನವಿಲಾಡು
ತ್ತಿರೆ ಚಾದಗೆಯುರ್ಬ ನಲಿಯೆ ನಾಲ್ಕುಂ ದೆಸೆಯುಂ ।
ಕರಿಯಂತಿರೆ ಗಿರಿಯಂತಿರೆ
ಧರೆಯಂತಿರೆ ನಗೆದುದಭ್ರಕುಲಮಂಬರದೊಳ್ ॥ ೩೭

ಕಂ॥ ತರದಿಂ ಶಿಖಿ ಚಾದಗೆ ಮಧು
ಕರಮಂಚೆ ಪಯೋಧರಂಗಳನನುನಯದಿಂದಂ ।
ಕರೆದುವು ನೆರೆದುವು ಮೊರೆದುವು
ಪರೆದುವು ತೋಱಿದುವು ನಿರಂತರಂ ಕಾರ್ಮೊಗದೊಳ್ ॥ ೩೮

ವ॥ ಮತ್ತಮಲ್ಲದೆಯುಂ,

ಮ॥ಸ್ರ॥ ಹರಿಸಂ ಮಿಕ್ಕಭ್ರಮಾತಂಗಮನತಿಭರದಿಂ ನೋಡಲೆಂದೆಳ್ದುವೋ ದಿ
ಕ್ಕರಿಗಳ್ ದೇವೇಂದ್ರನೊಳ್ ಕಾದುವ ಕಡುಮುಳಿಸಿಂದೇಳ್ದುವೋ ಗೋತ್ರಶೈಲೋ ।
ತ್ಕರಮೀಶಂಗಂ ಹಿರಣ್ಯಾಕ್ಷನಿನೊಗೆದ ಮನೋದುಃಖಮಂ ದೂಱಲೆಂದಾ
ತುರದಿಂದೆಳ್ದತ್ತೋ ಧಾತ್ರೀತಳಮೆನೆ ನಭದೊಳ್ ತೀವಿತಭ್ರಪ್ರತಾನಂ ॥ ೩೯

ವ॥ ಆ ಸಮಯದೊಳ್

ಕಂ॥ ತವೆ ಬೆಳೆದು ಪರ್ಬುತಾಕಾ
ಶವನೇಱಿದ ಮುಗಿಲನೀರ ನೆಱಿಯಂ ಮಿಗೆ ದು ।
ಶ್ಶ್ರವನಂ ಬಿಡಿಸುವ ಘನ ಶ
ಸ್ತ್ರವಣಂ ಹೊಳೆವಂತೆ ಮಿಂಚು ಮಿಂಚತ್ತಾಗಳ್ ॥ ೪೦

ಬಂದವು. ೩೭. ನವಿಲುಗಳು ಹರ್ಷದಿಂದ ಆಡುತ್ತಿವೆ, ಚಾತಕಗಳು ನಲಿಯುತ್ತಿವೆ; ನಾಲ್ಕು ನಿಟ್ಟಿನಲ್ಲಿ ಕಾರ್ ಮೋಡಗಳು ಕರಿಯಂತೆ, ಗಿರಿಯಂತೆ, ಧರೆಯಂತೆ ಕವಿದು ಬರುತ್ತಿವೆ. ೩೮. ಆ ಕಾರ್ಮೊಗದಲ್ಲಿ ನವಿಲು, ಚಾತಕ, ದುಂಬಿ ಮತ್ತು ಹಂಸಗಳು ಮೋಡಗಳನ್ನು ಬಗೆಬಗೆಯ ಅನುನಯದಿಂದ ಕರೆದವು, ಅವುಗಳಲ್ಲಿ ನವಿಲುಗಳು ಮುಗಿಲುಗಳನ್ನು ಕರೆದವು, ಚಾತಕಗಳು ನೆರೆದುವು, ದುಂಬಿಗಳು ಮೊರೆದವು, ಹಂಸಗಳು ಚದುರಿ ಹೋದವು ಹಾಗೂ ತೊರೆದವು. ೩೯. ಗಗನದಲ್ಲಿ ಮೋಡಗಳು ಒತ್ತರಿಸಿ ನೆರೆದುದನ್ನು ನೋಡಿದರೆ ದಿಗ್ಗಜಗಳು ಅಭ್ರಗಜವನ್ನು ನೋಡುವುದಕ್ಕಾಗಿ ಅತಿಭರದಿಂದ ಎದ್ದವೋ, ಇಲ್ಲವೆ ಗೋತ್ರಶೈಲಗಳು ತಮ್ಮ ಪಕ್ಷಗಳನ್ನು ಕತ್ತರಿಸಿದ ದೇವೇಂದ್ರನೊಡನೆ ಕಡುಗೋಪದಿಂದ ಕಾದುವುದಕ್ಕಾಗಿ ಹೊರಟಿವೆಯೋ, ಅಥವಾ ಭೂದೇವಿಯು ಹಿರಣ್ಯಾಕ್ಷನಿಂದ ತನಗೆ ಒದಗಿದ ದುಃಖವನ್ನು ಈಶ್ವರನಿಗೆ ದೂರು ಹೇಳಲು ಹೊರಟಿದ್ದಾಳೆಯೋ ಎಂಬಂತೆ ಮೇಘಗಳು ಒಗ್ಗೂಡಿದವು. ೪೦. ಚೆನ್ನಾಗಿ ಬೆಳೆದು ಹಬ್ಬಿ ಗಗನವನ್ನು ಏರಿದ ಮುಗಿಲಿನ ನೀರ ಪ್ರವಾಹವನ್ನು ಇಂದ್ರನು ಬಿಡಿಸಲು ಪ್ರಯೋಗಿಸಿದ ಘನಶಸ್ತ್ರಗಳು ಹೊಳೆಯುತ್ತಿವೆಯೋ ಎಂಬಂತೆ ಮಿಂಚು ಹೊಳೆಯಿತು,

ಘುಳು ಘುಳು ಘಳ ಘಳ ಘುಡು ಘುಡು
ಘುಳು ಘಿಟಿ ಘಿಟಿ ಘಾರ್ಘುಳಂ ದಢಂ ಧಾಂಧಡಂ ಘಿಂ ।
ಘಿಳಿ ಘಿಳಿ ಭಂಭಂ ಘಡ ಘಡ
ಘಳ ಘಡ ಘಡಿಲೆಂದು ಮೊಳಗು ಮೊಳಗಿತು ನಭದೊಳ್ ॥ ೪೧

ಕಂ॥ ಆ ಮಿಂಚಿನ ಮೊಳಗಿನೊಳು
ದ್ದಾಮಾಂಬುದ ನಿಕರದಿಂದೆ ರಸೆದೆಸೆ ಗಗನಂ ।
ತಾಮಜೆಯಲ್ ಬಾರದವೋ
ಲೇಮಾತೋ ಕಱಿದುದಿಳೆಯ ಹರ್ಷಂ ವರ್ಷಂ ॥ ೪೨

ವ॥ ಮತ್ತಮಲ್ಲದೆಯುಂ,

ಕಂ॥ ಮಿಗೆ ಕಾರರಸಂ ಪಗೆವೇ
ಸಗೆಯಂ ಸುರಧನುವಿನಿಂದೆ ಮುಗಿಲಂಬುಗಳಿಂ ।
ತೆಗೆದಸೆ ಬಹುವಿಧ ಶರವವ
ನಿಗೆ ಬಿಳ್ಚಂತಿರ್ದುವಂಬುಧಾರಾನೀಕಂ ॥ ೪೩

ಬೆಂಗೊಟ್ಟೋಡುವ ಬೇಸಗೆ
ಯಂ ಗರ್ಜಿಸುವಬ್ದಸಮಯ ನೃಪಘನಮದಮಾ ।
ತಂಗ ಕುಲದಾನಧಾರಾ
ಭಂಗಿಯನೊಡರಿಸಿತು ಕಟ್ಪಕಱಿವಾಸಾರಂ ॥ ೪೪

ಗಗನದಿನೆಱಗಿದ ಮಳೆನೀ
ನಗಲದೆ ಸಲಪೆಂದು ವರ್ಷನರಪಂಗಿಳೆಯಂ ।
ಮುಗಿಲಗಲದ ಹಸ್ತದಿನಾ
ಗಗನಾಂಗನೆ ಧಾರೆಯೆಱಿದ ತೆಱನಾಯ್ತಾಗಳ್ ॥ ೪೫

೪೧. ಆಕಾಶದಲ್ಲಿ ಕಾರ್ಮೋಡಗಳು ಕವಿದು ಗುಡುಗು, ಮಿಂಚು, ಸಿಡಿಲುಗಳ ಬಗೆ ಬಗೆಯ ಶಬ್ದವು ಮೊಳಗಿತು. ೪೨. ಅಂತಹ ಮಿಂಚು ಮೊಳಗುಗಳಲ್ಲಿ ಉದ್ದಾಮವಾದ ಆ ಮುಗಿಲುಗಳಿಂದ ನೆಲ ದಿಕ್ಕು ಗಗನಗಳು ತಿಳಿಯದೆಂಬಂತೆ ಇಳೆಗೆ ಹರ್ಷದಾಯಕವಾದ ವರ್ಷ ಸುರಿಯಿತು! ೪೩. ಮುಂಗಾರು ಎಂಬ ಅರಸನು ತನಗೆ ಹಗೆಯಾದ ಬೇಸಗೆಯನ್ನು ಕಾಮನ ಬಿಲ್ಲಿನಲ್ಲಿ ಮುಗಿಲು ಎಂಬ ಅಂಬುಗಳನ್ನು ಹೂಡಿ ಇಸೆ (ಎಸೆ) ಯುತ್ತಿರುವನೋ ಎಂಬಂತೆ ಬಹು ವಿಧವಾದ ಶರ- (ಬಾಣ, ನೀರು)ವು ಅವನಿಗೆ (ನೆಲಕ್ಕೆ) ಬೀಳ್ವಂತೆ ಅಂಬು(ನೀರು-ಬಾಣ)ಧಾರೆಗಳು ಸುರಿದವು. ೪೪. ಸುರಿಯುತ್ತಿರುವ ಆ ಮಳೆಯ ರೀತಿಯು ಬೆನ್ನುಕೊಟ್ಟು ಓಡುತ್ತಿರುವ ಬೇಸಗೆಯನ್ನು ಅಟ್ಟಿಕೊಂಡು ಬರುತ್ತಿರುವ ಮಳೆಗಾಲವೆಂಬ ರಾಜನ ಮೇಘಗಳೆಂಬ ಮದ್ದಾನೆಗಳ ಮದೋದಕ ಧಾರಾಸಾರ (ಧಾರೆಗಳ ವರ್ಷ)ವೋ ಎಂಬಂತಿತ್ತು! ೪೫. ಗಗನದಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯನ್ನು ನೋಡಿದರೆ ಗಗನವೆಂಬ ಅಂಗನೆಯು

ಕಂ॥ ಘನಸಮಯ ನೃಪಾಲಕತನೊಳ್
ಘನಪಾಣಿಗ್ರಹಣಮಾದ ಭೂವನಿತೆಗೆ ಮು ।
ತ್ತಿನ ಸೇಸೆಗಳಂ ಗಗನಾಂ
ಗನೆ ಸೂಸಿದಳೆನೆ ಬಳ್ವಪಾಲಿವರಲ್ಗಳ್ ॥ ೪೬

ವ॥ ಅಂತು ಬರ್ಪ ಕಾರ ಮಳೆಯಂ ಕಂಡು ಮನಂಗೊಂಡು,

ಚಂ॥ ಶುಕನಿಕರಂಗಳುಗ್ಗಡಿಸೆ ಕೋಕಿಳನಾದದ ತಾಳಮುಣ್ಮೆ ಸೌ
ಖ್ಯಕರ ಕದಂಬ ಪುಷ್ಪರಸದಿಂ ತಣಿದೊಯ್ಯನೆ ಪಾಡೆ ಪಟ್ಟದಂ ।
ವಿಕಸಿತ ಪಕ್ಷನೂರ್ಧ್ವಗಳನುನ್ಮುಖನುಚ್ಚಳಿತಸ್ವನಂ ಬಳಾ
ಹಕನಿನದಕ್ಕೆ ಪೆಕ್ಕಣಮನಾಡಿದುದೊಂದು ಮಯೂರನಳ್ತಿಯಿಂ ॥ ೪೭

ವ॥ ಮತ್ತಮನಂತರದಲ್ಲಿ,

ಚಂ॥ ನೆಗೆದುದು ಸಾರ್ದು ಪೊರ್ದಿತಮರಿತ್ತು ತುಳುಂಕಿತು ಬೆಂಗೆ ನೀರ ಧಾ
ರೆಗಳುಱಿ ನಾಂಟಲೀಂಟದುದು ನೇಹದೆ ನೋಡಿತುದಂಚಚಂಚುವಿಂ ।
ದುಗಿದುದು ಪಕ್ಕದಿಂ ಪೊಡೆದುದಂಘ್ರಿಗಳಿಂದೊದೆದತ್ತು ನೆತ್ತಿಯಿಂ
ನೆಗೆಪಿದುದಪ್ಪಿತಲ್ಗರಿದಂದಂಬುಕಣಂಗಳನೊಂದು ಚಾತಕಂ ॥ ೪೮

ವ॥ ಇತು ಶಿಖಿಪ್ರಕರಮುಂ ಚಾತಕಕುಲಮುಂ ನಲಿಯುತ್ತುಮಿರೆಯಿರೆ,

ವರ್ಷಋತುವೆಂಬ ಅರಸನಿಗೆ ನೀನು ಅಗಲದೆ ಸಲಹು ಎಂದು ಹೇಳಿ ಮುಗಿಲು ಎಂಬ ಹಸ್ತದಲ್ಲಿ ಇಳೆಯನ್ನು ಧಾರೆ ಎರೆದು ಕೊಟ್ಟಂತೆ ಇತ್ತು. ೪೬. ಆ ಬಿರುಮಳೆಯಲ್ಲಿ ಆಲಿಕಲ್ಲುಗಳು ಬೀಳಲಾರಂಭಿಸಿದವು; ಅದನ್ನು ನೋಡಿದರೆ ವರ್ಷಾಸಮಯವೆಂಬ ರಾಜನೊಡನೆ ಘನಪಾಣಿಗ್ರಹಣವಾದ ಭೂವನಿತೆಗೆ ಗಗನಾಂಗನೆಯು ಮುತ್ತಿನ ಸೇಸೆಯಿಟ್ಟಳೋ ಎಂಬಂತೆ ಇತ್ತು. ೪೭. ಅಲ್ಲಿ ಒಂದು ನವಿಲು 'ಪಕ್ಕಣ'ವೆಂಬ ಒಂದು ನೃತ್ಯಭಂಗಿಯಲ್ಲಿ ನರ್ತಿಸತೊಡಗಿತ್ತು. ಆ ನರ್ತನಕ್ಕೆ ಪಕ್ಕ ವಾದ್ಯಗಳ ಸಿದ್ಧತೆಯೂ ಇತ್ತು. ಗಿಳಿಗಳ ಘೋಷಣೆ, ಕೋಗಿಲೆನಾದದ ತಾಳ, ಸುಖಕರವಾದ ಕದಂಬ ಪುಷ್ಪರಸದಿಂದ ತಣಿದ ದುಂಬಿಗಳ ಹಾಡುಗಾರಿಕೆ, ರೆಕ್ಕೆಗಳನ್ನು ಅರಳಿಸಿ, ಕುತ್ತಿಗೆಯನ್ನು ಮೇಲೆತ್ತಿ ಉನ್ಮುಖಿವಾಗಿ ಕೂಗುತ್ತಾ ಮೇಘನಿನದಕ್ಕೆ ಸರಿಯಾಗಿ ಅಳ್ತಿಯಿಂದ ನರ್ತಿಸ ತೊಡಗಿತು. ೪೮. ಅಲ್ಲಿ ಒಂದು ಚಾತಕ ಪಕ್ಷಿ; ಅದು ಮಳೆನೀರಿಗಾಗಿಯೇ ಕಾಯ್ದಿತ್ತು. ಮಳೆ ಬಂದೊಡನೆಯೇ ನೆಗೆಯಿತು, ಸಾರ್ದು ಪೊರ್ದಿತು, ಅಮರಿತು, ತುಳುಂಕಿತು, ಬೆನ್ನಿಗೆ ನೀರ ಧಾರೆಗಳು ಬೀಳುತ್ತಿರಲು ಅದನ್ನು ಹೀರಿತು, ಪ್ರೇಮದಿಂದ ನೋಡಿತು, ಸ್ವಚ್ಛವಾದ ಕೊಕ್ಕಿನಿಂದ ಜಗ್ಗಿತು, ರೆಕ್ಕೆಗಳಿಂದ ಹೊಡೆಯಿತು, ಕಾಲುಗಳಿಂದ ಒದೆಯಿತು, ನೆತ್ತಿಯಿಂದ ನೆಗೆದು ಅಪ್ಪಿತು, ನೀರ ಕಣಗಳನ್ನು ಕುಡಿಯಿತು. ವ॥ ಹೀಗೆ ನವಿಲು ಮತ್ತು ಚಾತಕಗಳು ನಲಿಯುತ್ತಿರುವಾಗ-

ಕಂ॥ ಧಾರೆಗಳವನಿಯನೊಳಪೊ
ಕ್ಕೋರಂತುಚ್ಚಳಿಸಿ ಮೀಱುತಿರೆ ನಭದಿಂ ಭೋರ್
ಭೋರೆಂದಿರುಳುಂ ಪಗಲುಂ
ಜೀರೆನುತುಂ ತೆಱಪುಗುಡದೆ ಕಱಿದುವು ಮಳೆಗಳ್ ॥ ೪೯

ಒತ್ತರಿಸುತ್ತುಂಬರಮಂ
ಮುತ್ತುತ್ತುಂ ದಿಗ್ವಿತಾನಮಂ ಧರೆಯೊಳ್ ತೀ ।
ವುತ್ತುಂ ಕತ್ತಲಿಸುತ್ತುಂ
ಸುತ್ತುಂ ಜನುಗಿದುವು ಸೋನೆ ಇರುಳುಂ ಪಗಲುಂ ॥ ೫೦

ವ॥ ಅಂತುಮಲ್ಲದೆ,

ಕಂ॥ ಸರಿಗಳ ನೆರೆದೋಂಟುಂ ಬಲ್
ಸರಿಗಳ ಭರಿತಂ ಸರಿಗಳ ಕಲ್ಲೋಲ ಕುಲಂ ।
ಸರಿಗಳ ಘೂರ್ಣಿತದಿಂದಂ
ಶರನಿಧಿ ಕವಿದಂತೆ ಕಱಿದುದಿಳೆಯೊಳ್ ವರ್ಷಂ ॥ ೫೧

ಮೇಘಂಗಳ್ ಪರಿಗತವಿನಿ
ದಾಘಂಗಳ್ ಕಮಲವಿಮಳ ಜೀವನಭರಿತಾ ।
ಮೋಘಂಗಳ್ ಶಿಖಿನಿಕರ
ಶ್ಲಾಘಂಗಳ್ ಕಱಿದುವತುಳ ಶೀತಳಜಳಮಂ ॥ ೫೨

ನೋಡುತ್ತಿರೆ ಸಕಳಜನಂ
ಕೂಡುತ್ತಿರೆ ಚಾತಕಂಗಳಿಳೆ ಜಳದೊಳ್ ತೇಂ ।
ಕಾಡುತ್ತಿರೆ ಶಿಖಿಕುಲಮೆ
ಳ್ದಾಡುತ್ತಿರೆ ತುಱುಗಿ ಕಱಿದು ಮೆಱಿದುದು ಮೇಘಂ ॥ ೫೩

೪೯. ಮಳೆಯ ಧಾರೆಗಳು ಭೂಮಿಯ ಒಳಹೊಕ್ಕು ಕ್ರಮವಾಗಿ ಚಿಮ್ಮಿ ಬರುವಂತೆ, ಗಗನದಿಂದ ಹಗಲೂ ಇರುಳೂ ಭೋರೆಂದು ಬಿಡುವು ಕೊಡದೆ ಮಳೆಗಳು ಸುರಿಯುತ್ತಿದ್ದವು. ೫೦. ಅಂಬರವನ್ನು ಒತ್ತರಿಸುತ್ತಾ, ದಿಕ್ಕುಗಳನ್ನು ಮುತ್ತುತ್ತಾ, ಧರೆಯಲ್ಲಿ ವ್ಯಾಪಿಸಿ ಕತ್ತಲನ್ನು ಒಡ್ಡುತ್ತಾ, ಸೋನೆಮಳೆ ಇರುಳೂ ಹಗಲೂ ಜಿನುಗಿದವು. ೫೧. ಇಳೆಯಲ್ಲಿ ಶರನಿಧಿ(ಸಮುದ್ರ)ಯೇ ಕವಿದಂತೆ ವರ್ಷ ಕರೆಯಿತು. ಆಗ ಸರಿಗಳ ನೆರೆಯೇ ತೋಟ, ಬಲು ಸರಿ (ಪ್ರವಾಸ)ಗಳು ತುಂಬಿ ಹರಿದವು, ಸರಿಗಳ ತೆರೆಗಳ ಸಮೂಹ ಸರಿಗಳಲ್ಲಿನ ಸುಳಿಗಳಿಂದ ಕಡಲೇ ಕವಿಯಿತೋ ಎಂಬಂತೆ ಇತ್ತು. ೫೨. ಬೇಸಗೆಯನ್ನು ಹಿಂದಿಕ್ಕಿದ ಮೇಘಗಳು, ನವಿಲುಗಳ ಶ್ಲಾಘನೆಗೆ ಪಾತ್ರವಾದ ಮೇಘಗಳು ಅತುಲ ಶೀತಲಜಲವನ್ನು ಕರೆದವು. ೫೩, ಎಲ್ಲ ಜನರೂ ನೋಡುತ್ತಿರುವಂತೆ ಚಾತಕಗಳು ಕೂಡುತ್ತಿರಲು, ನೆಲವು ಜಲದಲ್ಲಿ ತೇಂಕಾಡುತ್ತಿರಲು ನವಿಲುಗಳು ಎದ್ದು ಕುಣಿಯುತ್ತಿರಲು ಮೇಘಗಳು ದಟ್ಟವಾಗಿ ಕವಿದು ಮಳೆಗರೆದವು.

ವೃಷ್ಟಿಗಳವು ಶಿಖಿಚಾತಕ
ತುಷ್ಟಿಗಳವು ಘನತಟಾಕ ವಿಮಳನದೀಸಂ ।
ಪುಷ್ಟಿಗಳವು ಜೀವರ್ಕಳ
ದೃಷ್ಟಿಗಳವು ಬಿಡದೆ ಕಱಿದುವವನೀತಳದೊಳ್ ॥ ೫೪

ವ॥ ಮತ್ತಮಲ್ಲಿ,

ಗಗನಂ ಕೆಟ್ಟುದು ಚಂದ್ರ ಸೂರ್ಯರಳಿದರ್ ದಿಕ್ಚಕ್ರಮಿಲ್ಲಾಯ್ತುಬ
ಟ್ಟೆಗಳಸ್ಪಷ್ಟಮವಾದುವಾತ್ತ ಜಳದೊಳ್ ಪುಳ್ದತ್ತು ಧಾತ್ರೀತಳಂ ।
ಖಗಸಂಚಾರತೆ ಶೂನ್ಯಮಾದುದು ನಿರುದ್ಯೋಗಕ್ಕೆ ಪಕ್ಕಾದುದೀ
ಜಗಮೆಂದೆಂಬನಮೆಯ್ದೆ ಕಟ್ಟ ಕಱಿದತ್ತಾಸಾರಮೀ ಲೋಕದೊಳ್ ॥ ೫೫

ಕಂ॥ ಸುರಿದುದು ಮಳೆ ತಣಿಯುತ್ತಿಳೆ
ನೆರೆದುದು ಬೆಳೆ ಕಾನನಂಗಳೊಳ್ ನೆಱೆ ವಿಸಟಂ ।
ಬರಿದುವು ಹೊಳೆ ನಾಂದುವು ಶಿಳೆ
ಧರಣಿಗೆ ಮೆಳೆಪಿಡಿದ ತಳೆಗಳಾದುವು ಮಳೆಗಳ್ ॥ ೫೬

ವ॥ ಇಂತಪ್ಪ ಮಳೆಗಳೊಳಗೆ ;

ಕಂ॥ ಮಳೆ ಮಾಣ್ದೊಡೆ ಹನಿ ಮಾಣದ
ದಳಫಳಯುತ ವಿಟಪಭರಿತ ವಿಟಪಿಯ ತ ।
ಣ್ಣೆಳಲಲ್ಲಿಂ ತಳರದೆ ಕೋ
ಮಳೆ ಮಳೆಯೊಳಗಜೆ ನಲಿದು ಸಲೆ ನಿಂದಿರ್ದಳ್ ॥ ೫೭

ವ॥ ಆ ಸಮಯದೊಳ್,

೫೪. ಆಗ ಸುರಿದ ವೃಷ್ಟಿಗಳು ಶಿಖಿ (ನವಿಲು) ಮತ್ತು ಚಾತಕಗಳಿಗೆ ತುಷ್ಟಿಕರವಾದವು, ಘನವಾದ ಕೆರೆ, ನದಿಗಳಿಗೆ ಪುಷ್ಟಿಕರಗಳು, ಜೀವರ ದೃಷ್ಟಿಗಳೋ ಎಂಬಂತೆ ಮೇಘಗಳು ಮಳೆಗರೆದವು. ೫೫. ಆ ಜಡಿಮಳೆ ಹಿಡಿದಿದ್ದುದನ್ನು ನೋಡಿದರೆ ಅದರಿಂದ ಗಗನವು ಕೆಟ್ಟುಹೋದಂತಾಗಿತ್ತು, ಚಂದ್ರಸೂರ್ಯರ ದರ್ಶನವೇ ಇಲ್ಲದಂತಾಗಿತ್ತು, ದಿಕ್ಕೂ ಕಾಣದಂತಾಗಿತ್ತು, ದಾರಿಗಳು ಮಸಕಾದವು, ಭೂಮಿಯು ನೀರಿನಲ್ಲಿ ಮುಳಿದಂತಾಗಿತ್ತು, ಹಕ್ಕಿಗಳ ಸಂಚಾರ ನಿಂತುಹೋಗಿತ್ತು, ಜಗತ್ತು ನಿರುದ್ಯೋಗಕ್ಕೆ ಪಕ್ಕಾಯಿತೋ ಎಂಬಂತೆ ಜಡಿಮಳೆ ಸುರಿಯುತ್ತಿತ್ತು. ೫೬. ಮಳೆ ಸುರಿಯಿತು, ಇಳೆ ತಣಿಯಿತು, ಬೆಳೆ ನೆರೆಯಿತು (ಫಲಿಸಿತು) ಕಾಡುಗಳಲ್ಲಿ ಪ್ರವಾಹ ಮುಂದುವರಿಯಿತು, ಶಿಲೆ ನೆನೆದವು, ಬಿದಿರ ಮಳೆಗಳು ಧರಣಿಗೆ ಹಿಡಿದ ಕೊಡೆಗಳಂತೆ ಆದವು. ೫೭. ಮಳೆನಿಂತರೂ ಹನಿಗಳು ನಿಲ್ಲವೆಂಬಂತೆ ಫಲಭರಿತವಾದ ಕೊಂಬೆಗಳಿಂದ ಕೂಡಿದ ಕಾಡಿನ ಮಧ್ಯದ ತಣ್ಣನೆಯ ನೆಳಲಲ್ಲಿ ಕೋಮಲಾಂಗಿ ಅಗಜೆಯು ಸ್ವಲ್ಪವೂ ಅಳುಕದೆ ನಲಿದು ನಿಂದು ತಪದಲ್ಲಿ ಸಾಗುತ್ತಿದ್ದಳು.

ಕಂ।। ಅಭವಂಗಿಳೆಯೊಳ್ ತಪಮಿ
ರ್ಪ ಭವಾನಿಗೆ ಬಂದು ಕಲ್ಪತರು ಫಳರಸದಿಂ ।
ದಭಷೇಕಂ ಮಾಡುವ ನವ
ವಿಭವದವೋಲೆಸೆದುದಾಲಮರನಾ ಮಳೆಯೊಳ್ ।। ೫೮

ವ।। ಇಂತು ನೆಗೆದು ಮುಗಿಲ್ಗಳ ಭೀಕರಾಕಾರಕ್ಕಂ ಮಿಂಚುಗಳ ಸಂಚಳತೆಗಂ ಮೊಳಗಿನ ಮಹಾಧ್ವನಿಗಳಂ ಸಿಡಿಲ ಸಡಗರಕ್ಕಂ ಬಲ್ಸುರಿಗಳ ಸಂಭ್ರಮಕ್ಕಂ ಬಿಜುಮಳೆಯ ಬಲ್ವೊಯಿಲ್ಗಂ ಪೆರ್ಮಳೆಯ ಧಾರೆಗಂ ಆಲಿಕಲ್ಲ ಕರ್ಕಶಕ್ಕಂ ಇಂದ್ರಗೋಪದ ಸಂದಣಿಗಂ ಶೀಕರದ ಶೀತಕ್ಕಂ ತುಂತುರಿ ತಿಂತಿಣಿಗಂ ಸೋನೆಗಳ ಜಿನುಂಗಿಗಂ ಬಿಜುಗಾಳಿಯ ಗಾಸಿಗಂ ಕಾಲ್ವೊನಲ ಕಡುಪಿಂಗಂ ಪೆರ್ಮೋಡದ ಕಳ್ತಲೆಗಂ ಮರುಳ ಭಯಾನಕಕ್ಕಂ ಕ್ರೂರಮ್ಯಗದ ರೌದ್ರಕ್ಕಂ ಉಗ್ರ ಸರ್ಪಂಗಳದ್ಭುತಕ್ಕಂ ಅರಣ್ಯಾದಾಭಗಳತೆಗಂಕೋಡದೆ ಕೊಂಕದೆ ಬಾಡದೆ ಬಳ್ಕದೆ ಸೀಡುಗೊಳ್ಕದೆ ಬೆಚ್ಚದೆ ಬೆದಱದೆ ಬಲಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಯಾಮಂ ಪಾಱದೆ ಮಹಾವಟವೃಕ್ಷದ ಕೆಳಗೆ ವಿಪುಳತಪದಿಂದಪರ್ಣೆಯೊಪ್ಪುತ್ತುಮಿರೆಯಿರೆ,

ಕಂ।। ಜಯವಿಜಯೆಗಳಜೆದ ಶಿವ
ಪ್ರಿಯೆಯುಗ್ರತಪಃಪ್ರಭಾವಭಾಸುರೆ ಪುಣ್ಯೋ ।
ದಯಶೀಲೆ ಶಾಂತೆ ಪಾರ್ವತಿ
ಜಯಜಯ ರಕ್ಷಿಸೆನುತುಮೆಂದಿಂತೆಂದರ್ ।। ೫೯

ಮಾಣ್ದುದು ಮಳೆ ಶರದಮಳತೆ
ಪೂಣ್ದುದು ಕಳಹಂಸಮಾಲೆ ಮೆಲ್ಲನೆ ಬಲದೊಳ್ ।
ಕಣ್ಣೆಱೆದುವು ತೊಳತೊಳಗು
ತ್ತಣ್ಣೆಸೆ ನೆರೆ ತಿಳಿದುವೀಗಳವಧಾರಗಜೇ ।। ೬೦

೫೮. ಆ ಮಳೆಯಲ್ಲಿಯೂ ಕೂಡ ಅಭವನನ್ನು ಕುರಿತು ತಪಸ್ಸು ಮಾಡುತ್ತಿರುವ ಭವಾನಿಗೆ ಕಲ್ಪತರುವಿನ ಫಲರಸದಿಂದ ಬಂದು ಅಭಿಷೇಕವನ್ನು ಮಾಡುವ ನವವೈಭವವೊ ಎಂಬಂತೆ ಆಲದಮರವು ಒಪ್ಪಿತ್ತು. ವ।। ಹೀಗೆ ಆಕಾಶದಲ್ಲಿ ಏರಿಬರುತ್ತಿರುವ ಮೋಡಗಳ ಭೀಕರತೆಗಾಗಲಿ, ಮಿಂಚುಗಳು ಝಳಪಿಸುವುದಕ್ಕಾಗಲಿ, ಗುಡುಗು ಸಿಡಿಲುಗಳ ಮಹಾಶಬ್ದಕ್ಕಾಗಲಿ, ಬಿರುಮಳೆಯ ಸಂಭ್ರಮಕ್ಕಾಗಲಿ, ಆಲಿಕಲ್ಲಳ ಕರ್ಕಶತೆಗಾಗಲಿ, ಮಿಂಚುಹುಳುಗಳ ಸಂದಣಿಗಾಗಲಿ.... ಶೀತಕ್ಕಾಗಲಿ, ತುಂತುರಿನ ಸಾಂದ್ರತೆಗಾಗಲಿ, ಸೋನೆಮಳೆಯ ಜಿನುಗುವಿಕೆಗಾಗಲಿ, ಬಿರುಗಾಳಿಯ ಹಿಂಸೆಗಾಗಲಿ, ಕಾಲುವೆನೀರಿನ.... ಹೆಮ್ಮೋಡಗಳ ಕತ್ತಲೆಗಾಗಲಿ, ಮರುಳುಬಳಗದ ಭೀಕರತೆಗಾಗಲಿ, ಕ್ರೂರಮ್ಯಗಗಳ ರುದ್ರತೆಗಾಗಲಿ, ಉಗ್ರಸರ್ಪಗಳ ಅದ್ಭುತಕ್ಕಾಗಲಿ, ಅರಣ್ಯದ ಭಯಾನಕಕ್ಕಾಗಲಿ, ಸ್ವಲ್ಪವೂ ಹೆದರದೆ, ಮನಗುಂದದೆ, ಧೃತಿಗೆಡದೆ ಆಲದ ಮರದ ಕೆಳಗೆ ಉಗ್ರತಪದಿಂದ ಇರುವ ಸಮಯದಲ್ಲಿ ೫೯. ಈ ಸ್ಥಿತಿಯನ್ನು ಕಂಡ ಸಖಿಯರು ಬಂದು "ಶಿವಪ್ರೀತಿಗಾತ್ರೆ ಉಗ್ರತಪೋಮಗ್ನೆಯಾಗಿರುವ ಪುಣ್ಯೋದಯಶೀಲೆ, ಶಾಂತೆ, ಪಾರ್ವತಿ ಜಯ, ಜಯ! ರಕ್ಷಿಸು!" ಎಂದು ಪ್ರಾರ್ಥಿಸಿದರು. ೬೦. ತಾಯಿ, ಮಳೆಗಾಲ ಮುಗಿಯಿತು; ಶರತ್ಕಾಲದ ಪ್ರಸನ್ನತೆ ಮೊದಲಿಟ್ಟಿತು; ಕಲಹಂಸಗಳು ಮೆಲ್ಲನೆಮೆಲ್ಲನೆ ಕಣ್ಣುಬಿಟ್ಟವು, ಎಂಟೂ ದಿಕ್ಕುಗಳು ಪ್ರಸನ್ನವಾಗತೊಡಗಿವೆ,

ಚಂ॥ ಜನವನುರಾಗವೇಱೆ ಪೊಱಮಟ್ಟು ಕೃಷಿವ್ಯವಸಾಯ ವ್ಯಂದಮಂ
ಮನದೊಲವಿಂದೆ ಮಾಡುತಿದೆ ಕೋಟರದಿಂ ನೆಗೆತಂದು ಪಕ್ಷಿಗಳ್ ।
ಕೊನೆದಳಿಗೊಂಬಿನೊಳ್ ಬಿಸಿಲನಾಂತಿವೆ ಹಂಸಕುಲಂ ಬಲಂಗಳಿಂ
ದನುವಿಸೆ ಕೂಡೆ ಪೊಣ್ಮುತಿವೆ ಪಾರ್ವತಿ ನೋಡ ಶರದ್ವಿಳಾಸಮಂ ॥ ೬೧

ಕಂ॥ ರವಿಕಿರಣಂ ನೀರೋಡು
ತ್ತಿವೆ ತಣ್ಪಂ ಬೀರುತಿದೆ ರಥಾಂಗಕುಲಂಗಳ್
ತವೆ ತಣ್ಬಿಸಿಲೊಳ್ ನಿಂದಿ
ರ್ದಿವೆ ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ ॥ ೬೨

ಪರೆದುವು ಪಯೋಧರಂಗಳ್
ಬರುತಿವೆ ಕಳಹಂಸಮಾಲೆ ಬಿಸಿಲೊಳ್ ವಿಹಗಂ ।
ನೆರೆದಿವೆ ಮೃಗಸಂತತಿ ಗ
ಹ್ವರದಿಂ ಪೊಱಮಟ್ಟು ಮೇಯುತಿವೆ ಮೊಳೆವುಲ್ಲಂ ॥ ೬೩

ತಿಳಿದುವು ದೆಸೆಗಳ್ ಹಂಸಾ
ವಳಿ ಸಾರ್ದುವು ಪೂರ್ಣಸರಸಿಯಂ ಬಸಕಂದಂ ।
ಮೊಳೆವೋದುವು ಸಲಿಲಂ ನಿ
ರ್ಮಳಮಾದುವು ತಳೆದುದಾಗಸಂ ಧವಳತೆಯಂ ॥ ೬೪

ವ॥ ಎಂದು ಜಯವಿಜಯೆಗಳ್ ಬಿನ್ನಪಂಗೆಯ್ದು

ಕಂ॥ ಇದುವೆ ಶರತ್ಸಮಯಂ ಮೇ
ಲೊದವುತ್ತಿರೆ ಶೀತಕಾಲಮಗಸುತೆ ಕಾಸಾ ।
ರದ ಕೆಱೆಗಳ ತೊಱೆಗಳ ಬೆ
ಟ್ಟದ ತಳ್ಪಲ ಹಿಮದೊಳೆಸೆಯೆ ಮಾಳ್ಪುದು ತಪಮಂ ॥ ೬೫

ಪ್ರವಾಹಗಳು ನಿರ್ಮಲವಾಗುತ್ತಿವೆ ಎಂದು ಬಿನ್ನೈಸಿದರು. ೬೧. ಎಲೌ ಪಾರ್ವತಿ, ಈ ಶರತ್ಕಾಲದ ವಿಲಾಸವನ್ನು ನೋಡು! ಜನರು ಅನುರಾಗದಿಂದ ತಮ್ಮ ಕೃಷಿ ವ್ಯವಸಾಯಾದಿಗಳಲ್ಲಿ ತೊಡಗಿದ್ದಾರೆ. ಹಕ್ಕಿಗಳು ತಮ್ಮ ಗೂಡುಗಳಿಂದ ಹೊರಬಂದು ಕೊನೆಗೊಂಬೆಗಳಲ್ಲಿ ಕುಳಿತು ಬಿಸಿಲು ಕಾಯಿಸಿಕೊಳ್ಳುತ್ತಿವೆ. ಹಂಸಗಳು ತಮ್ಮ ಬಿಲಗಳಿಂದ ಹೊರಹೊಮ್ಮುತ್ತಿವೆ ಎಲ್ಲವನ್ನು ನೋಡು! ೬೨. ರವಿಕಿರಣಗಳು ಶಕ್ತಿಗುಂದುತ್ತಿವೆ, ಚಕ್ರವಾಕಪಕ್ಷಿಗಳು ತಂಪನ್ನು ಬೀರುತ್ತಿವೆ. ಗಗನದಲ್ಲಿರುವ ಮೇಘಗಳನ್ನು ನೋಡಿದರೆ ಅವು ನೀರನ್ನು ಹಿಂಡಿ ಹರಡಿ ತಣ್ಬಿಸಿಲಲ್ಲಿ ಒಣ ಹಾಕಿದಂತೆ ಕಾಣುತ್ತಿವೆ! ೬೩. ಮೋಡಗಳು ಚದುರಿಹೋದವು, ಕಲಹಂಸಗಳು ಬರುತ್ತಿವೆ, ಪಕ್ಷಿಗಳು ಬಿಸಿಲಲ್ಲಿ ನೆರೆದಿವೆ. ಚಿಗರಿಗಳು ಗುಹೆಗಳಿಂದ ಹೊರಬಂದು ಮೊಳೆಹುಲ್ಲನ್ನು ಮೇಯುತ್ತಿವೆ. ೬೪. ದಿಕ್ಕುಗಳು ತಿಳಿಯಾದವು, ಹಂಸಗಳು ಪೂರ್ಣಸರಸ್ಸುಗಳನ್ನು ಸಾರ್ದವು, ತಾವರೆಗೆಡ್ಡೆಗಳು ಮೊಳಕೆ ಬಂದವು, ನೀರು ನಿರ್ಮಲವಾಯಿತು, ಆಕಾಶವು ಬಿಳುಪಾಯಿತು. ೬೫. ಇದು ಶರತ್ಕಾಲ, ಇನ್ನು ಮುಂದೆ ಶೀತಕಾಲ ಸಮೀಪಿಸುತ್ತಿದೆ. ಇನ್ನು ಸರೋವರ, ಕೆರೆ, ತೊರೆ ಬೆಟ್ಟದ ತಪ್ಪಲುಗಳಲ್ಲಿ ಹಿಮವು

ವ॥ ಎಂದು ಜಯವಿಜಯೆಗಳ್ ಬಿನ್ನಪಂಗೆಯ್ದುಚಿತವಚನಾನೀಕಮನಾಕರ್ಣಿಸಿ ಲೋಕೈಕಬಂಧು ಸಾಕಾರಸುಧೆಯೆನಿಪ ಮಹಾದೇವಿ ಮಳೆಗಾಲಂ ಮಾಣ್ದುದಂ ಮನದೊಳಱೆದು ಬಡವಾದೊಡಲಂ ಬಿಡದೋಲಗಿಪ ನಾರಸೀರೆ ನಯವೇಱೆ ಪೊಱಗಣ ಮಳೆಯಿಂ ನಾಂದ ಮೆಯ್ಯ ನೀರ ಬಣ್ಣಮಂ ತಣ್ಣೆಳಲೊಳಾಱೆಸಿ ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಗಣಂಗಳ ನುಸಿರೊಳಾಱೆಸುತ್ತುಂ ತಪೋಭ್ಯಾನೂದಯಕ್ಕೆ ಮುಖಕಮಳದಳಂ ಬೆರ್ಚುವಂತೆ ಮೆಯ್ಯ ಸಂಪುಟಂ ಬಿರ್ಚಿ ಕಣ್ದೆಱೆದು ಮುಂದಿರ್ದ ಸಹಚರಿಯರಂ ಕಂಡು,

ಕಂ॥ ಜಳಧರದೊಳಗಿಂದಂ ಶಶಿ
ಕಳೆ ಪೊಱಮಡುವಂತೆ ಪರಿದಾಲದ ಮರದಿಂ ।
ಗಳಿಲನೆ ಪೊಱಮಟ್ಟಳ್ ಕೋ
ಮಳೆಯರ್ ಕೆಯ್ಗೊಡೆ ಭವಾನಿ ಮೆಲ್ಲಡಿಯಿಡುತುಂ ॥ ೬೬

ನಡೆ ತಂದು ಮಂಜು ನೆಱೆ ಮಾ
ಣ್ದೊಡೆ ಶೀತಂ ಮಾಣದಿರ್ಪ ತಣ್ಣೆಳಲೊಳ್ ಕಂ ।
ಪಿಡಿದ ಲತಾಗೇಹಂಗಳ
ನಡುವಣ ಕಾಸಾರತಟದೊಳಂಬಿಕೆ ನಿಂದಳ್ ॥ ೬೭

ವ॥ ಅಂತು ನಿಂದಿರೆಯಿರೆ,

ಕಂ॥ ಇತ್ತಲ್ ಭೂತಳದೊಳ್ ಹಿಮ
ಮೊತ್ತರಿಸಿ ಭುವನ ಜನಮನುಱೆ ನಡುಗಿಸುತುಂ ।
ಸುತ್ತುತ್ತುಂ ಸುಗಿಯುತ್ತುಂ
ಮುತ್ತುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ ॥ ೬೮

ವ್ಯಾಪಿಸುತ್ತಿದೆ, ಇಂಥದರಲ್ಲಿಯೂ ನಿನ್ನ ತಪಸ್ಸನ್ನು ಎಸಗು. ವ॥ ಹೀಗಿ ಸಖಿಯರು ಬಿನ್ನಪವ ಮಾಡಲು, ಅದನ್ನು ಕೇಳಿದ ಲೋಕಬಂಧುವೂ ಸಾಕಾರಸುಧೆಯೂ ಆದ ಮಹಾದೇವಿಯು ಮಳೆಗಾಲವು ಕಳೆದುದನ್ನು ಅರಿತಳು, ತನ್ನ ಬಡವಾದ ಒಡಲನ್ನು ಸುತ್ತಿರುವ ನಾರಸೀರೆಯನ್ನು ಸರಿಪಡಿಸಿಕೊಂಡಳು, ಹೊರಗಿನ ಮಳೆಯಿಂದ ತೊಯ್ದ ಮೈಯನ್ನು ತಣ್ಣೆಳಲಲ್ಲಿ ಆರಿಸಿಕೊಂಡಳು, ಶಿವಧ್ಯಾನದ ಆನಂದರಸದ ಸೋನೆಯಿಂದ ಒಳಗೆ ನೆನೆದ ಕರಣಗಳನ್ನು ತನ್ನ ಬಿಸಿಉಸಿರಿನಿಂದ ಆರಿಸಿದಳು. ತಪಸ್ಸೆಂಬ ರವಿಯ ಉದಯಕ್ಕೆ ತನ್ನ ಮುಖಕಮಲವು ಅರಳುವಂತೆ ಮೈ ಲವಲವಿಕೆ ತಳೆಯಲು, ಕಣ್ಣುತೆರೆದು ಮುಂದೆ ಇದ್ದ ಸಖಿಯರನ್ನು ಕಂಡು, ೬೬. ಮೇಘದ ಒಳಗಿಂದ ಚಂದ್ರನ ಕಳೆ ಹೊರಬರುವಂತೆ ಆ ಭವಾನಿಯು ಆಲದ ಮರದ ಕೆಳಗಿನಿಂದ ಮೆಲ್ಲನೆ ಅಡಿಯಿಡುತ್ತಾ ಹೊರಬಂದಳು. ಸಖಿಯರು ಅವಳ ಕೈಹಿಡಿದಿದ್ದರು. ೬೭. ಹೀಗೆ ಮುನ್ನಡೆದು ಬಂದಳು. ಮಂಜು ಕಡಮೆಯಾದರೂ ಶೀತವಿನ್ನೂ ಕಡಮೆಯಾಗಿರಲಿಲ್ಲ, ಅಂಥ ತಣ್ಣೆಳಲಲ್ಲಿ ಸುವಾಸನೆಯ ಲತಾರೂಪವಾದ ಮನೆಗಳಲ್ಲಿ ನಡುವಿನ ಸರೋವರಗಳಲ್ಲಿ ಅಂಬಿಕೆ ತಪೋಮಗ್ನೆಯಾದಳು, ೬೮. ಇನ್ನು ಈ ಭೂಲೋಕದಲ್ಲಿ ಹಿಮವು ಒತ್ತರಿಸಿ ಬಂತು, ಅದು ಮರ್ತ್ಯಜನಗಳನ್ನು ನಡುಗಿಸುತ್ತಾ, ಸುತ್ತಿ ಸುಗಿಯುತ್ತಾ

ವ॥ ಅಂತುಮಲ್ಲದೆಯುಂ,

ಕಂ॥ ಮೃಗಸಂತತಿಯಂ ಕೊಳರ್ವ
ಕ್ಕಿಗಳಂ ಪಕ್ಕಗಳನದ್ರಿತಟದೊಳಂ ಕೊಳನೊ ।
ತ್ತುಗಳೊಳ್ ಕೋಟರದೊಳ್ ಮಿಗೆ
ಪುಗಿಸುತ್ತುಂ ಬಂದನಮಮ ಶಿಶಿರನೃಪಾಲಂ ॥ ೬೯

ವ॥ ಅಂತು ಬಂದು,

ಮ॥ ಕಿಡಿಗಳ್ ಕೆಚ್ಚನೆಯಾಲಿಕಲ್ಲುರಿಯ ಮೊತ್ತಂ ಕೆಂದಳಿರ್ ಕೆಂಡದೊಂ
ದಡಕಿಲ್ ಮಾಣಿಕದಿಂಡೆ ಕಾಯ್ದ ತಪನಂ ಚಂದ್ರಂ ಪೊದಳ್ದಾತಪಂ ।
ಗಡ ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿದಂತಿರ್ದುದಾ
ಕಡುಪಿಂ ತನ್ನಯೆ ಕಾಲದಲಿ ಹಿಮರಾಜಂ ಧಾರಿಣೀಚಕ್ರದೊಳ್ ॥ ೭೦

ವ॥ ಮತ್ತಮಲ್ಲದೆಯುಂ,

ಕಂ॥ ಮಿಗೆ ಬೆಮರಱತುದು ನೀರಡಿ
ಕೆಳಗಿಂಗಿದುವುಷ್ಣದುಸಿರಡಂಗಿತು ತಪನಂ ।
ಗೊಗೆದುದು ಪೆರ್ಚಿದ ತಣ್ಪಿ
ಗ್ಗಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್ ॥ ೭೧

ಸಲೆ ರವಿ ತೇಜಂಗುಂದುತೆ
ನಿಲಲಂಜುತ್ತೋಡಿ ಪುಗುವನದ್ರಿಯ ಮಱೆಯೊಳ್ ।
ಗೆಲೆ ಹರಿವ ಹಾವುರಿವ ಕಿ
ರ್ಚಿಲೆ ನಿಂದುವು ಶಿಶಿರನೃಪತಿಯಾಜ್ಞೆಗೆ ಜಗದೊಳ್ ॥ ೭೨

ಮುಂದುಗೆಡಿಸಿ ಮುಸುಕಿಡುವಂತೆ ಮಾಡಿತು. ೬೯. ಶಿಶಿರನೆಂಬ ರಾಜನು ಬಂದ ಸಡಗರಕ್ಕೆ ಮೃಗಗಳು ಮತ್ತು ಕೊಳದ ಹಕ್ಕಿಗಳು ಬೆಟ್ಟತಪ್ಪಲಲ್ಲಿಯೂ, ಕೊಳಗಳಲ್ಲಿಯೂ ಪೊಟರೆಗಳಲ್ಲಿಯೂ ಹೊಕ್ಕವು. ಇದು ಶಿಶಿರನೃಪಾಲನಿಗೆ ಹೆದರಿ ಮೃಗಪಕ್ಷಿಗಳು ನೀಡಿದ ಸ್ವಾಗತ! ೭೦. ಹಿಮಂತಋತುವಿನಲ್ಲಿ ಬೆಂಕಿಯ ಕಿಡಿಗಳು ಕೆಂಪು ಆಲಿಕಲ್ಲುಗಳಾಗಿಯೂ ಉರಿಯು ಕೆಂಪುಚಿಗುರಾಗಿಯೂ ಕೆಂಡಗಳು ಮಾಣಿಕ್ಯಗಳಾಗಿಯೂ ಸೂರ್ಯನು ಚಂದ್ರನೂ, ಬಿಸಿಲು-ಬೆಳ್ದಿಂಗಳೂ ಆಗುವುವು ಎಂಬಂತೆ ಹಿಮವಂತನು ತನ್ನ ಆಳ್ವಿಕೆಯಲ್ಲಿ ಧರೆಯಲ್ಲಿ ಒಂದು ಹೊಸತನವನ್ನೇ ಉಂಟುಮಾಡಿದಂತಿತ್ತು. ೭೧. ಬೆಮರು ಒಣಗಿಹೋಯಿತು, ಬಾಯಾರಿಕೆ ಇಂಗಿತು, ಉಷ್ಣವು ಉಸಿರಾಡಲಿಲ್ಲ, ಸೂರ್ಯನಿಗೆ ಶೀತ ತಟ್ಟಿತು, ಬೆಂಕಿಗೆ ಶೀತವಾಯಿತು ಎಂದರೆ ಇನ್ನು ಹೇಳುವುದೇನು? ೭೨. ಸೂರ್ಯನು ಕುಂದಿದ ತೇಜಸ್ಸುಳ್ಳವನಾಗಿ ಅಲ್ಲಿ ನಿಲ್ಲಲು ಹೆದರಿ ಓಡಿಹೋಗಿ ಬೆಟ್ಟದ ಮರೆ ಹೋಗುತ್ತಾನೆ. ಶಿಶಿರ ನೃಪತಿಯ ಆಜ್ಞೆಯ ಪ್ರಕಾರ ಹರಿವ ಹಾವು ಮತ್ತು ಉರಿವ ಬೆಂಕಿಗಳು ತಮ್ಮ ಉಗ್ರತೆಯನ್ನು ತೊರೆದವು.

ವ॥ ಮತ್ತಮಲ್ಲಿ,

ಕಂ॥ ಉದಯಂ ಶೀತೋದಯಮ
ಗ್ಗದ ಮಧ್ಯಾಹ್ನಂ ತುಷಾರಮಧ್ಯಾಹ್ನಂ ಮಿ ।
ಕ್ಕುದಯಾಸ್ತಮಯಂ ತಾನು
ಷ್ಣದಸ್ತಮಯಮೆನಿಸಿತಮಮ ಹಿಮವಿಭ್ರಮದೊಳ್ ॥ ೭೩

ಕಂ॥ ತಿಳಿವೊಡೆ ಶಶಿ ರವಿ ರವಿ ಶಶಿ
ಬೆಳಗುವ ಜೊನ್ನಂ ಬಿಸಿಲ್ ಬಿಸಿಲ್ ತಾಂ ಜೊನ್ನಂ ।
ಚಳಿ ಬಿಸುಪು ಬಿಸುಪು ಚಳಿಯೆನೆ
ಬಳೆದುದು ಹಿಮರಾಜತೇಜಮೀ ಜಗದೆಡೆಯೊಳ್ ॥ ೭೪

ವ॥ ಆ ಸಮಯದೊಳ್,

ಕಂ॥ ಪಲ್ಬಳಿಯೊಳೆ ಹುಹುಹೆಂಬಾ
ಚೆಲ್ವುಗ್ಗಡಣೆಯೊಳೆ ಹಸ್ತದಂಡಿಗೆಯೊಳ್ ತಾ ।
ನೊಲ್ವನ್ನಂ ಶಿಶಿರನಟಂ
ಸಲ್ವನ್ನಂ ಜನವನಾಡಿಸಿದನುರ್ವರೆಯೊಳ್ ॥ ೭೫

ನುಡಿಯೆ ಹುಹು ನಡೆಯ ಮಾತೇ
ಕೊಡಲೇ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತೆಂ ।
ದೊಡೆ ಹಿಮದ ಮಹಿಮೆಯಂ ಪೇ
ಳ್ವೊಡೆ ಕೇಳ್ವವನಾವನೊರ್ವನುರ್ವೀತಳದೊಳ್ ॥ ೭೬

ಉಳಿ ಶೀತಂ ಪತ್ತಿದೊಡಿರ
ಲಜೆಯದೆ ಜೀವಂ ಬಗುರ್ತು ಜಠರಾಗ್ನಿಯನೆ ।
ಳಜೆಸೆ ಹೊಗೆಯುಸಿರ ಪಥದಿಂ
ಪೊಱಮಡುವುದು ಜನದ ಮುಖದೊಳಲ್ಲದೊಡುಂಟೇ ॥ ೭೭

೭೩. ಆ ಹಿಮದ ವಿಲಾಸದ ಸಮಯದಲ್ಲಿ ಉದಯವೆಂದರೆ ಶೀತದ ಉದಯವೆ! ಮಧ್ಯಾಹ್ನವೆಂದರೆ ಹಿಮದ ಮಧ್ಯಾಹ್ನವೆ! ಇನ್ನು ಉಳಿದ ಅಸ್ತಮಯ ಎಂದರೆ ಉಷ್ಣದ ಅಸ್ತಮಯವೇ ಆಗಿತ್ತು. ೭೪. ವಿಚಾರಮಾಡಿದರೆ ಶಶಿಯೇ ರವಿ, ರವಿಯು ಶಶಿ; ಬೆಳಗುವ ಬೆಳದಿಂಗಳು ಬಿಸಿಲು, ಬಿಸಿಲೇ ಬೆಳದಿಂಗಳು, ಚಳಿಯೆಬ್ಬಿಸಿ ಬಿಸಿಯೇ ಚಳಿ ಎಂಬುವ ಮಟ್ಟಿಗೆ ಹಿಮರಾಜನ ತೇಜಸ್ಸು ಜಗತ್ತಿನಲ್ಲಿ ಬೆಳೆಯುತ್ತಿತ್ತು. ೭೫. ಶಿಶಿರನೆಂಬ ನಟನು ಚಳಿಯಿಂದ ಹಲ್ಲುಗಳನ್ನು ಬಾರಿಸುವಾಗ ಹುಟ್ಟುವ ಹು! ಹು! ಹು! ಎಂಬ ಚೆಲುವಾದ ಘೋಷಣೆಯಲ್ಲಿ ಕೈಗಳೆಂಬ ದಂಡಿಗೆಯಲ್ಲಿ ತನಗೆ ಪ್ರೀತಿಯಾಗುವವರೆಗೆ ಜನವನ್ನು ಆಡಿಸುವನು? ೭೬. ಚಳಿಗಾಲದಲ್ಲಿ ನುಡಿಯೆಲ್ಲವೂ ಹು! ಹು! ಎಂಬುದರಲ್ಲೆ ಅಡಗಿರುತ್ತದೆ. ಎಂದ ಮೇಲೆ ನಡೆಯ ಮಾತೇಕೆ? ಒಡಲೇ ಪ್ರಾಣಕ್ಕೆ ಕುಪ್ಪಸ (ಹೊದಿಕೆ) ಎಂದಮೇಲೆ ಆ ಹಿಮದ ಮಹಿಮೆಯನ್ನು ಬಣ್ಣಿಸುವುದೇನು? ೭೭. ಹೆಚ್ಚು ಶೀತಕ್ಕೆ ತಡೆಯಲಾರದೆ ಜೀವವನ್ನು ಬಿಗಿಹಿಡಿದು ಜಠರಾಗ್ನಿಯನ್ನು ಪುಟಗೊಳಿಸಿ ಹೊಗೆಯುಸಿರನ್ನು ಹೊರಗೆಡಹುವುದು ಜನರ

ವ॥ ಮತ್ತಮಲ್ಲದೆಯುಂ,

ಕಂ॥ ಈಕ್ಷಿಸಿದಳಿಳಿಸಿ ಭಸಿತದ
ರಕ್ಷೆಯನೊಸೆದಿಟ್ಟು ಮಂಜಿನಿಂ ತೂಪಿಳೆದುಂ ।
ಶಿಕ್ಷಿಸಿ ಬಲ್ಪಿಂದೂಡುತೆ
ರಕ್ಷಿಸುವಳ್ ಶೀತಮಾತೆ ಶಿಖಿಬಾಲಕನಂ ॥ ೭೮

ಒದವಿ ಧರಾತಳದೊಳ್ ತೀ
ವಿದ ಶೀತಕ್ಕಂಜಿ ಕಂಪಿಸುತ್ತುಂ ನಿಲಲಾ ।
ಱದೆ ಬಡವಾಗೆ ಕರಂ ಕಾ
ಷ್ಠದೊಳಗೆ ಪೊಕ್ಕಂ ಕೃಶಾನುವೇನುಂ ಪೇೞ್ದಂ ॥ ೭೯

ವ॥ ಮತ್ತಮಾ ಶೀತಾತಿಸಮಯದಲ್ಲಿ,

ಕಂ॥ ಮುಚ್ಚಿ ಮುಸುಂಕಿದ ಹಿಮಮಂ
ಕಿಚ್ಚಿಂದಂ ಕಳೆಯಲಾಱದಿಳೆಯ ಜನಂಗಳ್ ।
ಚೆಚ್ಚರಮೆಯ್ತಂದೊಲವಿಂ
ದಚ್ಚರಿ ವಿರಹಿಯನೆ ಕಾಯ್ದು ಕಳೆವರ್ ಚಳಿಯಂ ॥ ೮೦

ಪರಿಪೂರ್ಣತಟಾಕದ ಮೇ
ಲುರಿಯಿಲ್ಲದೆ ಧೂಮಮೊಗೆವುತಿರೆ ಮಾಗಿಯೊಳ ।
ತ್ಕುರುತರ ಗುರುತರ ತಾಪ
ಕ್ಕರಲಾಱದೆ ವಿರಹಿ ಪೊಕ್ಕು ಮುಳುಗದೆ ಮಾಣಂ ॥ ೮೧

ಕಂ॥ ಪುಟ್ಟಿತು ಚಳಿ ಬಳೆದುದು ಚಳಿ
ಕೊಟ್ಟುದು ಚಳಿ ಕೊಂಡುದೆಲ್ಲಮಂ ಚಳಿಚಳಿಯೆಂ ।
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್ ॥ ೮೨

ಮುಖದಿಂದ ತಾನೆ ಸಾಧ್ಯ! ೭೮. ಶೀತವೆಂಬ ತಾಯಿಯು ಬೆಂಕಿ ಎಂಬ ಶಿಶುವನ್ನು ರಕ್ಷಿಸಿ, ಅವನಿಗೆ ಭಸಿತದ ರಕ್ಷೆಯಿಟ್ಟು, ಮಂಜಿನಿಂದ ನಿವಾಳಿಸಿ ತೆಗೆದು, ಬಲ್ಪಿಂದ ಶಿಕ್ಷಣವಿತ್ತು ರಕ್ಷಿಸುವಳು. ೭೯. ಬೆಂಕಿಗೆ ಕೃಶಾನು ಎಂಬ ಒಂದು ಹೆಸರಿದೆ. ಹಿಮಂತಋತುವಿನಲ್ಲಿ ಆ ಹೆಸರು ಬೆಂಕಿಗೆ ಸಾರ್ಥಕವಾಯಿತು: ಎಂದರೆ ಅಗ್ನಿದೇವನು ಈ ಶೀತಕ್ಕೆ ಹೆದರಿ ನಡುಗುತ್ತಾ ನಿಲ್ಲಲಾರದೆ ಬಡವಾಗಿ (ಕೃಶವಾಗಿ) ಕಡೆಗೆ ಸೌದೆಯನ್ನು ಹೊಕ್ಕನಂತೆ. ೮೦. ಆ ಸಮಯದಲ್ಲಿ ಇಳೆಯ ಜನಗಳು ಮುಚ್ಚಿ ಮುಸುಕಿರುವ ಹಿಮದ ಶೈತ್ಯವನ್ನು ಬೆಂಕಿಯಿಂದ ಕಳೆಯಲಾರದೆ ಬೇಗ ವಿರಹಿಗಳನ್ನು ಪ್ರೇಮದಿಂದ ಕಾಯ್ದು ಚಳಿಯನ್ನು ಕಳೆದುದು ಆಶ್ಚರ್ಯ! ೮೧. ಆ ಮಾಗಿಯ ಕಾಲದಲ್ಲಿ ತುಂಬಿದ ಕೆರೆಯ ಮೇಲೆ ಉರಿಯೇ ಇಲ್ಲದೆ ಹೊಗೆಯಾಡುತ್ತಿದೆ. ಅದನ್ನು ಕಂಡ ವಿರಹಿ ತನ್ನ ಗುರುತರವಾದ ವಿರಹತಾಪಕ್ಕೆ ತಡೆಯಲಾರದೆ ಅದರಲ್ಲಿ ಮುಳುಗದೆ ಬಿಡುತ್ತಾನೆಯೆ? ೮೨. ಹಿಮಂತ ಋತುವಿನಲ್ಲಿ ಹುಟ್ಟಿದ್ದು ಬಳೆದದ್ದು, ಕೊಟ್ಟದ್ದು, ಕೊಂಡದ್ದು ಉಟ್ಟದ್ದು,

ವ।। ಎಂಬ ಕೌತುಕಮನೊಳಕೊಂಡು

ಕಂ।। ಈ ತೆಱದಿಂ ನೆಱೆ ಪರ್ಬಿದ
ಶೀತದೊಳಗಜಾತೆ ನೂತ್ನ ಸುರುಚಿರ ಸರಸೀ ।
ವ್ಯಾತಮದೆಲ್ಲಿ ಘನಾಚಳ
ನೈತಂಬಮದೆಲ್ಲಿಯಲ್ಲಿ ತಪದಿಂ ನಿಂದಳ್ ।। ೮೩

ವ।। ಇಂತು ನಿದಾಘನಿಷ್ಠುರತೆಯೊಳಂ ಮಳೆಗಾಲದ ಜಲಪ್ರಳಯದೊಳಂ ಮಾಗಿಯ ಮಹಾಶೀತಲದೊಳಂ ಭಾಳಲೋಚನನ ಭಾಮಿನಿ ಗಂಗಾಧರನ ಗರುವೆ ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಾನತಪಪ್ರಭಾವಂ ವಿರೂಪಾಕ್ಷಕರಣಂಗಳೊಳ್ ಬೆರಸಿ ಬಳೆಯೆ ಪುರಹರನೆಳ್ತು ಕೆಚ್ಚುಗಟ್ಟಿದ ಧೈರ್ಯಮನೊಡೆದು ಮೂಡಿ ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ ಪನ್ನಗಭೂಷಣನಿನ್ನಿರಲ್ ಬಾರದೆಂದು ತನ್ನೊಳ್ ಬಗೆದತಿಗಿರಿಜೆಯ ಮನಮನೊರೆದು ನೋಡುವ ಭರದಿಂ ಬಂದು ನಿಂದು,

ಕಂ।। ದಶಭುಜಮಂ ಪಂಚಾಸ್ಯಮ
ನಶೇಷಭೀಮಾಂಗವಿತತಿಯಂ ತನುವಿನೊಳಂ ।
ವಶಮಂ ಮಾಡುತಡಂಗಿಸಿ
ಪಶುಪತಿ ವಟುವೇಷದಿಂದಮೊಪ್ಪುತ್ತಿರ್ದಂ ।। ೮೪

ಕಂ।। ಗಿರಿಸುತೆಯಂ ಕಾಣ್ವನ್ನಂ
ವರಪರಮಬ್ರಹ್ಮಚರ್ಯದಿಂದಂ ತಾನಿ ।
ರ್ದಿರವಂ ತೋಱುವ ತೆಱದಿಂ
ಗಿರಿಶಂ ವಟುವೇಷಮಂ ವಿರಾಜಿಸೆ ತಳೆದಂ ।। ೮೫

ತೊಟ್ಟಿದ್ದು, ಮೆಟ್ಟಿದ್ದು ಹಾಗೂ ಮುಟ್ಟಿದ್ದು ಎಲ್ಲ ಚಳಿಯೇ ಆಗಿತ್ತು. ೮೩. ಹೀಗೆ ಎಲ್ಲಿಯೂ ಹಬ್ಬಿದ ಶೀತಕಾಲದಲ್ಲಿ ಅಗಜೆಯು ಸರೋವರ, ಬೆಟ್ಟದ ತಪ್ಪಲು ಮುಂತಾದ ಕಡೆ ತಪಸ್ಸು ಮಾಡಿದಳು. ವ।। ಹೀಗೆ ನಿಷ್ಠುರವಾದ ಬೇಸಗೆಯಲ್ಲಿಯೂ ಮಳೆಗಾಲದ ಜಲಪ್ರಳಯದಲ್ಲಿಯೂ ಮಾಗಿಯ ಮಹಾಶೀತದಲ್ಲಿಯೂ ಮುಕ್ಕಣ್ಣನ ಭಾಮಿನಿಯಾದ ಪಾರ್ವತಿಯು ಮಾಡುತ್ತಿದ್ದ ಅನುಪಮವಾದ ತಪಃಪ್ರಭಾವವು ವಿರೂಪಾಕ್ಷನ ಕರಣಗಳಲ್ಲಿ ಬೆರೆದು ಬೆಳೆಯಿತು. ಇದರಿಂದ ಪುರಹರನಿಗೆ ಎಚ್ಚರವಾಯಿತು. ಆಗ ಆತನ ಕೆಚ್ಚುಗಟ್ಟಿದ ಧೈರ್ಯವು ಒಡೆಯಿತು. ಕಾರುಣ್ಯ ಮೂಡಿತು. ಕೂಡಲೆ ಪನ್ನಗಭೂಷಣನು ಇನ್ನಿರಬಾರದೆಂದು ತನ್ನಲ್ಲಿ ಯೋಚಿಸಿ ಗಿರಿಜೆಯ ಮನಸ್ಸನ್ನು ಪರೀಕ್ಷಿಸಬೇಕೆಂದು ಬಯಸಿ ಬಂದು ನಿಂತನು. ೮೪. ಪರಶಿವನು ತನ್ನ ದಶಭುಜ, ಪಂಚಮುಖ, ಎಲ್ಲ ಭೀಮಾಂಗಗಳನ್ನು ತನ್ನಲ್ಲಿ ಅಡಗಿಸಿ ನಟವೇಷ ಧರಿಸಿ ಬೆಳಗುತ್ತಿದ್ದಾನೆ. ೮೫. ಗಿರಿಸುತೆಯನ್ನು ಕಾಣುವವರೆಗೂ ಕಡು ಬ್ರಹ್ಮಚರ್ಯೆಯಿಂದ ತಾನು ಇದ್ದೆನು ಎಂಬುದನ್ನು ತೋರುವುದಕ್ಕೋ ಎಂಬಂತೆ ಗಿರಿಶನು ವಟುವೇಷವನ್ನೇ

ವ॥ ಅಂತು ತಳೆದು,

ಮ॥ ಮಿಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಪುದ್ಯಾನದ
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಲಂ ದೇಹದ ।
ಲ್ಲಿಗೆ ಮೇಘಂ ಶಿಖಿಯಲ್ಲಿಗೊಪ್ಪುವ ಮರಾಳಂ ಪೂರ್ಣಕಾಸಾರದ
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ ॥ ೮೬

ವ॥ ಇಂತು ಭೂಲೋಕಕ್ಕಿಳಿತಂದು ಹೇಮಕೂಟದೊಳ್ ಹೈಮವತಿಯಿರ್ಪ ತಪೋವನಮಂ ಪುಗುತರ್ಪಾಗಳ್,

ಚಂ॥ ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ
ಕುರಿಸಿತು ಮಾವು ಪಲ್ಲವಿಸಿತಲ್ಲಿಯಶೋಕೆ ವಸಂತದೂತಿಯೊ ।
ಪ್ಪಿರೆ ನೆಱೆ ಪೂತುದನ್ನಭೃತನುನ್ನತಿಯಿಂ ಕರೆದತ್ತು ಮಲ್ಲಿಕಾ
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಲಂ ॥ ೮೭

ವ॥ ಅಂತು ತೀಡೆ

ಕಂ॥ ಜಯೆ ವಿಜಯೆಗಳಿಗಿದು ಪೊಸತತಿ
ಶಯವೀ ಶಿಶಿರದೊಳದೇಂ ಭವಾನಿ ವಸಂತೋ ।
ದಯಸೂಚನೆಯಾದುದು ನಿ
ಮ್ಮಯೆ ಪುಣ್ಯತಪಃಪ್ರಭಾವ ಕಾರಣಮಲ್ತೇ ॥ ೮೮

ಚಂ॥ ಎನುತಿರೆ ಬಂದು ಭಾವಿಸಿ ತಪೋವನಮಂ ಶಶಿಮೌಳಿ ಪೊಕ್ಕು ಮೆ
ಲ್ಲನೆ ಬರುತುಂ ಪಥಶ್ರಮವನಾಂತು ಬಳಲ್ವವೊಲಾಗಿ ತೇಂಕುತುಂ ।
ಮನದೊಳನೂನಸಂಪದಮನೆಯ್ದುತುಮೀಕ್ಷಿಸುತಿರ್ಕೆಲಂಗಳಂ
ಘನಮಹಿಮಂ ಸ್ವತಂತ್ರವಿಭು ಪೊರ್ದಿದನೊಂದು ವಿನೂತ್ನಚೂತಮಂ ॥ ೮೯

ಧರಿಸಿದನು, ೮೬. ಚಂದ್ರ ಚಕೋರಿಯ ಹತ್ತಿರಕ್ಕೆ ವಸಂತನು ಉದ್ಯಾನವಿದ್ದಲ್ಲಿಗೆ, ರವಿ ತಾವರೆಯ ಸಮೀಪಕ್ಕೆ ಪ್ರಾಣವಾಯುವು ದೇಹದೊಳಕ್ಕೆ ಮೇಘವು ನವಿಲಿನೆಡೆಗೆ ಬರುವಂತೆ ಜಗದೊಡೆಯನಾದ ಅಭವನು ಭವಾನಿಯ ಹತ್ತಿರಕ್ಕೆ ಬಂದನು. ವ॥ ಹೀಗೆ ಪರಶಿವನು ಭುವಿಗಿಳಿದು ಹೇಮಕೂಟದಲ್ಲಿ ಗಿರಿಜೆ ತಪವಿರ್ದ ವನಕ್ಕೆ ಬಂದಾಗ ೮೭. ಆಗ ವಸಂತಋತುವಲ್ಲ; ಆದರೂ ಶಿವನೇ ಬಂದ ನಿಮಿತ್ತದಿಂದ ಪ್ರಕೃತಿಗೆ ಆನಂದವಾಯಿತು. ಅದರ ಫಲವಾಗಿ ಮಾವು ಚಿಗುರಿತು, ಅಶೋಕೆ ಪಲ್ಲವಿಸಿತು. ವಸಂತದೂತಿ ಪೂತು (ಹೂಬಿಟ್ಟು) ಒಪ್ಪಿತ್ತು, ಕೋಗಿಲೆ ಉನ್ನತಿಗೆ ಬಂತು, ದಕ್ಷಿಣಾನಿಲವು ಮಲ್ಲಿಕಾಪರಿಮಳಭಾರದಿಂದ ಮೆಲ್ಲನೆ ತೀಡಿತು. ೮೮. ಜಯೆವಿಜಯೆಗಳಿಗೆ ಇದು ಹೊಸದೆನಿಸಿತು. ಶಿಶಿರದಲ್ಲಿ ವಸಂತೋದಯವಾದ ವಿಚಿತ್ರವನ್ನು ಅವರು ಭವಾನಿಗೆ ಅರುಹಿದರು. ಅದಕ್ಕೆ ನಿಮ್ಮ ತಪಃಪ್ರಭಾವವೇ ಕಾರಣ! ಎಂದು ತಿಳಿಸಿದರು. ೮೯. ಹೀಗೆನ್ನುತ್ತಿರುವಾಗ ವಟುರೂಪಿನ ಶಶಿಮೌಳಿ ತಪೋವನವನ್ನು ಹೊಕ್ಕನು. ಆತ ಮೆಲ್ಲನೆ ಬರುತ್ತಾ ದಾರಿ ನಡೆದು ಆಯಾಸಗೊಂಡವನಂತೆ ನಟಿಸಿ ಏದುತ್ತಿದ್ದನು; ಮನಸ್ಸಿನಲ್ಲಿ ಪಾರ್ವತಿಯ ಕಠಿನತಪಸ್ಸಿನ ನಿಷ್ಠೆಗಾಗಿ ಆನಂದ!

ವ॥ ಇಂತು ಪೊರ್ದಿ ಕಪಟವಟುವೇಷಮಂ ತಳೆದ ಕಪರ್ದಿ ಪಾರ್ವತೀದೇವಿಯರ್ ತಪದೊಳಿರ್ಪ ಸೀಮಾಸಮೀಪದ ವಿಶಾಲ ಬಾಲಚೂತ ಶೀತಳಚ್ಛಾಯೆಯೊಳ್ ಕುಳ್ಳಿರೆ ಸಹಚರಿಯರಪ್ಪ ಜಯೆವಿಜಯೆಗಳ್ ಕಂಡು,

ಕಂ॥ ತರಳನಪೂರ್ವಿಗನತಿಥಿ
ಸ್ವರೂಪನೀಷದ್ ವಿಭೂತಿಲಸಿತಲಲಾಟಂ ।
ವರವಿಪ್ರನೆನುತೆ ಬಂದಾ
ದರಿಸಿದರೊಲವಿಂದೆ ಚರಣತಳಮಂ ತೊಳೆದರ್ ॥ ೯೦

ವ॥ ಅಂತು ತೊಳೆದು,

ಕಂ॥ ಎಳವಾಳೆಯ ಸುಳಿಯೆಲೆಯೊಳ್
ನಳನಳಿಸುವ ಕಂದಮೂಲಮಂ ನವಜಂಬೂ ।
ಫಲವಾಮ್ರಫಳಂ ಕದಳೀ
ಫಳಂಗಳಂ ತೀವಿ ತಂದು ಮುಂದಿಳಿಪುತ್ತುಂ ॥ ೯೧

ಕಂ॥ ಎಲೆಯತಿಥಿ ಬಳಲ್ದಿರೆಮ್ಮೀ
ಫಲದಿಂದಂ ನಿಮ್ಮ ಪಸಿವನುಡುಗಿಸಿಯೆನೆ ಸೈ ।
ಫಲಮಂ ಕೆಯ್ಕೊಂಡಪೆವೀ
ಲಲನೆಯದಾರ್ ತಪವಗಣ್ಯವಾವನ ಪುಣ್ಯಂ ॥ ೯೨

ವ॥ ಎಂದು ನುಡಿಯೆ ಜಯೆವಿಜಯೆಗಳ್ ಕೇಳ್ದು

ಕಂ॥ ಇವರಿರವಿನ ಚಿಂತಾರತಿ
ನಿನಗೇತಕೀ ಕ್ಷುಧೆಯನೀ ಪಥಶ್ರಮಮಂ ತೀ ।
ರ್ಚುವ ಬಗೆಯಂ ಬೇಗಂ ಮಾ
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ ॥ ೯೩

ಘನಮಹಿಮನಾದ ಆತ ಆಕಡೆ ಈಕಡೆ ನೋಡುತ್ತಾ ಬಂದು ಮಾವಿನ ಮರದ ಕೆಳಗೆ ನಿಂತನು. ವ॥ ಕಪಟವಟು ಗಿರಿಜೆ ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಸಮೀಪದಲ್ಲಿ ಒಂದು ಎಳೆಮಾವಿನ ಮರದ ಕೆಳಗೆ ಕುಳಿತುಕೊಳ್ಳಲು ಸಖಿಯರು ಅವನನ್ನು ಕಂಡರು. ೯೦. "ಈ ವಟು ಅಪೂರ್ವಿಗನು, ಅತಿಥಿಸ್ವರೂಪನು, ಭಸ್ಮಧರಿಸಿದ ಹಣೆ! ಒಳ್ಳೆಯ ವಿಪ್ರವರ" ಎಂದು ಭಾವಿಸಿದ ಅವರು ಆತನ ಕುಶಲ ಪ್ರಶ್ನೆ ಮಾಡಿ, ಆತನ ಪಾದಗಳನ್ನು ತೊಳೆದರು; ೯೧. ಅವರು ಎಳೆಬಾಳೆಯ ಸುಳಿಎಲೆಯಲ್ಲಿ ಶುಭ್ರವಾದ ಕಂದಮೂಲಗಳನ್ನೂ ಹೊಸ ಜಂಬುನೇರಳೆ, ಮಾವು, ಬಾಳೆ ಹಣ್ಣುಗಳನ್ನು ತಂದು ಮುಂದಿಟ್ಟು ೯೨. "ಎಲೆ ಅತಿಥಿಗಳೆ! ನೀವು ತುಂಬಾ ಬಳಲಿದ್ದೀರಿ! ನಾವು ಸಮರ್ಪಿಸಿದ ಈ ಹಣ್ಣುಗಳನ್ನು ಸೇವಿಸಿ ಹಸಿವು ಅಡಗಿಸಿಕೊಳ್ಳಿರಿ" ಎಂದರು. ಅದಕ್ಕೆ ಆ ವಟು "ಸೈ! (ಆಗಲಿ), ನೀವು ನೀಡಿದ ಹಣ್ಣುಗಳನ್ನು ಸ್ವೀಕರಿಸುವೆನು, ಆದರೆ ಈ ಲಲನೆ ಯಾರು? ಈ ಬಗೆಯ ತಪಸ್ಸು ಯಾವನ ಪುಣ್ಯ!" ೯೩. ಈಕೆಯ ಇರವಿನ ಚಿಂತೆ ನಿಮಗೇತಕ್ಕೆ? ನೀವು ಹಸಿವನ್ನು ಮತ್ತು ದಾರಿಯ ಆಯಾಸವನ್ನು ಬೇಗ

ಬೆಸಗೊಂಡೊಡೆ ದೋಷಮೆ ಈ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ ।
ರಿಸಬರ್ಪುದೆ ತಪಮಂ ಮಾ
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ ॥ ೯೪

ಎನೆ ಕೇಳ್ದಾ ಗಿರಿಜೆ ಮನದೊಳ್
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ ।
ಯ್ಯನೆ ಕೆಯ್ಯೊಳೋಸರಿಸಿ ಮೆ
ಲ್ಲನೆ ಕಣ್ದೆಱೆಯುತ್ತೆ ಕಂಡಳಾ ವರ ವಟುವಂ ॥ ೯೫

ವ॥ ಆ ಸಮಯದೊಳ್

ಕಂ॥ ಇಂದುಗೆ ಮೇಘಂ ಕವಿದೊಡ
ಮಂದೀ ಲೋಕಕ್ಕೆ ತಣ್ಪು ತಪ್ಪದ ತೆಱದಿಂ ।
ದಿಂದುಧರಂ ವರವಟುವೇ
ಷಂದಳೆಂದೊಡಮಗಜೆಗಾದುದತಿಹರ್ಷಮುಖಂ ॥ ೯೬

ವ॥ ಅಂತು ಹರ್ಷಮನಿಮಿತ್ತಮೇಕಾದಪುದೆಂದು ನಿಮಿತ್ತಮನಱೆಯದೆ ಬೞಿಗಾಗಿ ನೋಡುತಿರ್ಪಲ್ಲಿ

ಕಂ॥ ಗಿರಿಸುತೆಯ ಮಧುರದೃಷ್ಟಿಗ
ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ ।
ಕರಗಿ ನಿಲಲಾಱದೆಳ್ದಾ
ತುರಪುಳಕಮನಂತುಮಿಂತು ಸಂತಮಿಡುತ್ತುಂ ॥ ೯೭

ಹೋಗಲಾಡಿಸಿಕೊಳ್ಳಿರಿ" ಎನ್ನಲು ಆ ವಟು ನಸುನಕ್ಕು ಹೀಗೆಂದನು. ೯೪. "ಕೇಳಿದ ಮಾತ್ರಕ್ಕೆ ತಪ್ಪೇನು? ಎಳೆ ಪ್ರಾಯದ ಈ ಕನ್ನೆ ತಪಸ್ಸು ಮಾಡದಿದ್ದರೆ ಒಳ್ಳೆಯದು. ಈ ತಪಸ್ಸನ್ನು ತಡೆಯುವವರಿಲ್ಲವೆ? ಇಷ್ಟಾರ್ಥ ಪಡೆಯುವುದಕ್ಕೆ ಬೇರೆ ಸಹಾಯಾದಿ ಗಳಿಲ್ಲವೆ?" ೯೫. ವಟು ಹೇಳಿದ ಮಾತನ್ನು ಕೇಳಿ ಗಿರಿಜೆಗೆ ನಸುಕೋಪವುದಿಸಿತು. ಅವಳು ಮನಸ್ಸಿನಲ್ಲಿ ಮುನಿದು ಜಪವನ್ನು ನಿಲ್ಲಿಸಿ, ಜಪಮಾಲೆಯನ್ನು ಮೆಲ್ಲಗೆ ಪಕ್ಕಕ್ಕೆ ಸರಿಸಿ, ಮೆಲ್ಲನೆ ಕಣ್ದೆರೆದು, ಆ ಶ್ರೇಷ್ಠವಟುವನ್ನು ಕಂಡಳು. ೯೬. ಚಂದ್ರನಿಗೆ ಮೋಡವು ಕವಿದರೂ ತಂಪು ತಪ್ಪೀತೆ? ಅದರಂತೆ ಶಿವನು ವಟುವೇಷವನ್ನು ಧರಿಸಿದ್ದರೂ ಕೂಡ ಅಗಜೆಗೆ ಹರ್ಷವೇ ಆಯಿತು. ವ॥ ತನಗಾದ ಅಕಾರಣ ಹರ್ಷದ ಕಾರಣ ಅವಳಿಗೆ ತಿಳಿಯಲಿಲ್ಲ; ಅವಳು ಬೆರಗಾಗಿ ಅವನನ್ನು ನೋಡುತ್ತಿದ್ದಂತೆ. ೯೭. ಗಿರಿಸುತೆಯ ಮಧುರದೃಷ್ಟಿಗಳು ತನಗೆ ತಾಗಲು ವಿಪ್ರ ಕರಗಿದನು; ಆತ ಅಲ್ಲಿ ನಿಲ್ಲಲಾರದೆ ಹೋದನು. ಆತನ ಮೈ ಪುಳಕವೆದ್ದಿತು; ಅದನ್ನು ಹೇಗೋ ತಡೆದುಕೊಂಡು,

ನೆಗೆವ ಜಡೆಮುಡಿಯನೊತ್ತು
ತ್ತೊಗೆವ ಭುಜಾವಳಿಯನಡಂಗಿಸುತ್ತೂರುಗಳಿಂ ।
ಮಿಗುವ ವೃಷೇಂದ್ರನನೌಂಕು
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತುಂ ॥ ೯೮

ಎಂತಾನುಂ ನಿಜರೂಪಂ
ಸಂತುವಿಡುತ್ತಲ್ಲಿ ವಿಪ್ರಸತಿಧೈರ್ಯತೆಯಂ ।
ಮುಂತಿಟ್ಟು ಗಿರಿಜೆಯೊಡನುಸಿ
ರ್ದಂ ತಡಬಡಿಸುತ್ತೆ ಮಿಸುಪ ಪೊಸ ಪುಸಿವಾತಂ ॥ ೯೯

ಕಂ॥ ಈ ಸುಕುಮಾರತೆಯಿಂ ನಿಲ
ವೀ ಸುಕರತೆಯಿಂ ನವೀನಯೌವನಮದವೀ ।
ಭಾಸುರತೆಯಿಂ ಸುಧಾಮಯ
ವೀ ಸುಖದೊಳ್ ತಪಮಿದೆಂತು ಬಂದುದು ಮುಗ್ಧೇ ॥ ೧೦೦

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ ನವಲತೆಯಂ ಸೂ ।
ರ್ಯನ ಬಿಸಿಲಿಂ ಕೊರಗಿಪ ದು
ಷ್ಟನನೆನಗಜೆಪಬಲೆ ಸೌಕುಮಾರ್ಯಾವರಣೇ ॥ ೧೦೧

ವ॥ ಅಂತುಮಲ್ಲದೆಯುಂ,

ಕಂ॥ ಎಳೆಗೆಂಪನುಗುಳ್ದ ಮೃದುಕೋ
ಮಳಪದಕಮಳಂಗಳೀಗಳತಿಕಠಿನಮೆನಿ ।
ಪ್ಪಳೆಯೊಳ್ ಹರಹರ ಕಲ್ನೆಲ
ಕಳವಟ್ಟುವಿವೆಂತು ಬಾಲಹಂಸೀಯಾನೇ ॥ ೧೦೨

೯೮. ಜಿಗಿಯುತ್ತಿದ್ದ ಜಡೆಮುಡಿಯನ್ನು ಒತ್ತಿ ಹಿಡಿದು, ಭುಜಗಳ ಚಲನೆಯನ್ನು ಅಡಗಿಸಿಕೊಂಡು ತೊಡೆಗಳಲ್ಲಿ ಪ್ರಕಟವಾಗಲಿರುವ ಬಸವನನ್ನು ಅಮುಕಿ, ಮರೆ ಮಾಡಿದ್ದು ನಿಜಸ್ವರೂಪವು ಗಜಬಜಿಸುತ್ತಿತ್ತು. ೯೯. ನಿಜಸ್ವರೂಪವನ್ನು ಕಷ್ಟದಿಂದ ಸಂತೈಸುತ್ತಾ, ವಿಪ್ರವಟು ತುಂಬಾ ಧೈರ್ಯ ತಳೆದು, ತಡಬಡಿಸುತ್ತಾ ಗಿರಿಜೆಯೊಡನೆ ಕಪಟದ ಮಾತುಗಳನ್ನು ಆಡತೊಡಗಿದನು. ೧೦೦. "ಎಲೌ ಸುಂದರಿ, ಈ ಕೋಮಲತೆ, ಸೌಕರ್ಯ, ಈ ಹೊಸಯವ್ವನಮದ, ಈ ಭಾಸುರತೆ, ಸುಧಾಮಯ ವಾದ ಸುಖಪಡುವ ಸಮಯದಲ್ಲಿ ತಪಸ್ಸು ಮಾಡುವ ಸನ್ನಿವೇಶವೇನು ಬಂತು?" ೧೦೧. "ಈ ತಾರುಣ್ಯದಲ್ಲಿ ಅಯ್ಯೋ! ಈ ಉಗ್ರ ತಪಸ್ಸನ್ನು ಮಾಡುವ ಸನ್ನಿವೇಶ ಒದಗಬಹುದೇ? ಈ ನವಲತೆಯನ್ನು ಬಿಸಿಲಿನಲ್ಲಿ ಕೊರಗಿಸುವ ಆ ದುಷ್ಟನು ಯಾರು ಎಂಬುದನ್ನು ಎಲೌ ಕೋಮಲಾಂಗಿ ನನಗೆ ತಿಳಿಸು". ೧೦೨. ಎಲೌ ಎಳೆಯ ಹಂಸಗಳಂತೆ ನಡೆಯುಳ್ಳವಳೆ, ಎಳೆಯ ಕೆಂಪನ್ನು ಒಸರುವ ಕೋಮಲವಾದ ನಿನ್ನ

ಎಳವೆಳ್ದಿಂಗಳ ಸೋಂಕಿಂ
ಗಳವಡದಳ್ಕುವ ಶಿರೀಷಸುಕುಮಾರಾಂಗಂ ।
ಬಳವತ್ಕರ್ಕಶತರದಿಂ
ಬಳಸಿರ್ದೀ ನಾರ ಸೀಱಿಗಾಂತುದು ಚಿತ್ರಂ ॥ ೧೦೩

ಎಳಲತೆಯಂ ಱೋಡಾಡುವ
ನಳಿತೋಳ್ ಕೋಕಂಗಳ ವಿಭಂಗಿಪ ಕುಚಮಂ ।
ಡಳಮುಸಿರಲುಪವನಪಥದ
ತುಳಮಧ್ಯಂ ತಪದ ಕೋಟಲೆಗೆ ಸಂಗಡವೇ ॥ ೧೦೪

ಮಿಸುಗುವ ಶಶಿವದನಂ ಕಡು
ವಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಾ ।
ಜಿಸುವ ಕುಚಭಾವಮಯ್ಯೋ
ಪೊಸಜಡೆಯಂ ಪಡೆದುದಕಟ ಘನಯೌವನದೊಳ್ ॥ ೧೦೫

ವ॥ ಮತ್ತಮಲ್ಲದೆಯುಂ,

ಕಂ॥ ಬಿಸಿಲೆನ್ನದೆ ಮಳೆಯೆನ್ನದೆ
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ ।
ವಿಸರಮುಮಂ ನೆಱೆ ಗೆಲ್ದೀ
ವಸುಮತಿ ಬೀಱಗಾಗೆ ತಪದೊಳಿರ್ದವರುಂಟೇ ॥ ೧೦೬

ವನಜಾನನೆ ಏಱುಂಜ
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ ।
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ ದೋಷಮೇ ಮೃಗನಯನೇ ॥ ೧೦೭

ಪಾದಕಮಲಗಳು ಇಂತಹ ಕಠಿನವಾದ ಕಲ್ನೆಲದಲ್ಲಿ ನಡೆಯಲು ಹೇಗೆ ಒಗ್ಗಿದವು? ೧೦೩. ಎಳೆಯ ಬೆಳ್ದಿಂಗಳ ಸೋಂಕಿಗೂ ಅಳವಡದೆ ಅಳುಕುವ ಹಾಗೆ ಹೂವಿನಂತೆ ಸುಕುಮಾರವಾದ ನಿನ್ನ ಅಂಗವು ಅತಿ ಕರ್ಕಶವಾದ ಈ ನಾರ ಸೀರೆಗೆ ಹೇಗೆ ಒಗ್ಗಿ ಕೊಂಡಿತು ಎಂಬುದೇ ಸೋಜಿಗ. ೧೦೪. ಎಳಲತೆಯನ್ನು ಹೀಯಾಳಿಸುವ ನಳಿತೋಳು ಮತ್ತು ಚಕ್ರವಾಕಗಳನ್ನು ಹೀಗಳೆವ ಕುಚಮಂಡಳಗಳು ಈ ಕಾಡಿನ ನಡುವೆ ಉಗ್ರ ತಪಸ್ಸು ಮಾಡಲು ತಕ್ಕವುಗಳೆ? ೧೦೫. ಪ್ರಕಾಶಿಸುವ ಚಂದ್ರವದನವು ಉರಿಬಿಸಿಲಿಗೆ ಕೊರಗಿತು. ಹೂಮಾಲೆಗಳಿಂದ ಬೆಳಗುವ ಕೇಶಪಾಶಗಳು ಶಿವಶಿವ! ಈ ಹೊಸ ಯೌವನದಲ್ಲಿಯೂ ಜಡೆಗಟ್ಟಿವೆ! ೧೦೬. ಮಳೆ ಬಿಸಿಲೆನ್ನದೆ, ಚಳಿಗಾಳಿಗಳೆನ್ನದೆ, ಹಸಿವು ನೀರಡಿಕೆಗಳೆನ್ನದೆ, ನಿದ್ರಾಹಾರಗಳಿಲ್ಲದೆ ಲೋಕವು ಬೆರಗಾಗುವಂತೆ ತಪಸ್ಸು ಮಾಡಬಹುದೆ? ೧೦೭. ಎಲೌ ಮೃಗಾಕ್ಷಿ, ಏರುತ್ತಿರುವ ಈ ಯೌವನದಲ್ಲಿ ಈ ಕಾಡಿನಲ್ಲಿ ಯಾರನ್ನು ಉದ್ದೇಶಿಸಿ ತಪಸ್ಸು ಮಾಡುತ್ತಿರುವೆ, ನನಗೆ ಹೇಳಿದರೆ

ವ॥ ಎಂದು ಪ್ರೇಮಜನಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ವಟು ವೇಷದಿಂ ನುಡಿದ ಮೃದು ಕಠಿನಾಕ್ಷೇಪಗರ್ಭಿತವಚೋವಿಳಾಸಮಂ ಶೈಲಜೆ ಕೇಳ್ದು ಚಿಂತೆಯಂ ತಾಳ್ದು

ಕಂ॥ ಬೆಸಗೊಂಡಪನಮಳದ್ವಿಜ
ನುಸಿರಲ್ ತಾಂ ಬಾರದುಸಿರದಿರಬಾರದೆನು ।
ತ್ತಸದೃಶತಪಮಂ ಮನದು
ಬ್ಬಸದಿಂದೆ ಭವಾನಿ ಮಾನಿ ಮೆಲ್ಲನೆ ನುಡಿದಳ್ ॥ ೧೦೮

ಬಗೆವೆರ್ಚಿ ಕೇಳುತಿರ್ದಪೆ
ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ ।
ಭುಗೆ ಕಾರುಣ್ಯಾಬ್ಧಿಗೆ ಶೂ
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ ॥ ೧೦೯

ಎನುತುಂ ಗದ್ಗದಿಸುತೆ ಪುಳ
ಕನಿಕಾಯಮನಾನುತಶುವಂ ಕಳಿಯುತ್ತುಂ ।
ಘನಹರ್ಷಚಿತ್ತೆಯಾಗು
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್ ॥ ೧೧೦

ವ॥ ಎಂದು ವಿರೂಪಾಕ್ಷಂಗೆ ತಪಮಿರ್ದಪೆನೆಂಬ ನುಡಿಯಂ ಕೇಳ್ದು ದುಷ್ಕಧರಾಮರ ನಟ್ಟಹಾಸದಿಂದಿಂತೆಂದಂ

ಕಂ॥ ಅಕ್ಕಕ್ಕು ಕಾಮಹರನೊಳ್
ಮುಕ್ಕಣ್ಣನೊಳಖಿಳವೇದ ಶಾಸ್ತ್ರಕ್ರಮಮಂ ।
ಮಿಕ್ಕವನೊಳ್ ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ ॥ ೧೧೧

ತಪ್ಪಿಲ್ಲವಷ್ಟೆ! ವ॥ ಹೀಗೆ ಪ್ರಣಯಕಲಹಲೋಲನಾದ ಕಪಟವಟು ನುಡಿದ ಆಕ್ಷೇಪಗರ್ಭಿತಮಾತುಗಳನ್ನು ಕೇಳಿದ ಗಿರಿಜೆ ಚಿಂತಿಸಿ, ೧೦೮. "ಪವಿತ್ರಾತ್ಮನಾದ ದ್ವಿಜವಟು ಬೆಸಗೊಳ್ಳುತ್ತಿದ್ದಾನೆ, ಉತ್ತರಿಸುವೆನೆಂದರೆ ಉಸಿರೇ ಇಲ್ಲ!" ಎಂದು ಭವಾನಿ ಯೋಚಿಸಿ ಮನದ ದುಗುಡವನ್ನು ಮೆಲ್ಲನೆ ನುಡಿದಳು. ೧೦೯. "ಎಲೈ ಧೂರ್ತವಿಪ್ರ! ನನ್ನ ವಿಷಯವಾಗಿ ನೀನು ಆಸಕ್ತಿ ವಹಿಸಿ ಕೇಳುತ್ತಿದ್ದೀಯೆ, ಹೇಳುವೆನು. ಕೇಳು- ಕಾರುಣ್ಯಾಬ್ಧಿಯೂ ಶೂಲಪಾಣಿಯೂ ಆದ ಶಂಭುವಿಗೆ ದಯೆ ಹುಟ್ಟುವುದಕ್ಕಾಗಿ ತಪಸ್ಸು ಮಾಡುತ್ತಿದ್ದೇನೆ". ೧೧೦. ಎಂದು ಹೇಳುವಾಗ ಅಗಜೆಯ ಮಾತು ಗದ್ಗದಿತ ವಾಯಿತು. ಮೈ ಬೆವತು ರೋಮಾಂಚಿತವಾಯಿತು, ಮೂಡಿ ಬಂದ ಆನಂದಾಶ್ರು ಗಳನ್ನು ಒರೆಸಿಕೊಳ್ಳುತ್ತಾ ಆ ಪಾರ್ವತಿಯು ತನ್ನ ಆರಾಧ್ಯ ಮೂರ್ತಿ ಶಂಕರ ಎಂದು ಹೆಸರನ್ನು ಹೊರಗೆಡಹಿದಳು. ವ॥ ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡುವ ಳೆಂಬುದನ್ನು ಕೇಳಿ ಆ ಕಪಟವಟುವು ನಕ್ಕು ಹೇಳಿದನು. ೧೧೧. ಓಹೊ! ಸರಿಸರಿ! ಆ ಕಾಮಹರನಲ್ಲಿ, ಮುಕ್ಕಣ್ಣನಲ್ಲಿ, ವೇದಶಾಸ್ತ್ರ ಕ್ರಮಕ್ಕೆ ಮೀರಿದವನಲ್ಲಿ, ತತ್ರಾಪಿ

ಉ॥ ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ ತಾ ।
ನೇಕೆ ಕೃಶಾನುವೇಕೆ ಪೂಸಪೂವಿನ ಮಾಲೆಯದೇಕೆ ಭಾನುವೇ
ಕಾ ಕುಮುದಂ ದಲೇಕೆ ಸಿಡಿಲೇಕೆ ಮರಾಳನದೇಕೆ ಲೋಕದೊಳ್ ॥ ೧೧೨

ಕಂ॥ ನೀನಿಯಳ್ ವಿಷಮಾತಂ
ನೀನತಿಮೃದು ಕಠಿನಗುಣಗಣಾಶ್ರಯನಾತಂ ।
ನೀನಬಲೆಯುಗ್ರನಾತಂ
ನೀನುರುತರಭೀರು ಸರ್ಪಭೂಷಣನಾತಂ ॥ ೧೧೩

ಪುಲಿದೊವಲುಡಿಗೆಯ ಹಾವಿನ
ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂ ।
ದಲೆಗಳ ಮಾಲೆಯ ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ ॥ ೧೧೪

ವ॥ ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿವೋಗಿ,

ಕಂ॥ ತಪವಂತದಿರ್ಕೆ ಮಾಡುವ
ಜಪವಿರ್ಕೆ ಮೃಗಾಂಕಮೌಳಿಯಂ ಭರದಿಂ ಧ್ಯಾ ।
ನಿಪುದಿರ್ಕೆ ಶಂಭುವಂ ನಿಂ
ದಿಪುದಂ ಕೇಳ್ವೊಂದು ಪಾಪವಿಂದೆನಗಾಯ್ತೇ ॥ ೧೧೫

(ಅದರಲ್ಲಿಯೂ) ಶ್ಮಶಾನವಾಸಿಯಲ್ಲಿ ಹೇ ಲತಾಂಗಿ! ಅದು ಹೇಗೆ ನಿನ್ನ ಮನಸ್ಸು ಇಟ್ಟೆ! ೧೧೨. ಭಯಂಕರನಾದ ಆ ಶೂಲಿಯಲ್ಲಿ ನಿನ್ನ ಮನಸ್ಸು ಇಟ್ಟಮೇಲೆ ಇನ್ನು ತಪಸ್ಸೇತಕ್ಕೆ? ನೀನೇಕೆ? ಖಡ್ಗವೇತಕ್ಕೆ ಲತೆಯೇತಕ್ಕೆ? ಕರಿಯೇಕೆ? ಕದಲಿಯೇಕೆ? ಅಗ್ನಿ ಏಕೆ- ಹೂಮಾಲೆಯೇಕೆ? ರವಿಯೇಕೆ ನೈದಿಲೆಯೇಕೆ? ಸಿಡಿಲು ಏತಕ್ಕೆ? ಕಲಹಂಸ ವೇತಕ್ಕೆ? ೧೧೩. ವಿಚಾರ ಮಾಡಿದರೆ ನೀನು ಮಧುರೆ, ಆತ ವಿಷ; ನೀನು ಕೋಮಲೆ, ಆತ ಅತಿ ಕಠಿಣಗುಣಗಳಿಗೆ ಆಶ್ರಯ; ನೀನು ಅಬಲೆ ಆತ ಉಗ್ರ; ನೀನು ಭಯಸ್ಥೆ-ಆತ ಉರಗ ಭೂಷಣ! ೧೧೪. ಆತನ ಸ್ವರೂಪವನ್ನಾದರೂ ನೋಡು: ಹುಲಿತೊಗಲಿನ ಉಡಿಗೆ, ಹಾವುಗಳೇ ಆಭರಣಗಳು, ಹಣೆಗಣ್ಣು, ಹೊರಸಿನ ಕಾಲು (ಖಟ್ವಾಂಗ) ಹಸಿತಲೆಗಳ ರುಂಡಮಾಲೆ, ಶೂಲಧಾರಿ! ಎಲೆ ಮುಗ್ಧೆ; ಇದ್ದಿಷ್ಟಕ್ಕೂ ಸಹ ನೀನು ಅಂಜದೆ ಹೇಗೆ ಮನಸ್ಸು ಮಾಡಿದೆ? ವ॥ ಎಂದ ಶಿವನಿಂದಾರೂಪವಾದ ವಿಪ್ರನ ಮಾತಿಗೆ ಗಿರಿಜೆ ಕುಪಿತಳಾದಳು ೧೧೫, ನಾನು ಮಾಡುವ ತಪಸ್ಸು ಮತ್ತು ಜಪಗಳ ಮಾತು ಹಾಗಿರಲಿ, ಈಗ ಚಂದ್ರಶೇಖರನನ್ನು ಧ್ಯಾನಿಸುವುದೂ ಹಾಗಿರಲಿ ಆದರೆ

ಕಂ॥ ಘೋರತಪದಲ್ಲಿ ಕೋಪಿಸ
ಬಾರದು ತಾಂ ತಪದ ಕೇಡು ಪತಿನಿಂದೆಯುಮಂ ।
ಸೈರಿಸಬಾರದೆನುತ್ತೆ ವಿ
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್ ॥ ೧೧೫

ಆದ ನಿರೋಧದ ನಿಂದೆಯ
ನಾದರಿಸದೆ ಭಸಿತದಿಂದೆ ವಿಪ್ರಸನಿಡೆ ಪೋ ।
ಪೋದುದು ವಟುವೇಷಂ ಶಿವ
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ॥ ೧೧೬

ವ॥ ಆಗಳ್,

ಕಂ॥ ಮುಗಿಲ ತೆಱೆ ಸರಿದ ಶಶಿಯಂ
ತೊಗೆದ ತಮಂ ತೆಗೆದ ತರುಣತರಣಿಯ ತೆಱದಿಂ ।
ಪೊಗೆ ತಳ್ಗಿದಗ್ನಿಯಂತಿರೆ
ಮಿಗೆ ವೇಷಂ ತೊಲಗಿ ಶಂಭು ತೊಳಗುತ್ತಿರ್ದಂ ॥ ೧೧೮

ಜಡೆಮುಡಿ ಪಂಚಮುಖಂ ನೆಗೆ
ದುಡುಪತಿಕಳೆ ದಶಭುಜಂ ತ್ರಿನೇತ್ರಂ ಗಾತ್ರಂ ।
ಬಿಡಿದ ನವಭೂತಿ ಪುಲಿದೊವ
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ ॥ ೧೧೯

ವ॥ ಆ ಸಮಯದೊಳ್,

ಕಂ॥ ಸರಿದುದು ಪುಸಿವೇಷದ ತೆಱೆ
ಸುರಿದುದು ಕೆಯ್ನೀರ ತೆಱದೆ ಪೂವಳೆ ಸರಿಸಂ ।
ಬರಿದುದು ಜೀರಿಗೆಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯವೋಲ್ ॥ ೧೨೦

ಶಿವನಿಂದೆಯನ್ನು ಕೇಳುವ ಪಾಪವು ನನಗೆ ಲಭಿಸುವಂತಾಯಿತಲ್ಲಾ! ೧೧೬. ಘೋರ ತಪಸ್ಸಿನಲ್ಲಿ ಕೋಪ ಕೆಟ್ಟದ್ದು, ಅದು ತಪಸ್ಸಿನ ಕೇಡು; ಇನ್ನು ಪತಿನಿಂದೆಯನ್ನು ಸಹ ಸೈರಿಸಬಾರದು ಎಂದು ಅಗಜೆ ಕೋಪಗೊಂಡು. ೧೧೭. ವಟುಮಾಡಿದ ನಿಂದೆಯನ್ನು ಕೇಳಿ ಸಹಿಸಲಾರದೆ ಪಾರ್ವತಿ ಪಕ್ಕದಲ್ಲಿದ್ದ ಭಸ್ಮದ ಗಟ್ಟಿಯನ್ನು ವಟುವಿನ ಮೇಲೆ ಎಸೆದಳು, ಹುಸಿಯು ದಿಟದ ಮುಂದೆ ನಿಲ್ಲಬಲ್ಲುದೆ? ಆ ಕೂಡಲೆ ವಟುವೇಷ ಕಳಚಿತು. ೧೧೮. ಮೋಡದ ತೆರೆ ತೆರೆದ ಚಂದ್ರನಂತೆ, ಕತ್ತಲು ಅಳಿದ ತರುಣ ರವಿಯಂತೆ, ಹೊಗೆ ತಗ್ಗಿದ ಬೆಂಕಿಯಂತೆ, ವಟುವೇಷ ತೊಲಗಿ ಶಂಭು ಬೆಳಗುತ್ತಿದ್ದನು. ೧೧೯. ಜಡೆಮುಡಿ ಪಂಚಮುಖ, ಸೂಡಿದ ಚಂದ್ರಕಳೆ, ದಶಭುಜ, ತ್ರಿನೇತ್ರ, ಭಸ್ಮಲೇಪಿಸಿದ ಒಡಲು, ಹುಲಿ ತೊಗಲಿನ ಉಡಿಗೆಗಳಿಂದ ಶಂಕರನು ಬೆಳಗುತ್ತಿದ್ದನು.

ಮ॥ ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೨೧

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಕವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಪಾರ್ವತೀತಪೋವರ್ಣನ ವಿರೂಪಾಕ್ಷ ಪ್ರತ್ಯಕ್ಷೀಕರಣವರ್ಣನಂ
ನವಮಾಶ್ವಾಸಂ

೧೨೦. ಹುಸಿವೇಷದ ತೆರೆ ಸರಿಯಿತು, ಧಾರೆಯೆರೆದಂತೆ ಸುರಿದ ಹೂವಿನ ಮಳೆ ಕೋಪದಿಂದ ಎಸೆದ ಭಸ್ಮವೆ ಮದುವೆಯಲ್ಲಿ ಎರಚುವ ಜೀರಿಗೆ ಬೆಲ್ಲವೆಂಬಂತೆ ಆ ಸನ್ನಿವೇಶ ಶಿವಶಿವೆಯರ ಮದುವೆಯ ಸಂಕೇತವಾಗಿತ್ತು.

ದಶಮಾಶ್ವಾಸಂ

ಪಾರ್ವತೀಪರಮೇಶ್ವರ ವಿವಾಹ ವರ್ಣನಂ

ಕಂ॥ ಶ್ರೀ ಗಿರಿಜಾವಲ್ಲಭನಖಿ
ಳಾಗಮದುರ್ಲಭನಪಾರಸುಲಭಂ ಕಾರು ।
ಣ್ಯಾಗಾರಂ ಭಕ್ತಿಯನೆಮ
ಗೀಗೆ ಸದಾವರದ ಹಂಪೆಯ ವಿರೂಪಾಕ್ಷಂ ॥ ೧

ಆಗಳ್ ಕಂಡಗಸುತೆ ಬೆಱ
ಗಾಗುತೆ ಸರಿವರಿಸಿಕೊಳುತೆ ವಲ್ಕಲವಸನಾ ।
ಭೋಗಮನತಿಲಜ್ಜಿತೆ ತಲೆ
ವಾಗಿದಳನುರಾಗವೇಱೆ ಪುಳಕಿಸುತಿರ್ದಳ್ ॥ ೨

ಅವಲೋಕನದಿಂ ನೆಳೆದಳ್
ಶಿವನಂ ಮನದಿಂದ ತೆಗೆದಳಪ್ಪಿದಳತ್ಯು ।
ತ್ಸವದಿಂ ಚಿತ್ತದೊಳಿಳಸುತೆ
ತವಕಂ ಮಿಗೆ ಚುಂಬಿಸಿದಳಹಂಕಾರದೊಳಂ ॥ ೩

ವ॥ ಆ ಸಮಯದೊಳ್,

ಚಂ॥ ಉಡುಪತಿಬಿಂಬಮಂ ನಗುವ ನಿರ್ಮಳವಕ್ತ್ರಮನಾಸೆ ಮಿಕ್ಕು ಧೀಂ
ಕಿಡುವ ಕಟಾಕ್ಷಮಾಲೆಗಳನುನ್ನತಪೀನಪಯೋಧರಂಗಳಂ ।
ಮೃಡನೊಸೆದೀಕ್ಷಿಸುತ್ತೆ ನಿಲಲಾಱದಪರ್ಣೆಯ ಪುಣ್ಯಹಸ್ತಮಂ
ಪಿಡಿದನಶೇಷದೇವಕುಲಮೌಳಿವಿರಾಜಿತಪಾದಪಂಕಜಂ ॥ ೪

೧. ಗಿರಿಜೆಯ ವಲ್ಲಭನೂ ಸಕಲಶಾಸ್ತ್ರದುರ್ಲಭನೂ, ಭಕ್ತರಿಗೆ ಸುಲಭನೂ ಕರುಣೆಗೆ ನೆಲೆಯೂ, ವರಪ್ರದನೂ ಆದ ಹಂಪೆಯ ವಿರೂಪಾಕ್ಷನು ನಮಗೆ ಸದ್ಭಕ್ತಿಯನ್ನು ಕೊಡಲಿ. ೨. ಶಿವನ ನಿಜಸ್ವರೂಪವನ್ನೂ ಕಂಡ ಅಗಸುತೆಯು ಬೆರಗಾದಳು, ಮೈಮೇಲಿನ ನಾರುಮಡಿಯನ್ನು ಸರಿಪಡಿಸಿಕೊಂಡಳು, ನಾಚಿಕೆಯಿಂದ ತಲೆವಾಗಿ ಅನುರಾಗಾತಿಶಯದಿಂದ ಪುಳಕಿಸತೊಡಗಿದಳು. ೩. ಕೇವಲ ನೋಟದಿಂದಲೇ ಶಿವನ ಮನಸ್ಸನ್ನು ಆಕರ್ಷಿಸಿದಳು, ಮನಸ್ಸಿನಿಂದಲೇ ಅವನನ್ನು ಆಲಿಂಗಿಸಿದಳು, ಅತ್ಯುತ್ಸಾಹದಿಂದ ಚಿತ್ತದಲ್ಲಿ ಅವನನ್ನು ಬಯಸಿ ಅಭಿಮಾನದಿಂದ ಮುತ್ತಿಟ್ಟಳು. ೪. ಸಮಸ್ತ ದೇವತೆಗಳಿಂದ ವಂದಿಸಲ್ಪಡುವ ಪಾದಪಂಕಜವುಳ್ಳ ಪರಮೇಶ್ವರನು ಚಂದ್ರನನ್ನೂ ಹೀಗಳೆವ ಅವಳ ನಿರ್ಮಲ ಮುಖಕಮಲವನ್ನೂ ಅತ್ಯಾಸೆಯಿಂದ ತವಕಿಸುತ್ತಿರುವ ಆಕೆಯ ಕಡೆಗಣ್ಣ ನೋಟಗಳನ್ನೂ ಉನ್ನತ ಪೀನಸ್ತನ

ವ॥ ಅಂತು ಕಯ್ಯಂ ಪಿಡಿದು,

ಚಂ॥ ಗಿರಿಸುತೆಯಳ್ಕಳೆಂ ನಡೆಯ ತಾರಗಿರೀಂದ್ರನಿವಾಸದಲ್ಲಿಗ
ತ್ಕುರುತರಲೀಲೆಯಿಂದಮೆನೆ ದೇವ ಗಿರೀಶ್ವರನಲ್ಲಿಯೆನ್ನನಾ ।
ದರದೊಳಗೆ ಬೇಡಿಯೂರ್ಜಿತವಿವಾಹಮದಚ್ಚರಿಯಪ್ಪ ಮಾಳ್ಕೆಯಂ
ಕರುಣಿಪುದೆಂದುದಂ ಸಲಿಸವೇಳ್ಪುದು ಬೇಳ್ಪೆನಿದಂ ಸದಾಶಿವಾ ॥ ೫

ಕಂ॥ ಎಂದಗಜೆ ನುಡಿಯೆ ಮಹಿಮಾ
ವೃಂದನೊಡಂಬಡುತೆ ಸುಖದೊಳಿರ್ಪವಸರದೊಳ್ ।
ಬಂದು ರತಿ ಮುಕುಳಿತಾನನೆ
ನಿಂದುಮ್ಮಳದಿಂದೆ ಮುಂದೆ ಮೆಯ್ಯಿಕ್ಕಿರ್ದಳ್ ॥ ೬

ರತಿ ಮೆಯ್ಯಿಕ್ಕಿರ್ದೊಡೆ ಪಾ
ರ್ವತಿ ಬಿನ್ನಯ್ಸಿದಳಧೀಶ ಕೇಳೀ ಲಲನಾ ।
ಪತಿಯಪ್ಪ ಕಾಮನಂ ಪಶು
ಪತಿ ನಿಮ್ಮಿಂ ಪಡೆದು ಕೊಡುವೆನೆಂದಾಂ ನುಡಿದೆಂ ॥ ೭

ಎನೆ ಕೇಳ್ದು ಶಂಕರಂ ಗಿರಿ
ತನಯಾಮಧುರಾಸ್ಯಮಂ ನಿರೀಕ್ಷಿಸಿ ನಗುತುಂ ।
ನೆನೆದಾಗಳ್ ಕಾಮನನಂ
ಗನಾಗಿ ಕುಡುತಿರ್ಕೆ ರತಿಗೆ ಸುಖಸಂಪದಮಂ ॥ ೮

ವ॥ ಎಂದು ಪಾರ್ವತಿಯೊಡನೆ ನುಡಿಯುತ್ತುಂ ರತಿಗೆ ಕಾಮನಂ ಸಂಕಲ್ಪಜನ್ಮಂ ಮಾಡಿ

ಮಂಡಳವನ್ನೂ ಆಸಕ್ತಿಯಿಂದ ನೋಡುತ್ತಾ ತಡೆದಿರಲಾರದೆ ಆಕೆಯ ಪುಣ್ಯಹಸ್ತವನ್ನು ಹಿಡಿದನು. ೫. ಪರಮೇಶ್ವರನು ಗಿರಿಜೆಯ ಕೈಹಿಡಿದು 'ಹೇ ಅಗಜೆ, ಮೇರುಪರ್ವತದ ನಮ್ಮ ನಿವಾಸಕ್ಕೆ ಆನಂದದಿಂದ ಹೋಗುವ ನಡೆ!' ಎಂದನು. ಅದಕ್ಕೆ ಪಾರ್ವತಿ 'ಸ್ವಾಮಿ ದಯಮಾಡಿ ನಮ್ಮ ತಂದೆ ಹಿಮವಂತನಲ್ಲಿ ನನ್ನನ್ನು ಆದರದಿಂದ ಯಾಚಿಸಿ, ವಿಧ್ಯುಕ್ತವಾಗಿ ವಿವಾಹವಾಗಬೇಕೆಂದು ಬೇಡುವೆನು. ಅದನ್ನು ಕೃಪೆಯಿಂದ ನೆರವೇರಿಸಿ ಕೊಡಬೇಕು'. ೯. ಅಗಜೆಯ ಪ್ರಾರ್ಥನೆಯನ್ನು ಮಹಿಮಾಶಾಲಿಯಾದ ಪರಶಿವನು ಮನ್ನಿಸಿದನು. ಹೀಗೆ ಅವರು ಆನಂದದಿಂದ ಇರುವಾಗ ರತಿದೇವಿಯು ದುಃಖದಿಂದ ದೀನವಾದ ಮುಖವುಳ್ಳವಳಾಗಿ ಮುಂದೆ ಬಂದು ವಂದಿಸಿದಳು. ೭. ಹಾಗೆ ರತಿದೇವಿ ವಂದಿಸುತ್ತಿರುವಾಗ ಪಾರ್ವತಿಯು ಬೇಡಿಕೊಂಡಳು: 'ಸ್ವಾಮಿ, ಈ ಕಾಂತೆಯ ಪತಿ ಮನ್ಮಥನು ನಿಮ್ಮಿಂದ ಸುಟ್ಟು ಹೋದಾಗ ಈಕೆಯ ದುಃಖವನ್ನು ಕಂಡು, ಅಮ್ಮ ನಿನ್ನ ಪತಿಯನ್ನು ಪರಶಿವನಲ್ಲಿ ಬೇಡಿ ಪಡೆದುಕೊಡುತ್ತೇನೆ' ಎಂದು ಅಭಯವಿತ್ತಿದ್ದೇನೆ. ೮. ಹೀಗೆ ಗಿರಿಜೆ ಪ್ರಾರ್ಥಿಸಿದುದನ್ನು ಕೇಳಿದ ಶಂಕರನು, ಪಾರ್ವತಿಯ ಮಧುರವಾದ ಮುಖಕಮಲವನ್ನು ನೋಡಿ ನಕ್ಕು "ಅಸ್ತು! ಆಕೆ ನೆನೆದಾಗ ಕಾಮನು ಅನಂಗನಾಗಿ ಕಾಣಿಸಿಕೊಂಡು ಅವಳಿಗೆ ಸುಖವನ್ನುಂಟುಮಾಡಲಿ" ಎಂದನು. ವ॥ ಎಂದು ರತಿಯನ್ನು ಸಂತೈಸಿ, ರತಿಗೆ ಕಾಮನು ಮನಸಿಜನಾಗಿರುವಂತೆ ಅನುಗ್ರಹಿಸಿ,

ಕೊಟ್ಟು ಗಿರಿಜೆಯಂ ಗಿರಿರಾಜನಲ್ಲಿಗೆ ಪೋಗವೇಳ್ದು ದರ್ಪಕವಿಪಿನ ದಾವಾನಳಂ ಗಜಾಸುರ ಕುಂಭ ನಿರ್ಭಿನ್ನಸಿಂಹಂ ಜಳಂಧರಕುಮುದನಿಲಯಾರ್ಕರೂಪಂ ಲಾಲಾಸುರಾಭ್ರವಿಲಯಾನಿಲಂ ಕೀನಾಶ ವಿನಾಶಕರಂ ತ್ರಿಪುರಭಂಜನಂ ಚತುರ್ದಶಭುವನಚಕ್ರವರ್ತಿ ಸರ್ವಬ್ರಹ್ಮಾಂಡಸಾರ್ವಭೌಮನಾ ಭೀಳಭಾಳಾಂಬಕಂ ಶೂಲಧರಂ ಕೈಲಾಸಕ್ಕೆ ಬಿಜಯಂಗೈದನಿತ್ತಲ್,

ಕಂ।। ಗಿರಿಸುತೆ ಜಯವಿಜಯೆಗಳೊಡ
ನುರುತರಪುಷ್ಪಕಮನೇಱೆ ಬರುತಿರ್ದಳ್ ಶಂ ।
ಕರನ ವರಮೂರ್ತಿಯಂತಃ
ಕರಣಪ್ರಭೆಯೊಳಗೆ ತೊಡಗಿ ಬೆಳಗೆ ನಿರಂತಂ ।। ೯

ವ।। ಇಂತು ಶಿವನಂ ನೆನೆಯುತಂ ಹಿಮಾಚಳಮಂ ಕಳೆದು ನಿಜರಾಜಧಾನಿಯೆನಿಸಿ ದೋಷಧಿಪ್ರಸ್ಥಪುರವರಮಂ ಪುಗುತರ್ಪಾಗಳ್ ಪಾರ್ವತೀದೇವಿ ಲಬ್ಧವರಪ್ರಸನ್ನಮುಖಿಯಾಗಿ ತಪಮಂ ಬಿಟ್ಟು ಬರುತಿರ್ದಪಳೆಂಬ ಸಂತೋಷವಾರ್ತೆಯಂ ಕರ್ಣಪರಂಪರೆಯಿಂ ಗಿರಿರಾಜಂ ಕೇಳ್ದು ಸಂತಸಮಂ ತಾಳ್ದು,

ಕಂ।। ಪುಳಕಂ ಮುನ್ನೇಳುತ್ತಿರೆ
ಬಳಿಕಂ ತಾನೆಳ್ದು ಸಕಳಪರಿಜನಸಹಿತಂ ।
ಕಳಗೀತವಾದ್ಯನೃತ್ಯಂ
ಗಳ ಮಂಗಳರವದ ನಡುವೆ ಗಿರಿಪತಿ ಬರುತುಂ ।। ೧೦

ಪಾರ್ವತಿಯನ್ನು ಹಿಮವಂತನಲ್ಲಿಗೆ ಕಳುಹಿಸಿ ಮನ್ಮಥನೆಂಬ ಕಾಡಿಗೆ ಕಾಡ್ಕಿಚ್ಚಿನಂತಿರುವವನೂ ಗಜಾಸುರನ ಕುಂಭವನ್ನೊಡೆವ ಸಿಂಹನಂತಿರುವವನೂ ಜಲಂಧರನೆಂಬ ನೈದಿಲೆಗೆ ಸೂರ್ಯನೂ ಲೀಲಾಸುರನೆಂಬ ಮೇಘಕ್ಕೆ ಬಿರುಗಾಳಿಯೂ ರಾಕ್ಷಸಾಂತಕನೂ ತ್ರಿಪುರಹರನೂ ಹದಿನಾಲ್ಕು ಲೋಕಗಳ ಚಕ್ರವರ್ತಿಯೂ ಸರ್ವಬ್ರಹ್ಮಾಂಡ ಸಾರ್ವಭೌಮನೂ ಭಯಂಕರವಾದ ನಿಟಲಾಕ್ಷ (ಹಣೆಗಣ್ಣು) ವುಳ್ಳವನೂ ತ್ರಿಶೂಲಧಾರಿಯೂ ಆದ ಪರಶಿವನು ಕೈಲಾಸಕ್ಕೆ ದಯಮಾಡಿಸಿದನು; ಇನ್ನು ಈ ಕಡೆ- ೯. ಗಿರಿಜೆ ಸಖಿಯರೊಡನೆ ಪುಷ್ಪಕವಿಮಾನವನ್ನೇರಿ ತಂದೆಯ ಮನೆಗೆ ಬರುತ್ತಿದ್ದಾಳೆ. ಅವಳ ಚಿತ್ತಪಟಲದಲ್ಲಿ ಪರಶಿವನ ದಿವ್ಯಮೂರ್ತಿ ನಿರಂತರವೂ ಬೆಳಗುತ್ತಿದೆ. ವ।। ಹೀಗೆ ಗಿರಿಜೆ ಶಿವನನ್ನು ನೆನೆಯುತ್ತಾ ಹಿಮಾಚಲವನ್ನು ಸೇರಿ ಅಲ್ಲಿ ತಮ್ಮ ರಾಜಧಾನಿಯಾದ ಓಷಧಿಪ್ರಸ್ಥಪುರವನ್ನು ಪ್ರವೇಶಿಸುವಾಗ ಪಾರ್ವತಿಯು ತನ್ನ ತಪಸ್ಸು ಸಿದ್ಧಿಸಿ ಪ್ರಸನ್ನಮುಖಿಳಾಗಿ ಬರುತ್ತಿರುವಳೆಂಬ ಸುದ್ದಿ ಕರ್ಣಾಕರ್ಣಿಕೆಯಾಗಿ ಹಿಮವಂತನಿಗೆ ಮುಟ್ಟಿತು. ಆತನು ಅತ್ಯಾನಂದದಿಂದ ೧೦. ಹಿಮವಂತನಿಗೆ ಈ ಶುಭವಾರ್ತೆ ಕೇಳಿದೊಡನೆಯೇ ಸಂತೋಷಾತಿಶಯದಿಂದ ಮೈ ಪುಳಕಿತವಾಯಿತು. ಆತ ಕೂಡಲೆ ಎದ್ದು ಸಕಲ ಪರಿವಾರದೊಡನೆ ಮಂಗಳವಾದ್ಯಗಳನ್ನೊಡಗೊಂಡು ಪಾರ್ವತಿಯನ್ನು ಎದುರ್ಗೊಳ್ಳಲು ಹೊರಟನು.

ಫಲತತಿಗಳ್ ತುಱುಗಿದ ಗುಡಿ
ಗಳ ಸೀಗುರಿ ಚಾಮರಂಗಳೊಟ್ಟಜೆಗಳ ಮಂ ।
ಗಳಕಳಶಂಗಳ ಕನ್ನಡಿ
ಗಳ ಲಲನೆಯರೊಳಗೆ ನಡೆದನಗಕುಲರಾಜಂ ॥ ೧೧

ತರತರದೆ ನಡೆವ ಹಸ್ತ
ಶ್ವರಥಪದಾತಿಗಳ ಸಂದಣಿಗಳಂ ನೋಡು ।
ತ್ತುರುಳುತ್ತುರ್ಬುತೆ ಕೊರ್ಬು
ತ್ತುರವಣಿಸುತೆ ನಡೆದು ಬಂದನಗಕುಲರಾಜಂ ॥ ೧೨

ವ॥ ಅಂತು ನಡೆದು ಬಂದು,

ಮ॥ ಇದಿರ್ಗೊಂಡು ಗಿರಿರಾಜನೂರ್ಜಿತತಪೋವಿಸ್ತಾರೆಯಂ ಧೀರೆಯಂ
ಸದಲಂಕಾರಮನಾಂತ ಪಿಂಗಳಜಟಾಸಂಪನ್ನೆಯಂ ಚೆನ್ನೆಯಂ ।
ಮುದದಿಂ ವಲ್ಕಲವಸ್ತ್ರವಿಸ್ತರಿತಶೋಭಾಗಾತ್ರೆಯಂ ಸ್ತೋತ್ರೆಯಂ
ಪದೆದಾಹಾ ಗಿರಿಜಾತೆಯಂ ಸಕಳಕಾಂತಿಸ್ತೋಮೆಯಂ ರಾಮೆಯಂ ॥ ೧೩

ವ॥ ಅಂತಿದಿರ್ಗೊಂಡು,

ಮ॥ ಭರದಿಂ ನಡೆತಂದು ರಾಜಗೃಹಮಂ ಸಂತೋಷದಿಂ ಪೊಕ್ಕು ಭಾ
ಸ್ಕರ ಕೋಟಿಪ್ರಭೆಯಂ ಸಭಾಸದನದೊಳ್ ಬೀಱುತ್ತುವಿರ್ಪುದ್ಧವಿ ।
ಪ್ಪರಂ ತುಷ್ಟಿಯನೇಱೆ ಶೈಳಪತಿಯಂ ಶರ್ವಾಣಿಯಂ ಸ್ನೇಹದಿಂ
ದಿರೆ ಮೇನಾವಧು ಬಂದಳೀಕ್ಷಿಸಿದಳೀಪತ್ಗಾತ್ರೆಯಂ ಪುತ್ರಿಯಂ ॥ ೧೪

೧೧. ಫಲಪುಷ್ಪಹಸ್ತರಾದ ನೀರೆಯರು, ಗುಡಿತೋರಣಗಳ ಚಪ್ಪರಗಳು, ಛತ್ರಚಾಮರಗಳು, ಮಂಗಳಕಲಶಕನ್ನಡಿ ಹಿಡಿದ ಲಲನೆಯರ ಸಡಗರದೊಡನೆ ಗಿರಿರಾಜ ನಡೆದನು. ೧೨. ಆನೆ ಕುದುರೆ ರಥ ಕಾಲ್ದಳಗಳ ಸಂದಣಿಗಳನ್ನು ಸಂಭ್ರಮದಿಂದ ನೋಡುತ್ತಾ ಸಡಗರದಿಂದ ನಗರಾಜ ನಡೆತಂದನು. ೧೩. ಗಿರಿರಾಜನು ಗಿರಿಜೆಯನ್ನು ಗೌರವದಿಂದ ಇದಿರ್ಗೊಂಡನು. ಆಕೆ ಊರ್ಜಿತ ತಪೋವಿಸ್ತಾರೆ ಎಂದರೆ ಮಹಾತಪಸ್ವಿನಿ, ಧೈರ್ಯಶಾಲಿನಿ, ತಪೋಯೋಗ್ಯವಾದ ಅಲಂಕಾರ ತಳೆದ ಕೆಂಜಡೆಗಳಿಂದ ಕೂಡಿದವಳು. ನಾರುಮಡಿ ಧರಿಸಿದ ಮಂಗಳಗಾತ್ರೆ, ಸ್ತುತ್ಯಳು, ಕಾಂತಿಸಂಪನ್ನೆ, ಅಭಿರಾಮೆ ೧೪. ಅಗಜೆಯು ತಂದೆಯೊಡನೆ ನಡೆತಂದು ಅರಮನೆಯನ್ನು ಸಂತೋಷದಿಂದ ಪ್ರವೇಶಿಸಿದಳು. ಕೋಟಿ ಸೂರ್ಯ ಪ್ರಕಾಶಕ್ಕೆ ಸಮಾನವಾದ ತನ್ನ ಮುಖಪ್ರಭೆಯಿಂದ ಸಭಾಸದನವನ್ನು ಬೆಳಗಿಸುತ್ತಾ ಅವಳು ತೃಪ್ತಿಯಿಂದ ತಂದೆಯೊಡನೆ ಉನ್ನತಾಸನದಲ್ಲಿ ಕುಳಿತಳು. ಆಗ ತಾಯಿ ಮೇನಾದೇವಿ ಬಂದು ತಪಃಕೃಶೆ

ವ॥ ಅಂತು ಬಂದು ಕಟ್ಬಳ್ಕಱಿಂ ಮುಟ್ಪಿ ನೋಡಿ,

ಉ॥ ತಾಯೆ ತಪೋನಿರೋಧದೊಳೆ ಮೆಯ್ ಬಡವಾದುದು ಲೋಚನತ್ರಯ
ಚ್ಛಾಯೆ ಬಳಲ್ದುದಾನನಸರೋಜಮಣಂ ಕಳೆಗುಂದಿತುಜ್ಜ್ವಳ ।
ಪ್ರಾಯಕುಚದ್ವಯಂ ಕೊರಗಿದತ್ತು ಕಚಂ ಜಡೆಗಟ್ಟಿತಿಂತಿದ
ನ್ಯಾಯಮಿದೇಕೆ ಪೋದೆ ಸುತೆ ಎಂತಳವಟ್ಟುದರಣ್ಯವಿಭ್ರಮಂ ॥ ೧೫

ವ॥ ಎಂದು ಮೇನಾದೇವಿ ಪಾರ್ವತಿಯಂ ನೋಡಿ ಕೂಡಿ ಬಾಡಿ ಬಳಲ್ದು ಕನಲ್ದು ನುಡಿಯುತ್ತಿರ್ಪಾಗಳ್,

ಕಂ॥ ಗಿರಿಪತಿಯನುಮತಿಯಿಂ ಸೌಂ
ದರಿಯರ್ ನಡೆತಂದು ಪಾರ್ವತಿಯ ಜಡೆಗಳನೊ ।
ಪ್ಪರೆ ಬಿಡಿಸಿ ಕಚಭರಮನತಿ
ಭರದಿಂ ತಿರ್ದುತ್ತುಮಿರ್ದರನ್ನಗಮಿತ್ತಲ್ ॥ ೧೬

ಶ್ರೀಕೈಲಾಸದೊಳಿರ್ದು ಪಿ
ನಾಕ ವಿವಾಹಾರ್ಥದಿಂದೆ ವರಮೂರ್ತಿಗಳಂ ।
ಲೋಕೋತ್ತಮರಂ ಪುಣ್ಯ
ಶ್ಲೋಕರನಾ ಸಪ್ತಋಷಿಯರಂ ನೆನೆಯಲೊಡಂ ॥ ೧೭

ನೆನೆಯದ ಮುನ್ನಂ ಬಂದರ್
ವಿನುತಾಶೇಷರ್ ಜಟಾಧರರ್ ಭಸಿತಾಂಗರ್ ।
ಘನಮಹಿಮಾರುಂಧತಿ ಬೆ
ನ್ನನಿ ಬರವರೆ ಸಪ್ತಋಷಿಯರತಿಮುದದಿಂದಂ ॥ ೧೮

ಯಾದ ಮಗಳನ್ನು ಕಂಡಳು. ೧೫. ಅಮ್ಮಾ, ಉಗ್ರತಪಸ್ಸು ಮಾಡಿದುದರಿಂದ ಮೈ ಬಡವಾಯಿತು. ಕಣ್ಣು ಬಳಲಿದವು, ಮುಖಕಮಲ ಕಳೆಗುಂದಿದೆ, ಪ್ರಾಯ ಸಹಜವಾದ ಕುಚದ್ವಯ ಕೊರಗಿತು. ಕೇಶಪಾಶ ಜಡೆಗಟ್ಟಿತು, ಇಷ್ಟೆಲ್ಲ ಅನ್ಯಾಯಕ್ಕೆ ಏಕೆ ತೊಡಗಿದೆ ಆ ಕಾಡು ನಿನಗೆ ಹೇಗೆ ಒಗ್ಗಿತು? ವ॥ ಹೀಗೆ ಮೇನಾದೇವಿ ಮಗಳನ್ನು ನೋಡಿ ಅವಳ ಸ್ಥಿತಿಗೆ ಬಾಡಿ ಬಳಲಿ ಕನಲಿ ಕುದಿದು ನುಡಿಯುತ್ತಿರುವಾಗ ೧೬. ಹಿಮವಂತನ ಸೂಚನೆಯಂತೆ ಕೆಲವರು ಹೆಂಗಳೆಯರು ಅಲ್ಲಿಗೆ ಬಂದು ಪಾರ್ವತಿಯ ತಲೆಯ ಜಡೆಗಳನ್ನು ಬಿಡಿಸಿ ಅವಳ ಉಪಚಾರವನ್ನು ಕೈಗೊಂಡರು; ಇನ್ನು ಈ ಕಡೆ, ೧೭. ಪರಮೇಶ್ವರನು ಕೈಲಾಸವನ್ನು ಸೇರಿದ ಮೇಲೆ ತನಗೆ ವಧುವನ್ನು ಯಾಚಿಸಲು ಗೌರವಾರ್ಹರೂ ಸುಪ್ರಸಿದ್ಧರೂ ಪುಣ್ಯಶ್ಲೋಕರೂ ಆದ ಸಪ್ತರ್ಷಿಗಳನ್ನು ಸ್ಮರಿಸಿದನು. ೧೮. ಪರಶಿವನು ನೆನೆಯದ ಮೊದಲೇ ತ್ರಿಕಾಲಜ್ಞಾನಿಗಳಾದ ಸಪ್ತರ್ಷಿಗಳು ಅಲ್ಲಿಗೆ ಸಂತೋಷದಿಂದ ಬಂದರು; ಪವಿತ್ರಾತ್ಮರು, ಜಟಾಧಾರಿಗಳು, ಭಸ್ಮಭೂಷಿತರು; ಅವರ ಹಿಂದೆ ಪತಿವ್ರತಾಶಿರೋಮಣಿ ಅರುಂಧತಿಯೂ

ಬಂದಭವಂಗತಿಸುಖಮುಖ
ದಿಂದಂ ಮೆಯ್ಯಿಕ್ಕಿ ಹರ ಬರ್ದುಂಕಿದೆವೆನುತುಂ ।
ಸಂದಣಿಸಿ ಪುಳಕಮೆಳ್ತರೆ
ನಿಂದಿರ್ದು ಶಶಾಂಕಮೌಳಿ ಬೆಸನೇನೆನುತುಂ ॥ ೧೯

ಇರೆ ಕಂಡು ಕರುಣದಿಂ ಶಂ
ಕರನಾ ಋಷಿಗಳ್ಗೆ ಬೆಸಸಿದಂ ಪೋಪುದು ಭೂ ।
ಧರನಾಥನಲ್ಲಿಗತ್ಯಾ
ದರಮಂ ಮಾಡುವುದು ಬೇಡುವುದು ಗಿರಿಸುತೆಯಂ ॥ ೨೦

ಎಂದೊಡೆ ಹರಾದಮೆಂದಾ
ನಂದಂ ಮಿಗೆ ಸಪ್ತಋಷಿಗಳನುನಯದಿಂದೆ ।
ಯ್ತಂದರ್ ಮಂಡಿತಪುಷ್ಪಕ
ವ್ಯಂದಾರೂಢರ್ ನಗೇಶಪುರಮಂ ಪೊಕ್ಕರ್ ॥ ೨೧

ವ॥ ಆ ಸಮಯದೊಳ್,

ಕಂ॥ ಮನದೊಳ್ ಪರಮೋತ್ಸಾಹಂ
ಜನಿಯಿಸಿ ಗಿರಿರಾಜನೆಸೆವ ಋಷಿಗಳನಿದಿರ್ಗೊಂ ।
ಡನುನಯದಿಂ ತಂದುಚ್ಚಾ
ಸನದೊಳ್ ಕುಳ್ಳಿರಿಸಿ ವಿನಯವಿನಮಿತನಾದಂ ॥ ೨೨

ವ॥ ಅಂತು ವಿನಯದಿಂದೆಱಗಿ,

ಕಂ॥ ಸುರಲೋಕದಲ್ಲಿ ಸುಖದಿಂ
ದಿರುತುಂ ಬರವಿಂತು ನಿಮಗೆ ದೊರೆಕೊಂಡುದಿದೆ ।
ಮ್ಮರುತರಭಾಗ್ಯಮೆನುತ್ತುಂ
ಗಿರಿರಾಜಂ ಸಪ್ತಋಷಿಗಳಂ ಕೇಳಲೊಡಂ ॥ ೨೩

ಹೊರಟಿದ್ದಾಳೆ. ೧೯. ಬಂದು ಮಹರ್ಷಿಗಳು ಹರ್ಷಚಿತ್ತರಾಗಿ ಪರಶಿವನಿಗೆ ಪ್ರಣಾಮ ಮಾಡಿ "ಶಿವನೆ, ನಿನ್ನ ನೆನವಿಗೆ ಬಂದ ನಾವು ಕೃತಾರ್ಥರು" ಎಂದು ಅವರು ಮೈ ಪುಳಕವೇರುತ್ತಿರಲು "ಏನಪ್ಪಣೆ?" ಎಂದು ಬಿನ್ನೈಸಿದರು. ೨೦. ಅವರ ಬಿನ್ನಪವನ್ನು ಲಾಲಿಸಿ ಪರಶಿವನು ಋಷಿಗಳಿಗೆ ಬೆಸಸಿದನು: "ನೀವು ಹಿಮವಂತನನ್ನು ಸಂಧಿಸಿ ಗೌರವಿಸಿ ನನಗಾಗಿ ಅಗಜೆಯನ್ನು ಬೇಡುವುದು" ಎಂದನು. ೨೧. ಸಪ್ತಋಷಿಗಳು ಶಿವಾಜ್ಞೆಯನ್ನು ತಲೆಯಲ್ಲಿ ಹೊತ್ತು ಆನಂದದಿಂದ ಪುಷ್ಪಕದಲ್ಲಿ ಕುಳಿತು ಓಷಧಿಪ್ರಸ್ಥವೆಂಬ ಹಿಮವಂತನ ರಾಜಧಾನಿಗೆ ಆಗಮಿಸಿದರು. ೨೨. ಗಿರಿರಾಜನಿಗೆ ಮನಸ್ಸಿನಲ್ಲಿ ಅಮಿತ ಉತ್ಸಾಹ. ಆತ ಭಯ ಭಕ್ತಿಯಿಂದ ಮಹರ್ಷಿಗಳನ್ನು ಎದುರ್ಗೊಂಡು ಕರೆತಂದು ಉಚ್ಚ ಆಸನಗಳಲ್ಲಿ ಕುಳ್ಳಿರಿಸಿ ವಿನಮ್ರನಾಗಿ ವಂದಿಸಿದನು. ೨೩. "ಸ್ವಾಮಿ, ಸ್ವರ್ಗದಲ್ಲಿ ಎಲ್ಲ ಸುಖಗಳೂ ಇರುವಾಗ ತಾವು ಏತಕ್ಕಾಗಿ ಇಲ್ಲಿಗೆ ಆಗಮಿಸಿದಿರಿ? ಹಾಗೆ ತಾವು ಬಂದದ್ದು ನಮ್ಮ ಭಾಗ್ಯ" ಎಂದು ಗಿರಿರಾಜನು

ವರಮುನಿಗಳ್ ಮನದೊಂದಾ
ದರದಿಂ ನುಡಿದರ್ ಶಿವಂ ಶಶಾಂಕಧರಂ ಶಂ ।
ಕರನಭವಂ ನಿರ್ಮಾಯಂ
ಗಿರಿಜೆಯ ಬೇಡುವೊಡೆ ತಿಳುಪಿ ಕಳುಪಿದನೆಮ್ಮಂ ॥ ೨೪

ಆತಂಗೆ ಚಂದ್ರಮೌಳಿಗ
ಜಾತಂಗೆ ನಿರಾಮಯಂಗೆ ನಿತ್ಯಂಗೆ ನತ ।
ವ್ರಾತಂಗೆ ಬೇಡೆ ಬಂದೆವು
ನೂತನಭುವನೈಕ ಭಾಗ್ಯವತಿ ಪಾರ್ವತಿಯಂ ॥ ೨೫

ಚಂದ್ರಧರಂಗೆ ನತೋತ್ಪಲ
ಚಂದ್ರಂಗಂ ಗಣಸಮೂಹನಯನ ಚಕೋರ ।
ಚಂದ್ರಗಂ ಮುದದಿಂದಂ
ಚಂದ್ರಾನನೆ ಶಿವೆಯನೊಲ್ದು ಕೊಡು ಗಿರಿರಾಜಾ ॥ ೨೬

ವ॥ ಎಂದು ಸಪ್ತಋಷಿಗಳ್ ನುಡಿದಾಪ್ತವಚನಂ ಕರ್ಣರಸಾಯನಮಾಗೆ ಗಿರಿರಾಜಂ ಕೇಳ್ದು ಬಾಳ್ದ ಸಂದಣಿಸಿ ಪುಳಕದಿಂ ದಳವೇಱೆ ಮನಮಲರ್ದು ಬುದ್ಧಿವೈರ್ಚಯಹಂಕಾರ ವಿರ್ಮಡಿಸಿ ಚಿತ್ತಂ ಚಿಗುರ್ತು ಅಳವಿಗಳೆದ ಸಂತಮಂ ಸಂತಯ್ಸಲಾಱದೆ ಹೆಚ್ಚಿ ಹಿಗ್ಗಿ ನಚ್ಚಿ ನುಡಿದಂ ಮೇಘಾಗಮನಮಂ ಮಯೂರಂಗಸಹ್ಯಮೆ ವಸಂತನ ಬರವು ಹೊಸಬನಕ್ಕೆ ಪೊಲ್ಲದೆ ಚಂದ್ರೋದಯಂ ಚಕೋರಿಗುಪದ್ರಮೆ ಅರ್ಕನೇಳ್ಗೆ ಚಕ್ರವಾಕಮಿಥುನಕ್ಕೆ ವಕ್ರಮೆ ಕಾರ ತೋರವನಿ

ಋಷಿಗಳನ್ನು ಪ್ರಾರ್ಥಿಸಿದನು, ೨೪. ಅದಕ್ಕೆ ಋಷಿಗಳು "ಅಯ್ಯಾ, ಗಿರಿರಾಜ! ಪರಮೇಶ್ವರ ಅಭವ, ಶಂಕರ, ಮೇಲಾಗಿ ನಿರ್ಮಾಯ! ಆದರೂ ಲೋಕ ಕಲ್ಯಾಣಕ್ಕಾಗಿ ತಾನು ಗೃಹಸ್ಥನಾಗ ಬಯಸಿ ಗಿರಿಜೆಯನ್ನು ಬೇಡುವ ವಿಷಯವನ್ನು ನಮಗೆ ತಿಳಿಸಿ, ನಿನ್ನೆಡೆಗೆ ಕಳುಹಿಸಿದ್ದಾನೆ" ಎಂದು ಆದರದಿಂದ ನುಡಿದರು. ೨೫. ಚಂದ್ರಮೌಳಿಯೂ ನಿರಾಮಯನೂ ಲೋಕವಂದ್ಯನೂ ನಿತ್ಯ-ನಿರಾಮಯನೂ ಆದ ಆತನಿಗೆ ಪ್ರಪಂಚಕ್ಕೇ ಭಾಗ್ಯವತಿಯೆನಿಸಿರುವ ಪಾರ್ವತಿಯನ್ನು ಬೇಡಲು ಬಂದಿದ್ದೇವೆ. ೨೬. ಆದ್ದರಿಂದ ಎಲೈ ಗಿರಿರಾಜ, ನೀನು ನಮಿಸುವರ ನೇತ್ರವೆಂಬ ನೈದಿಲೆಗಳಿಗೆ ಚಂದ್ರನಂತಿರುವ, ಪ್ರಮಥಗಣವರರ ನೇತ್ರ ಚಕೋರಗಳಿಗೆ ಚಂದ್ರನಂತಿರುವ ಚಂದ್ರಶೇಖರನಿಗೆ ಚಂದ್ರಮುಖಿ ಶಿವೆಯನ್ನು ಭಕ್ತಿಯಿಂದ ದಾನಮಾಡು. ವ॥ ಎಂದು ನುಡಿದ ಸಪ್ತಋಷಿಗಳ ಮಾತು ಗಿರಿರಾಜನಿಗೆ ಕರ್ಣರಸಾಯನದಂತಿತ್ತು. ಅದನ್ನು ಕೇಳಿದ ಹಿಮವಂತನಿಗೆ ಮೈ ರೋಮಾಂಚಿತ ವಾಯಿತು. ಮನಸ್ಸು ಅರಳಿತು, ತನಗೇ ಒಂದು ಬಗೆ ಅಭಿಮಾನವೆನಿಸಿತು, ಸಂತೋಷಾತಿರೇಕದಿಂದ ಆತ ಹಿಗ್ಗಿದನು, ನಲ್ಮೆಯಿಂದ ಹೀಗೆಂದನು - "ಸ್ವಾಮಿ, ಮೇಘೋದಯವಾಗುವುದು ನವಿಲಿಗೆ ಸಹಿಸದಾದೀತೆ! ವಸಂತನು ಬರುವುದು ನವಉದ್ಯಾನಕ್ಕೆ ಆಗದೆ? ಚಂದ್ರನುದಿಸುವುದು ಚಕೋರಿಗೆ ತೊಂದರೆಯಾದೀತೆ?

ಚಾದಗೆಗೆ ಭಾರಮೆ ಶಿವನ ಕರುಣಮೆನಗಿದಿರ್ವರೆ ವಿಚಾರಮೆ ಬರ್ದುಂಕಿದೆಂ ಬರ್ದುಂಕಿದೆನೆನ್ನ ಭಾಗ್ಯದ ಬೆಳೆ ತಳಿರ್ತುದು ಎನ್ನ ಪುಣ್ಯಲತೆ ಪೂತುದೆನ್ನ ಕುಲಕಲ್ಪವೃಕ್ಷಂ ಫಲಿತಮಾದುದಲ್ಲದೆಯುಂ ರತ್ನಕ್ಕೆ ಕಾಂತಿಯೆರವೆ ಚಂದ್ರಂಗೆ ಬೆಳ್ದಿಂಗಳುಪಚಾರಮೆ ತರಣಿಗೆ ಕಿರಣಂಗಳ್ ಸಾಧಾರಣಮೆ ಕುಸುಮಕ್ಕೆ ಪರಿಮಳಂ ಪಡಿಸಣಮೆ ಅಮೃತಕ್ಕೆ ಸ್ಥಾದು ಸಂಕಲ್ಪಮೆ ಶರ್ವಂಗೆ ಪಾರ್ವತಿಯೆರವೆ ಪನ್ನಗಾಭರಣನೆನ್ನಂ ಬೇಡಲ್ವೇಳ್ವುದೆ ಸುರುಚಿಯಿಂ ಸಾಂಗೀಕಾರದಿಂ ಕಾಮದಿಂ ಪ್ರೇಮದಿಂ ನಿಷ್ಠೆಯಿಂ ನೆಟ್ಟನೆ ಕೊಟ್ಟೆಂ ಕೊಟ್ಟೆನೆರಡಿಲ್ದೆಂದು ಸತ್ಯವಚನಮಂ ಸಂತೋಷದಿಂ ನುಡಿದು ಸಪ್ತಋಷಿಗಳ ಚರಣಕ್ಕೆ ಮತ್ತೆ ಮತ್ತೆಱಗುತ್ತೆ ಅವರಂ ಹರಿಸದಿಂ ಕಳುಹಿ ಗಿರಿರಾಜಂ ಮಹೋತ್ಸಾಹದಿಂ ಮಹಾವಿವಾಹಮಂಟಪಾದಿ ಸಮಸ್ತವಸ್ತುಗಳಂ ವಿಸ್ತರಿಸುತಿರ್ದನದೆಂತೆಂದೊಡೆ.

ಚಂ॥ ಗಿರಿಪತಿ ಚಾರರಂ ಕಳುಪಿ ನಿರ್ಜರಲೋಕದ ವಿಶ್ವಕರ್ಮನಂ
ಬರಿಸಿ ನಯೋಕ್ತಿಯಿಂ ನುಡಿದು ಮನ್ನಿಸಿ ಬೇಳ್ದುದನಿತ್ತು ಚಂದ್ರಶೇ ।
ಖರನ ಮದೀಯಪುತ್ರಿಯ ವಿವಾಹಶುಭೋಚಿತಮಂಟಪಾದಿ ಭಾ
ಸುರವರಚಿತ್ರಪತ್ರಕುಳಮಂ ನೆಱೆ ನಿರ್ಮಿಪುದಿಂದೆ ಬೇಗದಿಂ ॥ ೨೭

ಕಂ॥ ಎನೆ ನಲಿದು ವಿಶ್ವಕರ್ಮಂ
ನೆನೆಯದ ಮುನ್ನಂ ಸಮುದ್ರಮುದ್ಯಿತವಿಶ್ವಾ ।
ವನಿಪರಿಗತವಿಭವಾಸ್ಪದ
ಘನಮಂಟಪಮೆಸೆದು ಮುಂದೆ ತೋಜೆತ್ತಾಗಳ್ ॥ ೨೮

ಸೂರ್ಯನು ಮೇಲೇರುವುದು ಚಕ್ರವಾಕ ದಂಪತಿಗಳಿಗೆ ವಿರೋಧವಾದೀತೆ! ಮುಂಗಾರು ಬರುವುದು ಚಾತಕಪಕ್ಷಿಗೆ ಹೊರೆಯಾದೀತೆ! ಶಿವನ ಕೃಪೆಯೇ ನನಗೆ ಅಭಿಮುಖವಾಗಿರುವಾಗ ವಿಚಾರಮಾಡುವುದು ತಾನೆ ಏನಿದೆ? ನನ್ನ ಜನ್ಮ ಕೃತಕೃತ್ಯವಾಯಿತು. ನನ್ನ ಭಾಗ್ಯ ಫಲಿಸಿತು, ನನ್ನ ಪುಣ್ಯಲತೆ ಕುಸುಮಿಸಿತು, ಕುಲಕಲ್ಪ ವೃಕ್ಷವು ಫಲಿಸಿತು, ಮೇಲಾಗಿ ರತ್ನಕ್ಕೆ ಅದರ ಕಾಂತಿಯು ಎರವೆ? ಚಂದ್ರನಿಗೆ ಬೆಳದಿಂಗಳು ಉಪಚಾರವಾದೀತೆ! ರವಿಗೆ ಕಿರಣಗಳು ಸಾಧಾರಣವೇ ಅಲ್ಲವೇ ಹೂವಿಗೆ ಸುವಾಸನೆಯು ಅಮೃತಕ್ಕೆ ಮಾಧುರ್ಯವು ಸಂಕಲ್ಪವೆ? ಶರ್ವನಿಗೆ ಪಾರ್ವತಿಯು ಎರವೆ? ನಾಗಾಭರಣನು ನನ್ನನ್ನು ಬೇಡುವುದೆಂದರೇನು? ಆತನಿಗೆ ಸಾಕಾರದಿಂದ, ಕಾಮದಿಂದ, ಪ್ರೇಮದಿಂದ, ನಿಷ್ಠೆಯಿಂದ ಇಗೊ ದಾನಮಾಡಿದ್ದೇನೆ, ಈ ಮಾತಿಗೆ ಎರಡಿಲ್ಲ! ಇದು ನಿಜ! ಎಂದು ಸಂತೋಷದಿಂದ ನುಡಿದ ಹಿಮವಂತ ಸಪ್ತಋಷಿಗಳ ಪಾದಗಳಿಗೆ ಮತ್ತೆ ಮತ್ತೆ ವಂದಿಸಿದನು. ಅವರನ್ನು ಹರ್ಷದಿಂದ ಕಳುಹಿಸಿದನು. ಅನಂತರ ಮಹೋತ್ಸಾಹದಿಂದ ಮದುವೆಯ ಮಂಟಪ ಮುಂತಾದ ಪೂರ್ವಸಿದ್ಧತೆಗಳನ್ನು ಕೈಗೊಂಡನು. ೨೭. ಗಿರಿರಾಜ ತನ್ನ ಚಾರರನ್ನು ಕಳುಹಿಸಿ ದೇವಲೋಕದ ವಿಶ್ವಕರ್ಮನನ್ನು ಬರಮಾಡಿಕೊಂಡನು; ಅವನನ್ನು ಮೃದುನುಡಿಗಳಿಂದ ಮನ್ನಿಸಿದನು. ಅವನಿಗೆ ಕೇಳಿದುದನ್ನು ಕೊಟ್ಟು "ಪರಮೇಶ್ವರ ಮತ್ತು ನನ್ನ ಪುತ್ರಿಯ ಮದುವೆಗೆ ಅರ್ಹವಾದ ವಿವಾಹಮಂಟಪ ಮುಂತಾದ ಎಲ್ಲ ಶೃಂಗಾರವನ್ನು ರಚಿಸಬೇಕು ಎಂದು ಸೂಚಿಸಿದನು. ೨೮. ಅದನ್ನು ಕೇಳಿ ವಿಶ್ವಕರ್ಮನಿಗೆ ಆದ ಸಂತೋಷಕ್ಕೆ ಪಾರವಿಲ್ಲ; ಆತ ನೆನೆಯದ ಮೊದಲೇ ಆತನ ಸಂಕಲ್ಪ ಮಾತ್ರದಿಂದ

ವ॥ ಅದೆಂತೆಂದೊಡೆ – ಮಹಾಮಂಟಪಂ ನಿರ್ಮಳ ಚಂದ್ರಕಾಂತ ಶಿಲಾತಳದೊಳ್ ಮಾಪ್ಪೊಳೆದು ಶಿವನ ವಿವಾಹಕ್ಕೆ ನಾಗಲೋಕದಿಂ ನಾಗರ್ಕಳ್ ಕಳುಹಿದ ಅಭಿನವಮಂಟಪಮಂ ಪಡೆದಂತಿರ್ದುದು ಮತ್ತಮದಲ್ಲದೆಯುಂ ಉದಯಿಸುವ ತರುಣ ತರಣಿಯ ಕಿರಣಸಹಸ್ರಂ ಗಗನಮಂ ಹೊತ್ತೆತ್ತುವಂತೆ ಜಗದಗಲಕ್ಕೆ ಸಾಲ್ದೆಗೆದು ನೀಳ್ದು ನಿಱಿಸಿದ ಮಾಣಿಕ್ಯಸ್ತಂಭ ಕೋಟಗಳೆಳಗೆಂಪುಗಳೊಪ್ಪುವ ಚಪ್ಪರದ ಮೇಲ್ಕಟ್ಟಂ ಹೊತ್ತೆತ್ತುತಿರ್ದುವು ಮತ್ತಲ್ಲಲ್ಲಿ ಕಟ್ಟಿದ ಪುಲ್ಲಿಯ ಪಟ್ಟಗಳ ಮೇಲೆ ಬಳಸಿದ ಮೇಘವರ್ಣ್ಣಗೆಯ ವಿೞಾಸದ ಕಣಾಯಿಯ ಸುಱ್ಪವಿಯನೀವ ಪಚ್ಚೆಯ ಪಟ್ಟಿಗಳ ಚೂಳಿಕೆಯ ಕಾಳಿಕೆಯ ನುಣ್ಗೆಳಗನೀವ ಪೊಂಬಟ್ಟೆಯ ಬಳ್ಪಿವೆಳಗಂ ಕಱಿವ ಬೆಳ್ಳುಂಬಟ್ಟೆಯು ನೀಲದ ನಿರ್ಮಲೋದಕದ ಪಚ್ಚೆಯ ಪಾವಸೆಯ ಪುಷ್ಕರಾಗದ ಕರ್ಣಿಕೆಯ ಪದ್ಮರಾಗದೆಸಳ್ಗಳ ಪಱಿಮೆಗಳಿಱಿಗಲವ್ವಲಿಸುವ ಜಳಜವೀಥಿಯ ಕೀಲಿಸಿದ ಮುತ್ತಿನ ಸೂಸಕದ ಕೆಯ್ಗೊಳಿಸಿದ ಗೋಮೇಧಿಕಸ್ತೋಮದ ಪವಳದ ಪಜ್ಜೆಯ ಪಜ್ವಳಿಪ ವಜ್ರದ ಕೂಡಿದ ವೈಢೂರ್ಯದ ರಂಜಿಸುವ ಲತಾವಳಿಯ ಪಸರಿಸಿದ ಪತ್ರಾವಳಿಯ ಪೊಣ್ಮಿದ ಪುಷ್ಪಾವಳಿಯ ಹವಣಿಸಿದ ಹಂಸಾವಳಿಯ ಸಕಲಸೌಂದರ್ಯಮನೊಳಕೊಂಡ ಮೇಲ್ಕಟ್ಟಿನ ಬೆರಕೆವೆಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವಿ ಬಿಡದೆ ಸುಳಿವ ಉತ್ಸಾಹಪುರುಷರಿಂ ನಡೆಪಾಡುವ ಲಲನಾವಿಭ್ರಮದಿ ಪ್ರಭಾಜಳಧಿ ತೆರೆಮಸಗಿದಂತಿರ್ದುದು ಮತ್ತಂ ಮುಗಿಲನಳ್ಕಿಪೆವ ತೋರಣಸ್ತಂಭಂಗಳೊಳ್ ತೆತ್ತಿಸಿದ ಜಂತ್ರದ ಹಂಸಕೀರಮಯೂರ ಪಾರಾವತ ವಾರಣಂಗಳಿಂ ನವರತ್ನರಂಜಿತಮಾಗಿ ರವಿಮಂಡಲಮಂ ಮುಂಡಾಡುವ ಸುವರ್ಣಕಳಶ ದರ್ಪಣಾಳಿಗಳಿಂ ರಯ್ಯಂಬಡೆದು ಸಕಳಜಗಕ್ಕೆ ತನ್ನ ಕಾಂತಿಯೆ ಕಣ್ಕೆಱವಿಯೆಂಬಂತಿರ್ದ ಮಹಾತೋರಣ

ಲೋಕ ವೈಭವಕ್ಕೆ ಆಸ್ಪದವಾದ ಶ್ರೇಷ್ಠಮಂಟಪವು ಸಿದ್ಧವಾಗಿ ಮುಂದೆ ಕಂಡಿತು. ವ॥ ವಿವಾಹಮಂಟಪವು ನಿರ್ಮಲ ಚಂದ್ರಕಾಂತಶಿಲೆಯ ಮೇಲೆ ಪ್ರತಿಬಿಂಬಿಸಿತ್ತು. ಶಿವನ ವಿವಾಹಕ್ಕಾಗಿ ನಾಗಲೋಕದಿಂದ ನಾಗರು ಕಳುಹಿಸಿದ ಅಭಿನವಮಂಟಪದಂತೆ ಇತ್ತು. ಅಲ್ಲದೆ ಉದಯಿಸುವ ತರುಣ ರವಿಯ ಸಾವಿರ ಕಿರಣಗಳೂ ಗಗನವನ್ನು ಹೊತ್ತು ಎತ್ತುವಂತೆ ಜಗದ ಅಗಲಕ್ಕೆ ಸಾಲು ತೆಗೆದು ನೀಳ್ದು ನಿರಿಸಿದ ಮಾಣಿಕ್ಯ ಸ್ತಂಭಗಳ ತುದಿಗಳ ಎಳಗೆಂಪಿನಿಂದ ಒಪ್ಪುವ ಚಪ್ಪರದ ಮೇಲ್ಕಟ್ಟನ್ನು ಹೊತ್ತು ಎತ್ತುತ್ತಿದ್ದವು. ಮತ್ತು ಅಲ್ಲಲ್ಲಿ ಕಟ್ಟಿದ ಪುಲ್ಲಿಯ ಪಟ್ಟಿಗಳ ಮೇಲೆ ಬಳಸಿದ ಮೇಘವರ್ಣ್ಣಗೆಯ ವಿಳಾಸದ ಕಣಾಯಿಯ, ಒಳ್ಳೆಕಾಂತಿಗುಡುವ ಪಚ್ಚೆಯ ಪಟ್ಟಿಗಳ, ದೀಪದ ಕುಡಿ (ಚೂಳಿಕೆ)ಯ ಕಾಳಿಕೆಯ ನುಣ್ಣನೆಯ ಬೆಳಕನ್ನು ಕೊಡುವ ಹೊಂಬಟ್ಟೆಯ ಬೆಳಕನ್ನು ಕೊಡುವ ಬಿಳಿಬಟ್ಟೆಯ ನೀಲಿ ನಿರ್ಮಲೋದಕವುಳ್ಳ ಪಚ್ಚೆಯ ಹಾವಸೆಯುಳ್ಳ ಪುಷ್ಕರಾಗದ ಕರ್ಣಿಕೆ, ಪದ್ಮರಾಗದ ಎಸಳುಗಳ, ದುಂಬಿಗಳು ಎರಗಲು ಅವ್ವಳಿಸುವ ಜಲಜವೀಥಿಗಳು, ಅಲ್ಲಿ ಕೀಲಿಸಿದ ಮುತ್ತಿನ ಸೂಸಕ, ಕೆಯ್ಗೊಳಿಸಿದ ಗೋಮೇಧಿಕ ಸ್ತೋಮ, ಹವಳದ ಪಂಕ್ತಿ, ಪ್ರಜ್ವಲಿಸುವ ವಜ್ರಗಳು, ವೈಢೂರ್ಯಗಳು, ರಂಜಿಸುವ ಲತೆಗಳು, ಹರಡಿದ ಎಲೆಗಳು, ಪೂತ ಹೂವುಗಳು, ಹವಣಿಸಿದ ಹಂಸಗಳು, ಸಕಲ ಸೌಂದರ್ಯವನ್ನು ಒಳಕೊಂಡ ಮೇಲ್ಕಟ್ಟಿನ ಬೆರಕೆಯ ಬೆಳಗು, ಅಂಥ ಮಂಟಪದಲ್ಲಿ ಒಳಗೂ ಹೊರಗೂ ಹರಡಿ ಸುಳಿವ ಉತ್ಸಾಹಿಗಳಾದ ಪುರುಷರಿಂದಲೂ, ಚನ್ನಾಗಿ ಹಾಡುವ ಲಲನೆಯರ ವಿಲಾಸಗಳಿಂದಲೂ, ಪ್ರಭೆಯ ಕಡಲಿನ

ದೊಳಮೆಯ್ಯೊಳ್ ನೆರೆದು ಕುಳ್ಳಿರ್ದ ಸೂರ್ಯವಂಶದ ಸುಕುಮಾರರಿಂ ಸೋಮವಂಶದ ಭೂಮಿಪರಿಂ ರಾಜಿಸುವ ರಾಜಪುತ್ರರಿಂ ಮಂಡಳಿಕರ ತಂಡದಿಂ ಸಾಮಂತರ ಶಿಷ್ಯರ ಮಂತಣದಿಂ ಸೇವ್ಯರ ತಿಂತಿಣಿಯಿಂ ಮುತ್ತೆಯ್ದೆಯರೊತ್ತೊತ್ತೆಯಿಂ ಸುವಾಸಿನಿಯರ ಸಂದಣಿಯಿಂ ಸಕಳಾಗಮ ಕೋವಿದರಿಂ ಸರ್ವಶಾಸ್ತ್ರಪ್ರವೀಣರಿಂ ಸಹಸ್ರವೇದಿಗಳಿಂ ಗಳಿಗೆವಟ್ಟಲಂ ಪರಿವೇಷ್ಟಿಸಿರ್ದ ನಕ್ಷತ್ರಪಾಠಕರಿಂ ಏಕಾದಶಕ್ಕೆ ಬಂದ ನವಗ್ರಹಂಗಳಿಂ ತೆಕ್ಕನೆ ತೀವಿರ್ದ ಮಹಾಮಂಟಪಮತಿ ವಿಸ್ತಾರಮನತಿಗಂಭೀರತೆಯನತಿಸೌಖ್ಯಮನತ್ಯಾಶ್ಚರ್ಯಮನುರುತರಸಂಪದಮನತಿಸೌಂದರ್ಯ ಮನತಿಪ್ರಸನ್ನತೆಯನೊಳಕೊಂಡು ವರನ ಬರವಂ ಬಯಸುತಿರ್ದುದಾ ಪ್ರಸ್ತಾವದೊಳ್,

ಕಂ॥ ಒಳಗೆ ಸುವಾಸಿನಿಯರ್ ಗಿರಿ –
ಕುಳರಾಜತನೂಜಿಗೊಪ್ಪೆ ಸಿಂಗರಮಂ ಕೆಯ್ ।
ಕೊಳಿಸುತ್ತಿರ್ದರ್ ವರಶಶಿ
ಕಳೆಗೆ ಸುಧಾಕಿರಣಜಾಲಮಂ ತುಡಿಸುವವೊಲ್ ॥ ೨೯

ವ॥ ಆದೆಂತೆಂದೊಡೆ,

ಕಂ॥ ಭದ್ರಾಸನೆಯರ್ ನವಕುಸು
ಮದ್ರವಯುತಜಲದೆ ಮಜ್ಜನಕ್ಕೆಱಿಯುತೆ ಕ ।
ಲ್ಪದ್ರುಮಶಾಖಾನ್ವಿತೆಗೆ ಹ
ರಿದ್ರಾಪರಿಮಳಮನಂಗದೊಳ್ ಸಮನಿಸಿದರ್ ॥ ೩೦

ತೆರೆಮಸಗುವಂತೆ ಇತ್ತು ಆ ಮಂಟಪ. ಮತ್ತು ಮುಗಿಲನ್ನು ಇರಿಯುತ್ತಿದ್ದ ತೋರಣಸ್ತಂಭಗಳು, ಅಲ್ಲಿ ಕೆತ್ತಿಸಿದ ಹಂಸಕೀರ, ಮಯೂರ, ಪಾರಿವಾಳ ಮತ್ತು ಆನೆಗಳಿಂದಲೂ, ನವರತ್ನಖಚಿತವಾಗಿ ರವಿಮಂಡಲವನ್ನು ಮುಂಡಾಡುವ ಸುವರ್ಣ ಕಳಶದರ್ಪಣಗಳಿಂದಲೂ, ವೈಭವದಿಂದ ಕೂಡಿದ ನಿಖಿಲ ಜಗತ್ತಿಗೆ ತನ್ನ ಕಾಂತಿಯೆ ಕಣ್ತೆರವು ಎಂಬಂತೆ ಇದ್ದ ಮಹಾತೋರಣಗಳ ಒಳಭಾಗದಲ್ಲಿ ನೆರೆದು ಕುಳಿತಿದ್ದ ಸೂರ್ಯವಂಶದ ರಾಜಕುಮಾರರಿಂದಲೂ, ಚಂದ್ರವಂಶದ ರಾಜರಿಂದಲೂ, ರಾಜಿಸುವ ರಾಜಪುತ್ರರಿಂದಲೂ ಸಾಮಂತರಾಜರ ತಂಡಗಳಿಂದಲೂ, ಮಾಂಡಲಿಕ ರಿಂದಲೂ, ಶಿಷ್ಯರ ಆಲೋಚನೆಗಳಿಂದಲೂ, ಸೇವ್ಯರ ಸಮೂಹದಿಂದಲೂ, ಮುತ್ತೈದೆ ಯರ ಗುಂಪುಗಳಿಂದಲೂ, ಸುವಾಸಿನಿಯರ ಸಂದಣಿಯಿಂದಲೂ, ಸಕಲ ಆಗಮ ಪ್ರವೀಣರಿಂದಲೂ, ಸಮಸ್ತ ಶಾಸ್ತ್ರಪರಿಣತರಿಂದಲೂ, ಸಹಸ್ರವೇದಿಗಳಿಂದಲೂ, (ಕಾಲವನ್ನು ಸೂಚಿಸುವ ಬಟ್ಟಲು) ಗಳಿಗೆವಟ್ಟಲನ್ನು ಸುತ್ತುವರಿದಿರುವ ಜ್ಯೋತಿಷ್ಯ ರಿಂದಲೂ ಏಕಾದಶಕ್ಕೆ (೧೧ನೆಯ) ಬಂದ ನವಗ್ರಹಗಳಿಂದಲೂ, ತುಂಬಿದ್ದ ಮಹಾ ಮಂಟಪವು ಅತಿ ವಿಸ್ತಾರವಾಗಿಯೂ, ಅತಿಗಂಭೀರವಾಗಿಯೂ, ಅತಿಸೌಖ್ಯವನ್ನು, ಅತ್ಯಾಶ್ಚರ್ಯವನ್ನು, ಅಧಿಕ ಸಂಪತ್ತನ್ನು, ಅತಿಸೌಂದರ್ಯವನ್ನು ಅತಿಪ್ರಸನ್ನತೆಯನ್ನು, ಒಳಕೊಂಡು ವರನ ಬರವನ್ನು ಬಯಸುತ್ತಿದ್ದ ಸಮಯದಲ್ಲಿ, ೨೯. ಮನೆಯ ಒಳಗೆ ಮುತ್ತೈದೆಯರು ಅಗಜೆಗೆ ಅಲಂಕರಿಸುತ್ತಿದ್ದರು. ಅದು ಶ್ರೇಷ್ಠವಾದ ಶಶಿಕಳೆಗೆ ಅಮೃತ ಕಿರಣಜಾಲವನ್ನು ತೊಡಿಸುವಂತೆ ಇತ್ತು. ೩೦. ಮಂಗಳಮುಖಿಯರು ಅಗಜೆಗೆ ನವ ಕುಸುಮದ್ರವಯುತಜಲದಿಂದ ಮಜ್ಜನ ಮಾಡಿಸಿದರು. ಕಲ್ಪದ್ರುಮಶಾಖಾನ್ವಿತೆಯಾದ

ನವಲತೆಯಂ ಕೌಮುದಿಯಿಂ
ದವೆ ಬಾಸಣಿಪಂತೆ ಕೂಡೆ ಧವಳದ್ಯುತಿಯಂ ।
ತವೆ ಪಸರಿಪ ದಿವ್ಯದುಕೂ
ಲವನುಡಿಸಿದರಗತನೂಜೆಗಂಗನೆಯರ್ಕಳ್ ॥ ೩೧

ಕಂ॥ ಸರಸಿಜದೆಸಳೊಳ್ ತರುಣಿಯ
ತರುಣಾರುಣಕಿರಣವಲಯಮಂ ಕೆಯ್ಗೊಳಿಪಂ ।
ತಿರೆ ಚಕ್ರವಾಕಕುಚಿಯರ್
ಗಿರಿಜೆಗೆ ನವರತ್ನಪಾದಮುದ್ರಿಕೆಯಿತ್ತರ್ ॥ ೩೨

ವಾರಿರುಹನಾಳಮಂ ಕ್ರೇಂ
ಕಾರರವಂ ಸಹಿತವಂಚೆ ಮುತ್ತಿದುವೆನೆ ಮಂ ।
ಜೀರವನಳವಡಿಸಿದರಂ
ಭೋರುಹನೇತ್ರೆಗೆ ಭವಾನಿಗಾ ಭಾಮಿನಿಯರ್ ॥ ೩೩

ಬಾಹುಲತಾಪಲ್ಲವಸಂ
ದೋಹದೊಳಗೆ ಕುಸುಮಮಂ ತೊಡರ್ಚುವ ತೆಱದಿಂ ।
ದಾಹಾನಿಜಕರಶಾಖಾ
ವ್ಯೂಹಕ್ಕತಿಭದ್ರಮುದ್ರಿಕೆಗಳಂ ತೊಟ್ಟರ್ ॥ ೩೪

ಪುರಹರನ ರಾಜಕಟಕಂ
ಗಿರಿಜೆಯ ಕೆಯ್ಯತ್ತಿತೆಂಬುದಂ ಸೂಚಿಪವೋಲ್ ।
ವರಹಸ್ತದಲ್ಲಿ ರತ್ನೋ
ತ್ಕರವಿಳಸಿತಕಟಕಯುಗಳಮಂ ರಂಜಿಸಿದರ್ ॥ ೩೫

ಅವಳ ಅಂಗಗಳಿಗೆ ಹರಿದ್ರಾಪರಿಮಳವನ್ನು ಸಮನಿಸಿದರು. ೩೧. ಬೆಳದಿಂಗಳಿನಿಂದ ನವಲತೆಯನ್ನು ಹೊದಿಸುವಂತೆ ಶುಭ್ರವಾದ ದಿವ್ಯದುಕೂಲವನ್ನು ಅಗತನೂಜೆಗೆ ಅಂಗನೆಯರು ಉಡಿಸಿದರು. ೩೨. ಕಮಲದ ಎಸಳಿನಿಂದ ತರುಣಿಯ ಅರುಣಕಿರಣ ವಲಯವನ್ನು ಅಲಂಕಾರಮಾಡುವಂತೆ ಚಕ್ರವಾಕಕುಚಿಯರು ಗಿರಿಜೆಗೆ ನವರತ್ನ ಖಚಿತಪಾದಮುದ್ರಿಕೆ ತೊಡಿಸಿದರು. ೩೩. ಕಮಲನಾಳವನ್ನು ಕ್ರೇಂಕಾರಮಾಡುತ್ತಿರುವ ಹಂಸೆಗಳು ಮುತ್ತಿದಂತೆ ಭಾಮಿನಿಯರು ಕಮಲನೇತ್ರೆಯಾದ ಪಾರ್ವತಿಗೆ (ನೂಪುರ) ಮಂಜೀರವನ್ನು ಅಳವಡಿಸಿದರು. ೩೪. ಬಾಹುಲತೆ ಪಲ್ಲವ ಸಂದೋಹದಲ್ಲಿ ಕುಸುಮಗಳನ್ನು ಅಲಂಕರಿಸುವಂತೆ ಅಗಜೆಯ ಕರಶಾಖಾವ್ಯೂಹಕ್ಕೆ ಉಚಿತವಾದ ಭದ್ರಮುದ್ರಿಕೆಗಳನ್ನು ತೊಡಿಸಿದರು. ೩೫. ಪರಶಿವನ ರಾಜಕಟಕವು ಗಿರಿಜೆಯ ಕೈಸೇರಿತು ಎಂಬುದನ್ನು ಸೂಚಿಸುವಂತೆ ಅವಳ ಶ್ರೇಷ್ಠವಾದ ಹಸ್ತದಲ್ಲಿ ರತ್ನಖಚಿತವಾದ

ಒದವಿದ ನವ್ಯಲತಾಮ
ಧ್ಯದ ಕುಸುಮಾಳಿಯೊಳೆ ಮೊರೆವ ಮರಿದುಂಬಿಗಳಂ ।
ಮುದದಿಂ ಕೀಲಿಪವೋಲ್ ನೀ
ಲದ ರವೆಯದ ಬಾಹುಪೂರಕಂಗಳನಿತ್ತರ್ ॥ ೩೬

ಕಂ॥ ಸುತ್ತದೆ ನೆಲೆಗೊಂಡಂ ಪರಿ
ವೃತ್ತೋನ್ನತಚಂದ್ರನಗಜೆಯಾಸ್ಯದೊಳಿಂದು ।
ನ್ನತ್ತತೆಯೊಳ್ ತಾರೆಗಳ್
ಸುತ್ತಿದುವೆನೆ ತೋರಹಾರಮಂ ರಂಜಿಸಿದರ್ ॥ ೩೭

ಭಾಳಸ್ಥಳದೊಳ್ ಕಣ್ ಗಡ
ಶೂಳಿಗೆ ಪಾರ್ವತಿಗೆ ಕೊರಲೊಳಿಗೆದುದು ನಯನಂ ।
ಕೇಳಿಂಬಾಳಾಪಂ ಏಗೆ
ಮೇಳೈಸಿದರೈರದಾಳಿಯಂ ಬಾಳಕಿಯರ್ ॥ ೩೮

ಜಳಜಾನನೆಯರ್ ಏನಯೋ
ಜ್ವಳಮುಖಿಯರ್ ಸಖಿಯರೊಲ್ದು ಗಿರಿಜಾನನದೊಳ್ ।
ನಳನಳಿಪಚ್ಚಮುಗುಳ್ ನಗೆ
ಮೊಳೆತುದೆನಲ್ ಮೆಱೆವ ಮೂಗುತಿಯನೊಸೆದಿತ್ತರ್ ॥ ೩೯

ಮಗಧರಬಿಂಬಂಗಳವೆರ
ಡಗಲದೆ ಕೊಂಡೆಸೆಯುತಿರ್ದಪುವು ಸರಸಿಜದೊಂ ।
ದಗಣಿತ ಕರ್ಕಶಮನೆನಲ್
ನಗಪುತ್ರಿಗೆ ನೀಮುತ್ತಿನೋಲೆಯನಿತ್ತರ್ ॥ ೪೦

ಬಳೆಗಳನ್ನು ತೊಡಿಸಿದರು. ೩೬. ನೂತನಲತೆಗಳು, ಅವುಗಳ ಮಧ್ಯೆ ಕುಸುಮಾಳಿಗಳು, ಅವುಗಳಲ್ಲಿ ಮೊರೆವ ದುಂಬಿಗಳನ್ನು ಅವುಗಳಲ್ಲಿಯೇ ಕೀಲಿಸಿದಂತೆ ನೀಲದ ಬೆಳ್ಳಿಯ ಭುಜಕೀರ್ತಿಗಳನ್ನು ತೊಡಿಸಿದರು. ೩೭. ಸಖಿಯರು ಅಗಜೆಗೆ ದಪ್ಪಮುತ್ತುಗಳ ಹಾರವನ್ನು ಅಲಂಕರಿಸಿದರು. ಅದನ್ನು ನೋಡಿದರೆ ಪೂರ್ಣಚಂದ್ರನು ಸುತ್ತುವುದನ್ನು ಬಿಟ್ಟು ಅಗಜೆಯ ಮುಖದಲ್ಲಿ ಬಂದು ನೆಲೆಸಿದನೆಂಬ ಉನ್ನತ್ತತೆಯಲ್ಲಿ ತಾರೆಗಳು ಅವಳ ಮುಖವನ್ನು ಸುತ್ತುವರಿದವು ಎಂಬಂತಿತ್ತು. ೩೮. ಗಿರಿಜೆಯ ಸಖಿಯರು ಐರದಾಳಿಯನ್ನು ಅವಳ ಕೊರಳಿಗೆ ಸಿಂಗರಿಸಿದರು. ಶೂಲಿಗೆ ಫಾಲ(ಹಣೆ)ದಲ್ಲಿ ಕಣ್ಣು, ಪಾರ್ವತಿಗೆ ಕೊರಳಲ್ಲಿ ಕಣ್ಣು ಮೂಡಿದೆ ಎಂಬಂತಿತ್ತು! ೩೯. ಕಮಲಮುಖಿಯರಾದ ಸಖಿಯರು ಗಿರಿಜೆಗೆ ಮೂಗುತಿಯನ್ನು ತೊಡಿಸಿದರು. ಅದು ಗಿರಿಜೆಯ ಮುಖದಲ್ಲಿ ನಳನಳಿಸುವ ಅಚ್ಚಮೊಗ್ಗು ಮೂಡಿದೆಯೊ ಎಂಬಂತಿತ್ತು. ೪೦. ಗಿರಿಜೆಗೆ ಎರಡು ಮುತ್ತಿನ ಓಲೆಗಳನ್ನು ತೊಡಿಸಿದರು, ಅವು ಎರಡು ಚಂದ್ರಬಿಂಬಗಳು ಅಗಲದೆ ಕಮಲದ (ಮುಖ) ಕರ್ಕಶತೆಯನ್ನು ಹೊಂದಿ ಬೆಳಗುತ್ತಿವೆಯೊ ಎಂಬಂತೆ ಇತ್ತು.

ಬಿಂಬಾಧರೆಯರ್ ಬಂದಲ
ರಂಬಂ ಕತ್ತುರಿಯ ಸಾಣೆಯಿಕ್ಕುವ ತೆಱದಿಂ ।
ದಂಬುಜದಳ ಸದೃಶಾಂಬಕ
ದಂಬಿಕೆಗಂಜನಮನೆಚ್ಚದರ್ ಸಂತಸದಿಂ ॥ ೪೧

ಸಸಿಯಂ ತಳೆವೊಡೆ ಮಕುಟದೊ
ಳಸಮಾಕ್ಷಂ ಗಿರಿಜೆ ಪುರುಡಿಸುತ್ತುಂ ತಳೆದಳ್ ।
ನೊಸಲೊಳ್ ಸಸಿಯಂ ತಾನೆನೆ
ಭಸಿತದ ತಿಲಕಮನಲಂಕರಿಸಿದರ್ ಸತಿಯರ್ ॥ ೪೨

ನೀಳಾಭ್ರಮನಂಭಃಕಣ
ಜಾಳದೆ ಬಾಸಣಿಸುವಂತೆ ಶಶಿಮುಖಿಯರ್ ಸ ।
ಲ್ಲೀಲೆಯೊಳಚಲತನೂಜೆಗೆ
ಬಾಳೆಗೆ ಸೂಸಕಮನಿಕ್ಕಿದರ್ ಮುದದಿಂದಂ ॥ ೪೩

ಸುರುಚಿರನೀಲಾಂಬುದದೊಳ್
ಸುರಧನುವಂ ನಿರ್ಮಿಪಂದದಿಂ ಪೀನಪಯೋ ।
ಧರೆಯರ್ ಶೈಲತನೂಜೆಗೆ
ವರರತ್ನದ ದಂಡೆದೊಂಡಿಲಂ ಸಯ್ತಟ್ಟರ್ ॥ ೪೪

ವ॥ ಅಂತುಮಲ್ಲದೆಯುಂ,

ಕಂ॥ ಅಂಬಿಕೆಯ ಸುಧಾವಯವ ಕಂ
ದಂಬದ ಚಿಲ್ವಿಂಗೆ ದೃಷ್ಟಿಯಾಗದ ತೆಱದಿಂ ।
ಬಿಂಬಾಧರೆಯರ್ ತೊಡಸಿದ
ರೆಂಬಂತಿರೆ ಮೆಱೆದುವರರೆ ಭೂಷಣತತಿಗಳ್ ॥ ೪೫

೪೧. ಬಿಂಬಾಧರೆಯರು ಕಮಲಕ್ಕೆ ಸಮವಾದ ಅಂಬಿಕೆಯ ಕಣ್ಣಿಗೆ ಅಂಜನವಿಟ್ಟರು. ಇದು ಅಲರಂಬನಾದ ಮನ್ಮಥನೇ ಬಂದು ಕಸ್ತೂರಿಯ ಸಾಣೆಯಿಟ್ಟಂತೆ ಇತ್ತು. ೪೨. ಅಸಮಾಕ್ಷ ಶಿವನು ಮಕುಟದಲ್ಲಿ ಶಶಿಯನ್ನು ತಳೆದಿರುವುದನ್ನು ನೋಡಿ ಗಿರಿಜೆ ಸ್ಪರ್ಧಿಸಿ ತಾನೂ ನೊಸಲಲ್ಲಿ ಶಶಿಯನ್ನು ತಳೆದಿರುವಳೊ ಎಂಬಂತೆ ಸಖಿಯರು ಅವಳ ಹಣೆಯಲ್ಲಿ ಭಸಿತದ ತಿಲಕವಿಟ್ಟರು. ೪೩. ಗಿರಿಜೆಯನ್ನು ಶಶಿಮುಖಿಯರಾದ ಸಖಿಯರು ಅಗಜೆಗೆ ತಲೆ ಬಾಚಿ ಹೆಳಲು ಹಾಕಿ ಅದರ ತುದಿಗೆ ಗೊಂಡೆ ಹಾಕಿದರು. ಅದನ್ನು ನೋಡಿದರೆ ನೀಲಮೇಘವನ್ನು ಅಂಭಃಕಣಜಾಲ (ನೀರಿನ ತುಂತುರುಗಳು) ದಿಂದ ಹೊದಿಸಿದಂತೆ ಇತ್ತು. ೪೪. ಮನೋಹರವಾದ ನೀಲಮೇಘದಲ್ಲಿ ಕಾಮನ ಬಿಲ್ಲು ನಿರ್ಮಿಸುವಂತೆ ಪೀನಪಯೋಧರೆಯರಾದ ಸಖಿಯರು ಶೈಲಜೆಗೆ ರತ್ನಮಯವಾದ ದುಂಡುಹಾರವನ್ನು ಅಲಂಕರಿಸಿದರು. ೪೫. ತೊಂಡೆಹಣ್ಣುತುಟಿಯ ಸಖಿಯರು ಅಂಬಿಕೆಯ ಅಮೃತಮಯ ಅವಯವಗಳಿಗೆ ದೃಷ್ಟಿಯಾಗದಂತೆಯೋ

ವ॥ ಇಂತು ನನೆಗಣೆಯನರ್ಚಪಂತೆ ಚಂದ್ರಕಳೆಯಂ ದಳವೇಱೆದಂತೆ ಪುಣ್ಯಮಂ ಪುಟವಿಡುವಂತೆ ಶಂಕರನ ಪ್ರೇಮಮಂ ಸೀಮೆಗೊಳಿಸುವಂತೆ ಹರನ ಮನೋರಥಮಂ ಮದವೇಱೆಪಂತೆ ಪಾರ್ವತಿಗೆ ಸುವಾಸಿನಿಯರ್ ಸಿಂಗರಮಂ ಮಾಡಿ ತರುಣ-ತರುಣಿಯ ಕಿರಣಂಗಳ್ಗೋರನ್ನಮಪ್ಪಾ ರತಿಗಳನೆತ್ತಿಯೆತ್ತಿ ಪಿಂಗದೆ ಮಂಗಳೋನ್ನತಿಯಂ ಕೊಂಡಾಡುತ್ತುಮಿರೆಯಿರೆ ಅತ್ತಲ್ ಸಪ್ತಋಷಿಗಳಿಂ ಸಂತೋಷವಾರ್ತೆಯಂ ಶಂಕರಂ ಕೇಳ್ದು ಹರ್ಷಮಂ ತಾಳ್ದಂ,

ಕಂ॥ ಇತ್ತಲ್ ಕೈಲಾಸಾದ್ರಿಯೊ
ಳುತ್ತಮಗಣನಾಥರೊಳಗೆ ಮೆಱೆದಿರ್ದಂ ದೇ ।
ವೋತ್ತುಂಗಂ ಪುಳಕಿತನಾ
ಗುತ್ತುಂ ಮದುವಣಿಗತನಮನುಱೆ ನಟಿಯಿಸಿತುಂ ॥ ೪೬

ವ॥ ಆ ಪೊಸಮದವಣಿಗನಪ್ಪ ಪಶುಪತಿಯ ಸರ್ವಾವಯವಂಗಳಂ ಬಣ್ಣಿಸಲಳವಲ್ಲದೊಡಂ ಭಕ್ತಿಯಿಂ ಬಲ್ಲಂತೆ ಬಣ್ಣಿಪೆನದೆಂತೆಂದೊಡೆ,

ಕಂ॥ ಜಡೆಗಳೊ ಹೊಸಹೊಸಹವಳದ
ಕುಡಿಗಳೊ ನವಕಾಂತಿಜಳದ ಮಡುಗಳೊ ಚಿಲ್ವಿ ।
ರ್ಪೆಡೆಗಳೊ ಶಿವಶಿವ ಸುಕೃತದ
ಗುಡಿಗಳೊ ಮಹಿಮೆಗಳ ನಟ್ಟನಡುಗಳೊ ಶಿವನಾ ॥ ೪೭

ಭಾಳಂ ಸುರುಚಿರಸುಕೃತವಿ
ಶಾಳಂ ವಿಷಮಾಕ್ಷವಿರಥಕಾಳಂ ವಿಮಳ ।
ಸ್ಫೂಳಂ ಶೃಂಗಾರರಸೋ
ದ್ವೇಳಂ ಕಂದರ್ಪಕುಸುಮಬಾಣಾಭೀಳಂ ॥ ೪೮

ಎಂಬಂತೆ ಒಡವೆಗಳನ್ನು ತೊಡಿಸಿದ್ದರು. ವ॥ ಹೀಗೆ ಮನ್ಮಥನನ್ನು ಪೂಜಿಸುವಂತೆ, ಚಂದ್ರಕಳೆಯನ್ನು ಚಿಗುರಿಸುವಂತೆ, ಪುಣ್ಯಕ್ಕೆ ಪುಟವಿಡುವಂತೆ, ಶಂಕರನ ಪ್ರೇಮವನ್ನು ಸೀಮೆಗೊಳಿಸುವಂತೆ, ಹರನ ಮನೋರಥವನ್ನು ಮದವೇಱೆಸುವಂತೆ ಪಾರ್ವತಿಗೆ ಮುತ್ತೈದೆಯರು ಅಲಂಕರಿಸಿದರು. ತರುವಾಯ ತರುಣ ರವಿಯ ಕಿರಣಗಳಿಗೆ ಸಮಾನವಾದ ಆರತಿಯನ್ನು ಎತ್ತಿ ಅವಳ ಮಂಗಳೋನ್ನತಿಯನ್ನು ಕೊಂಡಾಡುತ್ತಿರುವಾಗ ಅತ್ತ ಸಪ್ತಋಷಿಗಳಿಂದ ಸಂತೋಷವಾರ್ತೆಯನ್ನು ಶಂಕರನು ಕೇಳಿ ಸಂತೋಷಗೊಂಡು, ೪೬. ಈ ಕಡೆ ಕೈಲಾಸಾದ್ರಿಯಲ್ಲಿ ಶ್ರೇಷ್ಠಗಣನಾಥರಲ್ಲಿ ದೇವೋತ್ತಮನಾದ ಪರಶಿವನು ಪುಳಕಿತನಾಗಿ ಮದುವಣಿಗತನವನ್ನು ನಟಿಸುತ್ತಿದ್ದನು. ವ॥ ಹೊಸ ಮದುಮಗನಾದ ಪಶುಪತಿಯ ಎಲ್ಲ ಅವಯವಗಳನ್ನು ವರ್ಣಿಸಲು ಸಾಧ್ಯವಿಲ್ಲವಾದರೂ ಭಕ್ತಿಯಿಂದ ತಿಳಿದಷ್ಟು ವರ್ಣಿಸುವೆನು. ೪೭. ಅವನ ಜಡೆಗಳು ಹೊಸ ಹವಳದ ಕುಡಿಗಳೊ, ನವಕಾಂತಿಯುಳ್ಳ ಜಲದ ಮಡುಗಳೊ, ಚೆಲುವು ಇರುವ ನೆಲೆಗಳೊ, ಅಥವಾ ಸುಕೃತದ ಗುಡಿಗಳೋ ಇಲ್ಲವೆ ಮಹಿಮೆಗಳ ಆಕರಗಳೊ ಎಂಬಂತಿದ್ದವು. ೪೮. ಶಿವನ ಹಣೆ, ಸುರುಚಿರ ಸುಕೃತದಂತೆ ವಿಶಾಲ, ವಿಷಮಾಕ್ಷ ಶಿವನಿಂದ ನಿರಾಶನಾದ ಕಾಲ, ಶೃಂಗಾರ ರಸೋಜ್ವಲ, ಕಂದರ್ಪನ ಕುಸುಮಬಾಣಗಳ

ಕಂ।। ಪುರ್ಬುಗಳೊ ಗಣನಿಕರದ
ಗುರ್ಬುಗಳೊ ಹರಿ ವಿರಿಂಚಿ ಸುರಪದವಿಗಳೊಂ ।
ದುರ್ಬುಗಳೋ ಪುಣ್ಯಲತಾ
ಪರ್ಬುಗಳೋ ಮದನವಿಭ್ರಮದ ಕೊರ್ಬುಗಳೋ ।। ೪೯

ಈ ಕಣ್ಗಾ ಕಣ್ಣಾ ಕ
ಣ್ಣೀ ಕಣ್ಣೆರಡಕ್ಕವೆರಡೆ ಪಡಿ ಮತ್ತಿಲ್ಲೀ ।
ಲೋಕವ್ಯವಹಾರದ ನುಡಿ
ಯೀ ಕಣ್ಗುಪಮಾನಮಿಲ್ಲಮಿನ್ನುಂ ಮುನ್ನುಂ ।। ೫೦

ಘ್ರಾಣಂ ಮಂಜುಳಮುಖಕ
ಲ್ಯಾಣಂ ಜಗದೇಕಜೀವನೆನಿಸುವ ಪವನ ।
ಪ್ರಾಣಂ ಸರ್ವಾವಯವ
ತ್ರಾಣಂ ಪರಿಮಳಪರೀಕ್ಷೆಗಂತದು ತಾಣಂ ।। ೫೧

ಕರ್ಣಂಗಳ್ ನವಕಿರಣ ವಿ
ಕೀರ್ಣಂಗಳ್ ಶರಣಜನಸುಗೀತಾಮೃತ ಸಂ ।
ಪೂರ್ಣಂಗಳ್ ಪಂಚಾಕ್ಷರ
ವರ್ಣಂಗಳ್ ಫಣಿವಿತಾನವಿಸ್ತೀರ್ಣಂಗಳ್ ।। ೫೨

ಕಂ।। ವದನಂ ಕಾರುಣ್ಯಾಮೃತ
ಸದನಂ ಪ್ರಣತಪ್ರತಾನಜನನಾ ವಿದ್ಯಾ ।
ಕದನಂ ಮರ್ಬು ಭಾಪುರೆ ಜಿತ
ಮದನಂ ಧವಳಪ್ರಕಾಶಮಂಡಿತರದನಂ ।। ೫೩

ಭೀಕರತೆಯೊ ಎಂಬಂತಿತ್ತು. ೪೯. ಶಿವನ ಕಣ್ಣುಹುಬ್ಬುಗಳು; ಪ್ರಮಥನ ಗಣ ಗುರ್ಬುಗಳೊ ಹರಿ-ವಿರಿಂಚಿ-ಸುರಪದವಿಗಳ ಉಬ್ಬುಗಳೊ ಪುಣ್ಯಲತೆಯ ಹಬ್ಬುವಿಕೆಯೋ, ಮದನವಿಲಾಸ ಕೊಬ್ಬುಗಳೊ ಎಂಬಂತಿದ್ದವು. ೫೦. ಈ ಕಣ್ಣಿಗೆ ಆ ಕಣ್ಣು ಆ ಕಣ್ಣಿಗೆ ಈ ಕಣ್ಣು ಸಮ; ಇವೆರಡಕ್ಕೆ ಇವೆರಡೇ ಸಮವಲ್ಲದೆ ಮತ್ತೆ ಇನ್ನಿಲ್ಲ; ಇವಕ್ಕೆ ಲೋಕದಲ್ಲಿ ಹಿಂದೆ-ಮುಂದೆ ಇನ್ನು ಉಪಮಾನವೇ ಇಲ್ಲ! ೫೧. ಶಿವನ ಮೂಗು, ಅದು ಮಂಜುಳಮುಖಿಕ್ಕೆ ಕಲ್ಯಾಣ, ಜಗತ್ತಿಗೆ ಮುಖ್ಯ ಜೀವನವೆನಿಸಿರುವ ಪವನನ ಪ್ರಾಣ, ಸರ್ವ ಅವಯವಗಳ ತ್ರಾಣ, ಅಂತೆಯೇ ಅದು ಪರಿಮಳ ಪರೀಕ್ಷೆಯ ತಾಣ! ೫೨. ಇನ್ನು ಕರ್ಣಗಳು, ಹರಡಿದ ಹೊಸಕಿರಣಗಳು, ಶರಣರ ಸುಗೀತೆಗಳ ಅಮೃತಪೂರ್ಣಗಳು ಪಂಚಾಕ್ಷರವರ್ಣಗಳು ಅವು ಫಣಿವಿತಾನ ವಿಸ್ತೀರ್ಣಗಳು. ೫೩. ಶಿವನ ಮುಖ; ಅದು ಕರುಣಾರಸದ ಸದನ, ಶರಣಾದವರ ಅವಿದ್ಯೆಯನ್ನು ಹೋಗಲಾಡಿಸುವ ಕದನ, ಮೇಲಾಗಿ ಮದನನನ್ನು ಗೆದ್ದುದು

ಗ್ರೀವಂ ಘನಗರಳೋನ್ನತ
ಭಾವಂ ವಿಮಳಸ್ವಭಾವಮಾನತಜನಸದ್ ।
ಭಾವಂ ಮಧುರರವಪ್ರ
ಸ್ತಾವಂ ಶಿವಶಿವ ಸಮಸ್ತಜನತಾಜೀವಂ ॥ ೫೪

ತೋಳ್ಗಳ್ ನೆನೆವರ ಚಿತ್ತದ
ಬಾಳ್ಗಳ್ ವರವೀಯಲೆಂದು ಮಿಗೆ ಮತ್ಸರಿಪಾ ।
ಸೂಳ್ಗಳ್ ರುದ್ರನ ನಚ್ಚಿನ
ಬಾಳ್ಗಳ್ ಗಿರಿರಾಜಪುತ್ರಿಯಪ್ಪಿಂಗಾಳ್ಗಳ್ ॥ ೫೫

ಪ್ರಾಣಿಗಳತ್ಯಧಿಕ ವರ
ಶ್ರೇಣಿಗಳುಚಿತಕ್ರಿಯಾವಚೋಗುಣವಿಳಸದ್ ।
ವಾಣಿಗಳಖಿಳಾಧಾರ
ಕ್ಷೋಣೀಗಳಾಹಾ ಸುಪಾಣಿಗಳ್ ಶಂಕರನಾ ॥ ೫೬

ಉರವದು ಗಿರಿಜಾಕಾಂತೆಯ
ತೆರವದು ತತ್ಕುಚಯುಗಂಗಳಿರವದು ಪುಣ್ಯೋ ।
ತ್ಕರವದು ವರವದು ಸುಖಸಾ
ಗರವದು ಭುವನೈಕಚಾರುತರವದು ಹರನಾ ॥ ೫೭

ಕಂ॥ ಮಧ್ಯಂ ಗಿರಿಜಾಲೋಕನ
ಸಾಧ್ಯಂ ನಂಬಿರ್ದ ಸಕಳಗುಣಸಂಕುಳಸಂ ।
ಬೋದ್ಯಂ ಪೊರ್ದಿದಜಾಂಡಾ
ಬಾಧ್ಯಂ ಹರಹರ ಸಮಸ್ತಭುವನಾರಾಧ್ಯಂ ॥ ೫೮

ಶುಭ್ರದಂತಪಂಕ್ತಿಯಿಂದ ಮನೋಹರವಾಗಿದೆ. ೫೪. ಶಿವನ ಕೊರಳು ಅದು ಘನಗರಳ (ವಿಷ)ದಿಂದ ಉನ್ನತ ಭಾವವುಳ್ಳದ್ದು, ವಿಮಳ ಸ್ವಭಾವವುಳ್ಳದ್ದು, ವಂದಿಸುವವರ ಸದ್ ಭಾವವುಳ್ಳದ್ದು, ಮಧುರ ಧ್ವನಿಯ ಮೂಲ, ಶಿವಶಿವಾ! ಅದೇ ಜನತಾಜೀವ! ೫೫. ಅಭವನ ತೋಳುಗಳು, ಅವು ನೆನೆವರ ಚಿತ್ತದ ಬದುಕು, ವರವನ್ನು ನೀಡಬೇಕೆಂಬುದಾವಾಗಿ ಬಯಸುವ ಸರದಿಗಳು, ರುದ್ರನಿಗೆ ಪ್ರಿಯವಾದ ಬದುಕುಗಳು, ಗಿರಿರಾಜಪುತ್ರಿಯ ಆಲಿಂಗನದ ಆಳುಗಳು. ೫೬. ಶಿವನ ಕೈಗಳು, ಅವು ಅನೇಕ ವರ ನೀಡಿದವುಗಳು, ಉಚಿತಕ್ರಿಯೆ ಮತ್ತು ಮಾತುಗಳು ಅಖಿಲಾಧಾರಕ್ಷೋಣಿಗಳು ಓಹೋ ಶಂಕರನ ಸುಪಾಣಿಗಳು. ೫೭. ಶಿವನ ಎದೆ, ಅದು ಗಿರಿಜಾಕಾಂತೆಗಾಗಿ ಮುಡುಪಾಗಿದೆ. ಅವಳ ಕುಚಯುಗಳವು ವಿಶ್ರಮಿಸುವ ಸ್ಥಾನ, ಪುಣ್ಯೋತ್ಕರವದು, ವರ, ಸುಖಕ್ಕೆ ಸಾಗರ ಅದು ಹರನ ಲೋಕೋತ್ತರ ಸ್ಥಾನ! ೫೮. ಶಿವನ ನಡು, ಅವಲೋಕನಕ್ಕೆ ಮಾತ್ರ ಸಾಧ್ಯ, ಅವನನ್ನು ನಂಬಿರುವ ಸಕಲಗಣಗಳಿಗೆ ಪ್ರೇರಕ, ಬ್ರಹ್ಮಾಂಡಕ್ಕೆ ಅಬಾಧ್ಯ, ಶಿವಶಿವ! ಅದು ಸಮಸ್ತಲೋಕಕ್ಕೆ

ತೊಡೆಗಳೊ ಹೈಮವತಿಯ ಕೌ
ಳುಡೆಗಳೊ ನವಕಾಂತಿಲಕ್ಷ್ಮಿ ಸಂತಸದಿಂದಿ ।
ರ್ಪಡೆಗಳೊ ರಂಭಾವಿಭವದ
ತಡೆಗಳೊ ಸಿಂಗರದ ಕಡೆಗಳೋ ಶಶಿಧರನಾ ॥ ೫೯

ಮೇಲ್ಗಳೊ ನವಸೌಂದರ್ಯದ
ಸಾಲ್ಗಳೊ ಪಾರ್ವತಿಯ ಚಿತ್ತಮಂ ಸೋಲಿಸುವಾ ।
ಕೀಲ್ಗಳೊ ಸಲ್ಲೀಲೆಯ ಪೊಂ
ಗೋಲ್ಗಳೊ ಕಣಕಾಲ್ಗಳೊ ಲಲಾಟೇಕ್ಷಣನಾ ॥ ೬೦

ಚರಣಂ ಭಕ್ತಜನಾಂತಃ
ಕರಣಂ ನಂಬಿದರ ಹರಣವಿನಕುಲತೇಜಃ ।
ಕಿರಣಂ ತ್ರಿಲೋಕಶರಣಂ
ಶರಣಾಭರಣಂ ಸಮಸ್ತಮುಕ್ತಾಭರಣಂ ॥ ೬೧

ವ॥ ಎಂಬ ಪೊಗಳ್ತೆಗೆ ಮಿಗಿಲೆನಿಸಿ ನೆಱಿಮೆಱಿವ ಶಿವನ ಪುಣ್ಯಾಗಣ್ಯ ಲಾವಣ್ಯಮಯ ಸುಕುಮಾರಾವಯವಂಗಳಂ ಕಂಡು ಕೌತುಕಂಗೊಂಡು ನಂದೀಶ್ವರಂ ಬಂದು ಸರಶಿರೋ ಮಾಲೆಯಂ ಪರಿಹರಿಸಿ ಮಣಿಕಿರೀಟಮಂ ಸಾರ್ಚಿ ಬಿಸುಗಣ್ಣಂ ಭಸಿತದಿಂ ಬಾಸಣಿಸಿ ಬಾಸಿಗಮನಿಕ್ಕಿ ನಾಗಕುಂಡಲಮಂ ಕಳಲ್ಚಿ ಮಾಣಿಕ್ಯಾವತಂಸಮಂ ಕೆಯ್ಕೊಳಿಸಿ ಕೂರ್ಮಶಿರಮಂ ತೆಗೆದು ತೋರಹಾರದೊಳ್ ಕಿಲಿಸಿದ ಪದಕಮನಳವಡಿಸೆ ಸರ್ಪೋಪವೀತಮಂ ಸದಿಲ್ಚಿ ಯಜ್ಞೋಪವೀತಮನಮರ್ಚಿ ಕೀರ್ತಿಮುಖಮಂ ಕಳಲ್ಚಿ ಬಾಹುಪೂರಯಮನೆಡೆಗೊಳಿಸಿ

ಪೂಜ್ಯ! ೫೯: ಪರಶಿವನ ತೊಡೆಗಳು, ಅವು ಹೈಮವತಿಯ ರೇಷ್ಮೆಯ ಬಟ್ಟೆಗಳು. ನವಕಾಂತಿಲಕ್ಷ್ಮಿಯು ಸಂತೋಷದಿಂದ ಇರುವ ಎಡೆಗಳು, ಬಾಳೆಯ ಕಂಭಗಳ ವೈಭವಕ್ಕೆ ತಡೆಗಳೂ, ಶೃಂಗಾರದ ಕಡೆಗಳೊ ಎಂಬಂತೆ ಇದ್ದವು. ೬೦. ಶಿವನ ಮೆಲ್ಗಾಲುಗಳು, ಜಂಘೆಗಳು, ಅವು ನವಸೌಂದರ್ಯದ ಸಾಲುಗಳೂ, ಪಾರ್ವತಿಯ ಮನಸ್ಸನ್ನು ಸೋಲಿಸುವ ಕೀಲುಗಳೂ, ಸಲ್ಲೀಲೆಯ ಹೊನ್ನಕೋಲುಗಳೂ ಮುಕ್ಕಣ್ಣನ ಕಣಕಾಲುಗಳೂ ಎಂಬಂತಿದ್ದವು! ೬೧. ಶಿವನ ಪಾದಗಳು ಅವು ಭಕ್ತಜನರ ಅಂತಃಕರಣ, ನಂಬಿದವರ ಪ್ರಾಣ, ರವಿಕುಲತೇಜಸ್ಸಿನ ಕಿರಣ, ಮೂರುಲೋಕಕ್ಕೆ ರಕ್ಷಕ, ಶರಣರ ಆಭರಣ ಸಮಸ್ತ ಮುಕ್ತಾವರಣ. ವ॥ ಎಂಬ ಹೊಗಳಿಕೆಗೆ ಮೀರಿ ಬೆಳಗುವ ಶಿವನ ಪುಣ್ಯಲಾವಣ್ಯಮಯವಾದ ಸುಕುಮಾರ ಅವಯವಗಳನ್ನು ಕಂಡು ಆಶ್ಚರ್ಯದಿಂದ ನಂದೀಶ್ವರನು ಬಂದು ರುಂಡಮಾಲೆಯನ್ನು ತೆಗೆದು ಮಣಿಕಿರೀಟವನ್ನು ತೊಡಿಸಿ, ಬಿಸುಗಣ್ಣನ್ನು ಭಸ್ಮದಿಂದ ಮರೆಮಾಡಿ, ಬಾಸಿಂಗ ಧರಿಸಿ, ನಾಗಕುಂಡಲಗಳನ್ನು ತೆಗೆದು, ಮಾಣಿಕ್ಯಮಯವಾದ ಕರ್ಣಾವತಂಸವನ್ನು ತೊಡಿಸಿ, ಕೂರ್ಮಶಿರವನ್ನು ತೆಗೆದು ದಪ್ಪದ ಹಾರದಲ್ಲಿ ಪದಕವನ್ನು ಅಳವಡಿಸಿ, ನಾಗಯಜ್ಞೋಪವೀತವನ್ನು ತೆಗೆದು ಜನಿವಾರವನ್ನು ಧರಿಸಿ, ಕೀರ್ತಿಮುಖವನ್ನು ಕಳಚಿ ಬಾಹುಪೂರವನ್ನು ಧರಿಸಿ, ಉರಗಕಂಕಣವನ್ನು ತೆಗೆದು ರತ್ನಕಂಕಣವನ್ನು ತಿರುಗಿಸಿ,

ಉರಗಕಂಕಣಮಂ ಕಳೆದು ರತ್ನಕಂಕಣಮಂ ತಿರುಂಪಿ ನೂಂಕಿ ಬ್ರಹ್ಮಕಪಾಲಮಂ ನಿಲಲೀಯದೆ ಪುಣ್ಯಪವಿತ್ರಮನಿಟ್ಟು ಖಟ್ವಾಂಗಮಂ ಬಿಡಿಸಿ ಮಾದುಫಲಮನಿಂಬುಗೊಳಿಸಿ ಗಜಚರ್ಮಮ ನೋಸರಿಸಿ ನಿರ್ಮಳೋತ್ತರೀಯಮಂ ಪೊದೆಯಿಸಿ ಪುಲಿದೊವಲಂ ನಿವಾರಿಸಿ ದಿವ್ಯದುಕೂಲಮ ನುಡಿಸಿ ದೇವಕುಲಮೆಳಲ್ವ ಬಾವುಲಿಯ ತೊಡರಂ ಸಡಿಲ್ಚಿ ಸಹಜಸೌಂದರ್ಯಮನಿರಿಸಿ ಇಂತು ಶಿವಯೋಗಕ್ಕೆ ಮುಕ್ತಿಯಂ ಮುಕ್ತಿಗೆ ವೈರಾಗ್ಯಮಂ ವೈರಾಗ್ಯಕ್ಕೆ ಶಿವಜ್ಞಾನಮಂ ಶಿವಜ್ಞಾನಕ್ಕೆ ಭಕ್ತಿಯಂ ಭಕ್ತಿಗೆ ಪುಣ್ಯಮಂ ಪುಣ್ಯಕ್ಕೆ ಸತ್ಕ್ರಿಯೆಯಂ ಸತ್ಕ್ರಿಯೆಗೆ ಪಾವನಜನ್ಮಮನಲಂಕರಿಸುವಂತೆ ಪರಬ್ರಹ್ಮಚರ್ಯಾಲಂಕೃತಿ ಬ್ರಾಹ್ಮಣೋತ್ತಮನಪ್ಪ ವಿರೂಪಾಕ್ಷಂಗೆ ಪರಮೈಶ್ವರ್ಯ ಪೂಜಿತಂಗೆ ನಾದಮೂರ್ತಿಗೆ ಶಿವಜ್ಞಾನಿಗೆ ವೇದಶಿಖಾಮಣಿಗೆ ಸತ್ಯಜ್ಞಾನಾಭರಣಂಗೆ ನಿತ್ಯಕಾಯಂಗೆ ವಿಶ್ವಾರಾಧ್ಯಂಗೆ ಶಾಶ್ವತಪ್ರತಾಪನಿಧಿಯೆನಿಪ ಶಂಕರಂಗೆ ನಂದೀಶಾದಿಗಣನಾಯಕರ್ ಸಿಂಗರಮಂ ಮಾಡಿ ಹೆಱಸಾರ್ದು ನಿಂದು ನೋಡಲಂಜಿ ಕಣ್ಮುಚ್ಚಿ ಭಯದಿಂ ಶಿವಶಿವ ಜಯಜಯಯೆನುತ್ತು ಮಿರೆ ದಧೀಚಿ ದೂರ್ವಾಸ ವಶಿಷ್ಠ ವಾಮದೇವ ಭೃಗು ಕಶ್ಯಪಾದಿ ಮುನಿಜನಂಗಳ್ ಶಿವನ ಕಾಂತಿಯಂ ಕಂಡು ನಿರೀಕ್ಷಿಸಲಣ್ಮದೆ ಚೇತೋದೃಷ್ಟಿಯಿಂ ನೋಡಿ,

ಮ॥ ಮಿಗಿಲೆತ್ತಂ ಜ್ಯೋತಿಗಂ ಪಾವಕರುಚಿ ಎಸೆವಾ ಜ್ಯೋತಿಗಂ ಪಾವಕಂಗಂ
ಮೃಗಲಕ್ಷ ಜ್ಯೋತ್ಸ್ನೆಯೆಂತುಂ ಕರಮಸದಳಮಾ ಜ್ಯೋತಿಗಂ ಪಾವಕಂಗಂ ।
ಮೃಗಲಕ್ಷ ಜ್ಯೋತ್ಸ್ನೆಗಂ ಭಾಸ್ಕರರುಚಿ ಪಿರಿದಾ ಜ್ಯೋತಿಗಂ ಪಾವಕಂಗಂ
ಮೃಗಲಕ್ಷ ಜ್ಯೋತ್ಸ್ನೆಗಂ ಭಾಸ್ಕರರುಚಿಗಮತರ್ಕ್ಯಂ ವಿರೂಪಾಕ್ಷತೇಜಂ ॥ ೬೨

ಬ್ರಹ್ಮಕಪಾಲವನ್ನು ನೂಕಿ ಪುಣ್ಯಕರವಾದ ಪವಿತ್ರವನ್ನು ಧರಿಸಿ, ಹೊರಡಿನ ಕಾಲು (ಖಟ್ವಾಂಗ) ಬಿಡಿಸಿ ಮಾದುಫಲವನ್ನು ಧರಿಸಿ, ಗಜಚರ್ಮವನ್ನು ತೆಗೆದು ನಿರ್ಮಲ ಉತ್ತರೀಯವನ್ನು ಹೊದಿಸಿ, ಹುಲಿಯ ಚರ್ಮವನ್ನು ತೆಗೆದು ದಿವ್ಯದುಕೂಲವನ್ನು ಉಡಿಸಿ, ದೇವಕುಲವು ಎಳಲ್ವ ಬಾವುಲಿಯ ತೊಡರನ್ನು ಸಡಿಲಿಸಿ ಸಹಜ ಸೌಂದರ್ಯವನ್ನು ಮೂಡಿಸಿ, ಹೀಗೆ ಶಿವಯೋಗಕ್ಕೆ ಮುಕ್ತಿಯನ್ನು, ಮುಕ್ತಿಗೆ ವೈರಾಗ್ಯವನ್ನು, ವೈರಾಗ್ಯಕ್ಕೆ ಶಿವಜ್ಞಾನವನ್ನು, ಶಿವಜ್ಞಾನಕ್ಕೆ ಭಕ್ತಿಯನ್ನು, ಭಕ್ತಿಗೆ ಪುಣ್ಯವನ್ನು, ಪುಣ್ಯಕ್ಕೆ ಸತ್ಕ್ರಿಯೆಯನ್ನು, ಸತ್ಕ್ರಿಯೆಗೆ ಪಾವನಜನ್ಮವನ್ನು ಅಲಂಕರಿಸುವಂತೆ ಪರಬ್ರಹ್ಮಚರ್ಯಿಯ ಅಲಂಕಾರನೂ ಬ್ರಾಹ್ಮಣೋತ್ತಮೋತ್ತಮನೂ ಆದ ವಿರೂಪಾಕ್ಷನಿಗೆ, ಪರಮೈಶ್ವರ್ಯಪೂಜಿತನಿಗೆ, ನಾದಮೂರ್ತಿಗೆ ಶಿವಜ್ಞಾನಿಗೆ ವೇದ ಶಿಖಾಮಣಿಗೆ, ಸತ್ಯಜ್ಞಾನಾಭರಣನಿಗೆ ನಿತ್ಯಕಾಯನಿಗೆ ವಿಶ್ವಾರಾಧ್ಯನಿಗೆ ಶಾಶ್ವತ ಪ್ರತಾಪನಿಧಿಯಾದ ಶಂಕರನಿಗೆ ನಂದೀಶನೇ ಮೊದಲಾದ ಗಣನಾಯಕರು ಸಿಂಗಾರ ಮಾಡಿ ಪಕ್ಕದಲ್ಲಿ ನಿಂತು ನೋಡಲು ಹೆದರಿ ಕಣ್ಣು ಮುಚ್ಚಿ ಭಯದಿಂದ ಶಿವಶಿವ ಜಯಜಯ ಎನ್ನುತ್ತಿರಲು, ದಧೀಚಿ, ದುರ್ವಾಸ, ವಶಿಷ್ಠ, ವಾಮದೇವ, ಭೃಗು, ಕಶ್ಯಪಾದಿ ಮುನಿಗಳು ಶಿವನ ಕಾಂತಿಯನ್ನು ಕಂಡು ನಿರೀಕ್ಷಿಸಲಾರದೆ ಚೇತೋದೃಷ್ಟಿಯಿಂದ ವೀಕ್ಷಿಸಿದರು. ೬೨. ಜ್ಯೋತಿಗಿಂತ ಅಗ್ನಿಯ ಕಾಂತಿ ಮಿಗಿಲು, ಆ ಜ್ಯೋತಿ ಮತ್ತು ಬೆಂಕಿ ಇವೆರಡಕ್ಕಿಂತ ಚಂದ್ರನ ಬೆಳದಿಂಗಳು ಮಿಗಿಲು, ಆ ಜ್ಯೋತಿ, ಪಾವಕ ಮತ್ತು ಬೆಳದಿಂಗಳು ಈ ಮೂರಕ್ಕಿಂತ ಸೂರ್ಯನ ಕಾಂತಿ ಮಿಗಿಲು, ಆ ಜ್ಯೋತಿ, ಪಾವಕ, ಬೆಳದಿಂಗಳು ಮತ್ತು ಸೂರ್ಯನ ಕಾಂತಿಗಳು

ವ।। ಎಂದು ಪೊಗಳುತ್ತಿರ್ಪ ಸಮಯದೊಳ್ ಶಿವನ ವಿವಾಹಕ್ಕೆ ಸಕಲದೇವಕುಲಂ ಹರ್ಷದಿಂ ಬರುತಿರ್ಪಲ್ಲಿ,

ಚಂ।। ಸುರಪತಿಯಾನೆಯಂ ಹುತವಹಂ ತಗರಂ ಸಮವರ್ತಿ ಕೋಣನಂ
ನಿರ್ಋತಿ ಮನುಷ್ಯನಂ ಜಳಧಿಪಂ ನೆಗಳಂ ಪವಮಾನನೇಣನಂ ।
ಹರಸಖನಶ್ವಮಂ ಶಶಿಧರಂ ವೃಷನಂ ನಲಿದೇಱೆ ಬಂದರ
ತ್ಯುರುತರ ನಂದಿವಾಹನವಿವಾಹಮಹೋತ್ಸವದೇಳ್ಗೆಗಳ್ಕಱಿಂ ।। ೬೩

ಕಂ।। ಲೋಕೈಕಬಂಧುವೆನಿಪ ಪಿ
ನಾಕಿಯ ಪರಿಣಯನದುತ್ಸವಕ್ಕತಿಮುದಮಂ ।
ಕೈಕೊಂಡು ಕೊಂಡು ಕೊನೆಯು
ತ್ತೇಕಾದಶರುದ್ರರಳ್ತಿಯಿಂ ನಡೆತಂದರ್ ।। ೬೪

ಕಂ।। ಮೇದಿನಿಯುಮನಂಬರಮುಮ
ನಾ ದಿಕ್ಕಕ್ರಮುಮನಂಶುಕುಳದಿಂ ಬೆಳಗು ।
ತ್ತಾದಂ ಸಂತಸದಿಂದಂ
ದ್ವಾದಶರವಿಗಳ್ ಮಹೋಜ್ಜ್ವಳರ್ ನಡೆತಂದರ್ ।। ೬೫

ದೇವರ ದೇವನ ಗರಳ
ಗ್ರೀವನ ಭಕ್ತೈಕಬಾಂಧವನ ಸಕಳಜಗ ।
ಜ್ಜೀವನ ಮದುವೆಗೆ ನೆರೆದ
ಷ್ಟಾವಸುಗಳ್ ನಡೆದು ಬಂದರತ್ಯುನ್ನತಿಯಿಂ ।। ೬೬

ವರತೇಜದಿಂ ಪವಿತ್ರಾ
ಚರಣೆಯನತಿಕಮನ ವಿಮಳಸಾಮರ್ಥ್ಯತೆಯಿಂ ।
ಕರಮೆಸೆದನುನಯದಿಂ ರಾ
ಜಋಷಿ ಬ್ರಹ್ಮಋಷಿ ದೇವಋಷಿಗಳ್ ಬಂದರ್ ।। ೬೭

ಇವೆಲ್ಲಕ್ಕಿಂತ ವಿರೂಪಾಕ್ಷನ ತೇಜಸ್ಸು ಊಹಿಸಲಸದಳವಾದದ್ದು. ವ।। ಹೀಗೆ ಪ್ರಶಂಸಿಸುತ್ತಿರುವ ಶಿವನ ಮದುವೆಯ ಮಂಟಪಕ್ಕೆ ಎಲ್ಲ ದೇವತೆಗಳೂ ಹರ್ಷದಿಂದ ಬರುತ್ತಿರುವಾಗ-೬೩. ದೇವೇಂದ್ರನು ಐರಾವತವನ್ನೂ, ಅಗ್ನಿಯು ಟಗರನ್ನೂ ಯಮನು ಕೋಣನನ್ನೂ ನಿರ್ವೃತಿಯು ಮನುಷ್ಯನನ್ನೂ ವರುಣನು ಮೊಸಳೆಯನ್ನೂ ವಾಯು ಜಿಂಕೆಯನ್ನೂ ಕುಬೇರನು ಅಶ್ವವನ್ನೂ ಈಶಾನನು ಬಸವನನ್ನೂ ಏರಿ ಸಂತೋಷದಿಂದ ನಂದೀಶ್ವರನಾದ ಪರಶಿವನ ವಿವಾಹ ಮಹೋತ್ಸವಕ್ಕೆ ಆಗಮಿಸಿದರು. ೬೪. ಲೋಕಕ್ಕೆ ಒಬ್ಬನೇ ಬಂಧು ಎನಿಸಿರುವ ಪಿನಾಕಿಯ ಪರಿಣಯದ ಉತ್ಸವಕ್ಕೆ ಏಕಾದಶರುದ್ರರು ನಡೆತಂದರು. ೬೫. ತಮ್ಮ ಪ್ರಕಾಶದಿಂದ ನೆಲ-ಮುಗಿಲು ಮತ್ತು ಆಕಾಶಗಳನ್ನು ಬೆಳಗುತ್ತಾ ಮಹೋಜ್ವಳರಾದ ದ್ವಾದಶಾದಿತ್ಯರು ಆಗಮಿಸಿದರು. ೬೬. ದೇವರ ದೇವನೂ ನೀಲಗ್ರೀವನೂ ಭಕ್ತರಿಗೆ ಮುಖ್ಯಬಂಧುವೂ ಸಕಲ ಜಗತ್ತಿಗೆ ಜೀವನೂ ಎನಿಸಿರುವ ಶಿವನ ಮದುವೆಗೆ

ವ|| ಅವರಾರೆಂದೊಡೆ,

ಮ|| ವರದೂರ್ವಾಸನಗಸ್ತ್ಯ ಜಹ್ನು ಕಪಿಲಂ ಕೌಂಡಿನ್ಯ ಮಾಂಡವ್ಯ ಭಾ
ಸುರ ಶಾತಾತಪ ವಾಮದೇವ ಮುನಿವಿಶ್ವಾಮಿತ್ರ ಮೈತ್ರೇಯ ಬಂ ।
ಧುರ ಮಾರ್ಕಂಡೇಯ ದೇವಲಾಖ್ಯನನಿಳಾದಂ ಸೂತನಾ ವ್ಯಾಸನಾ
ತ್ಮರಿತಂ ಚಿತ್ರಶಿಖಂಡಿ ಗಾಲವವೃಷಂ ಜಾಬಾಲಿ ವಾಲ್ಮೀಕಿಗಳ್ ॥ ೬೮

ಚಂ|| ಪರಮ ದಧೀಚ ರೋಮಜ ಪುಲಸ್ತ್ಯ ಪರಾಶರ ಯಾಜ್ಞವಲ್ಕ್ಯ ಯಂ
ಗಿರ ಭೃಗು ಪುಂಡರೀಕ ಋಶಿಕಶ್ಯಪ ಕೌಶಿಕ ಗಾರ್ಗ್ಯ ಗೌತಮಂ ।
ವರಸನಕಂ ಸನಂದನ ಸನತ್ಸು ಭಗೀರಥ ಕುತ್ಸವತ್ಸ ಭಾ
ಸುರ ಜಮದಗ್ನಿ ಜೈಮಿನಿ ವಶಿಷ್ಠ ಮತಂಗ ಮರೀಚಿಯತ್ರಿಗಳ್ ॥ ೬೯

ವ|| ಮತ್ತಮನಂತರದಲ್ಲಿ,

ಕಂ|| ಸಂಗಡಿಸಿದ ಶಂಖಂ ಚ
ಕ್ರಂ ಗದೆ ಶಾರ್ಙ್ಗಂಗಳೆಸೆಯೆ ಗರುಡಾಸನದೊಳ್ ।
ಪಿಂಗದೆ ಬಂದಂ ಯುತಚತು
ರಂಗಂ ಮಾಧವನುಮಾಧವಂ ಮಚ್ಚುವಿನಂ ॥ ೭೦

ಭರದಿಂದಂ ತನ್ನ ಬಲಂ
ಬೆರಸೊಲವಿಂ ಹಂಸೆಯೇಱಿ ತೊಳತೊಳಗುತ್ತುಂ ।
ಸರಭಸದಿಂ ನಡೆತಂದಂ
ಸರಸಿಜಭವನಭವನಭಯಮೀಯೆ ಸರಾಗಂ ॥ ೭೧

ವ|| ಅಂತುಮಲ್ಲದೆಯುಂ,

ಕಂ|| ಸುರರ ಬಲಂ ಹರಹರ ಖೇ
ಚರರ ಬಲಂ ಭಾಪು ಕಿನ್ನರರ ಬಲವಾಹಾ ।
ಗರುಡರ ಬಲವರರೇ ಸಿ
ದ್ಧರ ಬಲವಮ್ಮಮ್ಮ ಭಲರೆ ಗಂಧರ್ವಬಲಂ ॥ ೭೨

ಅಷ್ಟವಸುಗಳು ಬಂದರು. ೬೭. ದಿವ್ಯತೇಜಸ್ಸಿನಿಂದಲೂ ಪವಿತ್ರ ಆಚರಣೆಯಿಂದಲೂ ವಿಮಲ ಸಾಮರ್ಥ್ಯದಿಂದಲೂ, ಭಕ್ತಿ ಶ್ರದ್ಧೆಗಳಿಂದಲೂ ಕೂಡ ಆ ಮದುವೆಗೆ ಲೋಕದ ರಾಜರ್ಷಿಗಳು, ಬ್ರಹ್ಮರ್ಷಿಗಳು, ದೇವರ್ಷಿಗಳು ಸಹ ಬಂದರು. ೬೮-೬೯. ಇಲ್ಲಿ ಋಷಿಗಳ ಹೆಸರುಗಳು ಸ್ಪಷ್ಟ! ೭೦. ಶ್ರೀಮನ್ನಾರಾಯಣನು ಉಮಾಧವನಾದ ಶಿವನು ಮೆಚ್ಚುವ ಬಗೆಯಲ್ಲಿ ಶಂಖ, ಚಕ್ರ, ಗದೆ ಮತ್ತು ಶಾರ್ಙ್ಗಧನುಸ್ಸು ಹಿಡಿದು ಗರುಡನನ್ನು ಹತ್ತಿ ಅಲ್ಲಿಗೆ ಬಂದನು. ೭೧. ಚತುರ್ಮುಖ ಬ್ರಹ್ಮದೇವನು ತನ್ನ ಪರಿವಾರದೊಡನೆ ಹಂಸೆಯನ್ನು ಏರಿ ಅಭವನು ಅಭಯವೀಯಲು ಸರಾಗದಿಂದ ಆಗಮಿಸಿದನು. ೭೨. ಸುರಸೈನ್ಯ, ಖೇಚರಸೈನ್ಯ, ಕಿನ್ನರಸೈನ್ಯ, ಗರುಡ ಸಿದ್ಧ ಗಂಧರ್ವರ ಬಲಗಳೆಲ್ಲ ಬಂದು ನೆರೆದವು. ವ|| ಹಾಗೆ ಬರುತ್ತಿದ್ದ ಬಲಗಳನ್ನು ಶಿವನು ನೋಡುತ್ತಿರುವಾಗ

ವ॥ ಅಂತು ಬಂದ ಬಲಮಂ ಕಂಡು ಮದನಮರ್ದನಂ ನೋಡುತಿರ್ಪಾಗಳ್ ಬರುದಿನಗ್ಗದ ಗಣಂಗಳ್ ಬರುತಿರ್ದರದೆಂತೆಂದೊಡೆ,

ಕಂ॥ ತಮತಮಗುಗ್ರರುದಗ್ರರ್
ತಮತಮಗೆ ವಿಚಾರಸಾರರಭವರ್ ವಿಭವರ್ ।
ತಮತಮಗಾಪ್ತರ್ ಗುಪ್ತರ್
ತಮತಮಗೆ ಸಮಸ್ತಲೋಕವಂದ್ಯರನಿಂದ್ಯರ್ ॥ ೭೩

ಮ॥ ಸಿಡಿಲಂ ನುರ್ಗುವ ಶೇಷನಂ ಪೊಸೆವ ದಿಜ್ನಾಗಂಗಳಂ ಪೊಯ್ದು ಘೀ
ಳಿಡಿಪೇಳುಂ ಕಡಲಂ ತುಳುಂಕುವ ಕುಲಾದ್ರಿ ಸ್ತೋಮಮಂ ಕಿಳ್ತಣಂ ।
ಪೊಡೆಸೆಂಡಾಡುವ ಭೂಮಿಯಂ ಹಿಳಿವ ಚಂದ್ರಾದಿತ್ಯರಂ ಮೀಂಟುತಿ
ರ್ಪುಡುಸಂತಾನಮನಾರ್ದುದಿರ್ಚುವ ಗಣಗಳ್ ಬಂದರಾನಂದದಿಂ ॥ ೭೪

ವ॥ ಮತ್ತಮಲ್ಲಿ,

ಸ್ರ॥ ನಂದೀಶಂ ವೀರಭದ್ರಂ ಘನರವನಚಲಂ ಪುಷ್ಪದಂತಂ ಶುಭಂ ಸಾ
ನಂದಂ ಭೃಂಗೀಶನುಗ್ರಂ ಪಿಕ ಮುಖನಶಿತಗ್ರೀವನತ್ಯಾ ।
ನಂದಂ ದಿವ್ಯಾಂಗನಂಧಾಸುರಮಥನನನೇಕಾಸ್ಯನೋಂಕಾರಿ ಶರ್ವಾಂ
ಗಂ ದಕ್ಷಧ್ವಂಸಿ ಲಂಬೋದರನತುಳಬಳಂ ಹಸ್ತಿಕರ್ಣಂ ವಿಕರ್ಣಂ ॥ ೭೫

ಮ॥ ಗರಳಂ ಭದ್ರಮುಖಂ ಶುಭೋದಯನಭಂಗಂ ಶಂಕುಕರ್ಣಂ ಷಡ
ಕ್ಷರನುತ್ತುಂಗತಿರಂ ವೃಕೋದರನಟವ್ಯಂ ದಾರುಕಂ ಸಿಂಹಕೇ ।
ಸರಿ ಸಿದ್ಧಾಂತಿಯುದಾರನೇಕಜಟ ವಿದ್ಯುನ್ಮಾಲಿ ತಾರಾಕ್ಷನಂ
ಬರಕಾಯಂ ಘನಕಾಯನಪ್ರತಿಪಕಾಯಂ ವಿಸ್ತರಂ ಕುಂಭಜಂ ॥ ೭೬

ಮ॥ಸ್ರ॥ ಹಳನುತ್ತುಂಗಂ ವಿಚಿತ್ರಂ ತ್ರಿಶಿರನಸುರಕೋಳಾಹಳಂ ಯಜ್ಞಕೋಳಾ
ಹಳನುದ್ಯತ್ ಕಾಳಕೋಳಾಹಳನತನುಹರಂ ಮಂಗಳಂ ಮೃತ್ಯುಕೋಳಾ ।
ಹಳನೀಶಾನಂ ಪ್ರಘೋಷಂ ವಿಜಯನನಲಕಾಯಂ ಗಂಭೀರಸುಗಂಡ
ಸ್ಥಳನೂರ್ಧ್ವಾಂಗಂ ಪ್ರಜಿಹ್ವಂ ವಿಷಸರಣಿ ಪುರಧ್ವಂಸಿ ಸರ್ವಾಂಗಜಿಹ್ವಂ ॥ ೭೭

ಪ್ರಮಥಗಣಂಗಳು ಬರುತ್ತಿದ್ದಾರೆ. ೭೩. ಆ ಪ್ರಮಥರು ತಮತಮಗೆ ಉಗ್ರರು, ಉದಗ್ರರು, ವಿಚಾರಸಾರರು, ಅಭವರು, ವಿಭವರು, ಅವರು ತಮತಮಗೆ ಆಪ್ತರು, ಗುಪ್ತರು, ಸಮಸ್ತಲೋಕವಂದ್ಯರು, ಅನಿಂದ್ಯರು. ೭೪. ಈ ಪ್ರಮಥರೆಲ್ಲ ಅಸಹಾಯ ಶೂರರು. ಸಿಡಿಲನ್ನೆ ನುಗ್ಗುಮಾಡುವ, ಶೇಷನನ್ನು ಹೊಸೆಯುವ, ದಿಗ್ಗಜಗಳನ್ನು ಹೊಯ್ದು ಘೀಳಿಡುವಂತೆ ಮಾಡುವ, ಕಡಲನ್ನು ತುಳುಕಿಸುವ, ಕುಲಪರ್ವತಗಳನ್ನು ಕಿತ್ತು ಚೆಂಡಾಟವಾಡುವ ಭೂಮಿಯನ್ನೆ ಹಿಂಡುವ ರವಿಶಶಿಗಳನ್ನು ಮೀಂಟುವ ನಕ್ಷತ್ರಗಳನ್ನೆಲ್ಲ ಉದುರಿಸುವ ಶೂರರು ಅವರು. ಅವರೆಲ್ಲ ಆನಂದದಿಂದ ಬಂದರು. ೭೫. ಇವರೆಲ್ಲ ಪ್ರಮಥರಲ್ಲಿ ಕೆಲವರು. ೭೬-೭೭. ಇವರೆಲ್ಲ ಪ್ರಮಥಗಣವರರು.

ವ॥ ಇಂತಿವರ್ ಮೊದಲಾದ ಗಣೇಶ್ವರಬಲಸಹಿತಂ ಇಳಾತಳಮಂ ದಿಕ್ಚಕ್ರಮಂ ನಭೋಭಾಗಮಂ ತೆಕ್ಕನೆ ತೀವಿ ಬ್ರಹ್ಮಾಂಡಮಿಂಬಲ್ಲಿಂಬ ಸಂಭ್ರಮಮಿಂಬುವಡೆಯೆ ಬಂದು ನಿಂದ ಸಕಲಸುರಸಮೂಹಮಂ ವಿರೂಪಾಕ್ಷಂ ಕಂಡು ಮನಂಗೊಂಡು ಮುಂದಿರ್ದ ನಂದೀಶ್ವರನ ಮುಖಮಂ ನೋಡಿದಾಗಳ್,

ಮ॥ ನಯದಿಂದೆಳ್ದು ನತಾಸ್ಯನಾಗಿ ವಿಪುಳಶ್ವಾಸಂಗಳೊಳ್ ದೇವಕೋ
ಟಿಯನಾಂದೋಳಮನಾಡಿಸುತ್ತೆ ನಡೆತಂದುಚ್ಚಪ್ರಭಂ ಧರ್ಮಸಂ ।
ಚಯನಾನಂದಮಯಂ ಮಹೇಶನ ಸುಖಾವಾಸಾನ್ವಿತಂ ದಿಟ್ಟಿವಾ
ರಿಯ ಧೀರಂ ವೃಷಭೇಂದ್ರಸಪ್ರತಿಮಕಾಯಂ ಮುಂದೆ ನಿಂದಿರ್ಪುದುಂ ॥ ೭೮

ಚಂ॥ ಹರಿ ಜಯಜೀಯ ಜೀಯೆನೆಯಜಂ ಮರ್ಕು ಭಾಪೆನೆ ದೇವವೀಧಿ ದೇ
ವುರೆ ಸುರರಾಜರಾಜಧಿರುರೇ ಎನೆ ಸನ್ನುನಿಗಳ್ ಸರಾಗದಿಂ ।
ಹರಿಹರ ರುದ್ರ ಭದ್ರಯೆನೆ ನಿಂದ ಗಣಾವಳಿಯಳ್ಕಿಂ ಮದೀ
ಶ್ವರ ಭಲರೇ ಕಪರ್ದಿಯೆನೆ ನಂದಿಯನೇಱೆದನಿಮ್ಮ ಶಂಕರಂ ॥ ೭೯

ವ॥ ಇಂತು ವೃಷಭಾರೂಢನಾಗಿ ಕೂಡೆ ನೆರೆದ ಗರುಡರ ಗಡಣದ ಗಂಧರ್ವರ ಸಂದಣಿಯ ಸಿದ್ಧರ ಪದ್ಧತಿಯ ವಿದ್ಯಾಧರರ ವೀಥಿಯ ಕಿನ್ನರರ ವ್ರಜದ ಪನ್ನಗಪ್ರಕರದ ಕಿಂಪುರುಷಸ್ತೋಮದ ಯಕ್ಷರ ಪಂಙ್ತಿಯ ರಾಕ್ಷಸರ ತಿಂತಿಣಿಯ ಮಯೂರರ ಮಂತಣದ ಗುಹ್ಯಕರ ಯೂಥದ ಖೇಚರರ ತೆಕ್ಕೆಯ ಮನುಗಳ ಪಂಗಡದ ಮುನಿಗಳ ಗೊಂದಣದ ಸುರರ

ವ॥ ಇವರೇ ಮೊದಲಾದ ಗಣೇಶ್ವರರು ಇವರು ತಮ್ಮ ತಮ್ಮ ಬಲಸಹಿತ ಬಂದು ಭೂತಳ, ದಿಙ್ಮಂಡಳ ಹಾಗೂ ನಭೋಭಾಗವೆಲ್ಲವನ್ನೂ ವ್ಯಾಪಿಸಿ ಇನ್ನೂ ಬ್ರಹ್ಮಾಂಡವೇ ಇಲ್ಲವೇನೋ ಎಂಬುವ ಮಟ್ಟಿಗೆ ಸಂಭ್ರಮದಿಂದ ಬಂದು ನಿಂತರು. ಇವರೆಲ್ಲರನ್ನು ವಿರೂಪಾಕ್ಷನು ಕಂಡು ಮನ್ನಿಸಿ ಮುಂದಿದ್ದ ನಂದಿಯನ್ನು ನೋಡಿದಾಗ ೭೮. ಪರಶಿವನು ನೋಡಿದ ಕೂಡಲೆ ನಂದೀಶ್ವರನು ನಯದಿಂದ ಎದ್ದು ತಲೆಬಾಗಿ ತನ್ನ ಶ್ವಾಸಮಾತ್ರದಿಂದಲೇ ದೇವಕೋಟಿಯನ್ನು ಆಂದೋಳನವಾಡಿಸುತ್ತಾ ಮುಂದೆ ಬಂದು ಧರ್ಮಸಂಜಯನೂ ಆನಂದಮಯನೂ ಆದ ವೃಷಭೇಶ್ವರನು ಮುಂದೆ ಬಂದು ನಿಂತನು. ೭೯. ಹರಿಯು ಜಯ! ಎನ್ನಲು ಅಜನು ಜೀಯ-ಜೀಯ! ಎನ್ನಲು, ದೇವತಾಸಮೂಹವು ಮರ್ಕು! ಭಾಪು! ಎಂದಿತು, ಸುರರಾಜ ಹುರೆ! ಎಂದ, ಮುನಿಗಳು ಹರಹರ! ಎಂದರು, ಪ್ರಮಥಗಣರು, ರುದ್ರ ಭದ್ರ! ಎಂದರು ಉಳಿದ ಗಣರು ಭಕ್ತಿಯಿಂದ ಮದೀಶ್ವರ! ಭಲರೆ! ಎನ್ನುತ್ತಿರಲು ಕಪರ್ದಿ ಶಂಕರನು ನಂದಿಯನ್ನು ಏರಿದನು. ವ॥ ಹೀಗೆ ವೃಷಭಾರೂಢನಾಗಿ ಪರಮೇಶ್ವರನು ವಿವಾಹ ಮಂಟಪಾಭಿಮುಖನಾಗಿ ಹೊರಟನು. ಶಿವನ ಸುತ್ತಲೂ ದೇವತಾಸಮೂಹವೆಲ್ಲ ಶ್ರದ್ಧಾಭಕ್ತಿಗಳಿಂದ ಮುನ್ನಡೆಯಿತು. ಅವರಲ್ಲಿ ಗರುಡ-ಗಂಧರ್ವ ಸಿದ್ಧ-ವಿದ್ಯಾಧರ-ಕಿನ್ನರ-ಪನ್ನಗ- ಕಿಂಪುರುಷ-ಯಕ್ಷ-ರಾಕ್ಷಸ-ಮಯೂರ- ಗುಹ್ಯಕ- ಖೇಚರ-ಮನು-ಮುನಿಸುರ- ದೇವಕಾಮಿನಿಯರು, ದಿಕ್ಪಾಲಕರು, ಹರಿ ವಿರಿಂಚಿಗಳು, ಬಿರುದು

ನೆರವಿಯ ದೇವಕಾಮಿನೀನಿಕರದ ದಿಕ್ಪಾಲಕನಿಕಾಯದ ಹರಿವಿರಿಂಚಿಗಳ ಪರಿವಿಡಿಯ ಬರುದುಗಣಂಗಳ ತೆರಳ್ಕೆಯ ರವಿಮಂಡಲದ ಹಿಂಡುಗಳ ಶಶಿಮಂಡಲದ ಸಾಲ್ಗಳ ಕುಂಜರನಿಕರದ ತುರಂಗಸಂಘಧ ರಥಪ್ರತಾನದ ಪದಾತಿಬಲದಿರ್ಕೆಲದೊಳ್ ದಿಕ್ಕರಿಗಳ ಮೇಲೆ ಮಿಕ್ಕು ಬರ್ಪ ದೇವಾಂಗವಸ್ತ್ರವಿತಾನದ ಪಟ್ಟಗಳೊಟ್ಟಜೆಯ ಸಾದಿನ ಪೆಟ್ಟಿಗೆಗಳ ಮೃಗಮದದ ಕೊಂಬುಗಳ ಕರ್ಪೂರಕರಂಡಕಾನಿಕರದ ಪನಿನೀರ ಭಾಜನಂಗಳ ಕತ್ತುರಿಯ ಭಾಂಡಂಗಳ ಬಾವನ್ನದೊಟ್ಟಲ್ಗಳ ರತ್ನಾಭರಣರಾಶಿಗಳ ಚಿಂತಾಮಣಿಯ ಮುಡಿಪುಗಳ ಪರುಷದ ಕಣಿಯ ತನತನಗೆ ಪಿಡಿದು ಬರ್ಪ ಬಿಳಿಯ ಕರ್ಬಿನ ನಡೆವನದ ಪುಣ್ಯಫಲವ್ರಾತದ ಸುರತರುವಿನಾರವೆಗಳ ಸುರಭಿಗಳೊಯ್ಯಾರದ ಮುಂದಣ ವೃಷಭಧ್ವಜದ ದರ್ಪಣದ ತಳಿರ್ಗಳ ಕಳಶಂಗಳಂ ಪಿಡಿದು ಮೆಲ್ಲಮೆಲ್ಲನಡಿಯಿಡುವರುಂಧತಿಯನಸೂಯಾದೇವಿ ಗಾಯತ್ರಿ ಸಾವಿತ್ರಿ ಸರಸ್ವತಿ ಶಚಿದೇವಿ ಲಕ್ಷ್ಮಿ ರೋಹಿಣಿಯರಾದಿಯಾದ ಪರಮಪತಿವ್ರತಾವಿತಾನದ ಪೊಡೆವ ಭೇರಿಯ ಸೂಳಯ್ದ ನಿಸ್ಸಾಳದ ಪೂರಯಿಪ ಶಂಖದ ಬರುದೆತ್ತಿ ಕರೆವ ಕಹಳೆಗಳ ಮೊಳಗುವ ಮದ್ದಳೆಯ ಸುಗತಿಯನುಗುಳ್ವ ಕರಡೆಗಳ ಮೇಳಯ್ದು ಕಂಸಾಳದ ಗರ್ಗರಿಪ ಗಿರ್ಗಟಂಗಳ ಪೊಣ್ಮುವ ತಾಳದ ಉಣ್ಮುವ ಗಾನದ ಭೃಂಗಿಯ ನರ್ತನದ ಭೋರೆಂಬ ರವದ ಸಮಸ್ತವಸ್ತುವಿಸ್ತರದ ನಡುವೆ ಧವಳಾತಪತ್ರದ ಭುವನಾಶ್ರಯಂ ಜಡೆಮುಡಿಯ ಬೆಡಂಗಂ ಮಕುಟದ ಮನೋಹರಂ ಶಶಿಕಳೆಯ ಸೊಬಗಂ ಬಾಸಿಗದ ಭಾಗ್ಯನಿಧಿ ಕರ್ಣಾವತಂಸದ ಕಮನೀಯಂ ಕಪೋಳದ ವಿಪುಳಂ ಭ್ರೂಲತೆಯ ಭಾವಕಂ ಅಲರ್ಗಣ್ಗಳ ಸುಲಲಿತಂ ಶ್ರೀವದನದ ಪಾವನಂ ಭೂರಿಭುಜದ ಮಾರಾರಿ ನಳಿತೋಳ್ಗಳ ನಾಯಕಂ ಕರತಳದ ಕಾಮಧೇನು ಕಂಕಣದ ಕಳಾವಿದಂ ಹಸ್ತಪವಿತ್ರದ ಸುಲಭಂ ಮಾದುಫಲದ ಮಹಾನಿಧಿ ಹಾರದ ಹರ್ಷಮಯಂ ಪದಕದ ಸದಮಳಂ ಜಾಹ್ನವಿಸನ್ನುಕ್ಕುಟಂ ಜನ್ನದಾರದ ಪನ್ನಗಭೂಷಣಂ ಪವಿತ್ರದ ಪರಮಾತ್ಮಂ ಧವಳೋತ್ತರೀಯದ ವಿರಳಂ ಪರಿವಸನದ ಪುಣ್ಯಾಧಿಕಂ ನಂದಿ ವಾಹನದ

ಉಗ್ಗಡಿಪ ಗಣಂಗಳು, ರವಿಗಳು, ಶಶಿಗಳು, ಗಜ-ಅಶ್ವ-ರಥ ಪದಾತಿಬಲಗಳ ಕೆಲಬಲದಲ್ಲಿ ನಡೆದುವು, ದಿಕ್ಕರಿಗಳ ಮೇಲೆ ದೇವಾಂಗವಸ್ತ್ರಗಳು; ಪಟ್ಟವಸ್ತ್ರಗಳು, ಸಾದಿನ ಪೆಟ್ಟಿಗೆಗಳು, ಮೃಗಮದ ತುಂಬಿದ ಕೊಂಬುಗಳು, ಕರ್ಪೂರದ ಭರಣಿಗೆಗಳು, ಪನ್ನೀರ ಭಾಜನಗಳು, ಕಸ್ತೂರಿಯ ಭಾಂಡಗಳು, ಶ್ರೀಗಂಧದ ಬಟ್ಟಲುಗಳು, ರತ್ನಾಭರಣ ರಾಶಿಗಳು, ಚಿಂತಾಮಣಿ ಮುಡಿಪುಗಳು, ಪರುಷದ ಗಣಿಗಳನ್ನು ಹಿಡಿದು ಬರುತ್ತಿರುವವರು, ಬಿಳಿಯ ಕಬ್ಬು, ನಡೆವವನ ಫಲಸಮೂಹ, ಸುರತರು, ಸುರಭಿ (ದೇವಧೇನು) ಸಮೂಹದ ಮುಂದೆ ವೃಷಭಧ್ವಜ ದರ್ಪಣ ತಳಿರು ಕಲಶಗಳ ಹಿಡಿದು ಮೆಲ್ಲಮೆಲ್ಲನೆ ಅಡಿಯಿಡುತ್ತಿರುವ ಅರುಂಧತಿ, ಅನಸೂಯೆ, ಗಾಯತ್ರಿ, ಸಾವಿತ್ರಿ, ಸರಸ್ವತಿ, ಲಕ್ಷ್ಮಿ, ಶಚಿ, ರೋಹಿಣಿಯರೇ ಮುಂತಾದ ಪರಮ ಪತಿವ್ರತೆಯರು. ಮುಂದೆ ಭೇರಿ, ನಿಸ್ಸಾಳ, ಶಂಖ, ಕಹಳೆ, ಮದ್ದಳೆ, ಕರಡೆ, ಕಂಸಾಳ, ಗಿರ್ಗಿಟ, ತಾಳ, ಗಾನ, ಭೃಂಗಿ ನರ್ತನ, ಮುಂತಾದ ವಾದ್ಯಗಳ ಮೊಳಗು; ಅದರ ನಡುವೆ ಶ್ವೇತಚ್ಛತ್ರ ಹಿಡಿದಿರುವ, ಜಡೆಮುಡಿಯ ಬೆಡಗಿನ ಮಕುಟದ ಮನೋಹರ, ಶಶಿಕಳೆಯ ಸೊಬಗನಾದ ಪರಶಿವನು ಬಾಸಿಂಗ ಧರಿಸಿ ಕರ್ಣಾವತಂಸ ಸೂಡಿ, ಮಂಗಳಕರವಾದ ಅಂಗಾಂಗಗಳಿಂದ ರಾರಾಜಿಸುವವನಾಗಿ, ಹೊಸ ಮದವಣಿಗನಾಗಿ ಪಂಪಾವಿರೂಪಾಕ್ಷನು ತನ್ನ ಕಾರುಣ್ಯಕಟಾಕ್ಷಕ್ಕೆ ಕೈಮುಗಿವ ನಾಲ್ಕು ಕಡೆಯ

ನವೀನಂ ಭಸಿತದ ಹೊಸಮದುವಣಿಗನೆನಿಪ ಆ ಪಂಪಾವಿರೂಪಾಕ್ಷಂ ತನ್ನ ಕಾರುಣ್ಯಕಟಾಕ್ಷಕ್ಕೆ ಕೆಯ್ಮಿಗಿವ ನಾಲ್ಕುಂ ದೆಸೆಯ ದೇವಕುಲಕ್ಕೆ ಕರುಣಿಸುತ್ತುಂ ಪ್ರಸನ್ನಮುಖಂ ಸುಖಾವರಣಂ ಶರ್ವಂ ಸರ್ವಸಂಭ್ರಮದಿಂ ಬರೆ ನಡೆತಂದಿದಿರ್ಗೊಳ್ವ ಸುವಾಸಿನಿಯರೊಯ್ಯಾರದಿಂ ನಿವಾಳಿಗಳಂ ಪಿಡಿದು ನಿವಾಳಿಸಲ್ ಮತ್ತಮಲ್ಲಿಂ ಮುಂದೆ ಕುಲಾಂಗನೆಯರ್ ಸೂಸುವ ಮುತ್ತಿನ ಸೇಸೆಗಳನಾದರದೊಳಾನುತ್ತುಂ ನಂದೀಶ್ವರನ ಬಿನ್ನಿಂದವನಿತಳಕ್ಕವತರಿಸುತ್ತುಂ ಪ್ರಮಥಗಣಂಗಳ್ ಕೆಯ್ಮಿಯಿಂ ಕೆಯ್ಗುಡೆ ಮಹಾವಿವಾಹಮಂಟಪಮಂ ಪುಗುತರ್ಪಾಗಳ್ ಕಂಡು ಹರ್ಷಮ ನೆಲೆಗೊಂಡು ಮೆಯ್ಯಿಕ್ಕಿ ನಿಂದ ಮೇನಾದೇವಿಗಂ ಮಾವನಪ್ಪ ಗಿರಿರಾಜಂಗಂ ಕಾರುಣ್ಯ ಮನೀಯುತ್ತುಂ ಸಿಂಹವಿಷ್ಟರವನವಷ್ಟಂಭಿಸಿ ಸಮಯೋಚಿತಾನ್ನಮನುಂಡು ಮಹಾವಿಭವಮಂ ಕಂಡು ಮಧುಪರ್ಕಮಂ ಕೆಯ್ಕೊಂಡು,

ಕಂ॥ ಇರೆ ಹರಿಯಜರನುಮಿಸುತುಂ
ಪರಮಶುಭಾಕರ ಮುಹೂರ್ತಮೆಲೆಲೆ ಸಮೀಪಂ ।
ಕರುಣಿಪುದೆನೆ ಮಂಗಳವಾ
ಗ್ವಿರಚನೆಯಂ ಕೇಳ್ದು ಭೋಂಕನೆಳ್ದಂ ರುದ್ರಂ ॥ ೮೦

ಅಮಮ ವರಮೂರ್ತಿ ನವವಿ
ಭ್ರಮ ವಿಸ್ತರನಮೃತಶೀಲನಾನಂದಮಯಂ ।
ಮಮಕರ್ತಂ ಮಮಭರ್ತಂ
ಸುಮುಹೂರ್ತಂ ಪತ್ತಿಸಾರ್ವವ್ಯೋಲ್ ನಡೆತಂದಂ ॥ ೮೧

ವ॥ ಅಂತು ನಡೆತಂದು ವಿವಾಹಗೇಹದೊಳಪ್ಪೊಕ್ಕು,

ಕಂ॥ ಮುತ್ತೈದೆಯರೊತ್ತೊತ್ತೆಯ
ನೊತ್ತರಿಸುತೆ ಬೆಳಗಿನೊಳಗೆ ಹೊಸಬೆಳಗಂ ।
ಸುತ್ತುಂ ಸವಿನೋಟಮನೀ
ಯುತ್ತುಂ ಜವನಿಕೆಯ ನೆಲೆಗೆ ಶಿವನೈತಂದಂ ॥ ೮೨

ದೇವಕುಲವನ್ನು ಕರುಣಿಸುತ್ತಾ ಪ್ರಸನ್ನವದನನಾಗಿ ಸಂಭ್ರಮದಿಂದ ಆಗಮಿಸಿದನು; ಅಲ್ಲಿಗೆ ಮುತ್ತೈದೆಯರು ಎದುರ್ಗೊಂಡು ನಿವಾಳಿ (ದೃಷ್ಟಿ) ತೆಗೆದರು, ಮುಂದೆ ಕುಲಾಂಗನೆಯರು ಮುತ್ತಿನ ಸೇಸೆಗಳನ್ನು ಸೂಸಿದರು, ಪರಶಿವನು ನಂದಿಯಿಂದ ಕೆಳಗಿಳಿದನು. ಪ್ರಮಥಗಣಂಗಳು ಕೈನೀಡಿದರು, ಶಿವ ವಿವಾಹಮಂಟಪವನ್ನು ಪ್ರವೇಶಿಸುವಾಗ ಮೇನಾದೇವಿ ಮತ್ತು ಮಾವ ಹಿಮವಂತರು ಅಡ್ಡಬಿದ್ದರು, ಅವರನ್ನು ಕರುಣಿಸಿ, ಸಿಂಹವಿಷ್ಟರವನ್ನು ಅಲಂಕರಿಸಿದ ಸ್ವಾಮಿಯು ಸಮಯೋಚಿತಾನ್ನವನ್ನುಂಡು, ಮಧುಪರ್ಕವನ್ನು ಸ್ವೀಕರಿಸಿದನು. ೮೦. ಮುಹೂರ್ತವು ಸಮೀಪಿಸಿತೆಂದು ಹರಿಯಜರು ಸೂಚಿಸಿದರು. ಇದು ಪರಮ ಶುಭಕರ ಮಂಗಳ ಮುಹೂರ್ತ ಎಂಬ ಮಾತು ಕೇಳಿದ ಪಂಪಾವಿರೂಪಾಕ್ಷನು ಆಸನದಿಂದ ಎದ್ದನು. ೮೧. ವರಮೂರ್ತಿಯೂ ಅಮೃತಶೀಲನೂ ಆನಂದಮಯನೂ ಆದ ಪರಮೇಶ್ವರನು ಸುಮುಹೂರ್ತದಲ್ಲಿ ನಡೆತಂದನು. ೮೨. ಮಂಟಪದಲ್ಲಿ ಮುತ್ತೈದೆಯರು ಕಿಕ್ಕಿರಿದು ನೆರೆದಿದ್ದಾರೆ. ಅವರನ್ನು ಒತ್ತರಿಸಿಕೊಂಡು, ಎಲ್ಲರ ಕಣ್ಣಿನ ಬೆಳಗು ಸುತ್ತಲೂ ಆವರಿಸಿದೆ, ಆ ಬೆಳಗಿನಲ್ಲಿ

ವ।। ಆ ಸಮಯದೊಳ್ ಪಾರ್ವತೀದೇವಿ ನಿಟ್ಟಯ್ದೆ ಮೆಟ್ಟಕ್ಕಿಯಂ ಮೆಟ್ಟಿ ತೆಱೆಯ ಮಱೆಯಂ ಮಱೆಗೊಂಡು ನಿಂದಿರ್ಪಲ್ಲಿ

ಕಂ।। ನಲ್ಲರ ನಡುವುಪಚಾರಂ
ಸಲ್ಲಲಿತೇಕ್ಷಣದ ನಡುವೆ ಪಕ್ಷ ಪ್ರಪುಟಂ ಸಂ
ಪುಲ್ಲರದಮಧ್ಯದೊಳ್ ಮಿಗೆ
ಸೊಲ್ಲಿರ್ಪಂತಿರ್ದುದಲ್ಲಿ ತೆಱೆ ಹರನಿದಿರೊಳ್ ।। ೮೩

ವ।। ಅಂತಿರ್ಪ ಜವನಿಕೆಯನತಿಸ್ನೇಹದಿಂ ನೋಡಿ,

ಕಂ।। ಅವಿಭೇದಪ್ರಕೃತಿಗಳೆನಿ
ಪವಯವದಿಂದೊಪ್ಪುವರ್ಧನಾರೀಶ್ವರರೊಳ್ ।
ಜವನಿಕೆ ನಡುವೊಡ್ಡಿತು ಕಾ
ಲವಶದಿನಾವಂಗಮಾವುದಾಗದು ಧರೆಯೊಳ್ ।। ೮೪

ಬೆಳಗಿನ ಬೀಜಾವಳಿಯೊ
ರ್ಬುಳಿಯೋ ನಕ್ಷತ್ರರಾಶಿಯೋ ನವಪುಣ್ಯಂ ।
ಗಳ ಪುದುವೋ ಚಂದ್ರಿಕಾತಂ
ಡುಳವೋ ಎನೆ ತೊಳಗಿ ತೋರ್ಪ ಮೆಟ್ಟಕ್ಕಿಗಳಂ ।। ೮೫

ಕಂ।। ಕಾಂತಿಮಯಂ ಶಶಿಚೂಡಂ
ಶಾಂತಂ ನವಭೋಗಿಯೆನಿಪ ಲೀಲಾವಾಸಂ ।
ಸಂತಂ ಸುರುಚಿರಹರ್ಷಮ
ಯಂ ತಡೆಯದೆ ಮೆಟ್ಟಿ ನಿಂದ ಸಮನಂತರದೊಳ್ ।। ೮೬

ಶಿವಪ್ರಕಾಶವು ಸವಿನೋಟವನ್ನು ಒದಗಿಸಿರುವಾಗ ಶಿವನು ಜವನಿಕೆ (ತೆರೆ)ಯ ಹತ್ತಿರ ಬಂದನು. ವ।। ಅಷ್ಟು ಹೊತ್ತಿಗೆ ಸರಿಯಾಗಿ ಗಿರಿಜೆ ಮೆಟ್ಟಕ್ಕಿಯನ್ನು ಮೆಟ್ಟಿ ತೆರೆಯ ಮರೆಯಲ್ಲಿ ನಿಂತಿದ್ದಾಳೆ. ೮೩. ಈ ನೂತನ ವಧೂವರರ ಮಧ್ಯದಲ್ಲಿ ಇದ್ದ ತೆರೆಯು ನಲ್ಲರ ನಡುವೆ ಉಪಚಾರವೂ, ಲಲಿತನೋಟಗಳ ನಡುವೆ ರೆಪ್ಪೆಗಳೂ, ಪಕ್ಕವಾದ್ಯಗಳ ಮಧ್ಯದಲ್ಲಿ ಹಾಡುವ ಸೊಲ್ಲೂ ಇರುವಂತೆ ಇತ್ತು. ೮೪. ಶಿವಶಿವೆಯರು ಅವಿಭೇದ ಪ್ರಕೃತಿಗಳು, ಅವರಿಗೆ ಎಂದಿಗೂ ವಿಭಾಗವೇ ಇಲ್ಲ! ಅಂಥ ಅರ್ಧನಾರೀಶ್ವರರಿಗೂ ಜವನಿಕೆ ಅಡ್ಡಬಂತು ಎಂದಮೇಲೆ ಕಾಲವಶದಿಂದ ಲೋಕದಲ್ಲಿ ಏನು ತಾನೆ ಆಗಬಾರದು! ಎಂಬ ಮಾತು ನಿಜವಾಗುತ್ತದೆ. ೮೫. ಮಂಟಪದಲ್ಲಿ ವಧೂವರರು ಕಾಲಿಟ್ಟು ನಿಲ್ಲುವ ಮೆಟ್ಟಕ್ಕಿಗಳು; ಅವು ಬೆಳಗಿನ ಬೀಜಾವಳಿ ಒಟ್ಟಿಗೆ ಸೇರಿದೆಯೊ, ನಕ್ಷತ್ರರಾಶಿಯೊ, ನವಪುಣ್ಯದ ಪುದುವೊ, ಚಂದ್ರಿಕೆಯ ತಂಡುಲವೋ ಎಂಬಂತಿದ್ದವು. ೮೬. ಕಾಂತಿಮಯನೂ ಶಶಿಚೂಡನೂ ಶಾಂತನೂ ನವಭೋಗಿಯೂ ಲೀಲಾವಿಲಾಸನೂ ನಿತ್ಯಾನಂದಸ್ವರೂಪನೂ ಆದ ಪರಶಿವನು ಮೆಟ್ಟಕ್ಕಿಯನ್ನು ಮೆಟ್ಟಿ

ಹರಿಯುಂ ಸರಸಿಜಭವನುಂ
ಪುರುಹೂತನುಮೆಸೆವ ಋಷಿಗಳುಂ ಗಣಕುಲಮುಂ ।
ಗಿರಿಜೇಶನ ಗಿರಿಜೆಯ ಭಾ
ಸುರಪರಿಧಾನದ ಸಮಿಪದೊಳ್ ನಿಂದಾಗಳ್ ॥ ೮೭

ಚಂ॥ ಕಳಕಳಮಂ ನಿವಾರಿಸುತುಮಾಯತಮೇ ಎನಲಾಯತಂ ಲಸದ್
ಗಳಬಳಮಂ ವಿವರ್ಜಿಸುತುಮಾಯತಮೇ ಎನಲಾಯತಂ ನಿರಾ ।
ಕುಳಿತಮನಂ ಬೃಹಸ್ಪತಿ ಸಮಾಯತಮೇ ಎನಲಾಯತಂ ಮನಂ
ಗೊಳಿಪ ಮಹಾಮುಹೂರ್ತದೊಳಗಾಯತಮೇ ಎನೆ ತಪ್ಪದಾಯತಂ ॥ ೮೮

ಕಂ॥ ಅಮರಗುರು ಸಕಳವೇದಾ
ಗಮಕೋವಿದನೊಲ್ದು ಭಕ್ತಿಯಿಂದಂ ಪುಣ್ಯಾ ।
ಹಮೆನುತ್ತುಮಿತ್ತ ರಾಜತ್
ಸುಮುಹೂರ್ತಂ ಬಂದು ತೆಱೆಯನೋಸರಿಸಲೊಡಂ ॥ ೮೯

ಕರಡೆಗಳ ರವಂ ನಿಸ್ಸಾ
ಳರವಂ ಭೇರೀರವಂ ಮೃದಂಗರವಂ ದೇ ।
ವರ ಹೂಮಳೆಗಳ ಭೋರೆಂ
ಬ ರವಂ ಮಂಗಳರವಂಗಳುಣ್ಮಿದುವಾಗಳ್ ॥ ೯೦

ಕಂ॥ ಆನಿರೆ ಮತ್ತೊರ್ವಳ್ ಗಡ
ತಾನಿರ್ಪಳ್ ಜಡೆಯೊಳಿನುತೆ ಮುಳಿದಿಡುವಂತಾ ।
ಮಾನಿನಿ ಜೇರಿಗೆ ಬಿಲ್ಲದೊ
ಳಾನುತೆ ಶಿವನುತ್ತಮಾಂಗಮಂ ಪದೆದಿಟ್ಟಳ್ ॥ ೯೧

ನಿಂತುಕೊಂಡನು. ಅನಂತರ- ೮೭. ಹರಿ, ಅಜ, ದೇವೇಂದ್ರ, ಋಷಿಗಳು, ಗಣಕುಲ ಇವರೆಲ್ಲ ವಧೂವರರ ಸುತ್ತಲೂ ತನ್ಮಯರಾಗಿ ಇರುವಾಗ-೮೮. ಮದುವೆ ಮಂಟಪದಲ್ಲಿ ವೈದಿಕ ಸ್ವಸ್ತಿವಾಚನ ಕೇಳತೊಡಗಿತು. ಹಿಮವಂತನು ಸಭೆಯ ಅನುಮತಿ ಪಡೆಯಲು- ಕಲಕಲವನ್ನು ನಿವಾರಿಸಿ 'ಆಯತವೇ' ಎನ್ನಲು, ಸಭೆ 'ಆಯತ' ಎಂದಿತು; ಗಲಭೆಯನ್ನು ತಡೆದು 'ಆಯತ' ಎನ್ನಲು, ಸಭೆ 'ಆಯತ' ಎಂದಿತು ; ದೇವಗುರು ಬೃಹಸ್ಪತಿಯು, 'ಸಾವಧಾನಂ' 'ಆಯತ' ಎನ್ನಲು ಸಭೆ, 'ಸಾವಧಾನಂ' 'ಸಮಾಯತಂ' ಎಂದು ಸಭೆ ಹಾರೈಸುತ್ತಿತ್ತು. ೮೯. ದೇವಗುರುವು ಸಕಲ ವೇದಾಗಮಕೋವಿದನು; ಆತ ಭಕ್ತಿಯಿಂದ ಪುಣ್ಯಾಹ ಎಂದೊಡನೆಯೇ ಸುಮುಹೂರ್ತವು ಬಂದು ತೆರೆ ಸರಿಯಿತು. ೯೦. ಅದೇ ಸಮಯಕ್ಕೆ ಕರಡೆ, ನಿಸ್ಸಾಳ, ಭೇರಿ, ಮೃದಂಗಗಳು ಮೊಳಗಿದವು, ಪುಷ್ಪವೃಷ್ಟಿಯಾಯಿತು, ಮಂಗಳಗೀತೆಗಳು ಉಣ್ಮಿದವು. ೯೧. ಜೇರಿಗೆ ಬಿಲ್ಲವನ್ನು ಅಗಜೆ ಶಿವನ ಮಂಡೆಯ ಮೇಲೆ ಎರಚಬೇಕು. ಆಗ ಅವಳಿಗೆ ಶಿವನ ಜಡೆಯಲ್ಲಿದ್ದ ಗಂಗೆ ಕಂಡಳು. ಆಗ ಪಾರ್ವತಿ ನಾನಿರುವಾಗ ಜಡೆಯಲ್ಲಿ ಮತ್ತೋರ್ವಳಿವಳಾರು

ಮೃಡನಾಗಳ್ ಗಿರಿಜೆಯ ಚೆ
ಲ್ವಿಡಿದ ಮೊಗಂಗಂಡು ಸಾತ್ತ್ವಿಕಂ ಕೆಯ್ಕೊಂಡೊ ।
ಲ್ಡಿಡುವಾ ಜೀರಿಗೆ ಬೆಲ್ಲಂ
ಸಡಿಲ್ದು ಕಂಪಸದೆ ಬಿಳ್ದುವಗಜೆಯ ಪದದೊಳ್ ॥ ೯೨

ವ॥ ಅನಂತರದಲ್ಲಿ,

ಕಂ॥ ಅಱಸುತ್ತಿರೆ ಪಲಕಾಲದೊ
ಳುಱೆ ನಿನ್ನನೆನುತ್ತೆ ಶಿವನ ಮಕುಟೇಂದುಗೆ ತಾಂ ।
ತುಱುಗಿದ ತಾರಗೆಯೆಂಬಾ
ತೆಱದಿಂ ತಂಡುಲವನಗಜೆ ಸುರಿದಳ್ ಶಿರದೊಳ್ ॥ ೯೩

ವ॥ ಆಗಳ್,

ಕಂ॥ ಪರಮತಪೋನಿಧಿಯೆನಿಸಿದ
ಗಿರಿಜೆಗೆ ಪುಣ್ಯಾಂಬುವಿಂದಲಭಿಷೇಕಮನೊ ।
ಪ್ಪಿರೆ ಮಾಡುವ ತೆಱದಿಂದಂ
ಗಿರಿಶಂ ನವತಂಡುಲಂಗಳಂ ತವೆ ಸುರಿದಂ ॥ ೯೪

ವ॥ ಆ ಸಮಯದೊಳ್,

ನಲಿನಲಿದು ಬಂದು ಗಿರಿಪತಿ
ಯೊಲವಿಂದಂ ಗಿರಿಜೆಸಹಿತವುಂ ನಾವೆಲ್ಲವುಂ ।
ನೆಲೆದೊಳ್ತಿರ್ ಬಳಿದೊಳ್ತಿರ್
ಸಲೆದೊಳ್ತಿರ್ ನಿಮಗೆನುತ್ತೆ ಧಾರೆಯನೆರೆದಂ ॥ ೯೫

ಎಂದು ಮುನಿದು ಇಟ್ಟಳೋ ಎಂಬಂತೆ ನವವಧು ಜೀರಿಗೆ-ಬೆಲ್ಲವನ್ನು ತಲೆಯ ಮೇಲಿಟ್ಟಳು. ೯೨. ಶಿವನೂ ಜೀರಿಗೆ ಬೆಲ್ಲವನ್ನು ಅಗಜೆಯ ಮಂಡೆಯ ಮೇಲೆ ಇಡ ಬೇಕು. ಆತ ಅವಳ ಮುಖವನ್ನು ಕಂಡೊಡನೆಯೇ ಆತನಿಗೆ ಸಾತ್ತ್ವಿಕಭಾವ ಮೂಡಿತು. ಕೈ ನಡುಗಿತು, ಒಲಿದು ಮಂಡೆಯ ಮೇಲೆ ಆತ ಇಟ್ಟ ಜೀರಿಗೆ ಬೆಲ್ಲ ಅಗಜೆಯ ಪಾದಗಳ ಮೇಲೆ ಬಿತ್ತು. ೯೩. ಜೀರಿಗೆ ಬೆಲ್ಲ ವಿಧಿಯಾದ ಮೇಲೆ ವಧೂವರರು ಅಂಜಲಿಯಿಂದ ತಂಡುಲವನ್ನೆತ್ತಿ ಪರಸ್ಪರ ಮಂಡೆಯ ಮೇಲೆ ಎರಚಬೇಕು. ಪಾರ್ವತಿ ಶಿವನ ಮಂಡೆಯ ಮೇಲೆ ಎರಚಿದ ತಂಡುಲಾಂಜಲಿ 'ನಿನ್ನನ್ನು ಪಲಕಾಲ ಅರಸಿದೆ' ಎಂದು ಆಕೆ ಶಿವನ ಮಕುಟವೆಂಬ ಇಂದುಗೆ ತಾರೆಗಳನ್ನು ಮುಡಿಸಿದಳೊ ಎಂಬಂತೆ ಇತ್ತು. ೯೪. ಪರಮ ತಪೋನಿಧಿಯೆನಿಸಿದ ಗಿರಿಜೆಗೆ ಪುಣ್ಯತೀರ್ಥದಿಂದ ಅಭಿಷೇಕ ಮಾಡುವನೋ ಎಂಬಂತೆ ಗಿರೀಶನು ವಧುವಿನ ಮಂಡೆಯ ಮೇಲೆ ಸುರಿದ ತಂಡುಲಗಳು ಕಂಡುವು. ೯೫. ಆಗ ಹಿಮವಂತ ಮೇನೆಯರು ಒಲವಿಂದ ಬಂದು ಗಿರಿಜೆ ಸಹಿತವಾಗಿ ನಾವೆಲ್ಲರೂ ನಿಮಗೆ ನೆಲೆದೊಳ್ತಿರ್ ಬಳಿದೊಳ್ತಿರ್ ಸಲೆದೊಳ್ತಿರ್ ಎಂದರೆ ಎಂದೆಂದಿಗೂ ನಿಮ್ಮ ಸೇವಾತತ್ಪರರು ಎಂದು ಧಾರೆಯೆರೆದರು.

ಗಿರಿಜಾತೆಯ ಸಕಲಗುಣಂ
ಹರ ನಿಮ್ಮಂ ಸುತ್ತುಗೀ ತೆಱದೊಳೆಂಬಂತೊ ।
ಪ್ಪಿರೆ ಸುತ್ತಿದರತಿಮೃದುತರ
ಸುರುಚಿರ ನವಕಾಂತಿಯೆಸೆವ ಗುಣಮಂ ಗುಣಮಂ ॥ ೯೬

ಅಯ್ದುಂ ವದನನ ಕಾಂತೆಯ
ನೆಯ್ದಿ ಪತಿವ್ರತೆಯರಧಿಕತರಮುದದಿಂ ಮು ।
ತ್ತೈದೆಯೆ ನಿಟ್ಟೈದೆಯೆ ನೆಱಿ
ಯಯ್ದೆಯೆ ಸಲೆಯಯ್ದೆಯೆಂದು ಪರಸುತ್ತಿರ್ದರ್ ॥ ೯೭

ವ॥ ಇಂತು ವಿವಾಹವಿಭ್ರಮಮಂ ಕೆಯ್ಕೊಂಡು ಗಿರಿಜೆಯ ಕರತಳಮಂ ಪಿಡಿದು ಸೋಮಂ ಸೋಮಧರಂ ವ್ಯೋಮಕೇಶ ಹೋಮಸ್ಥಳಕ್ಕೆ ನಡೆತಂದಿಕ್ಕಿದ ಹಸೆಯ ಮೇಲೆ ಪಶುಪತಿ ಕುಳ್ಳಿರೆ ಮಂತ್ರತಂತ್ರಯಂತ್ರಸಿದ್ಧನಪ್ಪ ಪರಮೇಷ್ಠಿ ಹರನನನುಜ್ಞೆಯಿಂ ಸ್ಥಂಡಿಲಮನಲಂಕರಿಸಿ ಮೆಲ್ಲನುಲ್ಲೇಖನಂಗೆಯ್ದಗ್ನಿಯಂ ಪ್ರತಿಷ್ಠೆಯಂ ಮಾಡಿ ಬ್ರಹ್ಮರ್ಷಿ ದೇವರ್ಷಿ ವಿಪ್ರೋತ್ತಮರನನು ಮತದಿಂ ಪ್ರಾಣಾಯಾಮಂ ಮಂತ್ರಿಸಿ ಸಮಿತ್‌ಪರಿಸ್ತರಣಂ ಪಾತ್ರಾಸಾಧನಂ ಆಜ್ಯಸಂಸ್ಕಾರಂ ಸ್ರುಕ್‌ಸ್ರುವಸಮ್ಮಾರ್ಜನಂ ದೂರ್ವಾಯವಹಸ್ತಬಂಧನಾಗಿ ಸತ್ಕ್ರಿಯೆಗಳಂ ಹೋಮಮಂ ಮಾಡುತ್ತಿರ್ದು,

ಕಂ॥ ಭಾವಿಸಿ ಮಂತ್ರಾವಳಿಯಿಂ
ದೋವುತೆ ಹುತವಹನೊಳೆಸೆವ ಲಾಜಾಹುತಿಯಂ ।
ತೀವಿದನಂತರಮಗಸುತೆ
ದೇವನ ಬಲದಿಂದೆಡಕ್ಕೆ ಬಂದಳನೂನಂ ॥ ೯೮

ವ॥ ಅಂತು ಬರೆ ಪೂರ್ಣಾಹುತಿಯಂ ಕೊಟ್ಟು ಹೋಮಸಮಾಪ್ತಿಯೊಳಾಪ್ತನಪ್ಪ ಕಮಳಜಂ ಸಪ್ತಪದಿಯಂ ಕಟ್ಟಳ್ಕೆಂ ಮೆಟ್ಟಿಸಿ ತದನಂತರಂ ದೇವದಂಪತಿಗಳಂ

೯೬. ಮದುವೆಯ ಸಮಯದಲ್ಲಿ ಸುತ್ತಿದ ನೂಲು (ಗುಣ) ಗಿರಿಜೆಯ ಸಕಲ ಗುಣಗಳೂ ಹೇ ಹರ! ನಿನ್ನನ್ನು ಹೀಗೆ ಸುತ್ತುವರಿದಿರುವವು ಎಂಬಂತೆ ಇತ್ತು! ೯೭. ಪಂಚಮುಖಿಗಳ ಪರಶಿವನ ಕಾಂತೆಯನ್ನು ಹೊಂದಿ ಪತಿವ್ರತೆಯರು ಅಧಿಕತರದಿಂದ ಮುತ್ತೈದೆಯರಾಗುತ್ತಾರೆ ಎಂದು ಮುತ್ತೈದೆಯರು ಹರಸಿದರು. ವ॥ ಹೀಗೆ ವಿವಾಹಸಂಭ್ರಮವನ್ನು ಕೈಕೊಂಡು ಸೋಮಧರನು ಗಿರಿಜೆಯ ಪಾಣಿಗ್ರಹಣ ಮಾಡಿ ಹೋಮಸ್ಥಳಕ್ಕೆ ಬಂದು ಹಸೆಯ ಮೇಲೆ ಕುಳಿತನು. ಪುರೋಹಿತ ಪರಮೇಷ್ಠಿ (ಬ್ರಹ್ಮ)ಯು ಹರನ ಅನುಜ್ಞೆಯಂತೆ ಸ್ಥಂಡಿಲವನ್ನು ಅಲಂಕರಿಸಿ ಅಗ್ನಿಪ್ರತಿಷ್ಠೆ ಮಾಡಿ ಬ್ರಹ್ಮರ್ಷಿ ದೇವರ್ಷಿಗಳ ಅನುಮತದಿಂದ ಪ್ರಾಣಾಯಾಮ ಸಮಿತ್ ಪರಿಸ್ತರಣ ಪಾತ್ರಾಸಾಧನ ಆಜ್ಯಸಂಸ್ಕಾರಾದಿಗಳನ್ನು ಹೋಮಮಾಡಿ, ೯೮. ಶಿವನ ಬಲಭಾಗದಲ್ಲಿ ಕುಳಿತ ಪಾರ್ವತಿ ಮಂತ್ರೋಕ್ತವಾಗಿ ಅಗ್ನಿಯಲ್ಲಿ ಲಾಜಾಹುತಿಗಳಿಂದ ಹೋಮ ಮಾಡಿದ ಮೇಲೆ ಅಗಸುತೆಯು ಶಿವನ ಬಲದಿಂದ ಎಡಕ್ಕೆ ಬಂದಳು. ವ॥ ಅಗಜೆಯು ಬಲದಿಂದ ಎಡಕ್ಕೆ ಬಂದ ಮೇಲೆ ಶಿವನು ಪೂರ್ಣಾಹುತಿಯನ್ನು ಕೊಟ್ಟು ಹೋಮವನ್ನು

ಸಿಂಹಾಸನದೊಳಲಂಕರಿಸೆ ಸಖನೆನಿಪ ನಿಮಿತ್ತಂ ಕುಬೇರಂಗೆ ನಿರೂಪಮಂ ಕೊಟ್ಟು ನಾರದಾದಿ ಋಷಿಗಳಂ ಕಳಿಪೆ ದಿಟ್ಟಿಮೂಱರಸಂ ನಾರಾಯಣಪ್ರಿಯಂ ಕಾಮಾರಿಯಾರೋಗಣೆಗೆ ನಡೆತಂದೆಡೆಮಾಡಿದೆಡೆಯೊಳಿಕ್ಕರ್ದುಚಿತಾಸನಮನವಷ್ಟಂಭಿಸೆ ನಂದೀಶ್ವರವೀರಭದ್ರಾದಿಯಾದ ಗಣಂಗಳ್ ಹರಿವಿರಿಂಚ ಪುರಂದರಾದಿ ಸಮಸ್ತಸುರಸಮೂಹಂ ಪಂಙ್ತೆಯೊಳ್ ಕುಳ್ಳಿರೆ ಪಾರ್ವತಿಯೊಡನಮೃತಾನ್ನಮನಾರೋಗಿಸಿ ಕೆಯ್ಯಟ್ಟಗೊಂಡು ತಾಂಬೂಲಮನಾದರಿಸುತ್ತು ಮಂತಿಂತು ಕಂತುಮದಮರ್ದನಂ ನತಾಶೇಷಂ ಚತುರ್ಥಿಯಂ ಕಳೆದು ಸಾಕಾರನಿಧಿಯೋಕುಳಿಯಾಡಿ ಗಿರಿರಾಜಂಗೆ ಕರುಣಿಸುತ್ತುಂ ಮೇನಾದೇವಿಯರ ಮನ್ನಿಸುತ್ತುಂ ಗಿರಿಜೆಯನಾಲಿಂಗಿಸುತ್ತುಂ ವೃಷಭಸಮಾರೂಢಂ ದಶಭುಜಪ್ರಖ್ಯಾತಂ ಮಹಿಮಾನಿಧಿ ಮಹಾದೇವನುರಗಾಭರಣಂ ಗಜಾಜಿನಾವರಣಂ ಶರಣಕುಲಕಲ್ಪವೃಕ್ಷಂ ಸಕಲದೇವಗಣಪರಿವೃತ್ತಂ ಶೈಳಜಾವರಂ ಶೂಳಧರಂ ಭಾಳೇಂದುಮೌಳಿ ಕೈಲಾಸಾಭಿಮುಖನಾಗಿ,

ಚಂ॥ ಬಳುವಳಿಯಾನೆಯಂ ಬಳಿಯ ರತ್ನಮುಮಂ ಬಳಿಯಶ್ವವೀಥಿಯಂ
ಬಳುವಳಿಯಾರ್ಥಮಂ ಬಳಿಯ ನಾಣೆಯಮಂ ಬಳಿಯಾಪ್ತವರ್ಗಮಂ ।
ಬಳುವಳಿಯಂಗನಾನಿಕರಮಂ ಪದಪಿಂದವಳೋಕಿಸುತ್ತೆ ಕೋ
ಮಳಪುಳಕಂಗಳೇಳ್ಗೆಯನೊಡಂಬಡುತುಂ ನಡೆತಂದನೀಶ್ವರಂ ॥ ೯೯

ವ॥ ಆ ಸಮಯದೊಳ್,

ಕಂ॥ ಹರನೀ ಬಂದನೆ ಗಿರಿಜಾ
ವರನೀ ಬಂದನೆ ಮಹೇಶನೀ ಬಂದನೆ ಶಂ ।
ಕರನೀ ಬಂದನೆನುತ್ತುಂ
ಪರೆದುವು ದೆಸೆದೆಸೆಗೆ ಬಹಳಕಹಳಾನಾದಂ ॥ ೧೦೦

ವ॥ ಅಂತು ಕರೆವ ಕಹಳಾನಾದಮಂ ಕೇಳುತ್ತುಂ ನಡೆತಂದು ಕೈಲಾಸಪುರದ್ವಾರವಲಯದೊಳ್ ಪುಗುತರ್ಪಾಗಳ್,

ಸಮಾಪ್ತಿಗೊಳಿಸಿ, ಸಪ್ತಪದಿ ಮುಗಿಸಲಾಯಿತು; ತರುವಾಯ ದೇವದಂಪತಿಗಳನ್ನು ಸಿಂಹಾಸನದಲ್ಲಿ ಅಲಂಕರಿಸಿದ ಮೇಲೆ ಕುಬೇರನ ಮೂಲಕ ನಾರದಾದಿ ಋಷಿಗಳನ್ನು ಬರಮಾಡಿಕೊಂಡು ಆರೋಗಣೆಗೆ ಏರ್ಪಡಿಸಲಾಯಿತು. ನಾರಾಯಣಪ್ರಿಯನಾದ ಮುಕ್ಕಣ್ಣನು ಉಚಿತಾಸನದಲ್ಲಿ ಮಂಡಿಸಿದನು. ನಂದೀಶ್ವರ ವೀರಭದ್ರಾದಿಗಳು, ಹರಿ ವಿರಿಂಚಿ ಪುರಂದರಾದಿ ಸಮಸ್ತ ಸುರಸಮೂಹವು ಪಂಙ್ತೆಯಲ್ಲಿ ಕ್ರಮವಾಗಿ ಕುಳಿತರು. ಪಾರ್ವತಿಯೊಡನೆ ಶಿವನು ಅಮೃತಾನ್ನವನ್ನು ಆರೋಗಿಸಿದನು. ತರುವಾಯ ತಾಂಬೂಲವಿತರಣ, ನಾಲ್ಕನೆಯ ದಿನ ಕಳೆದೊಡನೆಯೇ ವಸಂತೋತ್ಸವವಾಯಿತು. ಪರಶಿವನು ಗಿರಿರಾಜ-ಮೇನೆಯರನ್ನು ಕರುಣಿಸಿ ಗಿರಿಜೆಯೊಡನೆ ವೃಷಭಾರೂಢನಾಗಿ ಕೈಲಾಸಾಭಿಮುಖನಾಗಿ-೯೯. ಬಳುವಳಿಯಾಗಿ ಕೊಟ್ಟ ಆನೆ, ರತ್ನ, ಅಶ್ವಗಳು ಮುಂತಾದುವನ್ನೆಲ್ಲ ಅವಲೋಕಿಸುತ್ತ ಈಶ್ವರನು ನಡೆತಂದನು. ೧೦೦. ಇಗೋ ಹರ ಬಂದ! ಗಿರಿಜಾವರ ಬಂದ, ಮಹೇಶ ಬಂದ, ಶಂಕರ ಬಂದ, ಎಂದು ಬಹಳ ಕಹಳೆಗಳು ದಿಕ್ಕುದಿಕ್ಕಿಗೆ ಧ್ವನಿಗೈದವು. ವ॥ ಕಹಳಾನಾದವನ್ನು ಕೇಳಿ

ಕಂ॥ ಕಟ್ಟಿದ ಗುಡಿಗಳ ಮುಗಿಲಂ
ಮುಟ್ಟಿದ ತೋರಣದ ನೆರೆದು ನೋಳ್ಪಬಲೆಯರೊಂ ।
ದೊಟ್ಟಜೆಗಳ ಲಾವಣ್ಯಮ
ದಿಟ್ಟಣಮೆನಿಸಿತ್ತು ಶಿವನ ಕಣ್ಗಂ ಮನಕಂ ॥ ೧೦೧

ವ॥ ಅಂತುಮಲ್ಲದೆಯುಂ,

ಮ॥ ತರದಿಂ ವೇದಿಕೆಯೇಱೆ ಭದ್ರಚಯಮಂ ಬಂದೇಱೆಯುತ್ಸಾಹದಿಂ
ಕರುವಾಡಂಗಳನೇಱೆ ವೃಕ್ಷಕುಲಮಂ ಸಾರ್ದೇಱೆಯೊಪ್ಪಿರ್ಪ ಗೋ ।
ಪುರವೃಂದಗಳನೇಱೆ ಶೀತಕರಬಿಂಬವ್ಯಾತವೇಳ್ತಂದವೋ
ಲರವಿಂದಾಕರವೇಳ್ದವೋಲ್ ತುಱುಗಿ ನೋಡಿತ್ತಲ್ಲಿ ಕಾಂತಾಜನಂ ॥ ೧೦೨

ವ॥ ಅಂತು ನೋಡುವ ಕಾಂತೆಯರೊಳೊರ್ವಳ್,

ಚಂ॥ ನಡುವೆ ವಿಳಾಸದಿಂ ವೃಷಭರಾಜನನೇಱೆದವಂ ಶಿವಂ ಸಮಂ –
ತೊಡನೆ ಮಹೇಶನಂ ಪ್ರಿಯದೊಳಪ್ಪಿದಳ್ ಗಿರಿಜಾತೆಯಾಹ ಚೆ ।
ಲ್ವೊಡರಿಸಿತಾಹ ದಂಪತಿಗಳಾಹ ಜಗತ್ಪ್ರಭುಗಳ್ ಸುಭಾಗ್ಯರೆ
ನ್ನೊಡೆಯರೆನುತ್ತೆ ಕೆಯ್ಮುಗಿದು ಬಣ್ಣಿಸುತಿರ್ದಳತಿಪ್ರಮೋದದಿಂ ॥ ೧೦೩

ವ॥ ಮತ್ತಮೊರ್ವಳುಮಾಮಹೇಶ್ವರರಂ ಕಂಡು ಕೊಂಡುಕೊನೆಯುತಿರ್ದಳದೆಂತೆಂದೊಡೆ

ಕಂ॥ ಸ್ಥಿರದಂಪತಿಗಳ್ ಮಂಗಳ
ಕರದಂಪತಿಗಳ್ ವಿಶೇಷದಂಪತಿಗಳ್ ಭಾ ।
ಸುರದಂಪತಿಗಳ್ ವಸುಧಾ
ವರದಂಪತಿಗಳ್ ಮನೋಜಹರದಂಪತಿಗಳ್ ॥ ೧೦೪

ಕೈಲಾಸಪುರದ್ವಾರವನ್ನು ಪ್ರವೇಶಿಸುವಾಗ, ೧೦೧. ಏರಿಸಿದ ಬಾವುಟಗಳು, ಮುಗಿಲ ಮುಟ್ಟಿದ ತೋರಣಗಳು, ನೆರೆದು ನೋಡುವ ಅಬಲೆಯರ ಗುಂಪುಗಳು, ಇವೆಲ್ಲವೂ ಲಾವಣ್ಯವೆಲ್ಲವೂ ಒಟ್ಟುಗೂಡಿದಂತಿತ್ತು. ೧೦೨. ಕ್ರಮವಾಗಿ ಜಗುಲಿಗಳ ಮೇಲೆ, ಮಹಡಿಗಳ ಮೇಲೆ, ಮರಗಳ ಮೇಲೆ, ಗೋಪುರಗಳ ಮೇಲೆ ಏರಿ ನಿಂತ ಕಾಂತೆಯರು ನಿಂತಿದ್ದರು. ಅವರ ಮುಖಗಳನ್ನು ನೋಡಿದರೆ ಅದೇನು ಚಂದ್ರಬಿಂಬಗಳೊ! ಕಮಲ ಸಮೂಹವೊ! ಎಂಬಂತೆ ಇತ್ತು. ವ॥ ಹಾಗೆ ನೋಡಿದ್ದ ಕಾಂತೆಯರಲ್ಲಿ ಒಬ್ಬಳು ೧೦೩. "ಅಗೋ! ಉತ್ಸವದ ಮಧ್ಯದಲ್ಲಿ ಬಸವನ ಮೇಲೆ ಕುಳಿತಿರುವವನೇ ಪರಮೇಶ್ವರ, ಅವನನ್ನು ಅಪ್ಪಿಕೊಂಡು ಒಪ್ಪಿರುವವಳೇ ಅಗಜಾತೆ! ಓಹೊ! ಎಂಥ ಚೆಲುವು! ಎಂಥ ದಾಂಪತ್ಯ! ಜಗತ್ಪ್ರಭುಗಳು ಸುಭಾಗ್ಯರು! ಇವರೆ ನಮ್ಮ ಪ್ರಭುಗಳು" ಎಂದು ಅಕೆ ಕೆಯ್ಮುಗಿದು ಸಂತೋಷದಿಂದ ವರ್ಣಿಸುತ್ತಿದ್ದಳು. ವ॥ ಮತ್ತೊಬ್ಬಳು ಉಮಾಮಹೇಶ್ವರರನ್ನು ಕಂಡು ಹಿಗ್ಗುತ್ತಿದ್ದಳು. ೧೦೪. "ಇವರು ಸ್ಥಿರದಂಪತಿಗಳು, ಮಂಗಳಕರರಾದ ದಂಪತಿಗಳು, ವಿಶೇಷ ದಂಪತಿಗಳು, ಭಾಸುರ ದಂಪತಿಗಳು,

ವ।। ಎಂದು ಪೊಗಳುತ್ತುಮಿರೆಯಿರೆ,

ಕಂ।। ಇಂತಿಂತೊಪ್ಪುವ ಸಂಭ್ರಮ
ಮಂ ತವೆ ನೋಡುತ್ತ ಪಡೆದು ಕೊಂಡಾಡುತ್ತುಂ ।
ಕಂತುಹರಂ ಸಂತಸದಿಂ
ಮುಂತಣ ಕೈಲಾಸದರಮನೆಗೆ ನಡೆತಂದಂ ।। ೧೦೫

ವ।। ಅಂತೊಳಪ್ಪೊಕ್ಕು ಬಂದಾಗಳ್,

ಉ।। ಆರತಿಯೆತ್ತೆ ರುದ್ರಗಣಿಕಾನಿಕರಂ ಸರಸೀಜನಾಭನುಂ
ನೀರಜಪುತ್ರನುಂ ಹೊಗಳೆ ದೇವಗಣಾಳಿಯಳ್ಕಲೆಂದೆ ಕೆಯ್ ।
ವಾರಿಸೆ ನಂದಿಯಿಂದಮಿಳಿದುನ್ನತಸನ್ನುತಸಿಂಹಪೀಠಮಂ
ತಾರಗಿರೀಂದ್ರನಾಥನೊಸೆದೇಱೆದನದ್ರಿಸುತಾಸಮನ್ವಿತಂ ।। ೧೦೬

ವ।। ಅಂತು ಸಿಂಹವಿಷ್ಟರಮನೇಱೆ,

ಕಂ।। ಗಿರಿಪತಿಯಂ ಮೇನೆಯನಾ
ದರದಿಂ ಬೀಳ್ಕೊಟ್ಟು ಮಕುಟರತ್ನಪ್ರಕರ ।
ಸ್ಫುರಿತಪ್ರದ್ಯೋತ ಪ್ರೋ
ತ್ಕರವಿಳಸಿತವಳಯದೊಳಗೆ ಶಿವನೆಸೆದಿರ್ದಂ ।। ೧೦೭

ವ।। ಆಗಳ್ ಗಿರಿರಾಜನುಂ ಮೇನೆಯುಂ ಬೀಳ್ಕೊಳುತುಂ ಪಾರ್ವತಿಯಂ ನೋಡಿ,

ಉ।। ಮಾತೆ ಶಿವಂ ಪಿತಂ ಶಿವನನಂತಬಲಂ ಶಿವನೂರ್ಜಿತಂ ಶಿವಂ
ನೀತಿ ಶಿವಂ ಸ್ಥಿರಾಯು ಶಿವನೊಳ್ಪು ಶಿವಂ ಸುಕೃತಂ ಘನ ।
ಖ್ಯಾತಿ ಶಿವಂ ಧನಂ ಶಿವನಪಾರಸುಖಂ ಶಿವನದ್ರಿಜಾತೆ ಸಂ
ಪ್ರೀತಿ ಶಿವಂ ಶಿವಂ ನಿನಗೆ ಚಿಂತಿಸದಿರ್ ಮಱೆದೆಮ್ಮನೊರ್ಮೆಯುಂ ।। ೧೦೮

ವಸುಧೆಗೆ ಶ್ರೇಷ್ಠ ದಂಪತಿಗಳು" ೧೦೫. ಇಂತಹ ಸಂಭ್ರಮವನ್ನು ನೋಡಿ ಕೊಂಡಾಡುತ್ತಾ ಪರಶಿವನು ಸಂತೋಷದಿಂದ ಕೈಲಾಸದ ಅರಮನೆಗೆ ನಡೆತಂದನು. ೧೦೬. ರುದ್ರಗಣಿಕೆಯರು ಆರತಿಯೆತ್ತಿದರು. ಹರಿಬ್ರಹ್ಮರು ಹೊಗಳಿದರು. ದೇವಗಣ ಕೈವಾರಿಸಿತು (ಸೇವಿಸಿತು) ನಂದಿಯಿಂದ ಇಳಿದ ಪರಶಿವನು ಉನ್ನತ ಸಿಂಹಪೀಠವನ್ನು ಏರಿದನು. ೧೦೭. ಪರಶಿವನು ಗಿರಿಪತಿ-ಮೇನಾದೇವಿಯರನ್ನು ಬೀಳ್ಕೊಟ್ಟು ತನ್ನ ಪ್ರಭಾವಳಯದಲ್ಲಿ ಪ್ರಕಾಶಿಸುತ್ತಿದ್ದನು. ೧೦೮. ಮಗಳೆ, ನಿನಗೆ ತಾಯಿ, ತಂದೆ ಎಲ್ಲವೂ ಶಿವನೇ! ಅವನೇ ಊರ್ಜಿತ, ಅವನೇ ಸ್ಥಿರಾಯು, ಅವನೇ ಒಪ್ಪ, ಸುಕೃತ, ಖ್ಯಾತಿ, ಧನ, ಅಪಾರಸುಖ ಎಲ್ಲವೂ ಶಿವನೇ! ಆದ್ದರಿಂದ ನಮ್ಮನ್ನು ಮರೆತು ಒಮ್ಮೆಯೂ ಯೋಚಿಸಬೇಡ! ವ।। ಎಂದು ಹಿಮವಂತ ದಂಪತಿಗಳು ಇದ್ದುದನ್ನು ಇದ್ದಂತೆಯೇ ಹೇಳಿ ಹಿಂದಿರುಗಿದರು. ಈ ಕಡೆ ಚಂಡಕೀರ್ತಿಗಳು ವಂದಿಸಿ

ವ॥ ಎಂದುಳ್ಕಿದನುಪಚಾರಮಿಲ್ಲದೆ ನುಡಿದು ಸಾದರಂ ಪೋದರಿತ್ತಲ್ ಚಂಡಕೀರ್ತಿಗಳ್ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು,

ಚಂ॥ ಅತುಳಕಪಾಲಿ ಪಾಲಿಪುದುಮಾಪತಿ ಮಾಪತಿರಾಜ ರಾಜ ಭೂ
ಷಿತ ಸಿತಭಸ್ಮಭಸ್ಮಮಯಮನ್ಮಥ ವಿಗ್ರಹವಿಗ್ರಹ ವ್ರಜಾ ।
ನತ ನತಸಿದ್ಧ ಸಿದ್ಧ ಸಕಳಾತ್ಮ ಕಳಾತ್ಮ ವಿಶೇಷಶೇಷಪೂ
ಜಿತ ಜಿತಕಾಲ ಕಾಲವಿಲಸದ್ಗಳ ಸದ್ಗಳ ಹಂಪೆಯಾಳ್ದನೇ ॥ ೧೦೯

ಚಂ॥ ಕರುಣಿಸು ನಾಥ ನಾಥಕುಲಸೇವಿತ ಸೇವಿತ ಕಾಲ ಕಾಲ ಸಂ
ಹರಣ ರಣಾಗ್ರರಂಜಿತಜಿತಾಮರತಾಮರಸಾಕ್ಷ ಸಾಕ್ಷಸಂ ।
ಸ್ಮರ ನಿಜದರ್ಪದರ್ಪಕವಿನಾಶ ವಿನಾಶನಿಕಾಯಕಾಯವಿ
ಸ್ತರಿತಭುಜಂಗ ಜಂಗಮಕೃಪಾವನ ಪಾವನ ಹಂಪೆಯಾಳ್ದನೇ ॥ ೧೧೦

ವ॥ ಎಂದಿಂತು ಸಂತಸದಿಂ ಕೆಯ್ವಾರಂ ಮಾಡೆ ಕೇಳ್ದು ದಂಡಧರಗರ್ವಪರ್ವತ ಕುಲಿಶಂ ಕುಸುಮಕೋದಂಡಕುಮುದಮಾರ್ತಂಡಂ ಪುರತ್ರಯಮೇಘಮಹಾನಿಲಂ ಶತಪತ್ರಪುತ್ರಶಿರಚ್ಛೇದ ನಕರಂ ಸರೋಜನಯನನಯನಸರೋಜಪೂಜಿತಪದಂ ಜಲಂಧರಮರಾಳಮೇಘಗರ್ಜಿತಂ ಅಂಧಕಾಸುರಾರಣ್ಯದಾವಾನಳಂ ಲಾಲಾಸುರೇಭಪಂಚಾನನಂ ದುರಿತಪಂಚಾನನಶರಭಮೂರ್ತಿ ದಕ್ಷಮಖನಿರ್ಧೂಮಧಾಮಂ ಚತುರ್ದಶಭುವನಚಕ್ರಭಾಸ್ಕರಂ ಬ್ರಹ್ಮಾಂಡಭರಿತಕೀರ್ತಿಮಯಂ ಸರ್ವಬ್ರಹ್ಮಾಂಡ ಫಳಭರಿತಮಹಾಮಹೀರುಹಂ ವರನಿಚಯರಚಿತಪ್ರಶಸ್ತಹಸ್ತಂ ಸೋಮಧರಂ

೧೦೯. ಅನುಪಮ ಕಪಾಲಿ ಪಾಲಿಸು, ಉಮಾಪತಿ, ಮಾ (ಲಕ್ಷ್ಮೀ) ಪತಿಗೆ ರಾಜ, ರಾಜ (ಚಂದ್ರ) ಭೂಷಿತ, ಭಸ್ಮರೂಪಿತಕಾಯ, ಭಸ್ಮಗೊಳಿಸಿದ ಮನ್ಮಥ ವಿಗ್ರಹನೆ, ವಿಗ್ರಹ (ಶರೀರ)ಧಾರಿಗಳಿಂದ ವಂದಿಸಲ್ಪಟ್ಟವನೆ, ನಮಸ್ಕರಿಸಿದ ಸಿದ್ಧರುಳ್ಳವನೆ, ಸಿದ್ಧಿಸಿದ ಕಲೆಗಳುಳ್ಳವನೇ, ಕಳಾಮಯನೆ, ಶೇಷ (ಆದಿಶೇಷ) ಪೂಜಿತನೆ, ಕಾಲನನ್ನು ಗೆದ್ದವನೆ, ನೀಲಕಂಠನೆ ಎಂದು ಸ್ತುತಿಸಿದರು. ೧೧೦. ಒಡೆಯ, ನಾಥಕುಲಸೇವಿತನೆ, ಕಾಲನಿಂದ ಪೂಜೆಗೊಂಡವನೆ, ಕಾಲನನ್ನು ಸಂಹರಿಸಿದವನೆ, ರಣಾಗ್ರದಲ್ಲಿ ಪ್ರಕಾಶಿಸುವನೆ, ಅಮರ ಮತ್ತು ಕಮಲಾಕ್ಷರನ್ನು ವಶಪಡಿಸಿಕೊಂಡವನೆ, ಸಾಕ್ಷನೆ, ನಿಜದರ್ಪವನ್ನು ಬಲ್ಲವನೆ, ದರ್ಪಕ (ಮನ್ಮಥ)ನನ್ನು ಕೊಂದವನೆ, ವಿನಾಶನಿಕಾಯನೆ, ಭುಜಂಗಭೂಷಣನೆ, ಜಂಗಮದಲ್ಲಿ ಕೃಪೆಯುಳ್ಳವನೆ, ಪವಿತ್ರ ಹಂಪೆಯಾಳ್ದನೆ ಕರುಣಿಸು. ವ॥ ಹೀಗೆ ಚಂಡಕೀರ್ತಿಗಳ ಕೆಯ್ವಾರವನ್ನು ಕೇಳಿದ ಪರಶಿವನು ಅವರಿಗೆ ಉಡುಗೊರೆ ಕೊಟ್ಟನು. ಮುಂದಿನ ವಾಕ್ಯಗಳು ಪರಶಿವನ ಮಹಿಮಾ ವಿಶೇಷಗಳು- ಪರಮೇಶ್ವರ ಯಮನ ಗರ್ವವೆಂಬ ಪರ್ವತಕ್ಕೆ ವಜ್ರಾಯುಧ, ಪುಷ್ಪಬಾಣನೆಂಬ ನೈದಿಲೆಗೆ ಸೂರ್ಯ, ತ್ರಿಪುರಗಳೆಂಬ ಮೇಘಗಳಿಗೆ ಬಿರುಗಾಳಿ, ಪದ್ಮಜ (ಬ್ರಹ್ಮ)ನ ಶಿರಸ್ಸನ್ನು ಕತ್ತರಿಸಿದವ, ಕಮಲಾಕ್ಷನು ಕಮಲಗಳಿಂದ ಪೂಜಿಸಿದ ಪಾದವುಳ್ಳವನು, ಜಲಂಧರನೆಂಬ ಹಂಸಗಳಿಗೆ ಮೇಘಗರ್ಜನೆಯಂತಿರುವವನು, ಅಂಧಕಾಸುರನೆಂಬ ಕಾಡಿಗೆ ಕಾಡ್ಗಿಚ್ಚು, ಲಾಲಾಸುರನೆಂಬ ಆನೆಗೆ ಸಿಂಹಪ್ರಾಯ, ದುರಿತಗಳೆಂಬ ಸಿಂಹಗಳಿಗೆ

ಸೋಮಂ ಸಾಮಗೇಯಪ್ರಿಯಂ ವಿಮಳತ್ರಿನೇತ್ರಂ ಕಮಲಜಶಿರಃಪಾತ್ರಂ ಸುರರಾಜರಾಜಂ ಶರಣಸುರಭೂಜಂ ದೇವಗಣಸಮಾಜಂ ರವಿಕೋಟಿತೇಜಂ ಶೃಂಗಾರಸಾರಂ ವೀರರಸಪೂರಂ ರೌದ್ರಪ್ರತಾಪಂ ಭಯಾನಕರೂಪಂ ಪಿನಾಕಚಾಪಂ ಸಜ್ಜನಸಮೀಪಂ ಅದ್ಭುತಶೀಲಂ ಶೈಲಜಾಲೋಲಂ ಘನಘನಸ್ಫೂಲಂ ವಿಶ್ವಲೋಕಪಾಲಂ ನತಜನವಿತತಸಂಪದಂ ಪ್ರೇಮಜನ ಕಾಮದುಘಂ ಭಕ್ತಜನಭಾಗ್ಯೋದಯಂ ಮುಕ್ತಿಪ್ರದಾಯಕಂ ಪ್ರಮಥಗಣಪುಣ್ಯಫಲಾಕಾರಂ ಕೃಪಾಮೇರು ದಯಾನಿಧಿ ಪಾರ್ವತೀಪ್ರಾಣನಾಥನೆನಿಪ ಪಂಪಾಪುರಾಧಿಪ ಶ್ರೀವಿರೂಪಾಕ್ಷಂ ಚಂಡಕೀರ್ತಿಗಳ್ಗೆ ಮಚ್ಚಿ ಪಸಾಯನಮನಿತ್ತು

ಮ॥ ಹರನುದ್ಯದ್‌ಗಿರಿಜಾಮನೋಹರಸುಖಾಂಭೋರಾಶಿಚಂಚತ್ ಸುಧಾ
ಕಿರಣಂ ತತ್ಸುಖದಿಂದಮಿರ್ದುದಯಿಸಿರ್ದಾ ಸ್ಕಂದನಿಂ ತಾರಕಾ ।
ಸುರನಂ ತೀರ್ಚಿ ಸಮಸ್ತಲೋಕಜನತಾಸಂತುಷ್ಟಿಯಂ ಮಾಡಿ ಶಂ
ಕರನೊಪ್ಪಿರ್ದನುದಾರಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ ॥ ೧೧೧

ಕಂ॥ ಹರಿಸಂ ಮಿಗೆ ಕೈಲಾಸದ
ಪುರದೊಳಗೊಪ್ಪಿರ್ದನಭವನದ್ವಯರೂಪಂ ।
ವರಶರಣಾಳಿಗೆ ಬೇಡಿದ
ವರಮಂ ಕರುಣಿಸುತೆ ಹಂಪೆಯ ವಿರೂಪಾಕ್ಷಂ ॥ ೧೧೨

ಶಾ॥ ಎಂದಿಂತೊಪ್ಪಿರೆ ಮಚ್ಚ ಮಚ್ಚ ಹರಿದೇವಂ ಪೇಳ್ದ ಸತ್ಕಾವ್ಯಮಂ
ಚೆಂದಂಬೆತ್ತಿರಲೋದುವಾರ್ತಸುಖದಿಂ ಕೇಳ್ವಾದರಿಪ್ಪರ್ಗೆ ಸಾ ।
ನಂದಂ ಮಾಡುಗೆ ಪುಣ್ಯಭೋಗಜಯಮಂ ನಿತ್ಯಾಯುಮಂ ಶ್ರೀಯುಮಂ
ನಂದೀಶಾದಿ ಗಣಪ್ರತಾನದೊಡೆಯಂ ಪಂಪಾಪುರಾಧೀಶ್ವರಂ ॥ ೧೧೩

ಶರಭಮೂರ್ತಿ, ದಕ್ಷಯಾಗಧ್ವಂಸಿ, ತ್ರಿಭುವನಗಳಿಗೆ ರವಿ, ಬ್ರಹ್ಮಾಂಡವೆಲ್ಲ ತುಂಬಿದ ಕೀರ್ತಿಯುಳ್ಳವ, ಸರ್ವಬ್ರಹ್ಮವೆಂಬ ಫಲಗಳಿಗೆ ಕಾರಣವಾದ ವೃಕ್ಷ, ವರಪ್ರದಾನ ಮಾಡುವಲ್ಲಿ ಪ್ರಶಸ್ತಹಸ್ತವುಳ್ಳವ, ಸೋಮಧರ, ಸೋಮ, ಸಾಮಗಾನಪ್ರಿಯ, ಬ್ರಹ್ಮಕಪಾಲ ಹಿಡಿದವ, ಸುರರಾಜನಿಗೆ ರಾಜ, ಶರಣಾದವರಿಗೆ ಸುರಭೂಜ (ಕಲ್ಪವೃಕ್ಷ) ಇಂಥ ಮಹಾಮಹಿಮನು ಪ್ರೇಮಜನ ಕಾಮದುಘ ಎಂದರೆ ಕೇಳಿದವರಿಗೆ ಕೇಳಿದ್ದನ್ನು ನೀಡುವ ಕಾಮಧೇನು ಪರಮೇಶ್ವರ. ೧೧೧. ಪರಮೇಶ್ವರ ಗಿರಿಜಾಮನೋಹರ, ಆತ ಆನಂದಸಾಗರಕ್ಕೆ ಸುಧಾಕಿರಣ, ಗಿರಿಜಾ ಸುಖದಿಂದ ಇದ್ದು, ತನಗೆ ಉದಯಿಸಿದ ಕುಮಾರನಿಂದ ತಾರಕಾಸುರನನ್ನು ಮುಗಿಸಿ ಲೋಕ ಸಂತುಷ್ಟಿಯನ್ನು ಉಂಟುಮಾಡಿ ಲಲಾಟಾಕ್ಷನಾದ ಹಂಪೆಯ ವಿರೂಪಾಕ್ಷನು ಒಪ್ಪಿದ್ದನು. ೧೧೨. ಅದ್ವಯರೂಪನಾದ ಅಭವನು ಅಮಿತ ಹರ್ಷದಿಂದ ಕೈಲಾಸದಲ್ಲಿ ಒಪ್ಪಿದ್ದನು. ಶರಣಾದವರಿಗೆ ಬೇಡಿದ ವರಗಳನ್ನು ಕರುಣಿಸುತ್ತಾ ಹಂಪೆಯ ವಿರೂಪಾಕ್ಷನು ಬೆಳಗುತ್ತಿದ್ದಾನೆ. ೧೧೩. ನಂದೀಶ್ವರನೆ ಮೊದಲಾದ ಪ್ರಮಥಗಣಕ್ಕೆ ಒಡೆಯನಾದ ಪಂಪಾಪತಿಯು ಹರಿದೇವನು ರಚಿಸಿದ ಸತ್ಕಾವ್ಯವನ್ನು ಪ್ರೇಮದಿಂದ ಓದಿ ಸುಖಿಸುವ ಭಕ್ತರಿಗೆ

ಮ॥ಸ್ರ॥ ತರದಿಂದಂ ಶಬ್ದಮರ್ಥಂ ರಸವಿಸರಮಲಂಕಾರಾದಿಂ ತೀವುತೊಳ್ಪಿಂ
ಧರೆಯೊಳ್ ಕೆಯ್ಕೊಂಡು ಪಂಪಾಪುರದರಸ ವಿರೂಪಾಕ್ಷನಿತ್ತಾಜ್ಞೆಯಿಂದಂ ।
ಹರಿದೇವಂ ಭಕ್ತಿಯಿಂದಂ ಗುರುಕರುಣದಿನುತ್ಸಾಹದಿಂ ಮಚ್ಚಿ ಪೇಳ್ದಾ
ಗಿರಿಜಾಕಲ್ಯಾಣಮಿಂತೀ ಶಶಿರವಿಧರೆಗಳ್ ನಿಲ್ವಿನಂ ನಿಲ್ಕೆ ಸಂತಂ ॥ ೧೧೪

ಇಳೆಯೊಳ್ ಪೆರ್ಮಳೆಯುಂ ಸಮಸ್ತಫಲಮುಂ ಸಂತೋಷಮುಂ ಧರ್ಮಸಂ-
ಕುಳಮುಂ ಸತ್ಯಮುಮೀಶ್ವರಾರ್ಚನೆಯ ಸೊಂಪುಂ ಶ್ರೀಯುಮಾಯುಂ ನಿರಾ
ಕುಳಮೆಂದು ನೆಲಸಿರ್ಪುದೊಂದು ತೆಱನಂ ತಾಂ ಮಾಳ್ಕೆ ಸರ್ವೇಶ್ವರೀ
ವಿಳಸತ್‌ಸಂಗಸುಖಾಬ್ಧಿಶೀತಕಿರಣಂ ಪಂಪಾಪುರಾಧೀಶ್ವರಂ ॥ ೧೧೫

ಮ॥ ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ।
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥

ಇದು ಸಮಸ್ತ ಸುರಾಸುರಮಕುಟ ಖಚಿತ
ದಿನಕರಕರಾಧಿಕ್ಯ ಮಾಣಿಕ್ಯಪ್ರಭಾಪುಂಜರಂಜಿತಚರಣ
ನೆನಿಪ ಪಂಪಾವಿರೂಪಾಕ್ಷ ಶ್ರೀ ಪಾದಕಮಲ
ಮಕರಂದ ಮಧುಕರಾಯಮಾಣ
ಸತ್ಯವೀಶ್ವರ ಹಂಪೆಯ
ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ಪಾರ್ವತೀಪರಮೇಶ್ವರ ವಿವಾಹವರ್ಣನಂ
ದಶಮಾಶ್ವಾಸಂ

ಸಂತೋಷವನ್ನೂ ಪುಣ್ಯಭೋಗಚಯವನ್ನು ನಿತ್ಯಾಯುವನ್ನೂ ಶ್ರೀಯನ್ನೂ ಉಂಟುಮಾಡಲಿ. ೧೧೪. ಕ್ರಮವಾಗಿ ಶಬ್ದ ಅರ್ಥ ರಸಪ್ರಸಾದ, ಅಲಂಕಾರಗಳಿಂದ ತುಂಬಿರುವ ಪಂಪಾಪುರದ ವಿರೂಪಾಕ್ಷನ ಆಜ್ಞೆಯಿಂದ ಹರಿದೇವನು ಭಕ್ತಿಯಿಂದ ಗುರುಕೃಪೆಯಿಂದ ಉತ್ಸಾಹದಿಂದ ಮೆಚ್ಚಿ ಪೇಳಿದ ಗಿರಿಜಾಕಲ್ಯಾಣ ಮಹಾಕಾವ್ಯವು ಶಶಿ-ರವಿ-ಧರೆಗಳು ಇರುವವರೆಗೆ ಜನಪ್ರಿಯವಾಗಿರಲಿ. ೧೧೫. ನೆಲದಲ್ಲಿ ಒಳ್ಳೆಯ ಮಳೆ, ಫಲಸಸ್ಯ ಸಮೃದ್ಧಿ, ಸಂತೋಷ, ಧರ್ಮ, ಸತ್ಯ, ಶಿವಾರ್ಚನೆ, ಸೊಂಪು, ಶ್ರೀ, ಆಯುಸ್ಸು, ನಿರ್ಬಾಧೆ, ಇವೆಲ್ಲವನ್ನೂ ಸರ್ವೇಶ್ವರೀ ಸಮೇತನಾದ ಪಂಪಾಪತಿಯು ಉಂಟುಮಾಡಲಿ.



ಕಠಿಣ ಶಬ್ದಾರ್ಥಕೋಶ

ಅ

ಅಂಶು-ಕಿರಣ
ಅಖ್ಖಿಡ-ಗರಡೀಮನೆ ತಗ್ಗು
ಅಗಚೂಡ-ಪರ್ವತ ಶಿಖರ
ಅಗಿ-ಅಂಜು
ಅಗುರ್ಬು-ವಿಸ್ತಾರ
ಅಗುರ್ವು-ಉತ್ಸಾಹ, ಭೀತಿ
ಅಗ್ಗಳಿಸು-ಹೆಚ್ಚಾಗು, ಉಬ್ಬು
ಅಘಮರ್ಷಣ-ಸ್ಪರ್ಧಿಸು,
ಪಾಪನಾಶಕವಾದ ಮಂತ್ರಸ್ನಾನ
ಅಘೌಘ-ಪಾಪಸಮೂಹ
ಅಂಕಣಿ-ಸಂಜ್ಞೆ
ಅಂಗರಾಗ-ಮೈಗೆ ಹಚ್ಚುವ ಲೇಪನ
ಅಂಘ್ರಿಪ-ಮರ (ಬೇರಿನಿಂದ ನೀರು
ಕೂಡಿಯುವ) ಪಾದಪ
ಅಕ್ಷೂಣ-ಕೊರತೆಯಿಲ್ಲದ
ಅಚಲ-ಹೊಯ್ದಾಡುವ
ಅಚಲಗತಿ-ಗಮನವಿಲ್ಲದವನು
ಅಚಳನಿತಂಬ-ಬೆಟ್ಟದ ತಪ್ಪಲಪ್ರದೇಶ
ಅಚುಂಬಿತ-ಬಳಕೆಯಾಗದ, ಹೊಸ
ಅಜಸ್ರಂ-ಯಾವಾಗಲೂ
ಅಜಾತೆ-ಹುಟ್ಟಿಲ್ಲದವಳು
ಅಜಿನ-ಚರ್ಮ
ಅಂಜನ-ಕಾಡಿಗೆ, ಕಪ್ಪು
ಅಟ್ಟಹಾಸ-ಭಾರಿ ನಗೆ
ಅಟ್ಟಳೆ-ಕೋಟೆಯ ಅಟ್ಟ
ಅಡಕಿಲ್ವಾಸು-ಒಂದರ ಮೇಲೊಂದು
ಅಡಕಿದ ಹಾಸಿಗೆ
ಅಡರ್ಪು-ಆಧಾರ
ಅಡಸು-ಗುಂಪುಗೂಡು, ತಡೆದು ನಿಲ್ಲಿಸು
ಅಣಂ-ಸ್ವಲ್ಪ
ಅಣೆಯರಂ-ವೇಗವಾಗಿ
ಅಣ್ಪೆ-ಹತ್ತಿಸಿ
ಅಣ್ಮು-ಪರಾಕ್ರಮ
ಅತನು-ಕಾಮ (ಶರೀರವಿಲ್ಲದವ-ಅನಂಗ)
ಅದಿರ್-ಹೆದರು, ನಡುಗು
ಅದಿರ್ಗಂತಿ-ಮಾಧವಿಪುಷ್ಪ, ಮಾಲತಿ
ಅದ್ವಯ-ಎರಡಿಲ್ಲದ
ಅಧಃಕರಿಸು-ತಿರಸ್ಕರಿಸು
ಅಧಿಕಾಕ್ಷ-ಮುಕ್ಕಣ್ಣ, ಹೆಚ್ಚು ಕಣ್ಣುಳ್ಳವನು
ಅಧಿಗತ-ಬಂದ, ದೊರಕಿದ
ಅನಂಗ-ಮನ್ಮಥ (ಶರೀರವಿಲ್ಲದವ)
ಅನರ್ಘ್ಯ-ಶ್ರೇಷ್ಠ
ಅನವದ್ಯ-ಪರಿಶುದ್ಧ
ಅನವಧಿ-ಮೇರೆಯಿಲ್ಲದ
ಅನನ್ಯ-ಇಂಥ ಇನ್ನೊಂದಿಲ್ಲದ
ಅಂತಸ್ಥ-ಅಂತರಂಗ
ಅಂದುಗೆ-ಕಾಲಿಗೆ ತೊಡುವ ಆಭರಣ
ಅನ್ನರ್-ಅಂತಹರು
ಅನಿಮಿಷ-ದೇವತೆ, ಮೀನು (ರೆಪ್ಪೆ
ಹೊಡೆಯದ)
ಅನೀಕ-ಸಮುದಾಯ
ಅನುನಯ-ಮೆಚ್ಚಿಕೆ, ಸಮಾಧಾನಮಾಡು
ಅನುವರ-ಯುದ್ಧ
ಅನುವು-ಸಿದ್ಧಿ
ಅನುವಿಸು-ಸಿದ್ಧವಾಗು, ಸನ್ನದ್ಧನಾಗು
ಅನೂನ-ಕೊರತೆಯಿಲ್ಲದ
ಅಂತರ್ಧಾನವಾಗು-ಮಾಯವಾಗು
ಅನ್ಯಪುಟ್ಟ-ಕೋಗಿಲೆ, ಪರಪುಷ್ಟ
(ಬೇರೆಯವರಿಂದ ಪೋಷಿತ)
ಅಪಚಯ-ಕೃಶವಾಗು, ಸಂಗ್ರಹ
ಅಪತ್ಯ-ಸಂತಾನ
ಅಪರ-ಮೋಕ್ಷ, ಹಿಂಭಾಗ, ಪಶ್ಚಿಮ
ಅಪಾಂಗ-ಕಡೆಗಣ್, ಓರೆನೋಟ

ಅಪ್ರತಿಮ-ಸಮನಿಲ್ಲದ
ಅಬಳಾನೀಕ-ಸ್ತ್ರೀಸಮೂಹ
ಅಬ್ಜ-ಕಮಲ (ನೀರಿನಲ್ಲಿ ಹುಟ್ಟಿದ್ದು)
ಅಬ್ಜವಿಷ್ಟರ-ಬ್ರಹ್ಮ (ಕಮಲಾಸನ)
ಅಬ್ಜಾಕರ-ಕಮಲ ಸರೋವರ
ಅಬ್ದ-ಮೋಡ, ವರ್ಷ
ಅಬ್ದಸಮಯ-ಮಳೆಗಾಲ
ಅಭಂಗಿ-ಕೊರತೆಯಿಲ್ಲದ್ದು
ಅಭವಗೇಹ-ಶಿವನ ಮನೆ
ಅಭಿಸಾರಿಕೆ-ರಾತ್ರಿ ಪ್ರಿಯನನ್ನು ಅರಸಿ ಕೊಂಡು ಹೋಗುವ ಜಾರೆ, ನಾಯಕಿ
ಅಭ್ರಕಾಯ-ಮೋಡವೇ ಶರೀರವಾಗಿರುವ
ಅಭ್ರಛಾಯೆ-ಮೋಡಗಳ ನೆರಳು
ಅಭ್ರಮಾತಂಗ-ಐರಾವತ
ಅಭ್ರಶಿಖಿ-ಮಿಂಚು
ಅಮರಭೂರುಹ-ಕಲ್ಪವೃಕ್ಷ
ಅಮರು-ಅಂಟಿಕೊಳ್ಳು
ಅಮಳ್ವಕ್ಕಿ-ಚಕ್ರವಾಕ, ಜೊತೆ ಜೊತೆಗಿರುವ ಹಕ್ಕಿ
ಅಮ್ಮಾವು-ಕುರರೀಮೃಗ
ಅಮೋಘ-ಶ್ರೇಷ್ಠ, ವ್ಯರ್ಥವಾಗದ
ಅಂಬಳಕಿ-ಅಂಬೆಗಾಲು
ಅಂಬುದ-ಮೋಡ
ಅಯಸ್ಕಾಂತ-ಸೂಜಿಗಲ್ಲು
ಅಯೋಗ್ರಾಹ್ಯತೆ-ಲೋಹಚುಂಬಕತ್ವ
ಅಯಃಪಿಂಡ-ಕಬ್ಬಿಣದ ತುಂಡು
ಅಯನ-ತಿರುಗಾಟ
ಅಱಿ-ಅರಿಹೋಗು
ಅರನೇರಿಲ್-ಜಂಬುನೇರಳೆ
ಅರವರಿಸು-ಅರಿತುಕೊಳ್ಳು
ಅರಳೆಲೆ-ಮಕ್ಕಳ ಆಭರಣ
ಅರಿದು-ಅಸಾಧ್ಯ, ಆಶ್ಚರ್ಯ
ಅರುಣಮಣಿ-ಕೆಂಪುರತ್ನ
ಅಱಿಯಟ್ಟು-ಬೆನ್ನುಬೀಳು
ಅರೆವಿನೋದು-ಅರ್ಧಮರ್ಧಜ್ಞಾನ
ಅರ್ಜುನ-ಬಿಳಿಮತ್ತಿ
ಅರ್ತಿ-ಪ್ರೀತಿ
ಅರ್ವು-ಹರಡು, ಹಬ್ಬು
ಅಲಂಪು-ಸೌಂದರ್ಯ
ಅಲರ್ಗಣೆ-ಹೂಬಾಣ
ಅಲರ್ವಿಲ್ಲರಸ-ಹೂಬಾಣಗಳ ರಾಜ, ಕಾಮ
ಅವಗಾಹ-ಸ್ನಾನ
ಅವತಂಸ-ಆಭರಣ
ಅವಷ್ಟಂಭಿಸು-ಅಲಂಕರಿಸು, ಕೂತುಕೊಳ್ಳು
ಅವಿಧಾ ಅವಿಧಾ-ರಕ್ಷಿಸಿರಿ
ಅವ್ವಳಿಸು-ಅಪೇಕ್ಷಿಪಡು, ಆತುರಿಸು
ಅವ್ಯಗ್ರ-ಶಾಂತಭಾವ
ಅಶಿವ-ಉಗ್ರ, ಭಯಂಕರ
ಅಶ್ಮ-ಕಲ್ಲು
ಅಶ್ರಮ-ಸತತ, ಎಡೆಬಿಡದೆ
ಅಸತಿ-ಜಾರೆ
ಅಸವಸ-ಅವಸರ
ಅಸಿತಾತಪತ್ರ-ಕಪ್ಪುಕೊಡೆ
ಅಸಿಲತೆ-ಖಡ್ಗ
ಅಸುವೆಯ ಕಲ್ಲು-ಅರೆಯುವ ಕಲ್ಲು
ಅಸುಹೃತ್-ವೈರಿ
ಅಸ್ತಂಬಿಸ್ತ-ಅಸ್ತವ್ಯಸ್ತ
ಅಸ್ವಪ್ನರ್-ದೇವತೆಗಳು
ಅಹರಹಂ-ದಿನದಿನವೂ
ಅಳಲು-ದುಃಖ
ಅಳವು-ಶಕ್ತಿ, ಆಟೋಪ
ಅಳಿಪು-ಆಶೆ, ಬಯಕೆ
ಅಳಿಮನ-ಕೀಳುಮನಸ್ಸು
ಅಳಿಯಾಸೆ-ದುರಾಶೆ
ಅಳುರ್-ವ್ಯಾಪಿಸು
ಅಳ್ಕರ್-ವಾತ್ಸಲ್ಯ, ಪ್ರೀತಿ
ಅಳ್ತಿ-ಪ್ರೀತಿ

ಅಳ್ಳಿರಿ-ಉಬ್ಬಸಪಡು, ತಿವಿ, ಮರ್ಮಕ್ಕೆ ಚುಚ್ಚು

ಆ

ಆಕಂಪನಗೊಳ್ಳು-ನಡುಗು
ಆಕರ-ಸಮೂಹ
ಆಕುಲಿಸು-ಚಿಂತೆಮಾಡು
ಆಖಂಡಲ-ದೇವೇಂದ್ರ
ಆಗಾರ-ಮನೆ
ಆಜಿ-ಯುದ್ಧ
ಆಡುಂಬೊಲ-ಆಟದ ಮೈದಾನ
ಆಣ್ಮ-ಯಜಮಾನ
ಆತ್ತ-ಒದಗಿದ, ಹೊಂದಿದ, ಬಂದ
ಆದಂ-ಚೆನ್ನಾಗಿ, ಅಧಿಕವಾಗಿ
ಆಧಾರಕ-ದಂಡ
ಆನ್-ಸಿದ್ಧವಾಗು
ಆಂದೋಳ-ತೂಗುಮಂಚ
ಆಭೀಳ-ಭಯಂಕರ
ಆಮಯ-ರೋಗ
ಆಮೋದ-ಪರಿಮಳ
ಆಯ್ಕಳಿ-ಆರಿಸಿಕೊಂಡು ಬಂದ
ಆಱಿಡಿ-ತುಂಬಿ, ಷಟ್ಪದ
ಆರಂಭಣ-ಪ್ರಾರಂಭ
ಆರಯ್-ವಿಚಾರಿಸು
ಆರವೆ-ಆರಾಮ, ತೋಟ
ಆರಾಜತ್-ಪೂರ್ತಿಹೊಳೆಯುವ
ಆರೆಕಾರರು-ಗುಲ್ಲೆಬ್ಬಿಸುವವರು
ಆರೋಗಣೆ-ಊಟ, ನೈವೇದ್ಯ
ಆರ್ತಿ-ಕರುಣೆ
ಆರ್ದ್ರ-ನೆನೆ, ತೊಯ್ದ
ಆರ್ಪು-ಸಾಮರ್ಥ್ಯ
ಆರಭಟ-ಗಮಕದ ಒಂದು ರೀತಿ
ಆಲಿವರಲ್-ಆಲಿಕಲ್ಲು
ಆವರ್ತ-ಸುಳಿ, ತಿರುಗಣೆ
ಆಸಾರ-ಮಳೆ
ಆಸುರ-ಆರ್ಭಟ, ರಾಕ್ಷಸೀಯ
ಆಳ್-ಮುಳುಗು
ಆಳ್ಗಳ್-ಪೌರುಷಯುಕ್ತವಾದುವು
ಆಳ್ವರಿ-ಕೋಟೆಯ ಮೇಲಿನ ಕಾವಲುದಾರಿ

ಇ-ಈ

ಇಂಗಳ-ಬೆಂಕಿ
ಇಟ್ಟಣಮೆನಿಸು-ಮನೋಹರವಾಗಿ ಕಾಣು
ಇಟ್ಟಣಿಸು-ಒಟ್ಟುಗೂಡು
ಇಟ್ಟಿ-ಚಿಕ್ಕಬರ್ಚಿ
ಇಡು-ರಭಸದಿಂದ ಎಸೆ, ಹೊಡೆ
ಇಂಡೆ-ಸಮೂಹ, ರಾಶಿ
ಇನ-ಸೂರ್ಯ
ಇನಿಯ-ಪ್ರಿಯ, ನಲ್ಲ
ಇಂದೀವರ-ಕಮಲ
ಇಂದ್ರಕಾಂತ-ಚಂದ್ರಕಾಂತಮಣಿ
ಇಂದ್ರಗೋಪ-ಮಿಂಚುಹುಳು
ಇಭ-ಆನೆ
ಇಂಬಯ್ದೆಗೆ-ಸ್ಥಳಬಿಡು
ಇಂಬುವಡೆ-ವಿಸ್ತಾರವಾಗು
ಇರ್ಕೆವನೆ-ಇಡುವ ಮನೆ
ಇಸು-ಬಾಣಪ್ರಯೋಗಮಾಡು
ಈಂಟು-ಕುಡಿ
ಈಡಿರಿ-ಚುಚ್ಚು, ಕೆದರು
ಈಷದ್‌ಗಾತ್ರ-ಬಡದೇಹ
ಈಳೆ-ದೊಡ್ಡ ನಿಂಬೆ, ಗಜನಿಂಬೆ

ಉ-ಊ

ಉಕ್ಕಂದ-ಕಾರಂಜಿ, ಚಿಲುಮೆ, ಸೆಲೆ
ಉಗಿ-ಜಗ್ಗು
ಉಳಿ-ಸೀಳು
ಉಗ್ಗಡಿಸು-ಹಾದಿಯು ಅನುಕೂಲ ಮಾಡಿಕೊಡು; ಘೋಷಿಸು
ಉಗ್ರಗ್ರಹ-ಭಯಂಕರ ಪಿಶಾಚ
ಉಚ್ಚಂಡ-ಅತಿಉಗ್ರ

ಉಚ್ಚಳಿಸು-ಚಿಮ್ಮು, ನಟ್ಟು ಪಾರಾಗು
ಉಡು-ನಕ್ಷತ್ರ
ಉಡೆವಣೆ-ಕಾಂಚೀರತ್ನ
ಉಣ್ಮು-ಹೊರಬರು, ಉರವಾಗು
ಉತ್ತಂಸ-ಕಿರೀಟ
ಉತ್ತಮಾಂಗ-ಶಿರಸ್ಸು
ಉತ್ತರಕ-ಮೇಲೆತ್ತುವವ, ದಾಟಿಸುವವ
ಉತ್ಥಿತ-ಎಬ್ಬಿಸಿದ
ಉತ್ಪಥಕ್ರಮ-ಮೀರಿ ನಡೆಯುವಿಕೆ
ಉದಗ್ರ-ಶ್ರೇಷ್ಠ
ಉದಗ್ರವೃತ್ತಿ-ಸಂತಪ್ತವೃತ್ತಿ
ಉದಂಚ-ಮೇಲೆತ್ತಿದ
ಉದ್ಗಲಿಸು-ಹೊರಟುಬರು
ಉದ್ಧ-ಉನ್ನತ, ಎತ್ತರ
ಉದ್ದುರ-ಅತಿಯಾದ, ದುಷ್ಟ
ಉದ್ದೂಳನ-ಲೇಪನ
ಉದ್ವರ್ತನಂಗೆಯ್-ಲೇಪಿಸು
ಉದ್ವಾಹ-ವಿವಾಹ
ಉನ್ನತ-ಸುಂದರ
ಉನ್ಮದನಬಾಣ-ಮೋಹನಾಸ್ತ್ರ
ಉಪಪ್ಲವ-ಗ್ರಹಣ, ಗಂಡಾಂತರ
ಉಪ್ಪವಡಿಸು-ಏಳು
ಉಬ್ಬೆಗ-ಸಂತಾಪ
ಉರವಣೆ-ರಭಸ, ಕ್ರೌರ್ಯ
ಉರುಗಿಸಿನೋಡು-ಇಣಿಕಿ ನೋಡು
ಉರೋಜ-ಮೊಲೆ
ಉರ್ಕು-ಹುರುಪು, ಉತ್ಸಾಹ
ಉರ್ವೀಧರ-ರಾಜ, ಕ್ಷತ್ರಿಯ, ಉರ್ವೀವರ
ಉಗಿಬಗೆ-ಕಳವಳ
ಉಲ್ಲೇಖಿಸ-ಯಜ್ಞಕಟ್ಟಿಯ ಮೇಲೆ ಬರೆಯುವ ಯಂತ್ರ
ಉಳಿದು-ಕೂಗಿ
ಉಳ್ಳಲರ್ವ-ಅರಳುವುದರಲ್ಲಿದ್ದ
ಊಳಿಗ-ಉಪದ್ರವ, ಪೀಡೆ

ಎ,ಏ,ಐ

ಎಕ್ಕಲ-ಹಂದಿ
ಎಕ್ಕ ಸಕ್ಕ-ಅಕಳಾ ಸಕಳ
ಎಚ್ಚು-ಹೊರಬಿದ್ದು
ಎಡೆಗಲಿ-ದಾಟು, ಮೀರು
ಎಡೆಗೊಳ್-ಅವಕಾಶ ಪಡೆ
ಎಡೆಯುಡುಗು-ಸಮಯಕಳೆ
ಎಡ್ಡಂ-ಮನೋಹರ
ಎತ್ತರ, ತತ್ತರ-ಎತ್ತರ, ಪತ್ತರ
ಎಯ್ಯಮೃಗ-ಮುಳ್ಳುಹಂದಿ
ಎಱಂಕೆ-ರೆಕ್ಕೆ
ಎಱೆ-ನೀರು ಹನಿಸು
ಎಲವ-ಬೂರಲಗಿಡ (ಶಾಲ್ಮಲಿ)
ಎಳಲ್-ಜೋಲುಬೀಳು
ಎಳಕುಳಿಗೊಳ್-ಸುಲಿ, ಸೆಳೆ
ಎಳೆ-ಭೂಮಿ
ಎಳ್ಚರಿಸು ಎಳ್ಚಟ್ಟು-ಎಬ್ಬಿಸು, ಓಡಿಸು
ಏಣ-ಚಿಗರೆ
ಏಣವಾಹನ-ಗಾಳಿ
ಏಪೊಳ್ತು-ಯಾವಾಗಲೂ
ಏಸು, ಎಸು-ಬಾಣದ ಒಗೆತ
ಏಳಿಸು-ಅಣಕಿಸು, ಎಬ್ಬಿಸು
ಐದವು-ಸಾಲವು
ಐರದಾಳಿ-ಗುಳದಾಳಿ, ಮಾಂಗಲ್ಯ

ಒ,ಓ,ಔ

ಒಗೆ-ಉಂಟಾಗು, ಹುಟ್ಟು
ಒಗೆತರು-ಉಂಟಾಗು, ಹುಟ್ಟು
ಒಗೆತರು-ಹುಟ್ಟಿಬರು
ಒಗ್ಗು-ಐಕ್ಯ, ಒಕ್ಕಟ್ಟು
ಒಚ್ಚತಂಗೊಳ್ಳು-ಶ್ರೇಷ್ಠರೆಂದು ಭಾವಿಸು
ಒಜ್ಜರ-ನೀರಿನ ಪ್ರವಾಹ
ಒಟ್ಟಜೆ-ಸಮೂಹ
ಒಟ್ಟೈಸು-ಗುಂಪು, ಗುಂಪಾಗಿ

ಒಡರ್ಚು-ಸಿದ್ಧವಾಗು
ಒಡ್ಡಣೆ-ಒಡ್ಡು
ಒತ್ತು-ಗಾದಿ
ಒತ್ತೆ-ಸೂಳೆಯರಿಗೆ ಕೊಡುವ ಹಣ
ಒಪ್ಪ-ಕಾಂತಿ
ಒರಲು-ದುಃಖದಿಂದ ಕೂಗು
ಒರ್ಬುಳಿ-ಗುಂಪು, ಒಟ್ಟು
ಒಳಗು-ಮರ್ಮ, ಅಂತರಂಗ
ಒಳ್ಪು-ಒಪ್ಪ, ಬೆಲುವು
ಓಜೆ-ಕ್ರಮ
ಓತು-ಒಲಿದು, ಪ್ರೀತಿಸು
ಓರಂತೆ-ಕ್ರಮವಾಗಿ
ಓರನ್ನ-ಸಮಾನವಾದ
ಓಲಗಿಸು-ಅನುಸರಿಸು
ಓಪಿ-ಚೆನ್ನಾಗಿ
ಓವು-ರಕ್ಷಿಸು, ಹೂ ಪೋಣಿಸು
ಓಸರಿಸು-ಬಿಚ್ಚು, ಬದಿಗೆ ಮಾಡು
ಔರ್ವ-ದಾವಾಗ್ನಿ

ಕ, ಖ

ಕಂಸಾಳ-ಕಂಚಿನ ತಾಳ
ಕಕುಭ-ದಿಕ್ಕು
ಕಕ್ಕಡ-ನಿಷ್ಠುರ
ಕಕ್ಷಾಂತ-ಕಪೋಲದ ಮೇಲ್ಭಾಗ
ಕಚ್ಚಪ-ಆಮೆ
ಕಂಜ-ಕಮಲ
ಕಟಕಿ-ಚುಚ್ಚುಮಾತು
ಕಟ್ಟಣಕ-ಕೆಟ್ಟಹಠ
ಕಡಿ-ತುಂಡು
ಕಡಿಯಣ-ಲಗಾಮು
ಕಡೆ-ಉಳಿಯಿಂದ ಕಡಿ
ಕಣಕ-ಬತ್ತದ ತೆನೆ
ಕಣ್ಗೊಳಿಸು-ಚಂದ ಕಾಣು
ಕಂಡರಿಸು-ಕೆತ್ತು
ಕಣ್ದೆರವಿ-ಕಣ್ಣು ತೆರೆಯಿಸುವಂಥದು
ಕದಂಬ-ತಾಳೆಮರ
ಕಂತು-ಚಂಡು
ಕಂದು-ಗುಂಡುಕಲ್ಲು
ಕಪೋಳವಿಪುಳಿ-ತುಂಬಿದ ಗಲ್ಲದವಳು
ಕಬರೀಭರ-ಕೂದಲುಗಂಟು, ಮುಡಿ
ಕಮನ-ಮನೋಹರ
ಕಂಬು-ಶಂಖ
ಕಮ್ಮರ-ಸೀಸವೃಕ್ಷ
ಕರವಾಳಿ-ಕತ್ತಿ
ಕರವಿಚ್ಛೇದನ-ಕೈಕಡಿಯುವುದು
ಕರಾಗ್ರ-ಬೆರಳು
ಕರುಮಾಡು-ಉಪ್ಪರಿಗೆ
ಕರಿಮುರಿಗೊಳ್-ಕಮರಿಹೋಗು
ಕಱುತ್ತು-ಉದ್ದೇಶಿಸಿ
ಕರೆ-ಕೂಗು
ಕರ್ಣಪಾಲಿಕಾ-ಕವಿಯ ಆಭರಣ
ಕರ್ದುಂಕು-ಕುಕ್ಕು
ಕರ್ಬೊನ್-ಕಬ್ಬಿಣ
ಕರ್ವುವಿಲ್ಲ-ಕಬ್ಬಿನ ಬಿಲ್ಲುಳ್ಳ ಕಾಮ
ಕಲಾಪ-ನವಿಲುಗರಿ
ಕವರ್-ಕಿತ್ತುಕೋ
ಕಶಾ-ಕೊರಡಾ, ಚಿಮ್ಮಟಿಗೆ
ಕಳ-ಮಧುರವಾದ
ಕಳಲ್-ಬೇಸರಪಡು
ಕಳಮ-ಭತ್ತ
ಕಳಿಗೆ-ಮೊಗ್ಗು
ಕಾಕು-ಇಂಪಾದ ಧ್ವನಿ, ಅರ್ಥಗರ್ಭಿತ ಮಾತು
ಕಾದಲರ್-ಪ್ರಿಯರು
ಕಾಮದುಘ-ಕಾಮಧೇನು
ಕಾಮ್ಯ-ಬಯಸಿದ
ಕಾರರಸ-ಮಳೆರಾಜ
ಕಾರ್ಗಾಲ-ಮಳೆಗಾಲ
ಕಾರ್ಪಣ್ಯ-ದುಃಖಿ ಬಡತನ
ಕಾರ್ಮೊಗ-ಮುಂಗಾರು

ಕಾಲ್ಪೊನಲ್-ಕಾಲುವೆಯಲ್ಲಿ ಹರಿಯುವ ನೀರು
ಕಾವ್ಯಶ್ರೇಷ್ಠ-ಶುಕ್ರ, ಕವಿ
ಕಾವು-ದೇಟು
ಕಾವುಳ-ಕಗ್ಗತ್ತಲೆ
ಕಾಸಾರ-ಮಡು
ಕಾಳಿಕೆ-ಕಾಡಿಗೆ
ಕಾಳಿಂದಿ-ಯಮುನಾನದಿ
ಕಿಗ್ಗಟ್ಟು-ಕಿರಿಯ ಕಟು
ಕೀನಾಶ-ಯಮ
ಕೀಱ್-ಕಿರಿಚು, ಕೂಗು
ಕೀರ-ಗಿಳಿ
ಕೀಲಿಸು-ನೆಡಿಸು
ಕುಕ್ಕರಿಸು-ಕೆಳಕ್ಕೆ ಬೀಳು
ಕುಜ-ಗಿಡ
ಕುಟಿಲತೆ-ಕೊಂಕುತನ
ಕುಟಿಲಪಥ-ವಕ್ರವಾದ (ಸೊಟ್ಟ)ದಾರಿ
ಕುಡುಪ್ಪು-ಕೊಂಕಿದ ಹುಬ್ಬು
ಕುಧರ-ಪರ್ವತ
ಕುನಿ-ಬೊಗ್ಗು, ಬಾಗು
ಕುನುಂಗಿ-ಬೊಗ್ಗಿ
ಕುಂತಳ-ಮುಂಗುರುಳು
ಕುಮುದ-ತಾಪ
ಕುಮುಹ-ವ್ಯಾಧಿ
ಕುಂಭಿ-ಆನೆ
ಕುರರಿ-ಒಂದು ಕ್ರೂರ ಮೃಗ, ಹೆಣ್ಣುಮರ
ಕುರುವಕ-ಗೋರಂಟಿ (ಮದರಂಗಿ)
ಕುರುಪುಗೊಳ್-(ಗುರುತಿಸು)
ಕುಲಿಶ-ವಜ್ರಾಯುಧ
ಕುವಲಯ-ಚಂದ್ರ, ಕಮಲ
ಕುಳ-ಚೂಪಾದ ಕಬ್ಬಿಣದ ಗೂಟ
ಕುಳಿಕ-ಒಂದು ಜಾತಿ ವಿಷಸರ್ಪ
ಕುಳಿರ್‌ಕೋಡು-ತಂಪನ್ನುಂಟುಮಾಡು
ಕೂನಿಸು-ಬಾಗಿಸು
ಕೂರಸಿ-ಹದನಾದ ಕತ್ತಿ
ಕೂರ್ತು-ಪ್ರೀತಿಸಿ
ಕೂರ್ಪು-ಹರಿತ
ಕೃತಕಾಚಳ-ಕೃತ್ರಿಮಪರ್ವತ
ಕೃತಿ-ಕಾವ್ಯ
ಕೃಶಾನು-ಬೆಂಕಿ
ಕೆತ್ತು-ಹಾರು, ಸ್ಫುರಿಸು
ಕೆಯ್ಯೆಯ್-ಸಿಂಗರಿಸು
ಕೆಯ್ಗೊಳಿಸು-ಅಲಂಕಾರಮಾಡು
ಕೆಯ್ದು-ಆಯುಧ
ಕೆಯ್ನೀರ್-ಮಂಗಳಧಾರೆ
ಕೆಯ್ವೊಡೆ-ಕೈಯಿಂದ ಬಾರಿಸುವ ದುಮ್ಮಟ್ಟ
ಕೆಯ್ವೊಡೆ-ಬಾಣಾಸನ
ಕೆಯ್ಮಿಕ್ಕು-ಹೆಚ್ಚಾಗು
ಕೆಯ್ಮೆ-ಕುಶಲತೆ
ಕೆಯ್ವಾರಿಸು-ಜಯಘೋಷಮಾಡು
ಕೇಕಿ-ನವಿಲು
ಕೇಣ-ಸಿಟ್ಟು, ಛಲ
ಕೈಘಟ್ಟಿಗೊಳ್-ಮೈಗೆ ತೇಯ್ದ ಗಂಧ ಪೂಸು
ಕೊಂಚೆ-ಕ್ರೌಂಚಪಕ್ಷಿ
ಕೊಡಂಕೆ-ಕಿವಿ
ಕೊಣಕು-ಕೋಣನ ಕೂಗು
ಕೊಂಡುಕೊನೆ-ತುಂಬಾಹೊಗಳು
ಕೊತ್ತಳ-ಹುಡೆ, ಸಮೂಹ
ಕೊಂತ-ಭಲ್ಲೆ
ಕೊಳರ್ವಕ್ಕಿ-ನೀರುಹಕ್ಕಿ
ಕೋಟರ-ಗಿಡಗಳ ಪೊದರು, ಪೊಟರೆ
ಕೋಟೀರ-ಕಿರೀಟ
ಕೋಡಿ-ತಂಪಾಗಿ
ಕೋರಕ-ಮೊಗ್ಗು
ಕೋವಿ-ಬಾಣ
ಕೋಳ್-ಏಟು, ಆಘಾತ
ಕೋಳಾಹಳೋತ್ಕರ-ದೊಡ್ಡ ಗದ್ದಲ
ಕೌಕ್ಷೇಯ-ಒರೆಯೊಳಗಿದ್ದ ಕತ್ತಿ

ಕೌರೇಳು-ಕಮರಿಹೋಗು
ಕೌಶಿಕ-ಗೂಗೆ, ಋಷಿ, ಹಾವಿನ ಪೊರೆ
ಕೌಳುಡಿ-ರೇಶಿಮೆಬಟ್ಟೆ
ಕ್ರೇಕಾಂಕುರ-ಹಂಸೆಗಳ ಕೂಗು
ಕ್ರೋಡ-ಹಂದಿ
ಕ್ವಣಿತ-ಮಂಜುಳನಾದ
ಕ್ಷಾಪತಿ-ಭೂಪತಿ
ಖಗ-ಸೂರ್ಯ, ಪಕ್ಷಿ
ಖಟ್ವಂಗ-ಹೊರಸಿನ ಕಾಲು
ಖಡ್ಗಿ-ಗಂಡಕ
ಖರಕರ-ಸೂರ್ಯ

ಗ, ಘ

ಗಜಪತಿ-ಇಂದ್ರ
ಗಣಿತ-ಲೆಕ್ಕ
ಗಂಡ-ಗಲ್ಲಪ್ರದೇಶ
ಗಂಡಶೈಲ-ಎತ್ತರ ಶಿಖರ
ಗಂಡುಡುಗು-ಧೈರ್ಯಗುಂದು
ಗಂಧವತಿ-ಭೂಮಿ
ಗಂಧವಹ-ಗಾಳಿ
ಗಂಧಸಿಂಧುರ-ಮದ್ದಾನೆ
ಗಮಕ-ಮನೋಭಾವ ಸೂಚಿಸುವ
ಗಹನ-ಅಡವಿ
ಗಹ್ವರ-ದೊಡ್ಡಗವಿ
ಗಳಪು-ಗಿಳಿಮಾತು
ಗಳಬಳ-ಗದ್ದಲ
ಗಿರು-ಭಾವಿಸು
ಗುಡಿಗಟ್ಟು-ರೋಮಾಂಚಿತನಾಗು
ಗುಣ-ಕಮಲದಂಟಿನ ಎಳೆ, ದಾರ
ಗುಣ್ಪು-ಆಳ ತಗ್ಗು
ಗುಲ್ಮ-ಕಂಬ
ಗುಳ-ಆನೆ ಬೆನ್ನ ಮೇಲೆ ಕಟ್ಟುವ ತೊಟ್ಟಿಲು
ಗೆತ್ತು-ಭಾವಿಸಿ
ಗೊಂಟು-ಗೊತ್ತುಮಾಡಿದ ಸ್ಥಳ
ಗೊಂದಲಿ-ಸಮುದಾಯ
ಗೊಲೆಗೆತ್ತು-ಹೆದೆಸಹಿತ ಎತ್ತು
ಗೋತ್ರ-ಪರ್ವತ, ಕುಲ, ಸಂತಾನ
ಗೋಪತಿ-ಸೂರ್ಯ
ಗೋವಳಗಟ್ಟಿಗೆ-ಕೈಬಡಿಗೆ, ಲಾಠಿ
ಗೌಂಜು-ಕೌಜುಗ
ಗ್ರೀವ-ಕುತ್ತಿಗೆ
ಘಟ-ಆನೆ
ಘಟ್ಟಿವಳ್ತಿ-ಗಂಧವನ್ನರೆಯುವವಳು
ಘಟ್ಟಿಮಗುಳ್ಚು-ಗಂಧ ಅರೆ
ಘನ-ದೊಡ್ಡಸ್ತಿಕೆ
ಘನಪಥ-ಆಕಾಶ
ಘೀಳ್-ಆನೆಯ ಘೀಂಕರಿಸುವಿಕೆ
ಘಸೃಣ-ಲೇಪನ
ಘೋಟ-ಕುದುರೆ

ಚ, ಛ

ಚಟುಳತರ-ಅತಿಚಂಚಲ
ಚಂಡಶೀಲ-ಉಗ್ರಆಚರಣೆಯವ
ಚಂಡಾಸಿ-ಹರಿತವಾದ ಕತ್ತಿ
ಚಂಡಾಂಶು-ಸೂರ್ಯ
ಚಂದ್ರಲೇಖೆ-ಬಾಲಚಂದ್ರ
ಚಂದ್ರಾತಪ-ಬೆಳದಿಂಗಳು
ಚಪ್ಪರಣೆ-ಗಿಳಿಗಳ ಕೂಗು
ಚಮರ-ಗೊಂಡೆ
ಚಮ್ಮಟಿಕೆ-ಬಾರುಕೋಲು
ಚರಣಮುದ್ರಿಕಾ-ಕಾಲುಂಗುರ
ಚರಣಾಯುಧ-ಕೋಳಿ
ಚರ್ಮದಂಡ-ಬಾರುಕೋಲು
ಚಲಶಿವ-ಪರಬ್ರಹ್ಮನ ಸ್ವರೂಪ
ಚಾಪಳವೃತ್ತಿ-ಚಂಚಲ ಸ್ವಭಾವ
ಚಿತ್ರಕಾಯ-ಹುಲಿ
ಚಿರ-ಚಿರಾಯತಕಡ್ಡಿಗಿಡ
ಚೂಳಿಕೆ-ದೀಪದ ಕುಡಿ

ಚೆಲ್ಲವಾಡು-ಧಿಕ್ಕರಿಸು
ಛಿದ್ರಿಸು-ಕನ್ನ ಕೊರೆ
ಜಕ್ಕಂದೊಳಲಿ-ಕೋಣ
ಜಟಾರಚನೆ-ಜಡೆಕಟ್ಟು
ಜಾಯಿಲ-ನಾಯಿ
ಜಾಲ-ಜಾಳಿಗೆ
ಜಿನುಗು-ಅಳಿನಾದ
ಜಿನುಂಗು-ಮೆಲುದನಿಮಾಡು
ಜೀವ-ಗುರು, ಬೃಹಸ್ಪತಿ
ಜೀವನ-ನೀರು, ಬಾಳುವೆ
ಜೋದ-ಮಾವಟಿಗ
ಝಂಕೆ-ಬೆದರಿಸು
ಝಷ-ಮೀನು
ಝಷಕೇತ-ಕಾಮ

ಟ, ಠ

ಟಿಟ್ಟಿಭ-ಟಿಂವಕ್ಕಿ
ಠಾವು-ಸ್ಥಳ
ಡಂಬಳ-ಹುಚ್ಚಾಟ
ಡಿಂಡಿಮ-ನಗಾರಿ
ಡೆಂಕಣಿ-ಆಯುಧ, ಯಂತ್ರ
ಡೌಂಡೆ-ವಾದ್ಯವಿಶೇಷ
ಡೊಕ್ಕರಿಕೆ-ಕುಸ್ತಿಯ ಪೇಚು

ತ, ಥ

ತಕ್ಕು-ವಂಚನೆ
ತಟಿಲ್ಲತಾ-ಬಳ್ಳಿಮಿಂಚು
ತಡಿಕೆ-ತಟ್ಟಿ
ತಣಿವಿನಂ-ತೃಪ್ತಿಯಾಗುವ ಹಾಗೆ
ತನುವನೆಳಸು-ಸೀರತನವನ್ನು ಅಪೇಕ್ಷಿಸು
ತಂದಲ್-ಜಡಿಮಳೆ
ತಮಾಲ-ಹೊಂಗೆ
ತರದಿಂ-ಕ್ರಮವಾಗಿ
ತರಳತರ-ತುಂಬಾ ಚಂಚಲ
ತಱೆ-ಸವರು
ತರ್ಕಯಿಸು-ವಿಚಾರಿಸಿ ನೋಡು
ತವಿಲ್-ಕ್ಷಯ, ನಾಶ
ತಳರ್-ಚಲಿಸು
ತಳವೆಳಗು-ಭ್ರಮೆ
ತಳಾರರ್-ತಳವಾರ, ಕಾಪಿನಾಳು
ತಳೆ-ಧರಿಸು
ತಲ್ಪ-ಹಾಸಿಗೆ
ತಳ್ಪಲ್-ತಪ್ಪಲು
ತಳ್ತಿಱೆ-ಜೋರಿನಿಂದ ತಿವಿ
ತಳ್ತು-ಎದುರಿಸಿ
ತಾತ್ಪರ್ಯ-ಸತ್ಯಸ್ವರೂಪ
ತಾರಕಿತಮಾದ-ನಕ್ಷತ್ರಗಳಿಂದ ಕೂಡಿದ
ತಾರಗಿರಿ-ಬೆಳ್ಳಿಪರ್ವತ
ತಾರಾ-ನಕ್ಷತ್ರ
ತಾರೆಗಬೀರಿಗ-ತರಗಾಬರಗಾ
ತಾರ್ಮುಟ್ಟು-ಒಣಗು, ಅಟ್ಟಿಸು
ತಾಳಿಗೆ-ಬಾಯಿಅಂಗಳ
ತಿಗ್ಮಾಂಶು-ತೀಕ್ಷ್ಣಕಿರಣ, ಸೂರ್ಯ
ತಿಂಗಳ್-ಚಂದ್ರ
ತಿಣ್ಣ-ದಟ್ಟ, ಭಾರವಾದ
ತಿತ್ತಿರಿ-ಒಂದು ಜಾತಿ ಪಕ್ಷಿ, ತುತ್ತೂರಿ
ತೀವ್ರ-ತೀಕ್ಷ್ಣ
ತೀಡು-ಬೀಸು
ತೀರದೊಪ್ಪ-ದಂಡೆಯ ಸೌಂದರ್ಯ
ತುಡು-ಕೊಡು, ಧರಿಸು
ತುಂಡ-ಚಂಚು
ತುಱುಗು-ದಟ್ಟವಾಗು
ತುಱುಂಗಲು-ಗುಂಪು
ತೂದು-ಮುಂದುವರಿಸು
ತೂಪಿರಿ-ಧ್ವನಿಯಿಂದ ನಿವಾಳಿ ತೆಗೆ
ತೂರಲ್ಗೊಱು-ತುದಿಯ ಕೊಂಬೆ
ತೂಳ್-ಮುಂದುವರಿ
ತೆಱಪುಗೊಳ್-ಅವಕಾಶ, ವ್ಯಾಪಿಸು
ತೆರಳ್ವೆ-ಧಾಳಿ
ತೆರೆಮಸಗು-ಹೆಚ್ಚಾಗು

ತೇಂಕಾಡು-ಈಸಾಡು
ತೊಂಗಲ್-ಗೊಂಚಲು
ತೊಡಂಬೆ-ಆಭರಣ
ತೊಂಡುಗಡೆ-ಗಳಹು
ತೋಟಿ-ಜಗಳ
ತೋಮರ-ಕಬ್ಬಿಣದ ಒನಕೆ
ತೌದಲೆ-ಕೊನೆಗಾಲ
ಥಟ್ಟು-ಸಮುದಾಯ

ದ, ಧ, ನ

ದಂಡಣೆ-ಶಿಕ್ಷೆ
ದಂಡೆ-ತೋಳು
ದನುಪ್ರೋದ್ಭವ-ದನುಜ
ದರಿ-ಕಂದರಿ
ದಶಶತಕರ-ಸೂರ್ಯ
ದಳನ-ಪುಡಿಮಾಡುವಿಕೆ
ದಳವೇರು-ಚಿಗುರು
ದಾರವಂದ-ಬಾಗಿಲು, ಕದ
ದಾರ-ಹಗ್ಗ, ಕಿಚ್ಚು
ದೀಪನ-ಬೆಳಕನ್ನು ಕೊಡುವ
ದೀಹದ ಪುಲಿ-ಬೇಟೆಗಾಗಿ ಪಳಗಿಸಿದ ಹುಲಿ
ದುಶ್ಚವನ-ಇಂದ್ರ
ದೂರ್ವಾ-ಗರಿಕೆ
ದೂಸಿಗ-ಬಟ್ಟೆಯ ವ್ಯಾಪಾರಿ
ದೆಖ್ಖಾದೆಖ್ಖಿ-ದೃಷ್ಟಿಯುದ್ಧ
ದೆಖ್ಖಾಳ-ರಮಣೀಯತೆ
ದೇವಾಸಿ-ನೂಲಿನ ಬಟ್ಟೆ
ದೊರೆ-ಸಮಾನ
ದೊರೆಕೊಳ್-ಪ್ರಾಪ್ತವಾಗು
ದ್ವಿಜ-ಹುಲ್ಲು
ಧಮ್ಮಿಲ್ಲ-ಹೆಳಲು
ಧಾರಾಧರ-ಮೋಡ
ಧೀಂಕಿಡು-ಧಾಳಿಯಿಡು
ಧೃತಕಂಟಕ-ಮುಳ್ಳಿರುವ
ನಕ್ರ-ಮೊಸಳೆ
ನಕ್ಷತ್ರಪಾಠಕರು-ಜೋಯಿಸರು
ನಚ್ಚು-ನಂಬು
ನಲ್ಲೆ-ಪ್ರಿಯೆ
ನಳನಳಿಕೆ-ಕೋಮಲತೆ
ನಾನ್-ತೊಯ್ದು, ವದ್ದೆಯಾಗು
ನಿಕುರುಂಬ-ಸಮೂಹ
ನಿಕೃಷ್ಟಾತ್ಮ-ಕೀಳುಮನಸ್ಸಿನ
ನಿಕೇತನಯೂಥ-ಮನೆಗಳ ಗುಂಪು
ನಿಗಳ-ಸರಪಳಿ
ನಿಟ್ಟೆ-ನಿಷ್ಠೆ
ನಿಡಿದುಗೊಳ್-ಉದ್ದವಾಗು
ನಿದಾಘ-ಬೇಸಗೆ
ನಿಧಿ-ನಿಕ್ಷೇಪ, ಸಮೂಹ, ಸಂಪತ್ತು
ನಿಭ-ಸಮಾನ
ನಿಮಿರ್-ನಿಗುರು, ಸೆಟೆ
ನಿಮಿರ್ಕೆ-ದೊಡ್ಡಸ್ತಿಕೆ
ನಿಮಿರ್ಚು-ರಚಿಸು
ನಿರತಿಶಯಪದ-ಮೋಕ್ಷ
ನಿರವದ್ಯ-ದೋಷರಹಿತ
ನಿರುಪಾಧಿಕ-ಯಾವ ಉಪಾಧಿಗಳು ಇಲ್ಲದ
ನಿರೋಧ-ಒತ್ತಡ
ನಿರ್ಘೋಷ-ಗರ್ಜನೆ
ನಿರ್ಯತ್-ಹೊರಡುವ
ನಿರ್ವೇದ-ಬೇಸರ
ನಿವಾತ-ಗಾಳಿಯಿಲ್ಲದ
ನಿವೇಶ-ಆಶ್ರಮ, ಬೀಡು
ನಿಶಿತ-ಹರಿತವಾದ
ನಿಶ್ಚಲ ಕೇದಾರ-ಪರ್ವತ ಶಿಖರ
ನಿಷ್ಕಂಪನ-ನಡುಕವಿಲ್ಲದ
ನಿಷ್ಪ್ರವರ-ಶ್ರೇಷ್ಠವಂಶವಿಲ್ಲದ
ನಿಸ್ವನ-ನಿಟ್ಟುಸಿರು
ನಿಳಿಂಪ-ಸುರ
ನೀಡ-ಮನೆ
ನೀಡಾಗು-ಸಹಿಸು

ನೀಡಾಡು-ಕೊಟ್ಟುಬಿಡು
ನೀರದ-ಮೋಡ
ನೀಱಿ-ಸುಂದರಸ್ತ್ರೀ
ನೀರೋಡು-ಸತ್ವ ಕಳೆದುಕೊಳ್ಳು
ನೀವು-ತಿಕ್ಕು
ನೀಳ್ಕೈಸು-ಸಹಿಸು
ನೀಳ್-ಮುಂದೆ ಚಾಚು
ನೂತ್ನೋದಕ-ಮಳೆಯ ನೀರು
ನೆಗೆ-ಜಿಗಿ
ನೆಮ್ಮು-ಆಶ್ರಯಿಸು
ನೆರವಿ-ಗುಂಪು
ನೆಲೆಗೊಂಡ-ಮನೆಮಾಡಿಕೊಂಡ
ನೇಣ್-ಹಗ್ಗ
ನೇವಳ-ಕೊರಳ ಹಾರ
ನೇವುರ-ನೂಪುರ
ನೇಹ-ಸ್ನೇಹ

ಪ, ಫ

ಪಕ್ಕರಿಕೆ-ಥಡಿ
ಪಕ್ಕೆ-ಗೂಡು
ಪಟ-ಬಲೆಯ ವಸ್ತ್ರ
ಪಟುರವ-ಗಂಭೀರಧ್ವನಿ
ಪಟ್ಟಿಯ-ಕಿರುಗತ್ತಿ
ಪಡಿ-ಪರಿ, ರೀತಿ
ಪಡಿಚಂದ್ರ-ಪ್ರತಿಚಂದ್ರ
ಪಡಿಯರ-ದ್ವಾರಪಾಲಕ
ಪಡ್ಡಳಿ-ಕಣಗಿಲೆ
ಪಣ್ಯಾಂಗನೆ-ವೇಶ್ಯೆ
ಪತಂಗ-ಸೂರ್ಯ
ಪತಾಕಿನಿ-ಸೈನ್ಯ
ಪತ್ರಗತಿ-ಆಲಂಕಾರಿಕ ಎಲೆಯ ಚಿತ್ರ
ಪದ-ಸಮಯ, ವೇಳೆ
ಪದಿರ್-ವ್ಯಂಗ್ಯ, ಪರ್ಯಾಯ
ಪದುಳ-ಕ್ಷೇಮ, ಜಾಗ್ರತೆ
ಪದೆಪು-ಪ್ರೀತಿ, ಅಪೇಕ್ಷೆ
ಪಂದಲೆ-ಹಸಿಯ ತಲೆ
ಪನ್ನಿರ್ವರ್-ಹನ್ನೆರಡುಜನ
ಪಯೋಧರ-ಮೋಡ, ಮೊಲೆ
ಪಯೋಧಿ-ಕ್ಷೀರಸಾಗರ, ಸಮುದ್ರ
ಪರ-ಸ್ವರ್ಗ
ಪರಕೆ-ಆಶೀರ್ವಾದ
ಪರಪುಟ್ಟ-ಕೋಗಿಲೆ
ಪರಮೆ-ಭ್ರಮರ
ಪರಮೈಶ್ವರ್ಯ-ಮೋಕ್ಷಸಂಪತ್ತು
ಪರವಶತೆ-ಮೈಯ ಮರೆವು
ಪರಿಕರ-ಉಪಕರಣ
ಪರಿಖಾತ-ಅಗಳತೆ, ಕಂದಕ
ಪರಿಗತ-ಹೋಗಲಾಡಿಸಿದ
ಪರಿಣಮಿಸು-ಜೀವಿಸಿಕೊಂಡಿರು
ಪರಿಧಾನ-ಅಂತಃಪಟ
ಪರಿರಂಭಣ-ಆಲಿಂಗನ
ಪರಿವಡೆ-ಹುಬ್ಬು
ಪರಿವೀಕ್ಷಿಸು-ಸುತ್ತುಗಟ್ಟು
ಪರಿವೀಥಿ-ದೊಡ್ಡಬೀದಿ
ಪರಿವೃತ-ಸುತ್ತಿಕೊಂಡವ
ಪರಿಷ್ವಂಗ-ಆಲಿಂಗನ
ಪರಿಸ್ತರಣ-ಹಾಸುಗೆ
ಪರಿಸ್ಪಂದನ-ಆನಂದ, ವಿನೋದ
ಪರುಷ-ಸ್ಪರ್ಶಮಣಿ
ಪರೆ-ಚದುರಿಹೋಗು
ಪಲ್ವಱಿ-ಹಲ್ಲುಬಾರಿಸು
ಪವನಪಥ-ಆಕಾಶ
ಪವಮಾನ-ಗಾಳಿ
ಪಸದನ-ಉಡುಗೊರೆ, ಕಾಣಿಕೆ
ಪಸರ-ಅಂಗಡಿ
ಪಸಲೆ-ಹುಲ್ಲುನೆಲ
ಪಸಾಯನ-ಉಡುಗೊರೆ
ಪಸಿಯ-ಅಪರಿಪಕ್ವ

ಪಸೆ-ಹಸೆ-ಮಂಗಲಪೀಠ
ಪಳಂಚಲೆ-ಬೆನ್ನುಹತ್ತು
ಪಳಂಚು-ತಾಗು, ಏಟುಹಾಕು
ಪಳಿ-ನಿಂದಿಸು
ಪಳಯಿಸು-ಪ್ರಳಾಪಿಸು
ಪಳವಿಗೆ-ಧ್ವಜಪಟ
ಪಾದರಿ-ಪಾಟಲಪುಷ್ಪ
ಪಾಟಿ-ಸಮಾನ
ಪಾಠೀನ-ಮೊಸಳೆ, ಮೀನು, ಆಮೆ
ಪಾಯವಧಾರು-ಎಚ್ಚರಿಕೆಯಿಂದ ಹೆಜ್ಜೆಯಿಡು
ಪಾರಾವಾರ-ಸಮುದ್ರ
ಪಾರ್-ದಾರಿ ಕಾಯಲು ಅಪೇಕ್ಷಿಸು
ಪಾಸರೆ-ಹಾಸುಗಲ್ಲು
ಪಾಳಾಸ-ಮುತ್ತಲಿಗೂಟ
ಪಿಂಗಳ-ಕಪ್ಪು, ಕೆಂಪು, ಮಿಶ್ರಬಣ್ಣ
ಪಿಂಚಕಚುಂಬಕ-ಮೊದಲಮದ್ದು
ಪಿಡಿ-ಹೆಣ್ಣಾನೆ
ಪೀನದೆ-ದೊಡ್ಡ
ಪೀಯೂಷ-ಅಮೃತ
ಪೀಲಿ-ನವಿಲುಗರಿ
ಪುಗುಳ್-ಹುಗುಳು, ಬೊಕ್ಕೆ
ಪುಟಿಕೆ-ಪುಡಿಕೆ
ಪುಂಡ್ರೇಕ್ಷು-ಬಿಳಿಯ ಕಬ್ಬು
ಪುದಿ-ವ್ಯಾಪಿಸು
ಪುಯ್ಯಲಿಕ್ಕು-ಮೊರೆಯಿಡು
ಪುರುಡಿಸು-ಸ್ಪರ್ಧಿಸು
ಪುರುಷಮೃಗ-ಶಿವಪೂಜಾಮೃಗ
ಪುರುಳಿ-ಗಿಳಿ
ಪುಲಿಮೊಗ-ಕೋಟೆ ಹೆಬ್ಬಾಗಿಲು
ಪುಲ್ದಂಡೆ-ಹುಲ್ಲಿನ ಮಾಲೆ
ಪುಷ್ಕರ-ಆನೆಸೊಂಡಿಲ ತುದಿ
ಪುಷ್ಪಕ-ತೆರೆಯ ಪಲ್ಲಕ್ಕಿ, ಮೇನೆ, ಮೀನ
ಪುಳಕಿತಮಾಗು-ರೋಮಾಂಚವೇಳು
ಪುಳಿನ-ಮರಳುದಿಬ್ಬ

ಪೂಗ-ಅಡಿಕೆ
ಪೂಣ್-ಪ್ರತಿಜ್ಞೆಮಾಡು
ಪೂವಲಿಗೆದಱು-ರಂಗೋಲಿಚಿತ್ರ
ಪೆಕ್ಕಣ-ನೃತ್ಯಭಂಗಿ
ಪೆಟ್ಪೆ-ಹೆಂಟೆ
ಪೆಡಮೆಟ್ಟು-ಹಿಮ್ಮೆಟ್ಟು
ಪೆಪ್ಪಳಿಸು-ಭೀತಿಗೊಳ್ಳು
ಪೆರಸಾರ್-ಹಿಂದಿರುಗು
ಪೆರ್ಗುಳಿ-ದೊಡ್ಡತಗ್ಗು
ಪೇಚಕ-ಮಲದ್ವಾರ
ಪೇರುರ-ದೊಡ್ಡಎದೆ
ಪೊಂಗು-ಉಬ್ಬು
ಪೊಡಕರಿಸು-ಉತ್ಸಾಹಗೊಳ್ಳು
ಪೊಡಪ್ಪು-ಪರಾಕ್ರಮ
ಪೊತ್ತು-ಸುಡು
ಪೊಂಬಾಳೆ-ಅಡಕೆ, ಸಿಂಗಾರ, ಶ್ರೇಷ್ಠಬಾಳೆ
ಪೊಯ್ಲು-ಹೊಡೆತ
ಪೊರೆ-ತುಂಬು, ಸ್ಥಾಪಿಸು
ಪೊರೆಯೇಱು-ಮೈಯುಬ್ಬು
ಪೊರ್ದು-ಸ್ವೀಕರಿಸು
ಪೊಲ್ವ-ಹೊಲಿಯುವ
ಪೋತಕ-ಮರಿ
ಪೊಳಲ್-ಪೊಟ್ಟರೆ
ಪ್ರತಾನ-ಸಮೂಹ
ಪ್ರತಿಮುಖರ್-ಪ್ರಮುಖರು
ಪ್ರತಿಶೂನ್ಯ-ಜೋಡಿಲ್ಲದ
ಪ್ರತಿಹನ-ಏಟು ಹಾಕಲ್ಪಟ್ಟ
ಪ್ರತೀಹಾರದೇಶ-ಹೆಬ್ಬಾಗಿಲು
ಪ್ರದ-ಕೊಡುವಂತಹ
ಪ್ರದ್ಯೋತ-ಹೆಚ್ಚಿನ ಕಾಂತಿ
ಪ್ರಪಾ-ಅರವಟ್ಟಿಗೆ
ಪ್ರಬುದ್ಧ-ಧರಿಸಿದ
ಪ್ರಭೂತ-ಉಂಟಾದ
ಪ್ರರತ್ನ-ಶ್ರೇಷ್ಠರತ್ನ

ಪ್ರಸವ-ಮರಿ
ಪ್ರಸೂತಾತುರ-ಹಡೆಯುವ ಕುತೂಹಲ
ಪ್ರಸೂನ-ಹೂ
ಪ್ರಸ್ತಾವ-ಸಮಯ
ಪ್ರಸ್ಫುರಿತ-ಚಂಚಲ
ಪ್ರಾಗ್ರ-ಅತಿಶ್ರೇಷ್ಠ
ಪ್ರಾಂಜಲ-ಶುದ್ಧ
ಪ್ರಾತರ್ಕ್ಯ-ತರ್ಕಮಾಡಲು ಅಸಾಧ್ಯ
ಪ್ರಾಭವ-ಉದಯ
ಪ್ರಾಯ-ಸಮಾನ
ಪ್ರೋಚ್ಚಲತ್-ಮೇಲೆ ಹಾರುವ
ಪ್ರೋತ್ಕರ-ಉಂಟಾದ
ಪ್ರೋದ್ಗತ-ಹೊರಡುವ
ಪ್ರೋನ್ನಿಳಿತ-ಒಟ್ಟುಗೂಡಿದ
ಫಟತ್ಕಾರ-ಫಟಫಟನೆಂಬ ಶಬ್ದ
ಫಣಿರಾಜ-ಆದಿಶೇಷ
ಫೇನ-ಬುರುಗು

ಬ, ಭ

ಬಗೆ-ಭಾವನೆ, ಅಪೇಕ್ಷಿಸು
ಬಗೆವೆರ್ಚು-ಮನಸ್ಸು ಹಿಗ್ಗು, ಹೃದಯವರಳು
ಬಗ್ಗಣೆ-ಕೋಗಿಲೆಯ ಕೂಗು
ಬಚ್ಚಣೆ-ಹೊದಿಕೆ
ಬಂಡಣ-ಯುದ್ಧ
ಬಂದುಗೆ(ತ್ಸ)-ಬಂಧೂಕ (ತ್ಸ)
ಬಂಧನ-ಮಾಲೆಗಟ್ಟುವಿಕೆ
ಬಂಧೂಕ-ಬಂದುಗೆ, ಗುಲ್ಫಾಕ್ಷ
ಬಱಿತುಹೋಗು-ಬತ್ತಿಹೋಗು
ಬಱೆ-ಪಕ್ಕೆ
ಬರಿಕೆಯ್-ಸೊಂಡಿಲು
ಬಲವಂದು-ಸುತ್ತುಗಟ್ಟು, ಪ್ರದಕ್ಷಿಣೆಹಾಕು
ಬಲಾರಿ-ಇಂದ್ರ
ಬಲ್ಲಣೆ-ಪಾಂಡಿತ್ಯ
ಬಸವಳಿ-ಶಕ್ತಿಗುಂದು
ಬಳಸಿಗಂ-ಸುತ್ತುಮುತ್ತು
ಬಳಾನೀಕ-ಸೈನ್ಯಸಮೂಹ
ಬಳಾಹಕ-ಮೋಡ
ಬಳಿಗೊಳ್-ಬೆನ್ನುಹತ್ತು
ಬಾಯಳಿ-ಬಾಯಿಬಿಡು
ಬಾಯಿಣ-ಬಾಗಿನ
ಬಾಯ್ದೆರೆ-ತುಟಿ, ತೆರೆದ ಬಾಯಿ
ಬಾರಿಸು-ನಿವಾರಣೆಮಾಡು
ಬಾವನ್ನ-ಶ್ರೀಗಂಧ
ಬಾಷ್ಪ-ಹಬೆ, ಕಣ್ಣೀರು
ಬಾಸಣ-ಮುಸುಕು
ಬಾಸಣಿಸು-ಹೊದಿಸು
ಬಾಸೆ-ಹೊಟ್ಟೆಯ ಮೇಲಿನ ರೋಮರಾಜಿ
ಬಾಹುಪೂರ-ಭುಜಕಿರೀಟ
ಬಾಳ್-ಕತ್ತಿ, ಬದುಕು
ಬಿಗುರ್-ಅಂಜು
ಬಿಗುರ್ತು-ಭೀತಿಗೊಂಡು
ಬಿಣ್ಪು-ಭಾರ
ಬಿದಿರ್-ಹೊಯ್ದಾರು
ಬಿದು-ಗಂಡಸ್ಥಲ
ಬಿನ್ನಣ-ವಿಜ್ಞಾನ
ಬಿಂಬ-ತೊಂಡೆಹಣ್ಣು, ರೂಪ
ಬಿಲ್ಲುಂಬೆರಗು-ಅತ್ಯಾಶ್ಚರ್ಯ
ಬಿಸ-ವಿಷ, ಕಮಲದ ದಂಟು
ಬಿಸರುಹ-ಕಮಲ
ಬಿಳ್ತು-ಬೀಜ
ಬಿಳ್ದಿನ-ಹಗಲು
ಬೀದಿವರಿ-ಹಬ್ಬು
ಬೀಳಿಲ್-ಇಳಿಬೀರು
ಬುದ್ಬುದ-ಗುರುಳೆ
ಬೆಂಚಿ-ಹೊಂಡ, ಸಣ್ಣಕೆರೆ
ಬೆಟ್ಟಿತ್ತು-ಬಿರುಕು
ಬೆಡಂಗು-ಮಾತಿನ ಜಾಣ್ಮೆ
ಬೆಂಡೇಳ್-ನಿಸ್ಸತ್ವನಾಗು, ಹಗುರ
ಬೆನ್ನೀರ್-ಬೆಚ್ಚನೆ ನೀರು

ಬೆರಕೆವೆಳಗು-ಸಮ್ಮಿಶ್ರಪ್ರಕಾಶ
ಬೆರಂಟು-ಹರಡು, ಆಗಿ
ಬೆಸಕೆಯ್-ಅಪ್ಪಣೆ ಪಾಲಿಸು
ಬೆಸಲಾಗು-ಹೆರು
ಬೆಳತಿಗೆ-ಕಾಂತಿ
ಬೆಳರ್ವಾಯ್-ಒಳ್ಳೆ ಬಾಯಿಯುಳ್ಳ
ಬೆಳ್ಳಾಗು-ಮಂಕುಗೊಳ್ಳು
ಬೆಳ್ಳಾರ-ಮೋಸದ ಬಲೆಗಳು
ಬೇಳ್-ಆಹುತಿಕೊಡು
ಬೈತರ್-ಘಟ್ಟಿಯಾಗಿ ಕೂಡ್ರಿಸು
ಬೋಳೈಸು-ಪ್ರೀತಿ ತೋರಿಸು
ಬ್ರಹ್ಮವೃಕ್ಷ-ಮುತ್ತಲಗಿಡ
ಭಗಣ-ನಕ್ಷತ್ರ
ಭಂಗ-ತೆರೆ
ಭದ್ರ-ಮಾಳಿಗೆ, ಆನೆ, ವೃಷಭ
ಭದ್ರಗಜ-ಪಟ್ಟದಾನೆ
ಬರಿಕೆಯ್-ಆನೆ ಸೊಂಡಿಲು
ಭಲ್ಲೂಕ-ಕರಡಿ
ಭಾವ-ಭಕ್ತಿ, ಬಗೆ
ಭಾವಕಿ-ಪ್ರೀತಿ ತೋರುವವಳು
ಭಾವ್ಯ-ಭಕ್ತಿ ಹೆಚ್ಚಿಸುವ
ಭಾಳತಳ-ವಿಶಾಲಹಣೆ
ಭುವನ-ನೀರು, ಜಗತ್ತು
ಭುವನಕಂಟಕ-ಕಮಲದ ದಂಟಿನಲ್ಲಿರುವ ಮುಳ್ಳು
ಭೂಮಿಜೆ-ಸೀತಾದೇವಿ

ಮ

ಮಕರ-ಮೊಸಳೆ
ಮಕರಧ್ವಜ-ಮನ್ಮಥ
ಮಗುಳ್ಚು-ಅರೆ
ಮಚ್ಛನೇತ್ರ-ಮೀನ್ಗಣ್ಣು
ಮಚ್ಚು-ಒಲಿ
ಮಡಗು-ಬಚ್ಚಿಡು
ಮಡಸನ್ನೆ-ಹಿಮ್ಮಡಸನ್ನೆ
ಮಂಡನಮಿಥುನ-ಅಲಂಕೃತ ದಂಪತಿಗಳು
ಮಂಡಲಿ-ಮೃತವಿಶೇಷ
ಮನಸ್ವೀ-ಪಂಡಿತ, ವೀರ
ಮನು-ರಾಜರ್ಷಿಗಳು
ಮಂತಣ-ಆಲೋಚನೆ
ಮಂದಯಿಸು-ದಟ್ಟವಾಗು
ಮಂದಿವಾಳತನ-ಸಾಮಾನ್ಯಪ್ರವೃತ್ತಿ
ಮಂದೈಸಿ-ಮೆಲ್ಲಮೆಲ್ಲನೆ
ಮರವಡು-ನಿಶ್ಚೇಷ್ಟವಾಗು
ಮರೀಚಿಕಾಜಲ-ಬಿಸಿಲುಕುದುರೆ
ಮರುದ್ಧತ-ಗಾಳಿಯ ಪೆಟ್ಟು ತಿಂದ
ಮರುನ್ನದಿ-ದೇವನದಿ (ಗಂಗಾ)
ಮರ್ದನ-ಅರೆದು ಪುಡಿಮಾಡುವಿಕೆ
ಮಲಂಗು-ಆತುಕೊಳ್ಳು
ಮಲರ್-ಹೂ
ಮಲ್ಲಳಿಗೊಳ್-ಭ್ರಾಂತನಾಗು
ಮಲ್ಲಾಮಲ್ಲಿ-ಕುಸ್ತಿ
ಮಸಕ-ರಭಸ, ಚಟುವಟಿಕೆ
ಮಸಗು-ಹಿಗ್ಗು, ಪ್ರಕ್ಷೋಭವುಂಟುಮಾಡು
ಮಸ್ತಕಶೂಲ-ತಲೆಶೂಲೆ
ಮಹಾಬಲ-ವಾಯು
ಮಾಕಂದ-ಮಾವಿನಮರ
ಮಾಗಿ-ಮಾಘಮಾಸ, ಚಳಿಗಾಲ
ಮಾಜಾತ-ಲಕ್ಷ್ಮೀಪುತ್ರ, ಕಾಮ
ಮಾಣಿಕಂಗಾಣ್-ರಜಸ್ವಲೆಯಾಗು
ಮಾಧವಿ-ವಸಂತದೂತಿ
ಮಾದುಫಲ-ಮಾದಳದ ಹಣ್ಣು
ಮಾರೊಡ್ಡು-ಪ್ರತಿವ್ಯೂಹ ರಚಿಸು
ಮಾಸಾಳು-ವೀರ
ಮಿಳಿ-ಮಿಣಿ
ಮೀಂಟುವರಿ-ಜಿಗಿಜಿಗಿದು ಹರಿ
ಮೀನ್-ನಕ್ಷತ್ರ
ಮುಕುಳಿತ-ಬಾಡಿದ
ಮುಖರ-ಧ್ವನಿ

ಮುಗಿ-ಮುಚ್ಚು
ಮುಗುಳ್-ಅರಳುವ ಮೊಗ್ಗು
ಮುಂಕಣಿಸು-ಮುಂದುವರಿ
ಮುಂಗುಡಿ-ಮುಂಭಾಗದ ಧ್ವಜ
ಮುಡಿಗಟ್ಟಿನ ಪಟ-ಮುಂಡಾಸ
ಮುಂಡಾಡು-ಪ್ರೀತಿಯಿಂದ ಮೈದಡವು
ಮುಂಡಿಗೆ-ಮರದ ದೊಡ್ಡಗೂಟ
ಮುತ್ತಿನ-ಮುಪ್ಪಿನ, ಸಂಜೆಯ
ಮುದ್ರಿತ-ಮೇರೆಯಾಗಿರುವ
ಮುದ್ರೆ-ಅಂಕಿತಳಾದವಳು
ಮುಂತಿಡು-ಪ್ರಕಟಿಸು
ಮುಯ್ಯಾನ್-ಎದುರಾಗು
ಮುರಜ-ಮೃದಂಗ, ಮದ್ದಲೆ
ಮುಸಲಿ-ಸೊಂಡಿಲಿ
ಮೂದಲಿಸು-ಅಣಕವಾಡು
ಮೂರಿ-ಸಮೂಹ
ಮೂಲ-ಪಾದಗಳ ಹೆಬ್ಬೆರಳು
ಮೃದುತಳ-ಮೃದುವಾದ ಅಂಗಾಲು
ಮೆದೆಗೆಡೆ-ಮುದ್ದೆಯಾಗಿಬೀಳು
ಮೆಯ್ಗರೆ-ಅಡಗು
ಮೆಲ್ಸರಿ-ಜುಬುರು ಮಳೆ
ಮೆಲ್ಲಿತ್ತು-ಮೃದು
ಮೆಲ್ಕಟ್ಟು-ಛತ್ತು
ಮೇವಂ ಮಗುಳ್ದು-ಮೆಲಕುಹಾಕು
ಮೈದೆಗೆ-ತಪ್ಪಿಸಿಕೊಳ್ಳು
ಮೈವೆರ್-ಹೆಚ್ಚಾಗು
ಮೊಗ್ಗರಿಸು-ಒಟ್ಟುಗೂಡು
ಮೊಱೆ-ದುಃಖದ ದೂರು
ಮೊಳೆನುಡಿ-ಸಲಿಗೆಮಾತು
ಮೋಡಾಮೋಡಿ-ಮುರುಕು
ಮೋದು-ಮೆತ್ತಗಾಗು
ಮೋಹರ-ಸೈನ್ಯ

ಯ, ರ, ಲ

ಯಮ-ಇಂದ್ರಿಯನಿಗ್ರಹ
ಯೂಥ-ಹೆಣ್ಣಾನೆಗಳ ಸಾಲು
ರತ-ಆಸಕ್ತಿ
ರಥಾಂಗ-ಚಕ್ರವಾಕ
ರದನಿ-ಆನೆ
ರನ್ನದಾಳಿ-ರತ್ನದ ಪದಕ
ರಯ್ಯ-ಐಶ್ವರ್ಯ, ವಿಭವ
ರವಿಕಾಂತೋಜ್ಜ್ವಾಗ್ನಿ-ಸೂರ್ಯಕಾಂತಮಣಿಯಿಂದ ಹೊರಡುವ ಬೆಂಕಿ
ರತಿ-ಚಿನ್ನ, ಬೆಳ್ಳಿಯ ತಂತಿ
ರಸೆ-ಭೂಮಿ
ರಾಘೆ-ತೊಡೆ
ರಾಜ-ಚಂದ್ರ, ಅರಸ
ರಾಜಪೂಜ್ಯ-ಚಂದ್ರನಿಂದ ಪೂಜೆಗೊಂಡವ (ಗುರು)
ರಾಜೋತ್ಪನ್ನ-ಚಂದ್ರನಿಂದ ಹುಟ್ಟಿದ
ರಾಮೆ-ಸುಂದರಿ
ರಾವ-ಗರ್ಜನೆ, ಧ್ವನಿ
ರೂಕ್ಷ-ನಿಸ್ಸಾರ, ಒಣ
ರೂಹಿಸು-ಪ್ರತಿಬಿಂಬ ತೋರಿಸು
ರೆಂಚೆಯ-ಜಾಲ
ಱೊಪ್ಪ-ದೊಡ್ಡಿ
ಱೋಡಾಡು-ಅಣಕಿಸು
ಲಂಪಟ-ತೊಡಗಿದ, ಮುಳುಗಿದ
ಲಂಬಿಸು-ಜೋತಾಡು
ಲಲಾಮ-ಹಣೆ, ನೆತ್ತಿ
ಲಲಿತಚರಿತ-ವೇಶ್ಯೆಯರ ಮಾತುಕತೆ
ಲಲ್ಲೆ-ಪ್ರೇಮ
ಲವಣಿಸಾರ-ಒಂದು ಕುಸ್ತಿ ಪೇಚು
ಲಾಂಛನ-ಚಂದ್ರನ ಮೇಲಿನ ಕಪ್ಪುಕಲೆ
ಲಾವಗೆ-ಲಾವಕ್ಕಿ
ಲಿಂಗ-ಕುರುಹಿನಿಂದ ಕೂಡಿದ್ದು
ಲೀಢ-ಅರಗಿಸಿಕೊಂಡವ (ನೆಕ್ಕಿದವ)
ಲುಬ್ಧಕ-ಬೇಟೆಕಾರ
ಲುಲಾಯ-ಕೋಣ

ಲೇಖೆ-ಚಿತ್ರಣ
ಲೇಶ-ಸೀರ, ಬಡ
ಲೋಲುಪೆ-ಆಶೆಯುಳ್ಳವಳು
ಲೋಲುಪ್ತ-ಆಶೆಪಟ್ಟ
ಲೋಹಬಂಧನ-ಗಾಲಿಯ ಹಳಿ
ಲೌಡಿ-ಕಬ್ಬಿಣದಾಯುಧ

ವ

ವಂಶ-ಬಿದಿರು, ಸಂತಾನ
ವಕ್ರ-ಮಂಗಳ
ವಕ್ತ್ರ-ಮುಖ
ವಕ್ಷೋಜ-ಮೊಲೆ
ವಜ್ರಮುಷ್ಟಿ-ಬಿಗಿಮುಷ್ಟಿ
ವಟವಿಟಪಿ-ಆಲದ ಮರ
ವಪುಸ್-ಶರೀರವುಳ್ಳವ
ವರ್ಷನರಪ-ಮಳೆರಾಜ
ವಲ್ಕಲ-ನಾರುಬಟ್ಟೆ
ವಸುಮತಿ-ಭೂಮಿ
ವಾಘೆ-ಲಗಾಮು
ವಾಮಾಂಗ-ದೇಹದ ಎಡಭಾಗ
ವಾರಸ್ತ್ರೀ-ವಾರಾಂಗನೆ, ಅರಮನೆಯಲ್ಲಿ ಕೆಲಸಕ್ಕೆ ಬರುವ ಹೆಂಗಸು
ವಾಲದಂಡ-ಉದ್ದವಾದ ಬಾಲ
ವಾಸಣಸಾ-ಇಂದ್ರ
ವಾಹ-ಕುದುರೆ
ವಾಹಕ-ರಾಹುತ
ವಿಕರ್ತನ-ಸೂರ್ಯ
ವಿಕಲ-ಬುದ್ಧಿಗೇಡಿ
ವಿಕೀರ್ಣ-ಚೆಲ್ಲುವ
ವಿಗತ-ಕಳೆದುಹೋದ
ವಿಡಂಬ-ಬಡಿವಾರ
ವಿತತ-ಪ್ರಸಿದ್ಧವಾದ
ವಿತಾನ-ಸಮೂಹ
ವಿದಗ್ಧೆ-ಅನುಭವಶಾಲಿನಿ
ವಿದಳಿತ-ಅರಳಿದ
ವಿದ್ರಾವಣ-ನಾಶಮಾಡುವವ
ವಿಭೂತಿ-ಸಂಪತ್ತು, ಭಸ್ಮ
ವಿಭ್ರಮ-ಆಕರ್ಷಕ, ಸೌಂದರ್ಯ, ತೊಂದರೆ, ಮರುಕ, ಅರಳದ, ಭ್ರಾಂತಿಯನ್ನುಂಟುಮಾಡುವ
ವಿಭ್ರಮಬಲಂ-ಅಜ್ಞಾನವನ್ನೇ ಬಲವನ್ನಾಗಿ ಮಾಡಿಕೊಂಡವ
ವಿಯೋಗಿ-ನಿತ್ಯವಿರಾಗಿ
ವಿರಚಿಸು-ಲೆಕ್ಕಮಾಡಿ ಹೇಳು
ವಿರಥ-ನಿರಾಶೆಗೊಂಡವ, ನಿರಾಶೆ
ವಿಶಸನ-ದಂಡನೆ
ವಿಷಜ-ಮದಕುಣಿಕೆ
ವಿಷಭಂಗ-ತಿರುಗಣಿಮಡು
ವಿಷ-ನೀರು
ವಿಷಯ-ದೇಶ
ವಿಸಟಂಬರಿ-ಮುಂದುವರಿ
ವಿಹರಣ-ವಿಹಾರ
ವಿಹೀನ-ವಿಫಲ, ನಿಷ್ಪ್ರಯೋಜನ
ವಿಹ್ವಳ-ನರಳುವಿಕೆ
ವಿಳಾಸಿನಿ-ದಾಸಿ
ವೀಥಿ-ಸಮೂಹ, ಗುಂಪು, ದಾರಿ
ವೇತಂಡ-ಆನೆ
ವೇದಕ-ವೇದ ಬಲ್ಲವ
ವೈಹಾಳಿ-ಆನೆ ಕುದುರೆಗಳನ್ನು ಈಲು ಮಾಡುವ ಸ್ಥಳ
ವೃಕ-ತೋಳ
ವ್ಯಾಜ-ಪ್ರೇಮಕಲಹ

ಶ, ಷ, ಸ

ಶಕುನಿ-ಹಾಲಹಕ್ಕಿ
ಶತಧಾರಾ-ಚಕ್ರ, ಮೋಡ
ಶತಪತ್ರನೇತ್ರ-ವಿಷ್ಣು
ಶತಪತ್ರಸೂತ್ರ-ಕಮಲದ ಎಳೆ
ಶರ-ನೀರು
ಶರದ-ಮೋಡ

ಶರದ್ಧನ-ಬಿಳಿಮೋಡ
ಶರಭ-ಎಂಟುಕಾಲು ಮೃಗ
ಶಶಕ-ಮೊಲ
ಶ್ರಾಂತ-ದಣಿದವ
ಶಾರ್ಙ್ಗ-ವಿಷ್ಣುವಿನ ಬಿಲ್ಲು
ಶಾಲಿ-ಸಣ್ಣ ಭತ್ತ
ಶಾಶ್ವತೆ-ನಾಶರಹಿತಳು, ದೇವಿ
ಶಿಖಿ-ನವಿಲು, ಅಗ್ನಿ
ಶಿರೀಷ-ಬಾಗೆಹೂ
ಶಿಶಿರಶಿಲಾ-ಚಂದ್ರಕಾಂತದ ಕಲ್ಲು
ಶಿಳೀಮುಖ-ಬಾಣ, ಭ್ರಮರ
ಶೀತಕೃತ್-ಚಂದ್ರ
ಶೂರ್ಪಕ-ಒಬ್ಬ ದೈತ್ಯ
ಶೈಲನಿತಂಬ-ಪರ್ವತದ ತಪ್ಪಲು
ಶೈವಸಾರ-ಶಿವಧರ್ಮದ ಕೆಚ್ಚು
ಶ್ರೀತಾರಕ-ಸಂಪತ್ತುಳ್ಳ ಹಣೆಬೊಟ್ಟು
ಶ್ರೀನಿಧಿ-ಸೌಂದರ್ಯದ ನಿಧಿ
ಶ್ರೀಸಾರ-ಶ್ರೇಷ್ಠವಾದ ಸೌಭಾಗ್ಯ
ಷಂಡ-ಸಮೂಹ
ಸಂರಂಭ-ಸಂಭ್ರಮ
ಸಂಹರಿಸು-ಅಚ್ಚುಕಟ್ಟಾಗಿರಿಸು
ಸಂಹನನ-ಕೊಲೆ
ಸಕಳಂಕ-ಚಂದ್ರ
ಸಖಾಯ-ಜೊತೆಗಾರ
ಸಂಕಲ್ಪಜನ್ಮ-ಮನ್ಮಥ
ಸಂಘಾತ-ಗುಂಪು, ಸಮೂಹ
ಸಂಚೋದ್ಯ-ಅತ್ಯಾಶ್ಚರ್ಯ
ಸದರ್ಥ-ಶ್ರೀಮಂತ ಶ್ರೇಷ್ಠ ಬಯಕೆಯುಳ್ಳವ
ಸಂತಾಪನ-ಕಾಮ
ಸಂದ-ಶ್ರೇಷ್ಠವಾದ
ಸಂದಣಿಗೊಳ್-ಗುಂಪುಗೂಡು
ಸಬಳ-ಭರ್ಜಿ, ಸಲಾಕೆ
ಸಮಕಟ್ಟು-ಸಿಸ್ತು
ಸಮಂತು-ಚೆನ್ನಾಗಿ
ಸಮವರ್ತಿ-ಯಮ
ಸಂಪುಟ-ಕರಡಿಗೆ
ಸಂಪೂರ್ಣಸಂಕಾಶ-ಸೂರ್ಯ
ಸಂಭಿನ್ನ-ಒಡೆದು ಹೊರಬಿದ್ದ
ಸಂಭೇದ-ಒಡೆಯುವವ
ಸಂಭ್ರಮೋಕ್ತಿ-ಮಂಕುಗೊಳಿಸುವ ಮಾತು
ಸಮ್ಮದ-ಸೊಕ್ಕು ಕಾಣಿಸುವ
ಸಮ್ಮಾರ್ಜನ-ಹುಲ್ಲುಕಸಬರಿಗೆ
ಸರಟ-ಓತಿಕಾಟ
ಸರಸೀಷಂಡ-ಸರೋವರ ಸಮೂಹ
ಸರಳಿಸು-ನಾಟಿಸಿಕೊಳ್ಳು
ಸರಿಸ-ಸಮೀಪ, ನೆರೆಯ ಪ್ರದೇಶ
ಸಸ್ಮೇರ-ಅರ್ಧ ಅರಳಿದ
ಸಹಣೆ-ಕುದುರೆ ಪಳಗಿಸುವವ
ಸಾದು-ಕಸ್ತೂರಿ ಮಿಶ್ರಿತ ದ್ರವ್ಯ
ಸಾರಾಯ-ಸತ್ವ
ಸಾರ್ತರ್-ಹತ್ತಿರ ಬರು
ಸಾರ್ವರ್ತುಕ-ಎಲ್ಲ ಋತುಗಳಿಗೂ ಉಪಯುಕ್ತ
ಸಿಡಿಮಿಡಿಗೊಳ್-ಕಳವಳಿಸು
ಸಿತಪಕ್ಷ-ಹಂಸ, ಸಿಂಹ, ಶುಕ್ಲಪಕ್ಷ,
ಸಿದ್ಧರಸ-ಸಂಜೀವಿನೀ ನೀರು
ಸೀ-ಕಮರು, ಬಾಡು
ಸೀಕರ-ತುಂತುರುಹನಿ
ಸೀಗುರಿ-ನವಿಲುಗರಿಯಿಂದ ಮಾಡಿದ ಚವರಿ
ಸುಗಿ-ಸಂಕೋಚಗೊಳ್ಳು
ಸುತ್ತುಗವು-ಸುತ್ತುಮುತ್ತಲಿನ ಜನರು
ಸುಧಿ-ಒಳ್ಳೆಯ ಬುದ್ಧಿ
ಸುಮನೋವೃಷ್ಟಿ-ಹೂಮಳೆ
ಸುಮ್ಮನೆ-ಸಂತೋಷಭರಿತಳು
ಸುರದ್ರುಮ-ಕಲ್ಪವೃಕ್ಷ

ಸುರಾವಾಸ-ಸ್ವರ್ಗ
ಸುರುಳ್-ಸುರುಳಿಯಾಗು
ಸುವಿಧಾನ-ಆರೈಕೆ
ಸುಳಿ-ತಿರುಗಣಿ
ಸೂಕಳಾಶ್ವ-ತುಂಟುಕುದುರೆ
ಸೂಗುರಿಸು-ನಿಟ್ಟುಸಿರುಬಿಡು
ಸೂಸಕ-ಹೆಳಲಿನ ತುದಿಯ ಗೊಂಡೆ
ಸೂಳಜೆದು-ಕ್ರಮವರಿದು
ಸೃಕಾ-ಹೋಮದಲ್ಲಿ ಬಳಸುವ ಸವುಟು
ಸೆಡೆ-ಹಿಂಜರಿ
ಸೆಡೆದು-ಸೆಟಗೊಂಡು
ಸೆಣಸು-ಸ್ಪರ್ಧಿಸು
ಸೆಲ್ಲೆಹ-ಚುಚ್ಚುವ ಆಯುಧ
ಸೆಳ್ಳುಗುರು-ಉದ್ದ ಉಗುರು
ಸೇದೆ-ಆಯಾಸ
ಸೇವಾಪುರಂಧ್ರಿ-ಸುಂದರಿಯಾದ ದಾಸಿ
ಸೈತಿಡು-ಸಮಾಧಾನಪಡಿಸು
ಸೈರಿಭ-ಕಾಡುಕೋಣ
ಸೈವೆಱಿಗು-ವಿಸ್ಮಯ, ಆಶ್ಚರ್ಯ
ಸೊಂಪೇಱು-ಸೌಂದರ್ಯ ಹೆಚ್ಚಾಗು
ಸೊರ್ಕು-ಮದೋದಕ
ಸೊವಡು-ಕಂಪು
ಸೋಗಿಲ್-ಉಡಿ
ಸೋಗೆ-ನವಿಲು
ಸೋಮವೀಥಿ-ದಕ್ಷಿಣೋತ್ತರಬೀದಿ
ಸೋವು-ಬೆವರಿಸು
ಸೌರಭ್ಯ-ಸುಗಂಧದಿಂದ ಕೂಡಿದ
ಸ್ಥಂಡಿಲ-ಹೋಮವೇದಿಕೆ
ಸ್ನಿಗ್ಧ-ಸ್ನೇಹಯುಕ್ತವಾದ
ಸ್ರುವ-ಹೋಮದಲ್ಲಿ ಹವಿಸ್ಸು ಅರ್ಪಿಸುವ ಸವುಟು
ಸಾರ್ಥ-ಸ್ವಂತದ ಸಂಪತ್ತು

ಹ

ಹಂಸ-ಬೃಹಸ್ಪತಿ
ಹಮ್ಮದಂಬೋಗಿ-ಮೈಮರೆದು, ಮೂರ್ಛೆ ಹೋಗು
ಹರಡೆ-ಕಂಕಪಕ್ಷಿ
ಹರಿ-ಸಿಂಗ
ಹರಿಗವಿ-ಕೀಳುಕವಿ
ಹರಿಗೆ-ಢಾಲು
ಹರಿತ-ಹಸಿರುಬಣ್ಣ
ಹರಿಬ-ಕಾರಣ
ಹಲ್ಲಣ-ಥಡಿ
ಹಲ್ಲಣಿಸು-ಸಿದ್ಧಗೊಳಿಸು
ಹವಣಿಸು-ಹೊರಡು
ಹಸಾದ-ಪ್ರಸಾದ
ಹಳವಿಗೆ-ಧ್ವಜಪಟ
ಹಳುಂಗು-ಪ್ರಯತ್ನಪಡು
ಹಾಸ-ಕಣ್ಣಿ
ಹಾಹೆ-ಬೊಂಬೆ
ಹಿಮಚೂರ್ಣ-ಪಚ್ಚಕರ್ಪೂರದ ಹಳಕು
ಹಿಮೋಪಲ-ಚಂದ್ರಕಾಂತಶಿಲೆ
ಹಿಳಿ-ಹಿಂಡು
ಹೀಳಿದಳಿ-ನವಿಲುಗರಿಸತ್ತಿಗೆ
ಹುತಭುಕ್-ಅಗ್ನಿ
ಹುತವಹ-ಅಗ್ನಿ
ಹೃದಾಜೀವ-ಹೃದಯಕಮಲ
ಹೆಕ್ಕಳ-ಗೌರವ, ದೊಡ್ಡಸ್ತಿಕೆ
ಹೆಱಿಸೂಡಿದ-ಚಂದ್ರಧಾರಿ, ಶಿವ
ಹೇಮಾದ್ರೀಂದ್ರ-ಮೇರುಪರ್ವತ
ಹೇರಿಟ್ಟಿ-ಉದ್ದವಾದ ಭರ್ಜಿ
ಹೊಗರೆತ್ತು-ಹದನಗೊಳಿಸು
ಹೊಗೆದು-ಹೊಗೆಯೆದ್ದು
ಹೊಪ್ಪಳಿಸು-ಗುಳ್ಳಿಯೇಳು
ಹೊಂಬಾಳೆ-ಅಡಿಕೆ ತೆಂಗುಗಳ ಗೊಂಚಲು
ಹೊಯ್ದು-ಹೊಡೆತ

❄ ❄ ❄

ಪ್ರಿಯ ಕನ್ನಡ ಬಂಧುಗಳೆ, ೧೯೧೩ರಲ್ಲಿ ಸ್ಥಾಪನೆಗೊಂಡ
ಕನ್ನಡ ಸಾಹಿತ್ಯ ಪರಿಷತ್ತು ೯೪ನೇ ವರ್ಷದ ಹೊಸ್ತಿಲಲ್ಲಿದೆ.
ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ
ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ
ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ
ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ
ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ
ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ
ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ
ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ.
ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ,
ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ
ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ
ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು
ಚಿತ್ರದುರ್ಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ
೭೫ನೆಯ ಅಮೃತ ಮಹೋತ್ಸವ ಕನ್ನಡ ಸಾಹಿತ್ಯ
ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ
ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ.
ಸಹೃದಯರು ಈ ಪುಸ್ತಕಗಳನ್ನು ಎಂದಿನ
ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ
ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮.